ಕರ್ನಾಟಕ ಕುರುಬರ ಒಳಪಂಗಡಗಳು
ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಬಾಳಪ್ಪ ಎ.ಬಿ.

ಮಾರ್ಗದರ್ಶಕರು

ಡಾ.ಕೆ. ರವೀಂದ್ರನಾಥ

ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

424

ಕರ್ನಾಟಕ ಕುರುಬರ ಒಳಪಂಗಡಗಳು
ಸಾಂಸ್ಕೃತಿಕ ಅಧ್ಯಯನ

(ಪಿಎಚ್;ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಬಾಳಪ್ಪ ಎ.ಬಿ.

ಮಾರ್ಗದರ್ಶಕರು

ಡಾ.ಕೆ. ರವೀಂದ್ರನಾಥ

ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

ದೃಢೀಕರಣ ಪತ್ರ

"ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಮಹಾಪ್ರಬಂಧವನ್ನು ಬಾಳಪ್ಪ ಎ.ಬಿ. ಇವರು ಪಿಎಚ್;ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ.

ಪ್ರಸ್ತುತ ವಿಷಯ ಕುರಿತು ಯಾವುದೇ ವಿಶ್ವವಿದ್ಯಾಲಯದಲ್ಲಿ ಇಡಿಯಾಗಿ ಇಲ್ಲವೆ ಬಿಡಿಯಾಗಿ ಅಧ್ಯಯನ ನಡೆದಿರುವುದಿಲ್ಲ. ಇದು ಪಿಎಚ್;ಡಿ. ಪದವಿಗೆ ಅರ್ಹವಾಗಿದೆಯೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೪.೧೧.೨೦೧೧

(ಡಾ. ಕೆ. ರವೀಂದ್ರನಾಥ)
ಮಾರ್ಗದರ್ಶಕರು ಹಾಗೂ ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

"ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್;ಡಿ. ಪದವಿಗಾಗಿ ಡಾ. ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಅಧ್ಯಯನದ ಫಲವಾಗಿದ್ದು ಈ ಮೊದಲು ಇದನ್ನು ಇನ್ನಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೪.೧೧.೨೦೧೧

(ಬಾಳಪ್ಪ ಎ.ಬಿ.)
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ನೆನೆವೊಡೆ...

ಕನ್ನಡ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಯಶಸ್ಸಿಗೆ ಬೆನ್ನೆಲುಬಾಗಿ ನಿಂತು, ಪ್ರೀತಿಯಿಂದ ಕಂಡು, ಅಧ್ಯಯನಕ್ಕೆ ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸುವ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೆ ಮತ್ತು ವಿದ್ಯಾರ್ಥಿ ವೃಂದದ ಸಮಸ್ಯೆಗಳನ್ನರಿತು ಸಕಾಲಕ್ಕೆ ಪರಿಹಾರ ನೀಡುವ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡ ಸಾರಸ್ವತಲೋಕದ ಮುಚ್ಚಿಹೋದ ಸಂಗತಿಗಳನ್ನು ಬಿಚ್ಚಿ ತೋರಿಸುತ್ತ, ಸಂಶೋಧನಾ ಮಾರ್ಗವನ್ನು ಹಾಕಿಕೊಟ್ಟ ಈ ನಾಡು ಕಂಡ ಅಪರೂಪದ ಸಂಶೋಧಕರಲ್ಲೊಬ್ಬರಾದ ಡಾ. ಎಂ.ಎಂ. ಕಲಬುರ್ಗಿಯವರ ಪ್ರಿಯ ಶಿಷ್ಯರೂ, ಚಲನಶೀಲಗುಣವುಳ್ಳವರೂ, ಬೆಳೆಯುವವರಿಗೆ ಬೆಳೆಸುವ ಮನಸ್ಸುಳ್ಳವರೂ, ಪಾರದರ್ಶಕ ಗುಣವುಳ್ಳ ಮಾರ್ಗದರ್ಶಕರೂ, ಸಹ ಪ್ರಾಧ್ಯಾಪಕರೂ ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಆ ಕಾರ್ಯಗಳ ಒತ್ತಡಗಳ ನಡುವೆ ನನ್ನ ಅಧ್ಯಯನದ ಸಂದರ್ಭದಲ್ಲಿ ಬೆಲೆಯುಳ್ಳ ಮಾರ್ಗದರ್ಶನ ನೀಡಿದ ಡಾ. ಕೆ. ರವೀಂದ್ರನಾಥ ಅವರನ್ನು ಪ್ರೀತಿಯಿಂದ ನೆನೆಯುವೆನು.

ನನ್ನನ್ನು ಅಧ್ಯಯನಶೀಲನನ್ನಾಗಿಸಲು ಕಾರಣರಾದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ವೀರೇಶ ಬಡಿಗೇರ, ಸಹ ಪ್ರಾದ್ಯಾಪಕರುಗಳಾದ ಡಾ. ಎಸ್.ಎಸ್.ಅಂಗಡಿ ಮತ್ತು ಡಾ. ಎಸ್.ಆರ್.ಚನ್ನವೀರಪ್ಪ, ಹಾಲುಮತ ಅಧ್ಯಯನ ಪೀಠದ ಸಂಚಾಲಕರೂ, ಪ್ರಾಧ್ಯಾಪಕರೂ ಈಗ ಅಧ್ಯಯನಾಂಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಎಫ್.ಟಿ.ಹಳ್ಳಿಕೇರಿ ಇವರೆಲ್ಲರನ್ನು ತುಂಬು ಹೃದಯದಿಂದ ಸ್ಮರಿಸುತ್ತೇನೆ.

ನನ್ನ ಮಾತೃ ಸಂಸ್ಥೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿರಾದಲ್ಲಿ ಪ್ರಾಂಶುಪಾಲರಾಗಿದ್ದ ಪ್ರೊ. ಎಂ. ಬಸವರಾಜಯ್ಯ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಪತ್ರಾಂಕಿತ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಪಿಎಚ್.ಡಿ ಅಧ್ಯಯನಕ್ಕೆ ಹುರಿದುಂಬಿಸಿದ ಶ್ರೀ ದೊಡ್ಡಸೂಲಯ್ಯ ಮತ್ತು ಈಗಿನ ಪ್ರಾಚಾರ್ಯರಾಗಿರುವ ಶಾಮಸುಂದರ ಕೋಚಿಯವರ ಸಹಕಾರ ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ೧೧ನೇ ಯೋಜನೆಯಲ್ಲಿ ಎಫ್.ಐ.ಪಿ.

ಕಾರ್ಯಕ್ರಮದ ಮೂಲಕ ಅಧ್ಯಯನ ಕೈಗೊಳ್ಳಲು ಅವಕಾಶ ಮಾಡಿಕೊಟ್ಟ ನೈರುತ್ಯ ವಲಯದ ಉಪ ಕಾರ್ಯದರ್ಶಿಗಳಾದ ಶ್ರೀ ಗೋಪಕುಮಾರ ಅವರನ್ನು ಕೃತಜ್ಞತಾಪೂರ್ವಕವಾಗಿ ನೆನಪು ಮಾಡಿಕೊಳ್ಳುತ್ತೇನೆ.

ಬಡತನದ ಬವಣೆಯಲ್ಲಿ ಬೆಂದರೂ ಮಗನನ್ನು ಓದಿಸಬೇಕೆಂಬ ಹಂಬಲವುಳ್ಳ ನನ್ನ ತಂದೆ ತಾಯಿಗಳಾದ ಡಿ.ಬಸವಲಿಂಗಯ್ಯ ಹಾಗೂ ಶ್ರೀಮತಿ ಚಿಕ್ಕಲಿಂಗಮ್ಮರವರನ್ನು, ಜ್ಞಾನ ಜ್ಯೋತಿಗೆ ಕಿಡಿ ಹೊತ್ತಿಸಿ ಬೆಳಕಾಗಿಸಿದ ಸೋದರ ಮಾವಂದಿರಾದ ಎಸ್.ಪಿ.ಮಹಾಲಿಂಗಪ್ಪ, ಎ.ಪಿ.ಶಿವಣ್ಣ, ಎ.ಪಿ.ಪಾಪಣ್ಣ ಮತ್ತು ಅತ್ತಿಗೆಯವರಾದ ಎ.ಪಿ.ಶಂಕರಮ್ಮ ಇವರೆಲ್ಲರ ತುಂಬು ಹೃದಯದ ಹಾರೈಕೆ ನನ್ನನ್ನು ಈ ಮಟ್ಟಕ್ಕೆ ಬೆಳೆಯಲು ಅವಕಾಶ ನೀಡಿದೆ. ಇದಕ್ಕಾಗಿ ಇವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ನನ್ನ ಪ್ರತಿ ಯಶಸ್ಸನ್ನು ಕಂಡು ನನಗಿಂತಲೂ ಹೆಚ್ಚು ಸಂತೋಷಪಡುವ ಅತ್ತೆ ಮಾವಂದಿರಾದ ಶ್ರೀಮತಿ ಲಕ್ಷ್ಮಮ್ಮ, ಎಲ್.ಶಿವಾನಂದಸ್ವಾಮಿಯವರನ್ನು, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹೊರಟು ನಿಂತಾಗಲೆಲ್ಲ 'ಬೇಗ ಬಾ' ಎಂದು ಎಚ್ಚರಿಸುತ್ತಿದ್ದ ಪ್ರೀತಿಯ ಮಗನಾದ ಚಿ.ಸುಹಾಸನನ್ನು, ಸದಾ ನನ್ನ ಬರುವನ್ನೇ ಎದುರು ನೋಡುತ್ತಿದ್ದ ಪತ್ನಿಯಾದ ಶ್ರೀಮತಿ ರೂಪಾಳನ್ನು ಧನ್ಯತಾಭಾವದಿಂದ ನೆನಪಿಸಿಕೊಳ್ಳುತ್ತೇನೆ.

ಹಸ್ತಪ್ರತಿಶಾಸ್ತ್ರ ವಿಭಾಗದ ವಿಷಯ ನಿರ್ವಾಹಕರಾಗಿರುವ ಸಿ.ಎಸ್.ಪಂಪಾಪತಿ, ಜಾಫರ್ ಸಾದಿಕ್, ಈರಯ್ಯ ಮೇಟಿ, ವಿಭಾಗದ ಎಲ್ಲಾ ಸಂಶೋಧನಾರ್ಥಿಗಳು ಹಾಗೂ ಅನಿಕೇತನ ವಸತಿ ನಿಲಯದಲ್ಲಿ ಆಕಸ್ಮಿಕ ಗೆಳೆಯರಾಗಿ ದೊರೆತ ಲಿಂಗಪ್ಪ ಗಗ್ರಿ, ಸಿ.ಎಸ್.ರಂಗನಾಥ, ಇನ್ನಿತರ ವಿದ್ಯಾರ್ಥಿ ವೃಂದದ ಸಹಕಾರವನ್ನು ಸ್ಮರಿಸುತ್ತೇನೆ. ಸಂಶೋಧನೆಗೆ ಬೇಕಾದ ಅಗತ್ಯ ಪುಸ್ತಕಗಳನ್ನು ಕೊಟ್ಟು ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಮತ್ತು ಸಿರಿಗನ್ನಡ ಗ್ರಂಥಾಲಯದ ಎಲ್ಲ ಸಿಬ್ಬಂದಿ ವರ್ಗದವರ ಸಹಕಾರಕ್ಕೆ ಕೃತಜ್ಞತೆಗಳು. ಇದಲ್ಲದೆ ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿಎಂದೂ ತೊಡಕಾಗದಂತೆ ಸಹಕರಿಸಿದ ಕುರುಬ ಸಮುದಾಯವನ್ನು ಈ ಸಂದರ್ಭದಲ್ಲಿ ನೆನೆಯದಿದ್ದರೆ ತಪ್ಪಾದೀತು. ಅಕ್ಷರ ಸಂಯೋಜನೆ ಮಾಡಿ ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ್ ಯಾಜಿಯವರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಬಾಳಪ್ಪ ಎ.ಬಿ.

ಪರಿವಿಡಿ

ಅಧ್ಯಾಯ ೧

ಅಧ್ಯಯನ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಭರತಖಂಡವು ವಿಭಿನ್ನ ಸಂಸ್ಕೃತಿಗಳನ್ನೊಳಗೊಂಡ ದೇಶವಾಗಿದೆ. ಇಲ್ಲಿ ವಾಸಿಸುವ ಸಮುದಾಯಗಳು ಸಾಂಸ್ಕೃತಿಕವಾಗಿ ತಮ್ಮ ಬದುಕಿನ ಆಚಾರ, ವಿಚಾರ, ನಡೆ-ನುಡಿ, ಧಾರ್ಮಿಕ ಆಚರಣೆಗಳು, ಕುಟುಂಬದ ಶಿಷ್ಟಾಚಾರಗಳನ್ನು ತಮ್ಮದೇ ರೀತಿಯಲ್ಲಿ ಪೋಷಿಸಿಕೊಂಡು ಬಂದಿರುತ್ತವೆ. ಈ ನಾಡಿನ ಹಲವು ಸಮುದಾಯಗಳಲ್ಲಿ ಒಂದಾದ ಕುರುಬರನ್ನು ತಲಸ್ಪರ್ಶಿಯಾಗಿ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶದಿಂದ ಸಿದ್ಧಪಡಿಸಿದ ಮಹಾಪ್ರಬಂಧ "ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ".

ಮನುಷ್ಯ ಬದುಕಿನ ಹೋರಾಟದಲ್ಲಿ ಉದರಪೋಷಣೆಗೆ ಒಂದಲ್ಲ ಒಂದು ಬಗೆಯ ವೃತ್ತಿಯನ್ನು ಕೈಗೊಳ್ಳಬೇಕಾಯಿತು. ಈ ದೈನಂದಿನ ಉದ್ಯೋಗವು ಜಾತಿಸೂಚಕವೋ, ಜನಾಂಗ ಸೂಚಕವೋ ಆಗುವ ಮೂಲಕ ಹಲವಾರು ಪ್ರದೇಶಗಳಿಗೆ ಚದುರಿಹೋಗಿ ತಾವು ವಾಸಿಸುವ ಪ್ರದೇಶದಲ್ಲಿ ಉದ್ಯೋಗಕ್ಕೆ ಅನುಗುಣವೆನಿಸುವ ಹೆಸರನ್ನು ಪಡೆದಿರುತ್ತಾರೆ. ಕಾಲಾಂತರದಲ್ಲಿ ಇವೇ ಜನಸಮುದಾಯವಾಗಿ ಪರಿವರ್ತಿತವಾಗುತ್ತವೆ. ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕ ಕುರುಬರ ಒಳಪಂಗಡಗಳನ್ನು ಅಧ್ಯಯನ ಮಾಡುವಾಗ ಸಮಸ್ತ ಜೀವನದ ಪದ್ಧತಿಯನ್ನು ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸುವುದು ಸೂಕ್ತವೆನಿಸಿದೆ. ಯಾಕೆಂದರೆ ಬುಡಕಟ್ಟು ಸಮುದಾಯಗಳು ಇಂದಿನ ನಾಗರಿಕ ಬದುಕಿಗೆ ಸಿಲುಕಿ ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡದೆ ಮತ್ತು ಪರಿವರ್ತನೆಯ ಪ್ರಭಾವಕ್ಕೆ ಒಳಗಾಗಿ ಡೋಲಾಯಮಾನ ಬದುಕಿನ ಪದ್ಧತಿಯ ಚಿತ್ರಣ ಕಣ್ಮುಂದೆ ಕಟ್ಟುತ್ತದೆ. ಇಂಥ ಸಮುದಾಯಗಳ ನಿಜದ ನೆಲೆಯನ್ನು ಪುನಾರಚಿಸುವ ಉದ್ದೇಶ ಪ್ರಸ್ತುತ ದಿನಮಾನದಲ್ಲಿ ತುಂಬಾ ಅವಶ್ಯವೆನಿಸಿದೆ.

ಭವ್ಯ ಪರಂಪರೆ ಹೊಂದಿರುವ ಕುರುಬ ಸಮುದಾಯ ಭಾರತದಾದ್ಯಂತ ಕಾಣಬಹುದಾದರೂ ಕರ್ನಾಟಕದಲ್ಲಿ ಅಧಿಕವಾಗಿದ್ದಾರೆ. ಕುರುಬರಲ್ಲಿ ಹೆಚ್ಚಿನವರು ಪರಂಪರಾನುಗತ ವೃತ್ತಿಗಳಾದ ಕುರಿಸಾಕಾಣಿಕೆ, ಕಂಬಳಿ ನೇಯ್ಗೆಗಳನ್ನು ಉಪಜೀವನದ ವೃತ್ತಿಗಳನ್ನಾಗಿಸಿಕೊಂಡಿದ್ದಾರೆ. ಕುರಿಗಾಹಿಗಳಾಗಿ, ಅರಸರಾಗಿ, ನಾಡು ನುಡಿ ಸಂಸ್ಕೃತಿಗಾಗಿ ಈ ಸಮುದಾಯದ ಕೊಡುಗೆ ಅನನ್ಯವಾದುದು.

ಸಮುದಾಯವೊಂದು ಅನೇಕ ಬದಲಾವಣೆಗಳೊಂದಿಗೆ ಉಂಟಾಗುವ ಅಂತಸ್ತಿನ ಸ್ಪರ್ಧೆಯಿಂದ ಚಲನಶೀಲತೆಗೆ ಅಗತ್ಯವಾದ ಪಂಗಡಗಳಿಂದ ಬದಲಾವಣೆ ಹೊಂದುತ್ತವೆ. ಆ ಮೂಲಕ ಒಳಪಂಗಡಗಳಾಗಿ ನಿರ್ಮಾಣವಾಗುವುದು ಬೆಳವಣಿಗೆಯ ಹೊಸ ಆಯಾಮ. ಒಳಪಂಗಡವೆಂದರೆ 'ಸ್ವಯಂಪೂರ್ಣತೆಯಿಂದ ಸ್ವತಂತ್ರವಾಗಿ ಯಾವುದೇ ಆಧುನಿಕ ಪ್ರಭಾವಗಳಿಗೆ ಒಳಗಾಗದ ಒಂದು ಗುಂಪು' ಎಂದು ಹೇಳಬಹುದು. ಅಲ್ಲದೆ ಒಂದು ಸಮುದಾಯದಲ್ಲಿ ಇರುವ ಒಳಬಾಂಧವ್ಯ ಸಮೂಹಗಳಿಗೆ ಒಳಪಂಗಡಗಳೆಂದು ಕರೆಯಲಾಗುವುದು. ಒಂದೇ ಒಳಪಂಗಡವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿದಂತೆ ಕಂಡುಬರುತ್ತದೆ.

ಕುರುಬ ಸಮುದಾಯದಲ್ಲಿ ಒಳಪಂಗಡಗಳಾಗಲು ಕಾರಣಗಳೇನೆಂಬುದನ್ನು ಅವಲೋಕಿಸಿದಾಗ ಪ್ರದೇಶ ಮತ್ತು ವಲಸೆ, ಮತಾಂತರ ಅಥವಾ ಜಾತ್ಯಂತರ, ವೃತ್ತಿ ಮತ್ತು ತಂತ್ರಜ್ಞಾನ, ಭಾಷೆ ಮಾತ್ರವಲ್ಲದೆ ವಿಭಿನ್ನ ಪ್ರದೇಶಗಳಲ್ಲಿ ವಾಸಮಾಡುವ ಒಂದೇ ಸಮುದಾಯದ ಜನರುಗಳಲ್ಲಿ ಒಳಪಂಗಡಗಳು ಹುಟ್ಟಿಕೊಳ್ಳುವ ಸಾಧ್ಯತೆಗಳಿವೆ. ಆಧುನಿಕ ಪೂರ್ವದಲ್ಲಿ ಸಂಪರ್ಕ ಸಾಧನಗಳ ಕೊರತೆಯ ಕಾಲದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಹೋಗಲು ಸಾಧ್ಯವಾಗದೆಯೂ ಒಳಪಂಗಡಗಳಾದವು. ಈ ರೀತಿಯಲ್ಲಿ ಸೃಷ್ಟಿಯಾದ ಒಳಪಂಗಡಗಳೂ ಪ್ರತ್ಯೇಕವಾಗಿ ಉಳಿದು ಭಿನ್ನ ರೀತಿಯ ಸಂಪ್ರದಾಯಗಳನ್ನು ರೂಢಿಸಿಕೊಂಡಿರಬಹುದು. ಒಂದು ಸಮುದಾಯದವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬಂದಾಗ ವಲಸೆ ಬಂದವರನ್ನು ತಮ್ಮವರೆಂದು ಭಾವಿಸದೆಯೂ ಅಥವಾ ವಲಸೆ ಬಂದವರೇ ಸ್ಥಳೀಯರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಪ್ರತ್ಯೇಕವಾಗಿ ಉಳಿದಾಗಲೂ ಒಳಪಂಗಡಗಳಾಗಿರುವ ಸಂಭವವಿದೆ. ರಕ್ತಸಂಬಂಧದ ಕಾರಣವಾಗಿಯೂ ಒಳಪಂಗಡಗಳಾದ ರೀತಿಯನ್ನು ತಳ್ಳಿಹಾಕುವಂತಿಲ್ಲ. ಅಲ್ಲದೆ ಇವರಲ್ಲಿಯೇ ಶ್ರೇಷ್ಠತೆ ಮತ್ತು ಸೌಲಭ್ಯಗಳಿಗೋಸ್ಕರವಾಗಿ ಸಮುದಾಯಗಳಲ್ಲಿ ಪ್ರತ್ಯೇಕತೆಯ ಭಾವನೆ ಕೆಲಸ ಮಾಡಿರಬಹುದು. ಕೆಲವೊಮ್ಮೆ ಆಹಾರದ ರಾಜಕಾರಣವೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಒಂದೇ ಸಮುದಾಯದಲ್ಲಿ ಬೇರೆ ಬೇರೆ ಭಾಷೆ ಅಥವಾ ಉಪಭಾಷೆಗಳನ್ನಾಡುವ ಗುಂಪುಗಳು ಪ್ರತ್ಯೇಕ ಒಳಪಂಗಡಗಳಾಗಿ ರೂಪುಗೊಳ್ಳುತ್ತವೆ.

ಸಮುದಾಯಗಳು ತಮ್ಮನ್ನು ಅಧ್ಯಯನದ ತೆಕ್ಕೆಗೆ ಒಳಪಡಿಸಿಕೊಂಡು ಮೂರ್‍ನಾಲ್ಕು ದಶಕಗಳು ಕಳೆದಿರಬಹುದು. ಕರ್ನಾಟಕದಲ್ಲಿ ಜಾತಿಗಳ ಬಗ್ಗೆ, ಬುಡಕಟ್ಟುಗಳ ಬಗ್ಗೆ ಅಧ್ಯಯನಗಳು ನಡೆದಿವೆಯೇ ಹೊರತು ಸಮುದಾಯವೊಂದರ ಒಳಪಂಗಡಗಳ ಬಗ್ಗೆಯಾಗಲಿ, ಅವುಗಳ ಬೆಡಗುಗಳ ಬಗ್ಗೆಯಾಗಲಿ ಅಧ್ಯಯನಗಳು ನಡೆದಿರುವುದಿಲ್ಲ. ಸಮುದಾಯಗಳ ಅಧ್ಯಯನವೆಂದರೆ ಅವು ಬದಲಾಗುತ್ತಿರುವ ಸನ್ನಿವೇಶಗಳಲ್ಲಿ ತಾವು ಪರಿವರ್ತನೆಗೊಂಡು ಇತರ ಸಮುದಾಯಗಳ ಜೊತೆ ಕೊಡುಕೊಳೆ ಮಾಡುತ್ತ ಇರುವುದು. ಅಲ್ಲದೆ ಸಾಂಸ್ಕೃತಿಕ ವಿಶಿಷ್ಟತೆ ಉಳಿಸಿಕೊಳ್ಳುವುದು ಕೆಳಸ್ತರದ ಸಮುದಾಯಗಳು ತಮ್ಮ

ಸಂಸ್ಕೃತಿಯನ್ನು ವಿಶ್ಲೇಷಿಸಿಕೊಂಡು ಅದರಲ್ಲಿರುವ ಮಿತಿಗಳನ್ನು ಕಂಡುಕೊಳ್ಳುವುದು. ಆ ಮೂಲಕ ಸ್ವವಿಮರ್ಶೆಗೊಳಪಡಿಸಿಕೊಳ್ಳುವುದು. ಸಂಸ್ಕೃತಿಯಲ್ಲಿರುವ ಇಂತಹ ಚೈತನ್ಯದಾಯಿ ಸಂಗತಿಗಳಿಂದ ಸ್ವಾಭಿಮಾನ ಮತ್ತು ಶಕ್ತಿ ಪಡೆದುಕೊಳ್ಳುವುದು ಮುಖ್ಯವಾಗುತ್ತದೆ.

ಸಮುದಾಯವೆಂದರೆ ಸಂಸ್ಕೃತಿಯ ಜೀವಂತಿಕೆಯು ಅದರ ಚಲನಶೀಲತೆಯಲ್ಲಿ ಅಭಿವ್ಯಕ್ತವಾಗುತ್ತದೆ. ಅಂದರೆ ಕುರುಬ ಸಮುದಾಯವು ರೂಢಿಸಿಕೊಂಡ ಸಂಸ್ಕಾರದ ಫಲವಾದ ಸಾಂಸ್ಕೃತಿಕ ಮೌಲ್ಯಗಳನ್ನು ತನ್ನ ಸುತ್ತಲ ಜಗತ್ತಿಗೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಪರಿಚಯಿಸುತ್ತ ವರ್ಗಾಯಿಸುತ್ತದೆ. ಪ್ರಾದೇಶಿಕ ವೈಶಿಷ್ಟ್ಯಗಳಿಂದ ಮಹತ್ವ ಪಡೆದ ಪರಿವರ್ತನಾಶೀಲ ಮಾನವ ಬದುಕಿನ ಆಲೋಚನೆಗಳಿಂದ ಸಮುದಾಯದ ಬದುಕು ಕಳೆಗಟ್ಟುತ್ತದೆ. ಇಂತಹ ಸಾಂಸ್ಕೃತಿಕ ಮೌಲ್ಯಗಳ ಅನಾವರಣವು ಸಮುದಾಯದ ಅಧ್ಯಯನದಿಂದ ಸಾಧ್ಯವಾಗುತ್ತದೆ. ಕಾಲಕಾಲದ ಸಮಸ್ಯೆ, ಸವಾಲು, ಹೊಂದಾಣಿಕೆಗಳು ಅವನ ಕ್ರಿಯಾತ್ಮಕ ಬದುಕಿನ ಕುರುಹುಗಳಾಗಿರುವುದಲ್ಲದೆ ಸಾಂಪ್ರದಾಯಿಕತೆಗಳ ಉಳಿವು ಮತ್ತು ಮುಂದುವರಿಕೆಗಳ ಅಧ್ಯಯನವು ಆಯಾ ಸಮುದಾಯದ ಜೀವಂತಿಕೆಯ ಸಂಕೇತಗಳಾಗಿರುತ್ತವೆ.

ಭೂತಕಾಲದ ಅನುಭವಗಳು ಸಮುದಾಯಕ್ಕೆ ಭವಿಷ್ಯದ ಸೃಜನಾತ್ಮಕತೆ ಹುಟ್ಟಲು ಪ್ರೇರಕವಾಗಿರುತ್ತವೆ. ಭೂತಕಾಲವನ್ನು ಮರೆತರೆ ಸಮೃದ್ಧ ಭವಿಷ್ಯವು ಸಮುದಾಯವೊಂದಕ್ಕಿರಲಾರದು. ಈ ಹಿನ್ನೆಲೆಯಲ್ಲಿ ಪಶುಪಾಲನೆಯಂಥ ಅಲೆಮಾರಿ ಬದುಕಿನಲ್ಲೇ ಬೆಳೆದುಬಂದ ಕುರುಬರು ರೂಢಿಗತ ಸಂಪ್ರದಾಯ ಮತ್ತು ಆಧುನಿಕ ಬದುಕಿನ ಜವಾಬ್ದಾರಿಗಳೊಂದಿಗೆ ಮಾರ್ಪಾಟು ಪಡೆದ ಮೌಲ್ಯಗಳ ಅಧ್ಯಯನ ಮಹತ್ವದ್ದಾಗಿರುತ್ತದೆ. ಇಂತಹ ನಾಗರಿಕ ಸಮಾಜದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಲು ತವಕಿಸುತ್ತಲೇ ತನ್ನ ಪಾರಂಪರಿಕ ಸಂಪ್ರದಾಯ ನಡಾವಳಿಗಳನ್ನು ಸಂರಕ್ಷಿಸಿಕೊಳ್ಳಲು ಹೆಣಗುತ್ತಿರುವ ಹಾಗೂ ಸೆಣಸುತ್ತಿರುವ ಕುರುಬ ಸಮುದಾಯದಲ್ಲಿ ಸಹಜವಾಗಿಯೇ ತವಕ ತಲ್ಲಣಗಳು ಎದುರಾಗುತ್ತಿರುತ್ತವೆ. ಇಂತಹ ಸಂದರ್ಭಗಳು ಈ ರೀತಿಯ ಅಧ್ಯಯನಗಳಿಗೆ ಪ್ರೇರಣೆ ನೀಡುತ್ತವೆ. ಹೀಗಾಗಿ ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನದ ಉದ್ದೇಶಗಳನ್ನು ಮೇಲಿನ ಸಂಗತಿಗಳ ಹಿನ್ನೆಲೆಯಲ್ಲಿ ವಿವೇಚಿಸಬೇಕಾಗುತ್ತದೆ.

ಸ್ವಾತಂತ್ರ ಪೂರ್ವ ಭಾರತದಲ್ಲಿ ನಡೆಯಲಾದ ಜಾತಿ ಅಥವಾ ಬುಡಕಟ್ಟುಗಳ ಅಧ್ಯಯನಕ್ಕೆ ಎರಡು ಪ್ರಧಾನ ಉದ್ದೇಶಗಳಿದ್ದವು. ಇಂತಹ ಅಧ್ಯಯನಗಳ ಮೂಲಕ ಒಂದು ಸಮುದಾಯದ ಜನರ ಮನಃಸ್ಥಿತಿಯನ್ನು ಅರಿಯುವುದು ಮತ್ತು ಅವರನ್ನು ಆಡಳಿತಾತ್ಮಕವಾಗಿ ನಿಯಂತ್ರಿಸುವುದು, ಇದಾದ ನಂತರ ಹೊರಗಿನಿಂದ ವಿದೇಶಿಯರು ತಮ್ಮ ತಮ್ಮ ಧರ್ಮಕ್ಕೆ ಮತಾಂತರಗೊಳಿಸಲು ಅವರ ಧರ್ಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಇದು ಮುಂದೆ ಸ್ವಾತಂತ್ರೋತ್ತರ ಭಾರತದಲ್ಲಿ ನಡೆದ ಅಧ್ಯಯನಗಳು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಜೀವನವನ್ನು ಉತ್ತಮಗೊಳಿಸಲು ಸರ್ಕಾರ ಮತ್ತು ಸಮುದಾಯಗಳು ಆಸಕ್ತಿ ಹೊಂದಿರುವ ಉದ್ದೇಶವಾಗಿದ್ದಿತು. ಪ್ರತಿಯೊಂದು ಸಮುದಾಯವು ತನ್ನ

ಮೂಲದ ಪಾರಂಪರಿಕ ಜ್ಞಾನವನ್ನು ಸಮಕಾಲೀನಗೊಳಿಸಿ ಉಪಯುಕ್ತವಾದುದನ್ನು ಮುಂದುವರಿಸಿಕೊಂಡು, ನಿರುಪಯುಕ್ತ, ಹಾನಿಕಾರಕ ಹಾಗೂ ಬೆಳವಣಿಗೆಗೆ ಅಡೆತಡೆಯಾಗಿರುವುದನ್ನು ಚಿಕಿತ್ಸಕ ದೃಷ್ಟಿಗೆ ಒಳಪಡಿಸಿ ಮುನ್ನಡೆಯಬೇಕಾಗುತ್ತದೆ. ಒಂದು ಸಮುದಾಯವು ಕೀಳರಿಮೆಯಿಂದ ನರಳದೆ ತಮ್ಮಲ್ಲಿಯೂ ಮೌಲಿಕವಾದ ಸಂಗತಿಗಳಿವೆ ಎಂಬುದನ್ನು ತಿಳಿಸುವ ಮೂಲಕ ಎಲ್ಲರಿಗೂ ತಾವು ಸರಿಸಮಾನರೆಂಬ ಭಾವನೆ ಮೂಡಬೇಕು. ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಪುರಾಣ, ಐತಿಹ್ಯ ಮತ್ತು ಇತಿಹಾಸದ ಮುಖೇನ ಎತ್ತಿ ತೋರಿಸಬೇಕು.

ಒಂದು ಸಮುದಾಯದ ಜನರು ಪರಂಪರಾನುಗತವಾಗಿ ಅನುಭವದಿಂದ ಪಡೆದುಕೊಂಡ ಜ್ಞಾನವು ಮೌಖಿಕವಾಗಿ ಹಾಗೂ ಅನುಕರಣೆಯ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುವುದರ ಸ್ವರೂಪವನ್ನು ಸಾಂಸ್ಕೃತಿಕ ಅಧ್ಯಯನದ ಮೂಲಕ ತಿಳಿಯಬಹುದಾಗಿದೆ. ಅಕ್ಷರ ಜಗತ್ತಿನ ಮೂಲಕ ನಡೆದ ಜ್ಞಾನವು ಪಾಶ್ಚಾತ್ಯ ಮೂಲದ ಆಧುನಿಕತೆಯಿಂದ ರೂಪುಗೊಂಡಿದ್ದು ಪ್ರಕೃತಿ ಮತ್ತು ಸಮುದಾಯಗಳನ್ನು ಬದಲಾಯಿಸುವ ಶಕ್ತಿಯಿರುತ್ತದೆ. ಪರಂಪರಾಗತ ಜ್ಞಾನವನ್ನು ಆಧುನಿಕ ಜ್ಞಾನವು ತುಂಬಾ ಕೀಳಾಗಿ ಕಾಣುವುದರಿಂದ ಇವೆರಡೂ ಮುಖಾಮುಖಿಯಾಗಿ ಪಾರಂಪರಿಕ ಜ್ಞಾನದಲ್ಲೂ ಗುಣಾತ್ಮಕ ಸಂಗತಿಗಳಿವೆ ಎಂದು ಸಿದ್ಧಪಡಿಸಿ ತೋರಿಸುವ ಉದ್ದೇಶದಿಂದ ಈ ಅಧ್ಯಯನದ ಅವಶ್ಯಕತೆಯಿರುತ್ತದೆ.

ಜಾಗತೀಕರಣ ಸಂದರ್ಭದಲ್ಲಿ ಸ್ಥಳೀಯ ಸಮುದಾಯ ಸಂಸ್ಕೃತಿಗಳ ಮೇಲೆ ಬಲವಂತವಾಗಿ ಹೇರಲಾಗುತ್ತಿರುವ ಏಕರೂಪಿ ಸಂಸ್ಕೃತಿಯ ಬದಲಾಗಿ ಆಯಾ ದೇಶಗಳ, ಪ್ರದೇಶಗಳಲ್ಲಿರುವ ಬಹುರೂಪಿ ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಮುಖಾಮುಖಿಯಾಗುವ ಮತ್ತು ಅಂತಹ ಸಮುದಾಯಗಳು ತಮ್ಮ ಸಂಸ್ಕೃತಿಯನ್ನು ಅನುಸರಿಸಿಕೊಂಡು ಹೋಗುವುದೇ ಸಹಜವಾದುದು ಎಂಬುದನ್ನು ಪ್ರಕಟಪಡಿಸಲು ಅಧ್ಯಯನ ಬೇಕಾಗುತ್ತದೆ. ಇತಿಹಾಸವನ್ನು ಪುನಾರಚನೆ ಮಾಡುವಾಗ ಕೇವಲ ರಾಷ್ಟ್ರ ರಾಜ್ಯಗಳ ರಾಜಕೀಯ ಇತಿಹಾಸವನ್ನು ಕಟ್ಟಿಕೊಡದೆ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಗಳನ್ನು ಮಾಡಬೇಕಾಗುತ್ತದೆ. ಸಂಸ್ಕೃತಿಯ ಉಳಿದ ಘಟಕಗಳಾದ ಭಾಷೆ, ತಂತ್ರಜ್ಞಾನ, ಕಲೆ ಇತ್ಯಾದಿ ಅಂಶಗಳನ್ನು ಉಳಿಸಿಕೊಳ್ಳಲು ಹಿಂದೆಂದಿಗಿಂತಲೂ ಇಂದು ಅಧ್ಯಯನ ನಡೆಯಬೇಕಾದ ಜರೂರು ಇದೆ. ಆ ಮೂಲಕ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿ ಸಮಾಜದಲ್ಲಿ ಸಾಂಸ್ಕೃತಿಕ ಪ್ರತಿನಿಧೀಕರಣವನ್ನು ಪಡೆಯಬೇಕಾಗುತ್ತದೆ. ರಾಜಕೀಯ ಪ್ರತಿನಿಧೀಕರಣವನ್ನು ಪಡೆಯಲೋಸುಗವೂ ಇಂತಹ ಸಮುದಾಯಗಳ ಅಧ್ಯಯನವು ಪ್ರೋತ್ಸಾಹಿಸುತ್ತದೆ. ಒಟ್ಟಾರೆಯಾಗಿ ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನ ಮಾಡಲು ಪ್ರಾರಂಭಿಸಿದರೆ ಚಾರಿತ್ರಿಕ ಸ್ಥಿತ್ಯಂತರಗಳಲ್ಲಿ ಸಾಗಿ ಬಂದ ದಾರಿಯನ್ನು ವಿಶ್ಲೇಷಿಸುವುದರ ಜೊತೆಗೆ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನದ ಮೂಲ ಉದ್ದೇಶ ಕುರುಬ ಸಮುದಾಯದ ಬದುಕಿನ ಮೌಲ್ಯಗಳು, ಪೂರ್ವಪರಂಪರೆಯ ಮುಂದುವರಿಕೆ ಮತ್ತು ಮಾರ್ಪಾಟುಗಳನ್ನು ತಕ್ಕ ಮಟ್ಟಿಗಾದರೂ ತಲಸ್ಪರ್ಶಿಯಾಗಿ ಪರಿಶೀಲಿಸಿ ನಿರೂಪಿಸಲು ಪ್ರಯತ್ನಿಸುವುದು. ಇದಲ್ಲದೆ ಕುರುಬ ಸಮುದಾಯದ ಮೂಲ ಪುರುಷ, ಹೆಸರು, ಸಂಖ್ಯಾನಿರ್ಣಯ, ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆಗಳನ್ನು ಅವಲೋಕಿಸುವುದು. ಸಂಪ್ರದಾಯ-ಆಚರಣೆಗಳು, ದೈವ ಮತ್ತು ಸಮುದಾಯ ಸಂಬಂಧಿಯಾದ ಸೃಷ್ಟಿಪುರಾಣಗಳನ್ನು ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವದಿಂದ ಒರೆಹಚ್ಚಿ ನೋಡುವುದು. ಪ್ರಾದೇಶಿಕವಾದ ಭಿನ್ನತೆಗಳನ್ನೂ ಗುರ್ತಿಸಿ ಪ್ರಾಚೀನ ಮತ್ತು ಅರ್ವಾಚೀನ ಸಂಗತಿಗಳ ಹೋಲಿಕೆಗಳಿಂದ ಕರ್ನಾಟಕ ಕುರುಬರ ಒಳಪಂಗಡಗಳ ದಾಖಲೀಕರಣವನ್ನು ಮಾಡಬೇಕಾಗುತ್ತದೆ. ಅಲ್ಲದೆ ಇವುಗಳಲ್ಲಿರುವ ಸಾಂಪ್ರದಾಯಿಕ ವೃತ್ತಿಗಳ ಪಲ್ಲಟ, ಸಾಮೂಹಿಕ ನೆಲೆಯಲ್ಲಿ ಆಚರಣೆ ಮತ್ತು ಸಂಪ್ರದಾಯಗಳ ಹೋಲಿಕೆ, ಪ್ರವೃತ್ತಿಗಳನ್ನು ತೌಲನಿಕವಾಗಿ ವಿವೇಚಿಸುವ ಉದ್ದೇಶವನ್ನಿಟ್ಟುಕೊಂಡಿರುತ್ತೇನೆ. ಇಂತಹ ಅಧ್ಯಯನದ ಹಾದಿಯಲ್ಲಿ ಸಾಗಿದಾಗ ಕಂಡುಬರುವ ಒಳಪಂಗಡಗಳ ಬದುಕಿನ ಸಮಗ್ರವಾದ ಚಿತ್ರಣವನ್ನು ಕುರಿತದ್ದಾಗಿದೆ, 'ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ".

೧. ಅಧ್ಯಯನ ಸ್ವರೂಪ

ಚರಿತ್ರೆಯುದ್ದಕ್ಕೂ ಕಲೆ, ಸಾಹಿತ್ಯ ಮತ್ತು ವಾಸ್ತುಶಿಲ್ಪಗಳಲ್ಲಿ ಸಾಂಸ್ಕೃತಿಕ ಮಹತ್ವವನ್ನು ಹೇಳಲಾಗುತ್ತಿತ್ತು. ಆದರೆ ಸಮುದಾಯಗಳ ಅಧ್ಯಯನಕ್ಕೆ ಬಂದಾಗ ಸಾಂಸ್ಕೃತಿಕ ಮಹತ್ವ ಎನ್ನುವುದು ಒಂದು ಸಮುದಾಯದ ನಿತ್ಯ ಜೀವನದ ಕಲೆಯೇ ಆಗಿರುತ್ತದೆ. ಜನಪದರ ಮೌಖಿಕ ಚರಿತ್ರೆಗೆ ಲಿಖಿತ ಚರಿತ್ರೆಯು ಮುಖ್ಯ. ಆಕರ ಸಾಮಗ್ರಿಗಳನ್ನು ಒದಗಿಸುವ ಮೂಲಕ ಆಯಾ ಸಮುದಾಯಗಳ ತಾತ್ವಿಕ ಜ್ಞಾನ, ಸಾಹಿತ್ಯ, ಕಲೆ, ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಬಿತ್ತರಿಸುವ ಕಾರ್ಯನಿರ್ವಹಿಸುತ್ತವೆ. ಚರಿತ್ರೆಯಲ್ಲಿ ಯಾವುದೋ ಕಾರಣಕ್ಕೆ ಸಮುದಾಯದ ಬದುಕಿನಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರಗಳು ನಡೆದಿರುತ್ತವೆ. ಅವುಗಳನ್ನು ಸಮುದಾಯಗಳು ಹಾಗೆಯೇ ಉಳಿಸಿಕೊಂಡು ಬರಬಹುದು. ಇಲ್ಲವೇ ಪರಿವರ್ತನೆಗೊಂಡಿರಲೂ ಸಾಧ್ಯವಿದೆ. ಪ್ರಾರಂಭಿಕ ನೆಲೆಯಲ್ಲಿ ಅಲೆಮಾರಿಯಾಗಿದ್ದ ಕುರುಬ ಸಮುದಾಯ ಒಂದೆಡೆ ನೆಲೆನಿಂತು ಸ್ಥಿರ ಜೀವನವನ್ನು ರೂಪಿಸಿಕೊಂಡ ನಂತರ ನಿರ್ದಿಷ್ಟ ಜೀವನ ಕ್ರಮ ಸಂರಚಿತವಾಯಿತು.

ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನದ ಸ್ವರೂಪವನ್ನು ಅವಲೋಕಿಸಿದರೆ ಎಂಭತ್ತರ ದಶಕದಲ್ಲಿ ಡಾ.ಶ್ಯಾಂಸಿಂಗ್ ಶಶಿಯವರು ಬರೆದ 'ದಿ ಶೆಫರ್ಡ್ಸ್ ಆಫ್ ಇಂಡಿಯಾ' ಕೃತಿಯನ್ನು ಹೊರತುಪಡಿಸಿದರೆ ಈ ಸಮುದಾಯದ ಸಮಗ್ರ ಅಧ್ಯಯನದ ಪ್ರತ್ಯೇಕ ಕೃತಿಗಳ ಕೊರತೆ ಎದ್ದುಕಾಣುತ್ತದೆ. ಸ್ವಾತಂತ್ರ ಪೂರ್ವಕಾಲದಿಂದಲೂ ಈ ಸಮುದಾಯದ ಸಾಂಸ್ಕೃತಿಕ ಮೌಲ್ಯಗಳನ್ನು ಗುರಿಯಾಗಿಟ್ಟುಕೊಂಡಿರುವ ಅಧ್ಯಯನಗಳು ಕಡಿಮೆಯೆಂದೇ ಹೇಳಬೇಕು. ಆದರೂ ೧೮೭೮ರಲ್ಲಿ

‘ರೆವರೆಂಡ್ ಡಬ್ಲ್ಯೂ ಟೇಲರ್’ ರಚಿಸಿದ ‘ಹಿಂದೂ ಮೈಥಾಲಜಿ ಅಂಡ್ ಫಿಲಾಸಫಿ’ಯಲ್ಲಿ ಕುರುಬರ ಮೂಲವನ್ನು ವಿವೇಚಿಸಿದ್ದಾರೆ. ೧೮೭೫ರಲ್ಲಿ ‘ಕರ್ನಲ್ ಜಿ ಮ್ಯಾಲ್ಸನ್’ ರಚಿಸಿದ ‘ದಿ ನೇಟೀವ್ ಸ್ಟೇಟ್ಸ್ ಆಫ್ ಇಂಡಿಯಾ’ದಲ್ಲಿ ಝುಂಡೆ ಕುರುಬರ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ೧೮೮೪ರಲ್ಲಿ ಪ್ರಕಟವಾದ ‘ಆರ್ಕಿಯಾಲಜಿಕಲ್ ಸರ್ವೇ ಆಫ್ ಸೌತ್ ಇಂಡಿಯಾ’ ಕೃತಿಯಲ್ಲಿ ಕುರುಬರ ಚಾರಿತ್ರಿಕ ಸಂಘರ್ಷಗಳನ್ನು ಅನಾವರಣಗೊಳಿಸಲಾಗಿದೆ. ೧೮೯೩ರಲ್ಲಿ ಮುದ್ರಣಗೊಂಡ ‘ದಿ ಒರಿಜಿನಲ್ ಇನ್ ಹ್ಯಾಬಿಟೆಂಟ್ಸ ಆಫ್ ಇಂಡಿಯಾ’ ಕೃತಿಯಲ್ಲಿ ‘ಗಸ್ಟಾವ್ ಒಪರ್ಟ’ ಕುರುಬರ ನಾಡಿನ ಬಗ್ಗೆ ಪ್ರಸ್ತಾಪಿಸಿದರೆ, ಅದೇ ವರ್ಷ ‘ಹೊರೇಸ್.ಎಚ್.ವಿಲ್ಸನ್’ ಬರೆದ ‘ಮ್ಯಾನ್ಯುಯಲ್ ಆಫ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ’ಯಲ್ಲಿ ಗೊಲ್ಲಕುರುಬರ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ೧೮೯೪ರಲ್ಲಿ ಎಂ.ಗ್ರಿಫಿಕ್ ಎಂಬ ವಿದ್ವಾಂಸರು ‘ಇಂಡಿಯನ್ ಪ್ರಿನ್ಸೆಸ್’ ಗ್ರಂಥದಲ್ಲಿ ಧನಗಾರರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ೧೯೦೮ರ ‘ನೀಲಗಿರಿಯ ಗೆಝೆಟಿಯರ್’ನಲ್ಲಿ ‘ವಿ.ಫ್ರಾನ್ಸಿಸ್’ಎಂಬ ವಿದ್ವಾಂಸನೂ, ೧೯೧೬ರಲ್ಲಿ ಪ್ರಕಟಗೊಂಡ ‘ಹೀರಾಲಾಲ’ರ ‘ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ ಆಫ್ ಸೆಂಟ್ರಲ್ ಪ್ರಾವಿನ್ಸಸ್’ ಕೃತಿಯಲ್ಲಿ ಪಲ್ಲವರನ್ನು ‘ಕರುಬರು’ ಎನ್ನಲಾಗಿದೆ.

೧೯೨೨ರಲ್ಲಿ ‘ಆರ್.ಇ.ಎಂಥೋವೆನ್’ರವರು ‘ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ’ ಕೃತಿಯಲ್ಲಿ ಕುರುಬರ ಪ್ರಾಬಲ್ಯವನ್ನು ವಿವರಿಸಿದ್ದಾನೆ. ಹೀಗೆ ಕುರುಬರ ಸಮುದಾಯದ ಅಧ್ಯಯನಗಳು ಬಹುತೇಕ ಆಂಗ್ಲಭಾಷೆ, ಹೊರನಾಡಿನ ವಿದ್ವಾಂಸರಿಂದ ನಡೆದಿರುವುದು ಗಮನಾರ್ಹ ಸಂಗತಿ. ಇಂಥ ವೇಳೆಯಲ್ಲಿ ೧೯೨೬ರಲ್ಲಿ ದಿವಂಗತ ವಿ.ಆರ್.ಹನುಮಂತಯ್ಯ ರಚಿಸಿದ ‘ಭಾರತದೇಶದ ಕುರುಬರ ಚರಿತ್ರೆ’ ಕನ್ನಡದಲ್ಲಿ ಮೊದಲಿಗೆ ಕುರುಬ ಸಮುದಾಯವನ್ನು ಕುರಿತು ಪ್ರಕಟವಾಗಿರುವ ಕೃತಿ. ೧೯೨೯ರಲ್ಲಿ ಹೆಚ್.ವಿ.ನಂಜುಂಡಯ್ಯನವರು ‘ಎತ್ನಾಗ್ರಾಫಿಕಲ್ ಸರ್ವೇ ಆಫ್ ಮೈಸೂರ್ ಕುರುಬ ಕ್ಯಾಸ್ಟ್’ ಕೃತಿಯಲ್ಲಿ ಕನಕಯ್ಯನ ಜಾತಿ ಎಂಬ ಒಳಪಂಗಡ ಕುರಿತು ವಿವೇಚಿಸಿದ್ದಾರೆ. ೧೯೭೭ರಲ್ಲಿ ‘ಲೇವಿಸ್ ರೈಸ್’ರವರು ‘ಗೆಝೆಟಿಯರ್ ಆಫ್ ಮೈಸೂರ್ ಅಂಡ್ ಕೂರ್ಗ್’ನಲ್ಲಿ ಕುರುಬರು ಮತ್ತು ಗೊಲ್ಲರ ಒಳಸಂಬಂಧವನ್ನು ಕುರಿತು ಚರ್ಚಿಸಲಾಗಿದೆ. ಹೀಗಾಗಿ ಕುರುಬರ ಚಾರಿತ್ರಿಕ ಅಧ್ಯಯನಗಳ ವಿರಳತೆಯನ್ನು ಗಮನಿಸಿ ಮಾಹಿತಿಪೂರ್ಣ ಅಧ್ಯಯನದ ಅಗತ್ಯವನ್ನನುಲಕ್ಷಿಸಿ ಸಿದ್ಧಗೊಂಡ ಮಹಾಪ್ರಬಂಧ ಇದಾಗಿದೆ.

೨. ಅಧ್ಯಯನದ ಆಕರಗಳು

ಪ್ರಸ್ತುತ ಕುರುಬರ ಒಳಪಂಗಡಗಳ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿರುವ ಪ್ರಮುಖ ಆಕರಗಳೆಂದರೆ ಇವರಲ್ಲಿರುವ ಪುರಾಣಗಳು, ಕಾವ್ಯಗಳು, ಮೌಖಿಕ ಪರಂಪರೆಯ ಹಾಡುಗಳು, ಸ್ಥಳಪುರಾಣ, ಐತಿಹ್ಯ, ಶಾಸನಗಳು ಮುಂತಾದವು ಹಾಲುಮತ ಅಧ್ಯಯನದ ಆಕರಗಳನ್ನು ಅಧ್ಯಯನ ದೃಷ್ಟಿಯಿಂದ ಮೂರು ವರ್ಗಗಳಾಗಿ ವರ್ಗೀಕರಿಸಿಕೊಂಡರೆ ಹಾಲುಮತ ಆಕರಗಳ ಪ್ರಮಾಣ, ಪಾತ್ರ ಮತ್ತು ಮಹತ್ವ ಕುರಿತಾದ ಒಂದು ವ್ಯವಸ್ಥಿತ ಚೌಕಟ್ಟು ನಿರೂಪಿತವಾಗುತ್ತದೆ.

೧. ಸಿದ್ಧಮಂಕ ಚರಿತೆ ಮತ್ತು ತಗರಪವಾಡ- ಇವು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರಿದ ಕೃತಿಗಳಾಗಿವೆ. ಇವು ಹಾಲುಮತ ಸಮುದಾಯದ ಎರಡು ಸಂಪ್ರದಾಯಗಳನ್ನು ಚಾರಿತ್ರಿಕವಾಗಿ ಕಟ್ಟಿಕೊಡುತ್ತವೆ.

೨. ಮಾಳಿಂಗರಾಯನ ಕಾವ್ಯ, ಮೈಲಾರಲಿಂಗನ ಕಾವ್ಯ, ಗೊಲ್ಲಾಳಯ್ಯನ ಪುರಾಣ, ಹಾಗೂ ಹುಲಿಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣಗಳು- ಈ ನಾಲ್ಕು ಕೃತಿಗಳು ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರಾದ ಮಾಳಿಂಗರಾಯ, ಗೊಲ್ಲಾಳ ಹಾಗೂ ಮೈಲಾರ ಲಿಂಗನನ್ನು ಕುರಿತಾದ ಕಾವ್ಯಗಳು.

೩. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣವು, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರ ಹಾಲುಮತ ಪುರಾಣವು, ರಸ್ತಾಪುರಭೀಮ ಕವಿಯ ಹಾಲುಮತೋತ್ತೇಜಕ ಪುರಾಣ ಹಾಗೂ ಸಿದ್ದಪ್ಪ ಮೇಟಿಯವರ ಜನಪದ ಹಾಲುಮತ ಮಹಾಕಾವ್ಯ- ಈ ನಾಲ್ಕು ಪುರಾಣಗಳು ಹಾಲುಮತ ದೈವತಗಳಾಗಿರುವ ಬೀರಪ್ಪ, ಅಮೋಘಸಿದ್ಧ ಸಿದ್ಧರಾಮೇಶ್ವರ, ಪದ್ಮಣ್ಣ ಹಾಗೂ ರೇವಣಸಿದ್ಧರ ಸುತ್ತ ಹೆಣೆದು ಕೊಂಡಿರುವ ಪುರಾಣಗಳಾಗಿವೆ.

ಚಾರಿತ್ರಿಕ ಕಾವ್ಯ ಗುಂಪಿಗೆ ಸೇರುವ ಸಿದ್ಧಮಂಕ ಚರಿತೆ, ತಗರಪವಾಡ ಪ್ರಮುಖವಾದುವು. ಈ ಎರಡು ಚಾರಿತ್ರಿಕ ಕಾವ್ಯಗಳಿಂದ ಕುರುಬರಲ್ಲಿ ಸಿದ್ಧಮಂಕ ಸಂಪ್ರದಾಯ ಶಾಂತ ಮುತ್ತಯ್ಯ ಸಂಪ್ರದಾಯಗಳನ್ನು ಗಮನಿಸಬಹುದು. ಸಿದ್ಧರಾಮನಿಗೆ ಸಿದ್ಧಮಂಕ ಚರಿತೆ ಪ್ರಾಧಾನ್ಯತೆ ನೀಡಿದರೆ, ಶಾಂತ ಮುತ್ತಯ್ಯನ ಸಂಪ್ರದಾಯದ ತಗರಪವಾಡದಲ್ಲಿ ರೇವಣಸಿದ್ಧನಿಗೆ ಪ್ರಾಮುಖ್ಯತೆ ನೀಡಲಾಗಿದೆ.

ಅಡಿವೆಪ್ಪ ಮಾಳಪ್ಪ ಸೋಮುತ್ತೆ ಒಡೆಯರಿಂದ ಮಾಳಿಂಗರಾಯನ ಕಾವ್ಯ ಹಾಗೂ ಹುಲಿಜಂತಿ ಮಹಾಲಿಂಗನ ಹಾಲುಮತ ಪುರಾಣಗಳು ರಚನೆಯಾಗಿವೆ. ಇವುಗಳಲ್ಲಿ ೬೯ ಅಧ್ಯಾಯಗಳ ಹುಲಿಜಂತಿ ಪುರಾಣ ಗದ್ಯ ಪ್ರಕಾರದಲ್ಲಿದ್ದರೆ, ಇದನ್ನು ಮಾಳಿಂಗರಾಯಕಾವ್ಯ ಹೆಸರಿನಲ್ಲಿ ಹಾಡಲಾಗಿದೆ.

ಗೊಲ್ಲಾಳಯ್ಯನ ಪುರಾಣ ವಚನಕಾರ ಗೋಲಗೇರಿ ಗೊಲ್ಲಾಳೇಶ್ವರನನ್ನು ಕುರಿತ ಕಾವ್ಯ. ಆದರೆ ಲಭ್ಯವಿರುವ ಗೊಲ್ಲಾಳಯ್ಯನ ಪುರಾಣದ ಕರ್ತೃ ಯಾರೆಂಬುದು ತಿಳಿದುಬರುವುದಿಲ್ಲ. ಮೈಲಾರಲಿಂಗನ ಕಾವ್ಯವು ದೇವಲಾಪುರದ ಒಗ್ಗರ ಹನುಮಂತಪ್ಪ ಮತ್ತು ಸಂಗಡಿಗರಿಂದ ಕರ್ನಾಟಕ ಜನಪದ ಕಾವ್ಯ ಮಾಲೆಯಡಿ ಸಂಪಾದಿತ ಕೃತಿ. ಮೈಲಾರನನ್ನು ಆರಾಧ್ಯದೈವವಾಗಿ, ಹಾಲುಮತ ಸಮುದಾಯ ಒಂದು ಕಡೆ ನೆಲೆ ನಿಂತ ಮೇಲೆ ಮೈಲಾರ ಲಿಂಗ ಸಾಂಸ್ಕೃತಿಕ ವೀರನಾಗಿ ಸ್ವೀಕೃತನಾಗಿರಬೇಕು.

ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಬಸವಣ್ಣೆಪ್ಪ ಹಳವಳ್ಳಿಯವರ ಹಾಲುಮತ ಪುರಾಣ ಮತ್ತು ಜನಪದ ಹಾಲುಮತ ಮಹಾಕಾವ್ಯಗಳು ಕೂಡಾ ವಸ್ತುವಿನ ದೃಷ್ಟಿಯಿಂದ ಟಗರಪವಾಡ ಮತ್ತು ಸಿದ್ಧಮಂಕ ಚರಿತೆಗಳ ಮುಂದುವರಿಕೆಯೆನ್ನುವಂತೆ

ರಚನೆಯಾಗಿವೆ. ಎನ್.ಬಿ.ತೋಂಟಾಪುರ, ನಿಂಗಣ್ಣ ಸಣ್ಣಕ್ಕಿ ಹಾಗೂ ಡಾ. ಎಫ್.ಟಿ. ಹಳ್ಳಿಕೇರಿ ಯವರು ಹಾಲುಮತ ಪುರಾಣಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

ಯಾವುದೇ ಜನಸಮುದಾಯದ ಇತಿಹಾಸ, ಸಾಹಿತ್ಯ ಸಂಸ್ಕೃತಿ ಅಧ್ಯಯನಕ್ಕೆ ಆಕರಗಳು ಅತ್ಯವಶ್ಯಕ. ಅಂತಹ ಆಕರಗಳಲ್ಲಿ ಲಿಖಿತರೂಪದ ದಾಖಲು ಸಾಹಿತ್ಯವೂ ಒಂದು. ದಾಖಲು ಸಾಹಿತ್ಯದಲ್ಲಿ ಶಾಸನಗಳು ಪ್ರಧಾನ. ಕುರುಬರ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಶಾಸನಗಳು ಮಹತ್ವದ ಸಂಗತಿಗಳನ್ನು ಹೊರಹಾಕುತ್ತವೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸೊಗಲದ ಕ್ರಿ.ಶ.೯೮೦ರ ಶಾಸನವು ಬೆಳವಾಡಿಯ ಧನಗರ (ಕುರುಬ) ಸಮುದಾಯದ ಕರಿಯ ಕೇತಿಮಯ್ಯನ ಹೆಂಡತಿ ಕಂಚಿಕಬ್ಬೆಯ ವ್ಯಕ್ತಿತ್ವ. ಅವಳು ಸುವರ್ಣಾಕ್ಷಿ ದೇವರಿಗೆ ನೀಡಿದ ವಿಷಯಗಳನ್ನು ವಿವರಿಸುತ್ತದೆ. ಬಹುಶಃ ಇದು ಕುರುಬರಿಗೆ ಸಂಬಂಧಿಸಿದ ಮೊದಲ ಶಾಸನ ಎಂದು ತಿಳಿದು ಬರುತ್ತದೆ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕಿನ ಬೆಳತೂರು ಗ್ರಾಮದ ಕ್ರಿ.ಶ.೧೦೫೭ರ ದೇಕಬ್ಬೆ ಶಾಸನವನ್ನು ಕುರುಬಸಮುದಾಯಕ್ಕೆ ಸೇರಿದ ಕವಿರಾಜ ಬಾಂಧವ ಮಲ್ಲ ಎಂಬ ಕವಿ ಬರೆದಿದ್ದಾನೆ ಎಂಬ ವಿಷಯವು ಅಭಿವ್ಯಕ್ತವಾಗುತ್ತದೆ.

ಬಿಜಾಪುರದ ಮುದ್ದೇಬಿಹಾಳದ ಸರೂರು ಗ್ರಾಮ ಕುರುಬರ ಪ್ರಾಚೀನ ಸಾಂಸ್ಕೃತಿಕ ನೆಲೆ. ಇಲ್ಲಿನ ರೇವಣ ಸಿದ್ದೇಶ್ವರ (ಮಲ್ಲಿಕಾರ್ಜುನ) ದೇವಾಲಯದಲ್ಲಿ ಕ್ರಿ.ಶ. ೧೨೦೮ ಮತ್ತು ಕ್ರಿ.ಶ. ೧೨೧೧ನೆಯ ಕಾಲದ ಎರಡು ಶಾಸನಗಳು ಲಭ್ಯವಾಗಿವೆ. ಒಂದನೆಯ ಶಾಸನದಲ್ಲಿ ಮಂಕಯಂಗಳಿಗೆ ಮಲ್ಲಿನಾಥ ರಾಮವಂಬನು ಸಂನಿಧಾನದಲು ಎಂಬ ವಾಕ್ಯ ಹಾಗೂ ಎರಡನೆಯ ಶಾಸನದಲ್ಲಿರುವ ಅರಸನಹಳ್ಳಿಯ ವೀರನಗೌಡರ ಕೈಯಲು ಮಂಕಯ್ಯನು ಹೊಂನ ಕೊಟ್ಟು ಆ ಹೊಲದೊಲು ಮತ್ತು ಹೊನಗುಂದದ ಬೀಚಗುರು ತಂನ ಮಗ ಮಂದಯ್ಯನ ಕಾಲದಾ ಗುರುವಿಗೆ ಮಂಕಯನು ಮಲ್ಲಿನಾಥ ದೇವರಸ್ತಾನದ ಧಾರಾಪೂರ್ವಕ ಮಾಡಿಕೊಟ್ಟರು" ಎಂಬ ವಾಕ್ಯಗಳು ಕುರುಬರ ಗುರು ಪರಂಪರೆಯಲ್ಲಿ ಒಬ್ಬವಾದ ಸಿದ್ಧರಾಮೇಶ್ವರನ ಅನುಯಾಯಿಯಾದ ಸಿದ್ಧಮಂಕನನ್ನು ನೆನಪಿಸುತ್ತದೆ ಎಂಬ ವಿಷಯದ ಪ್ರಸ್ತಾಪ ಮಾಡಲಾಗಿದೆ.

ಚಿತ್ರದುರ್ಗಜಿಲ್ಲೆ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆ ಗ್ರಾಮದ ಹಳ್ಳದ ಜಂಗಮ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೆಟ್ಟ ಶಾಸನವು ಕುರುಬರಿಗೆ ಸಂಬಂಧಿಸಿದಂತೆ ಅನೇಕ ಕುತೂಹಲಕಾರಿ ಸಂಗತಿಗಳನ್ನು ದಾಖಲಿಸಿದೆ. ವಿಜಯನಗರವನ್ನಾಳಿದವರು ಹಕ್ಕಬುಕ್ಕರೆಂಬ ಕುರುಬ ದೊರೆಗಳು ಎಂದು ಹೇಳುತ್ತ ಕುರುಬ ಗೌಡರು, ಕೋಲಕಾರರು, ಪೂಜಾರಿಗಳು ದಳವಾಯಿಗಳು ಹೀಗೆ ಅನೇಕರ ಹೆಸರುಗಳನ್ನು

ದಾಖಲಿಸುತ್ತಾ ಹೋಗುತ್ತದೆ. ಆದರೆ ಶಾಸನವು ರಚನೆಗೊಂಡ ಕಾಲವನ್ನು ಮಾತ್ರ ದಾಖಲಿಸಿಲ್ಲ ಎಂಬ ವಿಷಯವು ಬೆಳಕಿಗೆ ಬರುತ್ತದೆ.

ತುರುವೇಕೆರೆಯ ಮೂರು ತಾಮ್ರಶಾಸನಗಳಲ್ಲಿ ಶಾಂತ ಮುತ್ತಯ್ಯನು ಮಂಕನವರನ್ನು ಗೆದ್ದು ಸೆರೆ ಹಾಕಿದ ಪ್ರಸ್ತಾಪ ಬರುತ್ತದೆ. ಶಾಸನ ತಜ್ಞರಾದ ದೇವರ ಕೊಂಡಾರೆಡ್ಡಿಯವರು ಇದೊಂದು ಜಯರೇಖೆಯ ಶಾಸನ ವೆಂದು ಊಹೆ ಮಾಡುತ್ತಾರೆ.

ಕುರುಬರಿಗೆ ಸಂಬಂಧಿತವಾದ ನಿರೂಪಗಳು ಇದ್ದು ಇವುಗಳಿಗೆ ಬರಹರೂಪದಲ್ಲಿರುವ ಅಜ್ಞಾ ಪತ್ರ ಅಥವಾ ಆದೇಶಪತ್ರವೆಂದು ಕರೆಯಲಾಗುತ್ತದೆ. ಇವುಗಳಲ್ಲಿ ದಾನ ನಿರೂಪ, ಉಪಾಧಿ ನಿರೂಪ ಮತ್ತು ಆದೇಶಿತ ನಿರೂಪಗಳೆಂದು ವರ್ಗೀಕರಿಸಬಹುದಾಗಿದೆ. ಇದಲ್ಲದೆ ಸನದುಗಳು ಮತ್ತು ವರದಿಗಳೂ ಕುರುಬ ಸಮುದಾಯದ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿ ಕಂಡುಬರುತ್ತವೆ. ಹೀಗೆ ಶಾಸನ, ಕೈಫಿಯತ್ತು, ನಿರೂಪ, ಸನ್ನದುಗಳಂಥ ದಾಖಲೆಗಳು ಹಾಲುಮತ ಅಧ್ಯಯನಕ್ಕೆ ಆಕರಗಳನ್ನಾಗಿ ಬಳಸಿಕೊಂಡಾಗ ಕುರುಬರ ಇತಿಹಾಸ ಸಂಸ್ಕೃತಿ ಸಂಘಟನೆ ಹೋರಾಟಗಳ ಸ್ಪಷ್ಟ ಚಿತ್ರಣವು ಸಿಗಲಿದೆ.

ಮೌಖಿಕ ಪರಂಪರೆಯ ಆಕರಗಳೂ ಕುರುಬ ಸಮುದಾಯದ ಅಧ್ಯಯನಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತವೆ. ಪ್ರತಿ ಜನಸಮುದಾಯಕ್ಕಿರುವಂತೆ ವಿಶಿಷ್ಟವಾದ ಸಾಂಸ್ಕೃತಿಕ ಮೌಖಿಕ ಪರಂಪರೆ ಕುರುಬರಿಗೂ ಇದೆ. ಇವರ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಮೂಲ ಆಕರಗಳಾಗಿ ಡೊಳ್ಳಿನ ಹಾಡುಗಳು, ಜನಪದ ಮಹಾಕಾವ್ಯಗಳು, ಮೈಲಾರಲಿಂಗನ ಕಾರ್ಣಿಕ, ಒಡೆಯರ ಹೇಳಿಕೆಗಳು, ಟಗರ ಪವಾಡ ಹಾಗು ಇವರ ಕುರಿತಾಗಿರುವ ಕತೆಗಳು ಮತ್ತು ಗಾದೆಯ ಮಾತುಗಳು ಆಧಾರವಾಗಿ ನಿಲ್ಲುತ್ತವೆ. ಇವೆಲ್ಲವುಗಳ ಅಧ್ಯಯನದಿಂದ ಕುರುಬರ ಒಳಪಂಗಡಗಳು ಅಧ್ಯಯನಕ್ಕೆ ಸಮಗ್ರತೆಯು ಪ್ರಾಪ್ತವಾಗುತ್ತದೆ. ಲಿಖಿತ ಸಾಹಿತ್ಯ ಕೃತಿಗಳು, ಮೌಖಿಕ ಭಾಷಾಸಾಮಾಗ್ರಿಗಳು ಇವು ಒಂದು ಸಮುದಾಯದ ಒಳಪಂಗಡಗಳ ಅಧ್ಯಯನಕ್ಕೆ ಪೂರ್ಣಪ್ರಮಾಣದ ಆಕರಗಳಾಗುವುದಿಲ್ಲ. ಹೀಗೆ ಶಾಸನ, ರಾಜ್ಯಪತ್ರಗಳು ದಾಖಲೆಗಳು ಒದಗಿಸುವ ಮಾಹಿತಿಗಳಿಗೆ ಪೂರಕವಾಗಿ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಸಂಗತಿಗಳನ್ನು, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳನ್ನು ಅನುಲಕ್ಷಿಸಿ ಕುರುಬರ ಸಮುದಾಯದ ಒಳಪಂಗಡಗಳ ಚಾರಿತ್ರಿಕ ನೆಲೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ.

ಹೀಗಾಗಿ ಕುರುಬ ಸಮುದಾಯದ ಸಮಷ್ಠಿನೆಲೆಯನ್ನು ಅರ್ಥೈಸಿಕೊಳ್ಳುವುದು. ಇದರಲ್ಲಿರುವ ಒಳಪಂಗಡಗಳು ಅವರ ಸಾಂಸ್ಕೃತಿಕ ಅಸ್ಮಿತೆಗಳು. ಸಮಾಜದ ಹಲವು ಕಾರಣಗಳಿಂದ ಬಿಡಿ ಬಿಡಿ ಘಟಕಗಳಾಗಿ ರೂಪತಾಳಿರುವ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸುವಾಗ ಅವೆಲ್ಲವುಗಳ ಸಾಂಸ್ಕೃತಿಕ ಕಥನಗಳನ್ನು ಒಟ್ಟಿಗೇ ಸೇರಿಸಿ ಅರ್ಥೈಸಿಕೊಂಡರೆ ಕುರುಬ ಸಮುದಾಯದ

ಸಮಷ್ಟಿ ಚರಿತ್ರೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ. ಜಾತಿನೆಲೆಯ ಜಡಸ್ಥಿತಿಯ ಯೋಚನೆಗಳಿಂದ ಮುಕ್ತವಾಗಬೇಕೆನ್ನುವುದನ್ನು ಇಂಥ ಸಮುದಾಯ ಸಂಬಂಧಿತ ಅಧ್ಯಯನಗಳು ತೀವ್ರವಾಗಿ ಬಯಸುತ್ತವೆಂಬುದನ್ನು ಮೂಲ ಉದ್ದೇಶವಾಗಿರಿಸಿಕೊಂಡಿದೆ.

ವ್ಯಾಪ್ತಿ: ಕರ್ನಾಟಕದಾದ್ಯಂತ ಕಂಡುಬರುವ ಕುರುಬ ಸಮುದಾಯದ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನದ ಮೊದಲನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ವಿಷಯಗಳನ್ನು ಒಳಗೊಂಡಿರುತ್ತದೆ. ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯಮಾಡಿ ಹಲವಾರು ಹೊಸ ಆಕರಸಾಮಗ್ರಗಳಿಂದ ಇದೊಂದು ಹೊಸ ವಿಷಯವೆಂಬುದನ್ನು ಕುರಿತು ಬೆಳಕಿಗೆ ತರಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕರ್ನಾಟಕ ಕುರುಬರ ಒಳಪಂಗಡಗಳ ಹೆಸರು ಮತ್ತು ಸಂಖ್ಯಾ ನಿರ್ಣಯವನ್ನು ಮಾಡಲಾಗಿದೆ. ಇದರಲ್ಲಿ ಕುರುಬರ ಮೂಲ, ಬೆಳವಣಿಗೆ, ಕುರಿತು ಚರ್ಚಿಸಲಾಗಿದೆ. ಅಲ್ಲದೆ ಒಳಪಂಗಡಗಳ ಎಷ್ಟೆಂಬುದನ್ನು ನಿರ್ಣಯಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕರ್ನಾಟಕ ಕುರುಬರ ಒಳಪಂಗಡಗಳಲ್ಲಿ ಕಂಡು ಬರುವ ಪೌರಾಣಿಕ ಸೃಷ್ಟಿ ಕತೆಗಳನ್ನು ಮತ್ತು ಅವುಗಳ ಚಾರಿತ್ರಿಕ ಮಹತ್ವವನ್ನು ಕುರಿತು ಅಧ್ಯಯನಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕರ್ನಾಟಕ ಕುರುಬರ ಒಳಪಂಗಡಗಳು ಮತ್ತು ಬೆಡಗುಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಅಲ್ಲದೆ ಕೆಲವು ಬೆಡಗುಗಳ ಐತಿಹ್ಯವನ್ನು ಪರಿಚಯಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಸಂಪ್ರದಾಯ, ಆಚರಣೆಗಳು, ದೈವಗಳು, ಸಾಂಸ್ಕೃತಿಕ ವೀರರು, ಸಾಂಸ್ಕೃತಿಕ ಕಲೆಗಳು ಮತ್ತು ನೆಲೆಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಆರನೇ ಅಧ್ಯಾಯವು ಸಮಾರೋಪವನ್ನು ಒಳಗೊಂಡಿದೆ. ಮಹಾಪ್ರಬಂಧದ ಒಟ್ಟು ಆರು ಅಧ್ಯಾಯಗಳ ವಿಷಯಗಳನ್ನು ಕ್ರೋಢಿಕರಿಸಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಅಧ್ಯಾಯ ೨

ಒಳಪಂಗಡಗಳು: ಹೆಸರು-ಸಂಖ್ಯಾನಿರ್ಣಯ

ಅ. ಕುರುಬರು-ಒಳಪಂಗಡಗಳು

೧. ಅರ್ಥ

೨. ಉಗಮ

೩. ಮೂಲ

೪. ಬೆಳವಣಿಗೆ

ಆ. ಹೆಸರು-ಸಂಖ್ಯಾನಿರ್ಣಯ

ಅಧ್ಯಾಯ ೨

ಒಳಪಂಗಡಗಳು: ಹೆಸರು-ಸಂಖ್ಯಾನಿರ್ಣಯ

ಪ್ರವೇಶ

ಕುರುಬರು ಕರ್ನಾಟಕದ ಒಂದು ಪ್ರಮುಖ ಸಮುದಾಯ. ಇದು ಸಾಮಾಜಿಕ ಸಂಘಟನೆಯ ಶಿಸ್ತಿನಿಂದ ಅಸ್ತಿತ್ವಕ್ಕೆ ಬಂದಿತ್ತು. ಇತ್ತೀಚಿನ ದಿನಗಳಲ್ಲಿ ವಿಘಟನೆಗೊಳ್ಳುತ್ತ ಒಳಪಂಗಡಗಳಾಗಿ ರೂಪು ತಳೆಯುತ್ತಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯೇ ಸಂಕೀರ್ಣವೆನಿಸುವಂತಹುದು. ಇದರಲ್ಲಿ ಸಮುದಾಯಗಳು, ಪಂಗಡಗಳು, ಒಳ ಪಂಗಡಗಳು ಪ್ರಾಚೀನ ಮಾನವನ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಒಂದೊಂದು ಸಮುದಾಯವು ತನ್ನದೇ ಆದ ವಿಶಿಷ್ಟವೆನಿಸುವ ಹೆಸರನ್ನು ಹೊಂದಿರುತ್ತದೆ. ಇದರಲ್ಲಿ ಪಂಗಡ, ಒಳಪಂಗಡಗಳೆಂದು ಶಾಖೋಪಶಾಖೆಗಳಾಗಿ ಹರಿದು ಹಂಚಿ ಪ್ರಾದೇಶಿಕವಾಗಿಯೂ ವಿಭಿನ್ನ ಹೆಸರುಗಳು ಇರುತ್ತವೆ. ಆದ್ದರಿಂದ ಪ್ರಾಚೀನ ಕಾಲದಿಂದಲೂ ಶುದ್ಧರೂಪದಲ್ಲಿ ಸಮುದಾಯವೊಂದಿರಲಾರದು.

ದ್ರಾವಿಡರು ಇಲ್ಲಿನ ಮೂಲನಿವಾಸಿಗಳು. ಆರ್ಯರು ಮತ್ತು ಆರ್ಯೇತರರ ಸಂಗಮದಿಂದಾಗಿ ಸಂಸ್ಕೃತಿಗಳ ಸಂಘರ್ಷ ಹಾಗೂ ಸಾಮರಸ್ಯಗಳ ಅನುಸಂಧಾನವು ನಿರಂತರವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುತ್ತದೆ. ವಿವಿಧ ಸಮುದಾಯಗಳ ನಡುವಣ ಸಂಬಂಧ, ಸಂಘಟನಾ ವ್ಯವಸ್ಥೆ, ವೈವಿಧ್ಯಮಯ ಜೀವನ ಕ್ರಮ ಕುರಿತ ಅಧ್ಯಯನ ವಿಶೇಷವಾದುದು. ಮಾನವನ ಮೊದಲ ಅವಸ್ಥೆಯೆನಿಸಿದ ಆಹಾರಕ್ಕಾಗಿ ಅಲೆಯುವ ಬೇಟೆ ಸಂಸ್ಕೃತಿ ಒಂದು ಕಾಲಘಟ್ಟವಾದರೆ, ಅವನು ನೆಲೆನಿಂತು ಕುರಿ, ಆಡು, ಆಕಳು ಮುಂತಾದ ಪ್ರಾಣಿಗಳ ಪಾಲನೆ ಮಾಡಿಕೊಂಡು ಇರಲು ಆರಂಭಿಸಿದನು. ಸಾಕು ಪ್ರಾಣಿಗಳಿಂದ ಜೀವನ ಮುನ್ನಡೆಸಿ ಮುಂದೆ ಕುರುಬರೆನಿಸಿಕೊಂಡರು.

ಮಾನವ ಸಮುದಾಯದ ಸಂಸ್ಕೃತಿಯನ್ನು ಅದರ ಸಮಗ್ರರೂಪದಲ್ಲಿ ಅರಿಯುವುದು ಅವಶ್ಯ. ಇದಕ್ಕೆ ಪೂರಕವಾಗಿ ಸಮುದಾಯವನ್ನು ಬಿಡಿಬಿಡಿಯಾಗಿ ಅಧ್ಯಯನ ಮಾಡುವುದು ಸೂಕ್ತವೆಂದು ಪ್ರತಿಪಾದಿಸಿ ಅದೇ ಹಾದಿಯಲ್ಲಿ ನಡೆದವರು ಅನೇಕರು ಇದ್ದಾರೆ. ಅಂತಹ ದಾರಿಯಲ್ಲಿ ಬಿಡಿ ಅಧ್ಯಯನದ ಫಲವಾಗಿ ಕುರುಬ ಸಮುದಾಯದ ಒಳಪಂಗಡಗಳ ಅಧ್ಯಯನವು ಹಿಂದೆಂದಿಗಿಂತಲೂ ಈಗ ಪ್ರಸ್ತುತವೆನಿಸುತ್ತದೆ.

ಪ್ರಪಂಚದ ಪ್ರಥಮತಃ ವೃತ್ತಿ ಆರಂಭಗೊಂಡಿದ್ದು ಪಶುಪಾಲನೆಯಾಗಿ. ಅದೂ ಮಾನವನ ಸಂಸ್ಕೃತಿಯ ಉತ್ತರಾರ್ಧದಲ್ಲಿ. ಮಾನವ ವಿಕಾಸ ಕ್ರಮದಲ್ಲಿ ಸಾಮಾನ್ಯವಾಗಿ ನಾಲ್ಕು ಅವಸ್ಥೆಗಳನ್ನು ಗುರುತಿಸಲಾಗುತ್ತದೆ.

೧. ಆಹಾರದ ಸಲುವಾಗಿ ಅಲೆದಾಡುವ ಬೇಡರದು.

೨. ಪಶುಗಳನ್ನು ಸಾಕುವ ಸಲುವಾಗಿ ಅಲೆದಾಡುವ ಧನಗರರದು.

೩. ವೃಕ್ಷ ವನಸ್ಪತಿಗಳಿಂದ ತಿಳುವಳಿಕೆ ಮೂಡಿ ಅವುಗಳನ್ನು ಬೆಳೆಸುವ ಒಕ್ಕಲಿಗರದು.

೪. ಒಕ್ಕಲುತನದ ಮೇಲಿನ ವ್ಯಾಪಾರ, ಉದ್ಯೋಗ ಮತ್ತು ರಾಜಕಾರಣದ ಕೆಲಸಗಾರರದು.

ಈ ಮೇಲಿನ ನಾಲ್ಕು ಅವಸ್ಥೆಗಳಲ್ಲಿ ಎರಡನೇ ಅವಸ್ಥೆ ಸೂಚನೆ 'ಪಟ್ಟಿ-ಹಟ್ಟಿ' ಶಬ್ದಗಳಲ್ಲಿದೆ. ಒಂದು ವಸತಿ ಸ್ಥಾನವು ಹೇಗೆ ಆರಂಭವಾಯಿತೆಂಬುದನ್ನು ಪಟ್ಟಿ-ಹಟ್ಟಿ ಶಬ್ದಗಳ ಮುಖೇನ ತಿಳಿಯಬಹುದಾಗಿದೆ. ಇವುಗಳಲ್ಲಿ ಅರ್ಥ ಸಾದೃಶ್ಯದಂತೆ ರೂಪಸಾದೃಶ್ಯವೂ ಇದೆ. "ಮಾನವನು ಪ್ರಾಥಮಿಕ ಸ್ಥಿತಿಯನ್ನು ಆಹಾರ ಸಂಚಯಕ್ಕಾಗಿ ಅಲೆಮಾರಿಯಾಗಿದ್ದು ಅವನ ವಸತಿ ಸೂಚಕವಾಗಿದ್ದ ಹೆಸರೇ ಹಟ್ಟಿ. ಈ ಶಬ್ದವು ಕೂಡ ಬೇಟೆ, ಪಶುಪಾಲಕ ವೃತ್ತಿಯನ್ನು ಪ್ರತಿಬಿಂಬಿಸುತ್ತದೆ ಎಂಬ ಬಗ್ಗೆ ಸಂಶಯವಿಲ್ಲ. ಹಟ್ಟಿಗಳೇ ಜೀವಸಂಕಲನದ ಆರಂಭಕಾಲದ ವಸತಿಗಳಾಗಿವೆ"[೧] ಎನ್ನುತ್ತಾರೆ ಶಂ.ಬಾ.ಜೋಶಿಯವರು. ಆದ್ದರಿಂದ ಮನುಕುಲದ ಇತಿಹಾಸವು ಮತ್ತು ವಿಕಾಸ ಆರಂಭವಾದುದು ಹಟ್ಟಿಗಳಲ್ಲಿ ಎಂದು ವಿದ್ವಾಂಸರ ಅಧ್ಯಯನ ಶೋಧಗಳಿಂದ ದೃಢಪಟ್ಟಿದೆ.

ಆದಿಮಾನವನು ಆಹಾರ ಹುಡುಕಾಟಕ್ಕಾಗಿ ಅಲೆಮಾರಿ ಜೀವನ ಮಾದರಿಯನ್ನು ಆಯ್ಕೆಮಾಡಿಕೊಂಡನು. ಮೂಲತಃ ಬೇಟೆ ಕಾಯಕದಲ್ಲೂ, ಕಾಲಾಂತರದಲ್ಲಿ ಪಶುಪಾಲನೆಗೂ, ಮುಂದುವರಿದು ಕೃಷಿಯತ್ತ ವಾಲಿದರು. ಪ್ರತಿಯೊಂದು ಕಾಲಘಟ್ಟದಲ್ಲಿ ಎದುರಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತ ಸಾಗುವಾಗ ಬೇಟೆ, ಪಶುಪಾಲನೆ ಕೃಷಿಗಳನ್ನು ಮೂಲ ಕುಸುಬುಗಳನ್ನಾಗಿ ಮಾಡಿಕೊಂಡದ್ದು ಸಂಸ್ಕೃತೀಕರಣದ ಮಜಲುಗಳಾಗಿವೆ.

ಸಂಸ್ಕೃತಿಯೊಂದರ ನಿರ್ಮಾಣಕ್ಕೆ ಕಾರಣಕರ್ತರಾದವರು ಶ್ರಮಸಂಸ್ಕೃತಿಯ ಪ್ರತೀಕವೆನಿಸುವ ಕುರುಬ ಸಮುದಾಯ. ಸಂಸ್ಕೃತಿಗೆ ಪೂರಕವೆನಿಸುವ ವೃತ್ತಿಯನ್ನು ಅವಲಂಬಿಸಿದರು. ಹಲವು ಸಂಸ್ಕೃತಿಗಳ ಎರಕಹೊಯ್ದ ಇವರದು ಯಾವುದೇ ಸಂಸ್ಕೃತಿಯೊಂದರ ಪಡಿಯಚ್ಚಾಗಿರಲಿಲ್ಲ. ಸಮುದಾಯವೊಂದರ ಅಧ್ಯಯನಕ್ಕೆ ವೃತ್ತಿ, ಸಂಸ್ಕೃತಿ, ಪ್ರಾದೇಶಿಕತೆ ಇವುಗಳ ವಿಚಾರವಾಗಿ ಚರ್ಚಿಸಿದಾಗ ಮಾತ್ರ ಕುರುಬರ ಒಳಪಂಗಡಗಳಿಗೆ ಸಮಗ್ರತೆಯು ಪ್ರಾಪ್ತವಾದೀತು.

ಯಾವುದೇ ಸಮುದಾಯದ ಸಾಂಸ್ಕೃತಿಕ ಅಧ್ಯಯನದಲ್ಲಿ ಆ ಜನ ವಾಸಿಸುವ ಪ್ರದೇಶ, ನಾಗರಿಕತೆ, ಅವರ ಪರಂಪರೆ, ಸಾಂಪ್ರದಾಯಿಕ ಇತಿಹಾಸ, ಅದರ ಆಂತರಿಕ ಸಮಾಜದ ರಚನೆ, ಕಲೆ, ಕಸುಬು,

ಸಾಮಾಜಿಕ ಸ್ಥಾನಮಾನಗಳು, ಕೌಟುಂಬಿಕ ವ್ಯವಸ್ಥೆ, ಜನನ-ಮರಣ, ಮದುವೆಗಳು, ಸಂಸ್ಕಾರ ಪದ್ಧತಿ, ರೀತಿರಿವಾಜು, ವೇಷಭೂಷಣ, ಆಹಾರ ಪಾನೀಯ ಪದ್ಧತಿಗಳು, ಹವ್ಯಾಸಗಳು ಇತ್ಯಾದಿಗಳನ್ನು ಗಮನಿಸಿದಾಗ ಸಮುದಾಯದ ಸಾಂಸ್ಕೃತಿಕ ಅಧ್ಯಯನದ ಅವಶ್ಯಕತೆ ಕಂಡು ಬಂದಿತು.

ಸಮಗ್ರ ಮಾನವ ಸಂಸ್ಕೃತಿಯನ್ನು ಅರಿಯುವ ಹಿನ್ನೆಲೆಯಲ್ಲಿ ಸಮುದಾಯಗಳನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಸಮಾನ ಗುಣಸ್ವಭಾವಗಳುಳ್ಳ ಹಲವು ಸಮುದಾಯಗಳು ಕೂಡಿ ಬದುಕು ನಡೆಸುವ ನಮ್ಮ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ತಮಗೇ ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವುದು ವಿಶೇಷ.

"ಕಾವೇರಿಯಿಂದ ಗಂಗಾನದಿಯವರೆಗೆ ನೀಲಗಿರಿಯಿಂದ ರಾಜಮಹಲದವರೆಗೆ ವ್ಯಾಪಿಸಿರುವ ಈ ಕುರುಬರು ದ್ರಾವಿಡರು. ಇವರು ಆರ್ಯಪೂರ್ವ ಜನಾಂಗವೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಈ ದ್ರಾವಿಡ ಕೂಡ ಭಾರತಕ್ಕೆ ಬೇರೆ ಕಡೆಯಿಂದ ಬಂದವರು ಎಂಬ ಅಭಿಪ್ರಾಯವೂ ಇದೆ. ಏನಿಲ್ಲೆಂದರೂ ಆರೇಳು ಸಾವಿರ ವರ್ಷಗಳ ಸುದೀರ್ಘ ಪರಂಪರೆ ಹೊಂದಿದ ಈ ಜನಾಂಗ ಭಾರತದ ಹತ್ತಾರು ಕಡೆಗಳಲ್ಲಿ ಹಂಚಿ ಹೋಗಿದೆ"[೨] ಎಂಬುದಕ್ಕೆ ಹಲವಾರು ನಿದರ್ಶನಗಳು ನಮಗೆ ದೊರೆಯುತ್ತವೆ.

ಪಶುಪಾಲಕರಾದ ಕುರುಬರು ಮೂಲತಃ ದ್ರಾವಿಡರು ಮಾತ್ರವಲ್ಲದೆ ಶಿವನ ಆರಾಧಕರು. ಜಗತ್ತಿನ ಹಲವೆಡೆ ಹಲವು ಹೆಸರುಗಳಿಂದ ಕರೆಸಿಕೊಳ್ಳುವ ಈ ಸಮುದಾಯ ಆಧುನಿಕ ಕಾಲದವರೆಗೆ ತನ್ನ ಹಾದಿಯನ್ನು ವಿಸ್ತರಿಸಿಕೊಂಡಿದೆ. ಯಾವುದೇ ಒಂದು ಸಮುದಾಯದ ಹೆಸರಿನ ಹಿನ್ನಲೆಯನ್ನು ಅರಿತು ಆ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆವರಣದೊಳಕ್ಕೆ ಪ್ರವೇಶಿಸುವುದು ಸೂಕ್ತ. ಪ್ರತಿ ಸಮುದಾಯದ ಹೆಸರಲ್ಲಿಯೇ ಅದರ ಜೀವನ ಪರಿಕ್ರಮ ಹುದುಗಿರುತ್ತದೆ. ಅಂತಹ ಹೆಸರಿನೊಂದಿಗೆ ತನ್ನದೇ ಆದ ಅನನ್ಯತೆಯ ಸಂಬಂಧವನ್ನು ಸ್ಥಾಪಿಸಿಕೊಂಡಿರುತ್ತದೆ. ಕರ್ನಾಟಕದಲ್ಲಿ ಕುರುಬರು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಒಳಪಂಗಡಗಳಾಗಿ ವಿಭಜಿಸಲ್ಪಟ್ಟಿದ್ದಾರೆ.

ಅ. ಕುರುಬರು-ಒಳಪಂಗಡಗಳು

೧. ಅರ್ಥ ೨. ಉಗಮ

ಭವ್ಯ ಪರಂಪರೆ ಹೊಂದಿರುವ ಕುರುಬ ಸಮುದಾಯ ಭಾರತದಾದ್ಯಂತ ಕಾಣಬಹುದಾದರೂ ಕರ್ನಾಟಕದಲ್ಲಿ ಅಧಿಕವಾಗಿದ್ದಾರೆ. ಕುರುಬರಲ್ಲಿ ಹೆಚ್ಚಿನವರು ಪರಂಪರಾನುಗತ ವೃತ್ತಿಗಳಾದ ಕುರಿಸಾಕಾಣಿಕೆ, ಕಂಬಳಿ ನೇಯ್ಗೆಗಳನ್ನು ಉಪಜೀವನದ ವೃತ್ತಿಗಳನ್ನಾಗಿಸಿಕೊಂಡಿದ್ದಾರೆ. ಕುರಿಗಾಹಿಗಳಾಗಿ, ಅರಸರಾಗಿ, ನಾಡು ನುಡಿ ಸಂಸ್ಕೃತಿಗಾಗಿ ಈ ಸಮುದಾಯದ ಕೊಡುಗೆ ಅನನ್ಯವಾದುದು.

ಸಮುದಾಯವೊಂದು ಅನೇಕ ಬದಲಾವಣೆಗಳೊಂದಿಗೆ ಉಂಟಾಗುವ ಅಂತಸ್ತಿನ ಸ್ಪರ್ಧೆಯಿಂದ ಚಲನಶೀಲತೆಗೆ ಅಗತ್ಯವಾದ ಪಂಗಡಗಳಿಂದ ಬದಲಾವಣೆ ಹೊಂದುತ್ತವೆ. ಆ ಮೂಲಕ ಒಳಪಂಗಡಗಳಾಗಿ

ನಿರ್ಮಾಣವಾಗುವುದು ಬೆಳವಣಿಗೆಯ ಹೊಸ ಆಯಾಮ. ಒಳಪಂಗಡವೆಂದರೆ 'ಸ್ವಯಂಪೂರ್ಣತೆಯಿಂದ ಸ್ವತಂತ್ರವಾಗಿ ಯಾವುದೇ ಆಧುನಿಕ ಪ್ರಭಾವಗಳಿಗೆ ಒಳಗಾಗದ ಒಂದು ಗುಂಪು' ಎಂದು ಹೇಳಬಹುದು. ಅಲ್ಲದೆ ಒಂದು ಸಮುದಾಯದಲ್ಲಿ ಇರುವ ಒಳಬಾಂಧವ್ಯ ಸಮೂಹಗಳಿಗೆ ಒಳಪಂಗಡಗಳೆಂದು ಕರೆಯಲಾಗುವುದು. ಒಂದೇ ಒಳಪಂಗಡವನ್ನು ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಹೆಸರುಗಳಿಂದ ಗುರುತಿಸಿದಂತೆ ಕಂಡುಬರುತ್ತದೆ.

"ಕುರುಬರನ್ನು ಸ್ಪೃಶ್ಯ ಹೊರಜಾತಿ (ಹೊರಸುತ್ತು) ಲಿಂಗಾಯತರು, ಶಾಖಾಹಾರದಿಂದ ವಿಮುಖರಾದವರು, ಒಪ್ಪಿಕೊಂಡವರು, ಅಪ್ಪಿಕೊಂಡವರು"[೩] ಎಂದು ಎಂ.ಎಂ.ಕಲಬುರ್ಗಿ ಅವರು 'ಲಿಂಗಾಯತ-ಉಪಪಂಗಡಗಳ ದಾಖಲೀಕರಣ'ದ ಸಂಪಾದಕೀಯದಲ್ಲಿ ಅಭಿಪ್ರಾಯಪಡುತ್ತಾರೆ.

ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ವಾಸಿಸುವ ಅನೇಕ ಒಳಪಂಗಡಗಳು ಕುರುಬ ಸಮುದಾಯದಲ್ಲಿ ಕಂಡುಬರುತ್ತದೆ. ಒಟ್ಟಿಗೆ ಇದ್ದು ಬೆಳೆದು ಬಂದ ಸಮುದಾಯಗಳಲ್ಲಿ ತಮ್ಮದೇ ಸಾಮಾಜಿಕ ಕಟ್ಟುಪಾಡುಗಳಿದ್ದವು. ಇದು ಶ್ರೇಣೀಕೃತ ಸಮಾಜದ ಪ್ರಭಾವಕ್ಕೊಳಗಾಗಿ ತಂತಮ್ಮ ಸಮುದಾಯಗಳನ್ನು ಉನ್ನತೀಕರಣದತ್ತ ಕೊಂಡೊಯ್ಯುವ ಸ್ಪರ್ಧೆಗೆ ಇಳಿದಾಗ ಕುರುಬರಲ್ಲಿಯೂ ಒಳಪಂಗಡಗಳ ಉಗಮಕ್ಕೆ ಕಾರಣವಾಗಿರಬಹುದು. ಒಳಪಂಗಡಗಳು ಕೊಂಡಿ ಕಳಚಿಕೊಳ್ಳುತ್ತಲೇ ಹೊರ ನಡೆಯುವಾಗ ಕುಟುಂಬಗಳ ವಲಸೆ, ಹೊಸ ತಲೆಮಾರುಗಳ ಧಾರ್ಮಿಕ ಉಪೇಕ್ಷೆ, ಕುರುಬ ಸಮುದಾಯ ದುರ್ಬಲವಾಗಲು, ಕಡಿದು ಹೋಗಲು ಕಾರಣವಾಗಿ ಒಳಪಂಗಡಗಳಾಗಿ ರೂಪುಗೊಂಡವು.

ಮಾನವನು ದೈಹಿಕ ಮತ್ತು ಬೌದ್ಧಿಕ ವಿಕಾಸವಾಗುತ್ತ ಸಾಗಿದಂತೆಲ್ಲ ತನ್ನ ಮನೋಭಾವಕ್ಕೆ ಅನುಗುಣವಾಗಿ ಬದುಕನ್ನು ರೂಪಿಸಿಕೊಂಡ. ತನ್ನ ಮನೋಧರ್ಮಕ್ಕೆ ಸರಿಯೆನಿಸಿದ ಧರ್ಮವನ್ನು ಸ್ವೀಕರಿಸಿ ಒಂದು ಸಮುದಾಯವನ್ನೂ ನಿರ್ಮಿಸಿಕೊಂಡ. ಒಂದೇ ಸಮುದಾಯದವರ ಆಚಾರ-ವಿಚಾರಗಳು ಭಿನ್ನವಾಗುತ್ತಾ ಹೋದಂತೆ ಅದರಲ್ಲಿಯೇ ಪಂಗಡ ಒಳಪಂಗಡಗಳು ಹುಟ್ಟಿಕೊಂಡವು. ಇದರಲ್ಲಿ ಹೀಗೆ ಒಳಪಂಗಡಗಳು ಹುಟ್ಟಿಕೊಳ್ಳಲು ಭೌಗೋಳಿಕ ಹಾಗೂ ಸಾಮಾಜಿಕ ವ್ಯತ್ಯಯಗಳೂ ಕಾರಣವಿರಬಹುದು.

ನಿಸರ್ಗದ ವೈಪರೀತ್ಯಗಳು, ಜೀವನಾನುಕೂಲತೆಗಳು, ಅಲೆಮಾರಿತನ, ಸಾಹಸ ಪ್ರವೃತ್ತಿಗಳು, ಯುದ್ಧ, ವ್ಯಾಪಾರ ಮತ್ತು ಮಹತ್ವಾಕಾಂಕ್ಷೆಗಳಿಂದಾಗಿ ಸಮುದಾಯವೊಂದು ಮೂಲಸ್ವರೂಪವನ್ನು ಕಳೆದುಕೊಳ್ಳಲು ಅವಕಾಶವಾಗಿರಬಹುದು. ಸಂಪರ್ಕ ಸಾಧನಗಳ ಸೌಲಭ್ಯಗಳು ಇರದಿದ್ದ ಕಾಲದಲ್ಲಿ ಮೂಲತಃ ಒಂದೇ ಆಗಿದ್ದ ಈ ಜನರ ನಡುವೆ ಸಂಪರ್ಕ ಸಾಧಿಸಲು ಸಾಧ್ಯವಾಗದೆ ಇದ್ದಾಗ ತಾವು ಎಲ್ಲೆಲ್ಲಿ ನೆಲೆಸಿದ್ದರೋ ಆಯಾ ಪ್ರದೇಶಕ್ಕನುಗುಣವಾದ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ರೂಪಿಸಿಕೊಂಡದ್ದು ಅಪೂರ್ವವೆನಿಸುತ್ತದೆ.

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಜನಸಮುದಾಯ ಅಧ್ಯಯನದ ಅನಾವರಣಕ್ಕೆ ಪೂರಕವೆನಿಸಿವೆ ಕುರುಬರ ಒಳಪಂಗಡಗಳು. ಕುರುಬರಲ್ಲಿ ಶೈವ ಪರಂಪರೆ ಮತ್ತು ವೈಷ್ಣವ ಪರಂಪರೆ ಎಂದು ಎರಡು ಪ್ರಮುಖ ವಿಧಗಳು. ಅವುಗಳಲ್ಲಿ ಮತ್ತೆ ಒಳಪಂಗಡಗಳನ್ನು ಗುರುತಿಸಲಾಗಿದೆ.

೧. ಶೈವ ಸಂಪ್ರದಾಯದ ಒಳಪಂಗಡಗಳು

ಕುರುಬ ಸಮುದಾಯವು ಮೂಲತಃ ಶಿವನ ಆರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವುದರಿಂದ ಅತ್ಯಂತ ಪ್ರಾಚೀನವಾದ ಶೈವ ಪರಂಪರೆಯನ್ನು ಹೊಂದಿದೆ. ವಿಷ್ಣುವಿನ ಆರಾಧಕರಿಗಿಂತಲೂ ಶಿವನ ಉಪಾಸಕರು ಹೆಚ್ಚಿಗೆ ಇದ್ದಾರೆ. ಶಿವನ ಭಕ್ತರು ವಿಭೂತಿಯನ್ನು ಧರಿಸುತ್ತಾರೆ. ಈ ಶೈವ ಮೂಲ ಸಂಪ್ರದಾಯದಲ್ಲಿ ಶೈವ ಸಂಪ್ರದಾಯ, ವೀರಶೈವ ಸಂಪ್ರದಾಯ ಎಂದು ಎರಡು ವಿಧಗಳಿವೆ. ಶೈವ ಸಂಪ್ರದಾಯದ ರೇವಣಸಿದ್ಧ ಪರಂಪರೆಯಲ್ಲಿ ಉಣ್ಣೆಕಂಕಣ ಮತ್ತು ಹತ್ತಿಕಂಕಣವೆಂದು ಮತ್ತೆ ವಿಂಗಡಿಸಬಹುದು. ವೀರಶೈವ ಸಂಪ್ರದಾಯದಲ್ಲಿ ಹಂಡೆ ಮತ್ತು ಲಿಂಗಾಯತ(ಒಡೆಯರು) ಕುರುಬ ಪರಂಪರೆಗಳಾಗಿ ವಿಭಜನೆಗೊಂಡಿದೆ. ಇದಲ್ಲದೆ ಮುಂದೆ ಸಾದ ಕುರುಬ, ಕುಡುವೊಕ್ಕಲಿಗರು, ನೊಣಬ ಕುರುಬ ಒಳಪಂಗಡಗಳು ವೀರಶೈವ ಪ್ರಭಾವಕ್ಕೆ ಒಳಗಾದವು. ಇದನ್ನು ಮತ ಪರಿವರ್ತನೆಯ ಕಾಲವೆಂದು ಹೇಳುವುದಾದರೆ ಬಹುಶಃ ೧೨ನೇ ಶತಮಾನ ಅಥವಾ ವಿಜಯನಗರೋತ್ತರ ಕಾಲದ ಹಂತವಾಗಿರಬಹುದು.

೨. ವೈಷ್ಣವ ಸಂಪ್ರದಾಯದ ಒಳಪಂಗಡಗಳು

ಕುರುಬರಲ್ಲಿ ವಿಷ್ಣುವಿನ ಆರಾಧಕರು ಇದ್ದು ಇವರು ಬಹುಶಃ ಶೈವ ಸಂಪ್ರದಾಯದ ಕುರುಬರಿಂದ ಯಾವುದೋ ಕಾಲಘಟ್ಟದಲ್ಲಿ ವಿಷ್ಣುವಿನ ಅಥವಾ ವೈಷ್ಣವ ಸಂಪ್ರದಾಯದ ಆರಾಧಕರಾಗಿದ್ದಾರೆ. ಹೀಗಾಗಿ ಶೈವ ಸಂಪ್ರದಾಯ ಪಂಗಡದ ಮುಂದುವರೆದ ಇನ್ನೊಂದು ಕವಲು ಈ ವೈಷ್ಣವ ಪಂಗಡದ ಕುರುಬರು. ಈ ಸಂಪ್ರದಾಯದಲ್ಲಿ ಮತ್ತೆರಡು ಕವಲುಗಳಿದ್ದು ಕನಕಯ್ಯನ ಜಾತಿ ಕುರುಬರು ಮತ್ತು ದಾಸನ ಕುರುಬರು.

ಕನಕಯ್ಯನ ಜಾತಿ ಒಳಪಂಗಡವು ಕನಕದಾಸರಿಂದ ಬೆಳೆದು ಬಂದ ಪರಂಪರೆ. ಉಡುಪಿಯ ಶ್ರೀ ಕೃಷ್ಣನ ಆರಾಧನೆಯ ವಿಧಿವಿಧಾನಗಳನ್ನು ಹೊಂದಿದವರು. ಮತ್ತೊಂದು ದಕ್ಷಿಣ ಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ತಿರುಪತಿ ತಿಮ್ಮಪ್ಪನ ಪರಂಪರೆಯಾಗಿದೆ. ಇವರು ಹಣೆಗೆ ನಾಮ ಹಚ್ಚಿಕೊಳ್ಳುವರು. ಕೊರಳಿಗೆ ತುಳಸಿ ಮಣಿ ಮಾಲೆಯನ್ನು ಧರಿಸುವರು. ಭಿಕ್ಷಾ ವೃತ್ತಿಯಲ್ಲೂ ಕಾಯಕ ನಿರತರು. ಗೋವಿಂದ ಎಂಬ ನಾಮ ಪಠಣ ಸಾಮಾನ್ಯವಾಗಿದೆ. ಕೆಲವರು ವಿಷ್ಣುವಿನ ಜಪವನ್ನು ಮಾಡುವರು. ಈ ದಾಸಯ್ಯಗಳ ಮೂಲಕ ವಿಷ್ಣು ಭಕ್ತರ ಮನೆಯ ಶುಭಕಾರ್ಯಗಳು ಜರುಗುತ್ತವೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವರು. ಹೆಸರು ಬೇರೆಯಾದರೂ ಒಂದೇ ಮೂಲ ಪರಂಪರೆಯಲ್ಲಿ ಗುರುತಿಸಬಹುದು.

ಕುರುಬ ಸಮುದಾಯವು ಆಧುನಿಕತೆಯವರೆಗೆ ದಾರಿಯನ್ನು ವಿಸ್ತರಿಸಿಕೊಳ್ಳುವಾಗ ಕಾಣಿಸುವ ಏರಿಳಿತಗಳನ್ನು,ಒಳಪಂಗಡಗಳ ಸಂಬಂಧವನ್ನು ಆಧಾರ ಸಹಿತ ನಿರೂಪಿಸುತ್ತಲೇ ಚದುರಿ ಹೋಗಿರಬಹುದಾದ ಒಳಸೆಲೆಗಳನ್ನು ಪರಿಣಾಮಕಾರಿಯಾಗಿ ಮತ್ತು ರಚನಾತ್ಮಕವಾಗಿ ಕಟ್ಟಿಕೊಡುವುದು ಅತಿಮುಖ್ಯವಾದುದು. ಕುರುಬರ ಒಳಪಂಗಡಗಳ ಪ್ರಾಚೀನತೆ, ಸಾಂಸ್ಕೃತಿಕ ವೈವಿಧ್ಯ, ಸಂಕೀರ್ಣವೆನಿಸುವ ಪೌರಾಣಿಕ ಸಂಗತಿಗಳಿಗೆ ಚಿಕಿತ್ಸಕ ದೃಷ್ಟಿಯ ವಿಶ್ಲೇಷಣೆ, ಸಾಮಾಜಿಕ ಸ್ತರವಿನ್ಯಾಸದಲ್ಲಿ ಒಳಪಂಗಡಗಳ ಪಾತ್ರ ಮುಂತಾದ ಬಹುಮುಖಿ ದೃಷ್ಟಿಕೋನಗಳ ಅಧ್ಯಯನ ಅಗತ್ಯವಾಗಿದೆ. ಸಾಹಿತ್ಯದಲ್ಲಿ ಚಾರಿತ್ರಿಕ ಶೋಧದಂತೆ ಇತಿಹಾಸದೊಳಗೆ ಹುದುಗಿರುವ ಸಂಸ್ಕೃತಿಯನ್ನು ಅನುಸಂಧಾನ ಮಾಡುವುದು ಅನಿವಾರ್ಯವೆನಿಸುತ್ತದೆ.

೩. ಕುರುಬ ಪದ ನಿಷ್ಪತ್ತಿ ಮತ್ತು ಮೂಲ

'ಕುರುಬ' ಎಂಬುದು ಕುರಿ ಕಾಯುವ ಸಾಂಪ್ರದಾಯಿಕ ವೃತ್ತಿ ಅನುಸರಿಸುವ ಜನಸಮುದಾಯದ ಹೆಸರು. ಕುಱುಂಬ, ಕುಱಬ, ಕುಱುಬ, ಕುರುಂಬ, ಕುರಂಬ ಎಂಬ ಪರ್ಯಾಯ ಪದಗಳೂ ಇವೆ. ಇವುಗಳ ಅರ್ಥ ಕುರಿ ಸಾಕುವವನು. ಕುರಿಗಾಹಿ, ದಡ್ಡ, ಮೂಢ, ಹಳಬ, ಕೋಟೆಯ ರಕ್ಷಕ, ಕಾವಲುಗಾರ, ಉಗ್ರಾಣದ ಅಧಿಕಾರಿ, ಒಂದು ಬಗೆಯ ಪರ್ವತವಾಸಿ ಜನರೆಂದೂ ಹೇಳಲಾಗುತ್ತದೆ.

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಹಾಲುಮತ ಜನಾಂಗವೂ ಒಂದು, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸುದೀರ್ಘ ಪರಂಪರೆಯನ್ನು ಹೊಂದಿದ ಈ ಸಮುದಾಯಕ್ಕೆ 'ಕುರುಬ'ರೆಂದು ಹೆಸರು. ಪಶುಪಾಲಕರಾದ ಮ್ಯಾಸನಾಯಕರು, ಗೊಲ್ಲರು, ದನಗಾರರು, ಕುರುಬರು ಹಾಗೂ ಗೊಂಡ ಬುಡಕಟ್ಟಿನವರು ಸಹಸ್ರಾರು ವರ್ಷಗಳಿಂದ ತಮ್ಮ ಪಶುಗಳೊಂದಿಗೆ ಅಲೆಯುತ್ತಾ ಪ್ರಕೃತಿಜ್ಞಾನ ಆರ್ಜಿಸಿಕೊಂಡರು. ಈ ಅಲೆಮಾರಿ ಪಶುಪಾಲಕ ಬುಡಕಟ್ಟುಗಳು ಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ಹಾಗೂ ವಿಭಿನ್ನ ಪಶುಗಳು ಪಾಲಕರಾದುದರಿಂದ ದನಗಳನ್ನು ಸಲಹುವವನಿಗೆ ದನಗಾರ ಅಥವಾ ಗೊಲ್ಲರೆಂದೂ, ಅಜ-ಮೇಷಗಳನ್ನು ಸಲಹುವವರಿಗೆ ಮ್ಯಾಸನಾಯಕ ಅಥವಾ ಕುರುಬರೆಂದು ಕರೆಯಲಾರಂಭಿಸಿದರು. ಬಹುದಿನಗಳವರೆಗೆ ಒಂದೇ ಬುಡಕಟ್ಟಿನಲ್ಲಿ ಮೇಷಪಾಲನೆ ಉಳಿದು ಕಾಲಾಂತರದಲ್ಲಿ ಮೇಷದ ಮೂಲ ಕಲ್ಪನೆ ಮರೆತು ಮೇಷಪಾಲಕರಿಗೆ ಮೇಷಪಾಲಕರೆಂಬುದರ ಬದಲಾಗಿ ಕುರಿಪಾಲಕ, 'ಕುರುಬ'ರೆಂದು ಕರೆಯತೊಡಗಿದಂತೆ ಕಾಣುತ್ತದೆ.

ಕುರುಬ ಎನ್ನುವ ಶಬ್ದಕ್ಕೆ ಹಲವಾರು ವಿದ್ವಾಂಸರು ವಿಭಿನ್ನ ಅರ್ಥಗಳನ್ನು ಸೂಚಿಸಿದ್ದಾರೆ. ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ 'ಕೋ' ಎಂದರೆ 'ಪರ್ವತ'ವೆಂದು ಅರ್ಥವಿದೆ. 'ಕುರು' ಎಂಬುದಕ್ಕೆ 'ಎತ್ತರವಾದುದು' ಎನ್ನುವ ಅರ್ಥ ಪ್ರಾಪ್ತಿಯಾಗಿದೆ. ಪರ್ವತ ಇಲ್ಲವೆ ಬೆಟ್ಟ, ಅರಣ್ಯ ಪ್ರದೇಶಗಳಲ್ಲಿ ವಾಸಿಸುವವನು ಕುರುಬ ಅಥವಾ ಕುರುಂಬ ಎಂದು ಸೂಚಿಸುತ್ತದೆ. ಬೆಟ್ಟ, ಗುಡ್ಡಗಳಲ್ಲಿನ ಹುಲ್ಲಿನ ಪ್ರದೇಶವನ್ನು ಅರಸಿಕೊಂಡು ಹೋಗಿ ಈ ಸಮುದಾಯ ಜೀವನ ನಡೆಸಿರುವುದರಿಂದ ಈ ಅರ್ಥ ಅಸಂಭವನೀಯವೇನಲ್ಲ. ಪ್ರಾಚೀನ ತಮಿಳು ಕಾವ್ಯಗಳಲ್ಲಿ 'ಮಲೆಯರು' ಎಂದು ವರ್ಣಿಸಲಾಗಿದೆ.

ಸಂಸ್ಕೃತ ಸಾಹಿತ್ಯದಲ್ಲಿ; 'ಕುರುದೇಶ' ಎನ್ನುವ ಪದ ಲಭ್ಯವಿದೆ. ಇದು ಮಹಾಭಾರತದಲ್ಲಿ ಸುಪ್ರಸಿದ್ಧ ಕುರುವಂಶದಿಂದ ಆಳಲ್ಪಟ್ಟಿದೆಯೆಂದು ಹೇಳಲಾಗುತ್ತದೆ. ಕುರುವಂಶಕ್ಕೆ ಸೇರಿದ ಕೌರವರು ಕಾಲಾಂತರದಲ್ಲಿ ಕುರುವ; ಕುರುಬ ಎಂಬುದಾಗಿ ಮಾರ್ಪಟ್ಟಿರುವ ಸಾಧ್ಯತೆಯಿದೆ.

ಕುರುದೇಶದ ಕೆಲಭಾಗಗಳಲ್ಲಿ 'ಕುರು' ಎನ್ನುವುದು 'ಪ' ಎನ್ನುವ ಪದದೊಂದಿಗೆ ಸೇರಿಕೊಂಡು ಅದು ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಒಡೆಯ, ಅರಸ, ಕುರಿಯ, ಯಜಮಾನ, ಗೋಪಾಲ ಎನ್ನುವ ಅರ್ಥವನ್ನು ಸೂಚಿಸುತ್ತದೆ. ಅದು ಕಾಲಾಂತರದಲ್ಲಿ 'ಕುರುಪ' ಎಂಬ ಪದದ ಬಳಕೆ ಬರಲು ಕಾರಣವಾಯಿತು. ಕುರುಪ ಎಂದರೆ ಬೆಟ್ಟದಲ್ಲಿ ವಾಸಿಸುವವನು. ಹೀಗೆ ಕುರುಪದಿಂದ 'ಕುರುಬ' ಎನ್ನುವ ಪದವು ನಿಷ್ಪತ್ತಿಗೊಂಡಿರಬೇಕು.

ಹದಿನಾರನೇ ಶತಮಾನದಲ್ಲಿದ್ದ ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದಲ್ಲಿ ಕೌರುಬ ಋಷಿಯ ತಪಸ್ಸಿನ ಫಲವಾಗಿ ಕುರುಬ ಜನಾಂಗ ಸೃಷ್ಟಿಯಾಯಿತೆಂದು ಹೇಳಿದ್ದಾನೆ. ಈ ಹೇಳಿಕೆಗೆ 'ಆಗ್ನೇಯ ಪುರಾಣ'ದ ಕೆಳಗಿನ ಸಾಲುಗಳು ಆಧಾರವಾಗಿದೆ.

> "ಕುರುರೇ ಮೃಗ ವಸ್ತ್ರಾಣಿ ಕೃತ್ಸವೈ
> ಕೌರುಭ ಋಷಿ
> ತನ್ ಮಾ ಸಾರ್ಥಕಂ ಚಕ್ರದೇವಾನಾಂ
> ಹಿತಕಾವ್ಯ"[೪]

ಕರ್ನಾಟಕದಲ್ಲಿ ಕುರುಬರು ಹಾಲುಮತದವರು ಎಂದು ಕರೆಸಿಕೊಂಡರೆ, ಮಹಾರಾಷ್ಟ್ರ ಭಾಗದವರು ಧನಗಾರರು ಎಂತಲೂ, ಹೈದ್ರಾಬಾದ್ ರಾಜ್ಯದ ಕಡೆಯವರು ಗೊಂಡ, ರಾಜಗೊಂಡರೆಂದೂ, ತಮಿಳುನಾಡು ಭಾಗದಲ್ಲಿ 'ಇಡೈಯರ್, ಕುರುಂಬರ್' ಎಂದೂ ಕರೆಯಲಾಗುತ್ತದೆ. ಮರಾಠಿಯಲ್ಲಿ ಮೈದಪಾಲ್ ಎಂದರೆ ಕುರುಬರು. ಗುಜರಾತ್‌ನಲ್ಲಿ 'ಭಾರೂಡ' ಎಂದರೆ 'ಕುರುಬ' ಎಂದಿದೆ. ಒಟ್ಟಾರೆಯಾಗಿ ಹಾಲುಮತದವರೆಂದು ಕರೆಯುವುದರಲ್ಲಿ ಸಾರ್ಥಕತೆಯಿದೆ.

ಕುರಿ ಕಾಯುವ ವೃತ್ತಿ ಆರಂಭಗೊಂಡಂದಿನಿಂದಲೇ ಕುರುಬರ ಮೂಲ ಲಭ್ಯವಾಗುತ್ತದೆ. ಪ್ರಾಚೀನ ಮಾನವನಿಗೆ ಆಹಾರ ಸಂಗ್ರಹ ಕಷ್ಟ ಸಾಧ್ಯವೆನಿಸಿದಾಗ ಅವನು ಕುರಿ, ಆಡು, ಆಕಳು ಇತ್ಯಾದಿ ಪ್ರಾಣಿಗಳನ್ನು ತನ್ನ ಆಹಾರಕ್ಕಾಗಿ ಸಾಕಲು ಪ್ರಾರಂಭಿಸಿದ. ಈ ಪ್ರಾಣಿಗಳಿಂದ ಮನುಷ್ಯನ ಹೊಟ್ಟೆ ಬಟ್ಟೆಗೆ ದಾರಿಯಾಯಿತು. ಜೊತೆಗೆ ಕುರಿ, ಆಡು, ಆಕಳು, ಕುದುರೆ ಮುಂತಾದ ಪ್ರಾಣಿಗಳ ಸಾಕಾಣಿಕೆ ವಿಭಿನ್ನ ಉದ್ಯೋಗಗಳ ಸೃಷ್ಟಿಗೆ ಕಾರಣವಾಯಿತು. ಧನಗಾರ, ಕುರುಬ ಮುಂತಾದ ವಿಭಿನ್ನ ಸಮುದಾಯಗಳ ಹುಟ್ಟಿಗೂ ಕಾರಣವಾದವು.

ಕೆಲವು ಪಂಡಿತರ ಅಭಿಮತದಂತೆ ದಕ್ಷಿಣ ಭಾರತದ ಮೂಲನಿವಾಸಿಗಳು ಕುರುಬರು. ಇವರು ಅಲೆಮಾರಿ ಹಾಗೂ ನೆಲೆಗೊಂಡ ಬುಡಕಟ್ಟು ಸಮುದಾಯವಾಗಿ ಜೀವಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಕೆಲವರು ಅರಣ್ಯ ಹಾಗೂ ಬೆಟ್ಟ ಪ್ರದೇಶಗಳಲ್ಲಿ ನೆಲಸಿ ಅರಣ್ಯವಾಸಿಗಳಾದರು. ಬಯಲು ಪ್ರದೇಶಕ್ಕೆ ಬಂದವರು ಕಾಲಾಂತರದಲ್ಲಿ ಇತರೇ ಜನರಂತೆ ತಮ್ಮ ಜೀವನಕ್ರಮ ಹಾಗೂ ಉದ್ಯೋಗ ಬದಲಿಸಿಕೊಂಡು ಕೃಷಿಕರಾದರು. ಹಾಗೆಯೇ ಕೆಲವರು ಮೂಲ ವೃತ್ತಿಯೆನಿಸಿದ ಕುರಿಸಾಕಾಣಿಕೆ ಮತ್ತು ಕೃಷಿಯೆರಡನ್ನು ಅನುಸರಿಸಿಕೊಂಡು ಬಂದರು. ಇದರ ಪರಿಣಾಮವಾಗಿ ಹಲವಾರು ಒಳಪಂಗಡಗಳು ಹುಟ್ಟಿಕೊಂಡವು.

ರೆವರೆಂಡ್ ಎಫ್.ಕಿಟೆಲ್ ಅವರು ತಮ್ಮ ಕನ್ನಡ ಇಂಗ್ಲಿಷ್ ನಿಘಂಟುವಿನಲ್ಲಿ 'ಕುರುಬ' ಶಬ್ದವನ್ನು ಕುಟುಂಬ ಶಬ್ದದೊಂದಿಗೆ ಸಮೀಕರಿಸಿ "ಕುರು ಎಂದರೆ ಬೆಟ್ಟ ಪ್ರದೇಶದಲ್ಲಿ ನೈಸರ್ಗಿಕ ಕಲ್ಲು ಪೊಟರೆಗಳಲ್ಲಿ ವಾಸಿಸುತ್ತಲೇ ಗುಹೆಗಳನ್ನು ನಿರ್ಮಿಸಿಕೊಳ್ಳುತ್ತಾ ಮುನ್ನಡೆದ ಕುರು ಪ್ರದೇಶವಾಸಿಯೂ, ಅದರ ಪಾಲಕನೂ ಆಗಿದ್ದರಿಂದ ಅವನು ಕುರು-ಪ>ಕುರುಬನಾದ. ಕುರು ಪ್ರದೇಶವಾಚಿಯೂ, ಮನುಷ್ಯ ಸಹವಾಸಿಯೂ ಆದ ಸಾಕು ಪ್ರಾಣಿಯೊಂದಿಗೆ ಒಡನಾಡುತ್ತಲೇ ಕುರುಬ ಕುಟುಂಬ ವ್ಯವಸ್ಥೆಗೊಳಗಾದ" ಎನ್ನುತ್ತಾರೆ.

ಸಮುದಾಯಗಳ ಸಾಂಸ್ಕೃತಿಕ ಹಿನ್ನೆಲೆಯಲ್ಲಿ 'ಕುರುಬ' ಪದಕ್ಕೆ ಭಿನ್ನ ರೀತಿಯ ಅರ್ಥಗಳನ್ನು ಅನಾವರಣಗೊಳಿಸಲು ಪ್ರಯತ್ನಿಸಿದ್ದಾರೆ. 'ಮೇಷದ ಇನ್ನೊಂದು ಹೆಸರು ಕುರಿ. ಆದರೆ ಕುರಿ ಮೇಷದ ಮೂಲ ಹೆಸರಲ್ಲ. ಹಾಗೆಯೇ ಮೇಷಪಾಲಕರ ಮೂಲ ಹೆಸರು ಕುರುಬ ಅಲ್ಲ. ಮೇಷದಿಂದ ಉತ್ಪನ್ನಗೊಂಡ ಇನ್ನೊಂದು ಹೆಸರೇ ಕುರಿ. ಇದಕ್ಕೆ ಆಧ್ಯಾತ್ಮದ ನೆಲೆಯಿದ್ದು ಮೇಷ ಮ್ಯಾ... (ಮ+ಉ+ಅ) ಎಂದು ಜಪಿಸುವುದು. ಇದು ಮಾನವನ ಮೂಲಮಂತ್ರ, ಇಲ್ಲಿಂದಲೇ ಭಾಷೆಯ ಉಗಮವಾಗಿರುವುದು.

ಮಾನವ ಇದನ್ನು ಅನುಸರಿಸುತ್ತ ಭಾಷೆ ಕಲಿತ ಮೇಷರು ಧ್ವನಿ ಮ್ಯಾ... ದಲ್ಲಿ ಮೂರು ಅಕ್ಷರಗಳಿವೆ. ಅವು ಮ+ಉ+ಅ ಎಂದು. ಮೇಷಪಾಲಕ ಮೇಷಧ್ವನಿಗೆ ಅನುಕರಿಸಲಾಗಿ ಮ+ಉ+ಅ ತಿರುವು ಮುರುವಾಗಿ ಅ+ಉ+ಮ ಎಂದು ಉಚ್ಚರಿಸಲಾರಂಭಿಸಿದ. ಮೇಷದ ಧ್ವನಿ ಮ್ಯಾ . . . > (ಮ+ಉ+ಅ) ಮೇಷ ಪಾಲಕನ ಅನುಕರಣೆಯಲ್ಲಿ (ಅ+ಉ+ಮ)ವಾಗಿ>ಓಂ ಆಗಿರುವುದು, ಓಂ ಮಾನವನ ಬೀಜಮಂತ್ರ, ಆನಂತರ ಮಾನವನು ಓಂಕಾರಕ್ಕೆ ಸಹಸ್ರಾರು ಅರ್ಥಗಳನ್ನು ಕಲ್ಪಿಸಿದ, ಮಾನವ ಆಧ್ಯಾತ್ಮ ಶಿಖರವೇರಲು ಮೇಷ (ಓಂ)ಕ್ಕೆ ಗುರಿಯಾಗಿಟ್ಟುಕೊಂಡನು. ಅವನ ಗುರಿಯೇ (ಮೇಷ)>ಕುರಿಯಾಯಿತೆಂದು ಗೊಂಡರ ಧರ್ಮಗುರು ಶ್ರೀ ಸಿದ್ಧಯ್ಯ ಆಧುನಿಕ ಒಡೆಯರ ವಾದವಾಗಿದೆ.

ಓಂಕಾರ ಜಪಿಸುವ ಮೇಷ ಮಾನವನಿಗೆ ಪ್ರಕೃತಿಯ ರಹಸ್ಯದ ಅರಿವು ಮೂಡಿಸಿತು. ಅದು ಜ್ಞಾನದ ಪ್ರತೀಕವಾಯಿತು. ಅಹಿಂಸೆಯು ಅದರ ಪರಮ ಧರ್ಮವಾಯಿತು. ಹೀಗೆ ಮೇಷದ ಇನ್ನೊಂದು ಹೆಸರು ಆಧ್ಯಾತ್ಮದಲ್ಲಿ ಕುರಿಯಾಗಿ ಅದರ ಪಾಲಕನಿಗೆ ಗು(ಕು)ರುಬ>ಕುರುಬ ಎಂಬೀ ಹೆಸರುಗಳಿಂದ ಕರೆಯಲಾರಂಭಿಸಿದರು. ಕುರುಬ ಎಂದರೆ "ಜ್ಞಾನಿ" ಎಂಬರ್ಥವೂ ಇದೆ.

ಕುರುಬ ಎಂಬುದು ಜಾತಿ ಸೂಚಕ ಅಥವಾ ಕಸುಬು ಸೂಚಕ ಪದವಲ್ಲ. ಅದು ಆಧ್ಯಾತ್ಮವನ್ನು ಪ್ರತಿನಿಧಿಸುವ ಪದ. ಆ ಕಾರಣಕ್ಕಾಗಿಯೇ ಏಸುಕ್ರಿಸ್ತನು ನಾನೇ ಒಳ್ಳೆಯ ಕ್ರೈಸ್ತ ಎಂದುಕೊಳ್ಳದೆ ನಾನೇ ಒಳ್ಳೆಯ ಕುರುಬ, ಒಳ್ಳೆ ಕುರುಬ ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನೇ ಕೊಡುತ್ತಾನೆ ಎಂದುಕೊಂಡಿದ್ದಾರೆ. ಎಲ್ಲಾ ಧರ್ಮಗಳು ಜ್ಞಾನ ಮತ್ತು ಆಧ್ಯಾತ್ಮದ ಪ್ರತೀಕವಾಗಿರುವುದರಿಂದ ಅವೆಲ್ಲವೂ ಕುರುಬನ ಕೊಡುಗೆಯಾಗಿವೆ. ಎಲ್ಲಾ ವೇದಗಳಿಗೂ ಅಜಪ ವೇದವೇ ಮೂಲ. ಇದರರ್ಥ 'ಪ್ರಕೃತಿಯ ಸತ್ಯಜ್ಞಾನ'ವೆಂಬುದಾಗಿದೆ.

೧೨ನೇ ಶತಮಾನದ ವಚನ ಚಳುವಳಿಯಲ್ಲಿ ಅನುಭವ ಮಂಟಪದ ಅಧ್ಯಕ್ಷ ಪದವಿ ಅಲಂಕರಿಸಿದ್ದ ಅಲ್ಲಮ ಪ್ರಭು ತನ್ನ ವಚನವೊಂದರಲ್ಲಿ ಕುರುಬ ಸಮುದಾಯದ ಮೂಲವನ್ನು ಕುರಿತು ಮಾರ್ಮಿಕ ಅಭಿವ್ಯಕ್ತಿ ನೀಡಿದ್ದಾನೆ.

"ಕುರುಬ ಹುಟ್ಟುವ ಮುನ್ನ
ಕುಲವಿಲ್ಲ ಗೋತ್ರವಿಲ್ಲ
ಕುರುಬನ ಫಲಕಾಣೊ ಬಸವಣ್ಣ
ಕುರುಬನ ಪ್ರತಿಫಲಗಳೇ ಕುಲಗೋತ್ರಗಳು"[೬]

ಡಾ. ಕೆ.ಎಂ.ಮೇತ್ರಿ ಅವರು ಮೇಲಿನ ವಚನಕ್ಕೆ ಅರ್ಥ ವಿವರಣೆ ನೀಡುತ್ತಾ "ಕುರುಬ ಎಂಬ ಪದವು ಜ್ಞಾನಿ ಎಂಬ ಅರ್ಥವನ್ನು ಧ್ವನಿಸುತ್ತದೆ. ಕುರುಬನ ಪ್ರತಿಫಲಗಳೇ ಕುಲಗೋತ್ರಗಳು ಎಂಬುದರಲ್ಲಿ ವಿಶೇಷವಾದ ಅರ್ಥವಿದೆ. ಬೆಳಗಾಗುತ್ತಲೇ ಕುರುಬನ ಮುಖ ನೋಡಬೇಕು. ಕುರುಬರಿಂದಲೇ ಬೋಣಿಗೆ ಮಾಡಿಸಬೇಕು ಇದರಿಂದ ಒಳ್ಳೆಯದಾಗುತ್ತದೆಂಬ ನಂಬಿಕೆ ಇಂದಿನದೇನಲ್ಲ, ಹಲವು ವರ್ಷಗಳಿಂದ ಬಳಕೆಯಲ್ಲಿರುವ ಈ ವಚನದ ಆಶಯ ಜ್ಞಾನಿಯಿಂದಲೇ ಒಳಿತಾಗುವುದು ಅಜ್ಞಾನಿಯಿಂದಲ್ಲ"[೭] ಎಂದಿದ್ದಾರೆ.

ಬಿಷಪ್ ಕಾಲ್ಡ್‌ವೆಲ್ ಅವರು 'ಕುರುಬ' ಎಂಬುದು ಕನ್ನಡ ಪದದಿಂದ ಉತ್ಪನ್ನಗೊಂಡಿದೆ. ಅದು ತಮಿಳಿನದ್ದಲ್ಲ ಎಂದು ಅಭಿಪ್ರಾಯಪಡುತ್ತಾರೆ. ಕುರುಬರು ಗುಡ್ಡಗಾಡಿನಲ್ಲಿ ಒಂದೇ ಉದ್ಯೋಗಕ್ಕೆ ನೆಲೆಯಾಗಿ ನಿಂತು ಅದನ್ನು ಮುಂದುವರಿಸಿಕೊಂಡು ಬಂದವರು.

ಕುರುಬ ಜನಾಂಗದ ಮೂಲವೆಂದರೆ ಮಾನವ ಜನಾಂಗದ ಮೂಲವೆಂದೇ ಹೇಳಬೇಕಾಗುತ್ತದೆ. ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರೇ ಕುರುಬರ ಮೂಲಿಗರು. ಮೂಲತಃ ಪಶುಪಾಲಕರಾದ ಇವರು ಎಲ್ಲಾ ಜಲಾನಯನ ಪ್ರದೇಶಗಳಲ್ಲಿ ಕಾಡಾಡಿಗಳು ಆಗಿದ್ದವರು. ಇವರ ಭಿನ್ನ ಭೌಗೋಳಿಕ ಪ್ರದೇಶಗಳಿಂದಾಗಿ ಆಯಾ ಭಾಗದ ಸಂಸ್ಕೃತಿಗೆ ಹೊಂದಿಕೊಂಡು ವಿಭಿನ್ನ ಧರ್ಮಗಳಲ್ಲಿ ಬೇರೆ ಬೇರೆ

ಹೆಸರುಗಳಿಂದ ಗುರ್ತಿಸಲ್ಪಡುತ್ತಾರೆ. ಅವರ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು, ಅವರ ಸಾಮಾಜಿಕ ಸಂರಚನೆಯನ್ನು ಪ್ರತಿಬಿಂಬಿಸುತ್ತವೆ. ಕುರುಬರು ಪ್ರಪಂಚದ ಮೂಲಿಗರು ಎಂದು ಹೇಳಲು ಹಲವು ಸಾರ್ವತ್ರಿಕ ಕುರುಹುಗಳು ಸಾಕ್ಷಿಯಾಗಿವೆ.

೧. ಮೇಷರಾಶಿ ೨. ಭಾನುವಾರ ೩. ಮೇಷಲಗ್ನ ೪. ಅಜಪವೇದ ೫. ಬೆಸಸಂಖ್ಯೆ ೬. ಕಂಬಳಿ ೭. ಅಜಪ ಮಂತ್ರ ಮುಂತಾದವು.

ಕುರುಬ ಸಮುದಾಯದ ಮೂಲವನ್ನು ಮೇಲಿನವು ಮಾತ್ರವಲ್ಲದೆ ಶಾಸನಗಳಲ್ಲೂ ಹುಡುಕಬಹುದಾಗಿದೆ. ಇವುಗಳಲ್ಲಿ ಕುರುಬರಿಗೆ ಸಂಬಂಧಿತವಾದ ಕೆಲವು ವಿಷಯಗಳ ಉಲ್ಲೇಖ ದೊರೆಯುತ್ತದೆ. ಉದಾ: ಕುರುಬಸೇಣಿ, ಕುಜಿದೆಜಿಗೆ, ಕಂಬಳಿ ಮುಂತಾದ ಸಂಗತಿಗಳು ಕುರುಬರ ಸಂಸ್ಕೃತಿಯನ್ನು ಅನಾವರಣ ಗೊಳಿಸುತ್ತವೆ. ಕುರುಬ ಸೇಣಿಯು ಕುರುಬರ ವೃತ್ತಿಗೆ ಸಂಬಂಧಿಸಿದ್ದು, ಕುರಿಯ ಉಣ್ಣೆಯನ್ನು ಕತ್ತರಿಸಿ ಕಂಬಳಿ ತಯಾರಿಸಿ ಮಾರಾಟ ಮಾಡಲು ಕುರುಬ ಸೇಣಿಯು ಸಹಾಯಕ್ಕೆ ಬರುತ್ತಿತ್ತೆಂದು ತೋರುತ್ತದೆ. "ನೂಲಪರ್ವಕ್ಕೆ ವರ್ಷಂಪ್ರತಿ ಕುರುಬ ಸೇಣಿಗರೊಕ್ಕಲೊಕ್ಕಲು ವೀಸವಯ್ದಂ ಕೊಟ್ಟರ್"[೮] ಎಂಬ ೧೧೯೧ರ ಶಾಸನದಲ್ಲಿ ಕುರುಬ ಸೇಣಿಯ ಉಲ್ಲೇಖ ದೊರೆಯುತ್ತದೆ.

ಕುರಿದೆಜಿಗೆಯು ಕುರಿಗಳ ಪಾಲನೆ, ಪೋಷಣೆ ಮಾಡುತ್ತಿದ್ದ ಕುರುಬರಿಗೆ ವಿಧಿಸಲಾದ ತೆರಿಗೆಯಾಗಿದೆ. ಕೆಲವು ಮಾಂಡಲೀಕರೋ, ಊರ ಪ್ರಮುಖರೋ ಈ ತೆರಿಗೆ ಹಣವನ್ನು ದೇವಸ್ಥಾನ ಅಥವಾ ಕುರುಬ ಸಮುದಾಯಕ್ಕೋ ದಾನಬಿಟ್ಟ ಉಲ್ಲೇಖಗಳು ಲಭ್ಯವಾಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ೧. ಕ್ರಿ.ಶ. ೧೫೫೧ರ ಬಾಗಳಿ ಶಾಸನ ೨. ಕ್ರಿ.ಶ. ೧೫೮೦ರ ಕೊಟ್ಟೂರು ಶಾಸನ "ಬಾಗುಳಿಯ ಕುಮಕರ ಬಸವಿಗೌಂಡನ ಮಗ ಲಿಂಗಗೌಂಡ ಕುರುಬಗೌಡಗಳಿಗೆ ಕುಜಿದೆಜಿಗೆ ಇಲ್ಲಾ ಎಂದು ಬಿಟ್ಟುಕೊಟ್ಟ ಶಾಸನ"[೯]ವಾದರೆ, ಕೊಟ್ಟೂರು ಶಾಸನದಲ್ಲಿ "ಕೊಟ್ಟೂರು ಸೀಮೆಯ ಸಮಸ್ತ ಕುರುಬ ಪ್ರಜೆಗಳಿಗೆ ಕೊಟ್ಟ ಧರ್ಮಶಾಸನದ ಪಟ್ಟಿಯ ಕ್ರಮವೆಂತೆಂದರೆ... ಈ ಕುರಿದೆಜಿಗೆಯನ್ನು ಮಾನ್ಯ ಮಾಡಿಬಿಟ್ಟಂಥ ಧರ್ಮವನು ... ನಾವು ನಮ್ಮ ಸ್ವಾನುರುಚಿಯಿಂದಲೂ ಪ್ರವಾಚಾ ಒಡಂಬಟ್ಟು ಕೊಟ್ಟ ಕುರಿದೆಜಿಗೆಯನು ಸರ್ವಮಾನ್ಯವಾಗಿ ಬಿಟ್ಟ ಧರ್ಮಶಾಸನದ ಕಲ್ಲು"[೧೦] ಎಂದಿದೆ.

ಇವುಗಳೂ ಅಲ್ಲದೆ ವ್ಯಕ್ತಿನಾಮಗಳೂ, ಸ್ಥಳನಾಮಗಳೂ ಕುರುಬರ ಮೂಲವನ್ನು ಅರಿಯಲು ಸಹಾಯಕವಾಗಿವೆ. ಕೆಲವು ವ್ಯಕ್ತಿನಾಮಗಳನ್ನು ವಿಶ್ಲೇಷಿಸಿದಾಗ ಹೊಸ ಹೊಸ ಸಂಗತಿಗಳು ಗೋಚರಿಸುತ್ತವೆ. ನಮ್ಮಲ್ಲಿ ವೃತ್ತಿಗಳು ಬೆಳೆದು ಜಾತಿಗಳಾದುದರಿಂದ ವೃತ್ತಿವಾಚಕ ಹೆಸರುಗಳೂ ಜಾತಿವಾಚಕಗಳಾಗಿ ಪರಿಣಮಿಸಿವೆ. ಇಂತಹ ಹೆಸರುಗಳಲ್ಲಿ ವೃತ್ತಿ ಜಾತಿಗಳೆರಡನ್ನೂ ಗುರ್ತಿಸಬಹುದಾಗಿದೆ.

ಕುರುಬ (ಕುರಿಕಾಯುವವನು) ಎಂಬ ಜಾತಿ ಸೂಚಕ ವ್ಯಕ್ತಿನಾಮಗಳನ್ನು ಅವಲೋಕಿಸಿದರೆ

೧. 'ಕುರುಬರ ಚಿಕ್ಕ'[೧೧]

೨. 'ಕುರುಬರ ಸೊತ್ತು'[೧೨]

೩. 'ಕುರುಬರ ಹಲಗ'[೧೩]

೪. 'ಕುರುಬರ ಸಿದ್ದೇಶ್ವರ'[೧೪]

೫. 'ಕುರುಬರ ಕಾಳಯ್ಯ'[೧೫]

ಈ ಮೇಲಿನ ಹೆಸರುಗಳಲ್ಲಿರುವ ವ್ಯಕ್ತಿಗಳು ಕುರುಬ ಸಮುದಾಯಕ್ಕೆ ಸೇರಿದವರೆಂಬುದರ ಬಗ್ಗೆ ಯಾವ ಸಂಶಯವೂ ಬರಲಾರದು. ಅಂತೆಯೇ ಸ್ಥಳನಾಮಗಳಲ್ಲಿ ಅಂತಹುದೇ ವೈಶಿಷ್ಟ್ಯವಿರುವುದು ಮನವರಿಕೆಯಾಗುತ್ತದೆ.

೧. 'ಕುರುಬರಹಳ್ಳಿ/ಕುರುಬನ ಕಟ್ಟೆ'[೧೬]

೨. 'ಕುರುಬಗೇರಿ'[೧೭]

೩. 'ಕುರುಬರ ಹಟ್ಟಿ'[೧೮]

ಈ ಸ್ಥಳಗಳು ಕುರುಬರ ವಾಸಸ್ಥಾನಗಳೆಂದು ಮೇಲ್ನೋಟಕ್ಕೆ ತಿಳಿದುಬಂದರೆ, ಹಳ್ಳಿಗಳಲ್ಲಿ ಒಂದೊಂದು ಓಣಿಯು ಪ್ರತ್ಯೇಕವಿದ್ದ ಬಗೆಗೆ ಮಾಹಿತಿ ಲಭ್ಯ. "ಹಂಡರಕನಹಳ್ಳಿಯ ಊರಿಂದ ಬಡಗಣ ಮಧ್ಯಕ ದಕಬ್ಬೆ ೧೦೦ ಕುರುಬಗೇರಿಯಲ್ಲಿ"[೧೯] ಎಂಬ ವಿಷಯವು ಅಚ್ಚರಿಯನ್ನುಂಟು ಮಾಡುತ್ತದೆ.

ಜನಾಂಗೀಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ನೆಲೆಗಳಲ್ಲಿ ವಿಶ್ಲೇಷಣೆ ಮಾಡುವ ಡಾ. ಕೆ.ಎಂ.ಮೈತ್ರಿ ಹಾಲುಮತ ಕುರುಬ ಸಮುದಾಯದ ಮೂಲವನ್ನು ಕುರಿತು ಹೀಗೆ ಅಭಿಪ್ರಾಯ ಪಡುತ್ತಾರೆ.

"ಹಾಲಿನ ಮೂಲದ ಸಮುದಾಯಗಳು ಹಾಲುಮತವಾಗಿದ್ದರೆ, ನೀರಿನ ಮೂಲದ ಸಮುದಾಯಗಳು ನೀರುಮತ ಅಥವಾ ಗಂಗಾಮತವಾಗಿರುವುದು. ವಿಶ್ವದ ಜೀವ ಜಗತ್ತು ಬದುಕಿಗಾಗಿ ಹಾಲು ಮತ್ತು ನೀರನ್ನೇ ಅವಲಂಬಿಸಿವೆ. ಹೀಗಾಗಿ ಹಾಲು ಮತ್ತು ನೀರು ಮತಗಳು ವಿಶ್ವಮತಗಳಾಗುವುವು. ಇವು ಪ್ರಕೃತಿ ಜನ್ಯ ಮತಗಳು, ಹಾಲು ಮತ್ತು ನೀರಿಗೆ ಅವಿನಾಭಾವ ಸಂಬಂಧವಿರುವುದು. ಹಾಲನ್ನು ಕಾಯಿಸಿ, ನೀರನ್ನು ಹಾಲಿನಿಂದ ಬೇರ್ಪಡಿಸಿದಾಗ ಹಾಲು ಉಕ್ಕುವುದು. ಅದಕ್ಕೆ ನೀರು ಬೆರೆಸಿದಾಗ ಶಾಂತವಾಗುವುದು. ಹಾಲು ಮತ್ತು ನೀರಿನ ಹಿನ್ನೆಲೆಯ ಮತಗಳು ಕರ್ನಾಟಕದಲ್ಲಿ ಕಾಣಸಿಗುವುವು. ಅವೇ ಹಾಲು ಮತ ಮತ್ತು ಗಂಗಾಮತಗಳು. ಹಾಲುಮತವನ್ನು ಕುರುಬ, ಕುರುಮಾನ್ಯ, ಕಾಡುಕುರುಬ, ಜೇನುಕುರುಬ, ಕಾಟ್ಟು ನಾಯಕನ್, ಗೊಂಡ ಮತ್ತು ರಾಜಗೊಂಡ ಇತ್ಯಾದಿ ಬುಡಕಟ್ಟುಗಳು ಹಾಗೂ ಕುರುಬ ಸಮುದಾಯದ ಕಳ್ಳುಬಳ್ಳಿಯ ಸಮುದಾಯಗಳು ತಮ್ಮ ಮತವೆಂದು ನಂಬಿ ನಡೆದುಕೊಳ್ಳುವುವು. ಕುರಿ, ಆಡು, ದನ, ಎಮ್ಮೆ ಸಾಕಾಣಿಕೆದಾರರ ಮತ ಕುರುಬ ಜನಾಂಗದ ಮೂಲವೆಂದರೆ ಮಾನವ

ಜನಾಂಗದ ಮೂಲವೆಂದೇ ಹೇಳಬೇಕಾಗುತ್ತದೆ. ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರೇ ಕುರುಬರ ಮೂಲಿಗರು ಇವರೇ ಹಾಲುಮತ ಸ್ಥಾಪಕರು"[೨೦] ಎಂದಿದ್ದಾರೆ.

ಸಂಸ್ಕೃತಿ ಪ್ರವರ್ತಕರಾದ ಕುರುಬರನ್ನು ಕುರಿತು ಆರ್. ಇ. ಎಂಥೋವೆನ್‌ರವರು ".The Kurubas are the most important elements in the early populations of south India"[೨೧] ಎಂದು ಕುರುಬರ ಮೂಲವನ್ನು ತಿಳಿಸುತ್ತಾರೆ.

ಮತ್ತೋರ್ವ ಸಂಸ್ಕೃತಿ ಚಿಂತಕನಾದ ಗುಸ್ತಾವ್ ಒಪರ್ಟರು ಕುರುಬರ ಮೂಲವನ್ನು ಕುರಿತು ಕೆಳಕಂಡಂತೆ ಅಭಿಪ್ರಾಯಪಡುತ್ತಾರೆ.

Indeed, the kurubas must be regarded as very old inhabitants of this land. who can contest with their Dravidian kinsman the priority of occupation of the Indian soil".[೨೨]

೧೮೯೧ರ ಮದ್ರಾಸ್ ಜನಗಣತಿಯ ವರದಿಯನ್ವಯ ಹೇಳುವುದಾದರೆ "They (the kurubas) are the modern representatives of the ancient kurubas or pallavas. who were once so powerful through out south India".[೨೩]

"ದಕ್ಷಿಣ ದೇಶದಲ್ಲಿ ಸಿಕ್ಕವ ಪ್ರಾಚೀನ ನಾಣ್ಯಗಳೆಂದರೆ ಕುರುಬರವೇ"[೨೪] ಎಂದು ಸಿ.ಜೆ.ಬ್ರೌನ್ ರವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ (ಶಂಬಾ ಜೋಶಿಯವರಿಂದ ಉದ್ಧೃತ).

ಬ್ರಿಟಾನಿಕಾ ವಿಶ್ವ ಕೋಶದಲ್ಲಿ ಕುರುಬರನ್ನು ಕುರಿತು ಈ ರೀತಿ ಹೇಳಲಾಗಿದೆ.

"Negroid tribe living in the cardamom and nilgiri hills west central Tamilnadu is southern India. Originally pastoral people. The kurumba were probably identical with or closely related to the Pallavas, With the decline of the pallava dynasty in the 8th century, kurumbas forefathers dispersed over a wide area of southern India becoming geographically seperated from each other and gathering by petty agriculture or as slaves. Today some kurumbas are field labourers or hunters. Who markets jungle produce. Kurumbas groups which are commonly isolated from each other are governed by head man with two assistants, who handle disputes. Partially Hinduized. They have abandoned many traditional customs.

The kurubas an ethnologically similar perople who live on the plains as small land owners and herders of sheeps, are now considered distinct from the hill kurumba. In

the late 20th century kurubas and kurumba lived together as early (volume-7,15th edition,p. 1997)"[೨೫] ಎನ್ನಲಾಗಿದೆ.

ಜನಪದ ಸಾಹಿತ್ಯದಲ್ಲೂ ಕುರುಬ ಸಮುದಾಯವನ್ನು ಕುರಿತಾದ ನೆಲೆಗಳಿವೆ.

೧. ಹಾ- ಎಂದರೆ ಉದಯ"

ಲ - ಎಂದರೆ ಲಯ"

ಮ - ಎಂದರೆ ಮಾನವಯ್ಯ"

ತ - ಎಂದರೆ ತಳುಕುವಯ್ಯಾ"

ಮತವೆಂದರೆ ಮಾನವನ ಮತಗುಟ್ಟವಯ್ಯಾ"

ಹಾಲು+ಮತ = ಹಾಲುಮತವಯ್ಯಾ"

ಶ್ರೀ ಮಹಾಲಿಂಗರಾಯ ದೇವಯ್ಯಾ"

ಎಂದನು ಅಡಿವೆಪ್ಪ ಮಹಾರಾಯ'

೨. ಕುರುಬರು, ಕುಡುವಕ್ಕಲಿಗರು ನಾಟಿಕಾರ ಕರಗಾರ"

ನೀಲಗಾರ ಸುಣಗಾರ ಗಾಣಿಗರು ಬಣಜಿಗರು ಮೂಲಗಾರ"

ಪಂಚಮ ಐನೋರು ಕುಂಬಾರ ಕಂಬಾರ ಪತ್ತಾರ"

ವಡ್ಡರು ಬೇಡರು ಕಾಡವಾಸಿಗರು ಮಚಿಗಾರ ಮಾದಾರ"

ಸಿಂಪಿಗಾರ ಕ್ಷತ್ರಿಯ ಬ್ರಾಹ್ಮಣ ವೈಶ್ಯ ಶೂದ್ರ ಮುಂತಾದವರ"

ಇವೆಲ್ಲ ಉದ್ಯೋಗ ಸೂಚಕಗಳೆಂದರಿಯದೆ

ಕೀಳುಜಾತಿ ಮೇಲುಜಾತಿ ಇಲ್ಲದ ಭೇದ ಕಲ್ಪಿಸುವವರ

ಮೆಚ್ಚನು ನೆಚ್ಚನು ಶ್ರೀ ಮಹಾಲಿಂಗರಾಯ

ಎಂದನು ಅಡಿವೆಪ್ಪ ಮಹಾರಾಯ

ಅಂತೆಯೇ 'ತ್ರಿಪದಿಯ ಬ್ರಹ್ಮ'ನೆನಸಿದ ಸರ್ವಜ್ಞನು ಹಾಲುಮತವನ್ನು ಕುರಿತು ಹೀಗೆ ಹೇಳುತ್ತಾನೆ.

ಹಾಲು ಹೈನವು ಲೇಸು । ಕೀಲು ಬಂಡಿಗೆ ಲೇಸು

ಶೀಲವುಳ್ಳಂಥ ಸತಿ ಲೇಸು । ಮತಗಳಲ್ಲಿ

ಹಾಲು ಮತಲೇಸು ಸರ್ವಜ್ಞ. ಹೀಗೆ ಕುರುಬ ಸಮುದಾಯದ ಮೂಲ ಮತ್ತು ನಿಷ್ಪತ್ತಿಯನ್ನು ಹೇಳಬಹುದು. ಅಲ್ಲದೆ ಪ್ರಾಚೀನ ಕಾವ್ಯ ಸಾಹಿತ್ಯಗಳಲ್ಲೂ ಕುರುಬರನ್ನು ಕುರಿತಾದ ಉಲ್ಲೇಖಗಳು ನಮಗೆ ದೊರೆಯುತ್ತವೆ. ಸುಕುಮಾರ ಚರಿತೆ, ಧರ್ಮಾಮೃತ, ಕುಮಾರವ್ಯಾಸ ಭಾರತಗಳಲ್ಲಿ ಕುರುಬ ಸಮುದಾಯದ ಚಿತ್ರಣವನ್ನು ಕಾಣಬಹುದಾಗಿದೆ.

೪. ಬೆಳವಣಿಗೆ

ಕುರುಬ ಸಮುದಾಯವು ಪ್ರಾರಂಭದಲ್ಲಿ ಅಲೆಮಾರಿಗಳಾಗಿದ್ದು ಕುರಿಸಾಕಾಣಿಕೆಯೇ ಪ್ರಮುಖ ಕಸುಬು. ಕಂಬಳಿ ತಯಾರಿಸುವುದು ಉಪಕಸುಬು. ಕುರುಬರಿಗೆ ಪ್ರಾಚೀನವಾದ ಸಾಂಸ್ಕೃತಿಕ ಅನನ್ಯತೆ ಇದೆ. ಜೊತೆಗೆ ವೈವಿಧ್ಯಮಯವಾದ ಒಳಪಂಗಡಗಳನ್ನು ಹೊಂದಿದೆ. ಈ ಸಮುದಾಯದ ಒಳಪಂಗಡಗಳ ಕುರಿತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಸಂಗತಿಗಳ ಅಧ್ಯಯನವು ಇದರ ಬೆಳವಣಿಗೆಗೆ ಸಹಕಾರಿಯಾಗುವುದು. ಪ್ರತಿಯೊಂದು ಸಮುದಾಯದಲ್ಲಿರುವ ಒಳಪಂಗಡಗಳನ್ನು ಸೂಕ್ಷ್ಮವಾದ ಅಧ್ಯಯನ ಪ್ರಕ್ರಿಯೆಗೆ ಒಳಪಡಿಸಿದಾಗ ಮಾತ್ರ ಇದರ ಸಮಗ್ರ ಬೆಳವಣಿಗೆಗೆ ಪೂರಕವೆನಿಸುತ್ತದೆ.

ಕರ್ನಾಟಕದಲ್ಲಿ ಕುರುಬರು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. "ಕರ್ನಾಟಕ ಪ್ರದೇಶ ಕುರುಬರ ಸಂಘ ೧೯೭೭ರಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿಪತ್ರದಲ್ಲಿ ಹಾಲುಮತ ಒಕ್ಕಲಿಗ, ಕುರುಬ, ಕುರಿಕಾಯುವ ಕುರುಬ, ಗೊಂಡರು, ಗೊಂಡ ಕುರುಬ, ಕಾಡುಕುರುಬ, ಒಗ್ಗರು, ಕಾಡುಸಿದ್ಧರು, ಕಿಲಾರಿಗಳು, ಧನಗಾರರು, ಭಾರವಾಡ, ಕರಡಿ ಮತ್ತು ಮರದೀವೇಳರು, ಹಂಡೇಕುರುಬ, ಜೋಗಯ್ಯಗಳು, ಹಣಬರು, ಹಂಕರು, ಪೆದ್ದರು, ಸುಡುಗಾಡುಸಿದ್ಧರು, ಗವಳಿಗರು, ಸಂದರು, ಒಡೆಯರು, ಕಂಬಳಿಕುರುಬರು, ಕನಕಯ್ಯನ ಜಾತಿಯವರು, ಪ್ರಥಮ ಶೂದ್ರರು, ಇಂದ್ರಶೂದ್ರರು. ವಾರದ ಕುರುಬರು, ದಾಸಯ್ಯಗಳು, ಗೊಲ್ಲ, ಗೊರವ, ಜೇನುಕುರುಬರು, ಊರುಕುರುಬರು ಹೊಸಕುರುಬರು, ಹಳೆಕುರುಬರು, ಮುಳ್ಳಕುರುಬರು, ಕೊಳ್ಳಿಕುರುಬರು, ಬೆಟ್ಟಕುರುಬರು."[೨೬] ಈ ಒಳಪಂಗಡಗಳನ್ನು ಹೆಸರಿಸಿದೆ.

"ಹಾಲುಮತದ ಮೂಲಪುರುಷ ಗುರು ರೇವಣಸಿದ್ಧನು ಹಾಲುಮತದ ಒಳಪಂಗಡಗಳನ್ನು ನಾಲ್ಕು ಸೇರು ಭತ್ತದ ಧಾನ್ಯದಷ್ಟು ಗೋತ್ರಗಳನ್ನಾಗಿ ಮಾಡಿ ವಿಂಗಡಿಸಿ ಎಲ್ಲಾ ಪ್ರಾಣಿಗಳ ಮತ್ತು ಸಸ್ಯಗಳ ಹೆಸರುಗಳನ್ನು ಅವುಗಳಿಗಿಟ್ಟರೂ ಕೂಡ ಇನ್ನೂ ಕೆಲವು ಗೋತ್ರಗಳು ಉಳಿದುವಂತೆ. ಅವುಗಳಿಗೆ ಕ್ಷುಲ್ಲಕ ಹೆಸರುಗಳನ್ನು ಇಟ್ಟಂತೆ ತೋರುತ್ತದೆ. ೧೧೧ ಕುಲಗಳನ್ನು ಡಾ.ಶಿವಾನಂದ ಗುಬ್ಬಣ್ಣವರ ತಮ್ಮ ಗ್ರಂಥದಲ್ಲಿ ಪಟ್ಟಿಮಾಡಿದ್ದಾರೆ"[೨೭] ಮುಂದುವರಿದು ಹನುಮಂತಪ್ಪ ಎಂಬುವರು ೩೩ ಕುಲಗಳನ್ನು ಸೇರಿಸಿ ಒಟ್ಟು ೧೪೪ ಕುಲಗಳನ್ನು ಉಪಪಂಗಡಗಳೆಂದು ಹೇಳುತ್ತಾರೆ. ಈ ಮೇಲಿನ ಮಾತುಗಳಲ್ಲಿ

ಕುಲ, ಬೆಡಗು, ಒಳಪಂಡಗಳ ನಿಖರವಾದ ವ್ಯತ್ಯಾಸವನ್ನು ಹೇಳದೆ ಗೊಂದಲಗೊಳಿಸಿದಂತೆ ಕಾಣುತ್ತದೆ. ಬೆಡಗು, ಕುಲ, ಒಳಪಂಗಡಗಳು ಬೇರೆ ಬೇರೆ ಎಂಬುದರ ಮನವರಿಕೆಯಾಗುವುದು ಅಗತ್ಯವೆನಿಸುತ್ತದೆ.

೧೯೭೭ರಲ್ಲಿ ಪ್ರಕಟವಾದ ಬಾಂಬೆ ಗೆಝೆಟಿಯರ್‌ನಲ್ಲಿ ಕುರುಬ ಸಮುದಾಯವನ್ನು ಈ ರೀತಿಯಾಗಿ ವಿಂಗಡಿಸಲಾಗಿದೆ.

"There are two main divisions of Kurubas. Hatti Kankana or cotton wristle weavers and unnikankana or Wool wristle weavers. Who eat together but donot intermarry. In Dharawar two more divisions are found Jande and Urasaliyava. The Hattikan kana are devided into Khailari, Sanagar and Hande. Kurubas of these the first three eat together and intermarry'[೨೮] ಎಂದು ಒಳಪಂಗಡಗಳಾದ ಬಗೆಯನ್ನು ವಿವರಿಸಲಾಗಿದೆ.

ಮೂಲತಃ ಮೂರು ಪಂಗಡಗಳೂ ಒಂದೇ ಆಗಿದ್ದು ಕಾಲಾಂತರದಲ್ಲಿ ಭಿನ್ನವೆಂದು ಗುರುತಿಸಲಾಗಿದೆ. ಹತ್ತಿಕಂಕಣ ಮತ್ತು ಉಣ್ಣೆಕಂಕಣ ಭಿನ್ನತೆಗೆ ಆದಿಗೊಂಡನ ಕಿರಿಯ ಮಗನಾದ ಪದ್ಮಗೊಂಡನು ಸ್ವಜಾತಿ ಹಾಗೂ ಅರಣ್ಯ ಸ್ತ್ರೀಯನ್ನು ವಿವಾಹವಾಗಿರುವುದರನ್ವಯ ಭಿನ್ನತೆ ಹೇಳುತ್ತದೆ. ರಾಕ್ಷಸ ಸ್ತ್ರೀಯೊಡನೆ ಮದುವೆ ಅಡವಿಯಲ್ಲಿ ಆದುದರಿಂದ ಅಡವಿಯಲ್ಲಿ ಹತ್ತಿ ದೊರೆಯದ ಕಾರಣ ಉಣ್ಣೆ ಬಳಸಲಾಯಿತು ಇದರಿಂದಾಗಿ ಕುಲಸ್ತ್ರೀಗೆ ಜನಿಸಿದ ಸಂತತಿಯವರನ್ನು ಹತ್ತಿಕಂಕಣವೆಂತಲೂ, ಸ್ವಜಾತಿ ಸ್ತ್ರೀಗೆ ಜನಿಸಿದ ಸಂತತಿಯರವನ್ನು ಉಣ್ಣೆಕಂಕಣವೆಂದು ಕರೆಯಲಾಯಿತು.

ಹಂಡೆ ಕುರುಬ ಅಥವಾ ಹಂಡೆ ವಜೀರ ಎಂಬುದು ಇನ್ನೊಂದು ಪಂಗಡ. ಇವರು ಆಕಳು ಎಮ್ಮೆ ಸಾಕಿಕೊಂಡು, ಹಾಲು, ಮೊಸರು ಹೈನು ಪದಾರ್ಥಗಳನ್ನು ಸಂಗ್ರಹಿಸಿ ಇಡಲು, ವ್ಯವಹಾರ ಮಾಡಲು ಟೊಳ್ಳಾದ ಬಿದಿರಿನ ಹಂಡೆಗಳನ್ನು ಬಳಸುತ್ತಿದ್ದರು. ಆದ್ದರಿಂದ ಇವರಿಗೆ ಹಂಡೆ (ಅಂಡೆ) ಕುರುಬ ಎಂಬ ಹೆಸರು ಬಂದಿದೆ. ಇವರು ಮದುವೆಯಲ್ಲಿ ಹತ್ತಿಯ ನೂಲನ್ನೇ ಕಂಕಣಕ್ಕೆ ಬಳಸುತ್ತಾರಾದರೂ ಇದು ಪ್ರಮುಖವಾಗಿ ಪರಿಗಣಿತವಾಗಿಲ್ಲ.

ಹತ್ತಿಕಂಕಣ, ಉಣ್ಣೆಕಂಕಣ ಮತ್ತು ಹಂಡೆ ಕುರುಬ ಎಂಬ ವರ್ಗೀಕರಣಕ್ಕೆ ಪ್ರಮುಖ ಆಕರ ಹಾಲುಮತದ ಪುರಾಣ, ತಗರಪವಾಡ ಮೊದಲಾದ ಪುರಾಣ ಕೃತಿಗಳು, ಗ್ರಂಥಗಳು, ಹಳೆಯ ಕಾಲದ ರಾಜ್ಯದ ಗೆಝೆಟಿಯರ್‌ಗಳು, ಜನಗಣತಿ ವರದಿಗಳು, ಕಾವ್ಯ ಶಾಸನಗಳು ಹಾಗೂ ಸರ್ಕಾರಿ ಆಡಳಿತದ ದಾಖಲಾತಿಗಳು ಪ್ರಮುಖವಾಗುತ್ತವೆ. ಕುರುಬರ ಚರಿತ್ರೆಯನ್ನು ಬರೆದ ವಿ.ಆರ್. ಹನುಮಂತಯ್ಯನವರು ಮೂರು ಪಂಗಡಗಳನ್ನು ಸೂಚಿಸಿದರೆ, ಹಾಲುಮತ ಪುರಾಣ, ಹಾಲುಮತ ಚರಿತ್ರೆಗಳು ಹತ್ತಿಕಂಕಣ ಮತ್ತು ಉಣ್ಣೆಕಂಕಣವೆಂದು ಎರಡನ್ನು ತಿಳಿಸುತ್ತವೆ.

ಕುರುಬರಲ್ಲಿ ಹತ್ತಿ, ಉಣ್ಣೆಕಂಕಣ, ಹಂಡೆ ಕುರುಬರೆಂದು ವಿಂಗಡಿಸಿದ್ದೇನೋ ಸರಿ. ಇವರಲ್ಲಿ ಮೊದಲಿಗರು ಯಾರು ಎಂಬ ಪ್ರಶ್ನೆ ಉದ್ಭವಿಸದಿರುವುದು, ಪುರಾಣ ಪುಸ್ತಕಗಳಲ್ಲಿ ಹತ್ತಿಕಂಕಣ ಕುರುಬರೇ ಮೊದಲಿಗರೆಂದು ಹೇಳಲ್ಪಟ್ಟಿದೆ. ಆದರೆ ಇದೊಂದು ಕಲ್ಪಿತ ಕತೆಯಾಗಿದೆಯೆಂದು ವಿದ್ವಾಂಸರು ತರ್ಕಿಸಿದ್ದಾರೆ.

ಶಂಭಾ ಜೋಶಿಯವರ ಪ್ರಕಾರ "ಹತ್ತಿಗಿಂತ ಮೊದಲು ಉಣ್ಣೆಯೆಂಬುದು ಗೊತ್ತಿರುವ ಸಂಗತಿ. ಒಕ್ಕಲುತನವು ಗೊತ್ತಾದ ಬಳಿಕ ಕಾಡುಹತ್ತಿಯ ಗಿಡಗಳು ದೊರೆತ ನಂತರ ಅದು ಮನುಷ್ಯನಿಗೆ ತಿಳಿಯಿತು. ಅಲ್ಲಿಯವರೆಗೆ ಹಟ್ಟಿಕಾರ, ದನಗಾರನಾಗಿದ್ದಾಗ ಸುಲಭವಾಗಿ ಸಿಗುವ ಉಣ್ಣೆಯಿಂದ ಬಟ್ಟೆಯನ್ನು ಮಾಡಿಕೊಳ್ಳುವ ಬಗೆಯನ್ನು ಮನುಷ್ಯನು ಮೊಟ್ಟಮೊದಲಿಗೆ ಕಲಿತಿರಬೇಕು"[೨೯] ಆದುದರಿಂದ ಮೊಟ್ಟ ಮೊದಲಿಗೆ ಉಣ್ಣೆಕಂಕಣದವರು, ನಂತರ ಹತ್ತಿಕಂಕಣದವರು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಮೂಲದಲ್ಲಿ ಒಂದೇ ಆಗಿದ್ದ ಕುರುಬ ಸಮುದಾಯ ಕಾಲಾಂತರದಲ್ಲಿ ಹಲವಾರು ಒಳಪಂಗಡಗಳಾಗಿ ವಿಭಜನೆಗೊಂಡಂತೆ ಕಂಡು ಬರುತ್ತದೆ. ಇದಕ್ಕೆ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು, ಉದ್ಯೋಗದಲ್ಲಾದ ಬದಲಾವಣೆ, ಆಯಾ ಪ್ರದೇಶಗಳಲ್ಲಿ ರೂಪಿಸಿಕೊಂಡ ಆಚಾರ-ವಿಚಾರಗಳು ಭಿನ್ನ ಪಂಗಡಗಳಾಗಲು ಕಾರಣಗಳಿರಬಹುದು. ಇಂತಹ ಸಾಮಾಜಿಕ ವ್ಯವಸ್ಥೆಯ ಸಂರಚನೆಯನ್ನು ವಿವರಿಸಲು ಒಳಪಂಗಡಗಳ ಅಧ್ಯಯನ ಮುಖ್ಯವಾಗುತ್ತದೆ.

ಕರ್ನಾಟಕದ ಕುರುಬರ ಒಳಪಂಗಡಗಳ ಹೆಸರುಗಳು ಈ ಕೆಳಕಂಡಂತಿವೆ.

೧. ಕಾಡು ಕುರುಬರು. ೨. ಜೇನು ಕುರುಬರು ೩. ಗೊಂಡ ಕುರುಬರು ೪. ಅಲೆಮಾರಿ ಕುರುಬರು ೫. ಉಣ್ಣೆಕಂಕಣ ಕುರುಬರು. ೬. ಹತ್ತಿಕಂಕಣ ಕುರುಬರು ೭. ದನಗಾರ ಗವಳಿಗ ಕುರುಬರು ೮. ಹಂಡೆ ಕುರುಬರು ೯. ಒಡೆಯರು ೧೦. ಜಂಡೆ (ಝುಂಡೆ) ಕುರುಬರು ೧೧. ದಾಸ ಕುರುಬರು. ೧೨. ಸಾದ ಕುರುಬರು ೧೩. ಕ್ರೈಸ್ತ ಕುರುಬರು ೧೪. ಕುಡುವೊಕ್ಕಲಿಗ ಕುರುಬರು ೧೫. ಹೆಗ್ಗಡೆ ಕುರುಬರು ೧೬. ನೊಣಬ ಕುರುಬರು ೧೭. ಗೊಲ್ಲ ಕುರುಬರು ೧೮. ಕುಂಚಿಟಿಗ ಕುರುಬರು ೧೯. ಕನಕಯ್ಯನ ಜಾತಿಯವರು ೨೦. ವಾರದ ಕುರುಬರು ೨೧. ಕಂಬಳಿ ಕುರುಬರು ೨೨. ಒಕ್ಕೆ ಕುರುಬರು ೨೩. ಮಿಶ್ರ ಕಂಕಣ ಕುರುಬರು.

ಆ. ಹೆಸರು-ಸಂಖ್ಯಾನಿರ್ಣಯ

ಹಾಲುಮತದವರೆಂದು ಗುರುತಿಸಲ್ಪಡುವ ಕುರುಬರು ಕರ್ನಾಟಕದ ಅತಿದೊಡ್ಡ ಕುರಿಗಾಹಿಗಳ ಸಮುದಾಯಕ್ಕೆ ಸೇರಿದವರು. ಒಂದೇ ಸಮುದಾಯದಲ್ಲಿನ ಇವರು ಹಲವು ಕಾರಣಗಳಿಂದಾಗಿ ಸಣ್ಣ ದೊಡ್ಡ ಪಂಗಡಗಳಾಗಿರುವುದುಂಟು, ನಾಡು ಬೇರೆ ಬೇರೆಯಾಗಿ ಅವರ ಧಾರ್ಮಿಕ, ಸಾಮಾಜಿಕ

ಆಚಾರ ವಿಚಾರಗಳಲ್ಲಿ ಅಲ್ಪ ಸ್ವಲ್ಪ ಪರಿವರ್ತನೆಗಳಾಗುತ್ತಲೇ ಆ ಗುಂಪುಗಳಲ್ಲಿದ್ದ ಪರಸ್ಪರ ಸಂಬಂಧವು ಕಡಿದು ಹೋಗಿ ಒಳಪಂಗಡಗಳಾಗಿ ರೂಪ ತಳೆದಿರಬಹುದು. ಉಪಜೀವನದ ಉದ್ಯೋಗ ಭೇದದಿಂದಲೂ ಒಂದೇ ಪಂಗಡದಲ್ಲಿ ಒಳ ಪಂಗಡಗಳು ಅಸ್ತಿತ್ವಕ್ಕೆ ಬಂದಿರಬೇಕು.

೧. ಕಾಡು ಕುರುಬರು

ತಮಿಳಿನ ಕುರುಂಬನ್ ಮತ್ತು ಕನ್ನಡ ತೆಲುಗಿನ ಕುರುಬ ಒಂದೇ ಆಗಿರುತ್ತವೆ. ಕುರುಂಬರಲ್ಲಿ ಎರಡು ಸೂಕ್ಷ್ಮ ವಿಭಾಗಗಳಿವೆ. ನೀಲಗಿರಿಯಲ್ಲಿ ವಾಸಿಸುವ ಕುರುಂಬ ಉಪಭಾಷೆಯಾಡುವ ಕಾಡು ಜನ ಒಂದಾದರೆ, ಮತ್ತೊಂದು ಬಯಲು ಸೀಮೆಯಲ್ಲಿ ವಾಸಿಸುವ ಕನ್ನಡ ಮಾತನಾಡುವ ನಾಗರಿಕ ಕುರುಬರು.

ಯಾವುದೇ ಒಂದು ಒಳಪಂಗಡವನ್ನು ಅಧ್ಯಯನ ಮಾಡುವಾಗ ಅಥವಾ ವಿಶ್ಲೇಷಿಸುವಾಗ ಕಾಡು ಮತ್ತು ಗ್ರಾಮದ ಪ್ರಸ್ತಾಪಗಳನ್ನು ತಪ್ಪದೇ ಮಾಡಬೇಕಾಗುತ್ತದೆ. ಕಾಡಿನಿಂದ ನಾಡಜೀವನಕ್ಕೆ ಕಾಲಿರಿಸಿದ ಮಾನವನ ಸಂಸ್ಕೃತಿಯ ಘಟ್ಟ ಕಾಡನ್ನು ಹೊರತುಪಡಿಸಿ ಇಲ್ಲದಿರುವುದರಿಂದ ಮಾನವನ ಸಂಸ್ಕೃತಿ ಕಾಡಿನಿಂದಲೇ ಮೂಡಿ ಬಂತು ಎಂಬ ಬಗ್ಗೆ ವಿವಾದವಿಲ್ಲ. ಪ್ರಾಚೀನ ಸಾಹಿತ್ಯ ಕೃತಿಗಳೆಲ್ಲವೂ ಕಾಡಿನಜೀವನ, ಕಾಡಿಗೆ ಹೋದ ಸನ್ನಿವೇಶದ ಉಲ್ಲೇಖಗಳಿಲ್ಲದೆ ಯಾವ ಕತೆಗಳೂ ಪೂರ್ಣವಾಗಿಲ್ಲ.

ಕಾಡು ಕುರುಬರು ಕರ್ನಾಟಕದ ಅತ್ಯಂತ ಪ್ರಾಚೀನ ಬುಡಕಟ್ಟಿಗೆ ಸೇರಿದವರು. ಕಾಡಿನ ನಿಸರ್ಗದ ಮಧ್ಯೆ ಅವರು ತಮ್ಮದೇ ಆದ ಸ್ವಚ್ಛಂದ ಬದುಕನ್ನು ರೂಢಿಸಿಕೊಂಡಿರುವುದಷ್ಟೇ ಅಲ್ಲದೆ ವಿಶಿಷ್ಟವಾದ ಸಾಂಸ್ಕೃತಿಕ, ಸಾಮಾಜಿಕ ಮೌಲ್ಯಗಳನ್ನು ಹೊಂದಿದ್ದಾರೆ. ಕಾಡು ಕುರುಬರು ಮತ್ತು ಊರು ಕುರುಬರು ಎಂದು ಮೈಸೂರು ಜಿಲ್ಲೆಯಲ್ಲಿ ಕುರುಬರನ್ನು ವಿಭಜಿಸಲಾಗಿದೆ. ಕಾಡು ಕುರುಬರಲ್ಲಿ ಮತ್ತೆ ಬೆಟ್ಟ ಕುರುಬರು ಮತ್ತು ಜೇನು ಕುರುಬರು ಎಂದು ವಿಂಗಡಿಸುತ್ತಾರೆ.

ಕಾಡು ಕುರುಬರು ಕರ್ನಾಟಕದ ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೆಗಾಲ, ಹೆಗ್ಗಡೆ ದೇವನ ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣಗಳಲ್ಲಿ, ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಸೋಮವಾರ ಪೇಟೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇದಲ್ಲದೆ ಚಾಮರಾಜನಗರ ಪರಿಸರದ ಬಂಡೀಪುರ, ನಾಗರಹೊಳೆ ಅಭಯಾರಣ್ಯಗಳಲ್ಲೂ ಕಂಡುಬರುವರು. ಆ ನೆಲದಲ್ಲಿ ತಮ್ಮ ಪಾಡಿಗೆ ತಾವು ದುಡಿಯುತ್ತ, ಉದರ ಪೋಷಣೆ ಮಾಡುತ್ತ ಯಾರನ್ನೂ ದೋಚದೆ ಕಾಡಿನ ಮಧ್ಯೆ ಜೀವನ ನಡೆಸುತ್ತಿದ್ದಾರೆ.

ಇವರು ಅಲೆಮಾರಿಗಳಾಗಿದ್ದು, ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವ ಜನಾಂಗವಾಗಿದೆ. ಹಾಗೆ ಸಂಚರಿಸುವಾಗ ಕಾಡಿನಲ್ಲಿ ದೊರೆಯುವ ಜೇನು, ವಿವಿಧ ಮರಗಿಡ ಬೀಜಗಳನ್ನು ಸಂಗ್ರಹಿಸುವುದು, ಮೇಣ, ಗಿಡಮೂಲಿಕೆಗಳು ಮತ್ತು ಗೆಡ್ಡೆಗೆಣಸುಗಳನ್ನು ಕಲೆ ಹಾಕಿಕೊಂಡು ಮಾರುವ ಕೆಲಸವನ್ನು ಮಾಡುತ್ತಾರೆ.

ಕಾಡು ಕುರುಬರು ದ್ರಾವಿಡರಾಗಿದ್ದು, ಬಹಳ ಪರಾಕ್ರಮಶಾಲಿಗಳಾಗಿ ಬಹುಕಾಲದವರೆಗೆ ದಕ್ಷಿಣ ಭಾರತವನ್ನಾಳಿದ ಪಲ್ಲವ ವಂಶಕ್ಕೆ ಸೇರಿದವರಾಗಿದ್ದಾರೆ. ಕಾಲಾಂತರದಲ್ಲಿ ಕೊಂಗ, ಚೋಳ ಮತ್ತು ಚಾಲುಕ್ಯರ ಪ್ರಬಲವಾದ ದಾಳಿಯಿಂದ ೭ ಅಥವಾ ೮ನೇ ಶತಮಾನದ ಸುಮಾರಿಗೆ ಅವನತಿ ಹೊಂದಿದರು. ಅಲ್ಲಿಯೇ ಸಮೀಪದ ಬೆಟ್ಟಗುಡ್ಡಗಳಿಂದ ಆವೃತವಾದ ಮಲಬಾರ್, ನೀಲಗಿರಿ, ವೈನಾಡು ಮತ್ತು ಮೈಸೂರು ಪ್ರದೇಶಗಳಲ್ಲಿನ ದಟ್ಟವಾದ ಅರಣ್ಯಗಳಲ್ಲಿ ಸೇರಿಕೊಂಡು ಬಹಳ ಕಾಲದವರೆಗೆ ತಲೆ ಮರೆಸಿಕೊಂಡಿದ್ದರು.

ಕಾಲಕ್ರಮೇಣ ಯಾವುದೇ ಸಂಪರ್ಕವಿಲ್ಲದೆ ಇವರ ಸಹಜವಾದ ಏಕಾಂಗಿತನ ಅವರನ್ನು ಕಾಡುಜನರನ್ನಾಗಿ ಮಾಡಿರಬಹುದು. ಮಾತ್ರವಲ್ಲದೆ ತಮ್ಮ ಗತಕಾಲದ ಸಂಸ್ಕೃತಿಯನ್ನು ಕಳೆದುಕೊಳ್ಳುವುದಕ್ಕೆ ಕಾರಣವಾಗಿರಬಹುದು. ಈ ರೀತಿಯಾಗಿ ಬಹಳ ಹಿಂದೆ ಊರುಕುರುಬರು ಮತ್ತು ಕಾಡುಕುರುಬರು ಒಂದೇ ಆಗಿರಬೇಕು. ಇತ್ತೀಚಿನ ಇವರಲ್ಲಿನ ಭಿನ್ನತೆಗೆ ಬಹುಶಃ ಅವರು ವಾಸಿಸುವ ಭೌಗೋಳಿಕ ಪ್ರದೇಶಗಳು ಆಗಿರಬಹುದೆಂದು ಬಲ್ಲ ಮೂಲಗಳು ತಿಳಿಸುತ್ತವೆ. ಇದಕ್ಕೆ ಸಾಕ್ಷಿ ಎನ್ನುವಂತೆ ಉತ್ತರ ಮಲಬಾರಿನ 'ಕುರುಂಬನಾಡು' ಎಂಬ ಹೆಸರಿನ ತಾಲೂಕು ಹೆಗ್ಗಳಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಕಾಡುಕುರುಬರಿಗೆ ಪರ್ಯಾಯ ಹೆಸರುಗಳಾಗಿ ಬೆಟ್ಟದ ಕುರುಬ, ಅಡವಿ ಕುರುಬ ಎಂದು ಇವೆ. ಕಾಡುಕುರುಬರು ಮೂಲತಃ ಆಹಾರ ಹುಡುಕುತ್ತ ಕಾಡಿನಲ್ಲಿ ಅಲೆದಲೆದು ಬದುಕು ಸಾಗಿಸಿದವರು. ಅವರಿಗೆ ವ್ಯವಸಾಯ ಮಾಡಿ ಗೊತ್ತಿಲ್ಲ, ಆದರೆ ಕಾಡಿನಲ್ಲಿ ಆಹಾರ ಪದಾರ್ಥಗಳ ಕೊರತೆ ಉಂಟಾದಾಗ ಕುಮರಿ ಬೇಸಾಯ ಕ್ರಮವನ್ನು ಅನುಸರಿಸಿ ಆ ಜಾಗದಲ್ಲಿ ಬೆಳೆ ಬೆಳೆದು ಭೂಮಿ ಬರಡಾದಾಗ ಬೇರೆ ಜಾಗವನ್ನು ಹುಡುಕಿಕೊಂಡು ಹೋಗುತ್ತಾರೆ. ವ್ಯವಸಾಯ ಅವರಿಗೆ ತುಂಬಾ ಗೌಣ. ಅವರು ತಮ್ಮ ಜೀವನ ನಿರ್ವಹಣೆಗೆ ಎರಡು ವೃತ್ತಿಗಳನ್ನು ಹೆಚ್ಚಾಗಿ ಅವಲಂಬಿಸುತ್ತಾರೆ. ಕಾಡಿನ ಗೆಡ್ಡೆ ಗೆಣಸುಗಳನ್ನು ಅಗೆದು ತಿನ್ನುವುದು ಹಾಗೂ ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ಆಹಾರವಾಗಿ ಬಳಸುವುದು ಈ ಎರಡು ವೃತ್ತಿಗಳು ಅವರ ಆಹಾರ ಸಂಗ್ರಹಣೆಗೆ ಮುಖ್ಯವಾಗಿದೆ. ಅವರಲ್ಲೂ ಬೇಟೆ ಬಹಳ ಮುಖ್ಯ ವೃತ್ತಿಯಾಗಿದೆ.

ಯಾವುದೇ ಸಂಸ್ಕೃತಿಯ ಮೇಲೆ ಅದರ ಸುತ್ತಮುತ್ತಲ ಪರಿಸರದ ಪ್ರಭಾವ ದಟ್ಟವಾಗಿ ಒಂದಲ್ಲ ಒಂದು ರೀತಿಯಲ್ಲಿ ಆಗಿಯೇ ತೀರುತ್ತದೆ. ಇದಕ್ಕೆ ಕಾಡುಕುರುಬರೂ ಹೊರತಾಗಿಲ್ಲ. ಕೆಲವು ವರ್ಷಗಳ ಹಿಂದೆ ಇವರು ಕಾಡುಗಳಲ್ಲಿಯೇ ವಾಸಮಾಡುತ್ತಿದ್ದುದು ಸಾಮಾನ್ಯ ಸಂಗತಿ. ಕಾಡು ನಾಶವಾಗಿ ಕಾಡಿನ ಸಂಪನ್ಮೂಲಗಳ ಕೊರತೆಯುಂಟಾದಾಗ ಅವರು ಅನಿವಾರ್ಯವಾಗಿ ಕೂಲಿ ಕೆಲಸಕ್ಕೆ, ಅನುಕೂಲವಾಗುವಂತೆ ಊರುಗಳಿಂದ ಕೊಂಚ ದೂರವೆನಿಸಬಹುದಾದ ಬೆಟ್ಟದ ತಪ್ಪಲಿನಲ್ಲಿ ಸಣ್ಣಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ.

ಬುಡಕಟ್ಟು ಸಮುದಾಯದವರು ಜಲಸಂಪನ್ಮೂಲ ಎಲ್ಲಿ ಇರುತ್ತಿತ್ತೋ, ದಟ್ಟವಾದ ಅರಣ್ಯ ಪ್ರದೇಶಗಳಿದ್ದು ತಮಗೆ ಬೇಕಾದ ಆಹಾರ ಪದಾರ್ಥಗಳು, ಬೇಟೆಗೆ ಅನುಕೂಲವೆನಿಸುವ ಸ್ಥಳ ಎಲ್ಲಿ ಲಭ್ಯವಾಗುವುದೋ ಅಲ್ಲಿ ನೆಲಸಿರುವುದನ್ನು ಕಾಣಬಹುದಾಗಿದೆ. ಏಕಾಂಗಿಯಾಗಿ ಅಲೆಮಾರಿಯಾಗಿದ್ದ ಮಾನವ ಕ್ರಮೇಣ ಕ್ರೂರ ಮೃಗಗಳ ಭಯದಿಂದಲೋ, ತಾನು ತನ್ನವರೆಂಬ ಅರಿವು ಬಂದಿದ್ದರಿಂದಲೋ, ಗುಂಪಾಗಿ, ಸಮೂಹವಾಗಿ ತಮ್ಮದೇ ಸಾಮಾಜಿಕ ಪರಿಸರವನ್ನು ನಿರ್ಮಿಸಿಕೊಂಡರೆಂಬುದನ್ನು ಮರೆಯುವಂತಿಲ್ಲ. ಅಂತೆಯೇ ಕಾಡುಕುರುಬರೂ ಕೂಡ ತಮಗೆ ಬೇಕೆನಿಸಿದ ಆಹಾರ ಪದಾರ್ಥಗಳನ್ನು ಬೇಟೆಯ ಮೂಲಕವೇ ಸಂಪಾದಿಸಿಕೊಂಡು ಜೀವನ ಸಾಗಿಸುತ್ತ ಬಂದವರು. ಇಂದಿಗೂ ಊರ ಹೊರಗಡೆಯೇ ಗಿರಿಕಂದರ, ಹಳ್ಳಕೊಳ್ಳಗಳ ನೀರು ಸಿಗುವೆಡೆಯಲ್ಲಿಯೇ ಬದುಕು ಸಾಗಿಸುತ್ತಾರೆ.

೧೯೫೦ರಿಂದಲೇ ಮೈಸೂರು ರಾಜ್ಯದಲ್ಲಿ ಕಾಡುಕುರುಬ, ಜೇನುಕುರುಬ ಬುಡಕಟ್ಟುಗಳನ್ನು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲ್ಪಟ್ಟವು. ೧೯೫೬ರಲ್ಲಿ ಭಾಷಾವಾರು ಪ್ರಾಂತ ರಚನೆಯಾದ ಮೇಲೂ ಅದೇ ಪಟ್ಟಿಯಲ್ಲಿ ಹಳೆಯ ಮೈಸೂರಿನ ಜಿಲ್ಲೆಗಳಲ್ಲಿ ಮುಂದುವರಿದವು. ೧೯೭೭ರಿಂದ ಈ ಬುಡಕಟ್ಟುಗಳ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಇವರ ಮಾತೃಭಾಷೆ ಕನ್ನಡವೇ ಆಗಿದೆ. ೧೯೩೧ರಲ್ಲಿ ನಡೆದ ಜನಗಣತಿಯಲ್ಲಿ ಪ್ರತ್ಯೇಕಿಸಲಾಯಿತು.

ಕಾಡು ಕುರುಬರನ್ನು ಬೆಟ್ಟ ಕುರುಬರನ್ನಾಗಿ ಮತ್ತೊಂದು ವಿಂಗಡನೆ ಮಾಡಲಾಗಿದೆ. ಬೆಟ್ಟ ಕುರುಬರಲ್ಲಿ ಆನೆ, ಬೇವಿನ ಮತ್ತು ಕೊಳ್ಳಿ ಕುರುಬರೆಂದು ಉಪಪಂಗಡಗಳಿವೆ. ಇವರು ತುಂಬಾ ಶ್ರಮ ಜೀವಿಗಳು, ಕಾಡು ಕಡಿಯುವುದರಲ್ಲೂ ಸಿದ್ಧಹಸ್ತರು, ತುಂಬಾ ಚುರುಕು ಸ್ವಭಾವದವರಾದ ಇವರು ಕೆಲವು ರೈತರ ಹೊಲಗಳನ್ನು ಕಾದು ವೇತನವನ್ನು ಪಡೆಯುತ್ತಾರೆ. ಪಂಜುಹಿಡಿದು ಆನೆಗಳನ್ನು ಓಡಿಸಿ ಬೆಳೆಗಳನ್ನು ಸಂರಕ್ಷಿಸುತ್ತಾರೆ.

ಪ್ರತ್ಯೇಕ ವಿಶಿಷ್ಟ ಜೀವನ ವಿಧಾನಗಳಿರುವ ಇವರ ಬದುಕಿನ ಕ್ರಮ ಏಕ ಪ್ರಕಾರವಾದುದು. ಬಹುಪಾಲು ಜಗತ್ತಿನಾದ್ಯಂತ ಕಂಡುಬರುವ ಇವರಲ್ಲಿ ಮೇಲ್ಪದರದಲ್ಲಿ ಅಲ್ಪ ವ್ಯತ್ಯಾಸಗಳಿದ್ದರೂ ಆಂತರ್ಯದಲ್ಲಿ ಅಂತಹ ಮಹತ್ತರ ವ್ಯತ್ಯಾಸಗಳಿಲ್ಲ. ಬುಡಕಟ್ಟಿನ ಬುದಕಿನಲ್ಲಿ ಸೌಹಾರ್ದತೆಗೆ ಪ್ರಾಧಾನ್ಯ. ಪ್ರಕೃತಿವಾಸಿಗಳಾದ ಇವರಿಗೆ ಬದುಕು ಪ್ರಕೃತಿ ನೀಡಿದ ಕೊಡುಗೆ. ಹೀಗೆ ಒಂದು ನಿರ್ದಿಷ್ಟ ಭೌಗೋಳಿಕ ಪರಿಮಿತಿಯಲ್ಲಿ ನಿಸರ್ಗದ ಮಡಿಲನ್ನು ಆಶ್ರಯಿಸಿಕೊಂಡು ಬದುಕುವ ಬುಡಕಟ್ಟುಗಳ ಎಷ್ಟೋ ವಿಚಾರಗಳು ನಮ್ಮಿಂದ ಅಜ್ಞಾತವಾಗಿಯೇ ಉಳಿದಿವೆ.

೨. ಜೇನುಕುರುಬರು

ಭಾರತದಂತಹ ಜಾತ್ಯಾತೀತ ರಾಷ್ಟ್ರದಲ್ಲಿ ಇಲ್ಲಿನ ಸಮುದಾಯಗಳು ಭಾಷೆ, ಸಂಸ್ಕೃತಿ, ಧರ್ಮ, ಜಾತಿ ಮುಂತಾದ ವೈವಿಧ್ಯಗಳ ನಡುವೆ ಜೀವಿಸುತ್ತವೆ. ಸಮುದಾಯಗಳೊಳಗೆ ಕುಲ, ಬೆಡಗು, ಪಂಗಡ, ಒಳಪಂಗಡಗಳು ಮುಂತಾದ ವಿಂಗಡಣೆಗಳು ಇವೆ. ನಾಗರಿಕತೆಯ ಉನ್ನತ ಶಿಖರವೇರಿರುವ ಸಮುದಾಯಗಳು ಒಂದೆಡೆಯಿದ್ದರೆ, ನಾಗರಿಕತೆ, ನಗರ ಪಟ್ಟಣಗಳ ಸೋಂಕು ಇಲ್ಲದೆ ಅರಣ್ಯ ಸರಹದ್ದಿನಲ್ಲಿಯೇ ಜೀವಿಸುವ ಅನೇಕ ಬುಡಕಟ್ಟುಗಳಿವೆ.

ಕರ್ನಾಟಕದ ಸುಮಾರು ಐವತ್ತು ಬುಡಕಟ್ಟು ಸಮುದಾಯಗಳಲ್ಲಿ ಜೇನು ಕುರುಬರು ಅತ್ಯಂತ ಪ್ರಾಚೀನರೆಂದು ತಿಳಿದುಬರುತ್ತದೆ. ಇವರು ಅರಣ್ಯದಲ್ಲಿಯೇ ವಾಸಿಸುತ್ತಿದ್ದು ಇನ್ನೂ ಮೂಲ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿಯೇ ಬದುಕು ಸಾಗಿಸುವವರು. ಜೇನು ಕುರುಬರು ಕಾಡಿನೊಳಗೆ ವಾಸಿಸುವ ಸಮುದಾಯವಾಗಿದ್ದು ಕಾಡುಕುರುಬರಂತೆಯೇ ಇವರೂ ಕಾಡಾಡಿಗಳು.

ಜೇನು ಬೇಟೆಯು ಇವರ ಪ್ರಧಾನ ವೃತ್ತಿಯಾಗಿದೆ. ಜೇನು ಕುರುಬರು ಎಂಬ ಹೆಸರು ವೃತ್ತಿಯಿಂದ ದೊರಕಿರುವುದು ಸಮುದಾಯಕ್ಕೆ ಅನ್ವರ್ಥವಾಗಿದೆ. ಇವರ ಸಾಂಪ್ರದಾಯಿಕ ವೃತ್ತಿ ಜೇನು ಸಂಗ್ರಹಿಸುವುದಾಗಿದ್ದು ಜೇನು ತುಪ್ಪಕ್ಕಾಗಿ, ಹಣ್ಣು ಹಂಪಲುಗಳಿಗಾಗಿ, ಗೆಡ್ಡೆ ಗೆಣಸುಗಳಿಗಾಗಿ ಈ ಜನರು ಗುಡ್ಡಗಾಡುಗಳಲ್ಲಿ ಅಲೆಯುತ್ತಾ ಇರುವುದು ಕಂಡುಬರುತ್ತದೆ.

ಜೇನುಕುರುಬರೂ ಕೂಡ ಕಾಡುಕುರುಬರಂತೆ ದ್ರಾವಿಡ ಮೂಲದವರು. ಸಾಂಪ್ರದಾಯಿಕ ವೃತ್ತಿಯ ಮೂಲಕವೇ ಒಂದು ಒಳಪಂಗಡವಾಗಿ ಬೆಳೆದವರು. ಜೇನುಕುರುಬರೆಂದು ಗುರ್ತಿಸಿಕೊಳ್ಳುವವರು ಮುಖ್ಯವಾಗಿ ಹುಣಸೂರು, ಪಿರಿಯಾ ಪಟ್ಟಣ, ಹೆಗ್ಗಡ ದೇವನ ಕೋಟೆ, ಗುಂಡ್ಲು ಪೇಟೆ, ಮಡಿಕೇರಿ, ವಿರಾಜ ಪೇಟೆ, ಸೋಮವಾರ ಪೇಟೆ ತಾಲೂಕುಗಳಲ್ಲಿ ಹರಡಿಕೊಂಡಿದ್ದಾರೆ. ಅಲ್ಲದೆ ಕೇರಳದ ಎತ್ತರದ ಬೆಟ್ಟಗಳಲ್ಲಿಯೂ ವಾಸಮಾಡುತ್ತಾರೆ. ಅವರುಗಳನ್ನು ಅಲ್ಲಿ ಕಾಟ್ಟುನಾಯಕನ್, ಶೋಲನಾಯಕನ್, ತೀನ್ ಕುರುಮನ್, ಕುರುಮನ್ ಮತ್ತು ಜೇನಕೋಯಶೋಲ ಎಂಬೀ ಹೆಸರುಗಳಿಂದ ಗುರುತಿಸಲಾಗುತ್ತದೆ.

ಕರ್ನಾಟಕದ ಕುರುಬ, ಕೇರಳದ ಕುರುಮನ್ ಪದಗಳು ತಮಿಳುನಾಡಿನ 'ಕುಱುಂಬ' ಪದಕ್ಕೆ ಸಮವಾಗಿದೆ. ಅವೆಲ್ಲವೂ ಒಂದೇ ಬುಡಕಟ್ಟಿಗೆ ಕರೆಯುವ ಶಬ್ದಗಳಾಗಿವೆ. ಬೆಟ್ಟ ಕುರುಬ ಮತ್ತು ದನಗಾಹಿ ಕುರುಬ ಎಂಬ ವೈವಿಧ್ಯಮಯವಾದ ಕುರುಬರೆಂದು ತಮ್ಮನ್ನು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳುತ್ತಾರೆ. ಅವರಲ್ಲಿಯ ಪರಸ್ಪರ ರಕ್ತ ಸಂಬಂಧ ಸ್ಥಗಿತಗೊಂಡ ಮೇಲೆ ಅವು ಪ್ರತ್ಯೇಕ ಬುಡಕಟ್ಟುಗಳೆಂದು ಪರಿಗಣಿಸಲ್ಪಟ್ಟಿದೆ.

೧೯೨೧ರಲ್ಲಿ ಸಾಮಾನ್ಯವಾಗಿ ಕುರುಬರೆಂದೇ ಪರಿಗಣಿಸಲ್ಪಟ್ಟಿದ್ದ ಜೇನುಕುರುಬರನ್ನು ಪ್ರತ್ಯೇಕವಾಗಿ ಒಂದು ಒಳಪಂಗಡವೆಂದು ಗುರ್ತಿಸಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು. ಇದಾದ ನಂತರ

೧೯೩೧ರ ಜನಗಣತಿಯಲ್ಲಿ ಪರಿಶಿಷ್ಟ ಪಂಗಡವೆಂದು ಗುರುತಿಸಲಾಯಿತು. ೧೯೫೦ರಲ್ಲಿ ಜೇನುಕುರುಬರು ಮೈಸೂರು ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು scheduled castes and scheduled tribes lists (modifications) order schedule ೨ part ೮ mysore the ೫ and ೬ರ ಪ್ರಕಾರ ಜೇನು ಕುರುಬ ಮತ್ತು ಕಾಡುಕುರುಬರು ಹಳೆಯ ಮೈಸೂರು ರಾಜ್ಯಕ್ಕೆ ಸೀಮಿತಗೊಳಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದರು. ಈ ಪ್ರಾದೇಶಿಕ ಮಿತಿಯನ್ನು ೧೯೭೦ರಲ್ಲಿ ಸಡಿಲಿಸಿ ಕರ್ನಾಟಕದಾದ್ಯಂತ ವಿಸ್ತರಿಸಲಾಯಿತು. ೧೯೭೧ರ ಜನಗಣತಿಯ ಪ್ರಕಾರ ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ ಹಾಸನ, ಕೋಲಾರ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ವ್ಯಾಪಿಸಿದರು. ೧೯೭೦ರ ಕೊಡಗಿನ ಗೆಝೆಟಿಯರ್‌ನಲ್ಲಿ ಜೇನು ಕುರುಬರ ಪ್ರತ್ಯೇಕವಾದ ವರ್ಗೀಕರಣ ಬರುತ್ತದೆ.

ವಿದ್ವಾಂಸರೊಬ್ಬರು ಜೇನು ಕುರುಬರು ಕಕೇಶಿಯನ್ನರಿಗಿಂತ ಮಂಗೋಲಿಯನ್ ಜನಾಂಗದವರನ್ನು ಹೋಲುತ್ತಾರೆಂದು, ಇವರ ಕೆನ್ನೆ ಮೂಳೆಯು ಉಬ್ಬಿಕೊಂಡು ಎದ್ದು ಕಾಣುವ ಹಾಗಿದೆ ಎನ್ನುತ್ತಾರೆ.

೧೯೩೯ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು ಇವರ ಸಂಸ್ಕೃತಿ ಜೀವನಕ್ರಮ ವಿಶಿಷ್ಟವಾದವು ಎಂದು ಗಮನಿಸಿ ಇವರ ಜೀವನಕ್ರಮ, ಲೋಕ ದೃಷ್ಟಿ, ಪ್ರಕೃತಿಯ ಬಗೆಗಿನ ಕಾಳಜಿ ಇವೆಲ್ಲವನ್ನೂ ಮೂಲವಾಗಿಟ್ಟುಕೊಂಡು 'ಕಾಕನಕೋಟೆ' ಎಂಬ ನಾಟಕ ರಚನೆಗೆ ಸ್ಫೂರ್ತಿಯನ್ನು ಪಡೆದಿರುವ ಸಮುದಾಯ ಜೇನುಕುರುಬರದು. ಹತ್ತು ಹದಿನೈದು ಗುಡಿಸಲುಗಳಲ್ಲಿ ವಾಸಿಸುವ ಜೀವನಕ್ರಮವೇ ವಿಶಿಷ್ಟವೆಂದು ವರ್ಣಿಸುತ್ತಾರೆ.

ಜೇನು ಬೇಟೆಯು ಇವರ ಪ್ರಧಾನ ವೃತ್ತಿಯಾಗಿರುವುದು. ಜೇನು ಬಿಡಿಸಿ ಅದರ ತುಪ್ಪವನ್ನಷ್ಟೇ ಒಳಗೊಳ್ಳದೆ ಬಿಳಿ ಮೊಟ್ಟೆಗಳಿರುವ ಜೇನು ತಟ್ಟೆಯನ್ನು ಆಹಾರವಾಗಿ ಬಳಸುತ್ತಾರೆ. ಜೇನಿನ ಹಲವು ಬಗೆಗಳನ್ನು ಇವರು ಹೇಳುತ್ತಾರೆ. ೧. ಹುತ್ತ, ಮರದ ಪೊಟರೆ, ಕಲ್ಲಿನಿಂದ ಕಟ್ಟಿರುವ ಗೋಡೆಗಳಲ್ಲಿ ಕಂಡು ಬರುವ ತುಡುವೆ ಜೇನು. ೨. ಹುತ್ತ ಪೊದೆಗಳಲ್ಲಿ ಕಟ್ಟುವ ನಾಯಿ ಜೇನು ಮತ್ತು ಕಡ್ಡಿಜೇನು. ೩. ಕೇಸರ ಮೊಲೆಯ ಎಮ್ಮೆ ಜೇನು. ೪. ಕಲ್ಲುಬಂಡೆ ದೊಡ್ಡಮರಗಳಲ್ಲಿ ಕಟ್ಟುವ ಹೆಜ್ಜೇನು. ಈ ಜೇನುಗಳನ್ನು ತೆಗೆಯುವುದು ಇವರಿಗೆ ಅಂತಹ ಕಷ್ಟದ ಕೆಲಸವೇನಲ್ಲ. ಏರಲು ಕಷ್ಟಸಾಧ್ಯವಾದ ಗಿಡಗಳು ಪೊಟರೆಗಳಲ್ಲಿ ಇರುವ ಜೇನುಗಳನ್ನು ಕೀಳುವುದರಲ್ಲಿ ಸಿದ್ಧ ಹಸ್ತರು. ಜೇನು ಕೀಳುವ ವಿಧಾನವೇ ವೈಶಿಷ್ಟ ಪೂರ್ಣವಾಗಿದ್ದು ಒಂದೊಂದು ಜೇನಿನಲ್ಲಿ ಹದಿನೈದು ಲೀಟರ್‌ಗಳವರೆಗೆ ಸಂಗ್ರಹವಾದ ಜೇನು ತುಪ್ಪವನ್ನು ಶುದ್ಧೀಕರಿಸಿ ಮಾರಾಟಮಾಡಿ ಜೀವನೋಪಾಯ ನಡೆಸುತ್ತಾರೆ.

ಜೇನು ಬೇಟೆಯಲ್ಲದೆ ಈ ಕುರುಬರು ಕೋಳಿ ದನಗಳ ಸಾಕಾಣಿಕೆಯನ್ನು ಮಾಡುತ್ತಾರೆ. ಕಾಡಿನಲ್ಲಿ ಸಿಗುತ್ತಿದ್ದ ಜೇನುಮೇಣ, ಅಂಟು, ಗೋಂದು, ಬೇಲದ ಹಣ್ಣು, ಹುಣಸೆ ಹಣ್ಣು ಇತ್ಯಾದಿ ಕಾಡು

ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದು, ಅಲ್ಲದೆ ಕಾಡಿನಲ್ಲಿ ಸಿಗುವ ಸೌದೆ ಕಡಿದು ಪೇಟೆಯಲ್ಲಿ ಮಾರಾಟಮಾಡಿ ಜೀವನಾವಶ್ಯಕ ಪದಾರ್ಥಗಳನ್ನು ತೆಗೆದುಕೊಂಡು ಹೋಗಿ ಜೀವನ ಸಾಗಿಸುತ್ತಾರೆ. ಅದನ್ನು ಬಿಟ್ಟರೆ ತಮ್ಮ ಹಾಡಿಯ ಅಕ್ಕ ಪಕ್ಕದ ಜಮೀನುದಾರರಲ್ಲಿ ಕೂಲಿ ಹೋಗುತ್ತಾರೆ.

ಕಾಡು ಕುರುಬರು ಮತ್ತು ಜೇನು ಕುರುಬರುಗಳ ನಡುವೆ ಕೌಟುಂಬಿಕ ಸಂಬಂಧಗಳು ಕಂಡುಬರುವುದಿಲ್ಲ. ಎರಡು ಸಮುದಾಯದವರಲ್ಲಿ ಪ್ರತ್ಯೇಕವಾದ ಪೂಜಾ ವಿಧಾನಗಳು ಇರುವುದನ್ನು ಗುರುತಿಸಬಹುದು. ಪ್ರಾದೇಶಿಕ ಭಿನ್ನತೆಯೇ ಸಹಜವಾಗಿ ಕೆಲವು ವೈವಿಧ್ಯಗಳನ್ನು ತಂದು ಕೊಟ್ಟಿರಬಹುದು.

ಜೇನು ಕುರುಬರು ಇತ್ತೀಚಿನ ದಿನಗಳಲ್ಲಿ ಖೆಡ್ಡಾದ ಮೂಲಕ ಆನೆಗಳನ್ನು ಹಿಡಿದು ಪಳಗಿಸುವಲ್ಲಿ ನಿಷ್ಣಾತರೆಂದು ಹೆಸರು ಪಡೆದಿದ್ದಾರೆ. ಶ್ರೇಷ್ಠ ಮಾವುತರು ಎನಿಸಿಕೊಳ್ಳುತ್ತಿದ್ದಾರೆ. ಆನೆಗಳಷ್ಟೇ ಅಲ್ಲದೆ ಅನೇಕ ಕಾಡು ಮೃಗಗಳನ್ನು ಹಿಡಿದು ಪಳಗಿಸುವುದರಲ್ಲಿ ಪ್ರಸಿದ್ಧರು. ಕಾಡಿನ ಪ್ರಾಣಿ ಮತ್ತು ಸಮಸ್ತ ಸಸ್ಯವರ್ಗವೆಲ್ಲದರ ಪರಿಪೂರ್ಣ ಜ್ಞಾನವಿರುವವರು ಈ ಜೇನು ಕುರುಬರು. ಇವರು ಬೆಂಕಿಯ ಪಕ್ಕದಲ್ಲಿ ಮಲಗುವ ಅಭ್ಯಾಸ ಮಾಡಿಕೊಂಡಿದ್ದಾರೆ. ಮೂರು ಕಾಲಮಾನಗಳಲ್ಲೂ ಬೆಂಕಿ ಇರಲೇಬೇಕು. ಇದಕ್ಕೆ ಕಾರಣವಾಗಿ ಕಾಡು ಪ್ರಾಣಿಗಳಿಂದ ಜೀವವನ್ನು ಸಂರಕ್ಷಿಸಿಕೊಳ್ಳಬಹುದು ಅಥವಾ ಮಳೆಗಾಲ ಚಳಿಗಾಲಗಳ ಕೊರೆತದಿಂದ ಪಾರಾಗಲು ಇರಬಹುದು.

ಭಾರತದಲ್ಲಿ ಬ್ರಿಟಿಷ್ ಅಧಿಕಾರಿ ಕೆನೆತ್ ಎಂಡರ್‌ಸನ್ ೧೯೩೦ರಲ್ಲಿ ತನ್ನ ಕೃತಿಯೊಂದರಲ್ಲಿ ಕಾಕನಕೋಟೆಯಲ್ಲಿ ಸಂಚರಿಸುತ್ತಿದ್ದಾಗ ಹುಲಿಯೊಂದು ಎದುರಾದಾಗ ಜೇನು ಕುರುಬನೊಬ್ಬ ಧೈರ್ಯದಿಂದ ತನ್ನನ್ನು ರಕ್ಷಿಸಿದನೆಂದೂ ಆ ಯುವಕನ ಶೌರ್ಯವನ್ನು ವರ್ಣಿಸಿದ್ದಾನೆ. ಮಲಬಾರ್ ಪ್ರದೇಶಕ್ಕೆ ಬಂದಿದ್ದ ವೆರಿಯರ್ ಎಲ್ವಿನ್ ಕೂಡ ಧೀರರಾದ ಜೇನು ಕುರುಬರನ್ನು ಸಂಪರ್ಕಿಸಿದ್ದಾರೆ. ಆದ್ದರಿಂದಲೇ ಈ ಜನಸಮುದಾಯಕ್ಕೆ ಜೇನುಕುರುಬ ಎನ್ನವುದು ಅನ್ವರ್ಥವಾಗಿದೆ.

೩. ಗೊಂಡ ಕುರುಬರು

ಹಾಲುಮತವು ಹಾಲಿನ ಮೂಲದ ಸಮುದಾಯವಾಗಿದ್ದರೆ, ಗಂಗಾಮತವು ನೀರಿನ ಮೂಲದ ಸಮುದಾಯವಾಗಿದೆ. ಹಾಲು ಮತ್ತು ನೀರನ್ನು ನಂಬಿ ವಿಶ್ವದ ಜೀವ ಜಗತ್ತು ಬದುಕಿದೆ. ಹೀಗಾಗಿ ವಿಶ್ವಮತ ಸ್ವರೂಪದಲ್ಲಿ ಹಾಲುಮತ ಗಂಗಾಮತಗಳು ರೂಢಿಗೆ ಬಂದವು. ಇವುಗಳನ್ನು ಪ್ರಕೃತಿ ಜನ್ಯಮತಗಳೆಂದೂ ಕರೆಯಬಹುದಾಗಿದೆ. ಹಾಲು ಮತ್ತು ನೀರಿನ ನಡುವೆ ನಿಕಟವಾದ ಬಾಂಧವ್ಯವಿದೆ. ಹಾಲು ಮತ್ತು ನೀರಿನ ಹಿನ್ನೆಲೆಯ ಮತಗಳು ಕರ್ನಾಟಕದಲ್ಲಿ ಕಾಣಸಿಗುತ್ತವೆ. ಅವೇ ಹಾಲುಮತ ಮತ್ತು ಗಂಗಾಮತಗಳು.

ಹಾಲುಮತವನ್ನು ಕುರುಬ, ಕುರುಮನ್ಸ, ಕಾಡುಕುರುಬ, ಜೇನುಕುರುಬ, ಕಾಟ್ಟುನಾಯಕನ್, ಗೊಂಡ ಮತ್ತು ರಾಜಗೊಂಡ ಇತ್ಯಾದಿ ಬುಡಕಟ್ಟುಗಳು ಹಾಗೂ ಕುರುಬ ಸಮುದಾಯದ ಕಳ್ಳುಬಳ್ಳಿಗಳು

ತಮ್ಮ ಮತವೆಂದು ನಂಬಿ ನಡೆದುಕೊಳ್ಳುವವು. ಇದು ಕುರಿ, ಆಡು, ದನ, ಎಮ್ಮೆ ಸಾಕಾಣಿಕೆದಾರರ ಮತ. ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರೇ ಕುರುಬರ ಮೂಲಿಗರು, ಇವರೇ ಹಾಲುಮತ ಸ್ಥಾಪಕರು.

ಭಾರತದ ಬುಡಕಟ್ಟುಗಳಲ್ಲಿ ಗೊಂಡರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಭಾರತದಾದ್ಯಂತ ಪಸರಿಸಿರುವ ಇವರ ಮಾತೃಭಾಷೆ ದ್ರಾವಿಡ ಮೂಲದ ಗೊಂಡಿ. ಅಲ್ಲದೆ ಪ್ರಾದೇಶಿಕ ಭಾಷೆಗಳನ್ನು ಆಡುವರು. ಇದರಲ್ಲಿಯ ಒಂದು ಪಂಗಡವು ಕರ್ನಾಟಕದಲ್ಲಿ ಹಾಲುಮತದ ಹುಟ್ಟಿಗೆ ಕಾರಣವಾಗಿದೆಯೆಂದು ಹಾಲುಮತ ಪುರಾಣದಲ್ಲಿ ಹೇಳಲಾಗಿದೆ. ದ್ರಾವಿಡ ಮೂಲದ ಇವರು ಬೀದರಿನ ಮೂಲನಿವಾಸಿಗಳೂ ಹೌದು.

ಗೊಂಡ, ರಾಜಗೊಂಡ, ಕುರುಬ, ದನಗಾರ, ಹಟಗಾರ, ಕರಗಾರ, ಪುಲೇಕರ, ಮ್ಯಾಸನಾಯಕ, ಗೊಲ್ಲ ಇವರೆಲ್ಲರೂ ಮೂಲತಃ ಒಂದೇ ಆಗಿದ್ದು ಹಾಲುಮತ ಮೂಲ. ಒಂದು ಪ್ರದೇಶದ ಮೂಲನಿವಾಸಿಗಳಾದ ಆದಿವಾಸಿ ಅಥವಾ ಬುಡಕಟ್ಟಿನವರನ್ನು ನಿರ್ದಿಷ್ಟವಾಗಿ ಇಂತಹುದೇ ಪ್ರದೇಶಕ್ಕೆ ಸೇರಿದವರೆಂದು ಹೇಳುವುದು ಕಷ್ಟಸಾಧ್ಯ. ಆದರೂ ಯೂರೋಪಿಯನ್ನರ ಆಗಮನಕ್ಕಿಂತ ಮುಂಚೆ ಆಯಾ ದೇಶದಲ್ಲಿ ನೆಲಸಿದ್ದವರನ್ನು ಆಯಾ ದೇಶದ ಮೂಲನಿವಾಸಿಗಳೆಂದು ಗುರ್ತಿಸಲಾಗುತ್ತದೆ. ಭಾರತಕ್ಕೆ ಯೂರೋಪಿಯನ್ನರು ಕಾಲಿಡುವ ಮುನ್ನ ಆರ್ಯರೂ, ಅದಕ್ಕೂ ಮುಂಚೆ ದ್ರಾವಿಡರು ಇದ್ದರಷ್ಟೆ, ಈ ಹಿನ್ನೆಲೆಯಲ್ಲಿ ದ್ರಾವಿಡರನ್ನು ಭಾರತದ ಮೂಲ ನಿವಾಸಿಗಳೆಂದು ಕರೆಯಬಹುದು. ಆದರೆ ಅದಕ್ಕೂ ಮೊದಲು ಕೋಲರು, ಗೊಂಡರು ಇವರ ಜೊತೆಗಿದ್ದರೆಂದು ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಬೀದರ್ ಒಂದು ಪುಟ್ಟ ಜಿಲ್ಲೆಯಾಗಿದ್ದು ಗೊಂಡರು ಹೆಚ್ಚಾಗಿ ವಾಸಿಸುತ್ತಾರೆ. ಇಲ್ಲಿ ಇವರನ್ನು ಕುರುಬರು ಮತ್ತು ದನಗಾರ ಎಂಬ ಹೆಸರಿನಿಂದಲೂ ಗುರ್ತಿಸುತ್ತಾರೆ. 'ಗೊಂಡ' ಎಂಬ ಹೆಸರಿನ ಉತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಒಮ್ಮತ ಅಭಿಪ್ರಾಯವು ಇದ್ದಂತೆ ತೋರದು, 'ಗೊಂಡ' ಎಂಬ ಶಬ್ದವು ತೆಲುಗು ಭಾಷೆಯ 'ಕೊಂಡ' ಎಂಬ ಶಬ್ದದಿಂದ ಬಂದದ್ದೆಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ. 'ಕೊಂಡ' ಎಂದರೆ ತೆಲುಗಿನಲ್ಲಿ 'ಗುಡ್ಡ ಅಥವಾ ಬೆಟ್ಟ' ಎಂದು ಅರ್ಥ. ಕಾಲಕ್ರಮೇಣ 'ಕ'ಕಾರವು 'ಗ'ಕಾರವಾಗಿ ಪರಿವರ್ತನೆಗೊಂಡು 'ಗೊಂಡ' ಎಂದು ರೂಪಾಂತರವಾಗಿರಬೇಕು"[೨೦] ಎಂಬುದು ಹಿಸ್ಲೋಪರ ವಾದವಾಗಿದೆ.

ಜನರಲ್ ಕನ್ನಿಂಗ್ ಹ್ಯಾಮರು "ಗೊಂಡ ಪದವು 'ಗೌಡ' ಎಂಬ ಶಬ್ದದಿಂದ ಉತ್ಪನ್ನವಾಗಿ ಅದು ಗೌರ>ಗೋದ>ಕೋದಗಳಾಗಿ ಪರಿವರ್ತನೆ ಹೊಂದಿ ಅನಂತರ 'ಗೊಂಡ'[೨೧] ಆಯಿತೆಂದು ಹಾ.ಮಾ.ನಾಯಕರ ವಾದವಾಗಿದೆ.

"ಗೊಂಡ ಎಂಬ ಪದವು 'ಗೋ' ಮತ್ತು 'ಅಂಡ' ಎಂಬ ಎರಡು ಶಬ್ದಗಳಿಂದ ಕೂಡಿದೆ. 'ಗೋ' ಎಂದರೆ "ಭೂಮಿ" ಮತ್ತು 'ಅಂಡ' ಎಂದರೆ 'ಪುತ್ರ' ಎಂದರ್ಥ. 'ಗೊಂಡ' ಪದದ ಅರ್ಥವು 'ಭೂಮಿಯ ಪುತ್ರ"[೨೧] ಎಂದಾಗುತ್ತದೆಂದು ವಿಠಲಸಿಂಹ ಧುರ್ವೆ ಅಭಿಪ್ರಾಯಪಡುತ್ತಾರೆ.

ಮೇಲ್ಕಾಣಿಸಿದ ತಜ್ಞರ ವಾದಗಳನ್ನಾಗಲಿ ಅಥವಾ ಅಭಿಪ್ರಾಯ ಭೇದಗಳನ್ನಾಗಲಿ ಅಸತ್ಯಗಳೆಂದು ಅಲ್ಲಗಳೆಯಲಾಗದು. ಆದರೆ ಅವೇ ಆತ್ಯಂತಿಕ ಸತ್ಯಗಳೆಂದೂ ನಿರ್ಣಯ ಮಾಡುವಂತಿಲ್ಲ. 'ಗೊಂಡ' ಪದವು ಮೂಲತಃ ಬೆಟ್ಟ, ಗುಡ್ಡ, ಪ್ರದೇಶವಾಚಕವಾಗಿ ನಂತರ ಜನಾಂಗ ವಾಚಕವಾಗಿರುವುದು ಕಂಡು ಬರುತ್ತದೆ. ಮೂಲವಾಗಿ ಈ ಪದದ ಉದಯವು ಕನ್ನಡ ಭಾಷೆಯಾಡುವ ಜನಾಂಗದಿಂದ ಆಗಿರುವ ಸಾಧ್ಯತೆಗಳು ಹೆಚ್ಚು. ಅದು ಗೋ ಮತ್ತು ಅಂಡ ಎಂಬ ನುಡಿಗಟ್ಟಿನಿಂದಾಗಿ ಸೃಷ್ಟಿ, ಸ್ಥಿತಿ, ಲಯಗಳ ಪ್ರತೀಕ ಹಾಗೂ ಪ್ರತ್ಯಯವಾಗಿ ಬಳಕೆಯಾಗುವುದು.

ಸಂಸ್ಕೃತಿ ಚಿಂತಕರಾದ ಶಂ.ಭಾ ಜೋಶಿಯವರು "ಗೊಂಡ ಪದದ ಒಳಾರ್ಥವನ್ನು ಒಡೆದು ನೋಡಿದಾಗ ಅದರ ಅರ್ಥ ಸ್ಪಷ್ಟವಾಗುವುದು ಅದರ ಮೂಲ 'ಗೋ + ಅ' ಎಂಬ ಎರಡಕ್ಷರಗಳಿಂದ ಉಂಟಾಗಿರಬಹುದು. ಕನ್ನಡ ನಿಘಂಟುಗಳಲ್ಲಿ 'ಗೋ' ಎಂದರೆ ಗೋವು, ಭೂಮಿ ಬೆಟ್ಟ ಮತ್ತು 'ಅ' ಎಂದರೆ 'ಅಜ' (ಆಡು ಅಥವಾ ಮೇಕೆ, ಮೇಷ ಅಥವಾ ಕುರಿ) ಎಂಬರ್ಥಗಳೂ ಇವೆ. ಗೋವು (ದನ)ಗಳ ಪಾಲಕರು ಗೋಪಾಲಕರು ಅಥವಾ ದ (ಧ)ನಗಾರರಾದರೆ ಅಜ (ಕುರಿ)ಗಳ ಪಾಲಕರು ಅಜಪಾಲಕರು ಅಥವಾ ಕುರಿಗಾರರು ಆಗಿರುವರು. ಕುರಿಗಾರರು ದ(ಧ)ನಗಾರರು ಬೇರೆಯಲ್ಲ. ಅವರು ಮೂಲತಃ ಪಶುಪಾಲಕರೆಂದರ್ಥ. 'ಗೋ' ಎಂದರೆ "ಭೂಮಿ" ಅದರಂತೆ 'ಕುರು' ಎಂದರೂ ಭೂವಿಶೇಷ, ಆದುದರಿಂದ ಗೋಪನೆಂದರೂ ಭೂಪತಿ ಕುರು(ಂ)ಬನೆಂದರೂ ಭೂಪ"[೨೨] ಎಂದು ಅಭಿಪ್ರಾಯಿಸುತ್ತಾರೆ.

'ಗೋ' ಎಂದರೆ 'ಭೂಮಿ' ಅದು ಗೋಲಾಕಾರವಾಗಿದೆ. 'ಅ' ಎಂದರೆ 'ಆಡು' ಅಥವಾ ಕುರಿ, ಅವುಗಳ ಹಿಕ್ಕೆಯು ಗೋಳ(ಅಂಡ) ಆಕಾರವಾಗಿದ್ದು ಭೂಮಿಯ ಪ್ರತಿರೂಪವಾಗಿದ್ದು ಹೀಗೆ ಗೋ+ಅಂಡ>ಗೊಂಡ ಎಂದು ವಿಕಸಿಸಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

"ಗೊಂಡ ಬುಡಕಟ್ಟಿನವರು ಅವರು ಸಾಮಾನ್ಯವಾಗಿ ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುವರು. ವಾಸ್ತವವಾಗಿ ಇವರು ಆಂಧ್ರ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಕಂಡು ಬರುವರು. ಇಂದಿಗೂ ಇವರಲ್ಲಿ ಖಂಡಗೊಂಡ, ಬೀರಗೊಂಡ, ತುಳಜಗೊಂಡ, ಶಿವಗೊಂಡ, ಶಣಗೊಂಡ ಎಂಬೀ ಗೊಂಡ ಪದ ಪ್ರತ್ಯಯಗೊಳ್ಳುವ ಹೆಸರುಗಳು ಕಂಡುಬರುತ್ತವೆ. ಇವರ ಹಲವಾರು ಸಂಪ್ರದಾಯಗಳು ಹಾಗೂ ಹವ್ಯಾಸಗಳು ಕುರುಬ ಸಮುದಾಯಕ್ಕೆ ಹೋಲಿಕೆಯಾಗುತ್ತವೆ"[೨೪] ಎಂದು ಶ್ಯಾಂಸಿಂಗ್ ಶಶಿ ವಾದ ಮಾಡುತ್ತಾರೆ.

'ಗೊಂಡಾರಣ್ಯ' ಈ ಪದದಲ್ಲಿ ಭಿನ್ನ ಭಾಷೆಯ ಎರಡು ಶಬ್ದಗಳಿವೆ. ಅವು ಗೊಂಡ ಮತ್ತು ಅರಣ್ಯ ಒಂದು ನುಡಿ ದೇಶಿಯಾದರೆ, ಮತ್ತೊಂದು ಸಂಸ್ಕೃತ ಪದ. ಗೊಂಡಾರಣ್ಯ ಎಂಬೀ ಬಗೆಯ ಪದ ಪ್ರಯೋಗವು ಇವೆರಡೂ ಜನ ಪರಸ್ಪರ ಹೊಂದಿಕೊಂಡು ಬದುಕಿದುದರ ಪ್ರತೀಕವಾಗಿರಲೂ ಸಾಕು.

೪. ಅಲೆಮಾರಿ ಕುರುಬರು

ಆಹಾರ ಮತ್ತು ಆಶ್ರಯಗಳೆರಡಕ್ಕೂ ನಿಸರ್ಗವನ್ನು ಅವಲಂಬಿಸಿದ್ದ ಮಾನವನು ತನ್ನ ಮೊದಲ ಘಟ್ಟದಲ್ಲಿ ಕಾಡುಸ್ಥಿತಿಯಲ್ಲಿದ್ದನು. ಆಗ ಅಲೆಮಾರಿ ಬದುಕಿನ ನೆಲೆಯಿಂದ ಸ್ಥಾನಿಕ ಜೀವನಕ್ಕೆ ಮುಂದುವರಿದಾಗ ಕಾಡಿನಲ್ಲಿ ಕಂಡ ಪ್ರಾಣಿಗಳನ್ನು ಬೇಟೆಯಾಡಿ ತರುವ ಬದಲು ತನ್ನ ಬುದ್ಧಿವಂತಿಕೆಯಿಂದ ಅವನ್ನು ಹಿಡಿದು ಪಳಗಿಸಿ ಸಾಕು ಪ್ರಾಣಿಗಳನ್ನಾಗಿ ಮಾಡಿಕೊಂಡನು. ಭೌತಿಕ ವಿಕಾಸವಾದಂತೆ ಬೌದ್ಧಿಕ ವಿಕಾಸವೂ ಆಯಿತು. ಇದರಿಂದ ಕಾಡು ಪ್ರಾಣಿಗಳನ್ನು ಪಳಗಿಸಿ ಸಾಕುವುದರ ಮೂಲಕ ಬದುಕಿನ ನೆಲೆ ಬೆಲೆಗಳನ್ನು ಕಂಡುಕೊಂಡನು. ಇದರಿಂದ ಈತನ ಬದುಕು ಕೃಷಿ ಸಂಸ್ಕೃತಿಗೆ ವರ್ಗಾವಣೆಯಾಯಿತು.

ಸಾಮಾಜಿಕ ಸಂರಚನೆಯಲ್ಲಿ ಅಲೆಮಾರಿತನವೂ ಒಂದು ಸಾಮಾಜಿಕ ಪ್ರಕ್ರಿಯೆ. ಸಮುದಾಯವೊಂದು ಸ್ಥಳದಿಂದ ಸ್ಥಳಕ್ಕೆ ಅಲೆದಾಡುವ ಋತುಮಾನಕ್ಕೆ ತಕ್ಕಂತೆ ಅಥವಾ ಶಾಶ್ವತವಾಗಿರಬಹುದು. ಇದಕ್ಕೆ ಕಾರಣಗಳು ಹಲವು. ಬಡತನ, ವಿದ್ಯಾಭ್ಯಾಸದ ಕೊರತೆ, ಉದ್ಯೋಗ, ಅತಿವೃಷ್ಟಿ, ಅನಾವೃಷ್ಟಿ ಇತ್ಯಾದಿ ಒತ್ತಡ, ಆಕರ್ಷಣೆ ಮತ್ತು ಅನಿವಾರ್ಯತೆ ಇವು ಅಲೆಮಾರಿತನಕ್ಕೆ ಒತ್ತಾಸೆಯಾಗಿ ಬರುತ್ತವೆ. ಇಂತಹ ಸಮುದಾಯಗಳಲ್ಲಿ ಅಲೆಮಾರಿ ಕುರುಬರೂ ಒಬ್ಬರಾಗಿದ್ದಾರೆ.

ಕೃಷಿ ಮತ್ತು ಪಶುಪಾಲನೆಯು ಮಾನವನ ಮೂಲಭೂತ ಪ್ರವೃತ್ತಿಗಳು. ಇವುಗಳೊಡನೆ ಪ್ರಕೃತಿಯ ನೇರ ಸಂಬಂಧವಿರುತ್ತದೆ. ರಾ.ದಿನೇಶರಾವ್ ಹೇಳುವಂತೆ "ಈ ಮೂಲ ವೃತ್ತಿಗಳನ್ನು ಅವಲಂಬಿಸಿಕೊಂಡು ಇತರ ವೃತ್ತಿಗಳು ಬೆಳೆಯುತ್ತವೆ. ಮೂಲವೃತ್ತಿಯು ನಾಗರೀಕ ಮಾನವನು ಕೈಗೊಂಡ ಪ್ರಥಮ ಕೆಲಸವಾಗಿರುತ್ತದೆ. ತನ್ನ ಆಹಾರ, ವಸತಿ, ಬಟ್ಟೆ ಈ ಮೂರು ಮೂಲ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಮಾಡುವ ಕೆಲಸ ಮೂಲ ವೃತಿಯಾಗಿರುತ್ತದೆ. ಸಾಮಾನ್ಯವಾಗಿ ಮೂಲವೃತ್ತಿ ಅಥವಾ ಪ್ರಥಮ ವೃತ್ತಿ ಮಾನವನಿಗೂ ಪ್ರಕೃತಿಗೂ ನೇರವಾದ ಸಂಬಂಧವನ್ನು ಕಲ್ಪಿಸುತ್ತದೆ"[೩೬] ಎಂದು ಅಲೆಮಾರಿತನದ ಸ್ವರೂಪ ಮತ್ತು ಮೂಲವೃತ್ತಿಯನ್ನು ವಿವರಿಸುತ್ತಾರೆ.

ಅಲೆಮಾರಿ ಕುರುಬರು ಕುರಿಗಳ ಆಹಾರನ್ವೇಷಣೆಗಾಗಿ ಹಾಗೂ ಆರ್ಥಿಕಾಭಿವೃದ್ಧಿಗಾಗಿ ಊರಿಂದೂರಿಗೆ ಅಲೆಯುತ್ತಾರೆ. ಕುರಿಸಾಕಾಣಿಕೆ ಕುರುಬರ ಅಲೆದಾಟಕ್ಕೆ ಪ್ರಮುಖ ಕಾರಣ. ಇವರು ಊರ ಹೊರಗೆ ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸುತ್ತಾರೆ. ಕುರಿಗಳಿಗೆ ಮೇವು ನೀರು ಸಿಗುವೆಡೆಗಳಲ್ಲಿ ಬೀಡುಬಿಡುತ್ತಾರೆ.

ಕೃಷಿಯು ಪಶುಪಾಲನೆಯುನ್ನು ಒಳಗೊಂಡಿರುವುದರಿಂದ ಪಶುಪಾಲನೆಯಿಂದ ಹೊರತಾದ ಕೃಷಿಯಿರಲಾರದು. ಅದೇ ರೀತಿ ಕೃಷಿಯ ಹೊರತಾಗಿ ಪಶುಪಾಲನೆಯಿಲ್ಲ. ಈ ಅವಿನಾಭಾವ ಸಂಬಂಧಕ್ಕೆ

ಾರತದ ನಿಸರ್ಗದತ್ತ ಸಂಪನ್ಮೂಲಗಳೇ ಕಾರಣ. ಆದಿಮಾನವನು ಸಾಕುಪ್ರಾಣಿಗಳಾದ ಕುರಿಮೇಕೆಗಳನ್ನು ಂಗೋಪನೆ ಮಾಡುತ್ತ ತನ್ನ ಹೊಟ್ಟೆಯನ್ನು ತುಂಬಿಕೊಳ್ಳುತ್ತಿದ್ದ. ಪ್ರಸ್ತುತ ಸನ್ನಿವೇಶದಲ್ಲಿ ಅಲೆಮಾರಿ, ಅರೆ ಅಲೆಮಾರಿ ಮತ್ತು ಸ್ಥಳೀಯ ವಿಧಾನಗಳನ್ನು ಅನುಸರಿಸಿ ಕುರಿ ಸಂಗೋಪನೆ ಮಾಡುತ್ತಿದ್ದಾನೆ. ಸರ್ಗದ ಸಂಪನ್ಮೂಲಗಳ ಜೊತೆಯಲ್ಲಿ ತನ್ನ ಅಭಿವೃದ್ಧಿಯನ್ನು ಮಾಡಿಕೊಳ್ಳುತ್ತಿದ್ದಾನೆ. ಹೀಗೆ ಅಲೆಮಾರಿ ಧಾನವನ್ನು ಅನುಸರಿಸಿ ಕುರಿಗಳ ಸಂಗೋಪನೆ ಮಾಡುವ ಕುರುಬ ಸಮುದಾಯದ ಒಳಪಂಗಡವೇ ಅಲೆಮಾರಿ ಕುರುಬರು' ಎನಿಸಿಕೊಳ್ಳುತ್ತಾರೆ.

ಜೀವನ ನಿರ್ವಹಣೆಗೋಸ್ಕರ ಮೂಲವೃತ್ತಿಯನ್ನು ತೊರೆಯದೆ ಕುಟುಂಬ ಸಮೇತ ವಲಸೆ ಬಂದು ಕುರಿಗಳಿಗೆ ಮೇವು ನೀರು ಹುಡುಕಿಕೊಳ್ಳಬೇಕಾಗುತ್ತದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವರ್ಷವಿಡೀ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುವವರನ್ನು 'ಅಲೆಮಾರಿ ಕುರುಬ' 'ಸಂಚಾರಿ ಕುರುಬ' ಅಥವಾ 'ಬೆಳಗಾಂವ್ ಕುರೇರು' ಎಂದು ಕರೆಯಲಾಗುತ್ತದೆ. ಕುರಿಸಂಗೋಪನೆಗೆಂದು ವಲಸೆಬಂದ ಇವರು ತಮಗೆ ಅನುಕೂಲವೆನಿಸಿದ ಭೂ ಪ್ರದೇಶದಲ್ಲಿ ಅಲೆದಾಡಿ ಕುರಿಸಂಗೋಪನೆ ಮಾಡದೆ, ತಮ್ಮ ಕುರಿ ಮೇಕೆಗಳಿಗೆ ನೀರು ಎಲ್ಲಿ ಸಮಗ್ರವಾಗಿ ಲಭ್ಯವಾಗುವುದೋ ಆ ಪ್ರದೇಶಗಳಲ್ಲಿ ಅಲೆದಾಡಿ ಜೀವನವನ್ನು ಸಾಗಿಸುತ್ತಾರೆ. ಅವರ ಬದುಕು ಕುರಿಸಂಗೋಪನೆಗೆ ಸೀಮಿತ. ಅವರು ಆ ವೃತ್ತಿಯನ್ನು ಬಿಟ್ಟು ಬೇರ್ಯಾವ ವೃತ್ತಿಯನ್ನು ಅರಿಯರು.

ಅಲೆಮಾರಿ ಕುರುಬರು ಹೆಚ್ಚಾಗಿ ಬೆಳಗಾವಿ ಜಿಲ್ಲೆಯವರು. ಆದ್ದರಿಂದ ಇವರಿಗೆ ಬೆಳಗಾವಿ ಕುರುಬರು ಅಥವಾ ಬೆಳಗಾಂವ್ ಕುರೇರು ಎಂದು ಕರೆಯುತ್ತಾರೆ. ಬೆಳಗಾವಿ ಜಿಲ್ಲೆಯಿಂದ ಕುರಿ ಸಂಗೋಪನೆಗಾಗಿ ವಲಸೆ ಬಂದ ಇವರ ಚಲನ ವಲನಗಳು ಕರ್ನಾಟಕದ ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ, ಹಾವೇರಿ, ಧಾರವಾಡ, ದಾವಣಗೆರೆ, ಶಿವಮೊಗ್ಗ ಹಾಗೂ ಚಿಕ್ಕಮಗಳೂರಿನವರೆಗೆ ಅಲೆಮಾರಿಗಳಾಗಿ ಸಂಚರಿಸುತ್ತಾರೆ.

ವಾಸ್ತವವಾಗಿ ಬುಡಕಟ್ಟು ಸಮುದಾಯವಾದ ಅಲೆಮಾರಿ ಕುರುಬರು ನಿರ್ದಿಷ್ಟ ಗ್ರಾಮ ಅಥವಾ ಸ್ವಸ್ಥಳಗಳಲ್ಲಿ ನೆಲೆಯೂರಿ ಕುರಿಗಳ ಸಾಕಾಣಿಕೆ ಮಾಡುತ್ತಿಲ್ಲ. ತಮ್ಮ ಕುರಿ, ಮೇಕೆಗಳಿಗೆ ಯಾವ ಸ್ಥಳಗಳಲ್ಲಿ ಮೇವು ನೀರು ದೊರೆಯುತ್ತದೆಯೋ ಆ ಪ್ರದೇಶಗಳಲ್ಲಿ ಅಲೆದಾಡುತ್ತಾ ಕುರಿಸಂಗೋಪನೆ ಮಾಡುತ್ತಾರೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಗುಡ್ಡ ಬೆಟ್ಟ ಹಾಗೂ ಗಟ್ಟಿ ಪ್ರದೇಶಗಳಲ್ಲಿ ಅಲೆದಾಡುತ್ತಾರೆ. ಮಳೆಗಾಲದ ನಂತರ ಅಂದರೆ ಚಳಿಗಾಲ ಮತ್ತು ಬೇಸಿಗೆ ಕಾಲದಲ್ಲಿ ಮೇವು ನೀರು ದೊರೆಯುವ ಹೊಲಗದ್ದೆಗಳಲ್ಲಿ ಅಲೆದಾಡುತ್ತ ಕುರಿ ಮೇಯಿಸುತ್ತಾರೆ.

ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಗಳಿಗೆ ನೆಲೆಗಳು ಅಥವಾ ಗ್ರಾಮಗಳು ಎಂದು ಕರೆಯುವುದರ ಬದಲು ಅವರು ಅಲೆದಾಡುವ ಗ್ರಾಮಗಳ ಹೊಲಗದ್ದೆಗಳು ಅಥವಾ ಗುಡ್ಡಗಾಡು

ಪ್ರದೇಶವೆಂದು ಕರೆಯುವುದು ಸೂಕ್ತವೆನಿಸುತ್ತದೆ. ಈ ಸಮುದಾಯವು ಭಾರತದಾದ್ಯಂತ ವ್ಯಾಪಿಸಿರುವುದರಿಂದ ಇವರಲ್ಲಿ ಪ್ರಾದೇಶಿಕ ಭಿನ್ನ ಹೆಸರು, ಭಾಷೆ, ಆಚಾರ-ವಿಚಾರ, ಸಂಸ್ಕೃತಿ ಕಂಡು ಬರುತ್ತದೆ. ಅಲ್ಲದೆ ಇದು ಸಮುದಾಯದ ವಲಸೆ ಮಾತ್ರವಾಗಿರದೆ ಸಾಂಸ್ಕೃತಿಕ ವಲಸೆಯೂ ಆಗಿರುತ್ತದೆ.

ಮೂಲತಃ ಒಂದೇ ಕುಲಗೋತ್ರಕ್ಕೆ ಸೇರಿದ ಇವರು ಕಾಲಕ್ರಮೇಣ ಬೇರೆ ಬೇರೆ ಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಆದರೂ ಅಲೆಮಾರಿ ಕುರುಬರು ತಮ್ಮಮೂಲ ವೃತ್ತಿ, ಸಂಸ್ಕೃತಿ ಸಂಪ್ರದಾಯಗಳನ್ನು ಪರಂಪರಾಗತವಾಗಿ ಉಳಿಸಿಕೊಂಡು ಬಂದಿರುವರು. ಕರ್ನಾಟಕದಲ್ಲಿ ವಿಶೇಷವಾಗಿ ಚಿಕ್ಕೋಡಿ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ವಲಸೆ ಬಂದವರು ಈ ಗ್ರಾಮಗಳಲ್ಲಿ ಅವರದೇ ಆದ ಸ್ವಂತ ಮನೆಗಳಿವೆ. ಆ ಮನೆಗಳಲ್ಲಿ ವಯಸ್ಸಾದ ಕುಟುಂಬದ ಹಿರಿಯರು, ಬಾಣಂತಿಯರು, ಕೆಲವೊಮ್ಮೆ ಚಿಕ್ಕಪುಟ್ಟ ಮಕ್ಕಳೊಂದಿಗೆ ವಾಸಿಸುತ್ತಾರೆ. ಮನೆಗಳಲ್ಲಿ ಇಲ್ಲದಿದ್ದರೆ ಬೀಗ ಹಾಕಿರಲಾಗುತ್ತದೆ. ಕೆಲವೊಮ್ಮೆ ಕುಟುಂಬದ ಆಬಾಲ ವೃದ್ಧರಾದಿಯಾಗಿ ಕುರಿಸಂಗೋಪನಾ ವೃತ್ತಿಯಲ್ಲಿ ಭಾಗಿಯಾಗಿರುತ್ತಾರೆ. ಹೀಗೆ ಯಾವುದೇ ಸಮುದಾಯದಲ್ಲಿ ಮೂಲಭೂತ ಸಂಸ್ಕೃತಿಯ ಕೆಲ ಅಂಶಗಳು ಕಾಲಗತಿಸಿದರೂ ಉಳಿದುಕೊಂಡು ಬಂದಿರುತ್ತವೆ ಎಂಬುದನ್ನು ಡಾ.ವೈ.ಕೆ. ಗುಂಡಕರ್ಜಗಿಯವರ ಮಾತುಗಳನ್ನು ಅವಲೋಕಿಸಿದರೆ "ಒಂದು ವಂಶದಿಂದ ನಿಷ್ಪನ್ನವಾದ ಮತ್ತು ಮೂಲತಃ ಬದಲಾಯಿಸಲಾಗದ ಅಂಗವಿಕಾಸ ಮತ್ತು ಪರಿಮಾಣಗಳ ವಿಶೇಷ ರೀತಿಯ ಹೊಂದಾಣಿಕೆಯಿಂದ ಒಂದು ಮಾನವ ಪಂಗಡ"[೩೬] ವೆಂದು ಕರೆಯುತ್ತಾರೆ. ಭಾರತೀಯ ಸಾಂಸ್ಕೃತಿಕ ವಿಕಾಸದ ಕೊಡುಗೆಯಲ್ಲಿ ಅಲೆಮಾರಿ ಕುರುಬರದೂ ಪಾತ್ರವಿದೆಯೆಂಬುದನ್ನು ಅಲ್ಲ ಗಳೆಯಲಾಗದು.

೫. ಹತ್ತಿಕಂಕಣ ಕುರುಬರು

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮುದಾಯವು ಒಟ್ಟಿಗೆ ಇದ್ದುಕೊಂಡು ಬೆಳೆದುಬಂದಿವೆ. ತಮ್ಮದೇ ಸಾಮಾಜಿಕ ಕಟ್ಟುಪಾಡುಗಳೊಂದಿಗೆ ಜೀವಿಸುತ್ತಲೂ ಇವೆ. ಮಾನವನ ವಿಕಾಸವಾದಂತೆಲ್ಲಾ ತನ್ನ ಮನೋಭಾವಕ್ಕನುಸಾರವಾಗಿ ಬದುಕನ್ನು ರೂಪಿಸಿಕೊಳ್ಳತೊಡಗಿದ. ತನ್ನ ಮನೋಧರ್ಮಕ್ಕೆ ಒಪ್ಪಿತವಾಗುವ ಧರ್ಮವನ್ನು ಸ್ವೀಕರಿಸಿ ಒಂದು ಪ್ರತ್ಯೇಕವಾದ ಸಮುದಾಯವನ್ನು ನಿರೂಪಿಸಿಕೊಂಡ. ಒಂದೇ ಸಮುದಾಯಗಳಲ್ಲಿ ಆಚಾರ-ವಿಚಾರಗಳು ವಿಭಿನ್ನವಾಗುತ್ತಲೇ ಆ ಸಮುದಾಯದಲ್ಲಿ ಒಳಪಂಗಡಗಳ ಉಗಮಕ್ಕೆ ಕಾರಣವಾಗಿದೆ.

ಭಾರತದ ಸಂದರ್ಭದಲ್ಲಿ ವಿಶೇಷವಾಗಿ ಹಿಂದೂ ಧರ್ಮೀಯರಲ್ಲಿ ಸಾಮಾಜಿಕ ಧಾರ್ಮಿಕ ರೀತಿ-ರಿವಾಜುಗಳು ಹಾಗೂ ರಕ್ತಸಂಬಂಧದ ಆಧಾರದಲ್ಲಿ ಒಂದೇ ಸಮುದಾಯ ಅಥವಾ ಜನಾಂಗವನ್ನು ವಿವಿಧ ಪಂಗಡ ಹಾಗೂ ಉಪಪಂಗಡ (ಒಳಪಂಗಡ)ಗಳಾಗಿ ವಿಭಜಿಸಿದೆ. ಇದೊಂದು ಬಗೆಯ ಸಾಮಾಜಿಕ ವರ್ಗೀಕರಣವಾಗಿದ್ದು ಜನತೆಯು ಒಪ್ಪಿ ಪಾಲಿಸುವಂತಹುದೇ ಆಗಿದೆ. ಈ ಮಾನದಂಡದ

ಆಧಾರದ ಮೇಲೆ ಪ್ರಧಾನವಾಗಿ ಮೂರು ಪಂಗಡಗಳಾಗಿ ವಿಭಜಿಸಲಾಗಿದೆ. ಅವುಗಳೆಂದರೆ ಉಣ್ಣೆಕಂಕಣದವರು, ಹತ್ತಿಕಂಕಣದವರು ಮತ್ತು ಹಂಡೆ(ಅಂಡೆ) ಕುರುಬರು. ಈ ವಿಂಗಡಣೆಯನ್ನು ಕುರಿತು 'ಆರ್.ಇ. ಎಂಥೋವನ್'ರವರು ಬಾಂಬೆ ಗೆಝೆಟಿಯರ್‌ನಲ್ಲಿ ಕುರುಬ ಸಮುದಾಯವನ್ನು' "There are two main divisions of Kurubas, Hatti Kanakana or Cotton wristle weavers and unnikankanas or wool Wristle weavers, who eat together but do not inter marry. In Dharwad two more divisions are found jande and urasaliyava, The hatti Kankanas are devided into khailari, sanagar, Hatkar and Hande. Kurubas of these the first three eat together and intermarry."[೩೭] ಎಂದು ವಿಭಜಿಸಿದ್ದಾರೆ.

ಮೂಲತಃ ಮೂರು ಪಂಗಡಗಳು ಒಂದೇ ಆಗಿದ್ದು ಕಾಲಾಂತರದಲ್ಲಿ ಇವುಗಳಿಂದ ಅಥವಾ ಬೇರೆ ಬೇರೆ ಕಾರಣಗಳಿಂದ ಹಲವಾರು ಒಳಪಂಗಡಗಳು ರೂಪುಗೊಳ್ಳತೊಡಗಿದವು. ಅಂತವುಗಳಲ್ಲಿ ಹತ್ತಿಕಂಕಣ ಕುರುಬರು ಎಂಬ ಒಳಪಂಗಡವೂ ಒಂದು. ವಿವಾಹ ಸಂದರ್ಭದಲ್ಲಿ ಹತ್ತಿಯ ನೂಲನ್ನು ಕಂಕಣ ಮಾಡಿ ಕಟ್ಟುವುದರಿಂದ ಇವರಿಗೆ ಹತ್ತಿಕಂಕಣ ಕುರುಬರು ಎಂದು ಹೆಸರಾಗಿದೆ.

ಪುರಾಣದ ಉಲ್ಲೇಖದ ಪ್ರಕಾರ ಕುರುಬರ ಮೂಲ ಪುರುಷನಾದ ಉಂಡಾಡು ಪದ್ಮಣ್ಣನು ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿಯಿಂದ ಜನಿಸಿದ ಸಂತಾನಕ್ಕೆ ಹತ್ತಿಕಂಕಣದವರೆಂತಲೂ ಕರೆಯುತ್ತಾರೆ. ಇವರನ್ನು ಹೊಸಕುರುಬರು ಎನ್ನುವುದುಂಟು. ಇವರು ಪ್ರಮುಖವಾಗಿ ಕೃಷಿಯಾಧಾರಿತ ಸಮುದಾಯ, ಎಲ್ಲಿ ಫಲವತ್ತಾದ, ಕೃಷಿಗೆ ಯೋಗ್ಯವಾದ ಬಯಲು ಪ್ರದೇಶದಲ್ಲಿ ಹೆಚ್ಚಾಗಿ ಹತ್ತಿಕಂಕಣ ಕುರುಬರು ಕಂಡು ಬರುತ್ತಾರೆ. ಹತ್ತಿಕಂಕಣ ಕುರುಬರು ಕರ್ನಾಟಕದಲ್ಲಿ ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಬಳ್ಳಾರಿ, ಗುಲಬರ್ಗಾ, ಮೈಸೂರು, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳಲ್ಲಿ ಪ್ರಧಾನವಾಗಿ ಕಂಡುಬರುತ್ತಾರೆ. ಇವರು ಕೃಷಿಯ ಜೊತೆಗೆ ಕುರಿಸಾಕಾಣಿಕೆ, ಕಂಬಳಿ ನೇಯುವುದು ಮಾಡುತ್ತಾರೆ. ಒಳಪಂಗಡದವರಲ್ಲಿ ಕೆಲವರು ಸಸ್ಯಾಹಾರಿಗಳಾದರೆ, ಮತ್ತೆ ಕೆಲವರು ಮಾಂಸಾಹಾರಿಗಳಾಗಿದ್ದಾರೆ. ಎಲ್ಲೆಲ್ಲಿ ವೀರಶೈವ ಧರ್ಮದ ದಟ್ಟವಾದ ಪ್ರಭಾವವಾಯಿತೋ ಅಂತಹ ಕಡೆಗಳಲ್ಲಿ ಮಾಂಸಾಹಾರವು ವರ್ಜಿತವಾಗಿ ಸಸ್ಯಾಹಾರಿಗಳಾಗಿದ್ದಾರೆ.

೧೮೮೪ರಲ್ಲಿ ಮುಂಬಯಿ ಕರ್ನಾಟಕದ ಪ್ರದೇಶದಲ್ಲಿ ಕುರುಬರ ಬಗ್ಗೆ ಸಂಶೋಧನೆ ಕೈಗೊಂಡ 'ಜೇಮ್ಸ್ ಕ್ಯಾಂಬೆಲ್'ರು ಹೀಗೆ ಹೇಳುತ್ತಾರೆ.

"They are devided into Hattikankanas or cotton wristle weavers and unni kankanar or wool wristle weavers. These eat together but donot inter marry. The Hatti kankanas

or cotton wristles are far the most numerous; but though they hold many village head ships they are not so well off as the Handevazir or lingayat shepherds. The unnikankanas or wool wristles are a smaller body and are found small numbers everywhere and in considerable numbers in the poorer parts of Badami. Hatti kankanas or cotton wristles are devided into khailaris, sanagars and Hattikars who eat together and inter marry..... Hatti kankanas and Unnikankanas live as husbandmen. In the bearer parts of the district the Hattikankanas have flocks of 500 to 600 sheep, make blankets of the wool and sell the lambs. The unnikankanas do not own so many sheep as the Hatti kankanas, but there is a rich settlement at the Durga or tomb close to Bijapur. Who own flocks of sheep, weave blankets, till the land and lend money".[೩೮]

ಹತ್ತಿಕಂಕಣ ಎಂಬ ಭಿನ್ನತೆಯು ಅವರು ಲಗ್ನದ ಸಂದರ್ಭದಲ್ಲಿ ಕಟ್ಟಿಕೊಳ್ಳುವ ಕಂಕಣದ ಆಧಾರದ ಮೇಲೆ ಆಯಾ ಒಳಪಂಗಡಕ್ಕೆ ಹೆಸರು ಬರುತ್ತದೆ. ಈ ಎರಡೂ ಒಳಪಂಗಡಗಳಲ್ಲಿ ಕೊಟ್ಟು ತರುವ ಸಂಬಂಧವು ನಿಷಿದ್ಧ. ಕಾರಣ ಮೇಲು ಕೀಳು ಎಂಬ ಭಾವನೆ. ಒಂದು ನಿರ್ದಿಷ್ಟ ಒಳಪಂಗಡಕ್ಕೆ ಸೇರಿದ ಕುರುಬರು ಎಲ್ಲಿಗೆ ಹೋದರೂ ಅಣ್ಣ ತಮ್ಮಂದಿರೇ ಹೊರತು ನೆಂಟರಾಗುವುದಿಲ್ಲ.

ಹತ್ತಿಕಂಕಣವೆಂದು ಹೆಸರು ಪಡೆದಿರುವುದಕ್ಕೆ ತಗರಪವಾಡದ ಕೆಳಗಿನ ಪದ್ಯಗಳನ್ನು ಅವಲೋಕಿಸಬಹುದಾಗಿದೆ.

"ಕಂದಯ್ಯ ನಿನ್ನ ಹಿರಿ ಹೆಂಡತಿ ಲಿಂಗಮ್ಮಗೆ
ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿಕಂಕಣದ ಕುರುಬರೆಂದು
ನಿಂದು ಶಿವನು ನಿರೂಪಿಸಿದ
ನಿನ್ನ ಸಂತತಿಯವರುಗಳೆಲ್ಲ ಚೊಕ್ಕ
ಚಿನ್ನ ಹತ್ತಿಯ ಕಂಕಣದ
ಬಿನ್ನಾಣಕಾರರೆನಿಸಿ ಬಾಳುವರು
ಚೊಕ್ಕ ಚಿನ್ನಕ್ಕೆ ಸಮನಾಗಿ"[೩೯]
(ತಗರ ಪವಾಡ ೨ನೇ ಸಂಧಿ ಪದ್ಯ ಸಂಖ್ಯೆ ೫೯-೬೦)

ಅಂದರೆ ಪದ್ಮಗೊಂಡನ ಹಿರಿಯ ಹೆಂಡತಿ ಲಿಂಗಮ್ಮನ ಹೊಟ್ಟೆಯಲ್ಲಿ ಜನಿಸಿದ ಹದಿಮೂರು ಮಂದಿ ಮಕ್ಕಳು ಹತ್ತಿಕಂಕಣದವರೆಂದು ಹೆಸರು ಪಡೆಯುತ್ತಾರೆ.

ಸಿದ್ಧಮಂಕ, ಚರಿತೆಯ ಪ್ರಕಾರ ಉಂಡಾಡು ಪದ್ಮಣ್ಣನಿಗೆ ಇಬ್ಬರು ಮಡದಿಯರು. ಹಿರಿಯಾಕೆ ಚಿಮ್ಮಲಬ್ಬೆ, ಕಿರಿಯಾಕೆ ಜಿಂಕಬ್ಬೆ(ಜಿಂಕಾದೇವಿ). ಈ ಜಿಂಕಬ್ಬೆಯ ಮದುವೆಯ ಸಂದರ್ಭದಲ್ಲಿ ಸುರಗಿ, ಕಂಕಣ, ಬಾಸಿಂಗ, ದಂಡೆ ಮತ್ತು ಮಂಗಳ ಸೂತ್ರಗಳೆಂಬ ಪಂಚ ವಿಧಿಗಳಿಗೆ ಹತ್ತಿಯ ಎಳೆಗಳನ್ನು ಬಳಸಿದ್ದರಿಂದ ಈಕೆಯ ಸಂತಾನವೇ ಮುಂದೆ ಹತ್ತಿಕಂಕಣ ಇಲ್ಲವೆ ಬಿಳಿಯ ಕಂಕಣ ಅಥವಾ ಹೊಸ ಕುರುಬರು ಎಂಬ ಅಭಿದಾನವಾಯಿತು. ಇವರಿಗೂ ಉಣ್ಣೆಕಂಕಣದವರಿಗೂ ನೂರಾರು ವರ್ಷಗಳಿಂದ ಅಣ್ಣತಮ್ಮಂದಿರೆಂಬ ಭಾವನಾತ್ಮಕ ಸಂಬಂಧದಿಂದಾಗಿ ಕೊಡುಕೊಳೆಯು ನಿಷಿದ್ಧವಾಗಿರುವುದಕ್ಕೆ ವೈಜ್ಞಾನಿಕ ಕಾರಣಗಳೂ ಇಲ್ಲದಿಲ್ಲ. ಆದರೆ ಇತ್ತೀಚೆಗೆ ಆಧುನಿಕತೆಯ ಪ್ರಭಾವವೋ ವಿದ್ಯಾವಂತರಲ್ಲಿ ಮೂಡಿದ ವೈಚಾರಿಕ ಪ್ರಜ್ಞೆಯಿಂದಲೋ ಈ ಎರಡೂ ಒಳಪಂಗಡಗಳ ನಡುವೆ ಸಂಬಂಧಗಳು ಬೆಳೆಯುತ್ತಿವೆ. ಮಹಾರಾಷ್ಟ್ರದಲ್ಲಿ ಸನಗಾರರು ವೃತ್ತಿಯಿಂದ ಕಂಬಳಿ ನೇಕಾರರಾದರೂ ಹತ್ತಿಕಂಕಣ ಕುರುಬರೆಂದು ಹೇಳಿಕೊಳ್ಳುವುದು ಕಂಡುಬರುತ್ತದೆ. ಜಾಡರಲ್ಲಿ ಹತ್ತಿಕಂಕಣ ಕಟ್ಟುವ ಪದ್ಧತಿಯು ಇಂದಿಗೂ ಗೋಚರಿಸುತ್ತದೆ.

ಪ್ರಾಚೀನ ಕಾಲದಿಂದಲೂ ಕುರುಬರು ಉಣ್ಣೆಕಂಕಣವನ್ನು ಧರಿಸುತ್ತಾ ಬಂದಿರುವಾಗ ಹತ್ತಿಕಂಕಣದ ಪ್ರವೇಶವಾದುದು ಯಾವಾಗ ಆಯಿತೆಂಬುದಕ್ಕೆ ಉತ್ತರವನ್ನು ಕಂಡುಕೊಂಡರೆ ಈ ಕಂಕಣ ಭೇದದ ಹಿಂದಿರುವ ನಿಗೂಢತೆಯು ಅರಿವಾಗುತ್ತದೆ.

೬. ಉಣ್ಣೆಕಂಕಣ ಕುರುಬರು

ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಯನ್ನು ಒಳಗೊಂಡ ಆಯಾಮಗಳು ಅನಾವರಣಗೊಳ್ಳುವ ಸಂಸ್ಕೃತಿಯೊಳಗೆ ನಿಂತು ಅದರ ಚಲನಶೀಲತೆಯನ್ನು ದಾಖಲಿಸುವಾಗ ಕರ್ನಾಟಕದಲ್ಲಿ ಕುರುಬ ಸಮುದಾಯದ ಸಂಸ್ಕೃತಿಯು ಪ್ರಧಾನವಾದುದು. ಹಾಲುಮತ ಸಮುದಾಯದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಒಳಪಂಗಡವೆಂದರೆ ಉಣ್ಣೆಕಂಕಣ ಕುರುಬರು. 'ಕಂಕಣ' ಎನ್ನುವುದು ವಿಶಾಲವಾದ ಅರ್ಥವನ್ನು ಪಡೆದುಕೊಂಡಿದೆ. 'ಕುಲ' 'ಪಂಗಡ' ಮತ್ತು 'ಮನೆತನ' ಎನ್ನುವ ಅರ್ಥದಲ್ಲಿ ಜೀವಂತವಾಗಿದೆ. ಅಲ್ಲದೆ ಕಂಕಣ ಎನ್ನುವುದು ಅವರ ಕುಲವನ್ನು ಗುರುತಿಸಿಕೊಳ್ಳುವುದಕ್ಕೆ ಬಳಕೆಯಾದ ಸಾಂಕೇತಿಕ ವಸ್ತುವೂ ಹೌದು. ಹತ್ತಿಕಂಕಣದವರು ಹತ್ತಿಯನ್ನು ಸಾಂಕೇತಿಕವಾಗಿ ಬಳಸಿದರೋ ಅಂತೆಯೇ ಉಣ್ಣೆಯನ್ನು ಉಣ್ಣೆಕಂಕಣದವರು ಸಾಂಕೇತಿಕ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ.

ಉಣ್ಣೆಯು ಉಣ್ಣೆಕಂಕಣದವರ ಕುಲಚಿಹ್ನೆಯೂ ಆಗಿದೆ. ಒಂದು ಮಾತನ್ನು ಇಲ್ಲಿ ಗಮನಿಸಬೇಕು. "ಪ್ರಾರಂಭದಲ್ಲಿ ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು ದೈವವಾಗಿರಲಿಲ್ಲ. ಆದರೆ ಬರುಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸ ಬಯಸಿತು. ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರಿಗೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು.

ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪುಗೊಂಡಿರಬೇಕು ಎನ್ನುವುದು ಅನೇಕ ವಿದ್ವಾಂಸರ ಅಭಿಪ್ರಾಯ"[೪೦] ಎಂದು ಡಾ. ಹಿ.ಚಿ.ಬೋರಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ.

ಕುರುಬರ ಮೂಲ ಪುರುಷನಾದ ಉಂಡಾಡು ಪದ್ಮಣ್ಣನ ಎರಡನೇ ಹೆಂಡತಿಯ ಸಂತಾನದವರಿಗೆ ಉಣ್ಣೆಕಂಕಣದವರೆಂದು ಕರೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ಸುರಗಿ, ಕಂಕಣ, ಬಾಸಿಂಗ ದಂಡೆ ಮತ್ತು ಮಂಗಳ ಸೂತ್ರಗಳೆಂಬ ಪಂಚ ವಿಧಿಗಳಿಗೆ ಉಣ್ಣೆಯ ಎಳೆಯನ್ನು ಬಳಸಿದ್ದರಿಂದ ಈಕೆಯ ಸಂತಾನವೇ ಮುಂದೆ ಉಣ್ಣೆಕಂಕಣ ಅಥವಾ ಕರಿಕಂಕಣ ಅಥವಾ ಹಳೆಕುರುಬ ಎಂಬ ಹೆಸರಾಯಿತು.

ಉಣ್ಣೆಕಂಕಣವನ್ನು ಕುರಿತು ತಗರ ಪವಾಡದಲ್ಲಿ ಈ ಹೆಸರು ಹೇಗೆ ಬಂದಿತು ಎಂಬುದನ್ನು ವಿವರಿಸಲಾಗಿದೆ.

"ಕಂದಯ್ಯ ನಿನ್ನ ಚಿಕ್ಕ ಹೆಂಡತಿ ಸಿರಿವಂತೆ
ಗಂಡು ಮಕ್ಕಳು ಮೂರು ಮಂದಿ
ಉಣ್ಣೆಕಂಕಣದ ಕುರುಬರೆಂದು ಶಿವಪೇಳಿ
ಮುಂದಣ ಕುರುಹ ಪೇಳಿದನು (ಸಂಧಿ-೨, ಪದ್ಯ-೫೭)

ನಿಮ್ಮಯ ತಂದೆ ಪದ್ಮಣ್ಣ ರಕ್ಕಸಿಯನು
ಉಮ್ಮಳದಲಿ ಕೂಡಿಕೊಂಡ
ಕರ್ಮಹೀನನು ಆದ ಅವಳ ಮಕ್ಕಳ ಮರಿ
ತಮ್ಮ ರಕ್ಷಿಸುಯೆಂದು ಬಹರು (ಸಂಧಿ-೩, ಪದ್ಯ ೮೮)

ಬಂದು ನಿನ್ನನ್ನು ಕಂಡು ಮುಕ್ತಿ ಪಡೆದ ತಾವು
ಮುಂದೆ ಉಣ್ಣೆಯ ಕಂಕಣದ
ಕಂದಗಳೆನಿಸಿ ಬಾಳುವರು ರಕ್ಕಸಿಯೊಡ
ಲಿಂದ ಜನಿಸಿದ ಕಾರಣದಿ"[೪೧] (ಸಂಧಿ ೩, ಪದ್ಯ-೮೯)

ಹೀಗೆ ಸರೂರು ಶಾಂತಮುತ್ತಯ್ಯನ ವಂಶಾವಳಿಯನ್ನು ಹೇಳುವಾಗ ಒಳಪಂಗಡಗಳ ಪ್ರಸ್ತಾಪವನ್ನು ಮಾಡಲಾಗಿದೆ. ತಗರ ಪವಾಡದಲ್ಲಿ ಕುರುಬರ ಮೂಲ ಪುರುಷನಾದ ಉಂಡಾಡು ಪದ್ಮಣ್ಣನ ಎರಡನೇ ಹೆಂಡತಿಯಾದ ಸಿರಿವಂತೆಯ ಮೂರು ಮಂದಿ ಗಂಡುಮಕ್ಕಳು ಮುಂದೆ ಉಣ್ಣೆಕಂಕಣ ಕುರುಬರೆಂದು ಅಭಿದಾನ ಪಡೆದರು ಎನ್ನುತ್ತದೆ. ಸಿದ್ಧಮಂಕ ಚರಿತೆಯನ್ವಯ ಪದ್ಮಣ್ಣನ ಹಿರಿಯ ಹೆಂಡತಿಯಾದ ಚಿಮ್ಮಲಬ್ಬೆಯ ವಿವಾಹ ಸಂದರ್ಭದಲ್ಲಿ ಬಳಸಿದ ಕುರಿಯ ತುಪ್ಪಟದಿಂದ ಹೊಸೆದ ದಾರವೇ ಮುಂದೆ ಉಣ್ಣೆಕಂಕಣ ಕುರುಬರು ಎಂಬ ಅಭಿದಾನಕ್ಕೆ ಪಾತ್ರವಾಗಿದ್ದಾರೆ.

ಉಣ್ಣೆಕಂಕಣದ ಕುರುಬರು ತುಮಕೂರು, ಬೀದರ್, ಮಂಡ್ಯ, ಕೊಡಗು, ಬೆಳಗಾವಿ, ಮೈಸೂರು, ಹಾಸನ ಈ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಗುಡ್ಡ, ಬೆಟ್ಟ, ಹುಲ್ಲುಗಾವಲು ಇರುವಲ್ಲಿ ಈ ಸಮುದಾಯದವರು ಹೆಚ್ಚಿಗೆ ಇದ್ದಾರೆ.

ಇದೇ ವಿಚಾರವನ್ನು ಕುರಿತು ಚಂದ್ರಕಾಂತ ಬಿಜ್ಜರಗಿಯವರು ತಮ್ಮ 'ಕುರುಬದರ್ಪಣ' ಕೃತಿಯಲ್ಲಿ "ಇಬ್ಬರು ಅಣ್ಣತಮ್ಮಂದಿರಲ್ಲಿ ಒಬ್ಬ ಕುರಿಕಾಯುತ್ತ ಅಡವಿಯಲ್ಲಿ ಉಳಿದ. ಇನ್ನೊಬ್ಬ ಒಕ್ಕಲುತನ ಮಾಡುತ್ತ ಹಳ್ಳಿಯಲ್ಲಿ ಉಳಿದ. ಕಾಡಿನಲ್ಲಿರುವವನ ಮದುವೆಯ ಸಮಯದಲ್ಲಿ ಉಣ್ಣೆಯ ನೂಲಿನ ಸುರಗಿ ಸುತ್ತಿದರು. ಹಳ್ಳಿಯಲ್ಲಿರುವವನ ಮದುವೆಯ ಸಂದರ್ಭದಲ್ಲಿ ಉಣ್ಣೆಯ ನೂಲು ಸಿಗಲಿಲ್ಲ, ಅದಕ್ಕಾಗಿ ಹತ್ತಿಯ ನೂಲಿನ ಸುರಗಿ ಸುತ್ತಿ ಹತ್ತಿಯ ಕಂಕಣವನ್ನು ಕಟ್ಟಿದರು. ಹೀಗಾಗಿ ಅಡವಿಯಲ್ಲಿರುವವನ ಸಂತತಿಯವರು ಉಣ್ಣೆಕಂಕಣದವರಾದರು. ಹಳ್ಳಿಯಲ್ಲಿರುವವನ ಸಂತತಿಯವರು ಹತ್ತಿಕಂಕಣ ದವರಾದರು."[೨] ಎಂದಿದ್ದಾರೆ.

ಜನಪದರಲ್ಲಿರುವ ಸಂಕಥನಗಳನ್ನು ಗಮನಿಸಿದರೆ ಮೂಲದಲ್ಲಿ ಪಶುಪಾಲನೆಯನ್ನೇ ಮುಖ್ಯ ಕಸುಬಾಗಿ ಹೊಂದಿ ಅಲೆಮಾರಿಗಳಾಗಿದ್ದ ಎಲ್ಲ ಕುರುಬರೂ ಉಣ್ಣೆಕಂಕಣವನ್ನೇ ಕಟ್ಟುತ್ತಿದ್ದರು. ನಂತರದ ಹಂತದಲ್ಲಿ ಕುರುಬರು ಪಶುಪಾಲನೆಯ ಜೊತೆಯಲ್ಲಿಯೇ ಕೃಷಿ ಕ್ಷೇತ್ರಕ್ಕೆ ಪ್ರವೇಶ ಪಡೆದುದರ ಸಂಕೇತವಾಗಿ ಹತ್ತಿಕಂಕಣ ಬಳಿಕೆ ಬಂದಿರಬಹುದು. ಈ ದೃಷ್ಟಿಯಿಂದ ಉಣ್ಣೆಕಂಕಣ ಪ್ರಾಚೀನವೆಂದೂ, ಹತ್ತಿಕಂಕಣ ಅರ್ವಾಚೀನವೆಂದೂ ಗುರುತಿಸಲಾಗಿದೆ. ಈ ಅಭಿಪ್ರಾಯಕ್ಕೆ ಮತ್ತೊಂದು ಸಮರ್ಥನೆಯನ್ನು ನೀಡಬಹುದು.

ಡಾ.ಕೆ.ಎಂ.ಮೈತ್ರಿಯವರ ಪ್ರಕಾರ "ಹಾಲುಮತ ಪುರಾಣಗಳಲ್ಲಿಯ ವಿಭಿನ್ನ ಪಾಠಾಂತರಗಳು ಕುರುಬ ಜನಾಂಗದ ಮೂಲವನ್ನು ಅರಿಯಲು ಆಕರಗಳಾಗುತ್ತವೆ. ಆದಿಗೊಂಡ ಆದಮ್ಮರಿಂದ ಗೊಂಡ ಕುರುಬರ ಉಗಮವು ಶಿವಪಾರ್ವತಿಯರ ಆಶಯದ ಮೇರೆಗೆ ನೆರವೇರಿಸುವುದು. ಶಿವ ಪಾರ್ವತಿ,ಗಣಪತಿ, ಷಣ್ಮುಖಿ ಎಲ್ಲರಿಂದ ಕುರಿಕಾಯಿಸುವುದು, ಕೃಷಿಕ ಶಿವ ಪದ್ಮನಿಂದ ಕುರಿಗಳನ್ನು ಶೋಧಿಸುವುದು ಮತ್ತು ಪಾಲಿಸುವುದು, ಉಣ್ಣೆ ಮತ್ತು ಹತ್ತಿಕಂಕಣಗಳೆಂಬ ಭೇದ ಬೆಳಸಿ ಜನಾಂಗ ಒಡೆಯುವುದು, ಉಣ್ಣೆ ಕನಿಷ್ಟ, ಹತ್ತಿ ಶ್ರೇಷ್ಟವೆಂದು ನಂಬಿಸಿ ಭೇದ ಭಾವಕ್ಕೆ ನೀರೆರೆಯುವುದು, ಬೀರೇಶ್ವರನನ್ನು ಸಾಂಸ್ಕೃತಿಕ ವೀರನನ್ನಾಗಿ ನಿರೂಪಿಸುವುದು ಇತ್ಯಾದಿಗಳೆಲ್ಲವೂ ವೀರಶೈವ ಮತ ಪ್ರೇರಿತ ಹತ್ತಿಕಂಕಣದ ಹೆಗ್ಗಳಿಕೆಗೆ ಒಳಗಾದ ಲೇಖಕರ ಅಥವಾ ಕವಿಗಳ ಕಲ್ಪಿತ ರೂಪವಾಗಿರುವುದು. ಇದರಿಂದ ಕುರುಬ ಜನಾಂಗದ ಮೂಲ ಇತಿಹಾಸ ಮರೆಮಾಚಿದಂತಾಗಿದೆ. ಕುರಿ, ಉಣ್ಣೆ, ಉಣ್ಣೆಕಂಕಣ, ಇವು ಕುರುಬರ ಕುರುಹುಗಳು, ಹಾಗೆಂದು ಕೃಷಿಕರು ಕುರುಬರು ಅಲ್ಲವೆಂದಲ್ಲ. ಅವರ ಮೂಲವು ಕುರಿಗಾರಿಕೆಯೇ ಆಗಿರುವುದು. ಆದರೆ ಕೃಷಿಗೆ ಕೂಡಿಕೊಂಡ ಕುರುಬರು ಕುರಿ ಪಾಲನೆ ಕನಿಷ್ಟವೆಂದು ಬಗೆದು ಕುರಿಪಾಲಕರನ್ನು ಕೀಳಾಗಿ ಕಂಡರು. ಇದು ಸಂಸ್ಕೃತೀಕರಣದ ಪ್ರಭಾವವಾಗಿರುವುದು ಅಲ್ಲಲ್ಲಿ ಕುರಿ, ಕುರುಬ, ಕಂಬಳಿ ಇವು

ಪವಿತ್ರ ಹಾಗೂ ಸತ್ಯದ ಪ್ರತೀಕಗಳೆಂದು ಸಂದರ್ಭೋಚಿತವಾಗಿ ಗೌರವಿಸಲಾಗಿದೆ. ಇವು ಕುರುಬರ ಕುರುಹುಗಳಾಗಿವೆ"[೫೦] ಎನ್ನುತ್ತಾರೆ. ಹಳೆಯ ಕುರುಬರೆಂದು ಕರೆಯಲ್ಪಡುವ ಇವರು ಕುರಿಸಾಕಾಣಿಕೆ ಕುರಿಯಿಂದ ಉಣ್ಣೆಯನ್ನು ತೆಗೆದು ನೂಲ ತಯಾರಿಸುವುದು, ಕಂಬಳಿ ನೇಯುವುದು ಮುಂತಾದ ವಸ್ತುಗಳನ್ನು ತಯಾರಿಸುವುದು ಉಣ್ಣೆಕಂಕಣದ ಸಾಂಕೇತಿಕತೆಯನ್ನು ಹೇಳುತ್ತದೆ. ಈ ಎರಡು ಪಂಗಡಗಳಲ್ಲಿ ಈ ಕಂಕಣದ ಭಿನ್ನತೆಯನ್ನು ಬಿಟ್ಟರೆ ಬೇರೆ ಯಾವುದೇ ವ್ಯತ್ಯಾಸಗಳು ಕಂಡು ಬರುವುದಿಲ್ಲ.

೭. ಹಂಡೆ (ಅಂಡೆ) ಕುರುಬರು

ಕುರುಬ ಸಮುದಾಯದಲ್ಲಿ ಪ್ರಮುಖವಾಗಿ ಮೂರು ಪಂಗಡಗಳಿರುವುದಾಗಿ ಕುರುಬರ ಚರಿತ್ರೆಯ ಲೇಖಕರಾದ ವಿ.ಆರ್. ಹನುಮಂತಯ್ಯನವರು ಮತ್ತು ಇನ್ನಿತರ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಮೂರು ಪಂಗಡಗಳಲ್ಲಿ 'ಹಂಡೆ' ಕುರುಬರು ಎನ್ನುವುದು ಪ್ರಮುಖವಾದುದು. ಇವರಿಗೆ ಹಂಡೆರಾವುತರು, ಹಂಡೆವಜೀರರು ಎಂಬ ಪರ್ಯಾಯ ಹೆಸರುಗಳೂ ಇವೆ.

ಹಂಡೆ(ಅಂಡೆ) ಎನ್ನುವ ಪದವೇ ವಿಸ್ಮಯಕಾರಿಯಾದುದು. ೧೮ನೇ ಶತಮಾನದಲ್ಲಿ ಪ್ರಸನ್ನ ವೆಂಕಟದಾಸರು ಮೊದಲಿಗೆ ಈ ಪದವನ್ನು ಬಳಸುತ್ತಾರೆ. ಇದೊಂದು ಬಂಬು ಸಂಬಂಧಿಯಾದ ವಸ್ತುವಾಗಿದ್ದು ಬಾಂಬರರು ಅಥವಾ ಕಳ್ (ಕುರುಬ) ಕುಲದವರು ದ್ರವಪದಾರ್ಥಗಳನ್ನು ಮುಖ್ಯವಾಗಿ ಹಾಲು, ಹೈನು ಹಾಕಲು ಸಿದ್ಧಪಡಿಸಿಕೊಂಡಿದ್ದರು. ಅದೊಂದು ದಪ್ಪ ಬಂಬುವಿನಿಂದ ಮಾಡಿದ ಪಾತ್ರೆ. ಎರಡು ಗೆಣ್ಣುಗಳಿರುವ ಬಂಬಿನ ತುಂಡಿನಲ್ಲಿ ಒಂದು ಗೆಣ್ಣಿನ ಒಳಭಾಗದ ಪೊರೆ ತೆಗೆದು ಮತ್ತೊಂದು ಗೆಣ್ಣಿನ ಪೊರೆಯನ್ನು ತೆಗೆಯದೆ ತಳಮಾಡಿಕೊಂಡು ಬಳಸಲಾಗುತ್ತಿತ್ತು. ಗೆಣ್ಣುಗಳ ಹೊರಭಾಗದ ಮೇಲೆ ಉಣ್ಣೆದಾರ, ನಾರು, ಚರ್ಮದ ಪಟ್ಟಿಯನ್ನು ಕಟ್ಟಿ ಕೈಯಲ್ಲಿ ಹಿಡಿದುಕೊಳ್ಳಲು ಇಲ್ಲವೆ ಸಿಕ್ಕಿಸಿಕೊಳ್ಳಲು ಇದನ್ನು ಸಿದ್ಧಪಡಿಸುತ್ತಿದ್ದರು. ಹೀಗೆ ಅಂಡೆ(ಹಂಡೆ)ಗಳನ್ನು ಬಳಸಿ ಹಾಲು ಹೈನು ಪದಾರ್ಥಗಳನ್ನು, ಜೇನುತುಪ್ಪ ಮುಂತಾದವುಗಳನ್ನು ಋಷಿಮುನಿಗಳಿಗೆ ಇತರರಿಗೆ ಪೂರೈಸುತ್ತಿದ್ದರು. ಆದ್ದರಿಂದ ಇವರಿಗೆ ಹಂಡೆ (ಅಂಡೆ) ಕುರುಬರೆಂದು ಹೆಸರಾಯಿತು.

ಡಾ. ವೀರೇಶ ಬಡಿಗೇರ ಅವರು ಅಭಿಪ್ರಾಯ ಪಡುವಂತೆ "ಕುರುಬ ಜನಾಂಗದಲ್ಲಿ ಮೂರು ಪಂಗಡಗಳಿರುವುದಾಗಿ ಕುರುಬರ ಚರಿತ್ರೆಯ ಲೇಖಕರು ಮತ್ತು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮೂರು ಪಂಗಡಗಳೆಂದರೆ ಹತ್ತಿಕಂಕಣ, ಉಣ್ಣೆಕಂಕಣ, ಹಂಡೆ ಕುರುಬರೆಂದು ಈ ಪಂಗಡಗಳಿಂದ ಹಲವಾರು ಉಪಪಂಗಡಗಳು ಜನ್ಮತಾಳಿವೆ. ಮೂರು ಪಂಗಡಗಳಲ್ಲಿ ಹಂಡೆ ಕುರುಬರು ಎನ್ನುವುದು ಪ್ರಮುಖ ಪಂಗಡವಾಗಿರುವುದು. ಕರ್ನಾಟಕ ನೆರೆಯ ಪ್ರಾಂತಗಳಾದ ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಕೀರ್ತಿವೆತ್ತು ಬಾಳಿ ಬದುಕಿದ ಬಹುಬಲಾಢ್ಯ ಜನಾಂಗ. ಹಂಡೆ ಕುರುಬರಿಗೆ ಹಂಡೆರಾವುತರು, ಹಂಡೆ ವಜೀರರು ಎಂದು ಹೆಸರುಗಳಿವೆ. ಇವರು ಕುರಿಗಳ ಸಾಕಾಣಿಕೆಗಿಂತ ಕಂಬಳಿ

ನೇಯ್ಗೆಯಲ್ಲಿ ಮುಂದೆ ಇರುವಂತವರು. ಸಾಹಸಪ್ರಿಯರು, ಯುದ್ಧ ಪ್ರವೀಣರು, ಆಡಳಿತಗಾರರು ಆಗಿದ್ದ ಬಗ್ಗೆ ವಿವರಗಳು ಸಿಗುತ್ತವೆ"[೪೪] ಎಂದಿದ್ದಾರೆ.

ಹಂಡೆ ಕುರುಬರಲ್ಲಿ ಕೆಲವರು ಅರಸರಾಗಿ, ಸೇನಾದಳದ ಮುಖ್ಯಸ್ಥರಾಗಿ, ವಜೀರರಾಗಿ ಕುದುರೆ ಸವಾರರಾಗಿ, ರಾವುತರೆಂದು ಕರೆಸಿಕೊಂಡವರು. "ಕರ್ನಾಟಕದ ಕೆಲವೊಂದು ಜಿಲ್ಲೆಗಳಲ್ಲಿ ಭಾರತಕ್ಕೆ ಪ್ರಜಾಪ್ರಭುತ್ವ ಬರುವ ಪೂರ್ವದಲ್ಲಿ ವಿಜಾಪುರ, ಧಾರವಾಡ, ಬಳ್ಳಾರಿ, ಬೆಳಗಾವಿಗಳಲ್ಲಿ ಹಂಡೆ ಕುರುಬರೆಂದರೆ ಹಳ್ಳಿಗಳ ಗೌಡಿಕೆ ಮಾಡಿಕೊಂಡು ಬಂದವರು. ವಿಜಾಪುರ ಈ ಮೂರು ಜಿಲ್ಲೆಗಳಲ್ಲಿರುವ ಲೇಖಕರು ಹೇಳುವಂತೆ ಧಾರವಾಡ, ಬೆಳಗಾಂವ, ವಿಜಾಪುರ ಈ ಮೂರು ಜಿಲ್ಲೆಗಳಲ್ಲಿರುವಷ್ಟು ಜನಸಂಖ್ಯೆ ಮತ್ತೆಲ್ಲಿಯೂ ಇರುವುದಿಲ್ಲ. ಮುದ್ದೇಬಿಹಾಳ ತಾಲೂಕಿನ ಪ್ರತಿ ಹಳ್ಳಿಗಳ ಗೌಡಿಕೆ ಹಂಡೆ ಕುರುಬರದೇ ಹೆಚ್ಚು"[೪೫] ಎಂದಿದ್ದಾರೆ.

ಖ್ಯಾತ ಸಂಶೋಧಕರಾದ ಶಂ.ಭಾ ಜೋಶಿಯವರು ಹಂಡೆ ಶಬ್ದಾರ್ಥವನ್ನು ಈ ರೀತಿಯಾಗಿ ಪ್ರತಿಪಾದಿಸುವರು. "ಸಂಸ್ಕೃತ ಮತ್ತು ಕಂದಮಿಳಿನಲ್ಲಿ ಅಂಡೆ= ಅಮ್ದೆ ಇದರೊಳಗಿನ 'ಅಮ್' ಪದವು ರಸಾರ್ಥಿ ಸೂಚಕವಿರುವುದಾಗಿ ತಮಿಳು ಕೋಶದಿಂದ ಗೊತ್ತಾಗುತ್ತದೆ"[೪೬] ಎಂದಿದ್ದಾರೆ.

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಕುರುಬ ಜನಾಂಗದಲ್ಲಿ ಅಂಡರ್, ಇಡೈಯರ್ ಎಂಬ ಪಂಗಡಗಳು ಕಂಡುಬರುತ್ತವೆ. ಸಾಕು ಪ್ರಾಣಿಗಳ ಪಾಲನೆ ಇವರ ವೃತ್ತಿ. ಬಹುಶಃ ಇಲ್ಲಿ ಹೇಳಲಾದ ಅಂಡಾರ್ ಎಂಬುದೇ ಅಂಡೆ ಎಂದು ಬಳಕೆಗೆ ಬಂದು ಕಾಲಕ್ರಮದಲ್ಲಿ ಅರ್ಥ ಮರೆಯಾಗಲು ಪರಿಚಿತವಾದ ಪದ ಕುರುಬ ಎಂಬುದನ್ನು ಸೇರಿಸಿ ಅಂಡೆ ಕುರುಬ ಎಂಬ ಪದವನ್ನ ಸೃಷ್ಟಿಸಿಕೊಂಡಂತಿದೆ. ಇದೇ ಮುಂದೆ ಹಂಡೆ ಕುರುಬ ಎಂಬ ರೂಪ ತಾಳಿದೆ ಎಂದು ಡಾ. ಎಂ.ಎಂ.ಕಲಬುರ್ಗಿ ಊಹೆ ಮಾಡಿದ್ದಾರೆ.

ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಇವರಿಗೆ ಹಂಡೆ ವಜೀರರೆಂದು ಕರೆಯಲಾಗುತ್ತಿತ್ತು. ಅದರಲ್ಲೂ ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ ಈ ಒಳಪಂಗಡಕ್ಕೆ ಹಂಡೆ ವಜೀರರೆಂದು ಕರೆಯಲ್ಪಟ್ಟಿದ್ದಾರೆ. ವಜೀರ ಎನ್ನುವ ಶಬ್ದವು ಪರ್ಷಿಯನ್ ಭಾಷೆಯಿಂದ ಉರ್ದುವಿಗೆ ಬಂದು ಮುಸ್ಲಿಮರ ಆಡಳಿತ ಕಾಲದಲ್ಲಿ ಈ ಪದವನ್ನು ಸರದಾರರಿಗೆ ಪಾಳೆಯಗಾರರಿಗೆ ಬಳಸುತ್ತಿದ್ದರು. ವೃತ್ತಿವಾಚಕ ಶಬ್ದವನ್ನೇ ವಿಜಾಪುರ ಜಿಲ್ಲೆಯ ಹಂಡೆ ಕುರುಬರು ಹಂಡೇ ವಜೀರರೆಂದು ಕರೆಯಲ್ಪಡುತ್ತಾರೆ. ಇವರು ಹೊಯ್ಸಳ ಅರಸರ ಅಧೀನದಲ್ಲಿ ಕುದುರೆ ಸವಾರರಾಗಿದ್ದರು. ಹೀಗಾಗಿ ಧಾರವಾಡ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಂಡೆ ರಾವುತರೆನಿಸಿಕೊಂಡರು. ಪ್ರಾದೇಶಿಕವಾಗಿ ವಿಭಿನ್ನ ಹೆಸರುಗಳಿಂದ ಕರೆಯಿಸಿಕೊಂಡರೂ ಮೂಲತಃ ಇವರೆಲ್ಲ ಹಂಡೆ ಕುರುಬರೆ ಎಂದು ತಿಳಿದು ಬರುತ್ತದೆ.

ಕುರುಬ ಸಮುದಾಯದಲ್ಲಿ ಈ ಒಳಪಂಗಡವು ಕರ್ನಾಟಕದ ವಿಜಾಪುರ, ಧಾರವಾಡ, ಬೆಳಗಾವ್ ಜಿಲ್ಲೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿಯೂ ಮಧ್ಯ ದಕ್ಷಿಣ ಕರ್ನಾಟಕದ ಜಿಲ್ಲೆಗಳಾದ ಚಿತ್ರದುರ್ಗ,

ತುಮಕೂರು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿರಳವಾಗಿಯೂ ಕಂಡು ಬರುತ್ತಾರೆ. ಆದರೆ ಇತ್ತೀಚೆಗೆ ಈ ಪಂಗಡಕ್ಕೆ ಸೇರಿದ ಜನರು 'ಹಂಡೆಕುರುಬ' ಎಂಬ ಪದದಲ್ಲಿಯ 'ಕುರುಬ' ಎಂಬುದನ್ನು ಬಿಟ್ಟು 'ಹಂಡೆ ವಜೀರ' ಎಂದು ಮಾಡಿಕೊಂಡಿದ್ದಾರೆ. ಅದರಲ್ಲಿಯೂ "ವೀರಶೈವ ಹಂಡೆವಜೀರ" ಎಂದು ಕರೆದುಕೊಂಡು ಕುರುಬ ಮೂಲವನ್ನು ತೊರೆದು ವೀರಶೈವದೆಡೆಗೆ ವಾಲುತ್ತಿರುವುದು ಸ್ಪಷ್ಟವಾಗುತ್ತದೆ.

"ಲಿಂಗಧಾರಿಗಳಾದ ಇವರು 'ಕುರುಬ' ಹೆಸರಿನಿಂದ ಗುರುತಿಸಿಕೊಳ್ಳುವುದಕ್ಕೆ ಇಷ್ಟಪಡದಿರುವುದು ಮತ್ತು ಕುರುಬರಿಗಿಂತಲೂ ತಾವು ಶ್ರೇಷ್ಠರು ಎಂಬ ಭಾವನೆ ಬೆಳೆದಿರಬಹುದು. ಕೆಲವೇ ವರ್ಷಗಳ ಹಿಂದೆ ಬೇರೆ ಕುರುಬರಿಗೂ ಮತ್ತು ಹಂಡೆ ಕುರುಬರಿಗೂ ಹೆಚ್ಚು ತಾರತಮ್ಯವಿಲ್ಲದೆ ನೀರು ಬಳಕೆ ನಡೆಯುತ್ತಿದ್ದವು. ಆದರೆ ಹೆಣ್ಣುಗಂಡುಗಳ ಕೊಡು-ಕೊಳ್ಳುವಿಕೆಯು ನಡೆಯುತ್ತಿರಲಿಲ್ಲ. ಇತ್ತೀಚೆಗೆ ಕೆಲವರು ಕೊಡು-ಕೊಳ್ಳುವಿಕೆಯ ವ್ಯವಹಾರವನ್ನೂ ಮಾಡಿದ್ದಾರೆ"[೪೭] ಎಂದು ಎಸ್.ಸಿ.ಪಾಟೀಲರು ಹೇಳಿದ್ದಾರೆ.

ಹಂಡೆ ಕುರುಬರಿಗೆ 'ಕೃಷ್ಣದೇವರಾಯನ ದಿನಚರಿ'ಯಲ್ಲಿ 'ಕುರುಬ ರಾವುತರು' ಎಂದು ಕರೆದಿರುವುದು ಇವರಿಗೆ ಎನಿಸುತ್ತದೆ. ಇನ್ನುಳಿದ ಕುರುಬರಂತೆ ಕುರಿಸಾಕುವುದನ್ನೇ ಹೆಚ್ಚಾಗಿ ಕೈಗೊಂಡವರಲ್ಲ. ಕುರಿ ಸಂಗೋಪನೆಗಿಂತ ಕಂಬಳಿ ನೇಯುವ ವೃತ್ತಿಯನ್ನೇ ಕೈಗೊಂಡದ್ದೇ ಹೆಚ್ಚು. ಹಾಲು, ಮೊಸರು ಮಾರುತ್ತಿದ್ದ ಅಥವಾ ವರ್ತನೆ ಕೊಡುತ್ತಿದ್ದ ವೃತ್ತಿಯನ್ನು ಕೈಗೊಂಡಿರಬಹುದು. ಘಟ್ಟದ ಕೆಳಗಿನ ಹಂಡೆ ಕುರುಬರು ಕುರಿಗಳ ಬದಲಿಗೆ ಹಸು ಎಮ್ಮೆಗಳನ್ನು ಸಾಕುತ್ತಿದ್ದರೆಂದೂ, ಅವುಗಳ ಹಾಲು, ಮೊಸರು, ತುಪ್ಪ ಇವನ್ನು ಮಾರಿಕೊಂಡು ಜೀವನ ಸಾಗಿಸುತ್ತಿದ್ದರೆಂದೂ ಹೇಳಲಾಗಿದೆ. ಬಹು ಹಿಂದೆಯೇ ವೀರಶೈವ ಧರ್ಮವನ್ನು ಸ್ವೀಕರಿಸಿ ಹಂಡೆ ಕುರುಬರು ಹಂಡೆ ಲಿಂಗಾಯತರಾದುದು ಸಾಂಸ್ಕೃತಿಕ ಪಲ್ಲಟವೇ ಆಗಿರುವುದನ್ನು ಅವಲೋಕಿಸಬಹುದು.

೮. ಒಡೆಯರು

ಭಾರತೀಯ ಸಂಸ್ಕೃತಿಯಲ್ಲಿ ಕುರುಬ ಸಮುದಾಯಕ್ಕೆ ವಿಶೇಷ ಚರಿತ್ರೆ ಇದೆ. ಕರ್ನಾಟಕದ ಮಟ್ಟಿಗೆ ಇದು ದೊಡ್ಡ ಸಮಾಜ. ಒಂದು ಸಮಾಜವೆಂದರೆ ಅಲ್ಲಿ ಧಾರ್ಮಿಕ ಪುರುಷರು, ಸಾಂಸ್ಕೃತಿಕ ವೀರರು, ಆಚರಣಾ ದೈವಗಳು, ಅವರದೇ ಆದ ಸಾಮಾಜಿಕ ನಂಬಿಕೆ, ಸಂಪ್ರದಾಯ, ವಿಧಿವಿಧಾನಗಳು ರೂಪುಗೊಂಡಿರುತ್ತವೆ. ಇಂಥ ಸಾಮಾಜಿಕ ಚಟುವಟಿಕೆಗಳು ವ್ಯವಸ್ಥಿತವಾಗಿ ಸುಗಮವಾಗಿ ನಡೆಯುವುದಕ್ಕಾಗಿ ಆ ಸಮಾಜ ಧಾರ್ಮಿಕ ಮುಖಂಡರೆನಿಸಿದ ಪುರೋಹಿತ ವರ್ಗವನ್ನು ನಿಯೋಜಿಸಿಕೊಂಡಿರುತ್ತದೆ. ಕುರುಬ ಸಮುದಾಯವು ನಿಯೋಜಿಸಿಕೊಂಡಿರುವ ಇಂಥ ಪುರೋಹಿತ ವರ್ಗವನ್ನು 'ಒಡೆಯರು' ಎಂದು ಕರೆಯಲಾಗುತ್ತದೆ.

ಒಡೆಯರು ಕುರುಬ ಸಮುದಾಯದ ಎಲ್ಲ ಸಾಮಾಜಿಕವಾಗಿ ನಡೆಯುವ ಹಬ್ಬ-ಹರಿದಿನಗಳು, ಉತ್ಸವಗಳು ಮದುವೆ-ಮರಣಗಳಂಥ ಕಾರ್ಯಗಳಲ್ಲಿ ಪೌರೋಹಿತ್ಯವನ್ನು ವಹಿಸಿಕೊಂಡಿರುತ್ತಾರೆ. ಕುರುಬ

ಸಮುದಾಯದ ಒಳಪಂಗಡಗಳಲ್ಲಿ ಒಡೆಯರು ಪ್ರಮುಖರು. ಸಂಸ್ಕೃತಿಗಳ ಮೊದಲ ಹಂತದಲ್ಲಿ ರಾಜತ್ವ ಮತ್ತು ಗುರುತ್ವ ಒಂದೇ ವ್ಯಕ್ತಿಯಲ್ಲಿ ಒಳಗೊಂಡಿತ್ತು. ಇದಕ್ಕೆ ಒಡೆಯರು ಸಾಕ್ಷಿಯಾಗಿ ನಿಲ್ಲುತ್ತಾರೆ. ಕುರುಬ ಲಿಂಗಾಯತ ಅಥವಾ ಒಡೆಯರು ಎಂಬ ಹೆಸರಿರುವ ಇವರು ಶೈವ ಸಂಪ್ರದಾಯಕ್ಕೆ ಸೇರಿದವರು ಅಥವಾ ಶಿವಾರಾಧಕರು ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

'ಒಡೆಯ' ಎಂದರೆ ಸಾಮಾನ್ಯವಾಗಿ ನಾಯಕ, ಯಜಮಾನ, ಮುಖಂಡ, ಹಿರಿಯ ನೇತಾರ, ಮುಂದಾಳು ಎಂದೆಲ್ಲಾ ಅರ್ಥ ಪ್ರತೀತಿಯಿದೆ. ಕುರುಬ ಸಮುದಾಯದಲ್ಲಿ ಬರುವ ಒಡೆಯರು ಎಂಬ ಪದಕ್ಕೆ ಸ್ವಾಮಿ, ಅಯ್ಯ, ಜಂಗಮ, ಧಾರ್ಮಿಕ ಮುಖಂಡ, ಗುರು ಎಂಬರ್ಥಗಳಿವೆ. ಹೀಗಾಗಿ ಕುರುಬರ ಅಯ್ನೋರು, ಕುರುಬರ ಗುರುವಿನವರು, ಕುರುಬರ ಮಾರಾಯಗೋಳು, ಕುರುಬರ ಜಂಗಮ ಎಂದು ಕರೆಸಿಕೊಳ್ಳುವ ಧಾರ್ಮಿಕ ಮುಖ್ಯಸ್ಥನೇ ' ಗುರುಒಡೆಯರು' ಎಂಬ ಪದವು ವಿಶಾಲಾರ್ಥವಾಗಿ ಹಾಗೂ ಪಾರಿಭಾಷಿಕವಾಗಿ ಪ್ರತಿನಿಧಿಸುತ್ತದೆ.

ಕುರುಬರಿಗೂ ಲಿಂಗಾಯಿತರಿಗೂ ಕೆಲವು ಆಚರಣೆಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ. ಕುರುಬರ ದೇವರಾದ ಬೀರಪ್ಪನ ಪರಿಷ್ಕೃತ ರೂಪವೇ ಲಿಂಗಾಯಿತರ ವೀರಣ್ಣ ದೇವರೆಂದು ವಿದ್ವಾಂಸರು ಹೇಳುತ್ತಾರೆ. ಲಿಂಗಾಯಿತರ ಪುರವಂತರಂತೆ ಕುರುಬರಲ್ಲಿ ವೀರಗಾರರು ಕಂಡು ಬರುತ್ತಾರೆ. ಜಾತ್ರೆ ಉತ್ಸವಗಳಂಥ ಮಂಗಳ ಕಾರ್ಯಗಳಲ್ಲಿ ಇವರಿಬ್ಬರ ವೇಷಭೂಷಣ, ಆಯುಧ, ಕುಣಿತ, ಘೋಷಣೆಗಳಲ್ಲಿ ಹೋಲಿಕೆ ಯಿರುವುದು ಕಂಡು ಬರುತ್ತದೆ. ಇಷ್ಟೇ ಅಲ್ಲದೆ ಕುರುಬರ ಒಳಪಂಗಡಗಳಾದ ಹಂಡೆ ಕುರುಬರು, ಒಡೆಯರು, ಸಾದ ಕುರುಬರು ಲಿಂಗಾಯತರಂತೆ ಬದುಕುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕುರುಬ ಮತ್ತು ಲಿಂಗಾಯತ ಸಮುದಾಯಗಳು ಸಾಂಸ್ಕೃತಿಕವಾಗಿ ತುಂಬಾ ಹತ್ತಿರದ ಸಮಾಜಗಳಾಗಿವೆ.

ಖ್ಯಾತ ಸಂಶೋಧಕರಾದ ಡಾ. ಎಂ.ಎಂ.ಕಲಬುರ್ಗಿಯವರು ಹೇಳುವಂತೆ "ಕುರುಬ ಸಂಸ್ಕೃತಿಯ ಪರಿಷ್ಕೃತ ರೂಪವೇ ಶೈವ ವೀರಶೈವ ಸಂಸ್ಕೃತಿಯಾಗಿವೆ"[೪೮] ಎನ್ನುತ್ತಾರೆ.

ಹನ್ನೆರಡನೇ ಶತಮಾನದ ಸಾಂಸ್ಕೃತಿಕ ಸಂದರ್ಭದಲ್ಲಿ ರೇವಣಸಿದ್ದೇಶ್ವರ ಹಾಗೂ ಸಿದ್ಧರಾಮೇಶ್ವರರು 'ಒಡೆಯರು' ಎಂಬ ಪುರೋಹಿತ ವರ್ಗವನ್ನು ಸೃಷ್ಟಿಸಿ ಕುರುಬರಿಗೆ ಕುಲಗುರುವಾಗಿ ಮಾಡಿದರು ಎಂಬ ವಿಚಾರವು ಈಗಾಗಲೇ ಸಾಂಸ್ಕೃತಿಕವಾಗಿ ಬಹುಪಾಲು ಒಪ್ಪಿಗೆಯ ಮುದ್ರೆಯನ್ನು ಪಡೆದಿದೆ. ಕುರುಬರ ಗುರುಪರಂಪರೆಯಲ್ಲಿ ವಿಶೇಷ ಮನ್ನಣೆ ಪಡೆದಿರುವ ಇವರನ್ನು ಒಡೆಯರು, ಅಯ್ನೋರು, ಒಡೇರಯ್ನೋರು, ಗುರುವಿನವರು ಎಂದೂ ಕರೆಯುತ್ತಾರೆ. ಯಾವುದೇ ಸಮುದಾಯವು ತನ್ನೆಲ್ಲ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಣೆಗಳನ್ನು ನಡೆಸಬೇಕೆಂಬ ಉದ್ದೇಶದಿಂದ ಪುರೋಹಿತ ವರ್ಗವನ್ನು ಹೊಂದಿರುತ್ತದೆ.

ಒಡೆಯರು ಲಿಂಗಾಯತ ಜಂಗಮರಂತೆ ನಿಂತು ಪೌರೋಹಿತ್ಯವನ್ನು ನಡೆಸಿಕೊಡುವುದರಿಂದ ಕುರುಬ ಸಮುದಾಯದಲ್ಲಿ ಇವರಿಗೆ ಉನ್ನತವಾದ ಗೌರವಸ್ಥಾನವಿದೆ. ಇವರು ತಮ್ಮ ಹೆಸರುಗಳ ಕೊನೆಯಲ್ಲಿ

ಒಡೆಯರ್ ಎಂಬುದನ್ನು ಸೇರಿಸಿಕೊಳ್ಳುತ್ತಾರೆ. ಒಡೆಯರ್ ಪದದ ಹಿಂದಿರುವ 'ಅಯ್ಯ' ಎಂಬ ಪದವೂ ಕೂಡ ಅವರು ಗುರುವರ್ಗಕ್ಕೆ ಸೇರಿದವರೆಂಬ ಸೂಚನೆ ಇದಾಗಿದೆ. ರೇವಣಸಿದ್ದೇಶ್ವರ ಇವರಿಗೆ ಲಿಂಗದೀಕ್ಷೆ ನೀಡಿ 'ಕುರುಬ ಕುಲಕ್ಕೆ ಗುರುವಾಗಿರಿ' ಎಂದು ಹರಸಿದಂದಿನಿಂದ ಇವರು ಕುರುಬರಿಗೆ ಗುರುಗಳಾಗಿ ಕುರುಬ ಸಮುದಾಯದಲ್ಲಿ ಒಂದು ಒಳಪಂಗಡವಾಗಿಯೂ ಕಂಡು ಬರುತ್ತಾರೆ.

ಕುರುಬ ಸಮುದಾಯದ ಪೌರೋಹಿತ್ಯವನ್ನು ನಡೆಸುವ ಒಡೆಯರಿಗೆ ಗುರುಸ್ಥಾನ ನೀಡಿದ ಪ್ರಯುಕ್ತ ಇವರು ಗುರು ಒಡೆಯರೆನಿಸಿದರು. ಇಂತಹ ಗುರು ಒಡೆಯರ ಪರಂಪರೆ ಮೂರು ಸಂಪ್ರದಾಯಗಳಲ್ಲಿ ಕವಲೊಡೆದಿರುವುದನ್ನು ಕಾಣಬಹುದು. ೧. ರೇವಣಸಿದ್ದೇಶ್ವರ ಸಂಪ್ರದಾಯ ಒಡೆಯರನ್ನು 'ಶಾಂತೊಡೆಯರು' ಎಂದು ಕರೆದರೆ. ೨. ಸಿದ್ಧರಾಮೇಶ್ವರ ಸಂಪ್ರದಾಯ ಒಡೆಯರನ್ನು 'ಮಂಕೊಡೆಯರು' ಎಂತಲೂ ೩. ಅಮೋಘಸಿದ್ಧ ಸಂಪ್ರದಾಯದ ಗುರು ಒಡೆಯರನ್ನು 'ಅಮೋಘ ಒಡೆಯರು ಅಥವಾ ಅಮುಗೋಡೆಯರು' ಎನ್ನಲಾಗುತ್ತದೆ.

ಲಿಂಗಧಾರಿಗಳೂ, ಕಟ್ಟಾ ಸಸ್ಯಾಹಾರಿಗಳೂ ಆದ ಒಡೆಯರುಗಳು ಸಾಮಾನ್ಯವಾಗಿ ರೇವಣಸಿದ್ಧೇಶ್ವರನ ದೇವಸ್ಥಾನ, ಮಠಗಳು ಇರುವೆಡೆಯಲ್ಲಿ ಇರುತ್ತಾರೆ. ಕುರುಬರ ಗುರು ಪರಂಪರೆಯಲ್ಲಿ ಅಗ್ರಸ್ಥಾನವಿರುವ ಇವರು ಪ್ರತ್ಯೇಕವಾದ ಗುಂಪಾಗಿದ್ದರೂ ಪ್ರತ್ಯೇಕ ಜಾತಿಯಾಗಿಲ್ಲದಿರುವುದು ವಿಶೇಷವಾಗಿರುವುದು. ಒಡೆಯರುಗಳೆಲ್ಲರೂ ಸಾಮಂತ ಬೆಡಗಿಗೆ ಸೇರಿದವರಾಗಿರುವುದರಿಂದ ಅವರೆಲ್ಲರೂ ದಾಯಾದಿಗಳಾಗುತ್ತಾರೆ. ಹೀಗಾಗಿ ಒಡೆಯರು ಒಡೆಯರುಗಳು ಹೆಣ್ಣು ಕೊಟ್ಟು ತರುವುದು ನಿಷಿದ್ಧ. ಆದರೆ ತಮ್ಮ ಹೆಣ್ಣು ಮಕ್ಕಳನ್ನು ಕುರುಬರ ಮನೆಗೇ ಕೊಡುವ ಇವರು ತಮ್ಮ ಗಂಡು ಮಕ್ಕಳಿಗೆ ಹೆಣ್ಣನ್ನು ಕುರುಬರ ಬೇರೆ ಬೇರೆ ಬೆಡಗಿನವರ ಮನೆಯಿಂದ ತೆಗೆದುಕೊಳ್ಳುತ್ತಾರೆ.

ಲಿಂಗಧಾರಿಗಳಾದ ಒಡೆಯರುಗಳು ಕುರುಬರ ಮನೆಯಿಂದ ಕನ್ಯೆಯನ್ನು ತೆಗೆದುಕೊಳ್ಳುವಾಗ ಶ್ರೀ ರೇವಣಸಿದ್ಧೇಶ್ವರನ ಸನ್ನಿಧಿಯಲ್ಲಿ ಕರಿಯ ಕಂಬಳಿಯ ಮೇಲೆ ಪಂಚ ಕಳಸಗಳನ್ನು ಹೂಡಿ ಶಾಸ್ತ್ರೋಕ್ತವಾಗಿ 'ಲಿಂಗದೀಕ್ಷೆ' ಮಾಡುತ್ತಾರೆ. ಹೀಗೆ ದೀಕ್ಷೆಗೊಂಡ ಕುರುಬರ ಹುಡುಗಿ ಒಡೆಯರಯ್ಯನ ಕೈಹಿಡಿದು ಒಡೇರಮ್ಮನಾಗುತ್ತಾಳೆ. ಈ ಒಡೇರಮ್ಮನಿಗೆ ಸ್ತ್ರೀ ಸಮುದಾಯದಲ್ಲಿ ವಿಶಿಷ್ಟ ಸ್ಥಾನಮಾನಗಳಿಗೆ ಭಾಜನಳಾಗುತ್ತಾಳೆ. ಹೀಗೆ ಕುಲದವರಿಗೆ ಕುಲದವರು ಗುರುಗಳಾಗಿರುವ ಒಡೆಯರದು ಕುರುಬರಲ್ಲಿ ಒಂದು ವಿಶಿಷ್ಟ ಒಳಪಂಗಡವಾಗಿದೆ.

೯. ದನಗಾರ ಗವಳಿಗ ಕುರುಬರು

ದನಗರ, ಕುರುಬ ಎಂಬ ಪದಕ್ಕೆ ಪರ್ಯಾಯವಾದ ಪದ, ಮಹಾರಾಷ್ಟ್ರ, ಮಧ್ಯ ಪ್ರದೇಶ ರಾಜ್ಯಗಳಲ್ಲಿ ಕುರುಬರಿಗೆ ದನಗಾರರೆಂದೇ ಕರೆಯಲಾಗುತ್ತದೆ. ಅಷ್ಟೇ ಏಕೆ ಕರ್ನಾಟಕದ ಬೆಳಗಾವಿ, ಉತ್ತರಕನ್ನಡ, ಧಾರವಾಡ ಜಿಲ್ಲೆಗಳಲ್ಲಿಯೂ ಕೆಲವು ಕುರುಬರಿಗೆ 'ದನಗರ' ಎಂದೇ ಸಂಬೋಧಿಸಲಾಗುತ್ತದೆ. ದನಗರ

ಎಂಬ ಅಡ್ಡ ಹೆಸರುಗಳೂ ಇವೆ. ವೆಂಕಟರಂಗೋಕಟ್ಟಿ, ರಾ.ಚಿಂ.ಢೇರೆ, ಶಂಭಾ ಜೋಶಿ, ಎಡ್ಗರ್ ಥರ್ಸ್ಟನ್, ಗುಂಥರ್ ಸೊಂತ್ತೈಮರ್, ಕೆ.ಸಿ.ಮಲ್ಹೋತ್ರ ಮತ್ತು ಮಾಧವ ಗಾಡ್ಗೀಳ ಮೊದಲಾದ ಕೆಲವು ವಿದ್ವಾಂಸರು ಈ ಸಮುದಾಯದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಕುರುಬ ಅಥವಾ ದನಗರ ಸಮುದಾಯದಲ್ಲಿ 'ಗವಳಿಗರು' ಎಂಬ ಒಳಪಂಗಡವೊಂದಿದೆ.

'ಎಡ್ಗರ್ ಥರ್ಸ್ಟನ್'ರವರು 'ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಗ್ರಂಥದಲ್ಲಿ "Dhanagar or Donigar is recorded in the madras census report 1901, as a marathi caste of shephereda and cattle breeders. I gather from a note (Gazettear of the Bombay presidency XV.Part I, 1883) on the Dhanagar of kanara district in the Bombay presidency, that the word Dhanagar is generally derived from the sanskrit Dhenu, a cow. Their homespeech is marathi, but they can speech kanarese. They keep a special breed of cows and buffeloes, known as Dhanagar mhasis and Dhanagar gavlis which are the largest cattle in kanara, many of shivaji's infantry were satar Dhanagars"[೪೯] ವಿವರಿಸಿದ್ದಾರೆ.

ಅಂದರೆ ದನಗರ ಗವಳಿಗರು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಕಳು ಎಮ್ಮೆಗಳನ್ನು ಸಾಕಿಕೊಂಡು ಹೈನುಗಾರಿಕೆಯನ್ನು ಮಾಡುವವರಾಗಿದ್ದಾರೆ. ಇದು ಅವರ ವೃತ್ತಿಯಾಗಿದ್ದು ಕರ್ನಾಟಕದ ವಿಶಿಷ್ಟ ಬುಡಕಟ್ಟುಗಳಲ್ಲಿ ಒಬ್ಬರಾಗಿದ್ದಾರೆ. ಗವಳಿಗರು ದಟ್ಟವಾದ ಸಾಂಸ್ಕೃತಿಕ ಅನನ್ಯತೆಯನ್ನು ರೂಢಿಸಿಕೊಂಡು ಭಾಷೆ, ವೃತ್ತಿ ಜೀವನ ಕ್ರಮದಲ್ಲಿ ಇತರರಿಗಿಂತ ಪ್ರತ್ಯೇಕವಾದ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಕರ್ನಾಟಕದ ಅನೇಕ ಸಮುದಾಯಗಳು ಪ್ರತ್ಯೇಕ ಗುಂಪುಗಳಾಗಿ ಬದುಕುತ್ತ ತಮ್ಮ ಜೀವನಕ್ರಮ ನಂಬಿಕೆ, ಆಚರಣೆ ಸಂಪ್ರದಾಯಗಳಲ್ಲೂ ಪ್ರತ್ಯೇಕತೆಯನ್ನು ರೂಪಿಸಿಕೊಂಡಿವೆ. ಯಾವುದೇ ಗುಂಪು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರುವಲ್ಲಿ ಸದಾ ಪ್ರಯತ್ನಶೀಲವಾಗಿರುತ್ತದೆ.

ಕರ್ನಾಟಕದವರಲ್ಲದ ಗವಳಿಗರು ಒಂದು ಶತಮಾನದ ಹಿಂದೆ ಪಕ್ಕದ ಮಹಾರಾಷ್ಟ್ರ ಮತ್ತು ಗೋವಾದಿಂದ ವಲಸೆ ಬಂದವರಾಗಿದ್ದಾರೆ. ಮೂರ್ನಾಲ್ಕು ತಲೆಮಾರುಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಬಗ್ಗೆ ಅವರಿಂದಲೇ ಮಾಹಿತಿ ದೊರೆಯುತ್ತದೆ. ಕರ್ನಾಟಕದ ಅನೇಕ ಸಮುದಾಯಗಳು ಮೂಲವನ್ನು ಮರೆತಿರುವಾಗ್ಗೆ ಗವಳಿಗರು ಮಾತ್ರ ತಮ್ಮ ಮೂಲನೆಲೆ ಮತ್ತು ವಂಶಜರು, ಬಂದು ಬಾಂಧವರನ್ನು ನೆನಪಿಸಿಕೊಂಡು ಪದೇ ಪದೇ ಹೋಗಿಬರುತ್ತಾರೆ. ಮಹಾರಾಷ್ಟ್ರದ ಖಂಡೋಬಾ ಹಾಗೂ ಇತರೆ ದೈವಗಳ ಆರಾಧನೆಯಲ್ಲಿ ತೊಡಗಿರುವ ಇವರು ತಮ್ಮನ್ನು ದನಗರ (ದಂಗರ್) ಎಂದೂ ಕರೆದುಕೊಳ್ಳುತ್ತಾರೆ. ಕನ್ನಡಿಗರು ಇವರನ್ನು ಗವಳಿಗರು ಎಂದು ಕರೆಯುತ್ತಾರೆ.

'ದನ' ಎಂಬ ಪದವು ಸಂಸ್ಕೃತ ಭಾಷಿಕರ ಸಂಪರ್ಕದಲ್ಲಿಯೇ ಕನ್ನಡದಲ್ಲಿ ಪ್ರಚಲಿತವಾಗಿರುವುದು ನಿಶ್ಚಿತ. ದನ<ಧನಗಾರ ಪದವು ನೇರವಾಗಿ ಸಂಸ್ಕೃತದಿಂದ ಮರಾಠಿ ಮಾತಲ್ಲಿ ಬಂದುದು ಅಲ್ಲ ಎಂಬುದು ಖಚಿತವಿರುವುದರಿಂದ ಮರಾಠಿ ಮಾತಿಗಿಂತ ಮುಂಚೆ ಕನ್ನಡದಲ್ಲಿ ಆಕಾರ ಪಡೆಯಲಿಕ್ಕೆ ಸಾಕು ಎಂಬುದು ದೃಢವಾಗುತ್ತದೆ. ದನಗಳನ್ನು ಇಟ್ಟುಕೊಂಡು ಸಾಕುವವರಿಗೂ ದನಗಾರರೆಂದೂ ಹೆಸರಾಯಿತು. ಕುರಿಗಳಿಗಿಂತಲೂ ದನಗಳು ಹಾಲು ಮತ್ತು ಮಾಂಸದ ವಿಷಯದಲ್ಲಿ ಮೇಲುಗೈ ಸಾಧಿಸಿದ್ದರಿಂದ ದ್ರಾವಿಡರಾದ ಭಾರತೀಯರು ಆರ್ಯರಿಗೆ ಮಾನಸಿಕವಾಗಿ ಸೋತರೂ ಭಾರತೀಯ ಕುರಿಗಾರರ ಜೊತೆಗೆ ಶಾಶ್ವತವಾದ ವಿರೋಧ ಕಟ್ಟಿಕೊಳ್ಳುವಷ್ಟು ಪ್ರಬಲರಾಗಿರಲಿಲ್ಲ. ಆರ್ಯ ಮತ್ತು ದ್ರಾವಿಡರು ಪರಸ್ಪರ ಹೊಂದಾಣಿಕೆಯಿಂದ ಕುರಿ ದನಗಳನ್ನು ಸಾಕತೊಡಗಿದರು.

ಭಾರತೀಯ ಮೂಲದ ದ್ರಾವಿಡ(ಕುರುಬ)ರಿಗಿಂತಲೂ ಪ್ರಾಚೀನ ನಾಗರೀಕತೆ, ಸಂಸ್ಕೃತಿಗಳಲ್ಲಿ, ಕುರುಬ-ದನಗಾರರು ಪ್ರಧಾನ ಜನಾಂಗವಾಗಿರುವುದು ಕಂಡು ಬರುತ್ತದೆ. ಕಾಲಾಂತರದಲ್ಲಿ ಪಶುಗಳನ್ನು ಧನ(ಹಣ)ವೆಂದು ಪರಿಗಣಿಸಿದಾಗ ಪಶುಗಳಿಗೆ ಬೆಲೆ ಬಂದು ಅವುಗಳ ಸಮೂಹದಿಂದ ವ್ಯಕ್ತಿಗಳನ್ನು ಗುರ್ತಿಸುವ ರೂಢಿಯು ಜಾರಿಗೆ ಬಂದಿರಬೇಕು. ಆ ಮೂಲಕ ದನ ಕುರಿಗಳ ದೊಡ್ಡಿಗಳು ಯಾರ ಒಡೆತನದಲ್ಲಿದ್ದವೋ ಅವರೇ ದನ (ಧನ)ಗಾರರಾದರು. ಅದರಂತೆ ದನಗಾರರೆಂಬುದು ಹೋಗಿ ಅಂತಿಮವಾಗಿ ಧನಗಾರರೆಂಬುದು ಸ್ಥಿರವಾಗಿರಲೂಬಹುದು. ಮರಾಠಿಯಲ್ಲಿ ಧನಗಾರರೆಂದು ಕರೆಸಿಕೊಳ್ಳುವವರೇ ಕನ್ನಡ ನಾಡಿನಲ್ಲಿ ದನಗಾರರೆಂದು ಹೆಸರಾದರು. ಮಹಾರಾಷ್ಟ್ರದ ಧನಗಾರರಲ್ಲಿ ಹನ್ನೆರಡು ಒಳಪಂಗಡಗಳಿದ್ದು ಎರಡು ಪ್ರಮುಖ ಪಂಗಡಗಳಿವೆ. ಅವೆಂದರೆ ೧. ಹಟ್ಟಿಕಾರ ಧನಗಾರರು, ೨. ಬಾರ್ಗಿಧನಗಾರರು.

ಗವಳಿಗರು ಸಾಮಾನ್ಯವಾಗಿ ಕರ್ನಾಟಕದಲ್ಲಿ ದಟ್ಟಡವಿಗಳಲ್ಲಿಯೇ ಹಾಡಿಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಶಿವಮೊಗ್ಗ, ಧಾರವಾಡ, ಬೆಳಗಾವಿ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಗೌಳಿಗರ ವಾಡೆಗಳಿವೆ. ಇವರು ಆರ್ಯೇತರ ಪಂಗಡಕ್ಕೆ ಸೇರಿದವರು ಎಂಬ ತಜ್ಞರ ಅಭಿಪ್ರಾಯವೂ ಇದೆ. ಪಶುಪಾಲನೆ ಇವರ ಮೂಲ ವೃತಿಯಾಗಿದ್ದು ಇವರಲ್ಲಿ ಧಾಂಗಾ ಮತ್ತು ಕಚ್ಚೆ ಗವಳಿಗಳೆಂದು ಎರಡು ಪಂಗಡಗಳಿವೆ.

ಕರ್ನಾಟಕದಲ್ಲಿ ಎರಡು ರೀತಿಯ ಗವಳಿಗರು ಇದ್ದು ಮೊದಲನೆಯವರು ಕರ್ನಾಟಕ ಮೂಲದ ಕನ್ನಡ ಮತ್ತು ಮರಾಠಿ ಮಾತನಾಡುವ ಗವಳಿಗಳು. ಇವರು ಪ್ರತ್ಯೇಕವಾಗಿ ವಾಸಮಾಡದೆ ಗ್ರಾಮ ನಗರಗಳಲ್ಲಿ ವಾಸಿಸುತ್ತ, ಹಾಲು, ಬೆಣ್ಣೆ, ಮೊಸರು ಮಾರುತ್ತ ಎಮ್ಮೆಗಳನ್ನು ಸಾಕಿಕೊಂಡು ಜೀವನ ನಿರ್ವಹಣೆ ಮಾಡುತ್ತಾರೆ. ಎರಡನೆಯವರು ಕರ್ನಾಟಕದ ಕೆಲವು ದಟ್ಟಡವಿಗಳಲ್ಲಿ ವಾಸಮಾಡುವ ಮರಾಠಿ ಮೂಲದ ಕಚ್ಚೆಗೌಳಿಗಳು. ಇವರು ಮಹಾರಾಷ್ಟ್ರದ ದನಗಾರರನ್ನು ಹೋಲುವರು ಮತ್ತು ಅದೇ ಮೂಲದಿಂದ ಬಂದವರು ಎಂಬುದಕ್ಕೆ ಅನೇಕ ಪುರಾವೆಗಳಿವೆ. ಖಾನದೇಶ, ನಾಸಿಕ, ನಗರ ಭಾಗಗಳಲ್ಲಿ ಇಂದಿಗೂ ಕಾನಡ ಗೌಳಿಗಳು ಕಂಡು ಬರುತ್ತಾರೆ.

ಹಸಿರು ತುಂಬಿದ ಬೆಟ್ಟ ಗುಡ್ಡಗಳಿಂದ ಆವೃತ್ತವಾದ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ವಾಡೆಗಳನ್ನು ನಿರ್ಮಿಸುವ ಗವಳಿಗರು ತಾವು ಸಾಕುವ ಎಮ್ಮೆಗಳಿಗೆ ಸರಿಯಾದ ಆಹಾರ-ನೀರು ದೊರೆಯುತ್ತದೆಂಬದನ್ನು ಖಚಿತಪಡಿಸಿಕೊಂಡು ಮನೆಗಳನ್ನು ನಿರ್ಮಿಸುತ್ತಾರೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು, ಸಾಗರ ತಾಲೂಕು, ಅನಂತಪುರ ಸಮೀಪದ ಕಾಡು, ಚಿಕ್ಕಮಗಳೂರು ಜಿಲ್ಲೆಯ ಉಂಬಳಿ ಬೈಲು, ಉತ್ತರಕನ್ನಡ ಜಿಲ್ಲೆಯ ದಾಂಡೇಲಿ, ಬೆಳಗಾವಿ ಸುತ್ತ ಮುತ್ತಲ ದಟ್ಟಡವಿ, ಮಹಾರಾಷ್ಟ್ರದ ಕೊಲ್ಲಾಪುರ, ರತ್ನಗಿರಿ ಹಾಗೂ ಗೋವಾದ ಕೆಲವು ಕಡೆಗಳಲ್ಲಿ ವಾಸಮಾಡುತ್ತಾರೆ. ಆದ್ದರಿಂದ ಪ್ರಾಚೀನ ಕಾಲದಲ್ಲಿ ಪಶುಪಾಲಕರನ್ನು ದನಗಾರರೆಂದು ಕರೆಯಲಾಗಿದೆ.

೧೦. ಕುಂಚಿಟಿಗ ಕುರುಬರು

ಕರ್ನಾಟಕಾಂಧ್ರ ಗಡಿಯಲ್ಲಿ ತುಂಗಭದ್ರಾ ನದಿ ಮತ್ತು ಕಾವೇರಿ ನದಿಗಳ ನಡುವೆ ದಕ್ಷಿಣೋತ್ತರವಾಗಿ ಹರಡಿರುವ ವಿಶಾಲ ಬಯಲು ನಾಡಿನಲ್ಲಿ ಅಧಿಕವಾಗಿ ವಾಸಿಸುತ್ತಿರುವ ಒಂದು ಸಮುದಾಯ ಕುಂಚಿಟಿಗರು. ಇವರು ಒಕ್ಕಲಿಗ ಸಮುದಾಯದ ಒಂದು ಒಳಪಂಗಡವಾಗಿ ಈಗ ಕಂಡು ಬರುತ್ತಾರೆ. ಕುಂಚಿಟಿಗ ಒಕ್ಕಲಿಗರು ಕುರುಬರಿಗೆ ತೀರಾ ಹತ್ತಿರದವರು. 'ಕುರುಬ ಕೆಟ್ಟು ಕುಂಚಿಟಿಗನಾದ' ಎಂಬ ಗಾದೆ ಮಾತೊಂದಿದೆ.

ಕನ್ನಡಕ್ಕೆ ಪ್ರಥಮ ಶಬ್ದಕೋಶವನ್ನು ನೀಡಿದ ಡಾ. ಫರ್ಡಿನೆಂಡ್ ಎಫ್. ಕಿಟೆಲ್‌ರವರು ತಮ್ಮ ಕನ್ನಡ ಇಂಗ್ಲಿಷ್ ನಿಘಂಟಿನಲ್ಲಿ ಕುಂಚಟಿಗ, ಕುಂಚಡಿಗ, ಕುಂಚವಡಿಗ, ಕುಂಚಿಗ ಎಂಬ ಪದಗಳನ್ನು ಪ್ರಯೋಗ ಮಾಡಿದ್ದಾರೆ ಮತ್ತು ಈ ಪದಗಳಿಗೆ ವಿವಿಧ ಅರ್ಥಗಳನ್ನು ನೀಡಲಾಗಿದೆ.

೧. ಕುಂಚಿಗ-ಕುಂಚಿಟಿಗ, A Sudra, ಶೂದ್ರ, ಒಕ್ಕಲಿಗರಲ್ಲಿ ಒಂದು ಒಳಪಂಗಡ.

೨. ಕುಂಚಿಟಿಗ- ತೊಗರಿಯನ್ನು ಬೇಳೆ ಮಾಡಿ ಮಾರುವವನು. ಒಂದು ಜಾತಿಯ ಹೆಸರು.

೩. ಕುಂಚವಡಿಗ-ಕುಂಚವನ್ನು ಹಿಡಿಯುವವನು ಚಾಮರ ಬೀಸುವ ಆಳು.

ಈ ಮೇಲಿನ ಅರ್ಥಗಳಿಂದ ಕುಂಚಿಗ, ಕುಂಚಿಟಿಗ ಎಂದರೆ ಶೂದ್ರ ವರ್ಗಕ್ಕೆ ಸೇರಿದ ವ್ಯವಸಾಯ ವೃತ್ತಿಯವನು, ವ್ಯಾಪಾರಿ. ತೊಗರಿಯನ್ನು ಬೆಳೆದು ಒಣಗಿಸಿ ಬೇಳೆ ಮಾಡಿ ಮಾರಾಟ ಮಾಡುವವನು, ಕಂಬಳಿಯನ್ನು ನೇಯಲು ಕುಂಚವನ್ನು ಬಳಸುವವನು. ಅರಮನೆಯಲ್ಲಿ ಚಾಮರವನ್ನು ಬೀಸುವವನು ಎಂಬ ಅನೇಕಾರ್ಥಗಳಿಗೆ ಎಡೆಮಾಡಿಕೊಡುತ್ತವೆ.

ಕುಂಚಿಟಿಗರು ಮೂಲತಃ ಒಕ್ಕಲುತನ ಮತ್ತು ಪಶುಪಾಲನ ಮೂಲದವರು. ಕುಂಚಿಟಿಗ ಪದದಲ್ಲಿನ 'ಕುಂಚ' ಪದಕ್ಕೆ ಕುಚ್ಚು, ಗುಂಪು ಎಂಬರ್ಥವೂ ಬರುತ್ತದೆ. ಒಂದೇ ವೃತ್ತಿಯವಲಂಬಿಸಿ ಏಕ ಪ್ರಕಾರದ ಆಚಾರ-ವಿಚಾರಗಳನ್ನು ಮೈಗೂಢಿಸಿಕೊಂಡು ಒಂದು ಗುಂಪಾಗಿ ವಾಸಿಸುತ್ತಿದ್ದರಿಂದ ಕುಂಚಿಟಿಗ ಪದವು ಹುಟ್ಟಿರಬಹುದಾಗಿದೆ. ಹಾಗೆಯೇ ಕುಂಚ ಎಂಬ ಪದಕ್ಕೆ ಇರುವ ಮತ್ತೊಂದು ಅರ್ಥವೆಂದರೆ ಚಿತ್ರ

ಬರೆಯುವುದಕ್ಕೂ, ಬಣ್ಣ ಬಳಿಯುವುದಕ್ಕೂ ಮತ್ತು ಕಂಬಳಿ ನೇಯ್ಗೆಯಲ್ಲಿ ಬಳಸಲಾಗುತ್ತಿದ್ದ ಬ್ರಶ್, ನೇಕಾರಿಕೆಯಲ್ಲಿ ಬಳಸುತ್ತಿದ್ದ 'ಕುಂಚ' ಎಂಬ ಉಪಕರಣದಿಂದ ಕುಂಚಿಟಿಗ ಎಂಬ ಪದವು ಹುಟ್ಟಿರಬಹುದು. 'ಕುಂಚಿ' ಎಂಬ ಪದಕ್ಕೆ ನವಿಲುಗರಿಯಿಂದ ಮಾಡಿದ ಕಿರೀಟ ಅಥವಾ ಕುಲಾವಿ ಎಂಬ ಅರ್ಥವೂ ಇದೆ.

ಪ್ರೊ. ಎಂ. ಮರಿಯಪ್ಪ ಭಟ್ಟರು ಪರಿಷ್ಕರಿಸಿ ವಿಸ್ತರಿಸಿರುವ ಡಾ.ಫರ್ಡಿನೆಂಡ್ ಎಫ್. ಕಿಟೆಲರ 'ಕನ್ನಡ-ಇಂಗ್ಲೀಷ್' ಶಬ್ದಕೋಶದ ಎರಡನೇ ಸಂಪುಟದಲ್ಲಿ 'ಕುಂಚ ಎಂದರೆ ಬ್ರಶ್, ಅಡಿಗ ಎಂದರೆ ಅಟಿಗ-ಅಣಿಗ-ಆಡಿಗ, a suffix denoting one who moves in, play with"[೨೦] ಎಂದಿದ್ದಾರೆ. ಇದು ದೇವಾಡಿಗ, ಹಾವಾಡಿಗ, ಹೂವಾಡಿಗ ಇರುವಂತೆ ಕುಂಚ+ಅಡಿಗ= ಕುಂಚಡಿಗ>ಕುಂಚಟಿಗ ಎಂಬ ಪದೋತ್ಪತ್ತಿಯಾಗಿರಬೇಕು.

ಕುಂಚಿಟಿಗ ಎಂಬ ಪದಕ್ಕೆ ಹಲವಾರು ಪರ್ಯಾಯ ಪದಗಳಿವೆ. ಪ್ರಾದೇಶಿಕ ಭಿನ್ನತೆಯಿಂದಾಗಿ ಬೇರೆ ಬೇರೆ ಹೆಸರು ಪ್ರಾಪ್ತವಾಗಿವೆ. ಕರೆಯುವ ಹೆಸರುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ, ಅವರ ಆಚರಣೆಗಳು, ಪದ್ಧತಿಗಳು, ಬೆಡಗುಗಳು ಮೂಲ ಸಂವೇದನೆಗಳು ಒಂದೇ ಆಗಿವೆ, ಆದ್ದರಿಂದ ಒಂದೇ ರೀತಿಯ ಆಚಾರ-ವಿಚಾರ ಸಂಸ್ಕೃತಿಯನ್ನು ಹೊಂದಿರುವ ಕೊಡು ಕೊಳೆ ಇರುವ ಜನರನ್ನು ಕುಂಚಿಟಿಗರು ಎಂದು ಗುರ್ತಿಸಲಾಗಿದೆ.

ಕುಂಚಿಟಿಗ ಸಮುದಾಯವನ್ನು ತುಮಕೂರು, ಚಿತ್ರದುರ್ಗ, ಅನಂತಪುರ ಜಿಲ್ಲೆಗಳಲ್ಲಿ ಒಕ್ಕಲಿಗರು, ಕುಂಚಿಟಿಗರು, ಕುಂಚಿಗರು, ಕುಂಚಟಿಗ ಒಕ್ಕಲಿಗರು ಎಂದು ಕರೆಯಲಾಗುತ್ತದೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕುಂಚಿಗರು, ಕುಂಚಟಿಗರು ಎಂದೂ, ಶಿವಮೊಗ್ಗ ದಾವಣಗೆರೆ ಜಿಲ್ಲೆಗಳಲ್ಲಿ ನಾಮಧಾರಿ ಕುಂಚಿಟಿಗರು ಎನ್ನುತ್ತಾರೆ. ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ಗಳಲ್ಲಿ ವೀರಶೈವ ಮತ್ತು ಲಿಂಗಾಯತ ಕುಂಚಿಟಿಗರೆನ್ನಲಾಗುತ್ತದೆ. ಧಾರವಾಡ, ಹುಬ್ಬಳ್ಳಿ ಪರಿಸರದಲ್ಲಿ ರೆಡ್ಡಿ ಕುಂಚಿಟಿಗರೆಂದೂ, ಹಾನಗಲ್, ಹಾವೇರಿ, ಉತ್ತರ ಕರ್ನಾಟಕಗಳಲ್ಲಿ ಕಾಮಾಟಿಗಳು, ಕಾಮಾಟಿ ಕುಂಚಿಟಿಗರು ಎಂದು ಕರೆಯುತ್ತಾರೆ. ಇವೆಲ್ಲವೂ ಕುಂಚಿಟಿಗ ಸಮುದಾಯದ ವಿಭಿನ್ನ ಹೆಸರುಗಳಾಗಿವೆ.

ಸಿ.ಹಯವದನ್‌ರಾವ್ ಸಂಪಾದಿಸಿರುವ ಇಂಗ್ಲೀಷ್ ಭಾಷೆಯ ಮೈಸೂರು ಗೆಜೆಟಿಯರ್‌ನಲ್ಲಿ ಮತ್ತೊಂದು ವಿವರಣೆಯಿದೆ "ಕುರುಬ ಜನಾಂಗದಿಂದ ಸಿಡಿದು ವ್ಯವಸಾಯ ವೃತ್ತಿಯನ್ನು ಹಿಡಿದವರು ಕುಂಚಿಟಿಗರು"[೨೧] ಎಂಬುದೇ ವಿವರಣೆ. "ಕುರಿಪಾಲನೆ ಮತ್ತು ಕುರಿಯ ಉಣ್ಣೆಯಿಂದ ಕಂಬಳಿ ತಯಾರಿಸುವ ವೃತ್ತಿಯನ್ನು ಕುರುಬರು ವಂಶಪಾರಂಪರ್ಯವಾಗಿ ನಿರ್ವಹಿಸುತ್ತಿದ್ದರು. ಕಂಬಳಿ ತಯಾರಿಕೆಯಲ್ಲಿ 'ಕುಂಚ'ವನ್ನು ಬಳಸುತ್ತಿದ್ದರು. ಕುಂಚದ ಸಹಾಯದಿಂದ ಕಂಬಳಿ ನೇಯುತ್ತಿದ್ದ ಕುರುಬರಲ್ಲಿ ಕೆಲವರು ಯಾವುದೊ ಒಂದು ಕಾಲಘಟ್ಟದಲ್ಲಿ ಆ ವೃತ್ತಿಯನ್ನು ತೊರೆದು ವ್ಯವಸಾಯಕ್ಕಿಳಿದರು. ಹೀಗೆ ವ್ಯವಸಾಯಕ್ಕಿಳಿದ ಕುರುಬರೇ ಕುಂಚಿಟಿಗರಾದರು"[೨೨] ಎಂದು ಎಂ.ಹೆಚ್.ನಾಗರಾಜುರವರು ಈ ಸಮುದಾಯಕ್ಕೆ ಹೆಸರು ಪ್ರಾಪ್ತವಾದುದನ್ನು ವಿವರಿಸುತ್ತಾರೆ.

ಕುಂಚಿಟಿಗರು ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಮೈಸೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹೆಚ್ಚಾಗಿದ್ದಾರೆ. ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಿರಳವಾಗಿ ಕಂಡು ಬರುತ್ತಾರೆ. ಕುರಿಸಾಕಾಣಿಕೆಯನ್ನು ಪ್ರಾರಂಭದಲ್ಲಿ ವೃತ್ತಿಯಾಗಿಸಿಕೊಂಡಿದ್ದವರು ಈಗ ಸಂಪೂರ್ಣವಾಗಿ ಕೃಷಿ ಚಟುವಟಿಕೆಗಳ ಮೇಲೆ ಅವಲಂಬಿತರು. ಮೊದಲಿಗೆ ಇವರು ಬುಡಕಟ್ಟಿಗೆ ಸೇರಿದವರಾಗಿದ್ದು ನಂತರ ಒಂದು ಸಮುದಾಯವಾಗಿ ಪರಿವರ್ತನೆಯಾಗಿದ್ದಾರೆ.

ಕುರಿಯ ತುಪ್ಪಳ ಕತ್ತರಿಸಿ ಕಂಬಳಿ ತಯಾರಿಸಿದವರು ಕುರುಬರಾದರೆ, ಕಂಬಳಿಗೆ ಹುಣಸೆ ಬೀಜದ ರಸವನ್ನು ಹಚ್ಚುವ ಕುಂಚ>ಕುಂಚಿಗೆಯಿಂದ 'ಕುಂಚಿಟಿಗರು' ಎಂಬ ಹೆಸರು ಬಂದುದಾಗಿ ಹೇಳಲಾಗುತ್ತದೆ. ಕುರುಬರು = ಕುಂಚಿಟಿಗರು>ಕಂಬಳಿಯವರು ನಲವತ್ತೆಂಟು ಗೋತ್ರಗಳಲ್ಲಿ ಕಂಡುಬರುತ್ತಾರೆ. ಮದುವೆ ಸಂದರ್ಭದಲ್ಲಿ ಕಂಬಳಿ ಕೋರಿಯನ್ನು ಹೆಗಲ ಮೇಲೆ ಹಾಕಿಕೊಂಡು ಇರುವುದರಿಂದ ಮತ್ತು ಕುರುಬ ಹಾಗೂ ಕುಂಚಿಟಿಗರ ಸಂಬಂಧದ ಸಂಕೇತವಾಗಿ ಉಣ್ಣೆಕಂಕಣ ತೊಡುವುದು ಈ ಎರಡು ಸಮುದಾಯಗಳ ನಡುವೆ ಅವಿನಾಭಾವ ಸಂಬಂಧವಿತ್ತೆಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

"ಕುಂಚಿಟಿಗರು ಕುರುಬರ ಬೊಪ್ಪರಾಯನನ್ನು ತಮ್ಮ ಸಾಂಸ್ಕೃತಿಕ ವೀರನೆಂದು ಪರಿಗಣಿಸುತ್ತಾರೆ. ಆಂಧ್ರ ಪ್ರದೇಶದ ಮಡಕಶಿರ ತಾಲ್ಲೂಕಿನಲ್ಲಿರುವ ಕುಮಾರೇನಹಳ್ಳಿಯ ಕುರುಬರ ದೈವ ಬೀರಲಿಂಗೇಶ್ವರನಿಗೆ ಕುಂಚಿಟಿಗರ ನಲವತ್ತೆಂಟು ಕುಲಗಳೂ, ನಡೆದುಕೊಳ್ಳುತ್ತಾರೆ"[೫೩] ಎಂದು ಡಾ. ಮೀರಸಾಬಿಹಳ್ಳಿ ಶಿವಣ್ಣನವರ ಅಭಿಪ್ರಾಯವೂ ಕುರುಬರ ಮತ್ತು ಕುಂಚಟಿಗರ ಗಾಢವಾದ ಸಂಬಂಧವನ್ನು ಇನ್ನಷ್ಟು ಪುಷ್ಟೀಕರಿಸುತ್ತದೆ.

೧೧. ಕುಡುವೊಕ್ಕಲಿಗ ಕುರುಬರು

'ಕುಡು' ಎಂಬ ಧಾತು ಬಹುಮುಖಿ ಅರ್ಥಗಳನ್ನು ಬಿಚ್ಚಿಡುತ್ತದೆ. 'ಕುಡ' (ಕುಡು) ವ್ಯವಸಾಯದ ಪ್ರಾರಂಭದ ಮೊದಲ ಸಲಕರಣೆ. ಸಮುದಾಯವೊಂದು ವ್ಯವಸಾಯದಲ್ಲಿ 'ಕುಡು'ವನ್ನು ಬಳಸಲು ಪ್ರಾರಂಭಿಸಿದವರೇ ಕುಡು/ಕೂಡು ಒಕ್ಕಲಿಗರು. ಕಬ್ಬಿಣದ ಶೋಧದೊಂದಿಗೆ ಆಹಾರೋತ್ಪಾದನೆಯ ಸಲಕರಣೆಗಳು ಲಭ್ಯವಾದವು. ಅವುಗಳಲ್ಲಿ 'ಕುಡು' ಮಹತ್ವವುಳ್ಳದ್ದು, ಕುಳ, ಕುಡುಗೋಲು, ಕುಡಚಿಗೆ, ಕೊಡಲಿ ಮುಂತಾದವುಗಳ ಬಳಕೆಯಿಂದ ಈ ಹೆಸರು ಬಂದಿರಬಹುದು.

ಕುಡು ಒಕ್ಕಲಿಗ ಅಥವಾ ಕೂಡು ಒಕ್ಕಲಿಗ ಕುರುಬ ಸಮುದಾಯದ ಒಂದು ಒಳಪಂಗಡ. ಇದರ ನಿಜರೂಪ ಕೂಡು ಒಕ್ಕಲಿಗ ಎಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು 'ಕುಡ' ಶಬ್ದವನ್ನು ಗಮನಿಸಿ ಒಕ್ಕಲುತನದಲ್ಲಿ ಇದನ್ನು ಒಳಸಿದ ಪ್ರಥಮರು ಎಂದು ಹೇಳುತ್ತಾರೆ. ಇದಲ್ಲದೆ ಸಾಮೂಹಿಕ ಕೃಷಿ ಎಂಬ ವಿಶಾಲಾರ್ಥವೂ ಪ್ರಾಪ್ತವಾಗಿಲ್ಲ. ಅಂತೆಯೇ 'ಕುಡುವ' ಶಬ್ದಕ್ಕೆ ಒಕ್ಕಲಿಗ ಎಂಬರ್ಥವೂ ಇದೆ.

ಕುಡುವೊಕ್ಕಲಿಗರು ಕರ್ನಾಟಕದ ಬಹುಪಾಲು ಜಿಲ್ಲೆಗಳಲ್ಲಿದ್ದರೂ ಅವರ ಸಂಖ್ಯಾ ಬಾಹುಳ್ಯವಿರುವುದು ವಿಜಾಪುರ ಮತ್ತು ಗದಗ ಜಿಲ್ಲೆಗಳಲ್ಲಿ. ಇಂದು ಕುಡುವೊಕ್ಕಲಿಗರು ಎಲ್ಲ ದೃಷ್ಟಿಯಿಂದಲೂ ಕುರುಬರಿಗಿಂತ ವಿಭಿನ್ನವಾದ ಒಂದು ಪ್ರತ್ಯೇಕವಾದ ಸಮುದಾಯ. ಸದ್ಯಕ್ಕೆ ವೀರಶೈವ ಮತಾವಲಂಬಿಗಳಾಗಿರುವ ಇವರು ಜಾತಿ ಶ್ರೇಣಿಯಲ್ಲಿ ಕುರುಬರಿಗಿಂತಲೂ ಮೇಲಿದ್ದಾರೆ. ಆದರೆ ಮೊದಲಿನಿಂದಲೂ ಕುರುಬರು ಮತ್ತು ಕುಡುವೊಕ್ಕಲಿಗರು ಭಿನ್ನರಲ್ಲ. ಅವರಿಬ್ಬರೂ ಅಣ್ಣ ತಮ್ಮಂದಿರಾಗಬೇಕೆಂಬ ಅಲಿಖಿತ ಹೇಳಿಕೆಯೊಂದು ಎರಡೂ ಸಮುದಾಯದ ಜನರಲ್ಲಿ ಮನೆಮಾಡಿದೆ. ಈ ಹೇಳಿಕೆ ಅಥವಾ ನಂಬಿಕೆಗೆ ಆಧಾರಗಳಿಲ್ಲದಿಲ್ಲ.

ಕರ್ನಾಟಕದ ಒಕ್ಕಲಿಗರಲ್ಲಿ ಮುಖ್ಯವಾಗಿ ಎರಡು ಬಗೆಗಳು. ಒಂದು ದಕ್ಷಿಣ ಕರ್ನಾಟಕ ಭಾಗದವರು ಮತ್ತೊಂದು ಉತ್ತರ ಕರ್ನಾಟಕದ ಒಕ್ಕಲಿಗರು. ಈ ಉತ್ತರ ಕರ್ನಾಟಕದಲ್ಲಿ ಕಂಡುಬರುವ ಒಕ್ಕಲಿಗರನ್ನೇ 'ಕುಡುಒಕ್ಕಲಿಗ'ರೆಂದು ಕರೆಯಲಾಗುತ್ತದೆ. ಕರ್ನಾಟಕದ ಕುಡುಒಕ್ಕಲಿಗ ಮತ್ತು ಮಹಾರಾಷ್ಟ್ರದ ಶೇತಕರಿ ದನಗರ್ ಸಮುದಾಯಗಳಿಗೆ ಕೆಲವು ಹೋಲಿಕೆಗಳನ್ನು ಸಮಾಜಶಾಸ್ತ್ರಜ್ಞರು ಗುರ್ತಿಸಿದ್ದಾರೆ. ಅಂದರೆ ಕುಡು ಒಕ್ಕಲಿಗರ ಮೂಲವನ್ನು ಕುರುಬ ಸಮುದಾಯದಲ್ಲಿ ಗುರ್ತಿಸುತ್ತಾರೆ.

ಪಶುಪಾಲಕ ಸಮುದಾಯವೊಂದು ಗುಡ್ಡಗಾಡು ಪ್ರದೇಶದಲ್ಲಿ ಹೈನುಗಾರಿಕೆ ಆರಂಭಿಸಿ ಗವಳಿಗರಾದರೆ, ಫಲವತ್ತಾದ ಪ್ರದೇಶಗಳಲ್ಲಿ ಕೃಷಿಚಟುವಟಿಕೆಯನ್ನು ಆರಂಭಿಸಿ ಕುಡುವೊಕ್ಕಲಿಗರಾದರು. ಇದಕ್ಕೆ ಪೂರಕವೆನ್ನುವಂತೆ 'ತಗರಪವಾಡ'ದಲ್ಲಿ

'ಕಂದ ನೀ ಕುಡಿವೊಕ್ಕಲಿಗ ಕುರಿಗೂಡಿದ ಕಾರಣ
ದಿಂದೆ ಕುರುಬಗೌಡನಾಗಿ
ನಿನ್ನಯ ಕುಲದೈವ ವೀರಬೀರಯ್ಯಗೆ
ಮುಂದೆ ಒಕ್ಕಲು ಆಗಿ ಬದುಕು"[೫೪]

(ತಗರ ಪವಾಡ ಸಂಧಿ-೨, ಪದ್ಯ ೫೮) ಎಂಬ ಪದ್ಯ ಲಭ್ಯವಾಗುತ್ತದೆ. ಈ ಪದ್ಯದಲ್ಲಿ ಶಿವನು ಉಂಡಾಡು ಪದ್ಮಣ್ಣನಿಗೆ ಹೇಳುತ್ತಿರುವುದರಿಂದ ಆದಿಗೊಂಡ ಮತ್ತು ಅವನ ಮಕ್ಕಳೆಲ್ಲ ಕುಡುವೊಕ್ಕಲಿಗ ರೆಂಬುದು ಸ್ಪಷ್ಟವಾಗುತ್ತದೆ.

ಭಾರತದೇಶದ ಕುರುಬರ ಚರಿತ್ರೆ ಬರೆದಿರುವ ವಿ.ಆರ್. ಹನುಮಂತಯ್ಯನವರು ಕುಡುವೊಕ್ಕಲಿಗರನ್ನು ಕುರುಬರ ಒಳಪಂಗಡದಲ್ಲಿಯೇ ಸೇರಿಸುತ್ತಾರೆ. ಇದಕ್ಕೆ ಅವರು ಕೊಡುವ ಆಧಾರವೆಂದರೆ "ಕುರುಬರು ಕುಡುವೊಕ್ಕಲಿಗರು ಒಂದೇ ಕುಲದ ದಾಯಾದಿಗಳು"[೫೫] ಎಂದು ರುದ್ರ ಬ್ರಹ್ಮಾಂಡ ಪುರಾಣವೆಂಬ ಪುರಾತನ ಗ್ರಂಥದಲ್ಲಿ ಹೇಳಿದೆ ಎಂಬುದು.

ಕುರುಬರ ಹಾಲುಮತ ಪುರಾಣದಲ್ಲಿ ಕುರುಬ ಮತ್ತು ಕುಡುವೊಕ್ಕಲಿಗರ ಉಲ್ಲೇಖ ಬರುತ್ತದೆ. "ಬಿಜಾಪುರ ಸಮೀಪದ ಬಿಜ್ಜರಗಿ ಭೂತಾಳಸಿದ್ಧ ಕುಡುಒಕ್ಕಲಿಗರ ಮನೆದೇವರು. ಭೂತಾಳ ಸಿದ್ಧನ ಗದ್ದುಗೆ ಹೊನವಾಡ ಗ್ರಾಮದಲ್ಲಿ ಹಂಡೆ ಕುರುಬರು ಪೂಜಾರಿಗಳಾಗಿ ಇದ್ದು ಎರಡು ಸಮುದಾಯಗಳ ಸಂಬಂಧವನ್ನು ಸೂಚಿಸುತ್ತದೆ"[೫೬] ಎಂದು ಚಂದ್ರಕಾಂತ ಬಿಜ್ಜರಗಿ ಅಭಿಪ್ರಾಯಪಡುತ್ತಾರೆ.

ಮುಂಬೈ ಕರ್ನಾಟಕ ಗೆಝೆಟಿಯರ್‌ನಲ್ಲಿ ರಡ್ಡೇರ ಬಗೆಗೆ ಹೇಳುವಾಗ "ಕುರುಬರ ಮೂಲ ಪುರುಷನಾದ 'ಕುರುಪಿ' ಎಂಬುವವನಿಗೆ ಕುಡುವೊಕ್ಕಲಿಗ ಎಂಬ ಸಹೋದರನಿದ್ದನು"[೫೬] ಎಂಬ ಮಾತು ಬರುತ್ತದೆ. ಇದರಿಂದಲೂ ಈ ಸಮುದಾಯಕ್ಕೆ ಕುಡುವೊಕ್ಕಲಿಗೆ ಎಂಬ ಹೆಸರು ಬಂದಿರಬಹುದು.

ಕುಡುವೊಕ್ಕಲಿಗ ಪದದ ನಿಷ್ಪತ್ತಿಯನ್ನು ಬೇರೆ ರೀತಿಯಲ್ಲಿ ಹೇಳಲಾಗುತ್ತಿದೆ. ಕುಡು ಒಕ್ಕಲಿಗ ಎಂದು ವಿಗ್ರಹವಾಕ್ಯ ಮಾಡಿದರೆ ಕುಡು ಎನ್ನುವುದು ಒಕ್ಕಲುತನದ ಒಂದು ಉಪಕರಣವಾಗಿರುವುದರಿಂದ ಒಕ್ಕಲಿಗನಿಗೆ ಹೊಂದುತ್ತದೆ. ವ್ಯವಸಾಯದಲ್ಲಿ ಕುಡುವನ್ನು ಉಪಯೋಗಿಸುವ ಒಕ್ಕಲಿಗನು ಕುಡುವೊಕ್ಕಲಿಗನಾಗುವನೆಂದು ಸರಳವಾಗಿ ಅರ್ಥೈಸಬಹುದು. ಶಂ.ಭಾ.ಜೋಶಿಯವರು 'ಕುಡು' ಎಂದರೆ ಒಕ್ಕಲಿಗ ಎಂಬ ಅರ್ಥ ಕೊಟ್ಟು ಕುಡುಒಕ್ಕಲಿಗ ಎರಡೂ ಸಮಾನಾರ್ಥಕಗಳೆನ್ನುತ್ತಾರೆ."[೬೫]

ಕುಡುವೊಕ್ಕಲಿಗರು ಮೂಲತಃ ಕೃಷಿ ಕಾರ್ಯಕ್ಕೆ ಅಂಟಿಕೊಂಡವರು. ಭೂಮಿ ಮತ್ತು ಪಶು ಸಂಪತ್ತನ್ನು ಹೆಚ್ಚು ಪ್ರೀತಿಸುವವರು. ಈ ಸಮುದಾಯದವರು ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚು ಸಾಂದ್ರವಾಗಿದ್ದಾರೆ. ಬಹುಶಃ ಕುರುಬ ಜನಾಂಗದಿಂದ ಕವಲೊಡೆದು ಕೃಷಿ ಮತ್ತು ಪಶುಪಾಲನೆಗಳಲ್ಲಿ ತೊಡಗಿಸಿಕೊಂಡಿರುವ ಇವರು ಲಿಂಗಾಯಿತರ ಆದಿ ಬಣಜಿಗ, ಬಣಜಿಗ, ಪಂಚಮಸಾಲಿ ಇನ್ನೂ ಮುಂತಾದ ಲಿಂಗಾಯತ ಒಳಪಂಗಡಗಳ ನಡುವೆ ಸಂಬಂಧವನ್ನ ಬೆಳೆಸಿಕೊಳ್ಳುತ್ತಿದ್ದಾರೆ.

ಗುಡ್ಡಗಾಡು ಪ್ರದೇಶದಲ್ಲಿರುವಾಗ ಗೊಂಡ(ಕೊಂಡ=ಬೆಟ್ಟ) ಎನಿಸಿಕೊಂಡಿರುವುದರಿಂದಲೇ ಇವರ ಅಡ್ಡ ಹೆಸರುಗಳೆಲ್ಲ ಕಾಮಗೊಂಡ, ಜನಗೊಂಡ, ಗೌರಗೊಂಡ ಮಡಗೊಂಡ, ಮಾಳಗೊಂಡ, ಗಂಗನಗೊಂಡ ಎಂದು ಉಳಿದುಕೊಂಡು ಬಂದಿವೆ. ಮತ್ತೊಂದು ವೈಶಿಷ್ಟ್ಯವೆಂದರೆ ದಕ್ಷಿಣ ಭಾರತದ ಕುರುಬ, ಕುಡುಒಕ್ಕಲಿಗ, ರೆಡ್ಡಿ ಜನಾಂಗಗಳ ಸಂಪ್ರದಾಯಗಳಲ್ಲಿ ಹೋಲಿಕೆ ಕಾಣಬಹುದು. ಸೊನ್ನಲಿಗೆ ಸಿದ್ಧರಾಮನು ಕುಡು ಒಕ್ಕಲಿಗನಾಗಿದ್ದನು. ಕುಡು ಒಕ್ಕಲಿಗರಲ್ಲಿ ಐದು ಒಳಪಂಗಡಗಳಿದ್ದು, ವಿವಾಹ ಸಂಬಂಧವು ನಿಷೇಧಿತವಾಗಿರುತ್ತದೆ. ಕಾರಣ ದಾಯಾದಿಗಳೆಂಬ ಭಾವನೆ.

ಒಟ್ಟಾರೆಯಾಗಿ ಕುಡುವೊಕ್ಕಲಿಗರ ಹೆಸರು ಕುಡುದಿಂದಲೇ ಬಂದಿರುವುದೆಂಬ ಬಗ್ಗೆ ಸಂಶಯವಿಲ್ಲ. ಹೆಳವರೂ ಕುರುಬರ ಮತ್ತು ಕುಡುವೊಕ್ಕಲಿಗರ ಸಂಬಂಧವನ್ನು ಸಾರುತ್ತಲೇ ಬಂದಿದ್ದಾರೆ. ಉಂಡಾಡು

ಪದ್ಮಣ್ಣನಿಂದ ಕುರುಬ ಸಮುದಾಯವು ಬೆಳೆದಂತೆ ಕುಡುವೊಕ್ಕಲಿಗನಿಂದ ಕುಡುವೊಕ್ಕಲಿಗ ಸಮುದಾಯ ಬೆಳೆದಿದೆ. ಈ ಸಮುದಾಯವು ಇಂದು ಕೃಷಿ ಪ್ರಧಾನ ಸಂಸ್ಕೃತಿಯಲ್ಲಿ ಬದುಕುತ್ತಿದ್ದು ಆಧುನಿಕ ಬದುಕಿಗೆ ಒಗ್ಗಿಕೊಳ್ಳುತ್ತಿದೆ.

೧೨. ಗೊಲ್ಲ ಕುರುಬರು

ಗೊಲ್ಲರನ್ನು ಯಾದವ, ಅಡವಿಗೊಲ್ಲ ಮತ್ತು ಗೋಪಾಲರೆಂದು ಕರೆಯುವರು. ಇವರ ಸಮುದಾಯದ ಹೆಸರನ್ನು ಸಂಸ್ಕೃತದ 'ಗೋಪಾಲ' ಎಂಬ ಶಬ್ದದಿಂದ ನಿಷ್ಪತ್ತಿಯನ್ನು ಹೇಳಲಾಗಿದೆ. ಇದರರ್ಥವನ್ನು 'ಹಸುವನ್ನು ಸಾಕುವವ' ಎಂದು ಹೇಳಲಾಗುತ್ತದೆ.

" 'ಪಂಡಿತ ಕವಲಿ'ಯವರ 'ಕಸ್ತೂರಿ ಕೋಶ'ದಲ್ಲಿ ಗೊಲ್ಲ, ಗೋವಳ, ಗೊಲ್ಲವಾಳಿಗ, ಗೊಲ್ಲಳ, ಗೊಲ್ಲತಿ ಈ ಶಬ್ದಗಳಿಗೆ ಕ್ರಮವಾಗಿ ಗೋಪಾಲ, ಗೋವಳ, ದನಕಾಯುವವ, ಹಾಲುಮೊಸರು ಮಾರುವವ, ಗೊಲ್ಲನ ಹೆಂಡತಿ"[೩೯] ಎಂದು ಅರ್ಥೈಸಲಾಗಿದೆ.

ಕರ್ನಟಕದ ಗೊಲ್ಲರನ್ನು ಅಡವಿಗೊಲ್ಲ, ಹಟ್ಟಿಗೊಲ್ಲ, ಕಾಡುಗೊಲ್ಲ, ಊರುಗೊಲ್ಲ ಮುಂತಾಗಿ ವಿಂಗಡಿಸಿದರೂ 'ಕರಡಿಗೊಲ್ಲ' ಎನ್ನುವುದನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಒಳಪಂಗಡಗಳಾಗಿರದೆ ಭೌಗೋಳಿಕವಾಗಿ ಭಿನ್ನ ಪರಿಸರದಲ್ಲಿ ಗೊಲ್ಲರನ್ನು ಕರೆಯುವ ಭಿನ್ನ ನಾಮರೂಪಗಳಷ್ಟೇ ಆಗಿರುತ್ತದೆ. ಗೊಲ್ಲರು ಮೂಲತಃ ಪಶುಪಾಲಕರಾಗಿದ್ದರಿಂದ ಅವರನ್ನು 'ಗೋಪಾಲ' 'ಗೋಪಿ' ಎಂದು ಸಂಸ್ಕೃತದಲ್ಲಿ ಕರೆಯಲಾಗುತ್ತಿತ್ತು. ಇದು ಮುಂದೆ ಪ್ರಾಕೃತದಲ್ಲಿ ಗೋವಾಲಿಯಾಗಿ ನಂತರದಲ್ಲಿ ಕನ್ನಡದ ಗೋವಳನೆಂದೂ ರೂಪಾಂತರ ಹೊಂದಿ ಇದೇ ಮುಂದೆ ಗವಳಿ-ಗೌಳಿ-ಗೋಪಾಲ ಎಂದು ವಿಕಾಸಗೊಂಡಿರಬಹುದು.

ಮೂಲ ಸಂಸ್ಕೃತಿಯ ಸೊಗಡನ್ನು ಉಳಿಸಿಕೊಂಡು ಬಂದ ಜನಸಮುದಾಯಗಳಲ್ಲಿ ಗೊಲ್ಲ ಕುರುಬರು ಪ್ರಮುಖರು. ಕಾಡಿನಲ್ಲಿ ವಾಸಮಾಡುತ್ತಾ ದನಗಳನ್ನು ಮೇಯಿಸುವವನಿಗೆ 'ಕಾಡುಗೊಲ್ಲ' ಎಂದು ಕರೆಯುತ್ತಾರೆ. ಹಿಂದೆ ಈ ಕಾಯಕವನ್ನು ಮಾಡುತ್ತಿದ್ದುದ ಬಿಟ್ಟು ಊರ ಸೇರಿದವರಿಗೆ ಊರು ಗೊಲ್ಲ ಎಂದು ಕರೆದಿರಬಹುದು. ಆದರೆ ಈ ಎರಡೂ ಗೊಲ್ಲ ಬುಡಕಟ್ಟುಗಳಿಗೆ ಅನೇಕ ಸಾಂಸ್ಕೃತಿಕ ವ್ಯತ್ಯಾಸಗಳಿವೆ. ಇವುಗಳ ಮೂಲ ಕೂಡ ಬೇರೆ ಬೇರೆಯೇ ಆಗಿದೆ. ಕಾಡುಗೊಲ್ಲರು ಕರ್ನಾಟಕದಲ್ಲಿ ಅತಿ ದಟ್ಟವಾಗಿ ನೆಲಸಿದ್ದರೆ ಊರುಗೊಲ್ಲರು ಆಂಧ್ರ ಪ್ರದೇಶದಲ್ಲಿ ಹೆಚ್ಚಾಗಿದ್ದಾರೆ. ಆಂಧ್ರ ಮತ್ತು ಕರ್ನಾಟಕದಲ್ಲಿ 'ಗೊಲ್ಲ' ಎಂಬ ಜಾತಿವಾಚಕ ಶಬ್ದವು ಬಳಕೆಯಾಗುತ್ತಿದೆ.

"ತಮಿಳುನಾಡು ಮತ್ತು ಕೇರಳದಲ್ಲಿ ಈ ಜಾತಿವಾಚಕ ಬಳಕೆಯಲ್ಲಿ ಇದ್ದಂತಿಲ್ಲ. ಅದೇ ರೀತಿ ಮರಾಠಿಯಲ್ಲೂ ಕಂಡುಬರದು. ಮಹಾರಾಷ್ಟ್ರದಲ್ಲಿ 'ಗೊಲ್ಲ' ಎಂಬುದಕ್ಕೆ ಸಂವಾದಿಯಾಗಿ 'ಗೌಳಿ' ಎನ್ನುವ ಪದ ಬಳಕೆಯಲ್ಲಿದೆ"[೪೦] ಎಂದು ಡಾ. ಎಂ.ಬಿ.ನೇಗಿನಹಾಳ ಅವರು ಹೇಳುತ್ತಾರೆ.

"ಕಾಡುಗೊಲ್ಲರನ್ನು 'ಅಡವಿಗೊಲ್ಲರು', 'ಕರಡಿಗೊಲ್ಲರು', 'ಕಲ್ಲಿಗೊಲ್ಲರು', 'ಹಟ್ಟಿಗೊಲ್ಲರು' ಎಂಬ ಹೆಸರುಗಳಿಂದ ಕರೆಯುವ ವಾಡಿಕೆ ಇದೆ"[೬೧] ಎನ್ನುತ್ತಾರೆ ತೀ.ನಂ ಶಂಕರನಾರಾಯಣ ಅವರು. ಅಡವಿಗೊಲ್ಲರು ಕಾಡುಗೊಲ್ಲರು ಒಂದೇ ಅರ್ಥದ ಶಬ್ದಗಳಾಗಿವೆ" ಪಾವಗಡ ಮತ್ತು ಕೂಡ್ಲಿಗಿ ಭಾಗದಲ್ಲಿನ ಕಾಡುಗೊಲ್ಲರನ್ನು ಕರಡಿಗೊಲ್ಲರೆಂದು ಕರೆದರೆ ಮಾತ್ರ ಅರ್ಥವಾಗುತ್ತದೆ[೬೨] ಎಂದು ತೀ.ನಂ. ಶಂಕರನಾರಾಯಣ ತಿಳಿಸುತ್ತಾರೆ.

ಮಧ್ಯ ಕರ್ನಾಟಕದಲ್ಲಿ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಇವರಿಗೆ 'ಕೃಷ್ಣಗೊಲ್ಲರು' ಎಂಬ ಮತ್ತೊಂದು ಹೆಸರೂ ಇದೆ. ತುಮಕೂರು, ಚಿತ್ರದುರ್ಗ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಕಾಣಸಿಗುತ್ತಾರೆ. ಚಿತ್ರದುರ್ಗ ತುಮಕೂರು ಜಿಲ್ಲೆಗಳು ಇವರ ಸಾಂಸ್ಕೃತಿಕ ನೆಲೆಗಳಾಗಿವೆ. ಹಾಸನ, ಬಳ್ಳಾರಿ, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡು ಬರುತ್ತಾರೆ.

೧೯೦೧ರಲ್ಲಿ ಮೈಸೂರು ಸರ್ಕಾರವು ಗೊಲ್ಲರನ್ನು ಊರುಗೊಲ್ಲ ಮತ್ತು ಕಾಡುಗೊಲ್ಲ ಎಂದು ಪ್ರತ್ಯೇಕಿಸಿತು. ತೀನಂ ಶಂಕರನಾರಾಯಣರು ಹೇಳುವಂತೆ "ಗೊಲ್ಲರಿಗೆ ಬೇಡರು ಕುರುಬರು ಕುಂಚಿಟಿಗರೊಂದಿಗೆ ಬಳಕೆ ಹೆಚ್ಚು"[೬೩] ಎಂದು ತಿಳಿಸುತ್ತಾರೆ.

'ಕುರಿ ಕುಂದಣವು, ಮರಿ ಮಾಣಿಕವು, ಕುರಿಸಾಕಿ ಕುಬೇರರಾಗೋಣ' ಎಂಬ ಮಾತಿಗೆ ಅಕ್ಷರಶಃ ಬದುಕುತ್ತಿರುವವರು ಗೊಲ್ಲರಾಗಿದ್ದಾರೆ. ಗೊಲ್ಲರಿಗೆ ಮೂಲವೃತ್ತಿ ಪಶುಪಾಲನೆಯಾಗಿತ್ತು. ಬೇಟೆ, ಪಶುಪಾಲನೆ ಮತ್ತು ವ್ಯವಸಾಯ ಕ್ರಮವಾಗಿ ಸಾಮಾಜಿಕ ಬೆಳವಣಿಗೆಯ ಮೂರು ಹಂತಗಳಾಗಿದ್ದು ಕಾಲಗತಿಯಲ್ಲಿ ಈ ಪಶುಪಾಲನೆಯನ್ನು ದಾಟಿರುವ ಗೊಲ್ಲರು ಇದೀಗ ವ್ಯವಸಾಯ ಮತ್ತು ಕುರಿಸಾಕಾಣಿಕೆಯನ್ನು ಅವಲಂಬಿಸಿ ಬದುಕುತ್ತಿದ್ದಾರೆ.

ಕಾಡುಗೊಲ್ಲರ ವೃತ್ತಿ ಅವರ ಹೆಸರಿನಲ್ಲಿಯೇ ಇದೆ. ಶತಶತಮಾನಗಳಿಂದಲೂ ಪಶುಪಾಲನಾ ವೃತ್ತಿ ಮಾಡಿಕೊಂಡು ಅಡವಿಯಲ್ಲಿ ವಾಸ ಮಾಡಿ ಬಂದವರು. ದನಕರುಗಳನ್ನು ಪಾಲನೆ ಮಾಡುತ್ತಲೇ ಬದುಕಿದ ಇವರು ಪಶುಪಾಲನೆ ಲಾಭದಾಯಕವಲ್ಲವೆಂದು ತಿಳಿದ ಮೇಲೆ ಅದನ್ನು ಬಿಟ್ಟು ಚಿಕ್ಕಪುಟ್ಟ ಪ್ರಮಾಣದಲ್ಲಿ ವ್ಯವಸಾಯ ವೃತ್ತಿ ಹಿಡಿದಿದ್ದಾರೆ. ಕೆಲವರು ಊರು ಪಟ್ಟಣ ಸೇರಿ ಆಧುನಿಕತೆಯ ಬದುಕಿಗೆ ಹೊಂದಿಕೊಂಡರೂ ಮೂಲ ಸಾಂಸ್ಕೃತಿಕ ಸೊಗಡಿಗೆ ಧಕ್ಕೆ ಬರದಂತೆ ಜೀವಿಸುತ್ತಿರುವವರು ಗೊಲ್ಲರು.

ಕಳೆದ ಶತಮಾನಗಳಲ್ಲಿ ಕಾಡುಗೊಲ್ಲರು ಅಲೆಮಾರಿಗಳಾಗಿದ್ದರು. ತಮ್ಮ ಗುಡಿಸಲುಗಳನ್ನು, ದೇವತೆಗಳನ್ನು, ಪ್ರಾಣಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿಕೊಳ್ಳುತ್ತ ಕಾಲ

ಕಳೆಯುತ್ತಿದ್ದರು. ಇತ್ತೀಚೆಗೆ ಒಂದೆಡೆ ನೆಲೆನಿಂತು ವ್ಯವಸಾಯದೊಡನೆ ಕುರಿಸಾಕಾಣಿಕೆಯನ್ನು ಪ್ರಧಾನ ವೃತ್ತಿಯಾಗಿಸಿಕೊಂಡಿದ್ದಾರೆ. ಸಣ್ಣ ಪ್ರಮಾಣದ ಕುರಿಸಾಕಾಣಿಕೆಯಂತೆಯೇ ದೊಡ್ಡ ಪ್ರಮಾಣದ ಕುರಿಪಾಲನೆ ಮಾಡುವವರು ಗೊಲ್ಲರಲ್ಲಿ ಕಂಡು ಬರುತ್ತಾರೆ. ಹಿಂದಿನ ಕಾಲದಲ್ಲಿ ಗ್ರಾಮೀಣ ಬದುಕಿನಲ್ಲಿ ದನಕರುಗಳು ಹೇಗೆ ಐಶ್ವರ್ಯ ಸಂಪತ್ತಿನ ಸಂಕೇತಗಳಾಗಿದ್ದವೋ ಅಂತೆಯೇ ಕುರಿಗಳ ಸಂಖ್ಯೆಯಿಂದ ಗೊಲ್ಲರ ಶ್ರೀಮಂತಿಕೆ ಪ್ರಕಟವಾಗುತ್ತದೆ.

ಗೊಲ್ಲರು ಕುರಿಗಳಿಗೆ ಪ್ರತ್ಯೇಕ ರೊಪ್ಪಕಟ್ಟಿ ಅವುಗಳ ಸಂರಕ್ಷಣೆ ಮಾಡುತ್ತಾರೆ. ಕುರಿಗಳನ್ನು ಹೊಡೆದುಕೊಂಡು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದೂ ಉಂಟು. ಈ ವಲಸೆಯ ವೈಶಿಷ್ಟ್ಯವೆಂದರೆ ಕೇವಲ ಸಮುದಾಯ ಮತ್ತು ಕುರಿಗಳ ವಲಸೆ ಮಾತ್ರವಾಗಿರದೆ ಸಾಂಸ್ಕೃತಿಕ ವಲಸೆಯೂ ಆಗಿರುತ್ತದೆ. ವಲಸೆ ಸಂದರ್ಭದಲ್ಲಿ ಪ್ರಯಾಣ ಮಾಡುವಾಗ ತಮ್ಮ ಕುರಿಗಳನ್ನು ಅಲ್ಲಲ್ಲಿ ವ್ಯವಸಾಯ ಸ್ಥಳಗಳಾದ ಗದ್ದೆ ತೋಟಗಳಲ್ಲಿ ಕುರಿಮಂದೆಯನ್ನು ಹಾಕಿಸುವುದೂ ಉಂಟು. ಇದರಿಂದ ಜಮೀನಿನ ಮಾಲೀಕನಿಗೆ ಒಂದೆಡೆ ಭೂಮಿಯ ಫಲವತ್ತತೆ ಕಂಡು ಬಂದರೆ ಮತ್ತೊಂದೆಡೆ ಇವರ ಹೊಟ್ಟೆಪಾಡು ಸಾಗುವುದುಂಟು. ಜೊತೆಗೆ ಕುರಿಯ ಮೈಮೇಲೆ ಬೆಳೆಯುವ ತುಪ್ಪಟವನ್ನು ಕಂಬಳಿ ನೇಯುವ ಕುರುಬರಿಗೆ ಮಾರಿಕೊಳ್ಳುತ್ತಾರೆ. ಹೀಗೆ ಪಶುಪಾಲನೆಗಿಂತ ಗೊಲ್ಲರಿಗೆ ಇತ್ತೀಚೆಗೆ ಕುರಿಸಾಕಾಣಿಕೆಯು ಸ್ವಲ್ಪ ಮಟ್ಟಿಗೆ ಉತ್ತಮ ಜೀವನೋಪಾಯಕ್ಕೆ ಸಹಾಯಕವಾಗಿದೆ.

ಕುರುಬರು, ಗೊಲ್ಲರು, ಕುಂಚಿಟಿಗರು ಮುಂತಾದ ಸಮುದಾಯಗಳು ಪಶುಪಾಲನೆ ಹೈನುಗಾರಿಕೆ, ಬೇಟೆ ಹಿನ್ನೆಲೆಯಲ್ಲಿ ಬದುಕುತ್ತಿದ್ದವರು ಕುರಿಸಾಕಾಣಿಕೆ, ಕಂಬಳಿನೇಯುವುದು, ಕೃಷಿ ಪ್ರಧಾನ ವೃತ್ತಿಯಾದ ಹಿನ್ನೆಲೆಯಲ್ಲಿ ಆಯಾ ಸಮುದಾಯಗಳಲ್ಲಿ ಒಳಪಂಗಡಗಳಾಗಿ ಬೇರ್ಪಡುವ ಬೆಳವಣಿಗೆಯನ್ನು ಕಂಡಿರಬಹುದು. ಜೊತೆಗೆ ಜಾತಿಗಳಾಗಿ ಪರಿವರ್ತನೆಯಾಗುವ ಪೂರ್ವದಲ್ಲಿನ ಜೀವನಶೈಲಿ, ಸಮಾನ ಆಚರಣೆಗಳು ಹಾಗೂ ನಂಬಿಕೆಗಳ ಸಾದೃಶ್ಯವಿರುವುದರಿಂದ ಅನನ್ಯ ಸಂಬಂಧವು ಈ ಎರಡು ಸಮುದಾಯಗಳಲ್ಲಿ ಉಂಟಾಗಿರಬಹುದು.

೧೩. ಜಂಡೆ (ಝುಂಡೆ) ಕುರುಬರು

ಪ್ರಾಚೀನ ಕಾಲದಿಂದಲೂ ಒಂದಾಗಿ ಇದ್ದ ಜನಸಮುದಾಯಗಳು ಬೆಳವಣಿಗೆಗೊಂಡಂತೆ ಕವಲೊಡೆದು ಬೇರೆಬೇರೆಯಾಗಿ ನೈಸರ್ಗಿಕ ಬದಲಾವಣೆಗಳಿಂದಲೋ ಗುಳೆಕಟ್ಟಿ ತಿರುಗುವುದರಿಂದಲೋ, ಸಾಹಸ ಪ್ರವೃತ್ತಿಯಿಂದಲೋ, ವ್ಯಾಪಾರ ಮನೋವೃತ್ತಿಯೊಂದಲೋ, ಹಲವಾರು ಜನಸಮುದಾಯುಗಳೂ ಒಂದರೊಡನೊಂದು ಬೆರೆತುಕೊಂಡುದರಿಂದಲೋ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಕಾಲಕ್ಕೆ ತಕ್ಕಂತೆ ಹೊಸ ಆಯಾಮಗಳನ್ನು ತಮ್ಮಲ್ಲಿ ಅಳವಡಿಸಿಕೊಂಡ ಭಾರತೀಯ ರಾಜವಂಶಸ್ಥ ಜನಾಂಗಗಳಲ್ಲಿ ಕುರುಬ ಸಮುದಾಯವೂ ಒಂದು.

ಕರ್ನಾಟಕ ಕುರುಬರ ಒಳಪಂಗಡಗಳಲ್ಲಿ ಒಂದಾದ ಜಂಡೆ (ಝುಂಡೆ) ಕುರುಬರು ರಾಜಮಹಾರಾಜರ ಮುಂದೆ ಝುಂಡಾ ಹಿಡಿಯುವ ವೃತ್ತಿ ನಿರತ ಸಮುದಾಯ. ಹಿಂದಿಯ ಝುಂಡಾ, ಝುಂಡಾ ಮತ್ತು ಮರಾಠೀಯ ಝೇಂಡಾ ಪದಗಳಿಂದ ಈ ಶಬ್ದವು ಹುಟ್ಟಿಕೊಂಡಿರಬಹುದು. ಜಂಡೆ ಎಂದರೆ ಜಾಂಡೆ, ಜಾಂಡೇಯು, ಝುಂಡಾ, ಝೂಂಡೇಯು ಎಂಬ ಪರ್ಯಾಯ ಪದಗಳು ಲಭ್ಯವಿದ್ದು ಬಾವುಟ ಹಿಡಿದವರು, ಧ್ವಜ ಹಿಡಿದವರು ಎಂಬರ್ಥವು ಬರುತ್ತದೆ.

ಧನಗಾರರ ಕೆಲವು ಸಮೂಹಗಳು ನರ್ಮದಾ ಹಾಗೂ ಗೋದಾವರಿ ನದಿ ತೀರಗಳಲ್ಲಿ ಬಂದು ನೆಲೆಸಿದರು. ಇವರಲ್ಲಿ ಕೆಲ ಶಕ್ತಿಯುತರು, ನಂಬಿಗಸ್ತರು, ಸಾಹಸಿಗರು ತಮ್ಮ ಜೀವದ ಹಂಗು ತೊರೆದು ಕುದುರೆಗಳನ್ನೇರಿ ಕೈಯಲ್ಲಿ ಧ್ವಜವನ್ನು ಹಿಡಿದುಕೊಂಡು ರಣಭೂಮಿಯನ್ನು ಪ್ರವೇಶಿಸಿ ಯುದ್ಧ ಮಾಡುತ್ತಿದ್ದರು. ಇವರೇ ಮುಂದೆ ಝುಂಡೇ ದನಗರ, ಝುಂಡೆ ರಾವುತ, ಝುಂಡೆ ಕುರುಬ ಎಂದ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ.

"ಕುರುಬ ಸಮುದಾಯದವರು ಆರ್ಯಪೂರ್ವಕಾಲದಿಂದಲೂ ಪಂಜಾಬದವರೆಗೆ ವ್ಯಾಪಿಸಿಕೊಂಡಿದ್ದರು. ಕುರಿಗಾರರು, ಧನಗಾರರು, ವೀರರು, ವರ್ತಕರು ಹಾಗೂ ಪುರಪತಿಗಳು ಎಂಬ ಬಗೆಯ ಜನರು ವ್ಯವಸಾಯ ಭೇದದಿಂದ ಅವರಲ್ಲಿ ಒಳಪಂಗಡಗಳು ಆಗಿದ್ದು ಕಂಡು ಬರುತ್ತದೆ"[೬೪] ಎಂದು ಶಂ.ಬಾ.ಜೋಶಿಯವರು ಹೇಳುತ್ತಾರೆ. ಇಲ್ಲಿ ಬರುವ ವೀರರು ಎಂಬ ಪಂಗಡವು ಈ ಝುಂಡೆ ರಾವುತರೇ ಆಗಿರಬಹುದೆಂಬುದು ಸ್ಪಷ್ಟವಾಗುತ್ತದೆ.

ಮಹಾರಾಷ್ಟ್ರದ ಪ್ರಖ್ಯಾತ ಧನಗರ ವಿದ್ವಾಂಸರಲ್ಲಿ ಒಬ್ಬರಾದ ಶಂಕರ ಬಾಬುರಾವ್ ಲಾಂಡೆ ತಮ್ಮ ಅಧ್ಯಯನದಲ್ಲಿ "ಒಟ್ಟು ಮೂವತ್ತೈದು ಉಪಜಾತಿಗಳನ್ನು ಹೆಸರಿಸುತ್ತಾ ಹತ್ಕರ್>ಹಟ್ಕರ್> ಝುಂಡೆವಾಲಾ"[೬೫] ಎಂಬುದನ್ನು ಸಹ ಗುರುತಿಸುತ್ತಾರೆ.

ಡಾ. ಶಾಮ್‌ಸಿಂಗ್ ಶಶಿಯವರು ತಮ್ಮ ಭಾರತದ ಕುರುಬರು ಕೃತಿಯಲ್ಲಿ "ಅಸಲ್ ಧನಗರ್, ಹಟ್ಕರ್, ಅಹರ್ ಮತ್ತು ಖಿಲಕಾರಿ ಎಂಬ ನಾಲ್ಕು ರೀತಿಯ ಧನಗಾರರನ್ನು ಗುರುತಿಸುತ್ತಾ ಗೋತ್ರಗಳನ್ನು ತಿಳಿಸುವ ಪಟ್ಟಿಯಲ್ಲಿ ಝುಂಡೆ (ಜಂಡೆ) ಎಂಬ ಗೋತ್ರವನ್ನು ಗುರುತಿಸುತ್ತಾರೆ."[೬೬]

೧೯೭೭ ಬಾಂಬೆ ಗೆಝೆಟಿಯರ್‌ನಲ್ಲಿ ಖೈಲಾರಿ (ಕಿಲಾರಿ) ದನಗಾರ (ಸಲಗಾರ) ಹಟಗಾರ (ಹಟ್ಟಿಕಾರ್) ಹಂಡೆ (ಹಂಡೆರಾವುತ) ಎಂದು ಧನಗರರ ಪಂಗಡಗಳನ್ನು ಹೇಳುತ್ತಾ ಝುಂಡೆ ಮತ್ತು ಉರಸಾಲಿಯವರು ಎಂಬ ಮತ್ತೆರಡು ಉಪಪಂಗಡಗಳನ್ನು ಹೇಳಲಾಗಿದೆ.

ಮಹಾರಾಷ್ಟ್ರದ ಗಣಪತ್‌ರಾವ್ ಕುಳೆಕಾರ ಅವರು "ಕುರುಬ (ಧನಗರ್) ಸಮಾಜದ ಗೋತ್ರಗಳ ಬಗೆಗೆ ನಿರಂತರ ಐವತ್ತು ವರ್ಷಗಳ ಅಧ್ಯಯನ ಮಾಡಿ ಝುಂಡೆ, ಹಟ್ಕರ್, ಖಂಡೆ, ಹಂಡೆ ಮುಂತಾದ

ಉಪಜಾತಿಗಳನ್ನು ಉಲ್ಲೇಖಿಸುತ್ತಾ ಇವು ಮೂಲದಲ್ಲಿ ಒಂದೇ ಆಗಿದ್ದು ಕಾಲಾಂತರದಲ್ಲಿ ಉಪಜಾತಿಗಳಾಗಿ ನಿರ್ಮಾಣಗೊಂಡಿವೆ"[೬೬] ಎಂದು ಅಭಿಪ್ರಾಯ ಪಡುತ್ತಾರೆ. ಈ ಮೇಲಿನ ಎಲ್ಲಾ ಉಲ್ಲೇಖಗಳನ್ನು ನೋಡಿದಾಗ ಝುಂಡೆ ಎಂಬುದು ಧನಗರ ಸಮುದಾಯದ ಒಂದು ಪ್ರಮುಖ ಒಳಪಂಗಡವಾಗಿತ್ತು ಎಂಬುದರಲ್ಲಿ ಸಂದೇಹವಿರಲಾರದು.

ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಕರ್ನಾಟಕಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಈ ಸಮುದಾಯದವರು ವತನದಾರರಾಗಿ, ಪಟೇಲರಾಗಿ, ದೇಶಮುಖರಾಗಿ ಹಿಂದಿನಿಂದಲೂ ಕಾರ್ಯಭಾರ ಮಾಡುತ್ತಾ ಬಂದಿದ್ದಾರೆ. ಮಧ್ಯ ಪ್ರದೇಶದ ಇಂದೋರ್ ಈ ಜನಾಂಗದ ಹಳೆಯ ವಾಸಸ್ಥಾನ ಎಂದು ತಿಳಿದುಬರುತ್ತದೆ. ಅಲ್ಲಿ 'ಧನಗರ್ ಝುಂಡೆ' ಎಂಬ ಆಡಳಿತಗಾರರಿದ್ದು ಅವರಲ್ಲಿ ಮಹಾರಾಣಿ ಅಹಲ್ಯಾಬಾಯಿ ತುಂಬಾ ಜನಪ್ರಿಯರಾದವರು. ಇವರು ಇಂದೋರದಿಂದ ಹಿಡಿದು ಮಲಪ್ರಭಾ ನದಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡಿದ್ದರು. ಮುನವಳ್ಳಿಯ ಮಲಪ್ರಭಾ ನದಿಯ ದಂಡೆಯ ಮೇಲೆ ಕಟ್ಟಿದ ವಿಶಾಲವಾದ ಕೋಟೆ ಹಾಗೂ ಸಿಂಧೆ ಹೋಳ್ಕರ್ ಎಂಬುವರ ಹೆಸರಿನಲ್ಲಿ ಕಟ್ಟಿದ ಸಿಂಧೋಗಿ ಎಂಬ ಊರನ್ನು ಸಹ ಹೆಸರಿಸಬಹುದು.

ಹೀಗೆ ಝುಂಡೆ ಸಮುದಾಯದವರು ತಮ್ಮ ರಾಜರ ಆಶ್ರಯವನ್ನು ಪಡೆದು ಇಂದೋರ್, ಗ್ವಾಲಿಯರ್‌ನಿಂದ ಹಿಡಿದು ಕೃಷ್ಣಾ ಮಲಪ್ರಭಾ ನದಿಯ ತೀರಗಳವರೆಗೂ ವ್ಯಾಪಿಸಿರುವುದು ಕಂಡು ಬರುತ್ತದೆ. ಕಾಲಾಂತರದಲ್ಲಿ ಮಲಪ್ರಭಾ, ಕೃಷ್ಣಾ ನದಿಗಳ ತೀರವನ್ನು ಬಿಟ್ಟು ಕಾವೇರಿ ತೀರದವರೆಗೂ ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳವರೆಗೂ ವ್ಯಾಪಿಸಿಕೊಂಡಿರುವರು. ಈ ರೀತಿಯಲ್ಲಿ ವ್ಯಾಪಿಸಿರುವ ಈ ಒಳಪಂಗಡವು ಹೊಂದಿರುವ ಸಂಪ್ರದಾಯ, ಆಚರಣೆ, ಆಚಾರ-ವಿಚಾರಗಳು ಇತರೆ ಕುರುಬರ ಒಳಪಂಗಡಗಳಿಗಿಂತ ತುಸು ಭಿನ್ನವಾಗಿ ಕಾಣುತ್ತದೆ. ಕರ್ನಾಟಕದ ಗಡಿಭಾಗಗಳಾದ ಬೀದರ್, ಬೆಳಗಾವಿ ಮುಂತಾದ ಸ್ಥಳಗಳಲ್ಲಿ ವಿಶೇಷವಾಗಿ ಕಂಡು ಬರುತ್ತಾರೆ.

೧೪. ದಾಸ ಕುರುಬರು

'ದಾಸ' ಎನ್ನುವ ಪರಿಕಲ್ಪನೆ ಊಳಿಗಮಾನ್ಯ ಸಂಸ್ಕೃತಿಯಿಂದ ನಿಷ್ಪನ್ನವಾದುದು. ಊಳಿಗಮಾನ್ಯ ಸಂಸ್ಕೃತಿಯಲ್ಲಿ 'ದಾಸ'ನೆಂದರೆ 'ತನ್ನ ಯಜಮಾನನಿಗೆ ತನ್ನನ್ನು ಪೂರ್ತಿಯಾಗಿ ಅರ್ಪಿಸಿಕೊಂಡವನು ಎಂದರ್ಥ. 'ದಾಸ' ಎನ್ನುವುದಕ್ಕೆ ಸಾಮಾನ್ಯ ಅರ್ಥಗಳಾಗಿ ಆಳು, ತೊತ್ತು, ಊಳಿಗದವನು, ಸೇವಕ, ವೈಷ್ಣವ ಪಂಥದ ಭಕ್ತ, ದಾಸಯ್ಯ, ಹರಿದಾಸ, ದಾಸಕೂಟಕ್ಕೆ ಸೇರಿದ ವ್ಯಕ್ತಿ, ಅಡಿಯಾಳು, ಸೇವಕರ ಸೇವಕ, ಗುಲಾಮತನ, ಶರಣಾಗುವಿಕೆ ಎಂಬುದಾಗಿ ಕಂಡುಬರುತ್ತದೆ.

ದಾಸ ಎನ್ನುವ ಪದಕ್ಕೆ ಎರಡು ವಿಶೇಷವಾದ ಅರ್ಥಗಳೂ ಇವೆ. ಒಂದು ಲೌಕಿಕವಾದರೆ ಮತ್ತೊಂದು ಪಾರಮಾರ್ಥಿಕ. ಲೌಕಿಕಾರ್ಥದಲ್ಲಿ ದಾಸನು ಮಾಡುವ ಶ್ರಮ ದೊರೆಗೆ ಸಲ್ಲಿಸುವ ಸೇವೆ. ಆತ ತನ್ನ

ಶ್ರಮಕ್ಕೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸುವುದಿಲ್ಲ. ತನಗೆ ಬಂದೊದಗಿದ ಈ ಸೇವೆಯನ್ನು ಪೂರ್ವಜನ್ಮದ ಫಲವೆಂದು ಭಾವಿಸುತ್ತಾರೆ. ಇಲ್ಲಿ ಆತನು ತನಗೊಂದು ಅಸ್ಮಿತೆ ಇದೆಯೆಂದು ಭಾವಿಸಲಾರ. ಯಜಮಾನನನ್ನು ತೃಪ್ತಿ ಪಡಿಸುವುದೇ ತನ್ನ ಬದುಕಿನ ಪರಮಗುರಿ ಎಂದ ಭಾವಿಸುತ್ತಾನೆ.

ಪಾರಮಾರ್ಥಿಕ ಅರ್ಥದಲ್ಲಿ 'ದಾಸ' ಎನ್ನುವ ಪದಕ್ಕೆ ಹರಿಸರ್ವೋತ್ತಮ ಎಲ್ಲರೂ ಒಂದೇ ಎಂದು ಹೇಳುತ್ತಾ ಕೆಳವರ್ಗದವರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದು. ಭಕ್ತಿಪಂಥದ ಸಂದರ್ಭದಲ್ಲಿ ಹರಿಗೆ ಸಂಬಂಧಪಟ್ಟಂತೆ ವಿಶೇಷವಾಗಿ ಈ ಪದವು ಬಳಕೆಯಾಗುತ್ತದೆ. 'ಶಿವದಾಸ' ಎನ್ನುವ ಪದ ಅಲ್ಲಲ್ಲಿ ಬಳಕೆಯಾದರು ಹರಿದಾಸ ಎನ್ನುವ ಪದದ ಹಾಗೆ ಬದಲಾವಣೆಯಲ್ಲಿ ಉಳಿಯಲಿಲ್ಲ. ಹೀಗಾಗಿ ದಾಸ ಎನ್ನುವ ಪದಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವನು ಎನ್ನುವ ಅರ್ಥವು ಪ್ರಾಪ್ತವಾಯಿತು.

ಕುರುಬರು ದಾಸಪಂಥಕ್ಕೆ ಒಲಿದುದಕ್ಕೆ ಮೂಲದಲ್ಲಿಯೇ ವಿಷ್ಣುವಿನ ಬಗೆಗೆ ಅವರಲ್ಲಿದ್ದ ಅಲ್ಪಸ್ವಲ್ಪ ಪ್ರಮಾಣದ ಅನುರಕ್ತಿಯೂ ಕಾರಣವಾಗಿತ್ತು. ಭಕ್ತಿಯ ಮೂಲಕ ಮುಕ್ತಿ ಸಾಧ್ಯವೆಂಬ ತಂತ್ರವನ್ನು ಬಳಸಿಕೊಂಡು ಪುರೋಹಿತಶಾಹಿ ನಿರೂಪಿಸಿದ ವ್ಯಾಖ್ಯಾನವೂ ಆಗಿದೆ. ವೇದಗಳ ಮೂಲಕ ಭೇದವನ್ನುಂಟು ಮಾಡತೊಡಗಿದಾಗ ವೇದಗಳನ್ನು ಪಾರಮಾರ್ಥಿಕ ಸತ್ಯವೆಂದು ಒಪ್ಪಿಕೊಳ್ಳುವಂತೆ ಮಾಡಿದುದೂ ಪ್ರಮುಖವಾಯಿತು.

ಯಾವಾಗ ಧಾರ್ಮಿಕ ರಾಜಕಾರಣ ಹುಟ್ಟಿಕೊಂಡಿತೋ, ಕೆಳವರ್ಗದ ಜನರನ್ನು ತಮ್ಮೆಡೆಗೆ ಸೆಳೆದುಕೊಳ್ಳುವ ಮತ್ತು ತಮ್ಮ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳುವುದು ಆರಂಭವಾಯಿತು. ದಾಸತ್ವ ಉಗಮವಾದುದೇ ವೈಷ್ಣವ ಧರ್ಮದ ಉಳಿವಿಗಾಗಿ. ಹೀಗೆ ಒಂದು ನಿರ್ದಿಷ್ಟವಾದ ಈ ಕಲ್ಪನೆಯಲ್ಲಿ ಮೇಲ್ವರ್ಗದವರು ತಮಗೆ ಬೇಕಾಗುವ ಕೆಳವರ್ಗದವರನ್ನು ಒಳಗೆ ಬಿಟ್ಟುಕೊಳ್ಳುವ ಮೂಲಕ ದಾಸತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದರು. ವಿಷ್ಣುವಿನ ಆಚರಣೆಗಳನ್ನು ತಮ್ಮ ದೈನಂದಿನ ಬದುಕಿನ ಕಥನಗಳನ್ನಾಗಿಸಿದರು. ಕುರುಬ ಸಂಬಂಧೀ ಪುರಾಣ ಕಥನಗಳಲ್ಲಿ, ಕುರುಬರ ಆಚರಣೆ ನಂಬಿಕೆಗಳಲ್ಲಿ ಶಿವನಿಗೆ ಪ್ರಮುಖವಾದ ಸ್ಥಾನವಿದೆ. ಆದಾಗ್ಯೂ ಅವರು ಹರಿಯನ್ನು ಸ್ಮರಿಸದೇ ಇರಲಿಲ್ಲ. ಕುರುಬರ ಆರಾಧ್ಯ ದೈವಗಳಾದ ಪದ್ಮಗೊಂಡ, ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ, ಅಮೋಘಸಿದ್ಧ ಮುಂತಾದವರು ಶೈವದೊಂದಿಗೆ ಸಮೀಕರಣಗೊಂಡವರು.

"ಪದ್ಮಗೊಂಡನನ್ನು ಶಿವಪದ್ಮಗೊಂಡನೆಂತಲೂ, ಬೀರಪ್ಪನನ್ನು ಶಿವಸಿದ್ಧ ಬೀರಪ್ಪನೆಂದೂ ಅಮೋಘಸಿದ್ಧನನ್ನು ಶಿವನ ಮನೆಯ ಸಿದ್ಧನೆಂತಲೂ ಕರೆದು ಕೊಂಡಾಡಿದ್ದಾರೆ. ಹೀಗಿದ್ದರೂ ಹರಿಯನ್ನು ಉಲ್ಲೇಖಿಸುವುದನ್ನು ಬಿಟ್ಟಿಲ್ಲ. ಕಾಳಿನಾರಾಯಣ(ವಿಷ್ಣು)ನು ಬೀರಪ್ಪ ತಾಯಿ ಸುರಾವತಿ(ಸರಸ್ವತಿ)ಯ ಅಣ್ಣ"[೬೮] ಎಂದು ಜಾನಪದ ಹಾಲುಮತ ಕಾವ್ಯದಲ್ಲಿ ಹೇಳಲಾಗಿದೆ.

ಶಿವನಿಗೆ ಕೈಲಾಸದಲ್ಲಿ ಪಟ್ಟಗಟ್ಟುವ ಸಂದರ್ಭದಲ್ಲಿ ಸ್ವತಃ ಹರಿಯೇ ಕಂಬಳಿ ನೇಯ್ದು ತಂದು ಅಹೇರಿ ಮಾಡಿದ ಎಂದು ಇನ್ನೊಂದು ಮೌಖಿಕ ಪರಂಪರೆಯ ಪುರಾಣ ಕಥನವು ಹೇಳುತ್ತದೆ. ಕಾಳಿನಾರಾಯಣ ಬೀರಪ್ಪನ ಸೋದರ ಮಾವನೆಂದು ಹೇಳುವ ಮೂಲಕ ಕುರುಬರಲ್ಲಿ ದಾಸ ಕುರುಬ ಎಂಬ ಒಳಪಂಗಡದ ಹುಟ್ಟಿಗೆ ಕಾರಣವಾಗಿದ್ದಾರೆ.

ಹಟ್ಟಿ ಪೂಜೆ, ಲಕ್ಷ್ಮೀ ಪೂಜೆಯಂತಹ ಆಚರಣೆಗಳು, ಈರೊಡೆಯ ಲಕ್ಷ್ಮೀನರಸಿಂಹನ ಅವತಾರದ ಕಲ್ಪನೆ, ಅಮೋಘಸಿದ್ಧನ ಮೂವರು ಪುಣ್ಯದ ಮಕ್ಕಳ ಪರಿಕಲ್ಪನೆ, ಧನಗಾರರು ಹಟ್ಕಾರರು ಶನಿವಾರದ ದಿನ ಹಸುಗಳಿಂದ ಹಾಲು ಕರೆಯದಿರುವುದು, ಸಂಕ್ರಾಂತಿಯಲ್ಲಿ ಆಕಳು ಪೂಜೆ ಮಾಡುವುದು ಇವುಗಳ ಮೂಲಕ ಕುರುಬರೆಲ್ಲರೂ ಶಿವನ ಆರಾಧಕರಾದರೂ ತಿರುಪತಿಗೆ ಹೋಗಿ ಮದುವೆ ಮಾಡಿಸುವುದು ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಈ ಒಳಪಂಗಡಕ್ಕೆ ದಾಸ ಕುರುಬರು ಎಂಬ ಹೆಸರು ಬಂದಿರಬಹುದು.

ದಾಸ ಕುರುಬರ ಲಕ್ಷಣವನ್ನು ಗಮನಿಸಿದರೆ ಭುಜದ ಮೇಲೆ ಮುದ್ರೆ, ಶಂಖ ಚಕ್ರಗಳನ್ನು ಧರಿಸಿದರೆ, ಜಾಗಟೆ, ಭವನಾಸಿ ಹಿಡಿದು ದೀಪದ ಕಂಬದೊಂದಿಗೆ ಭಿಕ್ಷಾಟನೆ ಮಾಡುವುದು ಇವರ ವೃತ್ತಿಯಾಗಿದೆ. ಇದು ಸಂಸ್ಕೃತೀಕರಣದೊಂದಿಗೆ ಕೆಳವರ್ಗದವರ ನಿರಾಕರಣೆಗೆ ಬದಲಾಗಿ ತಮಗೆ ಬೇಕಾಗುವ ಜನರನ್ನು ಒಳಗೆ ಸೇರಿಸಿಕೊಳ್ಳುವ ಮೂಲಕ ದಾಸತ್ವ ಹೇರಿದುದರ ಸೂಚನೆಯಾಗಿದೆ. ಈ ಹಿನ್ನೆಲೆಯಲ್ಲಿ ದಾಸಕುರುಬ ಎಂಬ ಒಳಪಂಗಡವು ಹುಟ್ಟಿಕೊಂಡಿತು. ಇವರು ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಖ್ಯಾ ದೃಷ್ಟಿಯಿಂದ ಕಡಿಮೆಯಿರುವ ಒಳಪಂಗಡವಾಗಿದೆ.

ದಾಸ ಕುರುಬರು ಹತ್ತಿಕಂಕಣದವರು. ಅವರು ತಮ್ಮನ್ನು ದೊಡ್ಡ ಕಂಬಳಿಯವರು ಎಂದು ಕರೆದುಕೊಳ್ಳುತ್ತಾರೆ. ಉಣ್ಣೆಕಂಕಣದವರನ್ನು ಸಣ್ಣ ಕಂಬಳಿಯವರು ಎಂದು ಕರೆಯುತ್ತಾರೆ. ಹೀಗಾಗಿ ಅವರು ಉಣ್ಣೆಕಂಕಣದವರೊಂದಿಗೆ ವೈವಾಹಿಕ ಸಂಬಂಧ ಬೆಳೆಯಿಸುವುದಿಲ್ಲ, ಉಳಿದ ಕುರುಬರಂತೆ ಇವರಲ್ಲಿಯೂ ಸಮಬೆಡಗಿನಲ್ಲಿ ವೈವಾಹಿಕ ಸಂಬಂದವು ನಿಷಿದ್ಧವಾಗಿದೆ. ಒಟ್ಟಾರೆ ವೈದಿಕ ಧರ್ಮದ ಉದಾರವಾದಿ ನಿಲುವಿನ ದ್ಯೋತಕವಾಗಿ 'ದಾಸಕುರುಬ' ಎಂಬ ಒಳಪಂಗಡವು ಕುರುಬ ಸಮುದಾಯದಲ್ಲಿ ಉಗಮವಾಗಿರಬೇಕು. ಕೆಳವರ್ಗದ ವಿಷ್ಣು ಭಕ್ತರೇ ಇಂದು ದಾಸಯ್ಯಗಳಾಗಿರುವುದು. ಕುರುಬರಲ್ಲಿ ಬಹುಸಂಖ್ಯಾತರು ವೀರಶೈವರಾದರೂ ಕೆಲವರು ವೈಷ್ಣವ ಪಂಥೀಯರಾಗಿದ್ದಾರೆ. ಅವರೇ ದಾಸಕುರುಬರು.

೧೫. ಸಾದ ಕುರುಬರು

"ಬಸವಣ್ಣನು ಜಾತಿಯಿಂದ ಬ್ರಾಹ್ಮಣನಾಗಿದ್ದು ವೀರಶೈವನಾಗಿರುವಂತೆ, ಹರಳಯ್ಯನು ಜಾತಿಯಿಂದ ಮಾದಿಗನಾಗಿ ವೀರಶೈವನಾಗಿದ್ದಾನೆ"[೬] ಎಂದು ಮಹದೇವ ಬಣಕಾರರು ಹೇಳುತ್ತಾರೆ. ಲಿಂಗಾಯಿತರಲ್ಲಿ ಹದಿನೆಂಟು ಜಾತಿಗಳೆಂದು ರೂಢಿಯಲ್ಲಿ ಹೇಳಲಾಗುತ್ತದೆ. ಶೈವ/ವೀರಶೈವದ ಮೂಲದ ಕುರುಬರಲ್ಲಿಂಯೇ

ಬಹುಸಂಖ್ಯಾತರು ಲಿಂಗಾಯಿತರಾದರು, ಅದರಂತೆ ಸಾದ ಕುರುಬರು ಮುಂದೆ ಸಾದಲಿಂಗಾಯತರಾಗಿ ಲಿಂಗಾಯತದ ಒಳಪಂಗಡವಾಗಿದೆ.

ಒಳ್ಳೆಯ, ಉತ್ತಮ, ಪ್ರಾಮಾಣಿಕ, ವಿಶ್ವಾಸಯೋಗ್ಯ, ಸೌಮ್ಯ ಸ್ವಭಾವದ ಎಂಬ ಅರ್ಥ ಪರಂಪರೆಯುಳ್ಳ 'ಸಾದ' ಎಂಬ ಪದದೊಡನೆ ಕುರುಬರು ಸೇರಿಕೊಂಡು ಸಾದಕುರುಬರು ಆಗಿದ್ದಾರೆ. ಮೊದ ಮೊದಲು ಒಟ್ಟಾಗಿದ್ದ ಸಾದ ಕುರುಬರು ಮೇಲುಸ್ತರದ ಅಂತಸ್ತಿನ ಸ್ಪರ್ಧೆಯಿಂದಲೋ, ಅನುಕೂಲತೆಗಳನ್ನು ಅರಸಿಕೊಂಡು ಹೋದುದರಿಂದಲೂ ಕುರುಬರಲ್ಲಿದ್ದ ಸಾದರು ಮುಂದೆ ಸಾದುಲಿಂಗಾಯತರಾಗಿ ಪರಿವರ್ತನೆಯಾಗಿ ಅದೇಕೋ ತಮ್ಮ ಕುರುಬರ ಮೂಲವನ್ನು ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ.

'ಸಾದ' ಎಂಬುದಕ್ಕೆ ಡಾ.ಎಫ್.ಕಿಟೆಲ್‌ರವರು 'A Class of Kuruba' ಅಂದರೆ ಕುರುಬರ ಒಂದು ವರ್ಗ ಎಂದು ಅರ್ಥ ನೀಡಿದ್ದಾರೆ. ಇವರಲ್ಲಿ ಲಿಂಗಧಾರಿಗಳಾದವರು ಸಾದ ಲಿಂಗಾಯತರಾದರು.

'ಕುರುಬರಿಗೆ ಹುಟ್ಟುಲಿಂಗ ಲಿಂಗಾಯಿತರಿಗೆ ಕಟ್ಟುಲಿಂಗ' ಎನ್ನುವ ಮಾತಿಗೆ ಪೂರಕವಾಗಿ ಲಿಂಗಧಾರಣೆ ಸಂಪ್ರದಾಯವು ಎರಡು ಬಗೆಯ ಪರಿಣಾಮವನ್ನುಂಟು ಮಾಡಿತು. ಲಿಂಗವನ್ನು ಸಾಧನವನ್ನಾಗಿ ಮಾಡಿಕೊಂಡು ಆಧ್ಯಾತ್ಮಿಕ ನೆಮ್ಮದಿಯನ್ನು ಕಂಡುಕೊಳ್ಳುವುದು ಒಂದಡೆಯಾದರೆ, ಲಿಂಗಧಾರಿಗಳಾದವರು ಲಿಂಗಕಟ್ಟಿಕೊಳ್ಳದೇ ತಮ್ಮದೇ ಜನವರ್ಗದಿಂದ ಪ್ರತ್ಯೇಕವಾಗಿ ಉಳಿದು ಅವರನ್ನು ಕೀಳಾಗಿ ಕಾಣುತ್ತ ಬಂದದ್ದು ಮತ್ತೊಂದು ಪರಿಣಾಮ. ಸಾವಿರಾರು ಬೆಡಗುಗಳಿರುವ ಕುರುಬರಲ್ಲಿ ಕೆಲವರು ಲಿಂಗಧಾರಿಗಳಾಗಿ ಕುರುಬ ಲಿಂಗಾಯತ ಸಾದಲಿಂಗಾಯತ ಎಂಬ ಒಳಪಂಗಡಗಳು ಹುಟ್ಟಿಕೊಂಡವು. ಇವರು ಮೂಲತಃ ಸಾದ ಕುರುಬರು ಹಂಡೆ ಕುರುಬರಾಗಿದ್ದವರು.

ಸಾದ ಕುರುಬರು ತಮ್ಮನ್ನು ಮೂಲಿಗರಿಂದ ಬೇರ್ಪಡಿಸಿಕೊಂಡು ಗುರುತಿಸಿಕೊಳ್ಳುವುದರ ಮೂಲಕ ತಾವು ಶ್ರೇಷ್ಠ ಎಂಬ ಭಾವನೆಯಿದ್ದಿರಬೇಕು. ಅದಲ್ಲದೆ ಸಮಾಜದಲ್ಲಿ ಉನ್ನತ ಸ್ಥಾನಮಾನಗಳ ಹಂಬಲವುಳ್ಳವರಾಗಿ ಲಿಂಗಾಯತದೊಂದಿಗೆ ಗುರುತಿಸಿಕೊಂಡರೂ ಮೂಲತಃ ಇವರು ಕುರುಬರೇ ಆಗಿದ್ದಾರೆ ಎನ್ನುವುದು ಪ್ರಮುಖಾಂಶ. ಸಮಾನತೆಯನ್ನು ತರುವ ಉದ್ದೇಶದಿಂದ ಲಿಂಗಧಾರಣೆ ಪ್ರಕ್ರಿಯೆ ಆರಂಭವಾದರೂ ಮುಂದೆ ಸಮುದಾಯದಲ್ಲಿ ಮತ್ತಷ್ಟು ಅಸಮಾನತೆಯ ಸೃಷ್ಟಿಗೆ ಕಾರಣವಾಯಿತು.

ಲಿಂಗ ಪ್ರಸಾರಕ ಪರಂಪರೆಯಿಂದಾಗಿ ಲಿಂಗಧಾರಿಗಳಾಗುತ್ತ ಮೂಲಿಗರಿಂದ ತಾವು ಸಂಪೂರ್ಣವಾಗಿ ಭಿನ್ನವಾಗಿದ್ದೇವೆಂದು ಹೇಳುತ್ತ ಬಂದಿರುವುದು ಅಚ್ಚರಿಯ ಸಂಗತಿಯಾಗಿದೆ. ಸಾದರಲ್ಲಿ ಬಹುಸಂಖ್ಯಾತರು ಲಿಂಗಧಾರಿಗಳಾಗಿ ಕುರುಬರಿಂದ ಪ್ರತ್ಯೇಕಗೊಂಡಿದ್ದಾರೆ. ಕರ್ನಾಟಕದ ಮಧ್ಯಭಾಗದಲ್ಲಿ ಬರುವ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಹಾವೇರಿ, ಹಾಸನ, ಬಳ್ಳಾರಿ, ಕೊಪ್ಪಳ ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಸಾದ ಕುರುಬರು ಸಾಂದ್ರವಾಗಿ ಕಂಡುಬರುತ್ತಾರೆ.

ಸಾದ ಕುರುಬರೂ ಕೂಡ ಶಿವನ ಆರಾಧಕರಾಗಿದ್ದು, ಕೃಷಿ ಮತ್ತು ಪಶುಪಾಲನೆಯನ್ನು ತಮ್ಮ ಕಸುಬುಗಳಾಗಿ ಮಾಡಿಕೊಂಡು ಬಂದಿದ್ದಾರೆ. ಕಟ್ಟಿದ ಲಿಂಗದೊಡನೆ ಬೆಟ್ಟದ ಲಿಂಗಕ್ಕೆ ನಡೆದುಕೊಳ್ಳುವ ಪದ್ಧತಿಯು ಸಾದ ಲಿಂಗಾಯಿತರಲ್ಲಿರುವಂತೆ ಸಾದಕುರುಬರು ಹುಟ್ಟುಲಿಂಗವಂತರು, ಇವರು ಕಟ್ಟುಲಿಂಗದವರು ಅಲ್ಲ, ಬೆಟ್ಟದ ಲಿಂಗದ ಉಪಾಸಕರೂ ಅಲ್ಲ.

ಮಧ್ಯ ಪ್ರದೇಶದ ಉಜ್ಜಯಿನಿ, ಜಬ್ಬಲ್ಪುರ ಪ್ರದೇಶಗಳು ಕುರುಬರು ದಟ್ಟವಾಗಿ ನೆಲಸಿದ್ದ ಬೀಡುಗಳಾಗಿದ್ದವು. ರೇವಣರು ನಾಥ ಸಂಪ್ರದಾಯದ ಮತ್ಸೇಂದ್ರ ನಾಥ, ಗೋರಖನಾಥರ ಸಂಪರ್ಕ ಹೊಂದಿದ್ದು ಜಬಲ್ಪುರದ ಬಂಧುಲ ಶಿವನಿಯಲ್ಲಿ ಹತ್ತಿರದಲ್ಲಿಯೇ ಬೇಡಾಘಾಟ್ (ಕುರಿಘಟ್ಟ) ಇದೆ. ಈ ಪ್ರದೇಶದಿಂದ ವಲಸೆ ಬಂದ ಕುರುಬರು ಚಿಕ್ಕಮಗಳೂರು ಜಿಲ್ಲೆಯಲ್ಲಿ ನೆಲೆನಿಂತರು. ಅದು ತರೀಕೆರೆ ತಾಲೂಕಿನ ಶಿವನಿಯಾಗಿದೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಚಿತ್ರದುರ್ಗದ ಹೊಳಲ್ಕೆರೆಯಲ್ಲಿನ ತಾಳೀಕಟ್ಟೆಯಲ್ಲಿ ನೆಲೆನಿಂತರು. ಇವರಲ್ಲಿ ಉಜ್ಜನಿಯ ಕಗ್ಗಲ್ಲೋರು ಎಂಬ ಬೆಡಗು ಇದ್ದು, ಇದು ಕುರುಬ ಹಾಗೂ ಲಿಂಗಾಯಿತರಿಬ್ಬರಲ್ಲೂ ಇದೆ. ಇದರಿಂದಾಗಿ ಸಾದ ಕುರುಬರ ಮೂಲವು ಇದರಿಂದಲೂ ವ್ಯಕ್ತವಾಗುತ್ತದೆ.

೧೬. ಕ್ರೈಸ್ತ ಕುರುಬರು

ಕ್ರೈಸ್ತರು ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಕನ್ನಡ ಮಾತಾಡುವ ಪ್ರದೇಶಗಳಲ್ಲಿ ವಾಸವಾಗಿದ್ದರು ಎಂದು ಇತಿಹಾಸಕಾರರು ಗುರ್ತಿಸುತ್ತಾರೆ. ಆದರೆ ೧೯ನೇ ಶತಮಾನದಲ್ಲಿ ಮೈಸೂರು ಅರಸರ ಅನುಮತಿಯಿಂದ ಕ್ರೈಸ್ತರ ಮತಪ್ರಚಾರ ಮತ್ತು ಮತಾಂತರ ಪ್ರಕ್ರಿಯೆ ಆರಂಭವಾಗುತ್ತದೆ. ೧೮೨೦ರಲ್ಲಿ ಮೈಸೂರಿನಲ್ಲಿ ವೆಸ್ಲಿಮಿಶನ್ ಮತ್ತು ಬಳ್ಳಾರಿಯಲ್ಲಿ ಲಂಡನ್ ಮಿಶನ್ನಿನ ಪ್ರಾಟೆಸ್ಟೆಂಟ್ ಪಾದ್ರಿಗಳು, ಸಿರಿಯನ್ ಪಾದ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ ಪ್ರಚಾರ ಆರಂಭಿಸಿದರು. ಬೆಳಗಾವಿ, ಧಾರವಾಡ, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಪ್ರಾಟೆಸ್ಟೆಂಟರು ಹೆಚ್ಚಾಗಿ ಮತಪ್ರಚಾರ ಕಾರ್ಯ ನಡೆಸಿದ್ದಾರೆ. ಈ ಭಾಗಗಳಲ್ಲಿ ೧೮೩೪ರಲ್ಲಿ ಜರ್ಮನಿಯ ಬಾಸೆಲ್ ಮಿಶನ್ ಮತ್ತು ಅಮೇರಿಕಾದ ಬ್ಯಾಪ್ಟಿಸ್ಟ್ ಚರ್ಚ್ ಸಂಸ್ಥೆಗಳು ಮಾಡಿರುವ ಪ್ರಚಾರ ಮತ್ತು ಪ್ರಭಾವಗಳಿಗೊಳಗಾಗಿ ಹಲವಾರು ಸಮುದಾಯಗಳು ಕ್ರೈಸ್ತ ಮತವನ್ನು ಸ್ವೀಕರಿಸುವಂತೆ ಮಾಡಿವೆ.

ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೊಂಕಣಿ ಮಾತನಾಡುವ ಕ್ಯಾಥೋಲಿಕ್ಕರು ಹೆಚ್ಚಾಗಿ ಕಂಡು ಬರುತ್ತಿದ್ದು, ಚರ್ಚುಗಳಲ್ಲಿ ಪ್ರಾರ್ಥನೆಯು ಕೊಂಕಣಿಯಲ್ಲಿಯೇ ನಡೆಯುತ್ತದೆ. ಬೆಂಗಳೂರು, ಮೈಸೂರು, ಬಳ್ಳಾರಿ ಜಿಲ್ಲೆಗಳಲ್ಲಿ ತೆಲುಗು, ತಮಿಳು ಭಾಷೆಗಳಲ್ಲಿ ಪ್ರಾರ್ಥನೆ ಮಾಡಲಾಗುತ್ತಿದೆ. ಆದರೆ ಹಳೆಯ ಮೈಸೂರು ಭಾಗದ ಹೆಚ್ಚಿನ ಚರ್ಚುಗಳಲ್ಲಿ ಪ್ರಾರ್ಥನೆಯು ಕನ್ನಡದಲ್ಲಿ ನಡೆಯುತ್ತದೆ.

ಕ್ರೈಸ್ತ ಮತ್ತು ಕ್ರೈಸ್ತಧರ್ಮ ಎಂಬ ಎರಡು ಪದಗಳು ಏಸುಕ್ರಿಸ್ತನ ಉಪದೇಶದ ಮೇರೆಗೆ ಹುಟ್ಟಿ ಬೆಳೆದು ಬಂದಿರುವ ಎಲ್ಲಾ ಸಿದ್ಧಾಂತಗಳಿಗೂ, ಮತಸಂಸ್ಥೆಗಳಿಗೂ ಒಟ್ಟಾಗಿಯೇ ಅನ್ವಯಿಸುವಂತವು. ಈ ಧರ್ಮವನ್ನು ಯಾರು ಯಾರು ಅನುಸರಿಸುತ್ತಾರೋ ಅವರೆಲ್ಲರೂ ಕ್ರೈಸ್ತರಾಗುತ್ತಾರೆ. ಎರಡು ಸಾವಿರ ವರ್ಷಗಳ ಹಿಂದೆ ಪ್ಯಾಲಸ್ಟೈನ್ ದೇಶದಲ್ಲಿ ಆರಂಭವಾಗಿ ಈಗ ಹಬ್ಬಿಕೊಂಡಿರುವ ಕ್ರೈಸ್ತ ಧರ್ಮ ಹಲವು ಆಮಿಷಗಳೊಂದಿಗೆ ಭಾರತದಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲೂ ಅನೇಕ ಜನಸಮುದಾಯಗಳನ್ನು ತನ್ನೆಡೆಗೆ ಸೆಳೆದುಕೊಳ್ಳುವ ಪ್ರಯತ್ನವು ಇಂದಿಗೂ ಸಾಗುತ್ತಿದೆ. ಈ ಮತಾಂತರ ಪ್ರಕ್ರಿಯೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೇ ನಿರಂತರತೆಯನ್ನು ಕಾಪಾಡಿಕೊಂಡು ಬಂದಿದೆ.

ಹಲವು ಜನಸಮುದಾಯಗಳು ವಿಶೇಷವಾಗಿ ಕೆಳವರ್ಗದವರು ಕ್ರಿಸ್ತಿಯನ್ನರ ಆಮಿಷಗಳಿಗೆ ಒಳಗಾಗಿ ಮತಾಂತರ ಪ್ರಕ್ರಿಯೆಗೆ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ. ಹಾಗೆಯೇ ಕುರುಬರಲ್ಲಿಯೂ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು 'ಕ್ರೈಸ್ತ ಕುರುಬರು' ಎಂಬ ಹೆಸರನ್ನು ಪಡೆದುಕೊಂಡಿದ್ದಾರೆ. ಕುರುಬ ಸಮುದಾಯದ ಮೂಲವೃತ್ತಿ ಕುರಿಸಾಕಾಣಿಕೆ ನಂತರದಲ್ಲಿ ಕೃಷಿ. "ಯಾರು ತಮ್ಮ ಮೂಲದಿಂದ ಪರಿವರ್ತನೆ ಹೊಂದಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿರುತ್ತಾರೋ ಅವರಿಗೆ ಕ್ರೈಸ್ತ ಕುರುಬರು"[೨೦] ಎಂದು ಎನ್.ಎಂ. ಅಂಬಲಿಯವರು ಅಭಿಪ್ರಾಯ ಪಡುತ್ತಾರೆ.

ಮತಾಂತರ ಪ್ರಕ್ರಿಯೆ ಹಲವಾರು ಜಾತಿ-ಧರ್ಮದವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಕ್ರೈಸ್ತಧರ್ಮವು ಮುಂದಿದೆ. ಇತರ ಧರ್ಮಗಳು ಭಾರತದಲ್ಲಿ ಮತಾಂತರ ದೀಕ್ಷೆ ಮತ್ತು ಮಂತ್ರ ದೀಕ್ಷೆ ಕೊಟ್ಟಿದ್ದಾಗ್ಯೂ ಕ್ರೈಸ್ತ ಧರ್ಮ ಮೇಲುಗೈ ಸಾಧಿಸಿದೆ. ಭಾರತದಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲೂ ಅನೇಕ ಜಾತಿ, ಧರ್ಮ, ಸಂಸ್ಕೃತಿ ಸಂಪ್ರದಾಯ, ಆಚಾರ-ವಿಚಾರ, ನಂಬಿಕೆಗಳಿಂದ ಕೂಡಿದ ಅನಂತ ವೈವಿಧ್ಯತೆ ಯಿರುವುದರಿಂದಲೇ ಇಂತೆಲ್ಲವೂ ಸಾಧ್ಯವಾಗಿದೆಯೆಂದು ಹೇಳಬಹುದಾಗಿದೆ.

ಮತಾಂತರ ಜಾಲದಲ್ಲಿ ಬಲಿಯಾದವರು ಹೆಚ್ಚಾಗಿ ದೀನದಲಿತರು, ಬಡವರು, ಅನಾಥರು, ಅಸ್ಪೃಶ್ಯರು, ಶೋಷಣೆಗೊಳಗಾದವರು ಹಾಗೂ ಯಾವುದೇ ಜಾತಿ ಅಥವಾ ಧರ್ಮದ ಆರ್ಥಿಕವಾಗಿ ಹಿಂದುಳಿದ ಬಡವರು. ಈ ಪ್ರಕ್ರಿಯೆ ಯಾಕೆ ಜರುಗುತ್ತದೆಂಬುದಕ್ಕೆ ನಿರ್ದಿಷ್ಟ ಕಾರಣಗಳಿಲ್ಲ. ಅವರ ಇನ್ನೊಂದು ಮುಖವನ್ನು ನೋಡುವುದಾದರೆ ಅನಕ್ಷರತೆ, ಅಜ್ಞಾನ, ವ್ಯಾಪಾರ, ಮೂಢನಂಬಿಕೆ, ರಾಜಕೀಯ, ಯುದ್ಧ, ಔದ್ಯೋಗಿಕ ಕ್ರಾಂತಿ, ಧರ್ಮವೊಂದರಲ್ಲಿರಬಹುದಾದ ಉಸಿರುಗಟ್ಟಿಸುವ ವಾತಾವರಣ, ಆಮಿಷಗಳು ಮುಂತಾದವು ಕಾರಣಗಳಾಗಿ ಕಾಣಿಸುತ್ತವೆ.

ಪ್ರತಿಯೊಂದು ಸಮುದಾಯವು ಒಂದೊಂದು ಸಂಸ್ಕೃತಿ ಆಚಾರ-ವಿಚಾರ ರೀತಿ ನೀತಿಗಳಿರುವಂತೆ ಕುರುಬರಲ್ಲಿಯೂ ಅಂತಹುದೇ ಸಾಂಸ್ಕೃತಿಕ ಅನನ್ಯತೆಯೊಂದಿದೆ. ಆದರೂ ಮೇಲಿನ ಕಾರಣಗಳಿಗಾಗಿ ಕುರುಬರೂ ಕೂಡ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಕಾಲ ಚಕ್ರದಲ್ಲಿ ಸಿಲುಕಿಕೊಂಡ ಹಲವಾರು ಧರ್ಮಗಳು ಸಂಘರ್ಷ ಮತ್ತು ಸಂಗ್ರಾಮವನ್ನು ಮಾಡಿಕೊಂಡೇ ಬಂದಿವೆ. ಎಲ್ಲ ಧರ್ಮಗಳ ತಿರುಳು ಒಂದೇ ಆದರೂ ಅವುಗಳನ್ನು ಆಚರಿಸಿಕೊಂಡು ಬರುವ ಜನಾಂಗವು ವಿಭಿನ್ನವಾಗಿದೆ. ಹೀಗಾಗಿ ಒಂದು ಜನಸಮುದಾಯವನ್ನು ಮತಾಂತರ ಮಾಡಿಕೊಳ್ಳುವ ಪ್ರಕ್ರಿಯೆಗೆ ಅದರದ್ದೇ ಆದ ಚಾರಿತ್ರಿಕ ಹಿನ್ನೆಲೆಯಿದೆ. ಏಸುವು ಮೂಲತಃ ಒಬ್ಬ ಪರಿಶುದ್ಧ ಕುರುಬ. ಧರ್ಮಬೋಧಕರಾದ ಪಾದ್ರಿಗಳು ಮುಗ್ಧಜನತೆಗೆ ಏಸುವು ಕೂಡ ನಿಮ್ಮ ಕುರಿದೊಡ್ಡಿಯಲ್ಲಿ ಜನಿಸಿದವನು. ನೀವು ಅವನ ಆರಾಧಕರಾಗುವುದರಿಂದ ನಿಮ್ಮ ಕಷ್ಟಗಳು ದೂರಾಗುತ್ತವೆ ಎಂದಾಗ ಕುರುಬರು ಇದಕ್ಕೆ ಮನಸೋತು ಕುರುಬರು ಕ್ರೈಸ್ತ ಧರ್ಮ ಸ್ವೀಕರಿಸಲು ಮನಸ್ಸು ಮಾಡಿರಬಹುದು. ಒಟ್ಟಾರೆಯಾಗಿ ಇತರೆ ಸಮುದಾಯದವರಂತೆ ಕುರುಬರೂ ಕೂಡ ಕ್ರೈಸ್ತ ಮತಾಂತರ ಪ್ರಕ್ರಿಯೆಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಇನ್ನೊಂದು ಪಾವಿತ್ರ ಸಂಗತಿಯೆಂದರೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಕೆಲವರು ತಮ್ಮ ಹಿಂದಿನ ಧಾರ್ಮಿಕ ಆಚರಣೆಗಳನ್ನೂ ಇಂದಿಗೂ ನಡೆಸಿಕೊಂಡು ಬರುತ್ತಿರುವುದು ಈ ರೀತಿ ಎರಡೂ ಧರ್ಮಗಳ ಆಚರಣೆಯು ಕುರುಬರಲ್ಲಿಯೂ ಕಂಡು ಬರುತ್ತದೆ.

೧೭. ನೊಣಬ ಕುರುಬರು

ಕುರುಬರಲ್ಲಿ ಕೆಲ ವೀರರು ಸಾಹಸಮಾಡಿ ರಾಜ್ಯವನ್ನು ಕಟ್ಟಿ ಆಳಿದರು. ಅಂಥವರಲ್ಲಿ ವಿಜಯನಗರದ ಹಕ್ಕ ಬುಕ್ಕ ಸೋದರರು, ಕನಕದಾಸರು, ಬಳ್ಳಾರಿ ಕೋಟೆಯನ್ನು ಕಟ್ಟಿದ ಹಂಡೆಯ ಪಾಳೆಯಗಾರ ಬಾಲದ ಹನುಮಪ್ಪ ನಾಯಕ. ಇವರಿಗಿಂತಲೂ ಮುನ್ನ ಕರ್ನಾಟಕ ಪ್ರದೇಶವನ್ನು ಸು.ಕ್ರಿ.ಶ. ೭೫೦ರಿಂದ ೧೦೫೪ರವರೆಗೆ ಆಳಿದ ಒಂದು ಜನಸಮುದಾಯವೂ ಕುರುಬರೇ ಆಗಿದ್ದರು. ಅವರೇ ನೊಳಂಬರು-ನೊಣಬರು.

ರೆವರೆಂಡ್, ಎಫ್.ಕಿಟೆಲ್ ಅವರು "ನೊಣಬ' ಎಂದರೆ 'A man of a caste division of the Kurubas"[೬೦] ಎಂದಿದ್ದಾರೆ. ತಜ್ಞರ ಪ್ರಕಾರ ನೊಳಂಬ ಎಂದರೆ ಸುಂದರ, ಮುಂದುವರಿದವನು, ಮುಂದಾಳತ್ವ ವಹಿಸುವ ಮುಂದಾಳು, ಮುನ್ನುಗ್ಗು, ಮೊದಲೇ ಹೋಗು, ಒಬ್ಬ ನಾಯಕನ ಮುಂದಾಳತ್ವದಲ್ಲಿನ ಜನರ ಗುಂಪು, ನೊಳಂಬ ಎಂದರೆ ವೀರಜನರು, ಇತರರನ್ನು ಮುನ್ನಡೆಸುವವರು ಎಂದು.

ತಮಿಳು ಮೂಲದ ಪ್ರಕಾರ ನೂಳೈ ತೆವಳು ಎಂದು ಮತ್ತೊಂದು ಅರ್ಥದಲ್ಲಿ ಬೇರೆಯವರ ಮನಸ್ಸಿನ ಮೇಲೆ ತಮ್ಮ ಪ್ರಭಾವ ಬೀರುವವರು. 'ಕುಳೈ-ಕುಲುಂಬು', 'ವರೈ' 'ವರಾಂಬು' ಪ್ರವೇಶ ಮಾಡುವವರು. ಒಳನುಗ್ಗುವವರು ಎಂದರ್ಥವಾಗುತ್ತದೆ.

ಮೂಲ ರೂಪ ನುಟಂಬ, ನೊಟಂಬ ಆಗಿ ನೊಣಬ ಆಗಿದೆ. ಸಂಸ್ಕೃತದ 'ಪಲ್ಲವ'ವು ಕನ್ನಡದಲ್ಲಿ ಚಿಗುರು, ತಮಿಳಿನಲ್ಲಿ 'ನೊಳಂಬು' ಎಂದರೆ ಕನ್ನಡಬಲ್ಲಿ 'ಕುಡಿ' ಎಂದಾಗುತ್ತದೆ. ಅವರನ್ನೇ ಪಲ್ಲವರು,

ನೊಳಂಬರು, ಕುಡಿಯರು ಎಂದು ಕರೆದಿರುವರು. ಕರ್ಮಯೋಗಿ ಸಿದ್ಧರಾಮನು ಕುಡಿಯರ ಕುಲಶಿರೋಮಣಿ ಮುದ್ದುಗೌಂಡರ ಮಗ. ಹಿಂದಿನ ಪಲ್ಲವರು ನಂತರದ ನೊಳಂಬರು (ನೊಣಬರು) ಕುಡಿಯು ರಾಜರಿಗೆ ಕುಡಿಯೊಕ್ಕಲಿಗ, ಕುಡಿಯರ ಕೂಸು ಎಂದಿದೆ.

ನೊಳಂಬ ರಾಜ್ಯ ಸ್ಥಾಪಿಸಿದವರು ನೊಣಬರು. ಇವರ ಜೇನುನೊಣ ಸಾಕುವವರಾಗಿದ್ದು ಜೇನುಕುರುಬ ಕುಲಕ್ಕೆ ಸೇರಿದವರೆಂದೂ ತಿಳಿದುಬರುತ್ತದೆ. ಆಧುನಿಕ ಯುಗದಲ್ಲಿ ಕೆಲವರು ಲಿಂಗಧಾರಿಗಳಾಗಿ ನೊಣಬ ಲಿಂಗಾಯಿತರಾಗಿದ್ದಾರೆ. ಅತಿ ಪ್ರಾಚೀನ ಕಾಲದಲ್ಲಿ ನೊಳಂಬವಾಡಿ (ನೊಣಂಬವಾಡಿ) ಎಂಬ ರಾಜ್ಯದಲ್ಲಿ ವಾಸಿಸುತ್ತಿದ್ದುದರಿಂದಲೂ ಇವರಿಗೆ ನೊಣಬರು ಎಂಬ ಹೆಸರು ಉಂಟಾಗಿತ್ತು. ನೋಣಬರು>ನೊಣಬರು ಎಂಬುದು ನೋಣಬರು ಎಂಬುದರ ಅಪಭ್ರಂಶ ರೂಪವೆಂದು ತರ್ಕಿಸಲಾಗಿದೆ.

ನೊಣಂಬವಾಡಿಗೆ 'ನೋಲಂಬವಾಡಿ' ಎಂಬ ಹೆಸರೂ ಕೂಡ ಇದ್ದು ಈ ನೋಲಂಬವಾಡಿಯನ್ನು ಪಲ್ಲವರಾಜರು ಆಳುತ್ತಿದ್ದರು. ಆದ್ದರಿಂದ ಪಲ್ಲವರಿಗೆ ನೊಣಂಬಾಧಿರಾಜ. ನೊಣಂಬ ಪಲ್ಲವ ಮತ್ತು ಪಲ್ಲವ ರಾಜರೆಂದು ಕರೆಯುತ್ತಿದ್ದುದು ಸ್ಪಷ್ಟವಾಗುತ್ತದೆ.

ವಿ.ಆರ್. ಹನುಮಂತಯ್ಯನವರು ತಮ್ಮ ಭಾರತದೇಶದ ಕುರುಬರ ಚರಿತ್ರೆಯಲ್ಲಿ ಮೈಸೂರು ರಾಜ್ಯ ಗೆಝೆಟಿಯರ್‌ನ್ನು ಉಲ್ಲೇಖಿಸುತ್ತಾ "These are called nonabas becasuse they are residents of this ancient kingdom of Nonambavadi. This was ruled over by the pallavas up to the 10th Century. A.D. The pallavas called themselves as Nolambavadi Rajas, Nonamba pallava, Pallavadi Raja Etc., Their caste title is Gowda"[೨೨] ಎಂದು ಹೇಳಿದ್ದಾರೆ.

ನೊಣಬ ಎಂಬುದರ ಹಳೆಯ ರೂಪಗಳಾಗಿ 'ನೊಣಂಬ', 'ನೊಳಂಬ' ಎಂಬ ಪದಗಳು ಲಭ್ಯವಾಗುತ್ತವೆ. ಇವರು ಆಳಿದ ನೊಳಂಬವಾಡಿ ೩೨ ಸಾವಿರ ಪ್ರಾಂತವು ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಜೊತೆಗೆ ಬಳ್ಳಾರಿ, ಅನಂತಪುರ, ಕೋಲಾರ, ಬೆಂಗಳೂರು, ಜಿಲ್ಲೆಗಳ ಭಾಗಗಳನ್ನು ಒಳಗೊಂಡಿದ್ದು, ಈ ಪ್ರಾಂತ್ಯಕ್ಕೆ ಸಂಬಂಧಿಸಿದವರೇ ನೊಣಬರು ಎಂದು ಪ್ರಸಿದ್ಧರಾಗಿದ್ದಾರೆ. ಸೊಲ್ಲಾಪುರದ ಸಿದ್ಧರಾಮನನ್ನು ವಿಶೇಷವಾಗಿ ಕುಲಗುರುವೆಂದು ಒಪ್ಪಿಕೊಂಡಿದ್ದಾರೆ. ಸಾಂಪ್ರದಾಯಿಕ ವ್ಯವಸಾಯ ವೃತ್ತಿ ಅನುಸರಿಸುವವರು. ಪಲ್ಲವರ ತರುವಾಯ ಸಾಮಂತರಾಗಿದ್ದ ನೊಳಂಬರು ಅವರ ರಾಜ್ಯಕ್ಕೆ ಒಡೆಯರಾದರು. ಕುರುಬರಲ್ಲಿ ನೊಣಬರು ಎಂಬ ಒಳಪಂಗಡವಿದ್ದು, ನೊಳಂಬರು ಈ ನೊಣಬರೇ ಆಗಿರಬಹುದು. ನೊಳಂಬರು ತಾವು ಪಲ್ಲವ ಕುಲದವರೆಂದು ಹೇಳಿಕೊಳ್ಳುತ್ತಿದ್ದುದರಿಂದ ಚಿತ್ರದುರ್ಗ ಜಿಲ್ಲೆ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ 'ನೊಳಂಬವಾಡಿ' ಎಂಬ ಹೆಸರು ಇದ್ದಿತು. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಹೇಮಾವತಿಯ ಸ್ಥಂಭದ ಮೇಲೆ ಈ ಅರಸರ ವಂಶಾವಳಿಯನ್ನು ಕೊರೆಯಲ್ಪಟ್ಟಿದೆ. ಇವರು ಈಶ್ವರ

ವಂಶದವರೆಂದೂ, ಇವರ ಮೂಲ ಪುರುಷ ಪಲ್ಲವ ಕುಲಕ್ಕೆ ಸೇರಿದ 'ತ್ರಿನಯನಂತೆ'. ಇವರ ಮೊದಲ ಅರಸ ಮಂಗಳ(ಲ) ಅಥವಾ ನೊಳಂಬಾಧಿರಾಜನೆಂದು ಗೊತ್ತಾಗುತ್ತದೆ. ನೊಣಬರಲ್ಲಿ ಮೂರು ದಿನದವರು, ನಾಲ್ಕು ದಿನದವರು ಎಂಬ ಒಳಪ್ರಭೇದಗಳಿವೆ.

೧೮. ಹೆಗ್ಗಡೆ ಕುರುಬರು

ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಕುರುಬರನ್ನು ಮುಖ್ಯವಾಗಿ ಕುರುಬರೆಂತಲೂ, ಅಪರೂಪವಾಗಿ ಹಾಲುಮತವೆಂತಲೂ ಮತ್ತುಳಿದ ಕೆಲವೆಡೆಗಳಲ್ಲಿ ಹೆಗ್ಗಡೆಗಳೆಂತಲೂ ಕರೆಯುವರು. ಹಗ್ಗಡೆಗಳನ್ನು ಪೆರ್ಗಡೆ ಹಾಗೂ ಪೆಗ್ಗಡೆಗಳೆಂಬ ಪರ್ಯಾಯ ನಾಮಗಳಿಂದಲೂ ಹೆಸರಿಸುವುದುಂಟು. ಹೆಗ್ಗಡೆಗಳು ಎನ್ನುವ ಪದಕ್ಕೆ ಹಾವನೂರು ಆಯೋಗದ ವರದಿಯಲ್ಲಿ ಹಾಲುಮತ, ಹಾಲುಮತ ಕುರುಬರು ಎಂಬ ಪದಗಳಿಗೆ ಸಮಾನಾರ್ಥಕವಾಗಿ ಬಳಸಲಾಗುತ್ತಿದೆ.

ಹೆಗ್ಗಡೆ ಎನ್ನುವ ಪದವು ಭಾಷಿಕವಾಗಿ ಪೆರ್ಗಡೆ ಎಂಬ ಹಳಗನ್ನಡ ಪದದಿಂದ ಮೂಡಿಬಂದಿದೆ. ಪೆರ್ಗಡೆ ಎಂದರೆ 'ಮುಖ್ಯಸ್ಥ'ನೆಂದರ್ಥ. ೧೯೦೯ರಲ್ಲಿಯೇ ಥರ್ಸ್ಟನ್‌ರವರು ಇವರನ್ನು ಉಳುಮೆದಾರರು ಮತ್ತು ದನಸಾಕುವವರು ಎಂದು ಗುರ್ತಿಸುತ್ತಾರೆ. ತೀರಾ ಇತ್ತೀಚಿನವರೆಗೆ ಹೆಗ್ಗಡೆಗಳು ಗ್ರಾಮ ಪ್ರಧಾನವಾದ ಪಶುಪಾಲನೆ, ಕುರಿಪಾಲನೆ ಮತ್ತು ಕೃಷಿಕ ಜನಾಂಗದವರಾಗಿದ್ದರು.

ಸಂಖ್ಯಾದೃಷ್ಟಿಯಿಂದ ಹೆಗ್ಗಡೆಗಳು ಬಹಳ ಹಿಂದಿನಿಂದಲೂ ಅಲ್ಪ ಸಂಖ್ಯಾತರೆಂದೇ ತೋರುತ್ತದೆ. ಭೌಗೋಳಿಕವಾಗಿ ಇವರು ರಾಮನಗರ ಜಿಲ್ಲೆ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ, ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿ ಮಂಡ್ಯ, ಮದ್ದೂರು, ಮಳವಳ್ಳಿ ತಾಲ್ಲೂಕುಗಳಲ್ಲಿ, ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ಮತ್ತು ಮೈಸೂರು ತಾಲ್ಲೂಕುಗಳಲ್ಲಿ, ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಚದುರಿದಂತೆ ಹಂಚಿಹೋಗಿದ್ದಾರೆ.

ಹೆಗ್ಗಡೆ ಎನ್ನುವ ಹೆಸರನ್ನು ದಕ್ಷಿಣ ಕನ್ನಡ ಜಿಲ್ಲೆಯ ಆಳುವ ವರ್ಗವಾಗಿದ್ದ ಜೈನರು, ಗೌಡ ಸಾರಸ್ವತ ಜನಾಂಗದ ಕೆಲವು ಕುಟುಂಬಗಳು, ಸವರ್ಣೀಯ ಹಿಂದೂಗಳಾದ ಭೂಮಾಲೀಕ ವರ್ಗದ ಬಂಟರಲ್ಲೂ, ಹೆಗ್ಗಡೆಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಬ್ರಾಹ್ಮಣರ ಕೆಲವು ಕುಟುಂಬಗಳು ಹೆಗಡೆಗಳು ಎಂದು ಹೆಸರಿಟ್ಟುಕೊಳ್ಳುವುದು ವಾಡಿಕೆಯಲ್ಲಿದೆ. ಇಂದಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಹೆಗ್ಗಡೆ ಎಂಬ ಜಾತಿಯ ಅಲ್ಪಸಂಖ್ಯಾತ ಪಂಗಡವಿದೆ. ಈ ಪಂಗಡದ ಜನರು ತಾವು ಹಂಪಿಯಿಂದ ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಜೀವರಕ್ಷಣೆಗಾಗಿ ಪಲಾಯನಗೈದವರೆಂದು ಹೇಳುತ್ತಾರೆ.

ಹೆಗ್ಗಡೆ ಎನ್ನವ ಹೆಸರು ಈ ಎಲ್ಲಾ ಅನ್ಯಜಾತಿಗಳ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಮೂಲಗಳ ಜನಸಮುದಾಯಗಳಲ್ಲಿ ಹೆಗ್ಗಡೆ ಎಂಬ ಪದವು ಸೀಮಿತವಾಗಿ ಕೆಲವು ಕುಟುಂಬಗಳಿಗಷ್ಟೇ ಬಳಸಲ್ಪಡುತ್ತಿರು

ವುದರಿಂದ ಅದು ಸ್ಥಾನ ಸೂಚಕವಷ್ಟೇ ಆಗಿರಬಹುದು ಅದು ಹಾಲುಮತದ ಹೆಗ್ಗಡೆಗಳಂತೆ ಜಾತಿ ಸೂಚಕವಾಗಿಲ್ಲ.

ಹೆಗ್ಗಡೆಗಳು ಬಹಳ ಹಿಂದಿನಿಂದಲೂ ಅಲ್ಪ ಸಂಖ್ಯಾತರೆಂದೇ ತೋರುತ್ತದೆ. ಭೌಗೋಳಿಕವಾಗಿ ದಕ್ಷಿಣ ಕರ್ನಾಟಕದಲ್ಲಷ್ಟೇ ಇರುವ ಇವರು ಬಹುಸಂಖ್ಯಾತರಲ್ಲ. ಹೆಗ್ಗಡೆ ಸಮುದಾಯದವರು ಕೊಡಗು ಜಿಲ್ಲೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ದ್ರಾವಿಡ ಭಾಷೆಯಿಂದ ಕೊಡಗು ಮಾತನಾಡುವವರಲ್ಲದೆ ಕನ್ನಡ ಭಾಷೆಯನ್ನು ಮಾತಾಡುತ್ತಾರೆ. ಇವರಿಗೆ ಕೊಡಗಿನ ಇತರೆ ಮೂಲ ನಿವಾಸಿಗಳಿಗಿರುವಂತೆ ಐನ್ ಮನೆಗಳಿವೆ. ಐನ್ ಮನೆಗಳೆಂದರೆ ಅವಿಭಕ್ತ ಕುಟುಂಬದ ಶತಮಾನಗಳ ಹಳೆಯ ಮನೆ. ಇವರು ಕುಟುಂಬದ ಮೂಲ ಪುರುಷನನ್ನು 'ಕಾರಣ' ಎಂದು ಕರೆಯುತ್ತಿದ್ದು ಈತನನ್ನೇ ಪೂಜಿಸಲಾಗುತ್ತದೆ. ಪ್ರತಿಯೊಂದು ಮನೆಗೂ ಒಬ್ಬ ಕಾರಣ ಇರುತ್ತಾನೆ. ಇವರು ಹೆಗ್ಗಡೆ ಎಂಬ ಪದವನ್ನು ಮನೆತನದ ಹೆಸರಾಗಿಯೂ ಉಪಯೋಗಿಸುತ್ತಾರೆ.

ಕೆಲವು ಹಾಲುಮತ ಹೆಗ್ಗಡೆಗಳು ತಾವು ಆರ್ಯ ಜನಾಂಗದವರೆಂದು ಹೇಳಿಕೊಂಡು ಹೆಮ್ಮೆ ಪಡುತ್ತಾರೆ. ಹೆಗ್ಗಡೆಗಳೂ ಕೂಡ ಉಣ್ಣೆಕಂಕಣದವರು. ಬೀರದೇವರ ಪೂಜಾರಿಗಳೇ ಹೆಗ್ಗಡೆಗಳ ಶುಭ ಅಶುಭ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಇವರಿಗೆ 'ಕುರುಬರೊಡೆಯರು' ಎನ್ನಲಾಗುತ್ತದೆ. ರೇವಣಸಿದ್ಧೇಶ್ವರ ಮತ್ತು ಬೀರೇಶ್ವರನನ್ನು ಪೂಜಿಸುವ ಇವರೂ ಕೂಡ ಹಳೆಯ ಕುರುಬರೇ ಆಗಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಹೆಗ್ಗಡ ದೇವನ ಕೋಟೆ ಎಂಬ ಪ್ರಸಿದ್ಧವಾದ ಐತಿಹಾಸಿಕ ಸ್ಥಳವಿರುತ್ತದೆ. ಇದರ ನಿರ್ಮಾಪಕ ಹೆಗ್ಗಡೆ (ಕುರುಬ) ಜಾತಿಯವನಾದ 'ದೇವ ಹೆಗ್ಗಡೆ' ಎಂಬಾತನು. ಈತನಿಂದಲೇ 'ಹೆಗ್ಗಡೆದೇವನಕೋಟೆ' ಎಂಬ ಹೆಸರುಂಟಾಗಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ಕುರುಬರನ್ನು ಹೆಗ್ಗಡೆಗಳೆಂದು ಕರೆಯುವುದರ ಔಚಿತ್ಯವು ತಿಳಿದುಬರುತ್ತದೆ. ತುಳು (ತುರು) ನಾಡಿನಲ್ಲಿ ಕುರುಬ ಹೆಗ್ಗಡೆಗಳು ಜೈನರಾಗಿದ್ದಾರೆ. ಅಲ್ಲಿ ಈಗ ಕುರುಬರ ಸಂಖ್ಯೆ ಕಡಿಮೆಯಿದ್ದರೂ ಹೆಚ್ಚು ಕಲುಷಿತಗೊಳ್ಳದ ಕುರುಬರ ಇತಿಹಾಸವು ಗೋಚರಿಸುವಂತಿದೆ. ಹೊನ್ನವರ ಎಂಬ ಕುರುಬ ಕುಲದವರು ಹೊಸಂಗಡಿಯಲ್ಲಿ ಕಂಬಳಿ ವ್ಯಾಪಾರ ಮಾಡುತ್ತ ಹೊನ್ನವರ ಜೊತೆಗೆ ಸೇರಿ ಅವರು ಹೊನ್ನಕಂಬಳಿಯವರಾದರು. ಮುಂದೆ ಅರಸರಾಗಿ 'ಹೊನ್ನಕಂಬಳಿ ಅರಸರು' ಎಂದು ಪ್ರಖ್ಯಾತರಾದರು.

೧೯. ಒಕ್ಕೈ ಕುರುಬರು

ಒಕ್ಕೈ ಕುರುಬ ಎಂಬ ಹೆಸರು ಒಂದು ವಿಶಿಷ್ಟವಾದ ಒಗಟಿನ ರೂಪದಲ್ಲಿ ಇರುವಂತಹುದು. ಇದು ಯಾವುದೇ ಜಾತಿಗಾಗಲಿ ಅಥವಾ ಬುಡಕಟ್ಟಿಗಾಗಲಿ ಸೇರದ ಒಂದು ಸಮುದಾಯವಾಗಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ರಾಮಾಪುರ ಹೋಬಳಿಯಲ್ಲಿ ತಮಿಳುನಾಡಿಗೆ ಹೊಂದಿಕೊಂಡಂತೆ,

ಪಶ್ಚಿಮಘಟ್ಟದ ಮುಂದುವರಿಕೆಯಾಗಿ ಹಬ್ಬಿರುವ ಬೆಟ್ಟಸಾಲುಗಳಲ್ಲಿ ವಾಸ್ತವ್ಯ ಕಂಡುಕೊಂಡಿರುವ ಹಲವು ಸಮುದಾಯಗಳಲ್ಲಿ ಒಕ್ಕೆ ಕುರುಬರೂ ಒಬ್ಬರಾಗಿದ್ದು, ಸ್ಥಳೀಯವಾಗಿ ಇವರನ್ನು ಕೊಂಗನಾಡು ಕುರುಬ ಅಥವಾ ಕಚ್ಚೆ ಕುರುಬ ಎಂದು ಕರೆಯುವುದು ವಾಡಿಕೆಯಲ್ಲಿದೆ.

ಒಕ್ಕೈ ಕುರುಬ ಎಂಬ ವಿಶಿಷ್ಟವಾದ ಹೆಸರನ್ನು ಹೊಂದಿರುವ ಈ ಸಮುದಾಯವನ್ನು ಸ್ಥಳೀಯರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರಾದರೂ ತಾವುಗಳು ಮಾತ್ರ ಹುಲ್ಲುಮನೆ ಕುರುಬರು ಮತ್ತು ಹತ್ತಿಕಂಕಣದವರು ಎಂದು ಕರೆದುಕೊಳ್ಳುತ್ತಾರೆ. ಹಲವಾರು ಹೆಸರುಗಳಿಂದ ಕರೆಯಿಸಿಕೊಳ್ಳುವುದರ ಹಿಂದೆ ಅದರದೇ ಆದ ಅರ್ಥವೂ ಇರಬಹುದು. ಒಕ್ಕೈ ಕುರುಬ ಎಂಬ ಪದವನ್ನು ಒಂದು+ಕೈ+ ಕುರುಬ=ಒಕ್ಕೈ ಕುರುಬ ಎಂದು ಅರ್ಥೈಸಿಕೊಳ್ಳಬಹುದಾದರೂ ವ್ಯಾಕರಣದ ಅರ್ಥಪ್ರಾಪ್ತಿ ಸಾಧ್ಯವಾಗಬಹುದು. ಆದರೆ ಅದರ ಹಿಂದಿರಬಹುದಾದ ವಾಸ್ತವಾಂಶ ಅಥವಾ ಪ್ರಾಯೋಗಿಕ ಸನ್ನಿವೇಶವೇನೆಂಬುದನ್ನು ತಿಳಿಯುವುದು ಮುಖ್ಯವಾಗುತ್ತದೆ.

ನೂರಾರು ವರ್ಷಗಳ ಹಿಂದೆ ಐದಾರು ತಲೆಮಾರಿನ ಜನರಲ್ಲಿ ಘಟಿಸಿರುವ ಒಂದು ಆಕಸ್ಮಿಕ ಪರಿಸ್ಥಿತಿಯ ಕಾರಣ ಒಂದು ಪ್ರದೇಶದ ಜನರಿಗೆ ಒಕ್ಕೈ ಕುರುಬ ಎಂಬ ಹೆಸರು ಬಂದಿತ್ತಾದರೂ ಇದು ಜನರಲ್ಲಿ ಚಾಲ್ತಿಯಲ್ಲಿರದೆ, ಬದಲಾಗಿ ಭಾಷೆಯನ್ನು ಆಧರಿಸಿದ ಕೊಂಗನಾಡು ಕುರುಬ ಎಂಬ ಹೆಸರು ರೂಢಿಯಲ್ಲಿರಬಹುದು. ಅವರ ಉಡುಗೆಯನ್ನು ಪರಿಗಣಿಸಿದ ಕಚ್ಚೆ ಕುರುಬ ಎಂಬ ಹೆಸರು ಮೂಲಕ ಸಂಬೋಧಿಸುತ್ತಿರಬಹುದು. ಇವೆಲ್ಲವುಗಳ ನಡುವೆ ಈ ಹೆಸರುಗಳು ಬರಲು ಒಂದು ಬಲವಾದ ಕಾರಣವಿದ್ದಿರಲೇಬೇಕು.

ಕಾರಣಾಂತರಗಳಿಂದ ಬೇರೆ ಕಾಡಿನಿಂದ ವಲಸೆ ಬಂದ ಒಂದು ಗುಂಪಿನ ಜನರು ಮೀಣ್ಯಂ, ಗಾಜನೂರು, ಲಕ್ಕುಂಡಿ ಮತ್ತು ಹೂಗ್ಯಂ ಪ್ರದೇಶದಲ್ಲಿ ತಮ್ಮ ವಾಸ್ತವ್ಯವನ್ನು ಕಂಡುಕೊಂಡು ಕಾಡಿನಲ್ಲಿ ಆಹಾರೋತ್ಪನ್ನಗಳನ್ನು ಸಂಗ್ರಹಿಸುವ ಮೂಲಕ ತಮ್ಮ ನಿತ್ಯದ ಬದುಕನ್ನು ಸಾಗಿಸುತ್ತಿದ್ದರು. ಮನೆಯಲ್ಲೇ ಉಳಿಯುತ್ತಿದ್ದ ಹೆಣ್ಣು ಮಕ್ಕಳು ಮಳೆಗಾಲದಲ್ಲಿ ತಾವು ವಾಸವಿದ್ದ ಗುಡಿಸಲ ಸುತ್ತಲಿನ ನೆಲವನ್ನು ಹಸನು ಮಾಡಿ ಅಲ್ಲಿ ತಮ್ಮ ಆಹಾರಕ್ಕೆ ಪೂರಕವಾದ ಕೆಲವು ಧಾನ್ಯದ ಬೀಜಗಳನ್ನು ನೆಟ್ಟು ಕೆತ್ತಲು ಬೇಸಾಯವನ್ನು ಆರಂಭಿಸಿದರು. ಹೀಗೆ ಕಡಿಮೆ ಪ್ರಮಾಣದಲ್ಲಿ ಆರಂಭವಾದ ಬೇಸಾಯವು ವರ್ಷಗಳು ಕಳೆದಂತೆ ವಿಸ್ತಾರವಾಗತೊಡಗಿತು. ಆಗ ಮನೆಯಲ್ಲಿದ್ದ ಹೆಣ್ಣುಮಕ್ಕಳ ಜೊತೆಗೆ ಗಂಡು ಮಕ್ಕಳೂ ಸೇರ್ಪಡೆಯಾದರು. ಆದರೆ ಇದರಲ್ಲಿ ಹೆಣ್ಣುಮಕ್ಕಳ ಪಾಲು ಅಧಿಕವಾಗಿತ್ತು. ಅದಕ್ಕಾಗಿ ಹೆಚ್ಚು ಸಮಯ ಬೇಸಾಯದ ಕೆಲಸದಲ್ಲಿ ನಿರತರಾಗುತ್ತಿದ್ದರು.

ಹೀಗೆ ಬೇರೆಡೆಯಿಂದ ಅನಿವಾರ್ಯ ಕಾರಣಗಳಿಗಾಗಿ ವಲಸೆ ಬಂದ ಸಮುದಾಯವು ಭೌಗೋಳಿಕ ಪರಿಸರ ಹಾಗೂ ಪರಿಸ್ಥಿತಿಯ ಅನಿವಾರ್ಯತೆಗಳಿಂದ ಕೆತ್ತಲು ಬೇಸಾಯದಲ್ಲಿ ತೊಡಗಿಸಿಕೊಂಡರು. ಆಗ

ಹೆಣ್ಣುಮಕ್ಕಳು ತಮ್ಮ ಎರಡು ಕೈಗಳಿಗೆ ಗಾಜಿನ ಬಳೆಗಳನ್ನು ತೊಡುವುದು ಕಡ್ಡಾಯ ಮತ್ತು ಸಂಪ್ರದಾಯವಾಗಿತ್ತು. ಆದರೆ ತಾವು ರೂಢಿಸಿಕೊಂಡಿದ್ದ ಕೆತ್ತಲು ಬೇಸಾಯವು ಸುಗಮವಾಗಿ ಸಾಗಲು ಬಳೆಗಳು ತೊಡಕಾಗುತ್ತಿದ್ದವು. ಅಂದರೆ ಬಿದಿರು ಅಥವಾ ಕಾರೆ ದಸಿಯಿಂದ ನೆಲವನ್ನು ಹಸನು ಮಾಡುವಾಗ ಇಲ್ಲವೆ ಕಳೆ ಕೀಳುವ ಸಂದರ್ಭದಲ್ಲಿ ಬಲಗೈನ ಬಳೆಗಳಿಂದ ಕೆಲಸ ನಿಧಾನವಾಗುತ್ತಿತ್ತು. ಈ ತೊಂದರೆಯನ್ನು ತಾತ್ಕಾಲಿಕವಾಗಿ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಒಂದು ಉಪಾಯವನ್ನು ಕಂಡುಕೊಂಡರು. ಅಂದರೆ ಕೆತ್ತನೆ ಕೆಲಸದಲ್ಲಿ ತೊಡಗಿಕೊಳ್ಳುವ ಮುಂಚೆ ಬಲಗೈಗೆ ತೊಟ್ಟಿರುವ ಬಳೆಗಳನ್ನೂ ಕಳಚಿ ಮನೆಯಲ್ಲಿ ಇರಿಸುವುದು. ಕೆಲಸವು ಮುಗಿದ ಬಳಿಕ ಆ ಬಳೆಗಳನ್ನೂ ಮತ್ತೆ ತೊಡುವುದು ಇವರಿಗೆ ಹೆಚ್ಚು ಅನುಕೂಲವೆನಿಸುತ್ತಿತ್ತು. ಇವರು ಬೆಟ್ಟ ಕುರುಬರುಗಳ ಒಂದು ಭಾಗವೂ ಹೌದು.

ಕೆಲವು ಕಾಲ ಮುಂದುವರಿದು ಕಾಲಕ್ರಮೇಣ ಇದು ಅನಗತ್ಯ ಶ್ರಮ ಹಾಗೂ ಬಳೆಗಳು ಒಡೆದು ಹೋಗುತ್ತಿದ್ದವು. ಇದನ್ನ ತಪ್ಪಿಸಲು ಶಾಶ್ವತವಾಗಿ ಬಲಗೈಗೆ ಬಳೆಗಳನ್ನು ತೊಡುವುದನ್ನು ನಿಲ್ಲಿಸಿದರು. ಸಂಪ್ರದಾಯವನ್ನು ಮೀರಿದಂತೆ ಕಂಡು ಬಂದರೂ ಹೊಸವ್ಯವಸ್ಥೆಯೊಂದನ್ನು ರೂಢಿಸಿಕೊಳ್ಳಲು ಅಂದಿನ ಪರಿಸ್ಥಿತಿ ಸಮಸ್ಯೆಯಾಗಿರಲಿಲ್ಲ. ಇಂತಹ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಒಕ್ಕೈ ಕುರುಬ ಎಂದು ಕರೆಯಲ್ಪಡುವ ಸಮುದಾಯವು ನೂರಾರು ವರ್ಷಗಳ ಹಿಂದೆಯೇ ಹೆಸರು ಪಡೆದುಕೊಂಡು ಅಸ್ತಿತ್ವದಲ್ಲಿದ್ದರೆ ಅಚ್ಚರಿಯೇನಲ್ಲ.

೨೦. ವಾರದ ಕುರುಬರು

ಕುರುಬ ಸಮುದಾಯದಲ್ಲಿ ವಾರದ ಕುರುಬರು ಎಂಬ ಒಳಪಂಗಡವೊಂದಿದೆ. ಒಂದು ವಾರದ ಏಳು ದಿನಗಳ ಹೆಸರಿನಲ್ಲಿ ಗುರುತಿಸಲ್ಪಡುವವರಿಗೆ 'ವಾರದ ಕುರುಬ' ಎಂಬ ಹೆಸರು ಬಂದಿದೆ. ಆಯಾಯ ದಿನಗಳಂದು ಕುರುಬರ ನಿರ್ದಿಷ್ಟ ಒಳಪಂಗಡವು ದೇವರ ಪೂಜೆ ನಡೆಸುತ್ತದೆ. ಅಂದು ಮಾತ್ರ ಅವರು ಸಂಪೂರ್ಣ ಶಾಖಾಹಾರಿಗಳಾಗಿರುತ್ತಾರೆ. ಇವರು ಸಂಖ್ಯಾ ದೃಷ್ಟಿಯಿಂದಲೂ ಕಡಿಮೆಯಿದ್ದಾರೆ.

"ಮೈಸೂರು, ಮಂಡ್ಯ, ಚನ್ನಪಟ್ಟಣ ಮುಂತಾದ ಪ್ರಾಂತಗಳಲ್ಲಿ ೧. ಸೋಮವಾರದ ಕುರುಬರು. ೨. ಬೃಹಸ್ಪತಿವಾರದ ಕುರುಬರು ೩. ಆದಿತ್ಯವಾರದ ಕುರುಬರು ಎಂದು ಮೂರು ವಾರದ ಕುರುಬರು ಇರುವರು. ಇವರು ಆಯಾಯಾ ವಾರಗಳ ದಿವಸ ನೇಮ ನಿಷ್ಠೆಯಿಂದ ತಮ್ಮ ತಮ್ಮ ಮತ ಪದ್ಧತಿ ಪ್ರಕಾರ ದೇವರನ್ನು ಭಕ್ತಿಯಿಂದ ಆರಾಧಿಸುವರು ಮತ್ತು ಈ ವಾರಗಳ ಮೇಲಿನಿಂದ ಗೋತ್ರಗಳನ್ನೂ ಗೊತ್ತು ಮಾಡಿಕೊಳ್ಳುವರು"[೬೩] ಎಂದು ವಿ.ಆರ್. ಹನುಮಂತಯ್ಯನವರು ಹೇಳುತ್ತಾರೆ. ಅಲ್ಲದೆ ರವಿವಾರ, ಗುರುವಾರ, ಸೋಮವಾರ ಮಾತ್ರವಲ್ಲದೆ ಇನ್ನುಳಿದ ವಾರದ ಕುರುಬರೂ ಕಂಡು ಬರುತ್ತಾರೆ. ಅಂದಂದಿನ ದಿನ ಮನೆದೇವರಾದ ಬೀರಪ್ಪನ ಪೂಜೆ ವಿಶೇಷವಾಗಿ ಜರುಗುತ್ತದೆ.

೨೧. ಕಂಬಳಿ ಕುರುಬರು

ಕುರುಬ ಸಮುದಾಯದಲ್ಲಿ ಕಂಬಳಿ ಕುರುಬರು ಎಂಬ ಒಳಪಂಗಡವೊಂದು ಕಂಡು ಬರುತ್ತದೆ. 'ವೃಷ್ಣಿ' ಎಂದರೆ ' ಕುರಿ' ಎಂದರ್ಥ. ಉಣ್ಣೆಯ ಉತ್ಪಾದನೆಯು ಕುರಿಯಿಂದಲೇ ಆಗುವುದು. ಕಂಬಳಿಗಳನ್ನು ಆ ನೂಲಿನಿಂದಲೇ ನೇಯಬೇಕಾಗಿದೆ. ಮೇಲೆ ಹೇಳಿದಂತೆ ಕಂಬಳಿ ನೇಯ್ಗೆಯ ಕಲೆಯು ವೇದೋಕ್ತವಾದುದು. 'ಕಂಬಲ' ಎಂಬ ಶಬ್ದದಿಂದ ಕಂಬಳಿ ಬಂದಿದ್ದು ಋಗ್ವೇದದಲ್ಲಿ ಮಾತ್ರವಲ್ಲದೆ ಅಥರ್ವಣ ವೇದದಲ್ಲೂ ಈ ಪದವು ಬಳಕೆಯಾಗಿದೆ.

ವೇದಕಾಲದಿಂದಲೂ ಕುರುಬರಲ್ಲಿ ಕೆಲವು ಒಳಪಂಗಡದವರು ಕಂಬಳಿಗಳನ್ನು ನೇಯ್ದು ಮಾರಾಟಮಾಡುವ ಜೀವನೋಪಾಯವನ್ನು ಕಂಡುಕೊಂಡಿದ್ದರು. ಅಪರೂಪವಾಗಿ ಕಂಬಳಿ ನೇಯ್ಗೆಯೊಂದಿಗೆ ವ್ಯವಸಾಯ ಮಾಡಿದರೂ ಇವರಿಗೆ 'ಕಂಬಳಿ ಕುರುಬರು' ಎಂಬ ಹೆಸರು ಬಳಕೆಗೆ ಬಂದಿತು. ಈ ನೇಯ್ಗೆಯು ಸಾಮಾನ್ಯವಾದ ಕಲೆಯಾಗಿರದೆ ಚಮತ್ಕಾರದಿಂದ ಕೂಡಿದುದಾಗಿದೆ. ಪ್ರಪಂಚದ ನಾಗರೀಕತೆಗೆ ಮೂಲ ಕಾರಣರಾದ ಈ ಕಲೆಯನ್ನು ಜಗತ್ತಿಗೆ ತೋರಿಸಿಕೊಟ್ಟವರು ಹಟ್ಕಾರ ಧನಗಾರರು. ಈಗ ನೇಯ್ಗೆ ವೃತ್ತಿಯಲ್ಲಿ ಅನೇಕ ಜಾತಿ ಪಂಗಡಗಳಿದ್ದು ದೇವಾಂಗದವರಲ್ಲಿ 'ಹಟ್ಕಾರ ದೇವಾಂಗ' ಎಂಬ ಒಳಪಂಗಡವು ನೇಯ್ಗೆ ಕಸುಬು ಅವಲಂಬಿಸಿದ್ದಾರೆ.

ಇತ್ತೀಚೆಗೆ ಕುರುಬರು ಹಿಂದಿನ ಕಾಲದ ಒರಟು ಕಂಬಳಿಗಳನ್ನು ಮಾತ್ರವಲ್ಲದೆ ಈ ನವನಾಗರಿಕತೆಯ ಕಾಲಕ್ಕೆ ತಕ್ಕಂತೆ ನಯನಾಜೂಕಾದ ಕಂಬಳಿ, ರಗ್ಗು, 'ಉಜ್ಜುಗಂಬಳಿ' ಎಸ್ಟೇಟ್ ಕೂಲಿ ಜನರಿಗಾಗಿ ಸಾದ ಕಂಬಳಿ, ಓವರ್ ಕೋಟ್ ಮಾದರಿಯ ಕಂಬಳಿಗಳು, ಒಂದೇ ಪಟ್ಟೆಯ ಹಲವು ನಯವಾದ ರೇಷ್ಮೆ ಅಂಚಿನ ಕಂಬಳಿಗಳ ನೇಯ್ಗೆ ಕಲೆಯಲ್ಲಿ ನಿಪುಣರೆನಿಸಿಕೊಂಡಿದ್ದಾರೆ. ಈ ಕಂಬಳಿ ಕುರುಬರು ಕೋಲಾರ, ತುಮಕೂರು, ದಾವಣಗೆರೆ, ಹುಣಸೂರು, ಬಳ್ಳಾರಿಗಳಲ್ಲಿ ಹೆಚ್ಚು ಕಂಡುಬರುತ್ತಾರೆ. ಕೋಲಾರ, ದಾವಣಗೆರೆಗಳಲ್ಲಿ, ಸಾದಾ ಕಂಬಳಿಗಳೂ, ಹುಣಸೂರಿನಲ್ಲಿ ಉಜ್ಜುಗಂಬಳಿಗಳೂ, ಬಳ್ಳಾರಿಗಳಲ್ಲಿ ಝೂಡಿಗಳು ಪ್ರಸಿದ್ಧವೆನಿಸಿಕೊಂಡಿವೆ. ಮಿಲ್ಲು ಕಂಬಳಿಗಳಿಗಿಂತಲೂ ಕೈಮಗ್ಗದ ಕಂಬಳಿಗಳು ದೀರ್ಘ ಬಾಳಿಕೆ ಬರುವಂತಿದ್ದು ಕುರುಬರಲ್ಲಿ ಕಂಬಳಿಗೆ ಪವಿತ್ರವಾದ ಭಾವನಾತ್ಮಕ ಸಂಬಂಧವೂ ಇರುವುದನ್ನು ಕಾಣಬಹುದಾಗಿದೆ.

೨೨. ಇತರೆ ಒಳಪಂಗಡಗಳು

ಕನಕಯ್ಯನ ಜಾತಿ ಕುರುಬರು: ಶಿವನ ಆರಾಧಕರಾಗಿದ್ದ ಕುರುಬ ಸಮುದಾಯದ ಮೇಲೆ ವೈಷ್ಣವ ಪಂಥದ ಪ್ರಭಾವವು ವಿಜಯನಗರದ ಪ್ರಖ್ಯಾತ ದೊರೆಯಾದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಆಗಿರುವುದು ಕಂಡು ಬರುತ್ತದೆ. ರಾಮಾನುಜಾಚಾರ್ಯರಂತಹ ವೈಷ್ಣವ ಆಚಾರ್ಯರು, ಕರ್ನಾಟಕದಲ್ಲಿ ಬಹಳ ಕಾಲ ನೆಲೆಸಿದ್ದರಿಂದ ಅನೇಕರು ಅವರ ಪ್ರಭಾವಕ್ಕೆ ಒಳಗಾಗಿ ತಿರುಪತಿ ವೆಂಕಟೇಶ್ವರನನ್ನು

ಪೂಜಿಸಲು ಆರಂಭಿಸಿದರು. ಹೀಗಿರುವಾಗ ಕರ್ನಾಟಕದ ದಾಸ ಶ್ರೇಷ್ಠರೂ, ಪುರಂದರದಾಸರ ಸಮಕಾಲೀನರೂ ಆಗಿ ಕವಿಗಳೂ, ಕೀರ್ತನಕಾರರೂ ಆದ ಕನಕದಾಸರು ಕುರುಬ ಸಮುದಾಯದಿಂದ ಬಂದವರು.

ಕರ್ನಾಟಕದಲ್ಲಿ ವೈಷ್ಣವ ಧರ್ಮ ಪ್ರಬಲವಾಗಿದ್ದ ಕಾಲದಲ್ಲಿ ಕನಕದಾಸರು ಬಂದಿದ್ದರಿಂದ ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದ ಕನಕದಾಸರನ್ನು ಅನುಸರಿಸಿ ಕನಕಯ್ಯನ ಜಾತಿ ಕುರುಬರು ಅಥವಾ ಕನಕಯ್ಯನ ಕುರುಬರು ಎಂಬ ಹೆಸರು ಬಂದಿರಬಹುದು. ಇವರು ಕುರುಬ ಸಮುದಾಯದವರಾಗಿದ್ದು ಕಾಗಿನೆಲೆ ಆದಿಕೇಶವ ಅಥವಾ ತಿರುಪತಿ ತಿಮ್ಮಪ್ಪನನ್ನು ಆರಾಧಿಸುತ್ತಾರೆ. ಈ ಸಮುದಾಯದ ಭಕ್ತವರ್ಗವನ್ನು ದಾಸಯ್ಯಗಳೆಂದೋ, ದಾಸಕುರುಬರೆಂದೋ ಕರೆಯಲಾಗುತ್ತದೆ. ಆದರೆ ಇಂತಹ ಕನಕಯ್ಯನ ಕುರುಬರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತಾರೆ.

ವೀರಗಾರ ಕುರುಬರು: ವೀರರು ಅಥವಾ ಈರರು, ಈರ ಮಕ್ಕಳು ಎಂದು ಕರೆಯಲ್ಪಡುವ ಇವರು ಬೀರಲಿಂಗೇಶ್ವರ ಅಥವಾ ಮೈಲಾರಲಿಂಗನ ಆರಾಧಕರು. ಈರರು ಹಿಂಸಾ ಆರಾಧನಾ ಪದ್ಧತಿಯ ಬಳುವಳಿ ಎನ್ನಬಹುದು. ದೇವರ ಮನಸ್ಸನ್ನು ಸಂತೃಪ್ತಿಗೊಳಿಸುವ ಸಲುವಾಗಿ ನಾಲ್ಕು ಕಬ್ಬಿಣದ (ಅಲಗು) ಸಲಾಕೆಗಳಿಂದ ಜೋಡಿಸಲ್ಪಟ್ಟ ಆಯುಧಗಳಿಂದ ತಮ್ಮ ಕೈ ಆಚೆ ಚಾಚಿದಾಗ ಆಗಬಹುದಾದಷ್ಟು ದೂರದಿಂದ ಎತ್ತಿ ಜೋರಾಗಿ ತಮ್ಮ ಹೊಟ್ಟೆ, ಹೊಕ್ಕುಳಕ್ಕೆ ಹೊಡೆದುಕೊಳ್ಳುವ ಸಮುದಾಯವೇ ವೀರಗಾರರು.

ವೀರಶೈವರಿಗೆ ವೀರಭದ್ರನೇ ಕುಲದೇವರಾದಂತೆ ಕೆಲವು ಕುರುಬರ ಕುಲದೈವವೂ ಆಗಿದ್ದಾನೆ. ಕುರುಬರಲ್ಲಿ ವೀರಗಾರ ಎಂಬ ಒಳಪಂಗಡವಿದ್ದು ವೀರಗಾರರ ಸಂಪ್ರದಾಯವು ವೀರಭದ್ರನ ಇಂದಿನ ಪುರವಂತರ ಸಂಪ್ರದಾಯಕ್ಕಿಂತಲೂ ಪುರಾತನವಾದುದು. ಬೀರಪ್ಪನ ಉಪಾಸನೆಯಲ್ಲಿದ್ದ ವೀರಗಾರರು ಬೀರಪ್ಪನ ವೀರಭದ್ರೀಕರಣದೊಂದಿಗೆ ಪುರವಂತರಾಗಿದ್ದಾರೆ. ಎಲ್ಲಾ ವೀರಭದ್ರ ದೇವಾಲಯಗಳು ರೇವಣಸಿದ್ದೇಶ್ವರ ಪೀಠ ಪರಂಪರೆಯ ಜಂಗಮ ಮಠಾಧಿಪತಿಗಳ ಒಡೆತನಕ್ಕೆ ಸೇರಿವೆ. ಎಡೂರು ದೇವಾಲಯವು ಕಾಡಸಿದ್ಧ ಶಾಖೆಗೆ ಸೇರಿದೆ. ಕಾಡುಸಿದ್ಧ ಎಂಬುದು ಕುರುಬರನ್ನು ನೆನಪಿಸುತ್ತದೆ ಎಂಬ ಎಂ.ಎಂ. ಕಲಬುರ್ಗಿಯವರ ಮಾತಿನಲ್ಲಿ ಅತಿಶಯೋಕ್ತಿಯಿರಲಾರದು.

ಬೀರದೇವರು ಉತ್ಸವಕ್ಕೆ ಮೆರವಣಿಗೆ ಹೊರಟಾಗ ಇವರು ತಮ್ಮ ಕಾಯಕವನ್ನು ತಪ್ಪದೇ ಮಾಡಬೇಕಾಗುತ್ತದೆ "ಈರರು (ವೀರರು) ಸದಾ ಮಡಿಮೈಲಿಗೆಗಳ ಬಗ್ಗೆ ಜಾಗರೂಕರಾಗಿರುತ್ತಾರೆ. ಅಲ್ಲದೆ ಇವರ ಮತ್ತೊಂದು ಮುಖ್ಯವಾದ ಕೆಲಸವೆಂದರೆ ಮರಿ ಸಿಗಿಯುವುದು. ತಮ್ಮ ಕುರಿಮಂದೆಯು ಹೆಚ್ಚಿದರೆ ಮರಿ ಸಿಗಿಯ ಬಿಡುತ್ತೇನೆಂದು ಹರಕೆ ಹೊತ್ತವರು ತಮ್ಮ ಕುರಿ ಹಿಂಡನ್ನು ದೇವಸ್ಥಾನದ ಎದುರು ತಂದು ನಿಲ್ಲಿಸುತ್ತಾರೆ. ಹಿಂಡಿನಲ್ಲಿ ಎಷ್ಟನ್ನಾದರೂ ವೀರರ ಬಾಯಿಂದ ಕುರಿಯು ಗಂಟಲಿಗೆ

ಕಟ್ಟಿ ರಕ್ತವನ್ನು ಕುಡಿಯಬಹುದಾದ ಒಂದು ಪದ್ಧತಿಯೂ ವೀರಗಾರರ ಸಮುದಾಯದಲ್ಲಿ ರೂಢಿಯಲ್ಲಿದೆ"[೭೪] ಎಂದು ರಾಜಪ್ಪ ದಳವಾಯಿಯವರು ಅಭಿಪ್ರಾಯ ಪಡುತ್ತಾರೆ.

ಕುರುಬ ಕುಲದ ರೇವಣಸಿದ್ದೇಶ್ವರರು ಆರಂಭಕಾಲದಿಂದಲೂ ವೀರಭದ್ರನ ಆರಾಧಕರೆಂದು ಕಂಡು ಬರುತ್ತದೆ. ಪ್ರಾರಂಭದಲ್ಲಿ ನಾಥ ಪಂಥೀಯರಾಗಿದ್ದ ಇವರು ನವನಾಥರಲ್ಲಿ ಒಬ್ಬರಾಗಿದ್ದರು. ನಾಥರಲ್ಲಿರುವ ವಾಮಾಚಾರಕ್ಕೆ ಬೇಸತ್ತು ಕೊಲ್ಲಿಪಾಕಿಯಲ್ಲಿ ಕಾಳಾಮುಖ ಶೈವಪಂಥ ಸ್ವೀಕರಿಸಿದ ಅನಂತರ ವೀರಭದ್ರನ ಪ್ರಚಾರವು ವ್ಯಾಪಕಗೊಂಡಿದ್ದು ಕಂಡು ಬರುತ್ತದೆ. ರೇವಣಸಿದ್ಧನ ಪರಂಪರೆಯು ವೀರಭದ್ರನ ಗೋತ್ರದ್ದಾಗಿದೆ. ಗುರುಸ್ಥಾನದಲ್ಲಿರುವ ರೇವಣಸಿದ್ಧೇಶ್ವರ ಮಠಗಳಲ್ಲಿ ವಿರಭದ್ರನಿಗೆ ಮೊದಲ ಪೂಜೆ ಸಲ್ಲುತ್ತದೆ. ಈ ಮೂಲಕ ವೀರಗಾರರೆಂಬ ಒಳಪಂಗಡ ಕುರುಬರಲ್ಲಿ ಕಂಡು ಬರುತ್ತದೆ.

ಕೊಂಗನಾಡು, ಕಚ್ಚೆ, ಹುಲ್ಲುಮನೆ ಕುರುಬರು: ಬೆಟ್ಟಸಾಲಿನಲ್ಲಿ ವಾಸವಿದ್ದ ಬೆಟ್ಟಕುರುಬ ಅಥವಾ ಕಾಡು ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕಾರಣಾಂತರಗಳಿಂದ ಈ ಸಮುದಾಯದ ಒಂದೆರಡು ಕುಟುಂಬಗಳು ಪರ್ಯಾಯ ಬದುಕನ್ನು ಹುಡುಕಿಕೊಂಡು ಹೆಗ್ಗಡದೇವನ ಕೋಟೆಯ ಕಾಡಿನಿಂದ ಈಗಿರುವ ಕೊಳ್ಳೆಗಾಲ ಪ್ರದೇಶಕ್ಕೆ ವಲಸೆ ಹೋಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಈ ಹೆಸರುಗಳ ಹಿಂದೆ ವಿಶೇಷವಾದ ಸಂಗತಿಗಳಿರುವುದು ತಿಳಿದು ಬರುತ್ತದೆ.

ಕೊಂಗನಾಡು ಕುರುಬ ಕನ್ನಡ ಪ್ರಾಂತವಾದ ಮೈಸೂರು ಪ್ರದೇಶದಲ್ಲಿ ಹೆಗ್ಗಡ ದೇವನಕೋಟೆ ಕಾಡಿನಲ್ಲಿ ನೆಲೆಯನ್ನು ಕಂಡುಕೊಂಡಿರುವ ಒಕ್ಕಲುಕುರುಬರು. ಅಂದಿನ ತಮಿಳುನಾಡು ಪ್ರಾಂತವಾಗಿದ್ದ ಕೊಳ್ಳೆಗಾಲ ತಾಲೂಕಿನ ರಾಮಾಪುರ ಹೋಬಳಿಯ ದಕ್ಷಿಣ ದಿಕ್ಕಿನಲ್ಲಿ ಹಬ್ಬಿರುವ ಇಂದಿನ ಕರ್ನಾಟಕ ತಮಿಳುನಾಡಿನ ಗಡಿಯಾಗಿರುವ ಬೆಟ್ಟಸಾಲಿನಲ್ಲಿ ವಾಸ್ತವ್ಯ ಇರುವುದು ತಿಳಿದು ಬರುತ್ತದೆ. ಸಹಜವಾಗಿ ಇಲ್ಲಿನ ಭಾಗದ ಜನರ ಮಾತೃಭಾಷೆಯಾಗಿದ್ದ ತಮಿಳನ್ನು ಇವರೂ ಕಲಿತುಕೊಂಡರು. ಇದಲ್ಲದೆ ತಮಿಳಿನ ಜನರ ಜೊತೆಯಲ್ಲಿ ವ್ಯಾಪಾರ ಮತ್ತು ವೈವಾಹಿಕ ಸಂಬಂಧವನ್ನು ಮಾಡಿಕೊಂಡಿರುವ ಕಾರಣಕ್ಕೆ ಇವರನ್ನು ಸ್ಥಳೀಯರು ಅಂದರೆ ಕನ್ನಡ ಮಾತೃಭಾಷಿಕರು 'ಕೊಂಗನಾಡ ಕುರುಬರು' ಎಂದು ಕರೆದಿರುವುದು ಸಾಮಾನ್ಯವಾದ ಸಂಗತಿ. ಆದರೆ ಈ ಹೆಸರನ್ನು ಸದರಿ ಸಮುದಾಯವು ವಿರೋಧಿಸುವ ಅಥವಾ ಪ್ರತಿಕ್ರಿಯಿಸುವ ಯಾವ ಪ್ರಯತ್ನವು ನಡೆಯದಿದ್ದಾಗ ಇಂತಹುದೊಂದು ಹೆಸರು ಬರಲು ಕಾರಣವಾಗಿದೆ. ಸ್ವಾತಂತ್ರ ಪೂರ್ವ ಹಾಗೂ ಅನಂತರದಲ್ಲೂ ಕಾಡಿನ ಹಲವು ಸಮುದಾಯಗಳು ಕೃಷಿಕರು ಮತ್ತು ಕಾಡು ಉತ್ಪನ್ನಗಳ ಸಂಗ್ರಾಹಕರಾಗಿದ್ದ ಬುಡಕಟ್ಟಿನ ಗಂಡಸರು ಎರಡು ಮೊಳ ಉದ್ದ ಮತ್ತು ಒಂದು ಮೊಳ ಅಗಲದ ಒಂದು ತುಂಡು ಬಟ್ಟೆ(ಕೌಪೀನದ ಮಾದರಿ)ಯಲ್ಲಿ ಕಚ್ಚೆ ಕಟ್ಟಿಕೊಳ್ಳುವುದು ರೂಢಿಯಲ್ಲಿತ್ತು. ದುಡಿಮೆಗೆ ತೊಡಗಿರುವಾಗ, ಕಾಡಲ್ಲಿರುವಾಗ ಈ ಉಡುಗೆ ಸಾಮಾನ್ಯವಾಗಿತ್ತು. ಆದ್ದರಿಂದ ಗಂಡಸರು ಉಡುವ ಕಚ್ಚೆಯು ಸಮುದಾಯವನ್ನು ಗುರುತಿಸುವ ಹೆಸರಾಗಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಹುಲ್ಲುಮನೆ ಕುರುಬ ಹೆಸರಿನ ಪೂರ್ವ ಪದವೇ ಹೇಳುವಂತೆ ಕಾಡಿನ ಸೊಪ್ಪು ಬಿದಿರು ಮತ್ತು ಹುಲ್ಲನ್ನು ಬಳಸಿ ಕಟ್ಟಿರುವ ಗುಡಿಸಲಿನಲ್ಲಿ ವಾಸಿಸುತ್ತಿದ್ದ ಸಮುದಾಯವನ್ನು ಹುಲ್ಲುಮನೆ ಕುರುಬ ಎಂದು ಕರೆದಿರುವುದು ಸಹಜವೇ ಆಗಿದೆ. ಒಂದೇ ಕಾಲಘಟ್ಟದಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಒಂದೇ ಸಮುದಾಯವು ಅನೇಕ ಹೆಸರುಗಳಿಂದ ಕರೆದಿರುವುದು ಕಂಡು ಬರುತ್ತದೆ. ಅಂದಿನ ಸಮುದಾಯವು ಮಾತನಾಡುತ್ತಿದ್ದ ಭಾಷೆ, ಉಡುತ್ತಿದ್ದ ಬಟ್ಟೆ ಮತ್ತು ವಾಸಿಸುತ್ತಿದ್ದ ಗುಡಿಸಲಿನ ಮಾದರಿಯನ್ನು ಪರಿಗಣಿಸಿ ಕರೆಯಲಾಗುವ ಹೆಸರುಗಳಿಂದು ಸ್ಪಷ್ಟವಾಗುತ್ತದೆ.

ಮಿಶ್ರ ಕಂಕಣ ಕುರುಬರು: ಆಧುನಿಕತೆಯ ಪ್ರಭಾವದಿಂದಲೋ, ವೈಚಾರಿಕ ಪ್ರಜ್ಞೆಯ ಜಾಗೃತಿಯಿಂದಲೂ ಸಮುದಾಯವೊಂದರಲ್ಲಿ ಒಳಪಂಗಡದ ಉಗಮಕ್ಕೆ ಕಾರಣವಾಗಬಹುದು. ಹತ್ತಿ ಮತ್ತು ಉಣ್ಣೆಕಂಕಣ ಕುರುಬರಲ್ಲಿ ಮೊದಲಿಗೆ ಇದ್ದ ವೈವಾಹಿಕ ಸಂಬಂಧದ ನಿಷೇಧವು ಕೊನೆಗೊಳ್ಳಲು ಆರಂಭಿಸಿದೆ. ಅಣ್ಣತಮ್ಮಂದಿರೆಂಬ ಭಾವನಾತ್ಮಕ ನೆಲೆಯೂ ಮಾಯವಾಗುತ್ತಿದೆ. ಇವೆರಡು ಒಳ ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಜರುಗುತ್ತಿರುವುದು ಸಾಮಾಜಿಕವಾಗಿ ಆರೋಗ್ಯಕರ ಬೆಳವಣಿಯಾಗಿದೆ. ಇವರನ್ನು 'ಮಿಶ್ರಕಂಕಣ ಕುರುಬರು' ಎಂದು ಕರೆಯಲಾಗುತ್ತದೆ. ವಿಶೇಷವಾಗಿ ಹಳೇ ಮೈಸೂರು, ತುಮಕೂರು, ಚಿಕ್ಕಮಗಳೂರುಗಳಲ್ಲಿ ಕಂಡು ಬರುತ್ತಾರೆ. ಆದರೆ ಉತ್ತರ ಕರ್ನಾಟಕದಲ್ಲಿ ಈ ಸಡಿಲಿಕೆಯನ್ನು ಕಾಣಲಾಗದು. ಆ ಸ್ಥಳಗಳಲ್ಲಿ ಇನ್ನೂ ಅಣ್ಣ ತಮ್ಮಂದಿರೆಂಬ ಭಾವನೆಯು ಬಲವಾಗಿ ಬೇರೂರಿದೆ.

ಗರುಡನ ಕುರುಬರು: "ಗರುಡ ಜನಾಂಗ ಪ್ರಾಚೀನವಾದ ಕುರುಬರ ಒಂದು ಒಳಪಂಗಡ. ಗರುಡ ಶಬ್ದದ ಅರ್ಥ ಅಂಗರಕ್ಷಕ. ಪುರಾಣಿಕರು ಇವನನ್ನು ಪಕ್ಷಿಯ ರೂಪದಲ್ಲಿ ವಿಷ್ಣುವಿನ ವಾಹನವಾಗಿ ಚಿತ್ರಿಸಿದ್ದಾರೆ. ರಾಮಾಯಣದಲ್ಲಿ ಬರುವ ಕಿಷ್ಕಿಂದೆ ಪ್ರದೇಶದಲ್ಲಿ ನೆಲೆಸಿದ್ದ ಕುರುಬರನ್ನು ಗಮನದಲ್ಲಿಟ್ಟುಕೊಂಡೇ ವಾಲ್ಮೀಕಿಯು ಮಾರುತಿಯ ನೆಲೆಯನ್ನು ಇದೇ ಸ್ಥಳದಲ್ಲಿದ್ದಂತೆ ಕಥೆ ರಚಿಸಿದನು. ಹಂಪೆಯ ಪರಿಸರದಲ್ಲಿ ಈಗಲೂ ಕುರುಬ ಹಾಗೂ ಅದಕ್ಕೆ ಹೊಂದಿಕೊಂಡ ಜಾತಿಯ ಜನರನ್ನು ಬಹುಸಂಖ್ಯೆಯಲ್ಲಿ ಕಾಣಬಹುದಾಗಿದೆ"[೭೫] ಎಂದು ಚಂದ್ರಕಾಂತ ಬಿಜ್ಜರಗಿಯವರು ಅಭಿಪ್ರಾಯ ಪಡುತ್ತಾರೆ.

ಸಂಖ್ಯಾ ನಿರ್ಣಯ

ಸುದೀರ್ಘವಾದ ಭವ್ಯ ಪರಂಪರೆಯನ್ನು ಹೊಂದಿರುವ ಕುರುಬ ಸಮುದಾಯವು ಭಾರತದಾದ್ಯಂತ ಕಂಡುಬರುವುದಾದರೂ ಕರ್ನಾಟಕದಲ್ಲಿ ಅಧಿಕ. ಈ ಸಮುದಾಯದ ಹೆಚ್ಚಿನವರು ಪರಂಪರಾನುಗತವಾದ ವೃತ್ತಿಗಳೆನಿಸಿದ ಕುರಿಸಾಕಾಣಿಕೆ, ಕಂಬಳಿನೇಯ್ಗೆಗಳನ್ನು ಉಪಜೀವನದ ವೃತ್ತಿಗಳನ್ನಾಗಿಸಿಕೊಂಡಿದ್ದಾರೆ. ಕುರಿಗಾಹಿಗಳಾಗಿ, ಅರಸರಾಗಿ ನಾಡು-ನುಡಿ ಸಂಸ್ಕೃತಿಗಳಿಗೆ ಕುರುಬ ಸಮುದಾಯದ ಕೊಡುಗೆ ಅನನ್ಯವಾದದು.

ಸಮುದಾಯವೊಂದರಲ್ಲಿ ಕೊಂಡಿ ಕಳಚಿಕೊಳ್ಳುತ್ತಲೇ ಹೊರ ನಡೆಯುವಾಗ ಹೆಚ್ಚಿನದಾಗಿ ಕುಟುಂಬಗಳ ವಲಸೆ, ಹೊಸ ತಲೆಮಾರುಗಳ ಧಾರ್ಮಿಕ ಉಪೇಕ್ಷೆ, ಕುರುಬ ಸಮುದಾಯದ ಎಳೆಗಳು ದುರ್ಬಲವಾಗಲು ಮತ್ತು ಸಡಿಲಗೊಳ್ಳಲು ಕಾರಣವಾಗಿ ಒಳಪಂಗಡಗಳಾಗಿ ರೂಪುಗೊಂಡವು. ಸಮುದಾಯವೊಂದು ಅನೇಕ ಬದಲಾಣೆಗಳೊಂದಿಗೆ ಉಂಟಾಗುವ ಅಂತಸ್ತಿನ ಸ್ಪರ್ಧೆಯಿಂದ ಚಲನಶೀಲತೆಗೆ ಅಗತ್ಯವಾದ ಪಂಗಡಗಳಿಂದ ಬದಲಾವಣೆ ಹೊಂದಿ ಒಳಪಂಗಡಗಳಾಗಿ ನಿರ್ಮ್ಾಣವಾಗುವುದು ಬೆಳವಣಿಗೆಯ ಹೊಸ ಆಯಾಮವೂ ಹೌದು.

ಕುರುಬ ಸಮುದಾಯದ ಒಳಪಂಗಡಗಳನ್ನು ಕುರಿತು ವರ್ಗೀಕರಣ ಮಾಡಿ ಸಂಖ್ಯಾ ನಿರ್ಣಯ ನೀಡುವುದು ಸುಲಭದ ಮಾತಲ್ಲ. ಏಕೆಂದರೆ ಈ ಸಮುದಾಯದ ಜೊತೆಗೆ ತಮ್ಮನ್ನು ಗುರುತಿಸಿಕೊಂಡವರು, ಕಳಚಿಕೊಂಡು ಹೋಗಿರಬಹುದಾದ ಸಾಕಷ್ಟು ಗುಂಪುಗಳಿರುವುದರಿಂದ ಈ ಸಮುದಾಯದ ಒಳಪಂಗಡಗಳು 'ಇದಮಿತ್ಥಂ' ಎಂದು ನಿರ್ಣಯಕ್ಕೆ ಬರುವುದು ಕಷ್ಟವಾಗುತ್ತದೆ. ಸಾಮಾಜಿಕ ಸಂಘಟನೆಯ ಶಿಸ್ತಿನಿಂದ ಆರಂಭವಾಗಿ ಈ ಸಮುದಾಯ ಕಾಲಕ್ರಮೇಣ ವಿಭಾಗಗೊಂಡು ಹರಿದು ಹಂಚಿ ಹೋಗಿದ್ದು ಒಳಪಂಗಡಗಳಾಗಿ ರೂಪತಾಳಿವೆ. ಇದನ್ನು ಕುರಿತು ಹಲವಾರು ವಿದ್ವಾಂಸರು ಸಂಖ್ಯಾ ನಿರ್ಣಯ ಮಾಡಿದ್ದರೂ ಸಹಮತ ಅಭಿಪ್ರಾಯವೂ ಹೊರಬಂದಂತಿಲ್ಲ. ಆದ್ದರಿಂದ ಕೆಳಕಂಡ ಅಭಿಪ್ರಾಯಗಳ ಮೂಲಕ ಸಂಖ್ಯೆಯನ್ನು ನಿರ್ಣಯಿಸಬಹುದಾಗಿದೆ.

"ಹಾಲುಮತದ ಮೂಲಪುರುಷ ಗುರು ರೇವಣಸಿದ್ಧನು ಹಾಲುಮತದ ಒಳಪಂಗಡಗಳನ್ನು ನಾಲ್ಕು ಸೇರು ಭತ್ತದ ಧಾನ್ಯದಷ್ಟು ಗೋತ್ರಗಳನ್ನಾಗಿ ಮಾಡಿ ವಿಂಗಡಿಸಿ ಎಲ್ಲಾ ಪ್ರಾಣಿ ಮತ್ತು ಸಸ್ಯಗಳ ಹೆಸರುಗಳನ್ನು ಅವುಗಳಿಗಿಟ್ಟರೂ ಇನ್ನೂ ಕೆಲವು ಗೋತ್ರಗಳು ಉಳಿದುವಂತೆ. ಅವುಗಳಿಗೆ ಕ್ಷುಲ್ಲಕ ವಸ್ತುಗಳ ಹೆಸರನ್ನು ಇಟ್ಟು ಕರೆದನೆಂದು ಹೇಳಲಾಗುತ್ತದೆ. ೧೧೧ ಕುಲಗಳನ್ನು ಡಾ.ಶಿವಾನಂದ ಗುಬ್ಬಣ್ಣನವರ ತಮ್ಮ ಗ್ರಂಥದಲ್ಲಿ ಪಟ್ಟಿಮಾಡಿದ್ದಾರೆ."[೭೭] ಅವರೇ ಮುಂದುವರಿದು ಹನುಮಂತಪ್ಪ ಎಂಬುವರು ಈ ಪಟ್ಟಿಗೆ ಮತ್ತೆ ೩೩ ಉಪಪಂಗಡಗಳನ್ನು ಕೂಡಿಸಿರುವುದನ್ನು ಪ್ರಸ್ತಾಪಿಸುತ್ತಾರೆ. ಇವೆಲ್ಲವೂ ಕೂಡಿ ಒಟ್ಟು ೧೪೪ ಉಪಪಂಗಡಗಳನ್ನು ಗುರುತಿಸಲಾಗಿದೆ ಎನ್ನುತ್ತಾರೆ.

"ಕರ್ನಾಟಕದಲ್ಲಿರುವ ಕುರುಬರಲ್ಲಿ ಮೂರು ಪ್ರಮುಖ ಪಂಗಡಗಳಿರುವುದನ್ನು ಗುರ್ತಿಸಲಾಗುತ್ತದೆ. ೧. ಹಾಲು ಕುರುಬರು (ಹಾಲುಮತದವರು) ೨. ಕಂಬಳಿ ಕುರುಬರು. ೩. ಅಂಡೆ (ಹಂಡೆ) ಕುರುಬರು[೭೭] ಎಂದು ಶ್ರೀರಾಮ ಇಟ್ಟಣ್ಣವರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

೧೯೭೭ರಲ್ಲಿ ಬಾಂಬೆ ಗೆಝೆಟಿಯರ್‌ನಲ್ಲಿ ಕುರುಬ ಸಮುದಾಯವನ್ನು ಈ ರೀತಿ ವಿಭಜನೆ ಮಾಡಲಾಗಿದೆ.

There are two main divisions of kurubas, Hatti kankana or cotton wristle weavers and unnikankana or wool wristle weavers. who eat together, but donot intermarry. In

Dharwad two more divisions are found jande and uarasaliyava. The Hatti kankanas are devided into Khailari, Sanagar, Hatkar and Hande, kurubas of these first three eat together and intermarry.

ಡಾ.ವೀರೇಶ ಬಡಿಗೇರರವರ 'ಉತ್ತರ ಕರ್ನಾಟಕದ ಗೀತಮೇಳಗಳು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಪ್ರಬಂಧದಲ್ಲಿ ಕುರುಬ ಜನಾಂಗದಲ್ಲಿ ಮೂರು ಪಂಗಡಗಳಿರುವುದಾಗಿ ಕುರುಬರ ಚರಿತ್ರೆಯ ಲೇಖಕರು ಮತ್ತು ವಿದ್ವಾಂಸರು ಹೇಳುತ್ತಾರೆ. ಮೂರು ಪಂಗಡಗಳು ಹತ್ತಿಕಂಕಣ, ಉಣ್ಣೆಕಂಕಣ, ಹಂಡೆಕುರುಬರೆಂದು, ಈ ಪಂಗಡಗಳಿಂದ ಹಲವಾರು ಒಳಪಂಗಡಗಳು ಜನ್ಮ ತಾಳಿವೆ"[೭೮] ಎಂದು ಉಲ್ಲೇಖಿಸುತ್ತಾರೆ.

ಎಡ್ಗರ್ ಥರ್ಸ್ಟನ್ ಪ್ರಕಾರ "ತಮಿಳಿನ ಕುರುಂಬನ್ ಮತ್ತು ತೆಲುಗು ಕನ್ನಡ ಕುರುಬ ಒಂದೇ"[೭೯] ಎಂದು ಅಭಿಪ್ರಾಯ ಪಡುತ್ತಾರೆ.

ಜೀ.ಶಂ.ಪರಮಶಿವಯ್ಯನವರು ತಮ್ಮ ಜಾನಪದ ಬರಹಗಳಲ್ಲಿ "ಕಾಡುಕುರುಬರಲ್ಲಿ ಬೆಟ್ಟ ಕುರುಬರು ಮತ್ತು ಜೇನು ಕುರುಬರು ಎಂದು ಎರಡು ವರ್ಗಗಳಲ್ಲಿ ಗುರುತಿಸುತ್ತಾರೆ. ಈ ಎರಡು ಜನಾಂಗಗಳು ವೃತ್ತಿಯಿಂದ ಬೇರೆಯಾಗಿದ್ದರೂ ನೆಲಸಿರುವ ಭೂ ಪ್ರದೇಶ ಒಂದೇ ಆಗಿರುವುದು ವಿಶೇಷವೆನಿಸುತ್ತದೆ"[೮೦] ಎಂದು ಅಭಿಪ್ರಾಯ ಪಡುತ್ತಾರೆ.

ಡಾ. ಚಂದ್ರಶೇಖರ ಕಂಬಾರರು ತಮ್ಮ ಜಾನಪದ ವಿಶ್ವಕೋಶ ಸಂಪುಟ-೧ರಲ್ಲಿ "ಕುರುಬರಲ್ಲಿ ಎರಡು ಸೂಕ್ಷ್ಮ ವಿಭಾಗಗಳಿದ್ದು, ನೀಲಗಿರಿಯಲ್ಲಿ ವಾಸಿಸುವ ಕುರುಂಬನ್ ಉಪಭಾಷೆಯಾಡುವ ಕಾಡುಜನರು ಮತ್ತು ಬಯಲು ಸೀಮೆಯಲ್ಲಿ ವಾಸಿಸುವ ಕನ್ನಡವನ್ನು ಮಾತನಾಡುವ ನಾಗರಿಕ ಕುರುಬರು ಎಂಬ ಒಳಪಂಗಡಗಳು"[೮೧] ಇವೆಯೆಂದು ಉಲ್ಲೇಖಿಸುತ್ತಾರೆ.

'ಕುರುಬರ ಗುರು ಒಡೆಯರು' ಕೃತಿಯ ಸಂಪಾದಕರಾದ ಡಾ.ಎಫ್.ಟಿ.ಹಳ್ಳಿಕೇರಿಯವರು "ಕುರುಬ ಸಮುದಾಯದಲ್ಲಿ ಪ್ರಮುಖವಾದ ನಾಲ್ಕು ಒಳಪಂಗಡಗಳಾದ ಹತ್ತಿಕಂಕಣ, ಉಣ್ಣೆಕಂಕಣ, ಹಂಡೆ ಕುರುಬರು, ಒಡೆಯರು, ಇವುಗಳ ಜೊತೆಗೆ ಕಂಬಳಿ ಕುರುಬರು ಕನಕಯ್ಯನ ಜಾತಿಯವರು, ಗೊರವಯ್ಯಗಳು, ಗೊಂಡರು, ವಾರದ ಕುರುಬರು, ಹೆಗ್ಗಡೆಗಳು ಮುಂತಾದ ಹೆಸರಿನ ಒಳ ಪಂಗಡಗಳನ್ನು ಕಾಣುತ್ತೇವೆ. ಅವೆಲ್ಲವೂ ಮೇಲೆ ವಿವರಿಸಿದ ಹತ್ತಿಕಂಕಣ ಮತ್ತು ಉಣ್ಣೆಕಂಕಣ ಪಂಗಡಗಳಿಗೆ ಸೇರಿದವರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು"[೮೨] ಎನ್ನುತ್ತಾರೆ.

ಡಾ. ಎಂ.ಎಂ.ಕಲಬುರ್ಗಿ ಮತ್ತು ಡಾ. ವೈ.ಸಿ.ಭಾನುಮತಿಯವರು ಸಂಪಾದಿಸಿರುವ ಸಿದ್ಧಮಂಕ ಚರಿತೆಯಲ್ಲಿ "ಸರೂರು ಒಡೆಯರಲ್ಲಿರುವ 'ತಗರಪವಾಡ' ಎಂಬ ಹಸ್ತಪ್ರತಿಯ ಒಂದನೆಯ ಸುರಳಿಯಲ್ಲಿ ಉಣ್ಣೆಕಂಕಣ, ಹತ್ತಿಕಂಕಣ, ಹಂಡೆಲವರು (ಹಂಡೆಯವರು) ಒಳಪಂಗಡಗಳು ಉಲ್ಲೇಖವಿರುವುದ

ಜೊತೆಗೆ ಆವಾ(ಗು)ಕುರುಬ, ಹಂಡೇಲ(ಯ)ವರು, ಸಾದಗು(ಕು)ರುಬ, ಪಂಚಮಗು(ಕು)ರುಬ, ಕಂಬಳಿಗು(ಕು)ರುಬ, ಕುರಿ ಆಡಿನವರು"[೩೩] ಮುಂತಾದ ಒಳಪಂಗಡಗಳ ಉಲ್ಲೇಖವನ್ನು ಮಾಡಲಾಗಿದೆ.

ಕ್ರಿ.ಶ. ೧೯೯೪ರಲ್ಲಿ ಆಂಗ್ಲ ಸಂಶೋಧಕರೊಬ್ಬರು ಹಂಡೆ ವಜೀರರ ಬಗ್ಗೆ ಬರೆಯುತ್ತ ಇವರನ್ನು ಲಿಂಗಾಯತ ಕುರುಬರು ಎಂದು ಹೇಳಿದ್ದಾರೆ. ಇಲ್ಲಿ ವೀರಶೈವ ಅಥವಾ ಲಿಂಗಾಯತ ಎಂದು ನೇರವಾಗಿ ಹೇಳದೆ ಲಿಂಗಾಯತ ಕುರುಬರು ಕುರುಬರ ಒಂದು ಶಾಖೆಯೆಂದು ಉಲ್ಲೇಖಿಸಿದ್ದು ಗಮನಾರ್ಹ. ಇದನ್ನು ಪ್ರತ್ಯೇಕವಾಗಿ ಪರಿಗಣಿಸದೆ ಕುರುಬರಲ್ಲಿಯೆ ಒಂದು ಒಳಪಂಗಡವೆಂದು ನಿರ್ಧರಿಸುತ್ತಾರೆ.

ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಊರು ಕುರುಬರು ಮತ್ತು ಕಾಡು ಕುರುಬರೆಂದು ಕರೆಯಲಾಗುತ್ತದೆ. ಕಾಡು ಕುರುಬರಲ್ಲಿ ಬೆಟ್ಟ ಕುರುಬರು ಮತ್ತು ಜೇನುಕುರುಬರು ಎಂದು ವಿಭಜಿಸಲಾಗಿದೆ.

ಎಡ್ಗರ್ ಥರ್ಸ್ಟನ್‌ರವರು "ದೈಹಿಕ ಮಾನವಶಾಸ್ತ್ರದ ಆಧಾರದ ಮೇಲೆ ಕಾಡುಕುರುಬರು ಊರು ಕುರುಬರಿಗಿಂತ ಅಥವಾ ಕುರುಬರಿಗಿಂತ ಭಿನ್ನವಾದವರು"[೩೪] ಎಂದು ಅಭಿಪ್ರಾಯ ಪಡುತ್ತಾರೆ.

ಮೇಲಿನ ವಿದ್ವಾಂಸರೆಲ್ಲರ ಒಳಪಂಗಡ ವಿಭಜನೆಯನ್ನು ಅವಲೋಕಿಸಿದರೆ ನನ್ನ ಪ್ರಕಾರ "ಕರ್ನಾಟಕ ಕುರುಬರ ಒಳಪಂಗಡಗಳ ಸಂಖ್ಯೆ ಇಪ್ಪತ್ತೈದನ್ನು ದಾಟಲಾರದು" ಕೆಲವು ಬೆಡಗುಗಳನ್ನು ಒಳಪಂಗಡಗಳೆಂದು ತಪ್ಪಾಗಿ ಅರ್ಥೈಸುವ ಮೂಲಕ ಒಳಪಂಗಡಗಳ ಸ್ವರೂಪವನ್ನು ತಿಳಿಸದಿರುವ ಮತ್ತು ಹಲವು ಗೊಂದಲಗಳಿಗೆ ಎಡೆ ಮಾಡಿರುವುದು ಈವರೆಗೆ ನಡೆದಿರುವ ಅಧ್ಯಯನದಿಂದ ದೃಢಪಡುತ್ತದೆ.

ಹತ್ತಿಕಂಕಣ, ಉಣ್ಣೆಕಂಕಣ ಹಾಗೂ ಹಂಡೆ ಕುರುಬರೆಂದು ಪ್ರಧಾನ ಪಂಗಡಗಳಿವೆಯೆಂಬ ವರ್ಗೀಕರಣಕ್ಕೆ ಪ್ರಮುಖ ಆಕರಗಳಾಗಿ ಹಾಲುಮತ ಪುರಾಣಗಳು, ತಗರ ಪವಾಡ, ಸಿದ್ಧಮಂಕ ಚರಿತೆ, ಕುರುಬರ ಚರಿತ್ರೆಗಳು, ಪ್ರಾಚೀನ ಕಾಲದ ಗ್ರಂಥಭಂಡಾರ ಮತ್ತು ರಾಜ್ಯ ಪತ್ರಗಳು, ಕಾವ್ಯ, ಶಾಸನಗಳು, ಸರ್ಕಾರಿ ಆಡಳಿತದ ದಾಖಲಾತಿಗಳು, ಕೈಫಿಯತ್ತುಗಳು ಲಭ್ಯವಿದ್ದು ಇವೆಲ್ಲವೂ ಹೆಚ್ಚಾಗಿ ಮೂರು ಪ್ರಧಾನ ಪಂಗಡಗಳಿಂದ ಉಳಿದ ಉಪಪಂಗಡಗಳ ಸೃಷ್ಟಿಯಾಗಿರಬಹುದೆಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಇಷ್ಟೆಲ್ಲಾ ಒಳಪಂಗಡಗಳಿದ್ದಾಗ್ಯೂ ಕುರುಬರನ್ನು 'ಹಾಲುಮತ'ದವರೆಂದು ಕರೆಯುವುದರಲ್ಲಿ ಔಚಿತ್ಯವಿದೆಯೆನಿಸುತ್ತದೆ.

ಅಡಿಟಿಪ್ಪಣಿಗಳು

೧. ಮರ್‍ಹಾಟೀ ಸಂಸ್ಕೃತಿ ಕೆಲವು ಸಮಸ್ಯೆಗಳು: ಶಂ.ಭಾ.ಜೋಶಿ, ಪುಟ ೪೧ (ಕನ್ನಡಾನುವಾದ: ಕೀರ್ತಿನಾಥ ಕುರ್ತಕೋಟಿ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪ್ರ. ೧೯೯೦.

೨. ಶಿಕ್ಷಣ ಪ್ರದೀಪ: ಸಂ.ಪ್ರಿ.ಬಿ. ಹಿರೇಮಠ (ಬಿ.ಎಫ್. ದಂಡಿನರವರ ಅಭಿನಂದನಾ ಗ್ರಂಥ) (ಕುರುಬ ಜನಾಂಗದ ಐತಿಹಾಸಿಕ ಹಿನ್ನಲೆ ಲೇ: ಎಚ್.ಜಿ. ಲಕ್ಕಪ್ಪಗೌಡ) ಪುಟ ೧೩೪.

೩. ಲಿಂಗಾಯತ: ಸಂ. ಡಾ. ಎಂ.ಎಂ.ಕಲಬುರ್ಗಿ, ಪುಟ xxiv ಪೂಜ್ಯ ಮಹಾಂತ ಸ್ವಾಮಿಗಳು, ಚಿತ್ತರಗಿ ಮಹಾಸಂಸ್ಥಾನ, ಇಳಕಲ್, ಪ್ರ. ೨೦೦೯.

೪. ರಸ್ತಾಪುರ ಭೀಮಕವಿ ವಿರಚಿತ ಹಾಲ್ಮತೋತ್ತೇಜಕ ಪುರಾಣ: (ಸಂ) ಭಾಗೂತನಯ ನವಿಲೂ, ಪ್ರ. ೧೯೮೨.

೫. ಎ. ಕನ್ನಡ -ಇಂಗ್ಲೀಷ್ ಡಿಕ್ಶನರಿ: ಡಾ. ರೆವರೆಂಡ್ ಎಫ್. ಕಿಟೆಲ್, ಮಂಗಳೂರು ಬಾಸೆಲ್ ಮಿಶನ್, ಪ್ರ. ೧೮೯೪.

೬. ಹೆಳವರು ಮತ್ತು ಅವರ ಕಾವ್ಯಗಳು: ಡಾ. ಎಚ್.ಎಲ್.ನಾಗೇಗೌಡ, ಪುಟ xxxvii ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ಪ್ರ. ೧೯೮೨.

೭. ಬುಡಕಟ್ಟು ಕುಲಕಸುಬುಗಳು: ಡಾ. ಕೆ.ಎಂ.ಮೈತ್ರಿ, ಪುಟ ೧೫೫. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ. ೨೦೦೨.

೮. ಎಪಿಗ್ರಾಫಿಯಾ ಕರ್ನಾಟಿಕಾ: ಸಂಪುಟ-೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೭೯.

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧: ಬಳ್ಳಾರಿ ಜಿಲ್ಲೆ, ಪುಟ ೫೮೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ. ೧೯೯೮.

೧೦. ಅದೇ, ಪುಟ ೨೩೧.

೧೧. ಎಪಿಗ್ರಾಫಿಯಾ ಕರ್ನಾಟಿಕಾ ಸಂ-೫: ಪುಟ ೩೯, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಪ್ರ. ೧೯೭೯.

೧೨. ಅದೇ, ಪುಟ ೪೦೪.

೧೩. ಅದೇ, ಪುಟ ೧೨೩.

೧೪. ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೬: ಪುಟ ೧೨೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೭.

೧೫. ಎಪಿಗ್ರಾಫಿಯಾ ಕರ್ನಾಟಿಕಾ ಸಂ-೧೧: ಪುಟ ೨೬೦, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಪ್ರ. ೧೯೯೮.

೧೬. ಎಪಿಗ್ರಾಫಿಯಾ ಕರ್ನಾಟಿಕಾ ಸಂ-೬: ಪುಟ ೧೮೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೭೭.

೧೭. ಎಪಿಗ್ರಾಫಿಯಾ ಕರ್ನಾಟಿಕಾ: ಸಂ.೪: ಪುಟ ೧೦೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಪ್ರ. ೧೯೭೫.

೧೮. ಎಪಿಗ್ರಾಫಿಯಾ ಕರ್ನಾಟಿಕಾ ಸಂ-೨: ಪರಿವಿಡಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯. ಎಪಿಗ್ರಾಫಿಯಾ ಕರ್ನಾಟಿಕಾ ಸಂ-೪: ಪುಟ ೧೧೯ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೭೫.

೨೦. ಹಾಲುಮತ ಬುಡಕಟ್ಟುಗಳ ಪರಿಚಯ: ಡಾ. ಕೆ.ಎಂ.ಮೈತ್ರಿ ಪುಟ ೦೧.

ಮುತ್ತು ಬಂದಿದೆ ಕೇರಿಗೆ: ಸ್ಮರಣ ಸಂಚಿಕೆ, ಶ್ರೀ ಕನಕಗುರುಪೀಠ ಕಾಗಿನೆಲೆ ಮಹಾಸಂಸ್ಥಾನ, ಪ್ರ. ೨೦೦೩.

೨೧. ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ಸ್ ಆಫ್ ಬಾಂಬೆ: ಆರ್.ಇ. ಎಂಥೋವೆನ್, ಸಂ-೧೧, ಪುಟ ೩೧೭, ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬಾಂಬೆ, ಪ್ರ. ೧೯೨೨

೨೨. ದಿ ಒರಿಜಿನಲ್ ಇನ್‌ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ: ಗುಸ್ತಾವ್ ಒಪರ್ಟ್, ಪುಟ ೧೨೬, ಏಶಿಯನ್ ಎಜುಕೇಷನ್ ಸೊಸೈಟಿ, ನ್ಯೂಡೆಲ್ಲಿ, ೧೯೮೮

೨೩. ಮದ್ರಾಸ್ ಜನಗಣತಿ ವರದಿ: ೧೮೯೧.

೨೪. ದಿ ಕಾಯಿನ್ಸ್ ಆಫ್ ಇಂಡಿಯಾ: ಸಿ.ಜೆ. ಬ್ರೌನ್, ಪುಟ ೫೮.

೨೫. ಬ್ರಿಟಾನಿಕಾ ವಿಶ್ವಕೋಶ ಸಂ-೭: ೧೫ನೇ ಮುದ್ರಣ ಪ್ರ. ೧೯೯೭.

೨೬. ಕರ್ನಾಟಕದ ಕುರುಬರು: ಡಾ. ಶಿವಾನಂದ ಗುಬ್ಬಣ್ಣವರ ಪುಟ ೪-೫, ಅಕ್ಷಯ ಪ್ರಕಾಶನ, ಧಾರವಾಡ, ಪ್ರ. ೧೯೯೩.

೨೭. ಅದೇ, ಪುಟ ೧೫-೧೬.

೨೮. ಬಾಂಬೆ ಗೆಝೆಟಿಯರ್: ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬಾಂಬೆ, ಪುಟ ೩೧೯.

೨೯. ಕರ್ನಾಟಕ ವೀರಕ್ಷತ್ರಿಯರು: ಶಂ.ಭಾ. ಜೋಶಿ, ಪುಟ ೧೫, ಶಂಬಾ ಸಂಪುಟ-೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೬.

೩೦. ದಿ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ಸ್ ಆಫ್ ಸೆಂಟ್ರಲ್ ಪ್ರಾವಿನ್ಸಸ್ ಆಫ್ ಇಂಡಿಯಾ: ಆರ್.ವಿ.ರಸೇಲ್, ಪುಟ ೪೨-೪೩ ಕಾಸ್ಮೋ ಪ್ರಕಾಶನ, ಹೊಸದೆಹಲಿ ಪ್ರ. ೧೯೭೫.

೩೧. ಕನ್ನಡ ವಿಷಯ ವಿಶ್ವಕೋಶ: (ಸಂ) ಹಾಮಾನಾಯಕ್ ಪುಟ ೫೨೮-೯ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು, ಸಂ-೬, ಪ್ರ. ೧೯೭೩.

೩೨. ಮಹಾರಾಜ ಸಂಗ್ರಾಮ ಶಾಹಕೆ, ಭಾವನಗಡ: ವಿಠಲಸಿಂಹ ದುರ್ವೆ, ಪುಟ ೭, ಗೋಟೂಲ್ ಪ್ರಕಾಶನ, ನಾಗಪುರ, ಪ್ರ. ೧೯೯೦.

೩೩. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ: ಶಂಭಾ ಜೋಶಿ, ಪುಟ ೩೧. ದ್ವಿತೀಯ ಭಾಗ ಸಮಾಜ ಪುಸ್ತಕಾಲಯ, ಧಾರವಾಡ, ಪ್ರ. ೧೯೬೬.

೩೪. ದಿ ಶೆಫರ್ಡ್ಸ್ ಆಫ್ ಇಂಡಿಯಾ: ಡಾ. ಎಸ್.ಎಸ್.ಶಶಿ, ಪುಟ ೬೧, ಸಂದೀಪ್ ಪ್ರಕಾಶನ, ದೆಹಲಿ, ಪ್ರ. ೧೯೭೮.

೩೫. ಭೂಗೋಳಶಾಸ್ತ್ರ (ದ್ವಿತಿಯ ಪಿಯುಸಿ) ರಾ ದಿನೇಶರಾವ್, ಪುಟ ೧೭೫. ವಿಶ್ವವಿದ್ಯಾ ಪ್ರಕಾಶನ, ಸಂಸ್ಥೆ, ಬೆಂಗಳೂರು, ಪ್ರ. ೧೯೯೬.

೩೬. ಹಂಡೆ ಕುರುಬರುಃ ಒಂದು ಅಧ್ಯಯನಃ (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಪುಟ ೧೩ ಡಾ. ವೈ.ಕೆ. ಗುಂಡಕರ್ಜಗಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

೩೭. ಟ್ರೈಬ್ಸ್ ಅಂಡ್ ಕಾಸ್ಟ್ಸ ಆಫ್ ಬಾಂಬೆಃ ಆರ್.ಇ.ಎಂಥೋವೆನ್, ಸಂ ೨, ಪುಟ ೩೧೯

೩೮. ಬಿಜಾಪುರ ಗೆಝೆಟಿಯರ್ಃ (ಸಂ) ಜೇಮ್ಸ್ ಎಂ. ಕ್ಯಾಂಪ್‌ಬೆಲ್, ಪುಟ ೧೨೧, ೧೨೨, ಪ್ರ. ೧೮೮೪.

೩೯. ತಗರ ಪವಾಡ ಸಂಧಿ-೨, ೩ಃ (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಡಾ. ಎಫ್.ಟಿ. ಹಳ್ಳಿಕೇರಿ ಪುಟ ೨೧, ೪೬, ವಿದ್ಯಾನಿಧಿ ಪ್ರಕಾಶನ. ಗದಗ, ಪ್ರ. ೨೦೦೪.

೪೦. ದೇಸಿ ಸಂಸ್ಕೃತಿ ಸಂಕಥನಃ ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ. ೨೦೦೮.

೪೧. ತಗರ ಪವಾಡ ಸಂಧಿ-೨, ೩ಃ (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ. ಹಳ್ಳಿಕೇರಿ ಪುಟ ೨೧, ೪೨, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೪೨. ಕುರುಬ ದರ್ಪಣಃ ಚಂದ್ರಕಾಂತ ಬಿಜ್ಜರಗಿ, ಪುಟ ೩೫, ಶೈಲಚಂದ್ರ ಪ್ರಕಾಶನ, ವಿಜಾಪುರ, ಪ್ರ. ೨೦೦೪.

೪೩. ಹಾಲಕೆನೆ : ಸಂ. ಶ್ರೀರಾಮ ಇಟ್ಟಣ್ಣವರ, ಪುಟ ೩, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ಬಿಜಾಪುರ. ಪ್ರ. ೨೦೦೨.

೪೪. ಉತ್ತರ ಕರ್ನಾಟಕದ ಗೀತಮೇಳಗಳುಃ ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ವೀರೇಶ ಬಡಿಗೇರ, ಪುಟ ೧೩೨, ವಿಮೋಚನಾ ಪ್ರಕಾಶನ, ಅಥಣಿ, ಪ್ರ. ೧೯೯೯.

೪೫. ಕುರುಬರ ಚರಿತ್ರೆ, ಮೂ.ವಿ.ಆರ್. ಹನುಮಂತಯ್ಯ, (ಸಂ) ಪ್ರೊ. ಸುಧಾಕರ, ಪುಟ ೧೭, ಪ್ರತಿಭಾ ಪ್ರಕಾಶನ, ಮೈಸೂರು, ಪ್ರ. ೧೯೯೬.

೪೬. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆಃ ಶಂಭಾ ಜೋಶಿ, ಪುಟ ೫೧೭, (ದ್ವಿತೀಯ ಭಾಗ) ಸಮಾಜ ಪುಸ್ತಕಾಲಯ, ಧಾರವಾಡ, ಪ್ರ. ೧೯೬೬.

೪೭. ಹಾಲಕೆನೆಃ (ಸಂ) ಶ್ರೀರಾಮ ಇಟ್ಟಣ್ಣವರ, ಲೇ. ಕುರುಬ ಜನಾಂಗದ ಒಳಪಂಗಡಗಳು, ಪುಟ ೧೬೮, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ಬಿಜಾಪುರ, ಪ್ರ. ೨೦೦೨.

೪೮. ಮಾರ್ಗ-೪ಃ (ಸಂ) ಡಾ. ಎಂ.ಎಂ.ಕಲಬುರ್ಗಿ ಪುಟ ೩೭೯, ಸಪ್ನ ಬುಕ್ ಹೌಸ್, ಬೆಂಗಳೂರು, ಪ್ರ. ೨೦೦೪.

೪೯. ಕ್ಯಾಸ್ಟ್ಸ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾಃ ಎಡ್ಗರ್ ಥರ್ಸ್ಟನ್ ಸಂಪುಟ-೨, ಏಶಿಯನ್ ಎಜುಕೇಷನಲ್ ಸರ್ವಿಸಸ್, ನ್ಯೂಡೆಲ್ಲಿ, ಪ್ರ. ೨೦೦೧.

೫೦. ಕನ್ನಡ-ಇಂಗ್ಲೀಷ್ ಶಬ್ದಕೋಶಃ ಡಾ. ಎಫ್.ಕಿಟೆಲ್, ಪರಿಷ್ಕರಣೆಃ ಡಾ. ಎಂ.ಮರಿಯಪ್ಪ ಭಟ್ಟ, ಪುಟ ೪೫೯.

೫೧. ಮೈಸೂರು ಗೆಝೆಟಿಯರ್ ಸಂ-೧ಃ ಸಿ. ಹಯವದನರಾವ್, ಪ್ರ. ೧೯೨೩.

೫೨. ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ: ಡಾ. ಎಂ.ಎಚ್.ನಾಗರಾಜು, ಪುಟ ೮೪, ಅನಿಕೇತನ ಪ್ರಕಾಶನ, ತುಮಕೂರು, ಪ್ರ. ೨೦೦೩.

೫೩. ಹಾಲತೊರೆ: ನಗರ ಕುರುಬರ ಸಂಘ, ದಾವಣಗೆರೆ, ಪುಟ ೧೫೨ (ಪ್ರಬಂಧ: ಕುರುಬ ಮೂಲದ ಕುಂಚಿಟಿಗರ ಸಾಂಸ್ಕೃತಿಕ ವೀರ, ಡಾ. ಮೀರಾಸಾಬಿಹಳ್ಳಿ ಶಿವಣ್ಣ) ಪ್ರ. ೨೦೦೩.

೫೪. ತಗರ ಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ (ಸಂಧೀ-೨, ಪದ್ಯ-೫೮) ಪುಟ ೨೧, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೫೫. ಭಾರತ ದೇಶದ ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ, ಪುಟ ೧೧೧, ಮಿಥಿಕ್ ಸೊಸೈಟಿ, ಬೆಂಗಳೂರು, ಪ್ರ. ೧೯೨೬.

೫೬. ಕುರುಬರ ಹೆಜ್ಜೆಗಳು: ಚಂದ್ರಕಾಂತ ಬಿಜ್ಜರಗಿ, ಪುಟ ೨೩೫, ಶೈಲಚಂದ್ರ ಪ್ರಕಾಶನ, ವಿಜಾಪುರ, ಪ್ರ. ೧೦೦೬.

೫೭. ಮುಂಬೈ ಕರ್ನಾಟಕ ಗೆಝೆಟಿಯರ್, ಅನು: ವೆಂಕಟರಂಗೋಕಟ್ಟಿ, ಪುಟ ೧೨೩, ಪ್ರ. ೧೯೮೪.

೫೮. ಶಂಭಾ ಕೃತಿ ಸಂಪುಟ-೧: (ಸಂ) ಮಲ್ಲೇಪುರಂ ಜಿ.ವೆಂಕಟೇಶ, ಪುಟ ೧೫೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೧೯೯೯.

೫೯. ಕಸ್ತೂರಿ ಕೋಶ: ಪಂಡಿತ ಕವಲಿ, ರಾಮಾಶ್ರಯ ಬುಕ್ ಡಿಪೋ.

೬೦. ಗೊಲ್ಲ ಜನಾಂಗ ಕೆಲವು ಟಿಪ್ಪಣಿಗಳು: ಡಾ. ಎಂ.ಬಿ.ನೇಗಿನಹಾಳ, ಸತ್ಯ ಶುದ್ಧಕಾಯಕ, ಮುರುಘಾಮಠ, ಚಿತ್ರದುರ್ಗ, ಪ್ರ. ೧೯೯೧.

೬೧. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು: ಡಾ. ತೀ.ನಂ.ಶಂಕರನಾರಾಯಣ, ಪುಟ ೨೦, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨.

೬೨. ಅದೇ, ಪುಟ ೨೦.

೬೩. ಅದೇ, ಪುಟ ೨೦.

೬೪. ಹಾಲುಮತ ದರ್ಶನ: ಶಂಭಾ ಜೋಶಿ, ಪುಟ ೨೩.

೬೫. ಭಾರತದ ಕುರುಬರು : ಡಾ. ಶ್ಯಾಂಸಿಂಗ್ ಶಶಿ, ಪುಟ ೫೩, ಸಂದೀಪ ಪ್ರಕಾಶನ, ದೆಹಲಿ, ಪ್ರ. ೧೯೭೮.

೬೬. ಅದೇ, ಪುಟ ೧೧೩.

೬೭. ಅಹಲ್ಯಾ ಸಂದೇಶ, ಮರಾಠಿ ಪತ್ರಿಕೆ: ಗಣಪತ್ ರಾವ್ ಕುಳೇಕಾರ.

೬೮. ಜನಪದ ಹಾಲುಮತ ಕಾವ್ಯ: ಡಾ. ವೀರಣ್ಣ ದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೨೦೦೦.

೬೯. ವಿಶ್ವಬಂಧು ಮರುಳಸಿದ್ಧ ಕಾವ್ಯ: ಮಹದೇವ ಬಣಕಾರ, ಪ್ರಸ್ತಾವನೆ, ಪುಟ ೧೪. ತರಳಬಾಳು ಪ್ರಕಾಶನ, ಸಿರಿಗೆರೆ, ಪ್ರ. ೧೯೮೯.

೭೦. ಹಾಲುಮತ ವ್ಯಾಸಂಗ -೨: (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೧೭೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ. ೨೦೧೧.

೭೧. ಎ ಕನ್ನಡ ಇಂಗ್ಲಿಷ್ ಡಿಕ್ಶನರಿ: ರೆವರೆಂಡ್ ಎಫ್. ಕಿಟೆಲ್, ಮಂಗಳೂರು ಬಾಸೆಲ್ ಮಿಶನ್ ಬುಕ್, ಪ್ರ. ೧೮೯೪.

೭೨. ಭಾರತ ದೇಶದ ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ ಪುಟ ೧೧೧, ಪ್ರ. ೧೯೨೯.

೭೩. ಹಾಲುಮತ ವ್ಯಾಸಂಗ -೨, (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೧೬-೧೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ. ೨೦೧೦.

೭೪. ಭಾರತ ದೇಶದ ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ, ಪುಟ ೮೧, ಪ್ರ. ೧೯೨೬.

೭೫. ಕುರುಬರ ಹೆಜ್ಜೆಗಳು: ಚಂದ್ರಕಾಂತ ಬಿಜ್ಜರಗಿ, ಪುಟ ೫೮, ಶೈಲಚಂದ್ರ ಪ್ರಕಾಶನ, ಬಿಜಾಪುರ, ಪ್ರ. ೨೦೦೬.

೭೬. ಕರ್ನಾಟಕದ ಕುರುಬರು: ಡಾ. ಶಿವಾನಂದ ಗುಬ್ಬಣ್ಣವರ, ಪುಟ ೧೫, ೧೬, ಅಕ್ಷಯ ಪ್ರಕಾಶನ, ಧಾರವಾಡ, ಪ್ರ. ೧೯೯೩.

೭೭. ಹಾಲಕೆನೆ : ಶ್ರೀರಾಮ ಇಟ್ಟಣ್ಣವರ, ಪುಟ ೧೯೫, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ, ಪ್ರ. ೨೦೦೨.

೭೮. ಉತ್ತರ ಕರ್ನಾಟಕದ ಗೀತಮೇಳಗಳು: ಸಾಂಸ್ಕೃತಿಕ ಅಧ್ಯಯನ, ಡಾ. ವೀರೇಶ ಬಡಿಗೇರ, ಪುಟ ೧೭೭, ವಿಮೋಚನಾ ಪ್ರಕಾಶನ, ಅಥಣಿ, ಪ್ರ. ೧೯೯೯.

೭೯. ಕ್ಯಾಸ್ಟ್ಸ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ -ಎಡ್ಗರ್ ಥರ್ಸ್ಟನ್, ಪುಟ ೧೩೧. ಏಶಿಯನ್ ಎಜುಕೇಷನ್ ಸೊಸೈಟಿ, ನ್ಯೂಡೆಲ್ಲಿ ಪ್ರ. ೧೯೮೮.

೮೦. ಜೀ.ಶಂ.ಪ.ರವರ ಜಾನಪದ ಬರಹಗಳು, (ಸಂ) ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಪ್ರ. ೨೦೦೦.

೮೧. ಜಾನಪದ ವಿಶ್ವಕೋಶ ಸಂ-೧: ಡಾ. ಚಂದ್ರಶೇಖರ ಕಂಬಾರ, ಪುಟ, ೪೪೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರ. ೧೯೮೫.

೮೨. ಕುರುಬರ ಗುರು ಒಡೆಯರು: ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೨೮, ವಿಕಾಸ ಪ್ರಕಾಶನ, ಹೊಸಪೇಟೆ, ಪ್ರ. ೨೦೦೩.

೮೩. ಸಿದ್ಧಮಂಕ ಚರಿತೆ: ಡಾ. ಎಂ.ಎಂ.ಕಲಬುರ್ಗಿ, ಡಾ. ವೈಸಿ.ಭಾನುಮತಿ, ಪುಟ ೧೧೧, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರಿ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ಪ್ರ. ೨೦೦೪.

೮೪. ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ: ಎಡ್ಗರ್ ಥರ್ಸ್ಟನ್ ಸಂ-೨, ಏಶಿಯನ್ ಎಜುಕೇಷನಲ್ ಸರ್ವೀಸಸ್, ನ್ಯೂಡೆಲ್ಲಿ, ಪ್ರ. ೨೦೦೧.

ಅಧ್ಯಾಯ ೩

ಒಳಪಂಗಡಗಳು: ಪೌರಾಣಿಕ-ಚಾರಿತ್ರಿಕ ಹಿನ್ನೆಲೆ

ಅ. ಪುರಾಣ: ಅರ್ಥ-ಸ್ವರೂಪ

ಆ. ಚಾರಿತ್ರಿಕತೆ: ಅರ್ಥ-ಸ್ವರೂಪ

ಅಧ್ಯಾಯ ೩

ಒಳಪಂಗಡಗಳು: ಪೌರಾಣಿಕ-ಚಾರಿತ್ರಿಕ ಹಿನ್ನೆಲೆ

ಯಾವುದೇ ಸಮುದಾಯದ ಹಿನ್ನೆಲೆ ಅಥವಾ ಮೂಲವನ್ನು ಹೆಚ್ಚಾಗಿ ಪುರಾಣಗಳ ಆಧಾರದಿಂದ ಹೇಳಲಾಗುತ್ತದೆ. ಋಷಿ ಮತ್ತು ನದಿ ಮೂಲವನ್ನು ನೋಡಬಾರದೆಂಬ ಲೋಕ ರೂಢಿಯಾದ ಮಾತಿದೆ. ಸಂಸ್ಕೃತಿ ಸಂಶೋಧಕರಾದ ಶಂಬಾ ಜೋಶಿಯವರು "ನದಿಯ ಮೂಲವೆಂಬಲ್ಲಿ ಜನಾಂಗದ ಮೂಲವೆಂದು ಸ್ವಲ್ಪ ಬದಲಾಯಿಸಿಕೊಂಡರಾಯಿತು. ಈ ಲೋಕೋಕ್ತಿಯಲ್ಲಿ ನಮ್ಮ ಪೂರ್ವಜರ ಅನುಭವವು ಬಹಳ ಚೆನ್ನಾಗಿ ಸಂಗ್ರಹಿಸಿಟ್ಟಿದೆ. ನದಿಯ ಪ್ರವಾಹವು ದೊಡ್ಡದಾಗಿರುವ ಸ್ಥಳದಲ್ಲಿರುವ ಸೌಂದರ್ಯವು ಉಗಮ ಸ್ಥಾನದಲ್ಲಿರುವುದಿಲ್ಲ"[1] ಎಂದಿದ್ದಾರೆ. ಆದ್ದರಿಂದ ಇದಕ್ಕೆ ಕುರುಬ ಸಮುದಾಯವೂ ಹೊರತಾಗಿಲ್ಲ. ಕುರುಬ ಸಮುದಾಯದ ಮೂಲವನ್ನು ತಿಳಿಯಲು ಹಾಲುಮತ ಪುರಾಣಗಳು, ಹಾಲುಮತ ಚರಿತ್ರೆಗಳು, ತಗರ ಪವಾಡ, ಸಿದ್ಧಮಂಕ ಚರಿತೆ, ಹಾಲ್ಮತೋತ್ತೇಜಕ ಪುರಾಣಗಳು ಇತ್ಯಾದಿ ಗ್ರಂಥಗಳು ಪ್ರಮುಖವಾಗಿವೆ.

ಕುರುಬ ಸಮುದಾಯವನ್ನು ಕುರಿತು ಭೀಮಕವಿ(ರಸ್ತಾಪುರ)ಯು ಬರೆದಿರುವ 'ಹಾಲುಮತೋತ್ತೇಜಕ ಪುರಾಣ' ಹೆಚ್ಚಿನ ಬೆಳಕು ಚೆಲ್ಲುತ್ತದೆ. ಭೀಮಕವಿಯು ಕುರುಬ ಸಮುದಾಯದ ಉಗಮ ಕುರಿತು ಹೇಳಲು ಸಂಸ್ಕೃತದಲ್ಲಿ ಬರೆಯಲಾದ ಆಗ್ನೇಯ ಪುರಾಣದ ಮೂಲಾಧಾರ ಕೊಡುತ್ತಾನೆ. ಇದರನ್ವಯ ಒಂದಾನೊಂದು ಕಾಲದಲ್ಲಿ ಕೌರಭ ಎಂಬ ಋಷಿಯು ಉಗ್ರ ತಪಸ್ಸು ಮಾಡಿ ಗಳಿಸಿದ ಶಕ್ತಿಯಿಂದಾಗಿ ಕುರುಬ ಸಮಾಜವು ಹುಟ್ಟಿತೆಂದು ಹೇಳಲಾಗಿದೆ.

ಪುರಾಣಗಳು ಮಾನವನ ಬದುಕಿನ ಸಂಕೀರ್ಣ ಸ್ಥಿತಿಗಳನ್ನು ಹೇಳುತ್ತದೆ. ಅವು ಮನುಷ್ಯನ ಒಟ್ಟು ವರ್ತನೆ, ಶೈಲಿ, ಮನಃಸ್ವಭಾವಗಳನ್ನು ನಮ್ಮ ಮುಂದೆ ತೆರೆದಿಡುವುದು ಮಾತ್ರವಲ್ಲ, ಹೊಸ ಹೊಸ ನೆಲೆಗಳನ್ನು ತೋರಿಸುತ್ತವೆ. ಭೂತ-ಭವಿಷ್ಯತ್ ವರ್ತಮಾನಗಳನ್ನು ಏಕಗ್ರಾಹಿಯಾಗಿ ಹಿಡಿಯುವ ಸಾಹಸವನ್ನು ಪುರಾಣಗಳು ಮಾಡುತ್ತವೆ. ಅಲ್ಲದೆ ಮನುಷ್ಯ ಸಂಸ್ಕೃತಿಗಳ ನೆಲೆಯ ಕಡೆಗೆ, ಗಮನಿಸುವ ಹಾದಿಗಳ ಬಗೆಗೆ, ಅವು ಮೊದಲಿಗೆ ನಮಗೆ ಕುತೂಹಲವನ್ನು ಉಂಟುಮಾಡಿವೆ. ನಾವು ಬದುಕಿರುವ ಲೋಕವನ್ನು ಗ್ರಹಿಸುತ್ತಲೇ ಬದುಕಿನ ಅನಂತ್ಯ ಸ್ಥಿತಿಯ ನೆಲೆಯ ಕಡೆಗೂ ನಮ್ಮನ್ನು ಕರೆದೊಯ್ಯುತ್ತವೆ. ವ್ಯಕ್ತಿಯ ಚಹರೆಯನ್ನು ಪುರಾಣಗಳು ಹುಡುಕುವಂತೆ ಸಮುದಾಯದ ಚಹರೆಗಳನ್ನು ಕಂಡುಕೊಳ್ಳುತ್ತವೆ. ವ್ಯಕ್ತಿ

ಮತ್ತು ಸಮುದಾಯಗಳ ಮುಖಾಂತರ ಒಟ್ಟು ಮನುಷ್ಯ ಸಂಸ್ಕೃತಿಯ ಚಿಂತನೆಗಳ ಕಡೆಗೂ ಅವು ಹಾಯುತ್ತವೆ. ಅಲ್ಲದೆ ಇವುಗಳ ಮೂಲಕ ವಿವಿಧ ಸ್ಥಳಗಳ ಸಂಸ್ಕೃತಿಯ ಸ್ವರೂಪ ಮತ್ತು ಭಿನ್ನತೆಯನ್ನು ಅರ್ಥಮಾಡಿಕೊಳ್ಳಬಹುದು. ಪ್ರತಿಯೊಂದು ಸಮುದಾಯವು ಅದರದೇ ಆದ ಲೋಕದೃಷ್ಟಿಯನ್ನು ಪುರಾಣಗಳ ಮೂಲಕ ಅಭಿವ್ಯಕ್ತಿಸಿವೆ.

ಕರ್ನಾಟಕ ಸಂಸ್ಕೃತಿಯಲ್ಲಿ ಹಾಲುಮತ ಸಮುದಾಯದ ಚರಿತ್ರೆಯನ್ನು ಗುರುತಿಸುವಲ್ಲಿ ಪುರಾಣಗಳ ಪಾತ್ರವು ಅಮೋಘವಾದುದು. ಈ ಸಮುದಾಯವು ವಿಶಿಷ್ಟ ಆಚರಣೆ, ನಂಬಿಕೆ ಹಾಗೂ ಸಂಪ್ರದಾಯಗಳಿಂದ ಪ್ರಾಚೀನ ಕನ್ನಡಿಗರ ಸಾಮೂಹಿಕ ಪ್ರಜ್ಞೆಯ ಪ್ರತಿನಿಧಿ ಎನ್ನುವಂತೆ ಬೆಳೆದುಬಂದಿದೆ. ಮೂಲತಃ ಪಶುಪಾಲನಾ ಸಂಸ್ಕೃತಿಯಿಂದ ತಮ್ಮ ಬದುಕನ್ನು ರೂಪಿಸಿಕೊಂಡ ಹಾಲುಮತಸ್ಥರು ಪ್ರಾಚೀನ ಭಾರತದ ಆದಿವಾಸಿಗಳಂತೆ ಅತ್ಯಂತ ಪ್ರಾಚೀನ ಇತಿಹಾಸವನ್ನು ಉಳ್ಳವರಾಗಿದ್ದಾರೆ.

ಚರಿತ್ರೆಯಲ್ಲಿ ಯಾವುದೋ ಕಾರಣಕ್ಕೆ ಸಮುದಾಯದ ಬದುಕಿನಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರಗಳು ನಡೆದಿರುತ್ತವೆ. ಅದನ್ನು ಹಾಗೆಯೇ ಸಮುದಾಯಗಳು ಉಳಿಸಿಕೊಂಡು ಬರಬಹುದು. ಇಲ್ಲವೆ ಪರಿವರ್ತನೆ ಗೊಂಡಿರಲೂ ಸಾಧ್ಯವಿದೆ. ಪ್ರಾರಂಭದಲ್ಲಿ ಅಲೆಮಾರಿಯಾಗಿದ್ದ ಕುರುಬ ಸಮುದಾಯವು ಒಂದು ಕಡೆ ನೆಲೆ ನಿಂತು ಸ್ಥಿರ ಜೀವನವನ್ನು ರೂಪಿಸಿಕೊಂಡ ನಂತರ ನಿರ್ದಿಷ್ಟ ಜೀವನ ಕ್ರಮವು ಸಂರಚಿತವಾಯಿತು.

ಭಾರತೀಯ ಸಮಾಜದ ಜನಜೀವನದಲ್ಲಿ ಪುರಾಣಕಲ್ಪನೆಯು ಪ್ರಾಚೀನಕಾಲದಿಂದಲೂ ಬೆಳೆದು ಬಂದಿದೆ. ವೇದೋಪನಿಷತ್ತುಗಳಂತೆ ಪುರಾಣಗಳೂ ಪೂಜ್ಯನೀಯವಾಗಿವೆ. ಮಾನವನಿಗೆ ಭಾಷೆಯು ಮನಸ್ಸಿನ ಭಾವನೆಯನ್ನು ಅಭಿವ್ಯಕ್ತ ಪಡಿಸಲು ಸಾಧನವಾಗಿದ್ದರೆ, ಪುರಾಣಗಳು ಮನಸ್ಸಿನ ಜಡತ್ವವನ್ನು ದೂರವಾಗಿಸುವ, ಶರೀರಕ್ಕೆ ಚೈತನ್ಯ ತುಂಬುವ ಶಕ್ತಿಯಾಗಿದ್ದವು. ಅಲ್ಲದೆ ವಾಸ್ತವ ಮತ್ತು ಅವಾಸ್ತವದ ಮೊತ್ತಗಳ ಸಂಗಮವಾಗಿದ್ದರೂ ಪ್ರಸ್ತುತ ಜೀವನಕ್ಕೆ ಆಸರೆಯನ್ನು ಒದಗಿಸುವ ನವಚೇತನಗಳಾಗಿವೆ.

ಇತಿಹಾಸ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಪುರಾಣಕ್ಕೆ ಮೂಲವಾದುದು. ಅಂದರೆ ಐತಿಹ್ಯಗಳು ಮಾನವನ ಅನುಭವಗಳ ಘಟನೆಯ ವಾಸ್ತವತೆಯನ್ನು ಹಿಡಿದಿರುವ ನಂಬಿಕೆಯಾಗಿದೆ. ಇಂತಹ ನಂಬಿಕೆಗಳ ಅಗಾಧವಾದ ಸಂಗ್ರಹವೇ ಪುರಾಣವೆನ್ನಬಹುದು. ಅದು ಮಾನವನ ವಿಶಿಷ್ಟ ಲಕ್ಷಣಗಳಲ್ಲಿ ಒಂದು ಮಾತ್ರವಲ್ಲದೆ ಅದೇ ಅವನ ಜೀವನದ ಚಾಲಕ ಶಕ್ತಿಯಾಗಿತ್ತು. ಆಲೋಚನೆ, ವ್ಯವಹಾರ, ಸಾಹಸ, ಸಾಧನೆಗಳ ಕಥನ ಅಭಿವ್ಯಕ್ತಿಯ ಮಾಧ್ಯಮವೂ ಹೌದು, ಆದ್ದರಿಂದ ಜನರು ಐತಿಹ್ಯಗಳನ್ನು ಬೆಳೆಸದೆ ಪುರಾಣೀಕರಣದಿಂದ ಜೀವನದ ಸಾರ್ಥಕತೆಯನ್ನು ತೋರಿಸಿ ಕೊಟ್ಟಿದ್ದಾರೆ. ಮುಂದೆ ಪುರಾಣವು ವಿಶಾಲವಾದ ಅರ್ಥವನ್ನು ಹೊಂದಿ ವಿವಿಧ ದೃಷ್ಟಿಕೋನದಿಂದ ಜನತೆಯಲ್ಲಿ ಪ್ರಯೋಗಕ್ಕೆ ಒಳಪಡುತ್ತಾ ಬರುತ್ತಿದೆ. ಮತ್ತು ಪ್ರಕೃತಿಯ ವಸ್ತು ಕ್ರಿಯೆಗಳೇ ಪುರಾಣಗಳಿಗೆ ಪ್ರೇರಕವೆನ್ನಬಹುದು.

ಅ. ಪುರಾಣ: ಅರ್ಥ-ಸ್ವರೂಪ

ಭಾರತೀಯ ಸಂಸ್ಕೃತಿಯಲ್ಲಿ ವೇದ ವಾಙ್ಮಯವು ಸೂರ್ಯಮಂಡಲವೆನ್ನಿಸಿದರೆ, ಪುರಾಣಗಳು ಗ್ರಹನಕ್ಷತ್ರಗಳೆನಿಸಿವೆ. ನಾಲ್ಕು ವೇದಗಳ ಬಳಿಕ ಬರುವ ಪುರಾಣ ಸಮುದಾಯವೇ ಪಂಚಮವೇದ. ಪುರಾಣಗಳು ಜನತಾ ವೇದಗಳಾಗಿದ್ದು ಪ್ರಾಚೀನ ಪರಂಪರೆಗಳ ಕರಂಡಕ ಮತ್ತು ಪವಿತ್ರ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹೆಗ್ಗನ್ನಡಿ ಎಂದರೆ ಪುರಾಣಗಳ ಸಮೂಹವೇ. ಪುರಾಣ ಸಂಹಿತೆಗಳಲ್ಲಿ ಹಲವು ವಿಶ್ವಕೋಶಗಳೇ ಅಡಗಿವೆ. ಅವುಗಳಲ್ಲಿ ಸನಾತನ ಮತಧರ್ಮದ ತತ್ವಗಳಿವೆ. ತತ್ವಜ್ಞಾನದ ವಿವಿಧ ವಿವರಣೆಗಳಿವೆ. ಐತಿಹಾಸಿಕ ಸಾಮಗ್ರಿಗಳಿವೆ. ವೈಯಕ್ತಿಕ ಜೀವನದ ಆಚಾರ ನಿಯಮಗಳಿವೆ. ಸಾಮಾಜಿಕ ಮತ್ತು ರಾಜಕೀಯ ನೀತಿಗಳನ್ನೂ ಕಾಣಬಹುದು. ಹಾಗಾದರೆ ಪುರಾಣವೆಂದರೇನು? ಅದರ ಚೌಕಟ್ಟು ಎಂತಹುದು? ಅದರ ಸ್ವರೂಪವನ್ನು ನಿರ್ಧರಿಸುವುದು ಸಾಧ್ಯವೇ? ಸಾಧುವೇ ಎಂಬುದನ್ನು ಅವಲೋಕಿಸೋಣ.

ಪುರಾಣವೆಂಬುದು 'ಪುರಾತನ' ಪದದ ಹಳೆಯ ರೂಪ, ಇದಕ್ಕೆ ಹಳೆಯ, ಪ್ರಾಚೀನ ಎಂಬರ್ಥಗಳೂ ಉಂಟು, ಋಗ್ವೇದ ಕಾಲದಲ್ಲಿ 'ಪಳಗತೆಗಳು' 'ಪ್ರಾಚೀನ ಗಾಥಾ' ಎಂದು ಕರೆಯುತ್ತಿದ್ದರು. ಮತ್ಸ್ಯ ಪುರಾಣದಲ್ಲಿ ಹಿಂದಿನ ಕಲ್ಪಗಳಲ್ಲಿ ನಡೆದ ಸಂಗತಿಗಳನ್ನು ತಿಳಿಸುವುದರಿಂದ ಪುರಾಣವೆಂದಾಯಿತು. ವಾಯು ಪುರಾಣದಲ್ಲಿ ಅನಾದಿ ಕಾಲದಿಂದಲೂ ನಡೆದು ಬಂದಿರುವುದರಿಂದ ಅದಕ್ಕೆ ಪುರಾಣವೆಂಬ ಹೆಸರು ಪ್ರಾಪ್ತವಾಯಿತು.

ಕಾಳಿದಾಸನು "ಪುರಾಣ ಮಿತ್ಯೇವ ನ ಸಾಧು ಸರ್ವಂ ನ ಚಾಪಿ ನಮ ಮಿತ್ಯ ವಿದ್ಯಂ" ಎನ್ನುವಲ್ಲಿ ಸನಾತನ ಹಾಗೂ ವಿನೂತನವಾದುದು ಎಂದು ಅರ್ಥೈಸುತ್ತಾನೆ. ಪಾಣಿನಿಯು 'ಪುರಾಭವಂ' ಎಂದು ಹೇಳುವರು. ಪುರಾಣನಾಮ ಚೂಡಾಮಣಿಯಲ್ಲಿ 'ಪುರಾನೀಯತೆ ಇತಿ ಪುರಾಣಂ"[3] ಎಂದು ಹೇಳಿದ್ದಾರೆ.

ಪುರಾಣದ ಬಗ್ಗೆ ನಮ್ಮ ದೇಶದಲ್ಲಿ ಮಾತ್ರವಲ್ಲದೆ ಪಾಶ್ಚಿಮಾತ್ಯರಲ್ಲೂ ಅಧ್ಯಯನ ವ್ಯಾಖ್ಯಾನಗಳನ್ನು ತಮಗೆ ಅನುಗುಣವಾಗಿ ಅರ್ಥೈಸುತ್ತಾರೆ. ಗ್ರೀಕ್ ಮೈಥಾಲಜಿ ಎಂದರೆ ಗ್ರೀಕ್ ರಿಲಿಜನ್, ರೋಮನ್ ಮೈಥಾಲಜಿ ಎಂದರೆ ರೋಮನ್ ರಿಲಿಜನ್ ಎಂಬರ್ಥವನ್ನು ನೀಡಿದರು. ಇಂಗ್ಲೀಷಿನಲ್ಲಿ ಪುರಾಣಕ್ಕೆ ಸಂವಾದಿ 'MYTH' (ಮಿಥ್) ಎಂದು ಬಳಕೆಯಾಯಿತು. ದಾನವ ಮತ್ತು ಮಾನವ ರೂಪದ ದೇವತೆಗಳ ನಡುವೆ ಏರ್ಪಡುವ ಹೋರಾಟವನ್ನು ವಿವರಣಾತ್ಮಕವಾಗಿ ತಿಳಿಸುವುದು ಪುರಾಣವಾಗಿದೆ. ಅಂದರೆ ಮನುಷ್ಯನ ಒಳಿತು ಕೆಡುಕುಗಳ ಸಮಷ್ಟಿ ಸ್ವರೂಪವನ್ನು ತಿಳಿಸುವುದೇ ಆಗಿದೆ, ಈ ಹಿನ್ನೆಲೆಯಲ್ಲಿ ರಾಮಾಯಣ, ಮಹಾಭಾರತಗಳು ಪುರಾಣ ಸ್ಥಾನಕ್ಕೇರಿದವು.

ಸಂಸ್ಕೃತ ವಿದ್ವಾಂಸರಾದ ರಾಘವಾಚಾರ್ಯರು ಪುರಾಣವನ್ನು 'ಪುರಾ+ನವ' ಎಂದು ಬಿಡಿಸಿ ಪ್ರಾಚೀನವಾದರೂ ಸದಾನೂತನವಾದುದು ಎಂದು ಅರ್ಥೈಸಿದ್ದಾರೆ. ಭಾರತೀಯ ಸಾಹಿತ್ಯದಲ್ಲಿ ಪುರಾಣಗಳಿಗೆ ವಿಶೇಷವಾದ

ಮಹತ್ವವಿದೆ. ಭಾರತಿಯ ಸಂಸ್ಕೃತಿ ನಾಗರೀಕತೆಯನ್ನು ಸಾಧಾರಣ ಜನತೆಯಲ್ಲಿ ಪ್ರಚಾರ ಮಾಡಿದುದರ ಶ್ರೇಯಸ್ಸು ಪುರಾಣಗಳಿಗೆ ಸಲ್ಲುತ್ತದೆ. ಪ್ರಾಚೀನ ಪುರಾಣ ಶಬ್ದವು ಹಳೆಯ ಕತೆಯನ್ನು ಮಾತ್ರ ವಿವರಿಸದೆ ಇತಿಹಾಸದ ಮುಂಚಿನ ಜಗತ್ತಿನ ಸೃಷ್ಟಿಯನ್ನು ತಿಳಿಸುತ್ತದೆ. ಪುರಾಣವು ಕಳೆದು ಹೋದ ಇತಿಹಾಸವನ್ನು ಮುರಿದು ಕಟ್ಟುವುದಕ್ಕೆ ಆಕರ ಒದಗಿಸುವ ಮೌಖಿಕ ಆಧಾರವೂ ಆಗಿರುತ್ತದೆ.

ಸಂಸ್ಕೃತದಲ್ಲಿ ಪುರಾಣವೆಂದರೆ 'ಸ್ಮೃತಿ' ಎಂದು ಕರೆಯಲಾಗುತ್ತದೆ. ಸ್ಮೃತಿ ಎನ್ನುವುದರ ಅರ್ಥ ನೆನಪು. ಸಂಗತಿಯೊಂದು ಸಂಭವಿಸಿ ನೆನಪಿಗೆ ಸಂದ ಮೇಲೆ ಮಾತ್ರ ಅದರ ಗೊತ್ತು ಗುರಿ ವಿವೇಚಿಸಲು ಸಾಧ್ಯವಾಗುತ್ತದೆ. ನೆನಪು ಇರುವಷ್ಟು ಕಾಲ ವರ್ತಮಾನವನ್ನು ನಿಯಂತ್ರಿಸುತ್ತಲೇ ಇರುತ್ತದೆ. ನೆನಪಿನ ಹಂಗು ಹರಿದ ಮೇಲೆ ಅದು ನಿರ್ಲಿಪ್ತವೋ, ಪಾಂಡಿತ್ಯಪೂರ್ಣವೋ ಆದ ಅಧ್ಯಯನದ ವಸ್ತುವಾಗುತ್ತದೆ. ಹೊಸ ಹೊಸ ಪರಿಕಲ್ಪನೆಗಳು ಉಗಮಗೊಂಡರೂ 'ಪುರಾಣ' ಎಂಬ ಪದದ ಮೌಲ್ಯವನ್ನು ಅಲ್ಲಗೆಳೆಯುತ್ತೇವಾದರೂ ಜೀವನದ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡಿರುವುದರಿಂದ ಸದ್ಗುಣಗಳಾದ ದಯೆ, ಸಮಾನತೆ, ಏಕತೆಯನ್ನು ಒತ್ತಿ ಹೇಳುವ ಸಂಸ್ಕೃತಿಯ ವಾಹಕಗಳೆಂದರೆ ಪುರಾಣಗಳೇ ಆಗಿವೆ.

ಎಲ್ಲಾ ಪುರಾಣಗಳು ಸಾಮಾನ್ಯವಾದ ಲಕ್ಷಣ ಹೊಂದಿವೆ. ಅವುಗಳೆಂದರೆ ಅವೆಲ್ಲವೂ ಬುದ್ಧಿಗೆ ನಿಲುಕದ ವಿಷಯವನ್ನು ತಿಳಿಸಲು ಪ್ರಯತ್ನಿಸುತ್ತವೆ. ಅಂದರೆ ಪುರಾಣಗಳ ಪ್ರಧಾನ ಉದ್ದೇಶ ಪ್ರಕೃತಿಯಲ್ಲೂ, ಸಮಾಜದಲ್ಲೂ ರಚನೆಗೊಂಡ ನಂಬಿಕೆಗಳನ್ನು ದೃಢ ಪಡಿಸುವುದು, ಅದು ದೇವತೆಗಳ ಅಲೌಖಿಕ ಆದರ್ಶಗಳನ್ನು ನಿರೂಪಿಸುತ್ತವೆ.

ಮನುಷ್ಯನ ಮನಸ್ಸು ಎಲ್ಲವನ್ನು ವಿಂಗಡಣೆಗೆ ಹೆಸರು ಕೊಟ್ಟು, ಹೆಸರಿಗೆ ಅರ್ಥ ಹಚ್ಚಿ ಬದುಕನ್ನು ತಿಳಿಯಲು ಪ್ರಯತ್ನಿಸುತ್ತವೆ. ಅದು ಸತ್ಯ ಮತ್ತು ಕಲ್ಪನೆಯನ್ನು ಆಧರಿಸಿ ವಿಂಗಡಣೆ ನಿರೂಪಣೆ ಸತ್ಯವಾಗಿರುತ್ತದೆ ಅಥವಾ ಕಾಲ್ಪನಿಕವಾಗಿರುತ್ತದೆ. ಪುರಾಣದ ನಿರೂಪಣೆಗೆ ಸತ್ಯದ ಮನ್ನಣೆ ಸಿಗಬೇಕಾಗುತ್ತದೆ. ಪುರಾಣಗಳಿಗೆ ಒಂದು ವಿಶೇಷವಾದ ಗುಣವೊಂದಿದೆ. ಯಾವುದೇ ಪುರಾಣವು ತಾನು ಹೇಳುತ್ತಿರುವುದು ಸತ್ಯ ಎಂದು ಸಮರ್ಥಿಸುವುದಿಲ್ಲ. ತಾನು ಹೇಳುವಂತಹುದು ನಂಬುವಂತಿರಬೇಕು ಎಂದು ತಾರ್ಕಿಕವಾಗಿ ವೈಚಾರಿಕವಾಗಿ ಒಪ್ಪಿಸಲು ಪ್ರಯತ್ನಿಸುವುದಿಲ್ಲ. ಪುರಾಣವು ಹೇಳುವ ಘಟನೆಯು ಎಷ್ಟೇ ಅದ್ಭುತವಾಗಿರಲಿ ನಮಗೆ ಗೊತ್ತಿರುವ ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿರಲಿ, ಪುರಾಣ ಮಾತ್ರ ಸುಮ್ಮನೆ ಹೇಳುತ್ತದೆ. ಸುಮ್ಮನೆ ಇರುತ್ತದೆ. ಪುರಾಣಕ್ಕೆ ಅದರದೇ ಆದ ಅಧಿಕಾರವಿದ್ದು ಹೀಗೆ ಸಮರ್ಥಿಸಿಕೊಳ್ಳದೆ ತಾನೇ ಸತ್ಯ ಎಂಬಂತೆ ಇರುವುದರಿಂದ ಪ್ರಾಪ್ತವಾಗುತ್ತದೆ.

ಧರ್ಮವು ಹಲವು ಬಗೆಯ ಸಂಕೇತಗಳನ್ನು ಬಳಸಿಕೊಳ್ಳುತ್ತದೆ. ಪೂಜೆ, ಯಜ್ಞ ಇಂಥವು ಸಾಂಕೇತಿಕ ವರ್ತನೆಗಳು, ದೇವಸ್ಥಾನ ಬಲಿಪೀಠ ಇವು ಸಾಂಕೇತಿಕ ಸ್ಥಳಗಳು. ಹಾಗೆಯೇ ಪುರಾಣಗಳು ಧರ್ಮದ

ಸಾಂಕೇತಿಕ ನಿರೂಪಣೆಗಳು. ಪುರಾಣಗಳಲ್ಲಿ ದೇವರು, ದೇವತೆಗಳು ಅತಿಮಾನುಷ ಶಕ್ತಿಗಳು ಏನೇನು ಮಾಡಿದರೆಂಬ ಕಥನವು ಇರುತ್ತದೆ. ಅವರಿಗೆ ಒದಗಿದ ಅಸಮಾನ್ಯ ಸಂದರ್ಭಗಳು ಅವರು ಪಾಲ್ಗೊಂಡ ಅಸಮಾನ್ಯ ಘಟನೆಗಳ ವಿವರಗಳು ಪುರಾಣಗಳಲ್ಲಿ ಲಭ್ಯವಾಗುತ್ತವೆ.

ಪ್ರತಿಯೊಂದು ಸಮುದಾಯವು ಬದುಕಿನ ಪ್ರತಿಯೊಂದು ಹಂತವನ್ನು ಪುರಾಣಗಳಿಂದಲೇ ಗುರುತಿಸಿಕೊಳ್ಳುತ್ತಾರೆಂಬುದು ನಿಜಸಂಗತಿ, ಒಂದು ಜನಾಂಗದ ಪುರಾಣಗಳು ಆಯಾ ಜನಾಂಗವು ತನ್ನ ಬಗ್ಗೆ ತಾನು ಇಟ್ಟುಕೊಂಡಿರುವ ಕಲ್ಪನೆಗಳನ್ನು ವ್ಯಕ್ತಪಡಿಸುತ್ತವೆ. ತಾವು ಯಾರು, ಯಾಕೆ ಹೀಗಿದ್ದೇವೆ? ಎಂಬುದನ್ನು ಆ ಜನ ಕಂಡುಕೊಳ್ಳಲು ಮಾಡಿದ ಪ್ರಯತ್ನವನ್ನು ತೋರಿಸುತ್ತವೆ. ಸುತ್ತಲ ಬದುಕಿನಲ್ಲಿ ಕಾಣುವ ಸಂಗತಿಯನ್ನೋ, ಸಂಸ್ಕೃತಿಯ ಯಾವುದಾದರೊಂದು ಅಂಶವನ್ನು ಪುರಾಣಗಳು ನಿರೂಪಿಸುತ್ತವೆ. ಆ ಸಮುದಾಯದ ಆಚರಣೆ ಮತ್ತು ಸಂಪ್ರದಾಯಗಳನ್ನು ಸಮರ್ಥಿಸುವ ಗುಣವುಳ್ಳವುಗಳೇ ಪುರಾಣಗಳಾಗುತ್ತವೆ.

ಚರಿತ್ರೆಗೆ ಪೌರಾಣಿಕ ಆವರಣ ಕಲ್ಪಿಸುವುದು ಸಂಪ್ರದಾಯ. ಅಂತೆಯೇ ಪುರಾಣಗಳು ಚರಿತ್ರೆಯ ನಿರ್ಮಾಣದೊಡನೆ ಚಾರಿತ್ರ್ಯವನ್ನೂ ನಿರ್ಮಾಣ ಮಾಡುತ್ತವೆ. ಪುರಾಣ ವಿಪುಲ, ಚರಿತ್ರೆ ವಿರಳ ಎಂಬ ವಿದ್ವಾಂಸರ ಮಾತೊಂದಿದೆ. ಈ ಚರಿತ್ರೆಯ ವಲಯದಲ್ಲಿಯೇ ಪುರಾಣದ ಚರಿತ್ರೀಕರಣ ಹಾಗೂ ಚರಿತ್ರೆಯ ಪುರಾಣೀಕರಣ ಎಂಬ ಎರಡು ಪ್ರಕಾರಗಳಿಗೆ ಅವಕಾಶ ಮಾಡಿಕೊಟ್ಟಿತು.

ಸಾಮಾನ್ಯವಾಗಿ ಪುರಾಣಗಳನ್ನು ಚರಿತ್ರೆಯಿಂದ ಭಿನ್ನವಾಗಿ ನೋಡುವ ಪರಿಪಾಠವಿದೆ. ಸಾಂಪ್ರದಾಯಿಕ ಪುರಾತನ ಕಥೆಗಳಾದ ಪುರಾಣಗಳನ್ನಾಧರಿಸಿ ಸ್ಥಳ, ವ್ಯಕ್ತಿ ಆಚಾರ ಸಂಪ್ರದಾಯಗಳ ಮಹತ್ವವನ್ನು ಕೀರ್ತಿಸುವ ಉದ್ದೇಶದಿಂದ ರಚನೆಯಾದವು. ಪುರಾಣಗಳೂ ಕೂಡ ವೈವಿಧ್ಯತೆಯಿಂದ ಕೂಡಿದ ಕಲ್ಪನಾ ಕಥೆಗಳನ್ನೊಳಗೊಂಡ ಚರಿತ್ರೆಗಳೇ ಆಗಿವೆ. ಹೀಗಾಗಿ ಸಾಮಾನ್ಯರ, ಸ್ಥಳೀಯರ ಆಲೋಚನೆಗಳು ಘಟನೆಗಳು ಕ್ರಿಯೆಗಳು ದಾಖಲೆಗೊಂಡು ಚರಿತ್ರೆಯ ಮುಖ್ಯ ಭಾಗವಾಗದಿದ್ದರೆ ಅದು ಅಸಮಗ್ರವಾದ ಚರಿತ್ರೆಯೇ ಆಗುವ ಅಪಾಯವೂ ನಮ್ಮಮುಂದಿದೆ. ಜೊತೆಗೆ ಸಮುದಾಯ ಸಂಸ್ಕೃತಿಗಳೊಡನೆ ಬೆರೆತು ಅವರ ಆಚರಣೆ. ನಂಬಿಕೆ, ಸಂಪ್ರದಾಯಗಳನ್ನು ಗಮನಿಸುವಾಗ ಪೂರ್ವಗ್ರಹ ಪೀಡಿತರಾಗದೆ ಕಟ್ಟಿಕೊಡುವ ಚರಿತ್ರೆಯು ನಿಜವಾದ ಇತಿಹಾಸವಾಗುತ್ತದೆ. ಪುರಾಣ ಮತ್ತು ಚರಿತ್ರೆ ಗತಕಾಲವನ್ನು ನೋಡಲು ಇರುವ ಎರಡು ದೃಷ್ಟಿಕೋನಗಳು. ಪುರಾಣವೆಂದರೇನು ಎಂದು ವಿವರಿಸುವುದು ಎಷ್ಟು ಕಷ್ಟವೋ, ಚರಿತ್ರೆ ಎಂದರೇನು ಎಂದು ವಿವರಿಸುವುದೂ ಅಷ್ಟೇ ಕಷ್ಟ. ಆದರೆ ಚರಿತ್ರೆಯ ದೃಷ್ಟಿಕೋನ ಏನೆಂಬುದನ್ನು ಸ್ವಲ್ಪ ಕಷ್ಟಪಟ್ಟು ವಿವರಿಸಬಹುದು. ಚರಿತ್ರೆ ಕಾಲಾನುಕ್ರಮಣಿಕೆಗೆ ಬೆಲೆಕೊಡುತ್ತದೆ. ಏಕೆಂದರೆ ಕಾಲಾನುಕ್ರಮದಲ್ಲಿ ಘಟನೆಗಳನ್ನು ಆಗಿಹೋದದ್ದನ್ನು, ಜೋಡಿಸುವುದಲ್ಲದೆ ಹಾಗೆ ಜೋಡಿಸುತ್ತ ಆದ ಘಟನೆಗಳನ್ನು ಪರಸ್ಪರ ಹೋಲಿಸಿ ಅವುಗಳಿಗೆ ಬೆಲೆ ಕಟ್ಟಲು ಚರಿತ್ರೆಯ ದೃಷ್ಟಿಕೋನ ಪ್ರಯತ್ನಿಸೀರೆ,

ಯಾವ ಸಮುದಾಯದಲ್ಲಿ ಬರವಣಿಗೆ ಬೆಳೆದಿಲ್ಲವೋ ಅಥವಾ ಅಕ್ಷರ ಜ್ಞಾನ ಹೆಚ್ಚು ಇರುವುದಿಲ್ಲವೋ ಅಲ್ಲಿ ಚರಿತ್ರೆಯ ದೃಷ್ಟಿಗಿಂತ ಪುರಾಣದ ದೃಷ್ಟಿ ಹೆಚ್ಚು ಪ್ರಬಲವಾಗಿರುತ್ತದೆ.

ಓ.ಎಲ್. ನಾಗಭೂಷಣಸ್ವಾಮಿಯವರು "ಯಾವ ಸಂಸ್ಕೃತಿ ಪ್ರಬಲವಾಗಿರುತ್ತದೋ, ಯಾವ ಧೋರಣೆಗಳು ಬದುಕನ್ನು ಮುಖ್ಯವಾಗಿ ರೂಪಿಸುತ್ತದೆಯೋ ಅದು ಪುರಾಣಗಳ ತಿರುಳನ್ನು ತಿಳಿಸುತ್ತದೆ. ಬೇಟೆ ಅಥವಾ ಆಹಾರ ಸಂಗ್ರಹಣೆ ಬದುಕಿನ ಮುಖ್ಯ ವಿಧಾನವಾಗಿದ್ದ ಸಮಾಜಗಳಲ್ಲಿ ಪ್ರಪಂಚ ಹೇಗೆ ಹುಟ್ಟಿತು ಎಂಬ ಪುರಾಣ ಪ್ರಾಣಿಗಳ ಹುಟ್ಟಿಗೆ ಕಾರಣವಾಯಿತು. ವ್ಯವಸಾಯ ಮುಖ್ಯವಾದ ಸಮಾಜದ ಪುರಾಣಗಳಲ್ಲಿ ಬೇಸಾಯದ ಕೆಲಸಗಳಿಗೆ ಪ್ರಾಮುಖ್ಯತೆ ಸಲ್ಲುತ್ತದೆ. ಈ ಸಂಗತಿಯನ್ನು ಅತ್ಯಂತ ಪ್ರಾಚೀನ ಕಾಲದ ಆರಂಭದಿಂದ ಅಥವಾ ಅನಾದಿಯಿಂದ ಬೆಳೆದು ಬಂದಂತೆ ಚಿತ್ರಿತವಾಗಿದೆ"[೩] ಎನ್ನುತ್ತಾರೆ.

'ಕ್ರಾಫೆ' ಎಂಬ ವಿದ್ವಾಂಸನ ಪ್ರಕಾರ "Myths are merely certain tales largely of popular origin, but utilised and reworked by poets. so as aften to be considerably modified, loosely connected with certain religious of native growth but never in corporated by them into their creeds, digmas only half believed in by the poets and often not to taken seriously at all, in short pieces of popular or poetic fancy as the case may be"[೪] ಎನ್ನುತ್ತಾರೆ.

ಪುರಾಣವೆಂದರೆ ಒಟ್ಟಾರೆ ಅದೊಂದು ಕಥೆ. ಕವಿಗಳಿಂದ ಹೊಸ ರೂಪ ಪಡೆದಿದ್ದು, ಸಿದ್ಧಾಂತಗಳೊಡನೆ ಬೆರೆಯದೆ ಮತದೊಳಗೆ ಶಿಥಿಲ ಸಂಬಂಧ ಹೊಂದಿದ್ದು, ಯಾವ ವ್ಯಕ್ತಿಯೇ ಆಗಲಿ, ಘಟನೆಯೇ ಆಗಲಿ ಮತದ ಮುದ್ರೆ ಪಡೆದರೆ ಪೌರಾಣಿಕ ವ್ಯಕ್ತಿ, ಘಟನೆಯಾಗಿ ಪರಿವರ್ತನೆಯಾಗುತ್ತದೆ.

'ಮಲಿನೋವಸ್ಕಿ' ಎಂಬ ಜಾನಪದ ತಜ್ಞರು ಹೇಳುವಂತೆ "ಈ ತನಕ ಪುರಾಣಗಳು ಪರಿಹರಿಸಿರುವ ಸಮಸ್ಯೆಗಳು ವಿರಳ. ಅವುಗಳು ತಣಿಸಿರುವ ಕುತೂಹಲವಿಲ್ಲ. ಅವು ಸಿದ್ಧಪಡಿಸಿರುವ ಸಿದ್ಧಾಂತಗಳಿಲ್ಲದಿದ್ದರೂ ಅನಾಗರೀಕ ಸಮಾಜದಲ್ಲಿ ಪುರಾಣ ಬರಿಯ ಕಟ್ಟು ಕತೆಯಲ್ಲ, ಅದೊಂದು ಜೀವಂತ ಸತ್ಯ"[೫] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪುರಾಣಗಳು ಒಂದು ಸಮುದಾಯದ ವಿಕ್ಷಿಪ್ತ ಕನಸುಗಳು ಎನ್ನುವ ಮಾತಿದೆ. ಅಲ್ಲದೆ ಇವು ಆದರ್ಶ ಇತಿಹಾಸಗಳು ಆಗಿರುವುದು "ಪುರಾಣವೆಂಬುದು ಕೇವಲ ಕಟ್ಟುಕತೆಯಿಲ್ಲ, ಅಲೌಕಿಕ ಅತಿಮಾನುಷ ವ್ಯಕ್ತಿಗಳ ಸಾಹಸವನ್ನೋ ನೈಸರ್ಗಿಕ ಘಟನೆಗಳ ಅಸಾಧಾರಣ ವಿಚಿತ್ರವಾದ ಪ್ರವೃತ್ತಿಯನ್ನೋ ಅಥವಾ ಐತಿಹಾಸಿಕ ಘಟನೆಗಳನ್ನೋ ಇದು ವರ್ಣಿಸುವುದಿಲ್ಲ. ಪುರಾಣಗಳ ಪ್ರಧಾನ ಉದ್ದೇಶವೇನೆಂದರೆ ಪ್ರಕೃತಿಯಲ್ಲೂ ಸಮಾಜದಲ್ಲೂ ಸ್ಥಾಪಿತವಾದ ಕಟ್ಟಳೆಗಳನ್ನು ಸ್ಥಿರಗೊಳಿಸುವುದು, ನಂಬಿಕೆಯನ್ನು ದೃಢಪಡಿಸುವುದು, ದೇವದೇವತೆಗಳ ಉಪಾಸನೆಯ ಸಮರ್ಪಕತೆ ಸಾರ್ಥಕತೆಗಳನ್ನು ಸಮರ್ಥಿಸುವುದು

ಹಾಗೂ ಸಾಂಪ್ರದಾಯಿಕ ವ್ಯವಸ್ಥೆಯ ವರ್ತನೆಗಳನ್ನು ಅಲೌಖಿಕ ಆದರ್ಶ ಮತ್ತು ದಂಡನೆಗಳ ಮೂಲಕ ಸುಗಮವಾಗಿ ಕಾಪಾಡುವುದು"[೩] ಎಂದು ಇ.ಡಿ. ಜೇಮ್ಸ್ ಹೇಳುತ್ತಾನೆ. ಈ ಅಭಿಪ್ರಾಯವೂ ಪುರಾಣವೆಂದರೆ ಕಟ್ಟುಕತೆಯಲ್ಲ ಎಂಬ ಸಿದ್ಧಾಂತವನ್ನು ನಿರೂಪಿಸುವುದು.

ವಿಲಿಯಂ ಮಾಡ್ತ ಅವರು "ಅನಿರ್ವಚನೀಯವಾದ ಅದ್ಭುತವನ್ನು ಎಲ್ಲರೂ ಒಪ್ಪಬಹುದಾದ ರೀತಿಯಲ್ಲಿ ಕಾಲದೇಶಕ್ಕನುಗುಣವಾಗಿ ಅರ್ಥವತ್ತಾಗಿ ಹೇಳುವ ಕತೆಯೇ ಪುರಾಣ"[೬] ಎಂದು ಹೇಳುವರು.

'standard dictionary of folk mythology and legend' ನಲ್ಲಿ ಹೇಳಿರುವಂತೆ "Myth, a story presented as having occured in previous age explaining the cosmological and supernatural, tradition of the people, their god, heroes, cultural traits, religions, belief etc,"[೭] ಎಂದು ಹೇಳುವರು.

ಆದರೆ ಇಷ್ಟಕ್ಕೆ ಪುರಾಣದ ವ್ಯಾಪ್ತಿಯು ಮುಗಿಯಿತೆನ್ನಲಾಗದು. ಭಾರತದಲ್ಲಿ ಮಹಾಭಾರತ ಬೆಳೆದಂತೆ ಪ್ರತಿಯೊಂದು ಪುರಾಣವೂ ಕಾಲಕಾಲಕ್ಕೆ ಹೊಸ ಹೊಸ ವಿಷಯಗಳನ್ನು ಒಳಗೊಳ್ಳುತ್ತ ಹಳೆಯ ವಿಷಯಗಳನ್ನು ಇಟ್ಟುಕೊಳ್ಳುತ್ತಾ ಅಥವಾ ಕಳೆದುಕೊಳ್ಳುತ್ತ ಇಲ್ಲವೆ ಬದಲು ಮಾಡಿಕೊಳ್ಳುತ್ತ, ತಿದ್ದಿಕೊಳ್ಳುತ್ತ ಬೆಳೆದು ಬಂದ ಗ್ರಂಥಗಳಾಗಿವೆ. ಒಟ್ಟಿನಲ್ಲಿ ಪುರಾಣವೆಂದರೆ ಹಳಗತೆ, ಐತಿಹ್ಯ, ಪರಂಪರೆಯ ಇತಿಹಾಸವನ್ನೊಳಗೊಂಡ ಸಂಕಥನ. ಪುರಾತನವಾದರೂ ಅತಿ ಪ್ರಾಚೀನವಾದ ಅಥವಾ ಅಲ್ಲದ ಮತ್ತು ಸಾಂಪ್ರದಾಯಿಕ ಹಾಗೂ ಈಚಿನ ಸನಾತನ ಸಂಸ್ಕೃತಿಯ ಪರಂಪರೆಯೇ ಪುರಾಣವೆನಿಸಿಕೊಳ್ಳುತ್ತದೆ. ಪುರಾಣಗಳು ಯಾರನ್ನೂ ಇದನ್ನು ನಂಬಿ ಎಂದು ಹೇಳುವುದಿಲ್ಲ. ಆದರೆ ಪುರಾಣ ಕತೆಗಳ ನಿರೂಪಣಾ ಶೈಲಿಯು ಅನುಭವದತ್ತವಾಗಿರುವುದರಿಂದಲೇ ಜನರು ಅವುಗಳನ್ನು ಸಂಪೂರ್ಣವಾಗಿ ನಂಬುತ್ತಾರೆ. ಆದ ಕಾರಣ ಪುರಾಣ ಇಂದಿಗೂ ಜನಮಾನಸದಲ್ಲಿ ಸಂಪರ್ಕ ಸ್ಥಾನದಲ್ಲಿ ನೆಲೆ ನಿಂತಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಆ. ಚರಿತ್ರೆ: ಅರ್ಥ-ಸ್ವರೂಪ

ಜೀವಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಭಾರತವೂ ಒಂದು ಸುದೀರ್ಘ ಹಾಗೂ ವಿಮಲ ಇತಿಹಾಸವುಳ್ಳ ಇವರಿಗೆ ಬೇರೆ ದೇಶಗಳಿಗೆ ಹೋಲಿಸಿದರೆ ಐತಿಹಾಸಿಕ ಪ್ರಜ್ಞೆ ಕಡಿಮೆ. ಸಾಮಾನ್ಯ ಅರ್ಥದಲ್ಲಿ ಚರಿತ್ರೆಯೆಂದರೆ ಬದುಕಿನ ರೀತಿ ವಿಶೇಷ. ಪ್ರಾಚೀನ ಬದುಕನ್ನು ಪ್ರತಿಬಿಂಬಿಸುವ ಒಂದು ಜ್ಞಾನಶಾಖೆಯೂ ಹೌದು, ಚರಿತ್ರೆಯನ್ನು ಕುರಿತು ವೋಲ್ಟೇರ್ ಒಂದು ಮಾತು ಹೇಳುತ್ತಾನೆ. ಅದೇನೆಂದರೆ "ಒಂದು ನಾಡಿನ ಚರಿತ್ರೆಯೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಪ್ರಚಲಿತವಾಗಿದೆ. ಆದರೆ ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ, ಅಲ್ಲಿ ಬದುಕಿದ ಜನರೂ

ಇದ್ದಾರೆ. ಒಂದು ದೇಶದ ನಿಜವಾದ ಚರಿತ್ರೆಯೆಂದರೆ ಆ ದೇಶದ ಜನತೆಯ ಇತಿಹಾಸ. ಜನತೆಯು ಬದುಕಿದ ರೀತಿ ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು ಮತ್ತು ಅವರ ಜೀವನ ಮೌಲ್ಯಗಳು"[೯] ಆಗಿರುತ್ತದೆ.

ಪರಂಪರಾನುಗತ ಕಥೆಯನ್ವಯ ಕುರುಬರ ಹುಟ್ಟು ಶಿವ ಮತ್ತು ಪಾರ್ವತಿಯ ಮೂಲವನ್ನು ಮುಟ್ಟುತ್ತದೆ. ಈ ಕತೆಗಳನ್ನು ದಂತಕತೆಗಳೆಂದು ತಳ್ಳಿಹಾಕಿದರೂ ಇವು ಎರಡು ಅಂಶಗಳನ್ನು ಸ್ಪಷ್ಟಗೊಳಿಸುತ್ತವೆ. ಒಂದು ಈ ಜನಾಂಗದ ಮುಖ್ಯ ದೇವತೆ ಶಿವ. ಎರಡು ಇದು ಪ್ರಾಚೀನವಾದ ಜನಾಂಗ ಮೊದಲನೆಯದಕ್ಕೆ ಸಾಕ್ಷಿಯಾಗಿ ಕುರುಬರಲ್ಲಿ ಪ್ರಧಾನವಾಗಿ ಪೂಜೆಗೊಳ್ಳುವ ಬೀರೇಶ್ವರ ದೇವತವು ಈಶ್ವರನ ಬೇರೊಂದು ರೂಪವೇ ಆಗಿರುವುದು, ಆದರೆ ಈ ಸಮುದಾಯದ ಚಾರಿತ್ರಿಕತೆಯನ್ನು ಬೇರೆ ಬೇರೆ ಆಕರಗಳಿಂದ ಹುಡುಕಬೇಕಾಗುತ್ತದೆ.

ಡಾ. ಎಚ್. ಜೆ. ಲಕ್ಕಪ್ಪಗೌಡರ ಮಾತಿನಲ್ಲಿ ಹೇಳುವುದಾದರೆ ಕುರುಬರ ಚರಿತ್ರೆಯನ್ನು "ಪರಸ್ಪರ ಎಷ್ಟೇ ಬೇರೆ ಬೇರೆಯಾಗಿದ್ದರೂ ತಾವು ವಾಸಿಸುತ್ತಿದ್ದ ದ್ರಾವಿಡ ಪಂಗಡದಿಂದ ಎಷ್ಟೇ ಚದುರಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದರೂ ಮತ್ತು ಈಗ ಎಷ್ಟೇ ದೂರ ದೂರವಾಗಿ ಜೀವಿಸುತ್ತಿದ್ದರೂ ಪ್ರಾಚೀನ ಕಾಲದಲ್ಲಿ ಈ ಜನಾಂಗ ಅಸ್ತಿತ್ವದಲ್ಲಿತ್ತೆನ್ನುವುದಕ್ಕೆ ಕೆಲವು ಅವಶೇಷಗಳನ್ನಾದರೂ ಹೊಂದಿರದ ಯಾವ ಪ್ರಾಂತವೂ ಭರತವರ್ಷದಲ್ಲಿಲ್ಲ"[೧೦] ಎನ್ನುತ್ತಾರೆ. ಇದಕ್ಕೆ ಆಧಾರವೆಂಬಂತೆ 'ಗುಸ್ತಾವ್ ಒಪರ್ಟ' ರವರು "Indeed the kurubas must be regarded as very old inhabitants of this land. who contest with their Dravidian kingmanship the priority of occupation of the Indian soil"[೧೧] ಎಂದು ಅಭಿಪ್ರಾಯ ಪಡುತ್ತಾರೆ. ಇದರಿಂದ ಇಂದಿನ ಪ್ರಮುಖ ಮನೆತನಗಳಿಗೆ, ಜಾತಿಗಳಿಗೆ ನಾಗರಿಕತೆಯ ಮೂಲ ಪುರುಷರಾಗಿ ಕುರುಬರು ಕಾಣಸಿಗುತ್ತಾರೆ.

ತಮಿಳು ಕಾವ್ಯಗಳಲ್ಲಿ ಹಟ್ಟಿಕಾರ(ಕುರುಬ)ರನ್ನು 'ಕುರುಬ ಮನ್ನೆಯರ್' ಎಂದು ವರ್ಣಿಸಿದೆ. 'ಶಿಲಪ್ಪದಿಗಾರಂ'ನಲ್ಲಿ ಇಡೈಯರ್, ಅಂದರ್, ಕುರುಂಬರ್, ಎಡುಗರ್ ಎಂಬ ಉಲ್ಲೇಖಗಳು ಬಂದಿರುವುದರಿಂದ ಮತ್ತು ಕ್ರಿ.ಶ. ಎರಡನೇ ಶತಮಾನಕ್ಕೂ ಮೊದಲೇ ತನ್ನ ಸ್ವತಂತ್ರ ಅಸ್ತಿತ್ವವನ್ನು ಸಾಧಿಸಿಕೊಂಡಿದ್ದ ಜನಸಮುದಾಯ ಎಂಬುದು ನಿರ್ವಿವಾದ.

ಪಾಲಿಗ್ರಂಥಗಳಲ್ಲಿರುವ ಅಂಧ, ಅಂಧಕರೂ, ನಮ್ಮ ಅಂಡರರೂ (ಅಂಡೆಕುರುಬ) ಒಂದೇ ಎಂದೂ ಮತ್ತು ಇವರೇ ಆಂಧ್ರರೆಂದೂ ಡಾ. ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ಪ್ರತಿಪಾದಿಸಿದ್ದಾರೆ. ಈ ಆಂಧ್ರರ ಹೆಸರು ಐತರೇಯ ಬ್ರಾಹ್ಮಣದಲ್ಲಿ ಬರುತ್ತದೆ. ರುದ್ರಾಧ್ಯಾಯದಲ್ಲಿ 'ಪತ್ತಿ'(ಹಟ್ಟಿ, ಪಟ್ಟಿ)ಗಳ ಉಲ್ಲೇಖವಿದೆ. ಸುಮಾರು ಎರಡನೇ ಶತಮಾನದ ಕವಿಯೊಬ್ಬ ಯಾದವ ಸ್ತ್ರೀಯರನ್ನು 'ಅಂಡರ್ ಮಹಳಿರ್' ಎಂದು

ಕರೆದಿರುವುದರಿಂದ ಗೋವಳರಾದ ಯಾದವರು ಅಂಡೆ ಕುರುಬರ ಪಂಗಡಕ್ಕೆ ಸೇರಿದವರಾಗಿರಬೇಕೆಂದು ಡಾ.ಕೃಷ್ಣಸ್ವಾಮಿಯವರು ಸೂಚಿಸುತ್ತಾರೆ. ಅರ್ಕಾಟ್, ತಂಜಾವೂರುಗಳಲ್ಲಿ ಕುರುಬರನ್ನು ಯಾದವರು ಎಂದು ಕರೆಯುತ್ತಿರುವುದೂ ಈ ವಾದಕ್ಕೆ ಪುಷ್ಟಿಕೊಡುತ್ತದೆ.

ಋಗ್ವೇದದಲ್ಲೂ ಯದು ಮತ್ತು ತುರ್ವಶರ ಹೆಸರು ಉಲ್ಲೇಖಗೊಂಡಿರುವುದರಿಂದ ಇವು ವ್ಯಕ್ತಿಗಳ ಹೆಸರುಗಳಾಗಿರದೆ ಜನಾಂಗಗಳ ಹೆಸರಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಯದುಗಳಲ್ಲಿ ಅಂಧಕ ವೃಷ್ಣಿಗಳು ಸೇರುತ್ತಾರೆ. ವೃಷ್ಣಿ ಎಂದರೆ ಟಗರು. ಟಗರುಗಳನ್ನು ಅಥವಾ ಕುರಿಗಳನ್ನು ಸಾಕಿ ಬದುಕುವವರು ಅಂಡೆಯವರೂ ಇದೇ ವೃತ್ತಿಯನ್ನು ಅವಲಂಬಿಸಿರುವುದು ಇದಕ್ಕೆ ಪೂರಕವಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಕುರುಬರ ಒಂದು ಪಂಗಡ ಸ್ಥಾಪಿಸಿತೆಂಬುದಕ್ಕೆ ಆಧಾರಗಳಿವೆ. 'ಹೊರೇಸ್ ಎಚ್. ವಿಲ್ಸನ್'ರವರು ವಿಜಯ ನಗರದ ರಾಜರು ಕುರುಬ ಕುಟುಂಬದವರಾಗಿದ್ದರು" ಎಂದು ಹೇಳುತ್ತಾರೆ. ಹಕ್ಕಬುಕ್ಕರು 'ಕುರುಂಬ'ರೆಂದು ಕೆಳದಿ ನೃಪ ವಿಜಯದಲ್ಲಿ ಉಲ್ಲೇಖಿಸಲಾಗಿದೆ. ವಿದ್ಯಾರಣ್ಯ ಕಾಲಜ್ಞಾನದಲ್ಲಿ 'ಕುರುವಂಶ ಪ್ರಸೂತಿ ಜಾ' ಎಂದು ವರ್ಣಿಸಲಾಗಿದೆ. ಸಾಲೆಂ ಗೆಝೆಟಿಯರ್ ನಲ್ಲಿ ರಾಜಕುಲ, ನಾಡಕುಲ, ಅರಸುಕುಲ, ಸಂಗಮಕುಲ, ಒಡೆಯರ ಕುಲ, ಸಾಮಂತಕುಲ ಎಂಬುದಾಗಿ ಕುರುಬರ ಒಳಪಂಗಡಗಳನ್ನು ಗುರ್ತಿಸಲಾಗಿದೆ. ಈಗಲೂ ಕುರುಬರಲ್ಲಿ ಒಳಪಂಗಡಗಳಿರುವುದು ಇದಕ್ಕೆ ಸಾಕ್ಷಿ. ವಿಜಯನಗರದ ಪ್ರಸಿದ್ಧ ರಾಜರು 'ಸಂಗಮ ಕುಲ'ದವರೆಂದು ಕರೆಯುವುದು ಈ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ.

ವಿಜಯನಗರ ಮೂಲಪುರುಷರು 'ಕದಂಬರು' ಎಂದು 'The early History of Pallavas' (p-158-160)ನಲ್ಲಿ ಉಲ್ಲೇಖಿತವಾಗಿದೆ. ವಿಜಯನಗರ ಸಂಸ್ಥಾಪಕರು ಕುರುಬರೆಂದಾದರೆ ಕದಂಬರೂ ಕುರುಬರೇ ಆದಂತಾಯಿತು. ಈ ಕದಂಬರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಾಮ್ರಾಜ್ಯವನ್ನು ಈಗಿನ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಮತ್ತು ದಕ್ಷಿಣ ಕನ್ನಡಗಳವರೆಗೆ ವಿಸ್ತರಿಸಿದ್ದರು.

ಅಂತೆಯೇ ಕೆಳದಿ, ಬಿದನೂರು ಮತ್ತು ಇಕ್ಕೇರಿಯ ಅರಸರೂ ಕುರುಬರೆಂಬುದಕ್ಕೆ ಆಧಾರಗಳಿವೆ. ಕುರುಬರಾಗಿದ್ದ ಈ ಅರಸರುಗಳು ವಿಜಯನಗರದ ಸದಾಶಿವರಾಯನ ಪ್ರಭಾವದಿಂದ ವೀರಶೈವ ಮತವನ್ನವಲಂಬಿಸಿದರು. ಕೆಳದಿಯ ಅರಸರಿಗೆ 'ಮನ್ನೆಯರು' ಎಂಬ ಹೆಸರಿದ್ದು ಇದು ಮುಂದೆ 'ಮಾನೆ' ಯಾಗಿ ಪರಿವರ್ತಿತಗೊಂಡು ಕುರುಬರಲ್ಲಿ 'ಮಾನೆ' ಎಂಬ ಗೋತ್ರಕ್ಕೆ ಕಾರಣವಾಗಿದೆ. ಬಿದನೂರಿನಲ್ಲಿ ಹೊನ್ನಯ್ಯ ಕಂಬಳಿ ಎಂಬ ಪ್ರಸಿದ್ಧ ಪಾಳೆಯಗಾರನು ಆಳ್ವಿಕೆ ನಡೆಸಿದ್ದಕ್ಕೆ ಆಧಾರಗಳಿವೆ. ಬೆಳವಡಿ ದೇಸಾಯರ ಪೂರ್ವಜ ಬೊಮ್ಮನಾಯಕನೆಂಬುವನು "ಧನಗಾರ"ನೆಂದು ತಿಳಿದು ಬಂದಿದೆ.

೧೯೫೬ರ ಬಳ್ಳಾರಿಯ ಗೆಝೆಟಿಯರ್‌ನಲ್ಲಿ "The first palegars of the Bellary was apparently a kuruba, named Balada Hanumappa Nayaka" ಎಂಬುದಾಗಿದ್ದು ಬಳ್ಳಾರಿಯ ಪ್ರಸಿದ್ಧ ಪಾಳೆಯಗಾರ ಹಂಡೆ ಬಾಲದ ಹನುಮಪ್ಪನಾಯಕ ಕುರುಬನಾಗಿದ್ದ ಎಂಬುದರ ಸ್ಪಷ್ಟತೆ ದೊರೆಯುತ್ತದೆ.

ಕದಂಬರ ವಂಶಸ್ಥಾಪಕ ಮಯೂರಶರ್ಮನೆಂದು ಈಚಿನ ಇತಿಹಾಸ ತಿಳಿಸಿದರೂ ಇದರ ಸಂಸ್ಥಾಪಕರ ಸತ್ಯಸಂಗತಿ ಬೇರೆ ಇರುವಂತೆ ತೋರುತ್ತದೆ. ಕುರುಬರೇ ಕದಂಬರೆಂಬ ಹೆಸರಿನಿಂದ ರಾಜ್ಯಭಾರ ಮಾಡಿದ್ದಾರೆಂದೂ "ಕುರುಂಬ" ಶಬ್ದವು ಸಂಸ್ಕೃತ ಸಂಪರ್ಕದಿಂದ ಕದಂಬ ಎಂದಾಗಿರಬಹುದೆಂದು ಲೂಯಿ ರೈಸ್‌ರವರು ಅಭಿಪ್ರಾಯಪಡುತ್ತಾರೆ.

ಮತ್ತೋರ್ವ ಚರಿತ್ರಕಾರ ಬರೆಯುವಂತೆ "The kurubas have a special interest in kunara, if as seems possible, kadamba name of two of the leading dynasties of Banavasi is abrahminical name of kurubas' ಎಂದು ಉಲ್ಲೇಖಿಸುತ್ತಾರೆ. ತಮಿಳು ಭಾಷೆಯಲ್ಲಿ ಕದಂಬ ಮತ್ತು ಕುರುಂಬ ಎಂಬ ಪದಗಳೆರಡೂ ಸಮಾನಾರ್ಥಕಗಳೆಂಬ ಅಂಶದೆಡೆಗೆ ಗಮನವನ್ನು ಸೆಳೆಯುತ್ತಾರೆ.

ಪಲ್ಲವರ ಹಳೆಯ ನಾಣ್ಯಗಳ ಮೇಲೆ ಕುರುಬ ಎಂಬ ಹೆಸರಿದೆ. ೧೮೯೧ರ ಮದ್ರಾಸ್ ಜನಗಣತಿ ಯನ್ವಯ "ಕುರುಬರು ಅಥವಾ ಕುರುಬರು ಪ್ರಾಚೀನ ಪಲ್ಲವರ ಆಧುನಿಕ ಪ್ರತಿನಿಧಿಗಳು"[೧೩] ಎಂದ ತಿಳಿಸಲಾಗಿದೆ. ಇವರಲ್ಲಿ ಮೂರು ಶಾಖೆಗಳಿದ್ದು ಒಂದು ಶಾಖೆಯು ಬಾದಾಮಿಯಲ್ಲೂ, ಮತ್ತೊಂದು ಗೋದಾವರಿ ಜಿಲ್ಲೆಯ ವೆಂಗಿಯಲ್ಲೂ, ಮಗದೊಂದು ಶಾಖೆಯು ಕಾಂಚೀಪುರದಲ್ಲಿ ರಾಜ್ಯವಾಳಿದ್ದಾರೆ. ಚೋಳರು ಈ ರಾಜ್ಯವನ್ನು ಆಕ್ರಮಿಸಿದ ನಂತರ ಕುರುಬರು ಅತ್ತಿತ್ತ ಚದುರಿ ಬೆಟ್ಟಗುಡ್ಡಗಳಲ್ಲಿ ವಾಸಿಸತೊಡಗಿದರು.

ಕಾವೇರಿಯಿಂದ ಗಂಗಾನದಿಯವರೆಗೆ, ನೀಲಗಿರಿಯಿಂದ ರಾಜಮಹಾಲದವರೆಗೆ ವ್ಯಾಪಿಸಿರುವ ಕುರುಬರು ದ್ರಾವಿಡರು ಮತ್ತು ಈ ದ್ರಾವಿಡರು ಆರ್ಯ ಪೂರ್ವ ಜನಾಂಗ ಎಂಬುದಾಗಿ ವಿದ್ವಾಂಸರು ತೀರ್ಮಾನಿಸಿದ್ದಾರೆ. ಏನಿಲ್ಲೆಂದರೂ ಆರೇಳು ಸಾವಿರ ವರ್ಷಗಳ ಸುಧೀರ್ಘ ಇತಿಹಾಸವುಳ್ಳ ಈ ಜನಾಂಗ ಭಾರತದ ಹತ್ತು ಹಲವು ಕಡೆ ಹಂಚಿಹೋಗಿರುವುದು ವಿಶೇಷವಾಗಿ ವಿವಿಧ ಧರ್ಮಗಳ ಪ್ರಭಾವಗಳಿಗೆ ಒಳಗಾಗಿ ವಿಶಿಷ್ಟ ಪರಂಪರೆಯನ್ನುಳಿಸಿಕೊಂಡು ಬಂದದ್ದು ನಮ್ಮ ನಾಡಿನ ಇತಿಹಾಸ ಮತ್ತು ಸಂಸ್ಕೃತಿ ಮೇಲೆ ಹೊಸ ಬೆಳಕು ಚೆಲ್ಲುವಂತಾಗಿದೆ.

ಕುರುಬರು ಭರತಖಂಡದ ಅದರಲ್ಲೂ ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಪ್ರಜೆಗಳೆಂದು ತಿಳಿದುಬರುವುದು. ನಮ್ಮ ಕರ್ನಾಟಕದಲ್ಲಿ ಅಂದರೆ ಮೈಸೂರು, ಮದರಾಸು, ಮುಂಬಯಿ ಕರ್ನಾಟಕ ಪ್ರಾಂತಗಳಲ್ಲಿ ಕುರುಬರ ಜನಸಂಖ್ಯೆಯು ಬಹಳವಾಗಿರುವುದು. ಆದರೆ ಧಾರವಾಡ, ಬೆಳಗಾವಿ, ಬಿಜಾಪುರ

ಈ ಮೂರು ಜಿಲ್ಲೆಗಳಲ್ಲಿರುವಷ್ಟು ಜನಸಂಖ್ಯೆಯು ಮತ್ತೆಲ್ಲಿಯೂ ಇರುವುದಿಲ್ಲ. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಪ್ರತಿಯೊಂದು ಹಳ್ಳಿಯ ಗೌಡಿಕೆಯು ಹಾಗೂ ಪ್ರಾಬಲ್ಯವೂ ಕುರುಬರದೇ ಹೆಚ್ಚು. ಪ್ರತೀ ಹಳ್ಳಿಯಲ್ಲಿ ಕಂಡುಬರುವ ಕುಸ್ತಿಗಾರರು ಕುರುಬರೇ ಆಗಿರುವರು. ಹೀಗೆ ಕುರುಬರ ಚಾರಿತ್ರಿಕತೆಯ ಸ್ವರೂಪವನ್ನು ಅವಲೋಕಿಸಬಹುದಾಗಿದೆ.

ಕಾಡುಕುರುಬರು

ಬೇಟೆ ಪ್ರಧಾನವಾಗಿರುವ ಸಮುದಾಯದಲ್ಲಿ ಇರುವ ಕಾಡು ಕುರುಬರ ಪೌರಾಣಿಕ ಹಿನ್ನೆಲೆಯನ್ನು ಅವಲೋಕಿಸಿದರೆ ಯಾವುದೇ ಸಮುದಾಯಕ್ಕು ಇರುವಂತೆ ಇವರಿಗೂ ಕೂಡ ಪೌರಾಣಿಕತೆ ಇರುವುದು ಕಂಡುಬರುತ್ತದೆ. ಕಾಡು ಕುರುಬರು ಮತ್ತು ಜೇನು ಕುರುಬರು ಒಂದೇ ಮೂಲದಿಂದ ಬಂದವರೆಂಬ ವಿದ್ವಾಂಸರ ಅಭಿಪ್ರಾಯವಿದ್ದರೂ ಆಚಾರ-ವಿಚಾರ, ಸಂಪ್ರದಾಯ, ಸಂಸ್ಕೃತಿಯಲ್ಲಿ ವಿಭಿನ್ನತೆಯಿರುವುದನ್ನು ಗಮನಿಸಬಹುದಾಗಿದೆ.

ಈ ಭೂಮಿಯ ಮೇಲೆ ಎಲ್ಲಿ ನೋಡಿದರೂ ಜೀವರಾಶಿಗಳೇ ಇಲ್ಲ. ಎಲ್ಲಾ ಕಡೆಯಲ್ಲೂ ಬರೀ ನೀರೆ ಕಾಣುತ್ತಿತ್ತು. ಭೂಮಿ ಮಾತ್ರ ಕಾಣುತ್ತಿರಲಿಲ್ಲ. ಒಂದು ಸಲ ನೀರು ಕಡಿಮೆಯಾದಾಗ ಅಣ್ಣ ತಂಗಿಯರಿಬ್ಬರು ನೀರಿನಿಂದ ಎದ್ದು ಬರುತ್ತಾರೆ. ಅವರಿಬ್ಬರು ಅಣ್ಣ ತಂಗಿಯರಾದ್ದರಿಂದ ಲೈಂಗಿಕ ಸಂಬಂಧ ಬೆಳೆಸಲು ಮತ್ತು ವಂಶ ಬೆಳೆಸಲು ಅವರಿಗೆ ಅವಕಾಶಗಳೇ ಇರಲಿಲ್ಲ. ಹೀಗಾಗಿ ಅವರು ದೇವರನ್ನು ಪ್ರಾರ್ಥಿಸುತ್ತಾರೆ. ಅಣ್ಣ ತಂಗಿಯರ ಪ್ರಾರ್ಥನೆ ಕೇಳಿದ ಶಿವ ಅವರ ಹತ್ತಿರ ಬಂದು ಅವರ ಸಮಸ್ಯೆ ತಿಳಿದುಕೊಂಡು ಅವರಿಬ್ಬರಿಗೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಲ್ಲುವಂತೆ ಹೇಳುತ್ತಾನೆ.

ಶಿವ ಹೇಳಿದಂತೆ ಅಣ್ಣ ತಂಗಿಯರು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತುಕೊಳ್ಳುತ್ತಾರೆ. ನಂತರ ಪರಸ್ಪರ ನೋಡಿಕೊಂಡಾಗ ಅಣ್ಣ ತಂಗಿಯರ ಬದಲಾಗಿ ಗಂಡ ಹೆಂಡತಿಯರಾಗಿರುತ್ತಾರೆ. ಅದರಿಂದ ವಂಶ ಬೆಳೆಯುತ್ತದೆ. ಕಾಡುಕುರುಬರಾದ ನಾವೇ ಅವರ ವಂಶಸ್ಥರು. ಈ ರೀತಿಯಲ್ಲಿ ಕಾಡು ಕುರುಬರ ಸೃಷ್ಟಿಯಾಯಿತೆಂದು ಸೃಷ್ಟಿಪುರಾಣದಲ್ಲಿ ತಿಳಿದು ಬರುತ್ತದೆ. ಇಲ್ಲಿಯೂ ಕೂಡ ಕಾಡು ಕುರುಬರು ಶಿವನ ಆರಾಧಕರು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಜೇನು ಕುರುಬರು

ಜೇನು ಕುರುಬರೆಂದು ಇವರಿಗೆ ವೃತ್ತಿಯಿಂದಲೇ ಬಂದಿರುತ್ತದೆ. ಜೇನು ಬೇಟೆಯಾಡುವುದರೊಂದಿಗೆ ಪ್ರಾಣಿಬೇಟೆ ಆಡುವುದರಲ್ಲೂ ಇವರು ನಿಪುಣರು. ಜೇನು ಕುರುಬರ ಸೃಷ್ಟಿಯ ಬಗ್ಗೆ ಅವಲೋಕನ ಮಾಡಿದರೆ ಇವರ ಸೃಷ್ಟಿ ಪುರಾಣದಲ್ಲಿ ಮೂರು ಜಗತ್ತುಗಳಿವೆ. ಭೂಲೋಕ ಇದು ಮಣ್ಣಿನಿಂದ ಆದ ಜಗತ್ತು. ಪಾತಾಳಲೋಕ ಇದನ್ನೇ ನರಲೋಕ ಎಂದು ಕಲ್ಪಿಸಿಕೊಂಡಿದ್ದಾರೆ. ಇದು ದುಷ್ಟ ಚೇತನಗಳಿಂದ ನಿರ್ಮಾಣವಾದಂತಹುದು. ಇಲ್ಲಿ ಭೂತ-ಪ್ರೇತಗಳು ವಾಸವಾಗಿರುತ್ತವೆ ಎಂಬ ನಂಬಿಕೆಯಿದೆ. ಸ್ವರ್ಗಲೋಕ

ಇದು ಮೂರನೆಯದು. ಇಲ್ಲಿ ದೇವದೇವತೆಗಳು, ಶ್ರೇಷ್ಠವಾದ ಮತ್ತು ಶುದ್ಧರಾದ ಮಾನವರ ಆತ್ಮಗಳು ವಾಸಿಸುವಂತಹ ಸ್ಥಳ. ಈ ಜಗತ್ತು ದಿವ್ಯ ಚೇತನಗಳಿಂದ ಸೃಷ್ಟಿಯಾಗಿರುವುದು ಎಂಬ ಕಲ್ಪನೆಗಳು ಜೇನುಕುರುಬರಲ್ಲಿದೆ.

ಜೇನು ಕುರುಬರಲ್ಲಿ ನಡೆಯುವ ಆಚರಣೆಗಳು ಅಗ್ನಿಕುಂಡದ ಸುತ್ತಮುತ್ತಲಿಂದಲೇ ಆರಂಭವಾಗುತ್ತವೆ. ಅಗ್ನಿಕುಂಡದ ಸುತ್ತ ಒಂದು ವರ್ತುಲವಿರುತ್ತದೆ. ಆ ವರ್ತುಲವನ್ನು ಯಾರೂ ಪ್ರವೇಶಿಸಬಾರದೆಂಬ ನಿರ್ಬಂಧವಿದೆ. ಅಗ್ನಿಕುಂಡದ ಎದುರಿಗೆ ಕುಳಿತ ಮಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಗಾಳಿ ಅಥವಾ ಕೆಟ್ಟ ಆತ್ಮಗಳನ್ನು ಆಹ್ವಾನಿಸಲು ಕೈಯಲ್ಲಿ ಸೋರೆ ಬುರುಡೆ ಹಿಡಿದು ಕುಳಿತುಕೊಂಡಿರುತ್ತಾನೆ. ಅವನ ಎದುರಿಗೆ ಕುಳಿತ ಇಬ್ಬರು ಅಥವಾ ಮೂರು ಜನ ಹೆಣ್ಣುಮಕ್ಕಳು ಸೊಲ್ಲು ಹೇಳಲು ಪ್ರಾರಂಭಿಸಿದ ಮೇಲೆ ಮಾಂತ್ರಿಕ ಸೋರೆ ಬುರುಡೆಯನ್ನು ತಿರುಗಿಸುತ್ತಾ ಆತ್ಮಗಳನ್ನು ಕರೆದು ಅವುಗಳ ಮುಂದೆ ಸಮಸ್ಯೆ ಹೇಳಿ ಪರಿಹಾರ ಕಂಡುಕೊಳ್ಳುತ್ತಾನೆ. ಜೇನು ಕುರುಬರಿಗೆ ಸೋರೆ ಬುರುಡೆ ಮತ್ತು ಅಗ್ನಿಕುಂಡ ಅತ್ಯಂತ ಪವಿತ್ರವಾದವು. ಈ ಸೋರೆ ಬುರುಡೆ ಒಳಗಿನಿಂದ ಅದನ್ನು ಒಡೆದುಕೊಂಡು ಅಣ್ಣ ತಂಗಿಯರು ಹೊರಬಂದರೆಂದು ಸೃಷ್ಟಿ ಪುರಾಣ ಹೇಳುತ್ತದೆ.

ಈ ಪ್ರಪಂಚವೆಲ್ಲವೂ ಪ್ರಳಯದಲ್ಲಿ ಮುಳುಗಿಹೋಗಿತ್ತು, ಎಲ್ಲಿ ನೋಡಿದರೂ ನೀರೇ ತುಂಬಿತ್ತು. ಒಂದು ಕ್ರಿಮಿಕೀಟವೂ ಪ್ರಪಂಚದ ಮೇಲಿರಲಿಲ್ಲ, ನೀರಿನಲ್ಲಿ ಒಂದ ಕಹಿ ಸೋರೆ ಬುರುಡೆಯು ತೇಲುತ್ತಿತ್ತು, ಈ ಸೋರೆ ಬುರುಡೆ ತೇಲುತ್ತ ತೇಲುತ್ತ ಕೇವಲ ಒಂದು ಅಂಗೈಯಗಲ ಭೂಮಿಯಿರುವ ಸ್ಥಳದಲ್ಲಿ ನಿಂತಿತು. ಈ ಸೋರೆ ಒಡೆದುಕೊಂಡು ಒಂದು ಗಂಡು ಮತ್ತು ಹೆಣ್ಣು ಹೊರಗೆ ಬಂದಿತು. ಸೋರೆ ಬುರುಡೆಯ ಒಳಗಿನಿಂದ ಬಂದವರಿಬ್ಬರೂ ಅಣ್ಣತಂಗಿಯರಾಗಿದ್ದರು. ಈ ಅಣ್ಣತಂಗಿಯರಿಬ್ಬರೂ ತಮ್ಮ ತಮ್ಮ ಮುಷ್ಠಿಗಳಲ್ಲಿ ಮಣ್ಣು ಹಿಡಿದುಕೊಂಡು ಒಂದು ಗಂಡು ಒಂದು ಹೆಣ್ಣು ಸೃಷ್ಟಿಸಿದರು. ಇವರಿಬ್ಬರಿಂದ ಮಾನವ ಸಂತತಿ ಬೆಳೆಯಿತು. ಜೇನುಕುರುಬರಾದ ನಾವೇ ಅವರ ವಂಶಸ್ಥರು ಎಂದು ಹೇಳಿಕೊಳ್ಳುವ ಸೃಷ್ಟಿ ಪುರಾಣ ಇವರಲ್ಲಿದೆ.

ಜೇನು ಕುರುಬರಲ್ಲಿ ಸೃಷ್ಟಿಗೆ ಸಂಬಂಧಿತವಾದ ಆಚರಣೆಯು ಒಂದಿದೆ. ಇದನ್ನು ಕೊಂತಿ ಪೂಜೆ ಎಂದು ಕರೆಯುತ್ತಾರೆ. ಈ ಹಬ್ಬವನ್ನು ಮರಗಿಡಗಳೆಲ್ಲ ಚಿಗುರಿ ಹೂವು ಹಣ್ಣು ಬಿಡುವ ಕಾಲದಲ್ಲಿ ಆಚರಿಸುತ್ತಾರೆ. ಇದು ಜೇನು ಕುರುಬರ ಸೃಷ್ಟಿ ಶಕ್ತಿಯ ಚಿನ್ಹೆಯ ಆರಾಧನೆಯನ್ನು ಸಂಕೇತಿಸುವ ಹಬ್ಬ. ಈ ಸೃಷ್ಟಿಕ್ರಿಯೆಯನ್ನು ಸೂಚಿಸುವ ಹಬ್ಬವನ್ನು ನಲವತ್ತು ದಿನಗಳವರೆಗೆ ಆಚರಿಸುತ್ತಾರೆ. ಮರಗಿಡಗಳು ಚಿಗುರುವುದಕ್ಕೂ ವಸಂತಕ್ಕೂ ತಮ್ಮ ಸೃಷ್ಟಿಗೂ ಸಂಬಂಧವನ್ನು ಕಲ್ಪಿಸುವುದನ್ನು ಗಮನಿಸಿದರೆ ಎಲ್ಲಾ ವಿಕಾಸವೂ ಪ್ರಕೃತಿಯ ಬೆಂಬಲದಿಂದಲೇ ನಡೆಯುತ್ತದೆ ಎಂಬುದನ್ನೂ ಎತ್ತಿ ತೋರಿಸುತ್ತದೆ. "ಮಣ್ಣಿನಿಂದ ಮನುಷ್ಯ ಹುಟ್ಟುವ ಕಲ್ಪನೆ ಇವರಲ್ಲಿಯೂ ಅರ್ಥಗರ್ಭಿತವಾಗಿದೆ. ತಮ್ಮ ಹುಟ್ಟಿನ

ನೆನಪಿಗಾಗಿ ಆಚರಿಸುವ ಕೊಂತಿ ಪೂಜೆ ಸೃಷ್ಟಿಗೆ ಪೂರಕವಾದ ಲೈಂಗಿಕ ಆಶಯವನ್ನು ಇನ್ನಷ್ಟು ಅರ್ಥಗರ್ಭಿತವಾಗಿ ನೆನಪಿಸುತ್ತದೆ"[೧೪] ಎಂದು ಹಿ.ಚಿ. ಬೋರಲಿಂಗಯ್ಯ ಅವರು ತಿಳಿಸುತ್ತಾರೆ. ಸೋರೆ ಬುರುಡೆ, ಜೇನು ಕುರುಬರಿಗೆ ದೇವರ ಸಮಾನ, ಪ್ರತಿಯೊಂದು ಕಾರ್ಯ ಇದರ ಮೂಲಕವೇ ನಡೆಯಬೇಕು ನಡೆಯುತ್ತದೆಂಬ ಪರಿಕಲ್ಪನೆ ಇವರಲ್ಲಿದೆ. ಹೀಗಾಗಿ ಈ ಜಗತ್ತಿನಲ್ಲಿ ಮಾನವನ ಸೃಷ್ಟಿ ಕೂಡ ಈ ಸೋರೆ ಬುರುಡೆಯಿಂದಲೇ ಆಯಿತೆಂದು ಹೇಳುತ್ತಾರೆ.

ಈ ಮೇಲಿನ ಎರಡು ಸಮುದಾಯದವರ ಸೃಷ್ಟಿಯನ್ನು ಗಮನಿಸಿದರೆ ಮಾನವನ ವಿಕಾಸದ ಹಲವು ಹಂತಗಳನ್ನು ಅತ್ಯಂತ ಸರಳವಾಗಿ ನಿರೂಪಿಸುವ ಸುಂದರವಾದ ಸಂಕೇತಗಳಲ್ಲಿ ಇದು ಒಂದು. ಬುಡಕಟ್ಟು ಸಮುದಾಯದ ಅನನ್ಯ ಲೋಕದೃಷ್ಟಿಗೆ ದ್ಯೋತಕವೂ ಆಗಿದೆ. ಅಲ್ಲದೆ ಕಾಡುಕುರುಬರು ಮತ್ತು ಜೇನುಕುರುಬರುಗಳಲ್ಲಿ ಬರುವ ಪೌರಾಣಿಕ ಸಂಗತಿಗಳಲ್ಲಿ ಕೆಲವು ಸಾಮ್ಯಗಳಿವೆ ಎಂಬುದನ್ನು ಮನಗಾಣಬಹುದು. ಈ ಕಥನಗಳು ತಮ್ಮಷ್ಟಕ್ಕೇ ತಾವೇ ವಿಶಿಷ್ಟವೂ ಅನನ್ಯವೂ ಆದವುಗಳಾಗಿವೆ.

ಕರ್ನಾಟಕದ ಅತ್ಯಂತ ಪ್ರಾಚೀನ ಬುಡಕಟ್ಟು ಸಾಲಿಗೆ ಸೇರಿದವರು ಕಾಡು ಕುರುಬರು ಮತ್ತು ಜೇನು ಕುರುಬರು. ಇವರು ದ್ರಾವಿಡರಾಗಿದ್ದು ಶಿವನ ಆರಾಧಕರೂ ಹೌದು. ಈ ಸಮುದಾಯಗಳಿಗೆ ಐತಿಹಾಸಿಕ ಹಿನ್ನೆಲೆಯೂ ಇದೆ. ಇವರು ಬಹಳ ಪರಾಕ್ರಮಶಾಲಿಗಳಾಗಿ ಬಹಳ ವರ್ಷಗಳವರೆಗೂ ದಕ್ಷಿಣ ಭಾರತವನ್ನಾಳಿದ ಪಲ್ಲವ ವಂಶಕ್ಕೆ ಸೇರಿದವರೆಂದು ತಿಳಿದು ಬರುತ್ತದೆ. ಕಾಲಾನಂತರದಲ್ಲಿ ಕೊಂಗ, ಚೋಳ ಮತ್ತು ಚಾಲುಕ್ಯರ ಪ್ರಬಲವಾದ ದಾಳಿಯಿಂದ ೭ ಅಥವಾ ೮ನೇ ಶತಮಾನದ ಸುಮಾರಿಗೆ ಅವನತಿ ಹೊಂದಿದರು. ಸಮೀಪದ ಗುಡ್ಡಬೆಟ್ಟಗಳಿಂದಾವೃತವಾದ ಮಲಬಾರ್, ನೀಲಗಿರಿ, ಕೊಡಗು, ವೈನಾಡು ಮತ್ತು ಮೈಸೂರು ಪ್ರದೇಶಗಳಲ್ಲಿನ ದಟ್ಟವಾದ ಅರಣ್ಯಗಳನ್ನು ಸೇರಿಕೊಂಡು ಬಹಳ ಕಾಲದವರೆಗೂ ತಲೆಮರೆಸಿಕೊಂಡಿದ್ದರು. ಕಾಲಕ್ರಮೇಣ ಯಾವುದೇ ಸಂಪರ್ಕವಿಲ್ಲದ ಇವರ ಸಹಜವಾದ ಏಕಾಂಗಿತನ ಅವರನ್ನು ಕಾಡುಜನರನ್ನಾಗಿ ಮಾಡಿ ತಮ್ಮ ಗತಕಾಲದ ಭವ್ಯ ಸಂಸ್ಕೃತಿಯನ್ನು ಕಳೆದುಕೊಳ್ಳುವುದಕ್ಕೆ ಕಾರಣವಾಗಿರಬಹುದು. ಈ ರೀತಿಯಲ್ಲಿ ಬಹಳ ಹಿಂದೆ ಊರು ಕುರುಬರು ಮತ್ತು ಕಾಡುಕುರುಬರು ಒಂದೇ ಆಗಿದ್ದಿರಬಹುದು. ಹಾಗೂ ಇತ್ತೀಚಿನ ಇವರುಗಳಲ್ಲಿನ ಭಿನ್ನತೆ ಬಹುಶಃ ಅವರು ವಾಸಿಸುವ ಭೌಗೋಳಿಕ ಪ್ರಭೇದಗಳಿಂದಾಗಿರಬಹುದೆಂದು ಮೂಲಗಳು ತಿಳಿಸುತ್ತವೆ. ಇದಕ್ಕೆ ಸಾಕ್ಷಿ ಎನ್ನುವಂತೆ ಉತ್ತರ ಮಲಬಾರಿನ 'ಕುರುಂಬನಾಡು' ಎಂಬ ಹೆಸರಿನ ತಾಲ್ಲೂಕು ಇವರ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

ಯಾವುದೇ ಒಂದು ಸಮುದಾಯದ ಮೂಲವನ್ನು ಹುಡುಕಿ ಅವರು ನಿರ್ದಿಷ್ಟವಾಗಿ ಇಂತಹುದೇ ಮೂಲದಿಂದ ಬಂದವರೆಂದು ಹೇಳುವುದು ಬಹಳ ಕಠಿಣವಾದ ಕಾರ್ಯ. ಮೂಲನಿವಾಸಿಗಳು ಜಲಸಂಪನ್ಮೂಲ ಎಲ್ಲಿ ಇರುತ್ತಿತ್ತೋ, ದಟ್ಟವಾದ ಅರಣ್ಯ ಪ್ರದೇಶವಾಗಿದ್ದು ತಮಗೆ [illegible] ಆಹಾರ ಪದಾರ್ಥಗಳು, ಬೇಟೆಗೆ ಅನುಕೂಲವಾದ ಸ್ಥಳ ಲಭ್ಯವಾಗುವುದೋ ಅಂತಹ ಕಡೆಗಳಲ್ಲಿ ನೆಲೆಸಿರುವುದನ್ನು

ಕಾಣಬಹುದಾಗಿದೆ. ಏಕಾಂಗಿಯಾಗಿ ಅಲೆಮಾರಿಯಾಗಿರುತ್ತಿದ್ದ ಮಾನವ ಕಾಲಕಳೆದಂತೆ ಕ್ರೂರ ಮೃಗಗಳ ಭಯದಿಂದಲೋ, ತಾನು ತನ್ನವರೆಂಬ ಅರಿವು ಬಂದಿದ್ದರಿಂದಲೋ ಗುಂಪಾಗಿ, ಸಮೂಹವಾಗಿ ತಮ್ಮದೇ ಸಾಮಾಜಿಕ ಪರಿಸರವನ್ನು ನಿರ್ಮಿಸಿಕೊಂಡರೆಂಬುದನ್ನು ಮರೆಯುವಂತಿಲ್ಲ. ಈ ಸಮುದಾಯಗಳೆರಡೂ ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಬೇಟೆಯ ಮೂಲಕವೇ ಸಂಪಾದಿಸಿಕೊಂಡು ಜೀವನವನ್ನು ಸಾಗಿಸುತ್ತಾ ಬಂದವರು. ಇಂದಿಗೂ ಸಹ ಊರುಗಳಿಂದ ಹೊರಗಡೆಯ ಗಿರಿಕಂದರಗಳ ಪ್ರದೇಶ ಹಳ್ಳಕೊಳ್ಳಗಳ ನೀರು ಸಿಗುವೆಡೆಗಳಲ್ಲಿಯೇ ಬದುಕು ಸಾಗಿಸುತ್ತಿರುವುದನ್ನು ಗಮನಿಸಬಹುದು.

ಅಲೆಮಾರಿ ಕುರುಬರು

ಉತ್ತರ ಕರ್ನಾಟಕದಲ್ಲಿ ಕಂಡು ಬರುವ ಇವರು ಪಶುಪಾಲಕರು, ಊರಿಂದೂರಿಗೆ ಅಲೆಯುವ ಇವರು ನೂರಾರು ಕುರಿಗಳ ಜೊತೆಗೆ ಸಂಚರಿಸುತ್ತಾ, ಭೂಮಿಯ ಫಲವತ್ತತೆಗಾಗಿ ಕುರಿ ಕೆಡವುತ್ತ, ಅದರಿಂದ ಬಂದ ಹಣದ ಮೂಲಕ ಉಪಜೀವನವನ್ನು ನಡೆಸುವ ಅಲೆಮಾರಿ ಕುರುಬರಿಗೆ ಅವರದೇ ಆದ ಪೌರಾಣಿಕ ಹಿನ್ನೆಲೆಯಿದೆ.

ಹಾಲುಮತ ಪುರಾಣ, ಕುರುಬರ ಚರಿತ್ರೆ, ರೇಣುಕಾ ಕಾವ್ಯ ಮುಂತಾದ ಪುರಾಣಗಳು ಈ ಸಮುದಾಯದ ಮೂಲವನ್ನು ಹೇಳುತ್ತವೆ.

ಒಮ್ಮೆ ಶಿವನ ಒಡ್ಡೋಲಗದಲ್ಲಿ ಒಂದು ಕೈಯಿಂದ ಶಿವನಿಗೆ ನಮಸ್ಕರಿಸಿದ ಭೃಂಗಿಯನ್ನು ಪಾರ್ವತಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಭೃಂಗಿಯ ಮಜ್ಜೆ-ಮಾಂಸಗಳಿಗೆ ಪಾರ್ವತಿಯು ತಾನು ಕಾರಣಳೆಂದು ಹೇಳುತ್ತಾಳೆ. ಆಕೆ ಅವನ ಮಜ್ಜೆ-ಮಾಂಸಗಳನ್ನು ತಿರುಗಿ ಪಡೆದಾಗ ಅದರಿಂದಲೇ ಭೃಂಗಿ ಜೋತಾಡುತ್ತಾನೆ. ಭೃಂಗಿಯು ಶಿವನ ಸ್ತುತಿಗೈದಾಗ ತನ್ನ ತ್ರಿಶೂಲವನ್ನೇ ನೀಡುವ ಮೂಲಕ ಭಕ್ತ ರಕ್ಷಕನೆಂಬ ಬಿರುದನ್ನು ಶಿವ ಉಳಿಸಿಕೊಳ್ಳುತ್ತಾನೆ. ಪಾರ್ವತಿಗೆ ಇದರಿಂದ ಅಪಮಾನವಾಗಿ ನೆರೆದವರ ಹಾಸ್ಯಕ್ಕೆ ಗುರಿಯಾಗುತ್ತಾಳೆ ಕೋಪಗೊಂಡ ಪಾರ್ವತಿಯು ಮುಂದೆ ನಕ್ಕವರು ಕುರಿಗಳಾಗಿ ಹಿಂದೆ ನಕ್ಕವರು ಮೇಕೆಗಳಾಗಿ ಭೂಲೋಕದಲ್ಲಿ ಜನಿಸಿರೆಂದು ಶಾಪಕೊಡುತ್ತಾಳೆ.

ದೇವಾನುದೇವತೆಗಳು ಹಾಗೂ ಪಾರ್ವತಿ ಪರಮೇಶ್ವರರು ಕೆಲಕಾಲ ಕುರಿ-ಮೇಕೆಗಳನ್ನು ಕಾಯ್ದು ಬೇಸತ್ತು ಹೋಗುತ್ತಾರೆ. ಆಗ ಒಂದು ಗವಿಯಲ್ಲಿ ಅವನ್ನು ಕೂಡಿಹಾಕಿ ಬಾಗಿಲು ಮುಚ್ಚಿ ಬಾಗಿಲ ಕೊಂಡಿಗೆ ಪಾರ್ವತಿಯ ಮೂಗುತಿಯನ್ನು ಸಿಕ್ಕಿಸಿ ಶಿವಪಾರ್ವತಿಯರು ಕೈಲಾಸಕ್ಕೆ ಹಿಂತಿರುಗುತ್ತಾರೆ. ಕಾಲಾಂತರದಲ್ಲಿ ಮೂಗುತಿಯು ಮುತ್ತಲ ಮರವಾಗಿ ಬೆಳೆಯುತ್ತದೆ.

"ಈ ಜಾಗವು ಮಹಾಭಾರತದ ಕುರುಕ್ಷೇತ್ರ ಸಮೀಪವಿರುವ ಕುರುವೇಶ್ವರ ಹತ್ತಿರವಿತ್ತು. ಹಿಂದೆ ಈ ಪ್ರದೇಶವನ್ನು ಕುರುಪತಿಪುರವೆಂದು ಕರೆಯಲಾಗುತ್ತಿತ್ತು. ಅಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಆದಿಗೊಂಡ

ನೆಲಸಿದ್ದು ಆತನಿಗೆ ಆರು ಮಕ್ಕಳಿದ್ದರು. ಆರು ಜನ ಮಕ್ಕಳಲ್ಲಿ ಕೊನೆಯವನು ಉಂಡಾಡು ಪದ್ಮಣ್ಣ. ಸಹೋದರರ ಒತ್ತಾಯಕ್ಕೆ ಮಣಿದು ಹೊಲ ಹಸನು ಮಾಡುತ್ತಿರುವಾಗ ಗೊತ್ತಿಲ್ಲದೆ ಹುತ್ತದ ಮೇಲಿರುವ ಮುತ್ತಲ ಮರವನ್ನು ಕಡಿದೊಡನೆ ಅದರಡಿಯಿಂದ ನೂರಾರು ಕುರಿಗಳು ಹೊರಬಂದಾಗ ಆಶ್ಚರ್ಯ ಚಕಿತನಾಗಿ ಶಿವನನ್ನು ಪ್ರಾರ್ಥಿಸುತ್ತಾನೆ. ಶಿವ ಪ್ರತ್ಯಕ್ಷನಾಗಿ ಪದ್ಮಣ್ಣನಿಗೆ ಕುರಿ ಕಾಯುವ ವೃತ್ತಿಯನ್ನು ಕೈಗೊಳ್ಳಬೇಕೆಂದು ಹೇಳುವುದಲ್ಲದೆ ಆತನ ರಕ್ಷಣೆಗೆ ಬೀರೇಶನನ್ನು ಕಳುಹಿಸಿಕೊಡುತ್ತಾನೆ. ಹೀಗೆ ಪದ್ಮಣ್ಣನು ಕುರುಬ ಸಮುದಾಯದ ಮೂಲ ಪುರುಷನಾದರೆ ಆತನ ಕುರಿಗಳ ರಕ್ಷಣೆಗಾಗಿ ಅವತರಿಸಿದ ಬೀರೇಶ ಬೀರದೇವರಾಗಿ ಅಲೆಮಾರಿ ಕುರುಬರಿಂದ ಪೂಜಿಸಲ್ಪಡುತ್ತಾನೆ”[೧೫] ಎಂದು ಶಿವಾನಂದ ಗುಬ್ಬಣ್ಣವರು ಅಭಿಪ್ರಾಯ ಪಡುತ್ತಾರೆ.

ಅಲೆಮಾರಿ ಕುರುಬರ ಮೂಲವನ್ನು ಹುಡುಕುವ ಮತ್ತೊಂದು ಪೌರಾಣಿಕ ಹಿನ್ನೆಲೆ ನಮಗೆ ದೊರೆಯುತ್ತದೆ. ಶಿವನ ಆಜ್ಞೆಯಂತೆ ಪದ್ಮಣ್ಣ ಕುರಿಕಾಯುತ್ತ ಕುರಿ ಹಾಲು ಕಾಯಿಸಿ ಹೈನು ಮಾಡುವುದಕ್ಕೆಂದು ಬೆಂಕಿಯ ಹುಡುಕಾಟವನ್ನು ಆರಂಭಿಸುತ್ತಾನೆ. ಬೆಂಕಿಯ ಅವಶ್ಯಕತೆಯಿಂದ ಗುಡ್ಡದ ತುದಿಯ ಮೇಲೆ ನಿಂತು ಸುತ್ತಲೂ ದೃಷ್ಟಿ ಹರಿಸುತ್ತಾನೆ. “ಆತನಿಗೆ ದೂರದಲ್ಲಿ ಹೊಗೆ ಬರುತ್ತಿರುವುದನ್ನು ಕಂಡು ಅಲ್ಲಿಗೆ ಹೋಗಿನೋಡಲು ರಾಕ್ಷಸಿಯ ಬಂಧನದಲ್ಲಿದ್ದ ಕನ್ಯೆಯ ಪರಿಚಯವಾಗುತ್ತದೆ. ಆಗ ತನ್ನನ್ನು ಬಂಧ ಮುಕ್ತಳನ್ನಾಗಿ ಮಾಡಿದರೆ ಬೆಂಕಿಯನ್ನು ನೀಡುವುದಾಗಿ ಪದ್ಮಣ್ಣನಿಗೆ ಹೇಳುತ್ತಾಳೆ. ಆಕೆಯ ಬೇಡಿಕೆಯನ್ನು ಮನ್ನಿಸಿದ ಪದ್ಮಣ್ಣ ಆಕೆಯ ಅಪೇಕ್ಷೆಯಂತೆ ವಿವಾಹವೂ ಆಗುತ್ತಾನೆ. ವಿವಾಹ ಸಮಯದಲ್ಲಿ ಕಾಡಿನಲ್ಲಿ ಹತ್ತಿಯು ಲಭ್ಯವಿಲ್ಲದ್ದರಿಂದ ಉಣ್ಣೆಯ ಕಂಕಣ ಕಟ್ಟಿ ಲಗ್ನವಾಗುತ್ತದೆ. ಇವಳ ಸಂತತಿಯವರೇ ಮುಂದೆ ಉಣ್ಣೆಕಂಕಣ ಕುರುಬರು”[೧೬] ಎಂಬ ಪ್ರಧಾನಪಂಗಡವಾಗಿ ನಿರ್ಮಾಣಗೊಂಡು ನಂತರ ಕುರುಬರಲ್ಲಿ ಅಲೆಮಾರಿ ಕುರುಬರು ಎಂಬ ಒಳಪಂಗಡವು ರೂಪುಗೊಂಡಿರಬಹುದು.

ಪರಂಪರಾನುಗತವಾಗಿ ಇರುವ ಕತೆಗಳನ್ವಯ ಅಲೆಮಾರಿ ಕುರುಬರ ಹುಟ್ಟು ಕೂಡ ಶಿವ ಮತ್ತು ಪಾರ್ವತಿಯರ ಮೂಲವನ್ನೇ ಮುಟ್ಟುತ್ತದೆ.

ದಕ್ಷಿಣ ದೇಶದಲ್ಲಿ ಸಿಕ್ಕಿರುವ ಅತಿ ಪ್ರಾಚೀನ ನಾಣ್ಯಗಳೆಂದರೆ ಕುರುಬರವೇ ಎಂಬುದಾಗಿ ಸರ್. ಇಲಿಯಟ್ ಅಭಿಪ್ರಾಯ ಪಡುತ್ತಾರೆ. ಇವು ಕ್ರಿ.ಶ. ಮೂರನೇ ಶತಮಾನದ ನಾಣ್ಯಗಳು. ಪ್ರಾಚೀನ ಶಾಸನಗಳಲ್ಲಿ ‘ಕುರುಬರ ಹಟ್ಟಿ’, ‘ಕುರುಬರ ಹಳ್ಳಿ’, ಕುರುಬರ ವಿಷಯ ಮುಂತಾದ ಪ್ರಾದೇಶಿಕ ವಾಚಿಗಳು ಲಭ್ಯವಾಗುತ್ತದೆ. ದಕ್ಷಿಣ ಭಾರತದಲ್ಲಂತೂ ಅತ್ಯಂತ ಪ್ರಾಚೀನರೆಂದರೆ ಇವರೇ. ಇವರು ಮೊದಲು ರಾಜ್ಯಸ್ಥಾಪನೆ ಮಾಡಿದ ಪಟ್ಟಣ ಪುಲಾಲ. ಆ ರಾಜನ ಹೆಸರು ಕಾಮಂದಪ್ರಭು, ಆ ರಾಜ್ಯದ ಹೆಸರು ‘ಕುರುಬರ ನಾಡು’ ಮಲಬಾರು ಜಿಲ್ಲೆಯಲ್ಲಿ ಈಗಲೂ ಈ ಹೆಸರಿನ ಪ್ರದೇಶವಿರುವುದನ್ನು ಕಾಣಬಹುದಾಗಿದೆ.

ರೆವರೆಂಡೆ ಎಫ್. ಮೇಟ್ಸ್ ಅವರು ಕುರುಬರು ನೀಲಗಿರಿ ಪ್ರದೇಶಗಳಲ್ಲಿ ನೆಲಸಿದ ಬಗ್ಗೆ ಬರೆಯುತ್ತಾ ಒಂದು ಕಾಲದಲ್ಲಿ ಇದು ಕುರುಬರ ಪ್ರಬಲವಾದ ನೆಲೆಯಾಗಿತ್ತು. '...ಮೊಟ್ಟ ಎಂಬ ಹೆಸರಿನ ಹಳ್ಳಿಗಳೂ ಅವರ ಮನೆಗಳ ಅವಶೇಷಗಳೂ ಇಂದೂ ಕಾಣಬರುತ್ತವೆ. ಹಲವು ವರ್ಷಗಳ ಹಿಂದೆ ಹಿಂದಿನ ಕುರುಬ ಪಟ್ಟಣದ ಒಂದು ನಿವೇಶನವನ್ನು ನಾನು ಕಂಡು ಹಿಡಿದೆ"[೧೭] ಎಂದು ಇತ್ಯಾದಿಯಾಗಿ ಹೇಳುತ್ತಾರೆ. ಹೀಗೆ ಅಲೆಮಾರಿ ಕುರುಬರ ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಬಹುದಾಗಿದೆ.

ಗೊಂಡ ಕುರುಬರು

ಅಲೆಮಾರಿ ಆದಿವಾಸಿ ಅಥವಾ ಬುಡಕಟ್ಟು ಜನಾಂಗವಾದ ಗೊಂಡರ ಹುಟ್ಟಿನ ಬಗ್ಗೆ ಇರುವ ಪೌರಾಣಿಕ ಸಂಗತಿಗಳನ್ನು ಅವಲೋಕಿಸುವುದಾದರೆ ಹಲವಾರು ಪುರಾಣಕತೆಗಳು ಹುಟ್ಟಿಕೊಂಡಿವೆ.

ಒಮ್ಮೆ ಪಾರ್ವತಿಯ ಇಚ್ಛೆಯಂತೆ ಪರಮೇಶ್ವರ ಕೆಲವು ಜನರನ್ನು ಸೃಷ್ಟಿಮಾಡಿ ಅವರನ್ನು ಗೊಂಡರು ಎಂದ ಕರೆದ. ಆದರೆ ಆ ಜನರ ಮಲಿನತೆ ಹಾಗೂ ದುರ್ಗಂಧವನ್ನು ಸಹಿಸದ ಪರಮೇಶ್ವರ ಅವರನ್ನು ಧವಳಗಿರಿಯ ಒಂದು ಗವಿಯಲ್ಲಿ ಅಡಗಿಸಿಟ್ಟ. ಕೆಲಕಾಲ ನಂತರ ರಾಮಲಿಂಗ ಎಂಬ ಸಾಧು ಗವಿಯಲ್ಲಿದ್ದವರನ್ನೆಲ್ಲ ಹೊರತೆಗೆದು ಅವರಿಗೆ ಸ್ವಚ್ಛತೆಯನ್ನು ಬೋಧಿಸಿದ ಅವರ ಸಂತಾನವೇ ಇಂದಿನ ಗೊಂಡ ಜನ.

ಸೃಷ್ಟಿಯ ಆದಿಯಲ್ಲಿ ಸಮುದ್ರದ ಮಧ್ಯೆ ಸಿಂಗ ಮಾಲಿ ಎಂಬ ಎರಡು ಪಕ್ಷಿಗಳಿದ್ದವು. ಅವುಗಳಲ್ಲಿ ಒಂದು ಗಂಡು, ಮತ್ತೊಂದು ಹೆಣ್ಣು, ಹೆಣ್ಣ ಪಕ್ಷಿಯು ಇಟ್ಟ ಎರಡು ಮೊಟ್ಟೆಗಳಿಂದ ಒಬ್ಬ ಹುಡುಗ ಮತ್ತು ಓರ್ವ ಹುಡುಗಿ ಜನಿಸಿದರು. ಹುಡುಗನ ಹೆಸರು ಆದಿರಾವಣ ಪರಿಯಲ್ ಹುಡುಗಿಯ ಹೆಸರು ಸುಕುಮಾದೇವಿ ವೀಲರ್, ಸಮುದ್ರದೇವತೆ ಇವರಿಬ್ಬರನ್ನು ತೀರಕ್ಕೆ ಹಾಕಿದಳು, ಇವರಿಬ್ಬರೂ ಸ್ನಾನ ಮಾಡುತ್ತಿದ್ದ ಬಳಿ 'ಪೊಕರಾ' ಎಂಬ ಗಿಡಮೂಲಿಕೆ ಬೆಳೆದಿತ್ತು. ಆದಿರಾವಣ ಸುಕುಮಾದೇವಿಗೆ ಅದನ್ನು ತಿನ್ನ ಕೂಡದೆಂದು ತಿಳಿಸಿದ್ದ, ಆತ ಬೇಟೆಗೆ ಹೋಗಿದ್ದ ವೇಳೆ ಸುಕುಮಾದೇವಿ ಕುತೂಹಲಕ್ಕಾಗಿ ಈ ಮೂಲಿಕೆಗಳನ್ನು ತಿಂದಳು, ಇದರಿಂದ ಆಕೆಯು ಗರ್ಭ ಧರಿಸಿದಳು. ವಿಷಯ ತಿಳಿದ ಆದಿರಾವಣ ಭವಿಷ್ಯವನ್ನು ಕೇಳಲಾಗಿ, ಆಕೆಯ ಬಸಿರಿನಿಂದ ದೇವತೆಗಳ ಸೃಷ್ಟಿಯಾಗುವುದೆಂದು ತಿಳಿದು ಬಂದಿತು. ಅನಂತರ ಆಕೆಯಲ್ಲಿ ೨೬ ವಿಶ್ವದೇವತೆಗಳು ೧೮ ಕೋಪದೇವತೆಗಳು, ೧೪ ಗೊಂಡಿ ದೇವತೆಗಳು ಜನಿಸಿದರು. ಈ ಗೊಂಡಿ ದೇವತೆಗಳಿಂದ ಗೊಂಡರ ವಂಶ ಬೆಳೆಯಿತೆಂದು ಕಥೆಯಿದೆ. ಈ ವೃತ್ತಾಂತವು ಬೈಬಲ್ಲಿನ ಹಳೆಯ ಒಡಂಬಡಿಕೆಯ 'ಆದಮ್ ಮತ್ತು 'ಈವ್' ರ ಪ್ರಕರಣವನ್ನು ಹೋಲುತ್ತದೆ.

"ಸ್ವರ್ಗದಲ್ಲಿದ್ದ ರಾಯೀಲಿಂಗ ಎಂಬಾತ ಭೋಜ ಮತ್ತು ತಾಲಕೋ ಎಂಬ ರಾಜರಾಣಿಯರಲ್ಲಿ ಜನ್ಮತಾಳಿ ಗೊಂಡ ಜಾತಿಯ ಉತ್ಪತ್ತಿಗೆ ಕಾರಣರಾದರೆನ್ನಲಾಗಿದೆ"[೧೮] ಎಂದು ಹಾ.ಮಾ. ನಾಯಕ್ ಅವರು ಅಭಿಪ್ರಾಯ ಪಡುತ್ತಾರೆ.

ಮುದ್ದುಗೊಂಡ ಮುದ್ದಮ್ಮಳಿಂದ ಗೊಂಡ ಜನಾಂಗ ಹುಟ್ಟಿತು, ಆದಿಗೊಂಡನು ಮುದ್ದು ಗೊಂಡನ ಮಗ. ಆದಿಗೊಂಡನ ಹೆಂಡತಿ ಆದಮ್ಮ, ಅವರ ಪುತ್ರರಾದ ಅಮರಗೊಂಡ, ಶಿವಗೊಂಡ. ಬೆಟ್ಟದ ಬೀರುಗೊಂಡ, ಬೀರುಗೊಂಡ, ಮೂರುಗೊಂಡ, ಮಾರಡಿ ಮುದ್ದುಗೊಂಡ ಇವರ ನಂತರ ಹುಟ್ಟಿದವನೇ ಉಂಡಾಡಿ ಪದ್ಮಗೊಂಡ ಇವರ ವಂಶಜರೇ ಇಂದಿನ ಗೊಂಡರು ಎಂದು ಹಾಲುಮತ ಪುರಾಣ ಹೇಳುತ್ತದೆ.

ಜಗತ್ತಿನ ಸೃಷ್ಟಿಯ ಪ್ರಾರಂಭದ ಹೊತ್ತಿಗೆ ಅಲ್ಲಿ ಮಾನವರಾಗಲಿ ದಾನವರಾಗಲಿ ಇರಲಿಲ್ಲ. ಬಾರಾಪೆನ (ವೀರ ಅಥವಾ ಬೀರದೇವರು ಆಗಿರಬಹುದು) ಭೂಮಿಯ ಮೇಲೆ ಬಂದು ಭೂಮಂಡಲವನ್ನೆಲ್ಲಾ ಸುತ್ತಾಡಿದ. ಆದರೆ ಆತನಿಗೆ ಯಾವುದೇ ಮಾನವರಾಗಲಿ, ಪ್ರಾಣಿಗಳಾಗಲಿ ಕಾಣಲಿಲ್ಲ. ಕೊನೆಗೆ ಗುರಿಘಟ್ಟ ಪ್ರದೇಶದಲ್ಲಿ ವಾಸಿಸಲು ಆರಂಭಿಸಿದರು. ಆ ಅರಣ್ಯದಲ್ಲಿ ಒಂದು ಕಾಡು ಆಕಳು ಇತ್ತು. ಆತ ಆ ಆಕಳನ್ನು ತನ್ನ ಬಳಿಯಲ್ಲಿ ಇಟ್ಟುಕೊಂಡು ಆಕಳಿಗೆ ಕರುವು ಇಲ್ಲದಿದ್ದರೂ ಅದರ ಕೆಚ್ಚಲಿನಿಂದ ಹಾಲು ಬರುತ್ತಿತ್ತು. ಹೀಗೆ ಬಾರಾಪೆನ ಅದನ್ನು ಸಲಹುತ್ತಿದ್ದನು.

ಒಂದು ದಿನ ಆಕಳಿಗೆ ಎರಡು ಮೊಣಕಾಲುಗಳು ಒಂದು ಬಂಡೆಗಲ್ಲಿಗೆ ಜಜ್ಜಲ್ಪಟ್ಟು ಗಾಯಗೊಂಡವು. ಆಗ ಬಾರಾಪೆನನು ಪ್ರತಿನಿತ್ಯ ಆಕಳಿನ ಕಾಲುಗಳನ್ನು ತೊಳೆದು ಗಾಯಗಳಿಗೆ ಔಷಧ (ಗಿಡಮೂಲಿಕೆ) ಹಚ್ಚುತ್ತಿದ್ದ ಹೀಗಿರಲು ಒಂದು ದಿನ ಆಕಳುವಿನ ಕಾಲುಗಳೆರಡನ್ನು ಬಾರಾಪೆನನು ತೊಳೆಯುತ್ತಿರುವಾಗ ಬಲಗಾಲಿನ ಗಾಯದಿಂದ ಒಬ್ಬ ಹುಡುಗ ಮತ್ತು ಎಡಗಾಲಿನ ಗಾಯದಿಂದ ಒಬ್ಬಳು ಹುಡುಗಿ ಹೊರಬಂದರು. ಬಾರಾಪೆನನು ಅವರಿಬ್ಬರನ್ನೂ ಆಕಳಿನ ಹಾಲಿನಿಂದ ಸಲಹತೊಡಗಿದನು.

ಮಕ್ಕಳು ದೊಡ್ಡವರಾದೊಡನೆಯೇ ಅವರಿಬ್ಬರೂ ವಿವಾಹ ಬಂಧನಕ್ಕೊಳಗಾದರು. ಆಗ ಬಾರಾಪೆನನು ಅವರಿಬ್ಬರಿಗೆ ಹೀಗೆ ಹೇಳುತ್ತಾನೆ. ಇಂದಿನಿಂದ ತಾವು ನನ್ನನ್ನು ದೇವರೆಂದು ಆರಾಧಿಸಬೇಕು ಮತ್ತು ತಾವು ಆಕಳ (ಗೋವಿನ) ಕಾಲಿನ ಗಾಯದಿಂದಾಗಿ ಹುಟ್ಟಿದ್ದಕ್ಕಾಗಿ 'ಗೊಂಡ' ಎಂದು ಕರೆಯಲ್ಪಡುತ್ತೀರಿ. ಇವರಿಂದ ಗೊಂಡರ ಸಮುದಾಯವು ಸೃಷ್ಟಿಯಾಯಿತೆಂದು ಹೇಳಲಾಗುತ್ತದೆ.

ಒಂದಾನೊಂದು ಕಾಲದಲ್ಲಿ ಆಕಾಶ ಭೂಮಿಗೆ ತಗಲುತ್ತಿತ್ತು. ಗೊಂಡರ ವೃದ್ಧ ಮಹಿಳೆಯೊಬ್ಬಳೆ ಮನೆಗುಡಿಸುವಾಗ ಆಕಾಶ ಅವಳ ತಲೆ ತಾಗುತ್ತಿದ್ದು ಕಸ ಗುಡಿಸಲು ತೊಂದರೆಯಾಗುತ್ತಿತ್ತು. ಮುದುಕಿ ತನ್ನ ತಲೆಯಿಂದ ಆಕಾಶವನ್ನು ದಬ್ಬಿದಾಗ ಆಕಾಶ ಭೂಮಿಯಿಂದ ಬೇರ್ಪಟ್ಟಿತೆಂದೂ ಗೊಂಡರ ನಂಬಿಕೆಯಿದೆ ಎಂದು ಜೇಮ್ಸ್ ಹೇಸ್ಟಿಂಗ್ಸ್ ಹೇಳುತ್ತಾನೆ.

ಒಂದಾನೊಂದು ಕಾಲದಲ್ಲಿ ಆಕಾಶಭೂಮಿಗೆ ತಗಲುತ್ತಿತ್ತು. ಗೊಂಡರ ವೃದ್ಧ ಮಹಿಳೆಯೊಬ್ಬಳು ತನ್ನ ಮನೆ ಗುಡಿಸುವಾಗ ಆಕಾಶ ಅವಳ ತಲೆಗೆ ತಾಗಿ ಕಸವನ್ನು ಗುಡಿಸಲು ತೊಂದರೆ ಕೊಡುತ್ತಿರುತ್ತದೆ.

ಗೊಂಡರ ಮುದುಕಿಗೆ ಸಿಟ್ಟು ಬಂದು ತನ್ನ ಕೈಯಲ್ಲಿದ್ದ ಕಸಬರಿಗೆಯಿಂದ ಆಕಾಶಕ್ಕೆ ಹೊಡೆದಾಗ ಅದು ಭೂಮಿಯಿಂದ ಬೇರ್ಪಟ್ಟು ದೂರವಾಯಿತೆಂದು ಬೀದರ್ ಜಿಲ್ಲೆಯಲ್ಲಿ ಗೊಂಡರು ಕಥೆ ಹೇಳುತ್ತಾರೆ.

ಆದಮ್ಮಳು ಗೊಂಡ ಕುರುಬರ ಮೂಲತಾಯಿ. ಅವಳು ಚಂದ್ರನಲ್ಲಿದ್ದಾಳೆಂದೂ, ಪ್ರತಿಹುಣ್ಣಿಮೆ ರಾತ್ರಿ ಗೊಂಡರಿಗೆ ದರುಶನ ಕೊಡುವವಳೆಂದೂ ಗೊಂಡರು ನಂಬುವರು. ಗೊಂಡ ಕುರುಬರಾದ ಅವಳ ಮಕ್ಕಳಿಗೆ ತಮ್ಮ ಕಾಯಕದ ಪ್ರಜ್ಞೆ ಮೂಡಿಸುತ್ತಾಳೆಂದು ಹೇಳುತ್ತಾರೆ. ಎಳೆಯ ಮಕ್ಕಳಿಗೆ ಹಿರಿಯ ಗೊಂಡರು ಚಂದ್ರನಲ್ಲಿರುವ ಆದಮ್ಮಳನ್ನು ಹುಣ್ಣಿಮೆಯ ರಾತ್ರಿ ತೋರಿಸುತ್ತ, ಅಗೋ, ಚಂದ್ರನ ಮಧ್ಯದಲ್ಲಿ ಬೇವಿನ ಮರದ ಕೆಳಗೆ ಆದಮ್ಮಳು ಕುರಿಯ ಉಣ್ಣೆಯಿಂದ ನೂಲುತ್ತಾ ಕುಳಿತಿರುವಳು, ಅವಳ ಅಕ್ಕಪಕ್ಕದಲ್ಲಿ ರಾಸಿರಾಸಿಯಾಗಿ ಕಾಣುವ ಉಣ್ಣೆಯನ್ನು ತೋರಿಸುತ್ತಾ ತಮ್ಮ ಪೂರ್ವಜರ ಕಾಯಕ ಪ್ರಜ್ಞೆಯನ್ನು ನೆನೆಯುವರು.

ಗೊಂಡರ ಹುಟ್ಟಿನ ಬಗ್ಗೆ ಮತ್ತೊಂದು ಪ್ರಸಿದ್ಧ ಪೌರಾಣಿಕ ಕತೆಯೊಂದು ಹೀಗಿದೆ. “ಮಹಾಭಾರತದಲ್ಲಿ ಪಾಂಡುಸುತ ಭೀಮಸೇನನು ವನವಾಸದಲ್ಲಿದ್ದಾಗ ಗೊಂಡಾರಣ್ಯದಲ್ಲಿ ಹಿಡಿಂಬೆಯೆಂಬ ರಾಕ್ಷಸಿಯನ್ನು ವಿವಾಹವಾಗಿದ್ದನು. ಅವನಿಂದ ಅವಳಲ್ಲಿ ಕ್ರಮವಾಗಿ ಐವರು ಮಕ್ಕಳು ಜನಿಸಿದರು. ಇದು ಅಪಹಾಸ್ಯಕ್ಕೆಡೆ ಮಾಡುವುದೆಂದು ತನ್ನ ಮಕ್ಕಳನ್ನು ಪಶುಪತಿಯ ಹೆಸರಿನಲ್ಲಿ ಬಿಟ್ಟು ಪರಾರಿಯಾದಳು. ಇಂತಹ ಅಸಹಾಯಕ ಸ್ಥಿತಿಯಲ್ಲಿ ಮಹಾದೇವನು ಕರುಣೆ ತೋರಿ ಮಕ್ಕಳ ಪಾಲನೆಯನ್ನು ಪಾರ್ವತಿಗೆ ಒಪ್ಪಿಸುವನು. ಅದರಂತೆ ಪಾರ್ವತಿಯು ಕೇವಲ ಎಡಮೊಲೆಯ ಹಾಲು ಉಣಿಸಲಾರಂಭಿಸಿದಳು. ರಕ್ಕಸಿಯ ಸುತರು ಮೊಲೆಯ ಹಾಲಿನೊಂದಿಗೆ ಪಾರ್ವತಿಯ ಮಾಂಸ ರಕ್ತವನ್ನು ಹೀರಲಾರಂಭಿಸಿದರು. ಇದರಿಂದ ಪಾರ್ವತಿಯು ದಿನೇ ದಿನೇ ಒಣಗಲಾರಂಭಿಸಿದಳು. ಇದನ್ನರಿತ ಮಹಾದೇವನು ಪರ್ವತದ ಗುಹೆಯೊಂದರಲ್ಲಿರುವ ‘ಪೆಂಡಲಿಂಗು’ವಿಗೆ ಆ ಕಾರ್ಯ ವಹಿಸುವನು. ಆತನೊಬ್ಬ ಪ್ರಖ್ಯಾತ ಋಷಿಯಾಗಿದ್ದನು. ಅಂದಿನಿಂದ ಪೆಡಲಿಂಗನು ಮಕ್ಕಳಿಗೆ ಗುರುವಾಗಿ ಅವರ ಪೂರ್ವ ವೃತ್ತಾಂತವನ್ನೆಲ್ಲ ತಿಳಿಸಿ ತಮ್ಮ ಪೂರ್ವಜರಿಗೆ ಪೂಜಿಸಬೇಕೆಂದು ಗುರೂಪದೇಶ ಮಾಡುವನು. ಹಾಗೆಯೇ ಹಿರಿಯ ನಾಲ್ಕು ಸಹೋದರರು ಗೊಂಡ ಜನಾಂಗದ ನಾಲ್ಕು ಬೆಡಗುಗಳ ಮೂಲ ಪುರುಷರಾಗುವರು”[೯] ಎಂದು ಸೈಯದ್ ಸಿರಾಜ್ ಉಲ್ ಹಸನ್ ತಿಳಿಸುತ್ತಾರೆ.

ಹಾಲುಮತ ಪುರಾಣದಲ್ಲಿ ಗೊಂಡರನ್ನು ಕುರಿತು ಶಕ್ರ (ಇಂದ್ರ) ಶೂರನು ಕಾಂತಾರದಲ್ಲಿ (ಅಡವಿ) ನೆಲಸಹತ್ತಿರಲು, ಅಲ್ಲಿರುವ ಹಿಡಂಬಿ ಎಂಬ ಅಸುರೆಯನ್ನು ವಿವಾಹವಾದನು. ಆಗ ಈತನಿಗೆ ಧನಗರವೆಂಬ ನಾಮ ಪ್ರಾಪ್ತವಾಯಿತು. ಈ ಹೆಂಡತಿಯಿಂದ ಹದಿನಾರು ಕುಲ (ಗೋತ್ರಗಳು) ಉದ್ಭವಗೊಂಡವು ಎಂದು ಎಸ್.ಬಿ. ತೋಂಟಾಪುರ ಹೇಳುತ್ತಾರೆ. ಹೀಗೆ ಗೊಂಡರ ಪೌರಾಣಿಕ ಸಂಗತಿಗಳು ಹೆಣೆದುಕೊಂಡಿದ್ದರೆ, ಚಾರಿತ್ರಿಕತೆಯು ಮಹತ್ತರವಾಗಿಯೇ ಇರುವುದನ್ನು ಕಾಣಬಹುದಾಗಿದೆ.

ಗೊಂಡರು ಪ್ರಾರಂಭದಲ್ಲಿ ಕಾಡಾಡಿಗಳಾಗಿದ್ದರು. ಬೇಟೆಯು ಅವರ ಜೀವನೋಪಾಯವಾಗಿತ್ತು. ಕಾಲಾಂತರದಲ್ಲಿ ಬೇಟೆಯ ಪ್ರಾಣಿಗಳನ್ನು ಪಳಗಿಸುವ ಕಲೆಯನ್ನು ತಿಳಿದು ಪಶುಪಾಲಕರಾದರು. ಮೂಲದಲ್ಲಿ ಅಹಿಂಸಾ ಪ್ರಾಣಿಗಳಾದ ಕುರಿ, ಆಡು, ದನಗಳ ಪೋಷಕರು ಮತ್ತು ಭಕ್ಷಕರೂ ಆಗಿದ್ದರು. ಗೊಂಡರು ಆರ್ಯ ಪೂರ್ವಕಾಲದ ಜನರು. ಅವರು ಗಂಗಾ, ಯಮುನಾ, ಸರಸ್ವತಿ, ಪಂಜಾಬ, ಸಿಂಧೂನದಿ ಬಯಲುಗಳಲ್ಲಿ ಹರಡಿಕೊಂಡಿರುವುದಕ್ಕೆ ಸಿಂಧೂಕೊಳ್ಳದ ಸಂಸ್ಕೃತಿ, ಹರಪ್ಪ ಮೊಹೆಂಜೋದಾರೋನಲ್ಲಿ ದೊರೆಯುವ ಹಲವಾರು ಪಳಯುಳಿಕೆಗಳು ಸಾಕ್ಷಿಯಾಗಿರುವವು.

ನರ್ಮದಾ, ಗೋದಾವರಿ, ಕೃಷ್ಣಾ, ಕಾವೇರಿ, ಕನ್ಯಾಕುಮಾರಿಯವರೆಗೂ ಹಬ್ಬಿದವರು. ಆರ್ಯರ ಆಗಮನದ ಮುನ್ನ ದಕ್ಷಿಣ ಭಾರತದಲ್ಲಿ ಯಾವ ಜನಾಂಗವೂ ಇರಲಿಲ್ಲವೆಂದೂ ಅರ್ಥವಲ್ಲ. ದ್ರಾವಿಡರು ಎಂದು ಸ್ಥೂಲವಾಗಿ ಹೇಳುವ ಜನಾಂಗದ ದೊಡ್ಡ ಶಾಖೆಯಿದು. ಗಂಗಾ ಕಾವೇರಿಗಳ ನಡುವಿನ ನಾಡಲ್ಲಿರುವ ಆರ್ಯ ಪೂರ್ವ ಜನಾಂಗವೆಂದು ಹಲವರ ಅಭಿಪ್ರಾಯ. ಹೋಮರನೆಂಬ ಕವಿಯು ಕುರುಬ ಎಂಬ ಶಬ್ದವನ್ನು 'ರಾಜ'ನೆಂಬ ಅರ್ಥದಲ್ಲಿ ಉಪಯೋಗಿಸಿದ್ದಾನೆ. ದನಗಾರಿಕೆ ಹಟ್ಟಿಗಾರಿಕೆಯಿಂದ ಜೀವಿಸುತ್ತಿದ್ದ ಪ್ರಾಚೀನ ಜನಾಂಗಗಳಿಂದಲೇ ಧೀರ ವೀರರು ಹುಟ್ಟಿ ರಾಜ್ಯಗಳನ್ನು ಕಟ್ಟಿದ ಉದಾಹರಣೆಗಳು ಸಾಕಷ್ಟಿವೆ. ತಮಿಳು ಕಾವ್ಯಗಳಲ್ಲಿ ಹಟ್ಟಿಕಾರರಿಗೆ 'ಕುರುನೀಲಮನ್ನೆ'ಯರು ಎಂದು ವರ್ಣಿಸಿರುವುದುಂಟು. ಹಾಗೆಂದರೆ ಚಿಕ್ಕಪುಟ್ಟ ರಾಜರೆಂದರ್ಥ.

ಮಧ್ಯ ಭಾರತದ ಗೊಂಡ್ವಾನ ಪ್ರಾಂತದಿಂದ ಗೊಂಡರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಸ್ಥಾಪಿಸಿದ್ದನ್ನು ಕಾಣಬಹುದಾಗಿದೆ. ಛೋಟಾ ನಾಗಪುರ ಪ್ರಾಂತ್ಯದಲ್ಲಿ ನೆಲಸಿರುವ ಇವರು ಕುರುಬರಾಗಿದ್ದು 'ರಾಮನಿಗೆ ವಾನರರೆಂಬ ಹೆಸರಿನಿಂದ ನೆರವಾದವರು ನಾವೇ' ಎಂದೂ ಹೇಳುತ್ತಾರೆ. ಯಾದವರೂ, ಯಾದವರೊಳಗಿನ ಅಂಧಕ ವೃಷ್ಣಿಗಳು, ದ್ರಾವಿಡರು, ಗೌಳರು, ಗೊಂಡರೆಂದು ಹೇಳಲಾಗಿದೆ. ಅಂಧರು, ಆಂಧ್ರರೂ ಗೊಂಡರೇ ಆಗಿದ್ದರು. ಪ್ರಾಚೀನ ಕಾಲದಲ್ಲಿ ರಟ್ಟಪಾಡಿ, ಗಂಗವಾಡಿ, ನೊಳಂಬವಾಡಿ ಇವು ದೇಶವಾಚಿಕ ಗಳಾಗಿದ್ದವು. ೫೦ರಿಂದ ೧೦೦ರವರೆಗಿನ ಹಳ್ಳಿಗಳ ವಿಭಾಗಕ್ಕೆ ಗೊಂಡ ಜನರು 'ಪಟ್ಟಿ' ಎಂದು ಹೇಳುವರು.

ಹತ್ತಿ ಮತ್ತು ಉಣ್ಣೆಕಂಕಣ ಕುರುಬರು

ಕುರುಬ ಸಮುದಾಯದಲ್ಲಿ ಉಣ್ಣೆಕಂಕಣ ಮತ್ತು ಹತ್ತಿಕಂಕಣ ಎಂಬ ಎರಡು ಒಳಪಂಗಡಗಳಿವೆ. ಕಂಕಣ ಭೇದದ ಹೊರತಾಗಿ ಮತ್ತೇನೂ ವ್ಯತ್ಯಾಸವಿಲ್ಲದಿದ್ದರೂ ಕೂಡ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಮಹತ್ವ ಪಡೆದಿದೆ. ದಕ್ಷಿಣ ಕರ್ನಾಟಕದಲ್ಲಿ ಇದು ಇದ್ದರೂ ಅಷ್ಟೊಂದು ಪ್ರಾಮುಖ್ಯತೆ ನೀಡಿದಂತೆ ಕಾಣುತ್ತಿಲ್ಲ. ಈ ಎರಡು ಪಂಗಡದವರು ನೂರಾರು ವರ್ಷಗಳ ಹಿಂದೆ ಅಣ್ಣ ತಮ್ಮಂದಿರಾಗಿದ್ದರೆಂಬ ಭಾವನಾತ್ಮಕ ಕಾರಣ ಮುಂದೆ ಪರಸ್ಪರರ ಮಧ್ಯೆ ವೈವಾಹಿಕ ಸಂಬಂಧವು ನಿಷಿದ್ಧವಾಗಿತ್ತು.

ಉಣ್ಣೆ ಮತ್ತು ಹತ್ತಿಕಂಕಣ ಕುರುಬರ ಪೌರಾಣಿಕ ಹಿನ್ನೆಲೆಯನ್ನು ಗಮನಿಸಿದರೆ ಅನೇಕ ದಂತ ಕಥೆಗಳು, ಐತಿಹ್ಯಗಳು ಬೆಳಕಿಗೆ ಬರುತ್ತವೆ.

"ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರು ಒಡ್ಡೋಲಗದಲ್ಲಿದ್ದಾಗ ಭೃಂಗಿಯು ತನ್ನ ಮೂರು ಕಾಲುಗಳಿಂದ ನರ್ತನ ಮಾಡಿದ್ದನ್ನು ಕಂಡು ದೇವತೆಗಳು ಪರಿಹಾಸ್ಯದಿಂದ ನಕ್ಕರು. ಆಗ ಭೃಂಗಿ ಕೋಪಗೊಂಡು "ನೀವು ಭೂಲೋಕದಲ್ಲಿ ಕುರಿಗಳಾಗಿ ಹುಟ್ಟಿರಿ" ಎಂದು ಶಾಪ ನೀಡುತ್ತಾನೆ. ಆಗ ಶಾಪಗ್ರಸ್ತ ದೇವತೆಗಳು ಭೂಲೋಕದ ಹುತ್ತವೊಂದರಲ್ಲಿ ಕುರಿಗಳಾಗಿ ಅಡಗಿ ಕುಳಿತರಂತೆ"[೨೦].

ಕಲಿಯುಗದಾದಿಯಲ್ಲಿ ಕೊಲ್ಲಾಪುರದಲ್ಲಿದ್ದ 'ಮಾಯಿ' ಎಂಬ ದೇವತೆಯು ತನ್ನ ಮಹಿಮೆಯಿಂದ ನವಕೋಟಿ ಸಿದ್ಧರನ್ನು ಸೆರೆಯಲ್ಲಿಟ್ಟುಕೊಂಡಿದ್ದಳು. ಇದನ್ನು ಕೇಳಿ ಉಗ್ರಮೂರ್ತಿಗೆ ಆಗ್ರಹವುಂಟಾಗಿ ರೇವಣಸಿದ್ಧನೆಂಬ ಅಭಿದಾನದಿಂದ ಬಂದು ಆ ಕ್ಷುದ್ರ ದೇವತೆಯನ್ನು ನಿಗ್ರಹಿಸಿ ನವಕೋಟಿ ಸಿದ್ಧರನ್ನು ಉದ್ಧರಿಸುತ್ತಾನೆ. ಇಷ್ಟು ಜನರನ್ನು ಹೇಗೆ ರಕ್ಷಿಸಬೇಕೆಂದು ಅರಿಯದೆ ಅವರಲ್ಲಿ ಅರ್ಧ ಜನರನ್ನು ತಮ್ಮ (ರೇವಣಸಿದ್ಧ) ಹೆಸರು ಹೇಳಿಕೊಂಡು ಭಿಕ್ಷೆಯಿಂದ ಜೀವಿಸಿರೆಂದೂ, ಉಳಿದರ್ಧ ಜನರನ್ನು ಕುರಿಗಳನ್ನಾಗಿ ಮಾಡಿ ವಿಮೋಚನೆ ಸಿಗುವವರೆಗೆ ಒಂದು ಹುತ್ತದಲ್ಲಿರಿ ಎಂದು ಹೇಳಿ ಹೋದನು.

ಒಂದು ಮತ್ತು ಎರಡನೇ ಕಥೆಗಳಿಂದ ಉದ್ಭವಿಸಿದ ಕುರಿಗಳು ಇರುವ ಹುತ್ತವು ಕುರುಬರ ಮೂಲ ಪುರುಷನಾದ ಆದಿಗೊಂಡನಿಗೆ ಸೇರಿದ ಹೊಲದಲ್ಲಿತ್ತು. ಈತನಿಗೆ ಶಿವಾಂಶ ಸಂಭೂತನಾದ ಪದ್ಮಣ್ಣ (ಪದ್ಮಗೊಂಡ) ಎಂಬ ಕಿರಿಯ ಮಗನಿದ್ದನು. ಇನ್ನುಳಿದ ಅಣ್ಣಂದಿರಂತೆ ಮೈಮುರಿದು ದುಡಿಯದೆ ಎರಡೂ ಹೊತ್ತು ಸುಖವಾಗಿ ಉಂಡು ತಿಂದು ತಿರುಗುತ್ತಿದ್ದುದರಿಂದ ಇವನಿಗೆ 'ಉಂಡಾಡು ಪದ್ಮಣ್ಣ' ಎಂಬ ಅಡ್ಡ ಹೆಸರೂ ಬಂತು. ಇವನ ಮೈಗಳ್ಳತನಕ್ಕಾಗಿ ಉಳಿದ ಸಹೋದರರು ಜಗಳ ಕಾದು ತಾವು ಯಾವ ಕೆಲಸವನ್ನೂ ಮಾಡಲಾರೆವು ಎಂದು ತಂದೆಯ ಮುಂದೆ ಹಟ ಹಿಡಿದರು. ವಿಧಿಯಿಲ್ಲದೆ ತಂದೆಯು ಮರುದಿನ ಪದ್ಮಣ್ಣನನ್ನು ಕರೆದು ಮುದ್ದಿನಿಂದ ಅಣ್ಣರೊಂದಿಗೆ ಹೊಲದ ಕೆಲಸಕ್ಕೆ ಕಳುಹಿಸಿದನು.

ಪದ್ಮಣ್ಣನು ಹೊಲದ ಕೆಲಸಕ್ಕೆ ಬಂದರೆ ಆತನಿಗೆ ಯಾವ ಕೆಲಸವೂ ಗೊತ್ತಿರಲಿಲ್ಲ. ಆದ್ದರಿಂದ ಅವನಿಗೆ ಹೊಲದಲ್ಲಿದ್ದ ಹುತ್ತವನ್ನು ಅಗೆದು ಸ್ವಚ್ಛಗೊಳಿಸುವಂತೆ ಹೇಳಿದರು. ದೇವತೆಗಳು ಕುರಿಗಳಾಗಿ ಅಡಗಿ ಕುಳಿತ ಹುತ್ತವೇ ಅದಾಗಿತ್ತು. ಪದ್ಮಗೊಂಡನ ಬೇಸರ ಮತ್ತು ಮೈಗಳ್ಳತನದಿಂದಲೇ ಹುತ್ತವನ್ನು ಅಗೆಯ ತೊಡಗಿದನು. ಒಂದು ಕಲ್ಲು ಚಪ್ಪಡಿಯು ಅಡ್ಡಬಂದಾಗ ಅದನ್ನು ತೆಗೆದು ಪಕ್ಕಕ್ಕೆ ಸರಿಸುವಷ್ಟರಲ್ಲಿ ಅದರೊಳಗಿನಿಂದ ಆರು ಬಣ್ಣದ ಕುರಿಗಳು ತೂರಿ ಬಂದವು. ಇದನ್ನು ಕಂಡ ಪದ್ಮಣ್ಣ ದಿಗ್ಭ್ರಾಂತನಾಗಿ ಕಾಡಿನ ಕಡೆಗೆ ಓಡ ತೊಡಗುತ್ತಾನೆ. ಕುರಿಗಳು ಅವನನ್ನೇ ಹಿಂಬಾಲಿಸ ತೊಡಗಿದವು. ಓಡಿ ಓಡಿ ದಣಿದು ಒಂದೆಡೆ ನಿಂತನು. ಆ ಕುರಿಗಳು ಅವನನ್ನು ಸುತ್ತುವರೆದು "ನಮ್ಮನ್ನು ರಕ್ಷಿಸು, ನಮ್ಮನ್ನು

ರಕ್ಷಿಸು' ಎಂದು ಹೇಳುವ ರೀತಿಯಲ್ಲಿ ಪದ್ಮಣ್ಣನನ್ನು ನೋಡುತ್ತ ನಿಂತವು. ಆಗ ಪದ್ಮಣ್ಣನು ದಿಕ್ಕು ತೋಚದೆ ಪರಮೇಶ್ವರನನ್ನು ಪ್ರಾರ್ಥಿಸುತ್ತಾನೆ. ಆಗ ಪರಮೇಶ್ವರ (ಬೀರಪ್ಪ) ಪ್ರತ್ಯಕ್ಷನಾಗಿ "ಭೃಂಗಿಯ ಶಾಪದಿಂದ ದೇವತೆಗಳು ಕುರಿಗಳಾಗಿರುವರೆಂದೂ, ಅವರನ್ನು ಕಾಪಾಡುವುದಕ್ಕಾಗಿಯೇ ನನ್ನ ಅಂಶದಿಂದ ನೀನು ಹುಟ್ಟಿರುವೆಯೆಂದೂ, ಆದ್ದರಿಂದ ನೀನು ಕುರಿಗಳನ್ನು ಕಾಯ್ದುಕೊಂಡು ಸುಖವಾಗಿ ಬಾಳು" ಎಂದು ಹರಸಿ ಅಂತರ್ಧಾನನಾದನು.

ಹೀಗೆ ಪದ್ಮಣ್ಣ ಕುರಿಗಳನ್ನು ಮೇಯಿಸುತ್ತಿದ್ದಾಗ ದೂರದಿಂದ ಹೊಗೆ ಬರುತ್ತಿರುವುದನ್ನು ಕಂಡು ಕುತೂಹಲಭರಿತನಾಗಿ ಅಲ್ಲಿಗೆ ಹೋಗಿ ನೋಡಿದರೆ ಗುಹೆಯಲ್ಲಿ ಓರ್ವ ಸುಂದರ ಕನ್ಯೆಯು ವಾಸವಾಗಿದ್ದಳು. ಆಕೆ ತನ್ನನ್ನು ಒಬ್ಬ ರಾಕ್ಷಸನು ಅಪಹರಿಸಿಕೊಂಡು ಬಂದಿದ್ದಾನೆಂದೂ, ಬಂಧನ ಬಿಡಿಸಿ ನನ್ನನ್ನು ವಿವಾಹವಾಗೆಂದೂ ಬೇಡಿಕೊಂಡಳು. ಆಗ ಪದ್ಮಣ್ಣ ತನ್ನ ಇಷ್ಟ ದೇವರಾದ ಬೀರೇಶ್ವರನನ್ನು ಧ್ಯಾನಿಸಿದಾಗ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷರಾಗಿ ಅವರಿಬ್ಬರಿಗೂ ಮದುವೆ ಮಾಡಿದರು. ವಿವಾಹಕಾಲದಲ್ಲಿ ಕಾಡಿನಲ್ಲಿ ಹತ್ತಿಯು ದೊರೆಯಲಾರದ ಕಾರಣ ಕುರಿಯ ಉಣ್ಣೆಯಿಂದ ಕಂಕಣ ತಯಾರಿಸಿ ಅದಕ್ಕೆ ಪಾರ್ವತಿ ತನ್ನ ಕೊರಳಲ್ಲಿದ್ದ ಅರಿಶಿಣ ತೆಗೆದು ಕಟ್ಟಿದರು. ಅಂದಿನಿಂದ ಪದ್ಮಣ್ಣನ ವಂಶದವರಿಗೆ ಉಣ್ಣೆಕಂಕಣದವರೆಂದೂ, ಅವರ ಅಣ್ಣಂದಿರಿಗೆ ಹತ್ತಿಕಂಕಣದವರೆಂದು ಹೆಸರಾಗಿ ಎರಡು ಪ್ರಮುಖ ಪಂಗಡಗಳಾಗಿ ನಂತರ ಒಳಪಂಗಡಗಳಾದವು. ಇದೇ ಜನಪದ ಕಥೆಯನ್ನು ಆರ್.ಇ. ಎಂಥೋವನ್‌ರವರೂ ಹೇಳುತ್ತಾರೆ.

"ಆದಿಗೊಂಡನ ಏಳು ಜನ ಮಕ್ಕಳಲ್ಲಿ ಕೊನೆಯವನು ಪದುಮಣ್ಣ. ಉಂಡಾಡಿಗನಾಗಿ ಕಾಲಕಳೆಯುತ್ತಿದ್ದಾಗ ತಾಯಿ ಮಲ್ಲಮ್ಮ ಬುದ್ಧಿ ಹೇಳಿ ಹೊಲಕ್ಕೆ ಕಳುಹಿಸಿದಳು, ಪದುಮಣ್ಣ ಹೊಲದಲ್ಲಿ ಬೆಳೆದ ಮುತ್ತುಗವನ್ನು ಕಡಿಯುತ್ತಿರುವಾಗ ಕೆಳಗಿದ್ದ ಹುತ್ತದಿಂದ ಅಗಣಿತ ಕುರಿಗಳು ಹೊರಬಂದವು. ಕುರಿಗಳ ಧ್ವನಿ ಕೇಳಿ ಶಿವನು ಭೂಲೋಕಕ್ಕೆ ಓಡಿ ಬಂದನು. ಅನಂತರ ಪದಮಣ್ಣನಿಗೆ ಇವುಗಳ ಒಡೆತನವನ್ನು ಒಪ್ಪಿಸಿದ 'ಇಷ್ಟು ಕುರಿಗಳನ್ನು ಕಾಯಲು ನಾನು ಅಸಮರ್ಥ' ಎನ್ನಲು ಶಿವನು ಭೀಕರವಾದ ಬೀರಯ್ಯನನ್ನು ಜೊತೆಗೂಡಿಸಿ ತಾನು ಕೈಲಾಸಕ್ಕೆ ಹಿಂತಿರುಗಿದನು. (ತಗರ ಪವಾಡ, ಸಂಧಿ-೧, ಪದ್ಯ-೪೦)

ಬೀರಯ್ಯ ಮತ್ತು ಪದ್ಮಣ್ಣ ಇಬ್ಬರೂ ಕುರಿಕಾಯುತ್ತ ಮುನ್ನಡೆದರು. ಅಡವಿಯಲ್ಲಿ ಕುರಿಗಳನ್ನು ತಿನ್ನಲು ಬೆನ್ನತ್ತಿ ಬಂದ ಬಕಾಸುರನನ್ನು ಬೀರಯ್ಯನು ಸೀಳಿ ಹಾಕಿದನು. ಅವನ ಮಗಳು ಸಿರಿವಂತೆ ಗೋಳಾಡಲು "ನೀನು ಪದುಮಣ್ಣನಿಗೆ ಮಡದಿಯಾಗಿರು" ಎಂದು ಬೀರಯ್ಯ ಹೇಳಿದನು. ಬೀರಯ್ಯನ ಹೇಳಿಕೆಯಂತೆ ಅವರಿಬ್ಬರೂ ದಂಪತಿಗಳಾದರು. ಮುಂದೆ ಶಿವನು ಪದುಮಣ್ಣನಿಗೆ ನಿನ್ನ ಹಿರಿಯ ಹೆಂಡತಿ ಲಿಂಗಮ್ಮನ ೧೩ ಮಂದಿ ಮಕ್ಕಳು ಹತ್ತಿಕಂಕಣದವರು. ಈ ಚಿಕ್ಕ ಹೆಂಡತಿ ಸಿರಿವಂತೆಯ ಮೂರು ಮಂದಿ ಮಕ್ಕಳು ಉಣ್ಣೆಕಂಕಣದವರು. ನೀನು ಕುರಿಗೌಡನಾಗಿ ಬೀರಯ್ಯನು ಕುಲದೈವವೆಂದು

ಭಾವಿಸಿ, ನಿನ್ನ ಗುರು ಸರೂರು ಶಾಂತ ಮುತ್ತಯ್ಯನಿಗೆ ಒಕ್ಕಲಾಗಿ ರೇವಣಸಿದ್ಧನಿಗೆ ಮಗನಾಗಿ ಬದುಕು ಎಂದು ಹೇಳಿ ಶಿವನು ಕೈಲಾಸಕ್ಕೆ ಮರಳುತ್ತಾನೆ'[೨೧] ಎಂದು ತಗರ ಪವಾಡದ ಕಥೆಯು ಹೇಳುತ್ತದೆ (ಸಂಧಿ ೨, ಪದ್ಯ ೪೨-೬೧)

ಕುರಿಕಾಯುತ್ತ ಅಲೆಮಾರಿಯಾಗಿದ್ದ ಪದ್ಮಣ್ಣನಿಗೆ ಊಟ ಸಿಗದೆ ಏಳು ದಿನಗಳವರೆಗೆ ಉಪವಾಸವಿದ್ದನು. ಅಂತಹ ಸಮಯದಲ್ಲಿ ರೇವಣಸಿದ್ಧನು ಇವನಲ್ಲಿಗೆ ಭಿಕ್ಷೆಗೆ ಬರುತ್ತಾನೆ. ತಾನೂ ಉಪವಾಸವಿರುವ ಸಂಗತಿಯನ್ನು ತಿಳಿಸುತ್ತಾನೆ. ರೇವಣಸಿದ್ಧರು ಕುರಿಗಳನ್ನು ಹಿಡಿದು ತಂದು ಹಾಲು ಹಿಂಡಿ ಕಪ್ಪರದೊಳಗೆ ಅಡುಗೆ ಮಾಡಿದನು. ಗಿಣ್ಣವನ್ನು ಗಟ್ಟಿ ಮಾಡಿದನು. ಇಬ್ಬರೂ ಕೂಡಿಕೊಂಡು ಊಟ ಮಾಡಿದರು. ಅಗ್ನಿ ಇದ್ದಲ್ಲಿ ನೀನು ಅಡುಗೆ ಮಾಡಿಕೊಂಡು ಊಟ ಮಾಡು ಎಂದು ಹೇಳಿ ಹರಸಿ ಅಂತರ್ಧಾನನಾಗುತ್ತಾನೆ.

ಪದ್ಮಣ್ಣ ಮುಂದೆ ಅಡುಗೆಗಾಗಿ ಬೆಂಕಿಯನ್ನು ಅರಸುತ್ತಿರುವಾಗ ಹೊಗೆಯಾಡುವ ಮನೆಯೊಂದನ್ನು ಕಂಡು ಅಲ್ಲಿಗೆ ಹೋಗುತ್ತಾನೆ. ಅಲ್ಲಿ ಓರ್ವ ರಾಕ್ಷಸಿಯ ಮಗಳಿರುವುದನ್ನು ಕಂಡು ಅವಳಿಗೆ ಬೆಂಕಿಯನ್ನು ಕೇಳುತ್ತಾನೆ. ಆಗ ಅವಳು 'ನನಗೆ ಹಾಲುಕೊಟ್ಟರೆ ಬೆಂಕಿ ನೀಡುತ್ತಾನೆ' ಎಂದು ಷರತ್ತು ಒಡ್ಡುತ್ತಾಳೆ. ಪದ್ಮಗೊಂಡ ಒಪ್ಪುತ್ತಾನೆ. ಕುರಿಯ ಹಿಂಡಿನೆಡೆಗೆ ಬಂದು ಹಾಲು ಹಿಂಡಿ ಗಿಣ್ಣ ಕಾಯಿಸಿಕೊಂಡು ತಿಂದು ಅವಳಿಗಾಗಿ ಹಾಲು ತೆಗೆದುಕೊಂಡು ಹೋಗುತ್ತಾನೆ. ಪದ್ಮಣ್ಣ ತಂದ ಹಾಲುಂಡು ತನ್ನನ್ನು ರಕ್ಕಸಿ ತಾಯಿಯಿಂದ ಬಿಡುಗಡೆ ಮಾಡುವಂತೆ ಕೇಳಿಕೊಳ್ಳುತ್ತಾಳೆ. ಅವಳ ಆಸೆಯನ್ನು ಈಡೇರಿಸುವುದಕ್ಕಾಗಿ ತಾಯಿ ರಕ್ಕಸಿಯನ್ನು ಕೊಂದು ಚನ್ನಮ್ಮನನ್ನು ಕರೆದುಕೊಂಡು ರೇವಣ್ಣನಿದ್ದಲ್ಲಿಗೆ ಬರುತ್ತಾನೆ. ರೇವಣ್ಣ ನೀವಿಬ್ಬರೂ ಯಾರು? ಎಂದ ಕೇಳಿದಾಗ "ನಾವಿಬ್ಬರೂ ಅಣ್ಣತಂಗಿಯರೆಂದು" ಪದ್ಮಗೊಂಡ ಹೇಳುತ್ತಾನೆ. ಅದಕ್ಕೆ ರೇವಣ್ಣನು ಈ ವಿಚಾರವು ಸರಿಯಾದುದಲ್ಲ, ನೀವಿಬ್ಬರೂ ಸತಿ-ಪತಿಗಳಾಗಿ ಬದುಕಿರಿ, ನಿನಗೆ ಚನ್ನಮ್ಮ ತಕ್ಕ ಸತಿಯಾಗಿದ್ದಾಳೆ ಎಂದು ಹೇಳಿ ಕುರಿಯ ಉಣ್ಣೆಯಿಂದ ದಾರ ಹೊಸೆದು ಕಂಕಣ ಕಟ್ಟಿ ದೇವತೆಗಳೆಲ್ಲರೂ ಸೇರಿ ಮದುವೆ ಮಾಡುತ್ತಾರೆ. ನಂತರ ರೇವಣ್ಣನು ಬೈಲ ಕಮ್ಮಾರನನ್ನು ಕರೆಯಿಸಿ ಕತ್ತರಿ ತಯಾರಿಸಿಕೊಟ್ಟನು. ಹತ್ತೆಂಟು ಕುರಿಯ ಮರಿಗಳ ಉಣ್ಣೆ ತಂದು ಪದ್ಮಗೊಂಡನಿಗೆ ಉಣ್ಣೆ ಕತ್ತರಿಸುವುದನ್ನು ಕಲಿಸಿದನು. ಉಣ್ಣೆಯಿಂದ ಚನ್ನಮ್ಮನಿಗೆ ನೂಲುವುದನ್ನು ಕಲಿಸಿದನು. ಹಾಸು ತೋಡಿ, ಉಂಕೆಯ ಮಾಡಿ ಎಕ್ಕೆಯ ಗಿಡದಲ್ಲಿ ಮಗ್ಗವನ್ನು ಇಟ್ಟ ರೇವಣ್ಣ (ಶಿವ) ಚಿಕ್ಕ ಕಂಬಳಿಯ ಜಾಡಿ ನೇಯ್ದು ಅದನ್ನು ತಲೆಗೆ ಧರಿಸಿಕೊಂಡನು.

"ಸಿದ್ಧಮ್ಮನ ಮಕ್ಕಳು ಇಪ್ಪತ್ತೊಂದು ಗಂಡು, ಇಪ್ಪತ್ತೊಂದು ಹೆಣ್ಣು. ಇವರಿಗೆಲ್ಲ ಹತ್ತಿಯ ಕಂಕಣ ಕಟ್ಟಿ ಧಾರೆಯೆರೆದು ವಿವಾಹ ಮಾಡಿದರು. ರಕ್ಕಸಿಯ ಮಗಳು ಬೃಹಸ್ಪತಿಯ ತನುಜೆ ಚನ್ನಮ್ಮನಿಗೆ ಇಪ್ಪತ್ತೊಂದು ಗಂಡು ಇಪ್ಪತ್ತೊಂದು ಹೆಣ್ಣು, ಇವರಿಗೆಲ್ಲ ಉಣ್ಣೆಯ ಕಂಕಣವ ಕಟ್ಟಿ ಧಾರೆಯೆರೆದು ಲಗ್ನ ಮಾಡಿದರು. ಪದ್ಮಗೊಂಡನ ಮಕ್ಕಳ ಹೆಸರುಗಳೆಂದರೆ ಜಗ್ಗಲ ಮುತ್ತಯ್ಯ, ಸಾಹಿಮುತ್ತಯ್ಯ,

ಸೋಹಿ ಮುತ್ತ್ರಯ್ಯ, ಸಾಂತಮುತ್ತ್ರಯ್ಯ, ಬರಗಾಲ ಮುತ್ತ್ರಯ್ಯ, ಅಂಬಲಿಮುತ್ತ್ರಯ್ಯ, ಕಂಬಳಿಮುತ್ತ್ರಯ್ಯ, ದೇಪಿರಾಯನು, ದೇವರಾಯನು, ವೀರರಾಯನು, ಹೆಮ್ಮಳರಾಯನು, ಪ್ರೌಢರಾಯನು, ಬೊಜರಾಯನು ಏಕಜಾಡಿ ಮುತ್ತ್ರಯ್ಯ, ಪದ್ಮಮುತ್ತ್ರಯ್ಯ, ಹಾಲತಿಪ್ಪರಾಯ, ನಡಹಟ್ಟಿ ನಾಗರಾಯನ ಮುತ್ತ್ರಯ್ಯ, ನಿಮುತ್ತ್ರಯ್ಯ, ಗುಂಠೆರಾಯ, ಕೆಂಗರಾಯ, ತುರುಬಿವರಾಯ, ಕಟ್ಟೆರಾಯ, ಕಾವಡಿರಾಯ, ಬನ್ನಿರಾಯ, ಬೆಲ್ಲದರಾಯ, ಮುನ್ನೆರಾಯ, ಆವಿವರು, ಮಜ್ಜಗಿರಾಯಾ, ಹಾಲಗಚ್ಚಿನ ಕಣಗರಾಯ, ಹೊನ್ನರಾಯ, ಮಣೆರಾಯ, ಮಾಮನಿರಾಯ, ಕೊಡವಿರಾಯ, ಮಗ್ಗದರಾಯ, ಡೊಳ್ಳಿನರಾಯ, ಕುರುಬರ ಯರಲಿಂಗ, ಶಾಂತರಾಯ, ಹೊಹಟ್ಟಿರಾಯ, ಗಡ್ಡದರಾಯ ಇವರು ನಲ್ವತ್ತು ಮಂದಿ ಕುರಿಗಾರರು ತೂಗುಡ್ಡದಲ್ಲಿ ನಾಗಬೆತ್ತದ ಮರುಳಸಿದ್ದೇಶ್ವರ ತಪಸ್ಸು ಮಾಡುವ ಕೋಡುಗಲ್ಲಿನ ಸುತ್ತಮುತ್ತ (ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮ) ಹಟ್ಟಿಹಾಕಿದರು"[೨೨] ಎಂದು ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರು ತಿಳಿಸುತ್ತಾರೆ.

ಕುರುಬರ ಮೂಲವನ್ನು ವಿವರಿಸುವ ಮತ್ತೊಂದು ಪೌರಾಣಿಕ ಕಥೆಯುಂಟು. ಇವರು ಮೂಲತಃ ಕಾಪುಗಳು. ಅವರ ಪೂರ್ವಜರು ಮಾಸಿರೆಡ್ಡಿ ಮತ್ತು ನೀಲಮ್ಮ. ಇವರು ಪೂರ್ವಘಟ್ಟದಲ್ಲಿ ಕಟ್ಟಿಗೆ ಮಾರಿ ಜೀವಿಸುತ್ತಿದ್ದರು. ಅವರಿಗೆ ಐವರು ಗಂಡು ಮಕ್ಕಳು. ಅವರ ಬಡತನವನ್ನು ಕಂಡು ಮರುಗಿದ ಶಿವನು ಜಂಗಮವೇಷಧಾರಿಯಾಗಿ ಅವರ ಮನೆಗೆ ಬಂದು "ನಿಮಗೆ ಮತ್ತೊಬ್ಬ ಗಂಡುಮಗು ಜನನವಾಗುತ್ತಲೇ ಬಡತನ ನಿವಾರಣೆಯಾಗುವುದೆಂದು ಹೇಳಿ ಭಸ್ಮ ಕೊಟ್ಟು ಹೋದನು" ಆ ಆರನೇ ಮಗನೇ ಉಂಡಾಡು ಪದ್ಮಣ್ಣ, ಆಗ ಅವರ ಕುಟುಂಬ ವ್ಯವಸಾಯ ಮಾಡುತ್ತಾ ಅಭಿವೃದ್ಧಿ ಹೊಂದುತ್ತದೆ. ಆದರೆ ಪದ್ಮಣ್ಣ ಮಾತ್ರ ಕೆಲಸಕ್ಕೆ ಹೋಗದೆ ಉಂಡಾಡಿಯಾಗಿ ಕಾಲಕಳೆಯುತ್ತಿರುತ್ತಾನೆ. ತಾಯಿ ನೀಲಮ್ಮ ಪದ್ಮಣ್ಣನಿಗೆ ಬುದ್ಧಿವಾದ ಹೇಳಿ ಅಣ್ಣಂದಿರ ಜೊತೆ ಹೊಲ ಹಸನು ಮಾಡಲು ಕಳುಹಿಸುತ್ತಾಳೆ. ಪದ್ಮಣ್ಣನು ಅರಿಯದೆ ಹುತ್ತದ ಮೇಲಿರುವ ಮುತ್ತಲಮರವನ್ನು ಕಡಿಯುತ್ತಾನೆ. ಅದರಡಿಯಿಂದ ಅಸಂಖ್ಯಾತ ಕುರಿಗಳು ಹೊರಬರುತ್ತವೆ.

ಪದ್ಮಣ್ಣನು ಶಿವನ ಆಜ್ಞೆಯಂತೆ ಕುರಿಗಳನ್ನು ಕಾಪಾಡುವುದಕ್ಕಾಗಿ ಅರಣ್ಯ, ಹುಲ್ಲುಗಾವಲು, ನೀರು ಇರುವಲ್ಲಿ ಸಂಚರಿಸುತ್ತಾನೆ. ಕುರಿಗಳ ಪಾಲನೆ ಪೋಷಣೆಯಲ್ಲಿ ಮಗ್ನನಾಗುತ್ತಾನೆ. ಆತನಿಗೆ ಆಗ ಅರಣ್ಯದಲ್ಲಿ ಬದುಕುವ ರೀತಿನೀತಿಯನ್ನು ಶಿವನು ಉಪದೇಶಿಸುವನು. ಆಹಾರಕ್ಕಾಗಿ ಹಾಲು ಹಿಂಡಿ ಹೈನು ಮಾಡುವುದಕ್ಕೆ ಬೇಕಾದ ಬೆಂಕಿಯನ್ನು ಅರಸುತ್ತಾ ಅಡವಿಯಲ್ಲಿ ಅಲೆದಾಡುತ್ತಾನೆ. ಆಗ ರಾಕ್ಷಸನೋರ್ವನ ಬಂಧನದಲ್ಲಿರುವ ಕನ್ಯೆಯ ಪರಿಚಯವು ಪ್ರಣಯಕ್ಕೆ ತಿರುಗಿ ವಿವಾಹವಾಗುತ್ತದೆ. ರಾಕ್ಷಸಿಯ ಹೆಂಡತಿಯಲ್ಲಿ ಸಂತಾನ ಪಡೆಯುತ್ತಾನೆ ಮತ್ತು ಈ ಮೊದಲೇ ವಿವಾಹವಾಗಿ ಸ್ವಜಾತಿ ಹೆಂಡತಿಯಲ್ಲಿ ಸಂತಾನಪಡೆಯುತ್ತಾನೆ. ಹೀಗೆ ಸ್ವಜಾತಿ ಹೆಂಡತಿಯಿಂದ ಪಡೆದ ಸಂತಾನಗಳ ಮದುವೆಯಲ್ಲಿ ಹತ್ತಿಕಂಕಣ ಮತ್ತು ಅನ್ಯಜಾತಿ (ರಾಕ್ಷಸಿಯ ಬಂಧನದ ಕನ್ಯೆ) ಹೆಂಡತಿಯಿಂದ ಪಡೆದ ಸಂತಾನಗಳ

ಮದುವೆಯಲ್ಲಿ ಉಣ್ಣೆಕಂಕಣ ಕಟ್ಟುವ ಮೂಲಕ ಕಾಲಾಂತರದಲ್ಲಿ ಹತ್ತಿಕಂಕಣ ಮತ್ತು ಉಣ್ಣೆಕಂಕಣ ಎಂಬ ಎರಡು ಪ್ರತ್ಯೇಕ ಒಳ ಪಂಗಡಗಳ ಹುಟ್ಟಿಗೆ ಕಾರಣವಾಗುತ್ತದೆ. ಈ ಎರಡು ಒಳಪಂಗಡಗಳ ಉಗಮವೂ ಕೂಡ ಶಿವ ಪಾರ್ವತಿಯರಿಗೆ ಅಭಿಮುಖವಾಗಿರುವುದನ್ನು ಮೇಲಿನ ಪುರಾಣ ಕತೆಗಳು ನಿರೂಪಿಸುತ್ತವೆ.

ದಕ್ಷಿಣ ಭಾರತದ ಕುರುಬರ ಚರಿತ್ರೆಯು ಉತ್ತರ ಭಾರತದವರಿಗಿಂತ ಉಜ್ವಲವಾಗಿದೆ ಎನ್ನಬಹುದು. ಪ್ರಾಚೀನ ತೊಂಡಮಂಡಲದ ಕುರುಬರು ಪಲ್ಲವರಾಜರ ಮೂಲ ಪುರುಷರೆಂದು ತಿಳಿದು ಬರುತ್ತದೆ. ಇವರು ಸುಮಾರು ಕ್ರಿ.ಶ. ೪ನೇ ಶತಮಾನದಿಂದ ೮ನೇ ಶತಮಾನದವರೆಗೆ ದಕ್ಷಿಣ ಭಾರತದ ರಾಜಕೀಯ ಜೀವನದಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಿದ್ದರು. ತೊಂಡಮಂಡಲವು ಉತ್ತರ ಪೆನ್ನಾರ್ ಮತ್ತು ಉತ್ತರ ವೇಲಾರ್ ನದಿಗಳ ನಡುವಿನ ಪ್ರದೇಶವಾಗಿದೆ. ಇದನ್ನು 'ಕುರುಬರ ಭೂಮಿ, ಕುರುಬರನಾಡು' ಎಂದು ಕರೆಯಲಾಗಿತ್ತು. ಚೋಳರಿಂದ ಸೋಲಿಸಲ್ಪಟ್ಟ ಮೇಲೆ ಅವರು ಅವನತಿ ಹೊಂದಿದರು. ಇಂದಿನ ನೀಲಗಿರಿ, ವೈನಾಡು, ಕೇರಳದ ಗುಡ್ಡ ಪ್ರದೇಶ, ಮೈಸೂರಿನ ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಹುಣಸೂರು, ಕೊಡಗು ಪ್ರದೇಶಗಳಲ್ಲಿ 'ಗಿರಿಜನ' ರೂಪದಲ್ಲಿ ಕಾಣಸುತ್ತಿರುವವರೇ ಪ್ರಾಚೀನ ತೊಂಡಮಂಡಲದ ಕುರುಬ ಪ್ರತಿನಿಧಿಗಳೆಂದು ಜನಾಂಗ ಶಾಸ್ತ್ರಜ್ಞರು ಗುರುತಿಸಿದ್ದಾರೆ.

ಪಲ್ಲವರು ದಖನ್ನಿನ ಪ್ರಭಾವಶಾಲಿ ರಾಜಮನೆತನಗಳಲ್ಲಿ ಒಬ್ಬರು. ಅತ್ಯಂತ ಬಲಾಢ್ಯರಾದ ಇವರು ಮೊಟ್ಟ ಮೊದಲಿಗೆ ನಾಣ್ಯಗಳನ್ನು ಜಾರಿಗೆ ತಂದರು. ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಪಲ್ಲವ ಅರಸರ ಬಗ್ಗೆ ಬರೆಯುತ್ತಾ "ಪಲ್ಲವರು, ತಮಿಳು ಕುರುಂಬರು ಎಂದೂ, ಕೆಲವೊಮ್ಮೆ 'ಕುರುನೀಲ ಮನ್ನೆರ' ಎಂದು ಕರೆಯುತ್ತಿದ್ದರು ಎಂದಿದ್ದಾರೆ. ಕುರುಂಬರು ಅಥವಾ ಕುರುಬರು ಪ್ರಾಚೀನ ಪಲ್ಲವರ ಆಧುನಿಕ ಪ್ರತಿನಿಧಿಗಳು ಎಂಬುದಾಗಿ ೧೮೮೧ರ ಮದ್ರಾಸ್ ಗೆಝಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ. ಚೋಳರು ಇವರ ರಾಜ್ಯವನ್ನು ವಶಪಡಿಸಿಕೊಂಡ ನಂತರ ಕುರುಬರ ಆಸ್ತಿ ಪಾಸ್ತಿ, ಜೀವಕ್ಕೆ ರಕ್ಷಣೆ ಇಲ್ಲದಾಯಿತು. ಹೀಗಾಗಿ ಪಲ್ಲವ ಮೂಲದ ಕುರುಬರು ಕಾಡುಬೆಟ್ಟ ಗುಡ್ಡಗಳನ್ನು ಸೇರಿಕೊಂಡರು.

ಉತ್ತರ ಕರ್ನಾಟಕದ ಬೆಳಗಾಂವ, ಬಿಜಾಪುರ, ಧಾರವಾಡ, ಚಿತ್ರದುರ್ಗ, ಹಾಸನ, ಮಹಾರಾಷ್ಟ್ರದ ಸೊಲ್ಲಾಪುರ, ಕೊಲ್ಹಾಪುರ ಭಾಗಗಳಲ್ಲಿ ರಾಷ್ಟ್ರಕೂಟ ಮತ್ತು ಬಾದಾಮಿ ಚಾಲುಕ್ಯರಿಗೆ ಅಧೀನರಾಗಿದ್ದ ಮಹಾಮಂಡಲೇಶ್ವರ ರಟ್ಟರು (ಕುರುಬರು ರೆಡ್ಡಿ) ಬಹುಕಾಲ ರಾಜ್ಯವಾಳಿದರು. ಇವರು ಸುಗಂಧವರ್ತಿ (ಸವದತ್ತಿ)ಯನ್ನು ಮೊದಲು, ವೇಣುಗ್ರಾಮ (ಬೆಳಗಾವಿ)ಯನ್ನು ನಂತರ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೯೭೦ರಿಂದ ೧೨೫೩ರವರೆಗೆ ಈ ಒಳಪಂಗಡಗಳ ೧೫ ಜನ ರಾಜರು ರಾಜ್ಯಭಾರ ಮಾಡಿದರು.

ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ, ವಿಜಾಪುರ ತಾಲೂಕಿನ ಬಾಬಾ ನಗರ, ಮಹಾಲ ಬಾಗಾಯತ ದರ್ಗಾ (ಬಿಜಾಪುರದ ಒಂದು ಭಾಗ) ಇದೇ ಗ್ರಾಮದ ತಿಕೋಟಾ ಕಲ್ಲೇಶ್ವರ ಸಿಂಧಗಿ ತಾಲೂಕಿನ

ಕಲಕೇರಿ, ಬಾಗಲಕೋಟೆ ಜಿಲ್ಲೆಯ ಬಾದಾಮಿ, ಪಟ್ಟದಕಲ್ಲು, ಮುದ್ದೇಬಿಹಾಳ ಪಟ್ಟಣದ ಮುದ್ನಾಳ ಗುಡ್ಡ, ಹಿಂದೆ ಕುರುಬರ ನೆಲೆವೀಡಾಗಿದ್ದ ತಾಳೀಕೋಟೆ ನಾಲತ್ವಾಡ ಮುಂತಾದೆಡೆಗಳಲ್ಲಿ ಕಂಡು ಬರುವ ಜೈನ ದೇವಾಲಯಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿರುವುದನ್ನು ವಿಜಾಪುರ ಗೆಝೆಟಿಯರ್ ತಿಳಿಸುತ್ತದೆ. ಹೀಗೆ ಹತ್ತಿ ಮತ್ತು ಉಣ್ಣೆಕಂಕಣ ಕುರುಬರ ಚಾರಿತ್ರಿಕತೆಯನ್ನು ವಿಶ್ಲೇಷಿಸಬಹುದಾಗಿದೆ.

ಒಡೆಯರು

ಕುಲದವರಿಗೆ ಕುಲದವರು ಗುರುಗಳಿರುವುದು ಕುರುಬ ಸಮುದಾಯದಲ್ಲಿ ಮಾತ್ರ. ಅವರೇ ಒಡೆಯರು. ಕುರುಬರ ಗುರು ಪರಂಪರೆಯಲ್ಲಿ ಒಡೆಯರುಗಳಿಗೆ ಪ್ರಾಶಸ್ತ್ಯವುಂಟು. ಇವರ ಪೌರಾಣಿಕ ಹಿನ್ನೆಲೆಯನ್ನು ತಿಳಿಯ ಹೊರಟರೆ ಮೂರು ಸಂಪ್ರದಾಯಗಳ ಕವಲು ನಮ್ಮ ಮುಂದಿದೆ. ಈ ಮೂರರಲ್ಲೂ ಅನೇಕ ಸಂಗತಿಗಳು ದಂತಕತೆಗಳಾಗಿ, ಐತಿಹ್ಯಗಳಾಗಿ, ಪುರಾಣಕತೆಗಳಾಗಿ ಮಾತ್ರವಲ್ಲದೆ ಪವಾಡಗಳ ಸ್ವರೂಪವೂ ದಟ್ಟವಾಗಿ ಗೋಚರಿಸುತ್ತದೆ.

ಕುರುಬರು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಹೋರಾಟದ ಹಲವಾರು ಆಕೃತಿಗಳನ್ನು ರೂಪಿಸಿಕೊಂಡಂತಿದೆ. ಮೊದಲನೆಯದಾಗಿ ಅಮೋಘಸಿದ್ಧ ಸಂಪ್ರದಾಯವು ತನ್ನ ಸಾಂಸ್ಕೃತಿಕ ನಾಯಕನಾದ ಅಮೋಘಸಿದ್ಧನನ್ನು ಅತ್ಯಂತ ಪುರಾತನಕ್ಕೆ ಒಯ್ಯುತ್ತದೆ. ಅದು ನೇರವಾಗಿ ಕೈಲಾಸ ಲೋಕದಲ್ಲಿಯೇ ಕಲ್ಪಿಸಿಕೊಳ್ಳುತ್ತದೆ. ಆತ ಏಳು ಯುಗಗಳವರೆಗೆ ತಪಸ್ಸನ್ನಾಚರಿಸುತ್ತಾನೆ. ಆ ತಪದ ಫಲವಾಗಿ ಶಿವನ ಕೃಪೆಯನ್ನು ಪಡೆದು ಪಾರ್ವತಿಯ ಮೊಲೆವಾಲನ್ನುಂಡು ಭೂಮಿಗೆ ಅವತರಿಸಿ ಬಂದಂತೆ ಕಲ್ಪಿಸಿಕೊಳ್ಳುತ್ತದೆ. ಅದೂ ಅಲ್ಲದೆ ಅಮೋಘಸಿದ್ಧನ ವಿಸ್ತೃತವಾದ ವಂಶಾವಳಿಯನ್ನು ಶೋಧಿಸಿಕೊಳ್ಳುತ್ತದೆ.

ತನ್ನ ಕುಲದ ಅಸ್ಮಿತೆಯನ್ನು ಸ್ಥಿರೀಕರಿಸಿಕೊಳ್ಳುವ ಇನ್ನೊಂದು ಆಕೃತಿಯಾಗಿ ವಂಶಾವಳಿಯಲ್ಲಿ ಬರುವ ಪ್ರತಿಯೊಬ್ಬ ಸಿದ್ಧನ ಸುತ್ತಲೂ ಅನೇಕ ಪವಾಡ ಕತೆಗಳನ್ನು ಹೆಣೆಯುತ್ತದೆ. ಹಗ್ಗ ಕೋಲುಗಳಲ್ಲದೆ ಕಂಬಳಿಯ ಡೇರೆ ಹೊಡೆಯುವುದು, ಕಂಬಳಿಯನ್ನು ಬೀಸಿ ಮಳೆ ಬರಿಸೋದು, ಬಡವನನ್ನು ಶ್ರೀಮಂತನನ್ನಾಗಿಸುವುದು, ಬಂಜೆಯವರಿಗೆ ಸಂತಾನ ಫಲ ನೀಡುವುದು, ಉಕ್ಕಿನ ಸರಪಳಿಯಲ್ಲಿ ಬಂಧಿತರಾದವರ ಸೆರೆ ಬಿಡಿಸುವುದು, ಕಾಯ್ದ ಎಣ್ಣೆಯ ಕಡಾಯಿಯಲ್ಲಿ ಜಿಗಿಯುವುದು ಮುಂತಾದ ಪವಾಡ ಕತೆಗಳು ರೋಚಕತೆಯನ್ನು ಹೇಳುತ್ತವೆ.

ಅಮೋಘಸಿದ್ಧನ ವರವಿನ ಮಕ್ಕಳಲ್ಲಿ ಒಬ್ಬನಾದ ಬಿಳಿಯಾನಿ ಸಿದ್ಧನ ಕುರಿತಾದ ಪವಾಡ ಕತೆಯು ಕುರುಬ-ಲಿಂಗಾಯತಗಳು ನೇರವಾಗಿ ಮುಖಾಮುಖಿಯಾದುದನ್ನು ಹೇಳುತ್ತದೆ. ಇವನಿಂದಲೇ ಇನ್ನೊಂದು ಪವಾಡವು ನಡೆದು ಕುರುಬರು ಲಿಂಗಾಯಿತವನ್ನು ಮೀರುವ ಕತೆ ಹೇಳುತ್ತದೆ. ಇಷ್ಟೆಲ್ಲ ಸಂಘರ್ಷದ ನಡುವೆಯೂ, ಅಮೋಘಸಿದ್ಧ ಸಂಪ್ರದಾಯಕ್ಕೆ ಲಿಂಗಾಯತದ ಸೆಳೆತದಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ದೀರ್ಘ ಪ್ರತಿರೋಧದ ನಂತರ ಕುರುಬ ಸಮುದಾಯವು ಲಿಂಗಾಯತವನ್ನು ಸ್ವೀಕರಿಸುತ್ತದೆ. ಅಮೋಘಸಿದ್ಧ ಪರಂಪರೆಯ ಘೋಷವಾಕ್ಯವು ಈ ಮಾತನ್ನ ಪುಷ್ಠೀಕರಿಸುತ್ತದೆ.

ಅರಕೇರಿ ಅರಮನಿ ಭೀವರಿಗಿ ಗುರುಮನಿ

ಮಾಯಿ ಮಕಣಾಪುರ । ಸಿಂಹಾಸನ ಗದ್ದಿಗಿ

ಕಲ್ಲೂರ ಕಡೀಮಠ

ಅಮೋಘಸಿದ್ಧ ಸಂಪ್ರದಾಯವು ಕಲ್ಲೂರಿಗೆ ಬಂದು ತನ್ನ ಮೂಲ ಸತ್ವವನ್ನು ಬಿಟ್ಟು (ಭಂಡಾರ ನಿಷ್ಠೆ) ವಿಭೂತಿನಿಷ್ಠೆಗೆ ಹೊರಳಿರುವುದನ್ನು ಕಾಣುತ್ತೇವೆ.

ಶಾಂತ ಸಂಪ್ರದಾಯದ ಒಡೆಯರ ವೈಶಿಷ್ಟ್ಯವನ್ನು ತಿಳಿಯಲು ಹೊರಟರೆ 'ತಗರ ಪವಾಡ' ಎಂಬ ಸಾಂಗತ್ಯ ಕೃತಿಯು ಲಭ್ಯವಾಗುತ್ತದೆ. ಶಾಂತಯ್ಯ ಈ ಸಂಪ್ರದಾಯದ ನಾಯಕ, ಅಮೋಘಸಿದ್ಧ ಸಂಪ್ರದಾಯದಲ್ಲಿ ಕಂಡುಬರುವ ಭಂಡಾರದ ಮೋಹ ಈ ಸಂಪ್ರದಾಯದಲ್ಲಿ ಸಂಪೂರ್ಣವಾಗಿ ಇಲ್ಲವಾಗಿದೆ. ತಗರ ಪವಾಡವು ಕಂಕಣಗಳ ಪ್ರಸ್ತಾಪ ಮಾಡಿ ಶಾಂತಯ್ಯನದು ಹತ್ತಿಕಂಕಣವೆಂದು ಸೂಚಿಸುತ್ತದೆ. ಶಾಂತಯ್ಯ ಪದುಮಣ್ಣನ ಮೊದಲ ಹೆಂಡತಿಯ ಹದಿಮೂರು ಜನಮಕ್ಕಳಲ್ಲಿ ಒಬ್ಬ. ಉಣ್ಣೆಕಂಕಣದವರಾದ ಅವರನ್ನು ಅವರ ಸಂತಾನವನ್ನು ರಕ್ಷಿಸಿ ಮುಕ್ತಿ ನೀಡುವುದು ಶಾಂತಯ್ಯನ ಹೊಣೆಗಾರಿಕೆ ಎಂದು ರೇವಣಸಿದ್ಧನಿಂದ ಆಶೀರ್ವಾದ ಪಡೆದಿರುತ್ತಾನೆ.

ಇಂತಹ ಆಶೀರ್ವಾದ ಪಡೆಯುವ ಪೂರ್ವದಲ್ಲಿ ಶಾಂತಯ್ಯನು 'ಕುಲಹೀನ ಸತಿಯೊಳು ಬೆರೆದ ಹೊಲೆಗೇಡಿ ನೀಚ (ತನ್ನ ತಂದೆ ಪದ್ಮಣ್ಣ) ನೊಳಿರಬಾರದುಯೆಂದು, ಮೇಲಾದ ಕುಲವನು ಕೀಳು ಮಾಳ್ಪನೆಯೆಂದು ಒಂದಷ್ಟು ಕುರಿಗಳನ್ನು ಹೊಡೆದುಕೊಂಡು ಹೆಂಡತಿಯಾದ ದೇವಮ್ಮನೊಂದಿಗೆ ತಂದೆಯ ಸಹವಾಸದಿಂದ ಹೊರಗೆ ಬರುತ್ತಾನೆ. ಚಕೋರ ಹೊಳೆಯಲ್ಲಿ ನಿಂತು ಧ್ಯಾನ ಮಾಡುವಾಗ ತೊಡರು ಮಾಡಲು ಬಂದ ಬಂಡಿಗಳನ್ನೆಲ್ಲ ನುಚ್ಚುನೂರಾಗಿಸುತ್ತಾನೆ. ಒಂದು ಕರಗ ಅಂಬಲಿಯಲ್ಲಿ ಒಂಬತ್ತು ಲಕ್ಷ ಜಂಗಮರಿಗೆ ಪ್ರಸಾದ ಮಾಡಿಸಿರುತ್ತಾನೆ. ಬಂಡಿಕಾರರಿಂದಲೇ ಶಿವನಿಗಾಗಿ ದೇವಾಲಯವನ್ನು ನಿರ್ಮಿಸುತ್ತಾನೆ. ರೇವಣ್ಣನ ರೂಪದಲ್ಲಿ ಬಂದ ಶಿವನಿಂದಲೇ ಶಿವದೀಕ್ಷೆಯುನ್ನು ಪಡೆದಿರುತ್ತಾನೆ. ಶಿವದೀಕ್ಷೆಯ ಸಮಯದಲ್ಲಿ ಬೇಕಾದ ಕರಿಮಲ್ಲಿಗೆ ಸಿಗದಿದ್ದಾಗ ತನ್ನ ರುಂಡವನ್ನೇ ಕತ್ತರಿಸಿಕೊಳ್ಳುತ್ತಾನೆ. ಅವನ ಭಕ್ತಿಗೆ ಮೆಚ್ಚಿ ಕರಿಮಲ್ಲಿಗೆಯ ಸರಗಳು ಸಾಲುಗೊಳಿಸಿ ಬೀಳಲಾಗಿ ಶಾಂತಯ್ಯನು ಶಿವದೀಕ್ಷೆ ಪಡೆದ ಸ್ಥಳವು ಸರವೂರು (ಸರೂರು) ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿರುತ್ತದೆ. ಶಾಂತಯ್ಯನು ಶಿವದೀಕ್ಷೆ ಪಡೆದುದು ಸಾಂಗತ್ಯದ ಮೊದಲ ಘಟನೆಯಾದರೆ, ಅವನು ಕುರುಬರಿಗೆ ಗುರುವಾದುದು (ಒಡೆಯರಾದುದು) ಎರಡನೆಯ ಪ್ರಮುಖ ಘಟನೆ.

ಕಲ್ಯಾಣದಲ್ಲಿದ್ದ ವೇಶ್ಯೆ ಚೆನ್ನಿ ಎಂಬುವಳಿಗಾಗಿ ವಿಟನಾದ ಬೊಪ್ಪಯ್ಯನು ಟಗರೊಂದನ್ನು ಖರೀದಿಸಿಕೊಂಡು ಹೊರಟಾಗ ಅದು ತಪ್ಪಿಸಿಕೊಂಡು ತ್ರಿಪುರಾಂತಕ ದೇವಾಲಯ ಹೊಕ್ಕಿತು. ಅಲ್ಲಿದ್ದ ಕಿನ್ನರಿ ಬ್ರಹ್ಮಯ್ಯ ವಿಟನಿಗೆ ಎರಡರಷ್ಟು ಹಣವನ್ನು ಶಿವನ ಸಾಕ್ಷಿಯಾಗಿ ಕೊಟ್ಟು ಅದನ್ನು ಬಿಡಿಸಿಕೊಂಡು ಲಿಂಗಮುದ್ರೆ ಒತ್ತುತ್ತಾನೆ. ಅದು ಕೊಬ್ಬಿ ಬೆಳೆದು ತ್ರಿಪುರಾಂತಕ ಪೂಜೆಯಲ್ಲಿ ವಿಘ್ನವೊಡ್ಡುತ್ತದೆ. ಆಗ ಅದನ್ನು ಸರವೂರಿನಲ್ಲಿ ಕುರಿಕಾಯಕ ಮಾಡಿಕೊಂಡಿದ್ದ ಶಾಂತಯ್ಯನಲ್ಲಿಗೆ ತಂದು ಬಿಡುತ್ತಾನೆ. ಕೆಲವು ವರ್ಷಗಳ ನಂತರ ಕಲ್ಯಾಣದ ಕುರುಬರು ಹಾಲು ಮಾರುವ ಗಡಿಗೆಯೊಂದಿಗೆ ಸತ್ತ ಕುರಿಯ ಮಾಂಸವನ್ನ ತಂದು ಮಾರುತ್ತಿದ್ದಾರೆಂದು ಶೆಟ್ಟಿಗಳಿಬ್ಬರು ತಕರಾರು ತೆಗೆಯುತ್ತಾರೆ. ಇದೇ ಕಾರಣಕ್ಕೆ ಕುರುಬರು ಕಲ್ಯಾಣದಿಂದ ಬಹಿಷ್ಕೃತರಾಗುತ್ತಾರೆ. ಹೀಗೆ ಹನ್ನೆರಡು ವರ್ಷಗಳು ಗತಿಸುತ್ತವೆ.

“ಒಡೆಯರೆಂಬುವರಿಲ್ಲ ಹಿಡಿವರೆ ಕೊಂಬಿಲ್ಲ
ಪೊಡವಿಯೊಳಿಮಗಾರುಯಿಲ್ಲ
ಕಡುಪಾಪಿಗಳಾಗಿ ತಿರುಗುತಿಹೆವು”

ಎಂದು ಮಲ್ಲಿಗೌಡ ಮುಂತಾದ ಕುರುಬರು ಕೊರಗುತ್ತಿರುತ್ತಾರೆ.

“ಕಲ್ಯಾಣಪುರಕೆ ಹನ್ನೆರಡು ಯೋಜನದೊಳು
ಅಲ್ಲಿರ್ಪ ಸರವೂರಿನೊಳಗೆ
ಬಲ್ಲಿದ ಶಾಂತಯ್ಯನಿರುವ”[೨೩]

ಅವನು ನಿಮಗೆ ಪರಿಹಾರ ದೊರಕಿಸುತ್ತಾನೆ ಎಂದು ಸಿದ್ಧಶೆಟ್ಟಿಯ ವೇಷದಲ್ಲಿದ್ದ ಶಿವನು ಹೇಳುತ್ತಾನೆ. ಕುರಬಗೌಡರೆಲ್ಲಾ ಒಂದಾಗಿ ಶಾಂತಯ್ಯನಲ್ಲಿಗೆ ಬಂದು ತನ್ನ ಸಮಸ್ಯೆಯನ್ನು ಹೇಳಿಕೊಳ್ಳುವಷ್ಟರಲ್ಲಿ ಅವನ ಹಟ್ಟಿಯಲ್ಲಿದ್ದ ಕಿನ್ನರಿ ಬ್ರಹ್ಮಯ್ಯನ ಲಿಂಗಮುದ್ರೆಯ ಟಗರು ಸತ್ತ ಸುದ್ದಿ ಬರುತ್ತದೆ. ಸತ್ತ ಟಗರಿಗೆ ಶೃಂಗಾರ ಮಾಡಿ ಮೆರವಣಿಗೆ ಮಾಡಿಕೊಂಡು ಕಲ್ಯಾಣದ ಬೀದಿಗಳಲ್ಲಿ ತರುತ್ತಾನೆ. ಸತ್ತ ಟಗರಿಗೆ ಮರಳಿ ಜೀವ ಬರಿಸುವ ಪವಾಡ ಮೆರೆಯಲು ಸಿದ್ಧನಾಗುತ್ತಾನೆ.

ಸುದ್ದಿ ತಿಳಿದ ಬಸವಣ್ಣ, ಚನ್ನಬಸವಣ್ಣ, ಸೊನ್ನಲಿಗೆ ಸಿದ್ಧರಾಮಯ್ಯ, ನುಲಿಯ ಚಂದಯ್ಯ ಕೊಂಡಗುಳಿ ಕೇಶಿರಾಜ ಮುಂತಾದ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಮುಕ್ಕಣ್ಣ ಶಿವನ ಜಂಗಮವು ಸೇರುತ್ತಾರೆ. ಆಗ

“ರೇವಣಸಿದ್ಧನ ನಿಜಭಕ್ತಿ ಶಾಂತಯ್ಯ
ದೇವನಾಂಘ್ರಿಯ ನೆನೆನೆನೆದು

ತೀವಿ ಪ್ರಸಾದ ತೀರ್ಥವ ಚೆಲ್ಲಲೆದ್ದಿತು

ಜೀವ ಕಳೆಯು ತುಂಬಿಕೊಂಡು"[೨೪]

ಈ ಪವಾಡವನ್ನು ನೋಡಿದ ಬಸವಣ್ಣನು ಶಾಂತಯ್ಯನನ್ನು ಎತ್ತಿ ಮುದ್ದಾಡಿ ಅವನ ಹಣೆಗೆ ಭಸಿತವಿಟ್ಟು ಮಗನೆ ನಿನಗೆ ಏನು ಬೇಕು ಎಂದು ಕೇಳುತ್ತಾನೆ. ಅದಕ್ಕೆ ಶಾಂತಯ್ಯನು ಬಹಿಷ್ಕೃತರಾದ ಕುರುಬರನ್ನು ಉದ್ಧರಿಸು ಎಂದು ಬೇಡುತ್ತಾನೆ. ಹಾಗೆ ಆಗಲಿ ಎಂದ ಬಸವಣ್ಣನವರು 'ಹಾಲುಮತದ ಕುಲದವರ್ಗೆಲ್ಲ ಶಾಂತಯ್ಯಲೋಲ ನೀನೇ ಗುರುವಾಗು' ಎಂದು ಹರಸುತ್ತಾನೆ. ನಾನು ಕುರುಬರ ಗುರುವಾದುದಕ್ಕೆ ಕುರುಹು ಏನು ಎಂದ ಶಾಂತಯ್ಯ ಪ್ರಶ್ನಿಸಿದಾಗ 'ಮೂರೇಣೆನ ಕಂಥೆ"ಯೇ ಕುರುಹು ಎಂದು ಹೇಳುತ್ತಾನೆ. ಈ ಎಲ್ಲಾ ವಿವರಗಳನ್ನು ಅವಲೋಕಿಸಿದರೆ ಶಾಂತಯ್ಯ ಸಂಪ್ರದಾಯದ ಒಡೆಯರು ಒಂದು ಕಿರು ಸಂಘರ್ಷದ ನಂತರ ಲಿಂಗಾಯತದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಸಿದ್ಧಮಂಕ ಸಂಪ್ರದಾಯದ ಒಡೆಯರ ಗುಣಲಕ್ಷಣಗಳನ್ನು ಗ್ರಹಿಸುವಲ್ಲಿ ಸಿದ್ಧಮಂಕ ಚರಿತೆ ಪ್ರಮುಖ ಕೃತಿ. ಈ ಸಾಂಗತ್ಯದಲ್ಲಿ ಸಿದ್ಧಮಂಕನು ಕಾವ್ಯದ ನಾಯಕ. ತಗರ ಪವಾಡದ ಶಾಂತಯ್ಯನಿಗಿಂತ ಹಲವು ರೀತಿಯಲ್ಲಿ ಭಿನ್ನ. ಶಾಂತಯ್ಯನಿಗೆ ರೇವಣಸಿದ್ಧ ಬೆಂಗಾವಲಾಗಿ ನಿಂತಿದ್ದರೆ ಮಂಕನಿಗೆ ಸೊನ್ನಲಿಗೆ ಸಿದ್ಧರಾಮ ಬೆಂಗಾವಲಾಗಿ ನಿಂತಿದ್ದಾನೆ.

ಕುರುಬರ ಗುರು ಪರಂಪರೆಯ ಮತ್ತೊಂದು ಒಳಪಂಗಡವೆಂದರೆ ಸಿದ್ಧರಾಮೇಶ್ವರ ಸಂಪ್ರದಾಯದ ಒಡೆಯರು. ಸಿದ್ಧರಾಮೇಶ್ವರನ ಶಿಷ್ಯ ಸಿದ್ಧಮಂಕ, ಹೀಗಾಗಿ ಈತನ ಅನುಯಾಯಿಗಳನ್ನು 'ಮಂಕೊಡೆಯರು' ಎಂದು ಕರೆಯುತ್ತಾರೆ. ಈ ಸಿದ್ಧಮಂಕನನ್ನು ಮಂಕ ತಂದೆ, ಮರುಳ ಮಂಕ, ಮಂಕಯ್ಯ ಎಂಬ ಪರ್ಯಾಯ ಹೆಸರುಗಳಿಂದಲೂ ಗುರುತಿಸಲಾಗಿದೆ.

"ಮರುಳ ಸಿದ್ಧನಯನ ವರ ಚರಿತವ ಕೇಳೆ

ಹರನೊಲಿವನು ಕರುಣದಿ

ಕುರುಬರ ಕಥೆಯೆಂದು ಜರಿಯಲು ಬೇಡ

ಮರುಳ ಸಿದ್ಧಯ್ಯ ತಾ ಕುರುಬ"[೨೫]

ಇದರಿಂದ ಈ ಕೃತಿಯ ಹೆಸರು ಮರುಳಸಿದ್ಧಯ್ಯನ ಚರಿತೆ ಎಂಬುದು ಸ್ಪಷ್ಟವಾಗುತ್ತದೆ. ಈ ಮರುಳಸಿದ್ಧನೇ ಕಥಾನಾಯಕ. ಇವನು ಜಾತಿಯಿಂದ ಕುರುಬನೆಂದು ಹೇಳಿರುವುದು ಗಮನಿಸಬಹುದಾದ ಅಂಶವಾಗಿದೆ.

ಒಂದು ನೆಲೆಯಲ್ಲಿ ಈ ಎರಡೂ ಸಾಂಗತ್ಯ ಕೃತಿಗಳು ಕುಲಾಂತರದ ಕತೆಯನ್ನು ಹೇಳುವಂತೆ ಕಂಡರೂ ಇನ್ನೊಂದು ನೆಲೆಯಲ್ಲಿ ಕುಲ ಸಮರ್ಥನೆಯ ಕತೆಯನ್ನು ಹೇಳುವಂತೆ ತೋರುತ್ತದೆ. ಸಿದ್ಧಮಂಕ ಚರಿತೆಯು ಒಂದು ಹೆಜ್ಜೆ ಮುಂದೆ ಹೋಗಿ ಕುಲಸಮರ್ಥನೆಯ ಜೊತೆಗೆ ಕುರುಬ ಸಮುದಾಯದಲ್ಲಿರುವ ಕಂಕಣ ಭೇದವನ್ನು ನಾಶಗೊಳಿಸುವ ಪ್ರಯತ್ನ ಮಾಡುತ್ತದೆ. ಈ ನಿಟ್ಟಿನಲ್ಲಿಯೇ ಎರಡೂ ಸಂಪ್ರದಾಯಗಳು ಕವಲೊಡೆದು ನಿಂತಿರುವುದು ತಿಳಿದುಬರುತ್ತದೆ.

ಹಂಡೆ(ಅಂಡೆ) ಕುರುಬರು

ಹಂಡೆ ಕುರುಬರ ಬಗೆಗೆ ೧೨ನೇ ಶತಮಾನದಲ್ಲಿಯೇ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಹಾಲು ಮೊಸರು ಮಾರುವ ಕುರುಬರನ್ನು ಹಂಡೆ ಕುರುಬರು ಎಂದು ಕರೆದಿರುವುದು ಕಂಡು ಬರುತ್ತದೆ. ಕಾದೊಡಿ ಸಿದ್ಧ ಒಡೆಯನು ೧೭ನೇ ಶತಮಾನದಲ್ಲಿ ರಚಿಸಿರಬಹುದಾದ 'ಸಿದ್ಧಮಂಕಚರಿತೆ', ಕೃತಿಕಾರನ ಹೆಸರಿಲ್ಲದ 'ತಗರಪವಾಡ' ಎಂಬ ಸಾಂಗತ್ಯ ಕೃತಿಗಳಲ್ಲಿ ಹಾಗೂ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದ ಒಡೆಯರ ಹತ್ತಿರವಿರುವ ಗದ್ಯ ರೂಪದ ಹಸ್ತ ಪ್ರತಿಯಲ್ಲಿ ಬರುವ ಸನ್ನಿವೇಶಗಳನ್ನು ಗಮನಿಸಿದರೆ ಕಲ್ಯಾಣಪಟ್ಟಣದಲ್ಲಿ ಹಂಡೆಯಲ್ಲಿ ಹಾಲು ಮೊಸರು ಹೊತ್ತು ಮಾರುತ್ತಿದ್ದ(ಅಂಡೆ=ಹಾಲು ಮೊಸರು ಅಳತೆ ಮಾಡುವ ಟೊಳ್ಳಾದ ಬಿದಿರು) ಕುರುಬರಲ್ಲಿ ಕೆಲವರು ಸತ್ತ ಕುರಿಗಳನ್ನು ಹಾಲಹರವಿ (ಹಂಡೆ) ಮೇಲಿಟ್ಟು ತರುವುದನ್ನು ಪಟ್ಟಣವಾಸಿ ಜೈನ ಮತ್ತು ಬ್ರಾಹ್ಮಣರು ವಿರೋಧಿಸಿದ್ದರಿಂದ ಬಿಜ್ಜಳ ಅರಸನು ಹಾಲುಮಾರುವ ಹಂಡೆಕುರುಬರನ್ನು ನಗರ ಪ್ರವೇಶಿಸದಂತೆ ಏಳುಸುತ್ತಿನ ಬೇಲಿಯನ್ನು ಹಾಕಿಸುತ್ತಾನೆ. ಇವುಗಳಲ್ಲಿಯ ಸುಮಾರು ನಲವತ್ತು ಕುಟುಂಬಗಳನ್ನು ಕಲ್ಯಾಣದಿಂದಲೇ ಉಚ್ಚಾಟಿಸ ಲಾಗುತ್ತದೆ.

"ಹಾಳು (ಕಂಬಿಗೆ) ಸತ್ತ ಕುರಿ ಮಾಂಸವ ಕಟ್ಟಿ
ಸಾಲುವಿಡಿದು ಕಂಬಿ ಬದಲು
ಮೇಲನಜೆಯದ ರಾಯನು ಮಾದಿಗರುಗೂಡಿ
ಹಾಳು ಮಾಡಿದರು ಪಟ್ಟಣವ'[೨೬]

"ಸತ್ತ ಹೆಣವ ಹೊತ್ತು ಪಟ್ಟಣದೊಳು ತರ
ಲತ್ಯಂತ ಪಾತಕವೆನುತ
ಸತ್ಯರು ಸಕಲಾಗಮ ಶಾಸ್ತ್ರಯುಕ್ತರು
ಭಕ್ತಿಯನಜೆಯದ ಕುಲಜರು"[೨೭]

"ಹೊಲೆಗಲಸಿದನ ಬಿಜ್ಜಳ ಪಟ್ಟಣವನು
ನೆಲೆದಪ್ಪ ಬೇಕೆನುತಲ್ಲ

ಹಲರು ನೆರೆದು ಹದಿನೆಂಟು ಸಮಯದೊಳು
ಸಲರೆಂದು ಹೊಱಹಾಕಿದರು"[೨೮]

"ಒಂದು ದಿನದಿ ಸತ್ತಕುರಿಯ ಕಂಬಿಯ ಮೇಲೆ
ಬಂಧಿಸಿ ತಂದರೆಮ್ಮವರು
ತಂದು ಮೊಸರು ಮಾರುತಿರಲು ನಮ್ಮವರೆಲ್ಲ
ಬಂದಿತು ಕೇಡು ಕೇಳೊಡೆಯ"[೨೯]

"ಕುರುಬರಾದವರೆಲ್ಲ ಕುಲಕೆ ಹೊರಗುಯೆಂದು
ಹೊರಡಿಸಿ ಹನ್ನೆರಡು ವರುಷ
ಹೊರಗೆ ಕಾಲವ ಕಳೆಯಲು ಒಬ್ಬ ಶರಣನು
ಗುರುತ ಕೊಟ್ಟನು ನಿಮ್ಮ ಬಳಿಗೆ"[೩೦]

ಈ ಬಗ್ಗೆ ಇನ್ನೊಂದು ಕತೆಯಲ್ಲಿ ತಿಳಿದು ಬರುವಂತೆ ಇವರಿಗೆ ಲಿಂಗಧರಿಸಲು ಒತ್ತಾಯ ಮಾಡಿದಾಗ ಅದಕ್ಕೆ ಒಪ್ಪದೆ ಅಲ್ಲಿಂದ ಗುಳೆ ಹೋಗುತ್ತಾರೆ ಎಂಬ ಉಲ್ಲೇಖವೂ ದೊರೆಯುತ್ತದೆ. ಹೀಗೆ ಹೊರಹಾಕಲ್ಪಟ್ಟ ನಲವತ್ತು ಕುಟುಂಬಗಳು ಮುದ್ದೇಬಿಹಾಳ ತಾಲೂಕಿನ 'ನಾಲತವಾಡ' ಗ್ರಾಮಕ್ಕೆ ಬಂದು ನೆಲಸುತ್ತಾರೆ. ನಲವತ್ತು ಕುಟುಂಗಳು ನೆಲಸಿದ ಸ್ಥಳದಲ್ಲಿ ನಲವತ್ತು ವಾಡ(ಮನೆ)ಗಳನ್ನು ಕಟ್ಟಿಕೊಂಡಿದ್ದರಿಂದ ಈ ಗ್ರಾಮಕ್ಕೆ 'ನಲವತ್ತುಬಾಡ' ಎಂಬ ಹೆಸರು ಬಂದಿತು. ನಲವತ್ತುಬಾಡ>ನಲವತ್ತುವಾಡ>ನಾಲ್ವತ್ತ್ವಾಡ> ನಾಲತವಾಡ ಎಂದು ಇಂದಿನ ರೂಪ ಪಡೆದಿದೆ. ಈ ನಲವತ್ತು ಕುಟುಂಬಗಳೇ ಬೆಳೆದು ಬಾಗೇವಾಡಿ ಮತ್ತು ಮುದ್ದೇಬಿಹಾಳ ಪರಿಸರದಲ್ಲಿ ವಾಸವಾಗಿವೆ. ಮೂಲದಲ್ಲಿ ಹಂಡೆಯಲ್ಲಿ ಹಾಲುಮಾರುವ ಕುರುಬರೇ ಇವರಾಗಿರುವ ಸಾಧ್ಯತೆಯಿದೆ. ಜೈನಧರ್ಮದ ಪತನಾನಂತರ ಶೈವ ಪ್ರಭಾವ ಹೆಚ್ಚಿತು. ಶೈವದ ಸ್ಥಾನವನ್ನು ವೀರಶೈವ ಆಕ್ರಮಿಸಿಕೊಂಡಾಗ ಹಂಡೆಕುರುಬರು ವೀರಶೈವ ಧರ್ಮ ಸ್ವೀಕರಿಸಿದ್ದು ಸ್ಪಷ್ಟವಾಗುತ್ತದೆ.

ಕುರುಬ ಸಮುದಾಯದಲ್ಲಿ ವಿಶಿಷ್ಟ ಇತಿಹಾಸ ಹೊಂದಿರುವ ಪಂಗಡವೆಂದರೆ ಹಂಡೆ ಕುರುಬರೇ ಆಗಿದ್ದಾರೆ. ಇವರು ಬಹು ಹಿಂದಿನಿಂದ ಶಕ್ತಿವಂತರಾಗಿ, ಶೌರ್ಯವಂತರಾಗಿ ಅನೇಕ ಸಾಹಸಗಳನ್ನು ಮೆರೆದಿರುವರು. ಗ್ರಾಮಗಳಲ್ಲಿ ಗೌಡಿಕೆ, ವಿಜಯನಗರದ ಅರಸರ ಸೈನ್ಯದಲ್ಲಿ ರಾವುತಿಕೆ, ಬಿಜಾಪುರ ಬಾದಷಹರಲ್ಲಿ ಫೌಜುದಾರಿಕೆ ಮತ್ತು ಕೆಲವು ಸಂಸ್ಥಾನಗಳಲ್ಲಿ ಪಾಳೆಯಗಾರಿಕೆ ವಹಿಸಿಕೊಂಡಿರುವುದಕ್ಕೆ ಉಲ್ಲೇಖಗಳು ಸಾಕ್ಷಿಯಾಗುತ್ತವೆ.

ಬಾಲದ ಹನುಮಪ್ಪನಾಯಕ ಈ ಒಳಪಂಗಡದ ಮೂಲ ಪುರುಷ. ಬುಕ್ಕರಾಯ ಚರಿತ್ರೆಯ ಪ್ರಕಾರ "ಇವನು ಈ ಸಮುದಾಯದ ಮೂಲಪುರುಷ ಎನ್ನುವುದಕ್ಕಿಂತ ಆಧುನಿಕ ಹಂಡೆ ಅರಸರ

ಮೂಲ ಪುರುಷ ಎನ್ನುವುದೇ ಲೇಸು"[೩೧] ಎಂದು ಚಂದ್ರಕಾಂತ ಬಿಜ್ಜರಗಿಯವರ ಅಭಿಪ್ರಾಯ. ಆಂಧ್ರ ಪ್ರದೇಶದ ಅನಂತಪುರ ಜಿಲ್ಲಾ ಕೇಂದ್ರವು ಈ ನಾಯಕನ ಮೂಲಸ್ಥಾನ ಎಂದು ಆಸಕ್ತರ ವಾದ. "ವಿಜಯನಗರ ಸಂಸ್ಥಾಪಕರಾದ ಹಕ್ಕ-ಬುಕ್ಕ ಸಹೋದರರಲ್ಲಿ ಒಬ್ಬನಾದ ಬುಕ್ಕರಾಯನ ದಿವಾನನಾದ ಚಿಕ್ಕಪ್ಪ ಒಡೆಯರು ಇಲ್ಲಿ ಒಂದು ಜಲಾಶಯವನ್ನು ನಿರ್ಮಿಸಿದ್ದರು. ಅದರ ಎಡಬಲಗಳಲ್ಲಿ ತನ್ನ ಅರಸ ಬುಕ್ಕರಾಯನ ಹೆಸರಿನಲ್ಲಿ 'ಬುಕ್ಕರಾಯ ಸಮುದ್ರವನ್ನು ಆತನ ಹೆಂಡತಿಯಾದ ಅನಂತಮ್ಮಳ ಹೆಸರಿನಲ್ಲಿ 'ಅನಂತಸಾಗರ'ವನ್ನೂ ನಿರ್ಮಿಸುತ್ತಾನೆ. ಈ ಸಂಗತಿ ಕೆರೆಯ ಬಳಿ ಇರುವ 'ದೇವರಕೊಂಡ' ಎಂಬ ಗುಡ್ಡದ ಮೇಲಿರುವ ದೇವಾಲಯದಲ್ಲಿ ದೊರೆಯುವ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಕಾಲ ೧೨೨೪"[೩೨] ಎಂದು ಡಾ. ಎಸ್.ಸಿ. ಪಾಟೀಲರು ತಿಳಿಸುತ್ತಾರೆ.

ಬುಕ್ಕರಾಯ ಸಮುದ್ರವೆಂಬ ಪಟ್ಟಣವು ಮುಂದೆ ಬುಕ್ಕಪಟ್ಟಣವೆಂದೂ, ನಂತರದಲ್ಲಿ ಅನಂತಸಾಗರವು ಅನಂತಪುರ ಪಟ್ಟಣವೆಂದು ಹೆಸರು ಪಡೆಯಿತು. ಮುಂದೆ ಇದು ಹಂಡೆ ಅರಸರ ವಶವಾದ ಮೇಲೆ ಈ ಪಟ್ಟಣವು 'ಹಂಡೆ ಅನಂತಪುರ' ಎಂಬ ಹೊಸ ಹೆಸರು ಪಡೆಯಿತು. ಈ ಪ್ರದೇಶವನ್ನು ಆಳಿದವರೇ ಅಂಡೆ (ಹಂಡೆ) ಅರಸರಾಗಿದ್ದರು.

ಮೈಸೂರು ಓರಿಯಂಟಲ್ ಲೈಬ್ರರಿ ಸಂಗ್ರಹದಲ್ಲಿರುವ ಬುಕ್ಕರಾಯ ಚರಿತ್ರೆಯ ಹಸ್ತಪ್ರತಿ ಕ್ರಿ.ಶ. ೧೮೧೧ರಲ್ಲಿ ಕರ್ನಲ್ ಮನ್ರೋ ಸಿದ್ಧಪ್ಪನಾಯಕನಿಗೆ ನಮ್ಮ ಪೂರ್ವಜರ ಕೈಫಿಯತ್ತು ಬರೆದು ತರಲು ಮೌಖಿಕ ಆಜ್ಞೆ ಮಾಡಿದ್ದರಿಂದ ಹಿರಿಯರಾದ ನಾಲ್ಕು ರೈತರನ್ನು ಕುಳ್ಳಿರಿಸಿ ಬರೆಯಿಸಿದ ಕೈಫಿಯತ್ತು ಇದಾಗಿದೆ. ಈ ಚರಿತ್ರೆಯಲ್ಲಿ ಬಾಲದಹನುಮಪ್ಪ ನಾಯಕನಿಗೆ 'ಇಮ್ಮಡಿ ಹಂಪರಾಯ'ನೆಂಬ ಮಗನಿದ್ದ (ಕುರುಗೋಡು ಬಳ್ಳಾರಿ ಕೈಫಿಯತ್ತಿನಲ್ಲಿ ಇವನಿಗೆ ಐದು ಜನ ಮಕ್ಕಳಿದ್ದ ವಿವರವಿದೆ) ಬಾಲದ ಹನುಮಪ್ಪ ನಾಯಕ ಶಾಸನವೊಂದರ ಪ್ರಕಾರ ಕ್ರಿ.ಶ. ೧೫೩೭ರಲ್ಲಿ ಈ ಪ್ರದೇಶವನ್ನಾಳಿದ ಬಗ್ಗೆ ದಾಖಲೆಗಳಿವೆ'[೩೩] ಎಂದು ಡಾ. ಸಿ. ನಾಗಭೂಷಣ ತಿಳಿಸುತ್ತಾರೆ.

ಹಂಡೆ ಕುರುಬರು ತಮ್ಮ ಆರಾಧ್ಯ ದೈವವಾಗಿ ಸ್ವೀಕರಿಸಿದ್ದು ೧೨ನೇ ಶತಮಾನದಲ್ಲಿ ಹಿರಿಯ ಶರಣರಲ್ಲಿ ಒಬ್ಬನಾದ ಸೊನ್ನಲಿಗೆ ಸಿದ್ಧರಾಮನನ್ನು. ಇವರ ಹಲವು ದಾನಪತ್ರ ಇತ್ಯಾದಿಗಳ ಮೇಲ್ಭಾಗ ಮತ್ತು ಒಳಭಾಗಗಳಲ್ಲಿ ಕಾಣಬಹುದು. ಶೈವ ಮತ್ತು ವೈಷ್ಣವ ಗುರು ಪರಂಪರೆಗೆ ನಡೆದುಕೊಳ್ಳುವ ದಾನದತ್ತಿಗಳನ್ನು ನೀಡಿ ಭಕ್ತಿಯನ್ನು ಮೆರೆದಿದ್ದಾರೆ. ಅಲ್ಲದೆ ಅನೇಕ ಕೋಟೆ, ಅರಮನೆ, ದೇವಾಲಯ, ಭಾವಿ, ಕೆರೆ, ದೀಪಸ್ತಂಭ ಮುಂತಾದವನ್ನು ವಿವಿಧ ಸ್ಥಳಗಳಲ್ಲಿ ನಿರ್ಮಿಸಿದ್ದರೆಂದೂ ತಿಳಿದುಬರುತ್ತದೆ. ಬಳ್ಳಾರಿಯ ಕೋಟೆ, ಅದರೊಳಗಿರುವ ಚಿತ್ರ ಶಿಲ್ಪಗಳಿಂದ ಕೂಡಿದ ಕಲ್ಲಿನ ಬಾವಿ, ಹಾವೇರಿ ಜಿಲ್ಲೆಯಲ್ಲಿರುವ ಬಂಕಾಪುರದ ಪಂಚ ಮಲಕಪ್ಪನ ಬಾವಿ, ಬಳ್ಳಾರಿ ಜಿಲ್ಲೆಯ ಯರ್ರದುರ್ಗದ ಕೋಟೆ ಮತ್ತು ದೇವಾಲಯಗಳು ಕುರುಗೋಡಿನ ನೀಲಮ್ಮ ದೇವಸ್ಥಾನ ಇವೇ ಮೊದಲಾದವು ಇವರ ಚಾರಿತ್ರಿಕತೆಯ ಸ್ವರೂಪವನ್ನು

ತಿಳಿಸುತ್ತವೆ. ಇತ್ತೀಚೆಗೆ ಇವರು ಹಂಡೆವಜೀರ, ಹಂಡೆರಾವುತ ಎಂಬ ವೀರಶೈವೀಕರಣ ಹೆಸರುಗಳಿದ್ದಾಗ್ಯೂ ಇವರ ಬೆಡಗುಗಳು ಕುರುಬ ಮೂಲದವೇ ಆಗಿವೆ.

ಕುಡುವೊಕ್ಕಲಿಗ ಕುರುಬರು

ಉತ್ತರ ಕರ್ನಾಟಕದಲ್ಲಿ ಕುರುಬರಿಂದ ಒಳಪಂಗಡವಾಗಿ ರೂಪುಗೊಂಡವರನ್ನು ಕುಡುವೊಕ್ಕಲಿಗರು ಎಂದು ಕರೆಯಲಾಗುತ್ತದೆ. ಕರ್ನಾಟಕದ ಬಹುಪಾಲು ಜಿಲ್ಲೆಗಳಲ್ಲಿದ್ದರೂ ಇವರ ಸಂಖ್ಯಾ ಬಾಹುಳ್ಯವಿರುವುದು ವಿಜಾಪುರ ಮತ್ತು ಗದಗಗಳಲ್ಲಿ. ಇಂದು ಕುಡುವೊಕ್ಕಲಿಗರು ಕುರುಬರಿಗಿಂತ ಭಿನ್ನವಾದ ಒಂದು ಪ್ರತ್ಯೇಕ ಸಮುದಾಯವಾಗಿ ಗೋಚರಿಸುತ್ತಾರೆ. ಸದ್ಯಕ್ಕೆ ವೀರಶೈವ ಮತಾವಲಂಬಿಗಳಾಗಿರುವ ಇವರು ಶ್ರೇಣೀಕೃತ ವ್ಯವಸ್ಥೆಯಲ್ಲಿ ಕುರುಬರಿಗಿಂತಲೂ ಮೇಲಿದ್ದಾರೆ. ಆದರೆ ಇವರಿಬ್ಬರೂ ಮೊದಲಿನಿಂದ ಭಿನ್ನರಲ್ಲ. ಅಣ್ಣತಮ್ಮಂದಿರಾಗಬೇಕೆಂಬ ಅಲಿಖಿತ ಹೇಳಿಕೆಯೊಂದು ಎರಡು ಸಮುದಾಯಗಳಲ್ಲಿ ಪ್ರಚಾರದಲ್ಲಿದ್ದು ಆಧಾರಗಳಿಲ್ಲದಿಲ್ಲ.

ಹಾಲ್ಮತೋತ್ತೇಜಕ ಪುರಾಣದಲ್ಲಿ ಬರುವ ಕಥಾಭಾಗದೊಂದಿಗೆ "ಒಮ್ಮೆ ಕೈಲಾಸದಲ್ಲಿ ಶಿವನು ಸಭೆ ನಡೆಸುತ್ತಿದ್ದಾಗ ಶಿವನ ಎಡಬಲದಲ್ಲಿದ್ದ ಇಬ್ಬರು ಗಂಧರ್ವರು ಕುರೂಪಿ ಮುನಿಯೊಬ್ಬನನ್ನು ಕಂಡು ಕರಬಡಿದು ಅಪಹಾಸ್ಯ ಮಾಡಿ ನಕ್ಕರು. ಇದರಿಂದ ಅವಮಾನಿತನಾದ ಮುನಿಯು ಕಡುಕೋಪದಿಂದ ಅವರಿಗೆ ನರಲೋಕಕ್ಕಿಳಿದು ಕುಡುವೊಕ್ಕಲಿಗರ ಉದರದಲ್ಲಿ ಸತಿಪತಿಗಳಾಗಿ ಉದ್ಭವಿಸಿರಿ ಎಂದು ಶಾಪವಿತ್ತನು"[೩೪] ಎಂದು ಭಾಗೂತನಯ ನವಿಲು ವಿವರಿಸುತ್ತಾರೆ. ಅದರಂತೆ "ಜಾಗೃತ ಪುರದಲ್ಲಿ ಕುಡುವೊಕ್ಕಲಿಗ ಕುಲದ ಮುದ್ದುಗೊಂಡ, ಮುದ್ದಾಯಿ ಗರ್ಭದಲ್ಲಿ ಆದಿಗೊಂಡ ಹುಟ್ಟಿದರೆ, ಮುದ್ದುಗೊಂಡನ ಸೋದರಿಯಲ್ಲಿ ಚುಂಚಲೆಯ ಜನನವಾಯಿತು. ಇವರಿಬ್ಬರಿಗೆ ಮದುವೆಯಾಗಿ ಆಯ್ಗಂಡ, ಪಾಯ್ಗೊಂಡ, ಅಮರಗೊಂಡ, ಜಾಯ್ಗೊಂಡ, ಶಿವಪದ್ಮರೆಂಬ ಮಕ್ಕಳು ಹುಟ್ಟಿದರು."[೩೫] ಕೃಷಿಕ ಮನೆತನವಾದ್ದರಿಂದ ಮೊದಲಿನ ನಾಲ್ವರು ಒಕ್ಕಲುತನವನ್ನು ಮಾಡುತ್ತಿದ್ದರೆ ಕೊನೆಯವ ಉಂಡಾಡಿಯಾಗಿದ್ದ, ಆದ್ದರಿಂದ ಇವನಿಗೆ ಶಿವಪದ್ಮ ಎಂಬ ಹೆಸರು ಹೊರಟುಹೋಗಿ ಉಂಡಾಡಿ ಪದ್ಮಣ್ಣ ಎಂಬ ಅಡ್ಡ ಹೆಸರು ಬಳಕೆಗೆ ಬರುತ್ತದೆ. ಇದು ಸುಮಾರು ಎಲ್ಲಾ ಹಾಲುಮತ ಪುರಾಣಗಳಲ್ಲಿ, ತಗರಪವಾಡದಲ್ಲಿ ಸಾಮಾನ್ಯವಾಗಿ ಬರುವ ದಂತಕತೆಯಾಗಿದೆ.

ಜಾಬಾಲಿಯ ರಕ್ತದಿಂದುದ್ಭವಿಸಿದ ಕುರಿಗಳನ್ನು ಶಿವಪಾರ್ವತಿಯರು ಕಾಯಬೇಕಾಯಿತು. ಇದರಿಂದಾಗಿ ದಣಿದ ಪಾರ್ವತಿ ದೇವಿಯು ಆ ಕುರಿಗಳನ್ನು ಹುತ್ತವೊಂದರಲ್ಲಿ ಹೊಗಿಸಿ ಅದಕ್ಕೆ ತನ್ನ ಮೂಗುತಿಯ ಮುದ್ರೆಯನ್ನೊತ್ತಿದಳು.

ಒಂದು ದಿನ ಆದಿಗೊಂಡನು ತನ್ನ ಮಕ್ಕಳನ್ನು ಕರೆದು ಬೇಸಾಯ ಮಾಡಲು ಹೇಳುತ್ತಾನೆ. ಶಿವಪದ್ಮನು ಹೊಲದಲ್ಲಿ ನೇಗಿಲು ಉಳುವಾಗ ನೇಗಿಲು ಕುರಿ ಇರುವ ಹುತ್ತಕ್ಕೆ ತಾಗಿ ಕುರಿಗಳು

ಹೊರಬಂದಾಗ ಪದ್ಮಣ್ಣನು ಕುರಿಗಳನ್ನು ಕಾಯತೊಡಗುವನು. ಇವನ ಅಣ್ಣಂದಿರು ಒಕ್ಕಲುತನ ಮಾಡತೊಡಗಿದರು. ಇವರ ಈ ಎರಡು ವೃತ್ತಿಗಳೇ ಕಾಲಕ್ರಮೇಣ ಎರಡು ಒಳಪಂಡಗಳಾದವು. ಆದಿಗೊಂಡನ ಮೊದಲ ನಾಲ್ವರು ಮಕ್ಕಳು ಕುಡುವೊಕ್ಕಲಿಗರಾದರು.

ಇದೇ ಕಥನವು ತಗರ ಪವಾಡದಲ್ಲಿಯೂ ಇದ್ದು ಆದಿಗೊಂಡನ ಪತ್ನಿಯ ಹೆಸರು ಮಲ್ಲಮ್ಮ ಎಂದಿದೆ.

"ಒಕ್ಕಲಿಗನ ಆದಿಗೊಂಡನ ಉದರದಿ
ಚಿಕ್ಕವ ಸಹ ಏಳು ಮಂದಿ
ಒಕ್ಕಲಿಗನ ಇದಕೆ ಒಕ್ಕಲಿಕ್ಕ ಬೇಕೆಂದು
ಮುಕ್ಕಣ್ಣ ತಾನು ಧ್ಯಾನಿಸಿದ"[೩೬]

ಎಂಬ ಕಥಾನಕವು ದೊರೆಯುತ್ತದೆ.

ಒಕ್ಕಲಿಗರಲ್ಲಿ ಹಲವಾರು ಪ್ರಭೇದಗಳಿದ್ದು ಆದಿಗೊಂಡನು ಯಾವ ಒಕ್ಕಲಿಗ ಎಂಬ ಸಂಶಯವು ಬಂದರೂ ಮುಂದೆ ಆದಿಗೊಂಡನ ಮಗ ಪದ್ಮಗೊಂಡನ ವಿಷಯ ಬಂದಾಗ ಅವರು ಕುಡುಮೊಕ್ಕಲಿಗರೆಂಬ ವಿಷಯ ಸ್ಪಷ್ಟಗೊಳ್ಳುತ್ತದೆ.

"ಕಂದ ನೀ ಕುಡಿವೊಕ್ಕಲಿಗ ಕುರಿಗೂಡಿದ ಕಾರಣ
ದಿಂದೆ ಕುರುಬಗೌಡನಾಗಿ
ನಿನ್ನಯ ಕುಲದೈವ ವೀರ ಬೀರಯ್ಯಗೆ
ಮುಂದೆ ಒಕ್ಕಲು ಆಗಿ ಬದುಕು"[೩೭]

ಎಂದು ಶಿವಪದ್ಮನಿಗೆ ಶಿವನು ಹೇಳುವ ಈ ಮಾತಿನಲ್ಲಿ ಆದಿಗೊಂಡ ಮತ್ತು ಅವನ ಮಕ್ಕಳೆಲ್ಲ ಕುಡುವೊಕ್ಕಲಿಗರೆಂಬುದು ಸ್ಪಷ್ಟವಾಗುತ್ತದೆ. ಅದರ ಜೊತೆಯಲ್ಲಿಯೇ ಶಿವಪದ್ಮನ ವೃತ್ತಿ, ದೇವರು ಎರಡೂ ಭಿನ್ನವಾಗಿ ಅವನು ಕುಡುವೊಕ್ಕಲಿಗನಿಂದ ಬೇರೆಯಾಗಿ ನಿಲ್ಲುವುದು ಅಭಿವ್ಯಕ್ತವಾಗಿದೆ.

ಭಾರತದ ದೇಶದ ಕುರುಬರ ಚರಿತ್ರೆ ಬರೆದ ವಿ.ಆರ್. ಹನುಮಂತಯ್ಯನವರು "ಕುಡುವೊಕ್ಕಲಿಗರನ್ನು ಕುರುಬರ ಒಳಪಂಗಡದಲ್ಲಿಯೇ ಸೇರಿಸುತ್ತಾರೆ. ಇದಕ್ಕೆ ಅವರು ಕೊಡುವ ಆಧಾರವೆಂದರೆ ಕುರುಬರು, ಕುಡುವೊಕ್ಕಲಿಗರು ಒಂದೇ ಕುಲದ ದಾಯಾದಿಗಳೆಂದು ರುದ್ರ ಬ್ರಹ್ಮಾಂಡ ಪುರಾಣವೆಂಬ ಒಂದು ಪುರಾತನ ಗ್ರಂಥದಲ್ಲಿ ಹೇಳಿದೆ"[೩೮] ಎಂಬುದು.

ಹೆಳವರೂ ಕುರುಬರು ಮತ್ತು ಕುಡುವೊಕ್ಕಲಿಗರ ಸಂಬಂಧವನ್ನು ಸಾರುತ್ತಲೇ ಬಂದಿದ್ದಾರೆ. ಪುರಾಣ ಮತ್ತು ಹೆಳವರು ಹೇಳಿಕೆಗಳಿಂದ ಕುರುಬರು ಮತ್ತು ಕುಡುವೊಕ್ಕಲಿಗರು ಅಣ್ಣತಮ್ಮಂದಿರು ಎಂಬುದು

ಜನಜನಿತವಾಗಿ ಬೆಳೆದುಬಂದಿದೆ. 'ಇಂತಹ ಹೇಳಿಕೆಗಳೇ ಕಾರಣವಾಗಿ ಪುರಾಣದ ಮೂಲ ಗೆಝೆಟಿಯರ್ (೧೯೪೪) ರಚ್ಚೇರ ಬಗೆಗೆ ಹೇಳುವಾಗ "ಕುರುಬರ ಮೂಲ ಪುರುಷನಾದ ಕುರುಪಿ ಎಂಬುವನಿಗೆ ಕುಡುವೊಕ್ಕಲಿಗ ಎಂಬ ಸಹೋದರನಿದ್ದನು"[೩೯] ಎಂಬ ಮಾತು ಬರುತ್ತದೆ.

ಕುಡುವೊಕ್ಕಲಿಗರು ಕುರುಬರು-ರೆಡ್ಡಿಗಳು ಮೂಲತಃ ಒಂದೇ ಊಳಿಗದವರಾಗಿದ್ದು ಆಂಧ್ರದಿಂದ ಬಂದವರೆಂಬುದು ಚಾರಿತ್ರಿಕ ಸಂಗತಿ. ಮೊದಲು ಎಲ್ಲರೂ ಮಾಂಸಾಹಾರಿಗಳಾಗಿದ್ದರು. ಮುಂದೆ ಇವರು ಬಸವನಾಡಿಗೆ ಬಂದ ಮೇಲೆ ವೀರಶೈವ ಧರ್ಮ ಸ್ವೀಕರಿಸಿ ಪೂರ್ಣ ಶಾಖಾಹಾರಿಗಳಾದರು. ಫಲವತ್ತಾದ ಭೂಮಿ ಇರುವಲ್ಲಿ ಒಕ್ಕಲುತನವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಕುಡುವೊಕ್ಕಲಿಗರು ಅಲ್ಲಲ್ಲಿ ಚದುರಿದಂತೆ ಕರ್ನಾಟಕದಾದ್ಯಂತ ವಾಸವಾಗಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ಗಡಿ ಪ್ರದೇಶವಾದ ಸೊಲ್ಲಾಪುರದಲ್ಲಿ ಸುಮಾರು ಎರಡು ಸಾವಿರ ಕುಡುವೊಕ್ಕಲಿಗರು ವಾಸವಾಗಿದ್ದಾರೆಂದು ತಿಳಿದು ಬರುತ್ತದೆ. ಸುತ್ತಮುತ್ತಲ ಹಳ್ಳಿಯ ಜನರು ಬೇರೆ ಬೇರೆ ಕಾರಣಗಳಿಗಾಗಿ ಅಲ್ಲಿ ಹೋಗಿ ನೆಲಸಿರಬಹುದಾಗಿದೆ.

ಶಿವಭಕ್ತನಾದ ಕುಡುವೊಕ್ಕಲಿಗ ಹೆಗ್ಗೌಡನ ಹೊಲಕ್ಕೆ ವಿಸ್ತಾರವಾದ ಹುತ್ತವಿದ್ದು ಅದರ ಮೇಲೆ ಮುತ್ತುಗದ ಮರ ಬೆಳೆದಿತ್ತು. ಇದನ್ನು ನೆಲಸಮ ಮಾಡುವುದಕ್ಕಾಗಿ ಮರಕಡಿದು ನೇಗಿಲು ಹೂಡಲು ಹುತ್ತದ ಕೆಳಗಿನ ಗವಿಯಿಂದ ಇರುವೆಯಂತೆ ಬಂದು ಕುರಿಗಳನ್ನು ಹುಲ್ಲು ಹಾಕಿ ಸುಟ್ಟನು. ಆದರೂ ಅವು ತಂಡೋಪತಂಡವಾಗಿ ಬಂದು ಹೊಲ ಮೇಯುತ್ತಿರುವಾಗ ಒಕ್ಕಲು ಮಗ ಅಡ್ಡಗಟ್ಟಿ ತರುಬಿದನು. ಆಗ ಶಿವನು ವೃದ್ಧ ವೇಷದಿಂದ ಬಂದು ಆ ಕಿಲಾರಗಳಲ್ಲಿ ಒಂದು ಕಪಿಲೆಯನ್ನು ಬೇಡಿದನು. 'ಇದು ನನ್ನ ಸಂಪತ್ತಲ್ಲ ಹೇಗೆ ಕೊಡಲಿ' ಎಂದು ಒಕ್ಕಲು ಮಗ ನುಡಿದನು. 'ಈ ಸಂಪತ್ತೆಲ್ಲ ನೀನೆ ಇಟ್ಟುಕೋ' ಎಂದ ಶಿವನ ಮಾತಿಗೆ ಒಕ್ಕಲಿಗ 'ನನಗೆ ಬೇರೆ ಸಂಪತ್ತು ಅಪಾರವಾಗಿದೆ. ಅನ್ಯರ ಸಂಪತ್ತು ನನಗೆ ಬೇಡ' ಎಂದು ಉತ್ತರಿಸಿದ. ಆಗ ಶಿವನು 'ಇದೆಲ್ಲ ನಿನ್ನದು' ಎಂದು ಒಕ್ಕಲು ಮಗನಿಗೆ ನಂಬುವಂತೆ ಹೇಳಿ ಆಶೀರ್ವದಿಸಿ ಇವುಗಳಿಂದ ತುಪ್ಪಳ ಕತ್ತರಿಸುವ, ನೂಲುವ, ನೇಯುವ ವಿಧಾನಗಳನ್ನು ಹೇಳಿಕೊಡುತ್ತಾನೆ. ಒಕ್ಕಲು ಮಗ ತುಪ್ಪಳ ಕತ್ತರಿಸಿ, ನೇಯ್ದು ಅದರಿಂದ ಲಿಂಗಕ್ಕೆ ಗದ್ದುಗೆ ಮಾಡಿ ಪೂಜಿಸಿದ ಬಳಿಕ ಶಿವನನ್ನು ಸ್ಮರಿಸುತ್ತಲೇ ಶಿವನು ಪ್ರತ್ಯಕ್ಷನಾಗುತ್ತಾನೆ. ಆಗ ಶಿವನಿಗೆ ಹಾಲು ಮೊಸರಿನ ಆರೋಗಣೆ ಮಾಡುವನು. ಇದಕ್ಕೆ ಮೆಚ್ಚಿದ ಶಿವನು ಕುರಿ ಕಾಯಲು ತಳವಾರನನ್ನು ಕೊಟ್ಟು ಮಾಯವಾದನು.

ಒಕ್ಕಲು ಮಗನ ಸುತ್ತ ಹಾಲು ಹೈನು ಬೆಳೆದು ನಿಂತಿರುವುದನ್ನು ಕಂಡ ಶಿವನು ಊಳಿಗದವಳಾಗಿರಲು ಒಬ್ಬ ರಕ್ಕಸಿಯ ಮಗಳನ್ನು ಕಳಿಸಿದನು. ಒಕ್ಕಲು ಮಗ ಅವಳಿಗೆ ಮೋಹಗೊಂಡು ಹೆಂಡತಿಯಾಗಿ ಸ್ವೀಕರಿಸಿದನು. ಬಳಿಕ ತನ್ನ ಮೊದಲ ಹೆಂಡತಿಯನ್ನು ಜ್ಞಾಪಿಸಿಕೊಂಡು ಸ್ವಗ್ರಾಮವಾದ ಕುರಿ ಬೆಟ್ಟದೂರು ಗ್ರಾಮಕ್ಕೆ ಬಂದು ಬಂಧು, ಬಳಗ, ಪ್ರಭು ಗೌಡರನ್ನು ನೆರವಿಸಿ ಚಂದಗೊಂಡನ ಬಸಿರಲ್ಲಿ ಬಂದ ಐದು ಜನರಲ್ಲಿ ಒಬ್ಬನಾದ ನಾನು ಮಂದಮತಿಯಂತೆ ಇಷ್ಟು ದಿನ ದೂರ ಹೋದುದಕ್ಕೆ, ತನ್ನಿಂದಾಗಿ

ಕುಲಧರ್ಮವು ವ್ಯತಿರಿಕ್ತವಾದುದಕ್ಕೆ ಕ್ಷಮೆ ಇರಲಿ ಎಂದು ಭಿನ್ನವಿಸಿಕೊಂಡನು. ಅವರೆಲ್ಲ ಶಿವಸ್ಪರ್ಶದಿಂದ ನೀನು ಕುಲೀನನೇ ಆಗಿರುವೆ, ಮರುಗಬೇಡ ಎಂದು ಹೇಳುವರು. ಆಗ ತನ್ನ ವಧುವನ್ನು ತನಗೆ ಒಪ್ಪಿಸಲು ಬಿನ್ನವಿಸಿದರೆ ತಂದೆ ಚಂದಗೊಂಡನು ಇವನು ರಾಕ್ಷಸಿಯನ್ನು ಮದುವೆಯಾಗಿರುವನೆಂದು ಎತ್ತಿ ನುಡಿಯುತ್ತಾನೆ.

ಶಿವನೊಲಿದ ಬಳಿಕ ಇವನಲ್ಲಿ ಅದನೆಲ್ಲಾ ಎಣಿಸಬಾರದು ಎಂದು ಎಲ್ಲರೂ ಹೇಳಿದ ಬಳಿಕ ಅವನು ಕೊಟ್ಟ ಆಸ್ತಿಯ ಭಾಗ ಮತ್ತು ಕುಲವಧುವಿನೊಂದಿಗೆ ತನ್ನ ಕುರಿ ಹಿಂಡಿನತ್ತ ಹೆಗ್ಗಗೌಡ ಮರಳಿಬರುವನು. ಬಳಿಕ ಸಿದ್ಧರಾಮನನ್ನು ಕಾಣಬಯಸಿ ಇಬ್ಬರು ಹೆಂಡತಿಯರೊಡನೆ ಸೊಲ್ಲಾಪುರಕ್ಕೆ ಪ್ರಯಾಣ ಬೆಳೆಸಿದನು. ದಾರಿಯಲ್ಲಿ ಸರವೂರಿನ ಹತ್ತಿರ ತನ್ನ ಕುರಿಹಿಂಡನ್ನು ತರುಬಿ ಅಲ್ಲಿಂದಲೇ ಸಿದ್ಧರಾಮನಿಗೆ ಹಾಲು ಬೆಣ್ಣೆ ಕಳುಹಿಸತೊಡಗಿದನು.

ಈ ರೀತಿ ಹಲವು ದಿನ ಕಳೆಯುತ್ತಿರಲು ಸಿದ್ಧರಾಮನು "ಕರೆಯಿಸಿ ಸರವೂರಲ್ಲಿ ಮರುಳ ಮಂಕನು ತಪಸ್ಸು ಮಾಡುತ್ತಲಿದ್ದು ನೀನು ಅವನ ರಕ್ಷಣೆಗಾಗಿ ಅಲ್ಲಿಯೇ ನೆಲಸು ಎಂದು ಹೇಳಿದನು. ಆ ಮೇರೆಗೆ ಕುಲಸ್ತ್ರೀ ಸಿದ್ಧಮ್ಮನೊಂದಿಗೆ ನೆಲಸಿದನು"[೨೦] ಎಂದು ಸಿದ್ಧಮಂಕ ಚರಿತೆಯಲ್ಲಿ ಪ್ರಸ್ತಾಪಿತ ಕತೆ ಲಭ್ಯವಾಗುತ್ತದೆ. ಈ ಕೃತಿಯ ಏಕೈಕ ಹಸ್ತಪ್ರತಿ ಮೂಲತಃ ಹೆಗ್ಗಡದೇವನ ಕೋಟೆ ತಾಲ್ಲೂಕು ಸರಗೂರು ಹೋಬಳಿ ಎತ್ತಿಗ ಗ್ರಾಮದ ಮಠದಲ್ಲಿ ಲಭಿಸಿದೆ. ಈ ಹಸ್ತಪ್ರತಿಯ ಪ್ರಕಾರ ಕುರುಬರು ಅಥವಾ ಕುಡುವೊಕ್ಕಲಿಗರು ಒಬ್ಬರೇ ಎಂಬ ಅರ್ಥ ಹೊರಡುತ್ತದೆ. ಕುಡುವೊಕ್ಕಲಿಗರು ಕಂಬಳಿ ನೂಲುವ ಮತ್ತು ನೇಯುವ ವೃತ್ತಿ ಮಾಡುತ್ತಿದ್ದರೆಂಬ ಅಂಶವೂ ಸ್ಪಷ್ಟವಾಗುತ್ತದೆ. ಹೀಗೆ ಕುಡುವೊಕ್ಕಲಿಗರ ಪೌರಾಣಿಕತೆ ಮತ್ತು ಚಾರಿತ್ರಿಕತೆಯನ್ನು ವಿಶ್ಲೇಷಿಸಬಹುದಾಗಿದೆ.

ಕುಂಚಿಟಿಗ ಕುರುಬರು

ಉತ್ತರ ಕರ್ನಾಟಕದಲ್ಲಿ ಕುರುಬರಿಂದ ಒಳಪಂಗಡವಾಗಿ ರೂಪುಗೊಂಡವರನ್ನು ಕುಡುವೊಕ್ಕಲಿಗರು ಎಂದು ಕರೆದರೆ, ದಕ್ಷಿಣ ಕರ್ನಾಟಕ ಕುರುಬರಿಂದ ಬೇರ್ಪಟ್ಟು ಒಳಪಂಗಡವಾಗಿ ರೂಪುಗೊಂಡವರೇ ಒಕ್ಕಲಿಗರು. ಒಕ್ಕಲಿಗರ ಒಳಪಂಗಡವಾಗಿರುವ ಕುಂಚಿಟಿಗರು ಸುದೀರ್ಘವಾದ ಪರಂಪರೆಯುಳ್ಳವರು. ಆದಿಗೊಂಡ ಮತ್ತು ಮುದ್ದಮ್ಮನ ಹೊಟ್ಟೆಯಲ್ಲಿ ಕುರುಬ ಒಕ್ಕಲಿಗರು ಹುಟ್ಟುತ್ತಾರೆ. ಕುರಿಯನ್ನು ಕಾದು ಉಂಡಾಡು ಪದ್ಮಣ್ಣ ಕುರುಬನಾದರೆ, ಅವನ ಅಣ್ಣಂದಿರು ಒಕ್ಕಲುತನ ಮಾಡಿಕೊಂಡು ಒಕ್ಕಲಿಗರಾದರು. ಕುರುಬ ಮತ್ತು ಕುಂಚಿಟಿಗರ ನಡುವೆ ಹತ್ತಿರದ ಸಂಬಂಧವಿತ್ತೆಂದು ತಿಳಿದು ಬರುತ್ತದೆ. ವಿಜಯನಗರ ರಾಜವಂಶಜರು ಸಂಗಮ ವಂಶದ ಕುರುಬರು. ವಿಜಯ ನಗರ ಪತನಾನಂತರ ಇವರು ಮತ್ತು ಇವರ ಬಂಧುಗಳು ಬೇರೆ ಬೇರೆ ಪಟ್ಟಣಗಳಲ್ಲಿ ವಾಸವಾಗಿ ಕುಂಚಿಟಿಗರಾದರೆಂಬ ಒಂದು ಕಥಾನಕವು ಲಭ್ಯವಾಗುತ್ತದೆ.

ಕುಂಚಿಟಿಗರು ಎಂಬ ಹೆಸರೇ ಕುರುಬರು ನೇಯ್ದು ಕಂಬಳಿಗೆ ಸರಿ ಹಾಕುವ "ಕುಂಚ"ದಿಂದಲೇ ಬಂದಿದೆ ಎಂದು ಐತಿಹ್ಯಗಳು ಹೇಳುತ್ತವೆ. ಬಹುಶಃ ಕುರುಬರ ಕಂಬಳಿ ನೇಯುವ ಕಾಯಕದಲ್ಲಿ 'ಸರಿಹಾಕುವ' ಕಾರ್ಯದಿಂದ ಅವರ ವೃತ್ತಿಗೆ ಇವರು ಸಹಾಯಕರಾಗಿರಬೇಕು. ಆದ್ದರಿಂದಲೇ 'ಕುಂಚ' ಹಿಡಿದಿದ್ದರಿಂದ 'ಕುಂಚಿಟಿಗರು' ಆದರು ಎಂಬುದು ಐತಿಹ್ಯ.

ಇನ್ನೊಂದು ಐತಿಹ್ಯದ ಪ್ರಕಾರ ಕಂಚಿನಾಡಿನಲ್ಲಿದ್ದ ಸಂಗಮ ವಂಶದ ಅರಸರು ಹಾಳಾದ ಮೇಲೆ ತಮ್ಮನ್ನು ರಕ್ಷಿಸಿಕೊಳ್ಳಲು ಹಲವು ಪಟ್ಟಣಗಳಿಗೆ ಪಲಾಯನ ಮಾಡಿ ಅಲ್ಲಿಯೇ ನೆಲಸಿದ್ದರಿಂದ ತಾವು ಕಂಚಿನಾಡಿನವರು ಎಂದು ಹೇಳಿಕೊಂಡರು. ಆದ್ದರಿಂದ ಇವರಿಗೆ ಕುಂಚಿಟಿಗರು ಎಂಬ ಹೆಸರು ಪ್ರಾಪ್ತವಾಯಿತು. ಶಿರಾ ತಾಲ್ಲೂಕಿನ ಬೆಜ್ಜಿಹಳ್ಳಿಯಲ್ಲಿ ಕುರುಬರ ಜಲಧಿ ಬೊಪ್ಪರಾಯನಿಗೆ ದೇವಾಲಯವನ್ನು ಕುಂಚಿಟಿಗ ಒಕ್ಕಲಿಗರು ಕಟ್ಟಿಸಿದ್ದನ್ನು ಎಡ್ಗರ್ ಥರ್ಸ್ಟನ್ ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಮಗದೊಂದು ಕತೆಯ ಪ್ರಕಾರ ಕುರುಬರು ಕಂಬಳಿ ಮಾಡಲು ಬಳಸುವ ಕುಂಚದಿಂದ ಬಂದದ್ದು ಕುಂಚಿಟಿಗ ಒಕ್ಕಲಿಗರು ಕುರುಬರ ಬಳಿ ಕಂಬಳಿಗೆ ಸರಿ ಹಚ್ಚಿ ಕುಂಚ ಆಡಿಸುವ ಕಾಯಕ ಮಾಡಿಕೊಂಡಿದ್ದರು ಎಂದು ಹೇಳಲಾಗುತ್ತದೆ. ಇವರಲ್ಲಿಯೂ ಜಲದೇವನ ಗೋತ್ರ ಬೆಡಗಿನವರು ತಮ್ಮ ಮಕ್ಕಳಿಗೆ ಬೊಪ್ಪಣ್ಣ, ಬೊಪ್ಪರಾಯ, ಮುದ್ದಮ್ಮ, ಮುದ್ದಕ್ಕ ಎಂದು ಹೆಸರು ಇಡುತ್ತಾರೆ. ಕುಂಚಿಟಿಗರು ಮೂಲದಲ್ಲಿ ಉತ್ತರ ಕರ್ನಾಟಕದ ಭಾಗದವರೇ ಆಗಿದ್ದು ಕಾರಣಾಂತರಗಳಿಂದ ದಕ್ಷಿಣದ ಕಡೆಗೆ ವಲಸೆ ಹೋಗಿದ್ದು ಕಂಡು ಬರುತ್ತದೆ. ಇದಕ್ಕೆ ಇನ್ನೊಂದು ಕಥೆಯು ಪ್ರಚಲಿತವಿದೆ.

ಇಂದ್ರಪ್ರಸ್ಥದ ಬಳಿಯ ದ್ವಾರಕಾಪುರದಲ್ಲಿ (ಕೃಷ್ಣನ ದ್ವಾರಕೆ ಅಲ್ಲ) ಉಂಡೆ ಎತ್ತರಾಯ ರಾಜನಾಗಿದ್ದನು. ಧಾನ್ಯದ ಧನಿಕರಾಯ ಇವನ ಪ್ರಧಾನಿಯಾಗಿದ್ದನು. ಇವರಿಬ್ಬರ ವೃತ್ತಿ ಪಶುಪಾಲನೆ. ಹಾಲು, ಮೊಸರು, ತುಪ್ಪ ಮಾರಿಕೊಂಡು ಶ್ರೀಮಂತರಾಗಿ ಮೆರೆಯುತ್ತಿದ್ದರು. ತುಪ್ಪವನ್ನು ಗಾರೆಗಚ್ಚಿನ ನೆಲದ ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದರು. ರಾಮನ ಮುದ್ರೆಯ ನಾಣ್ಯಗಳು ಇವರಲ್ಲಿ ಕಾಲುಮುರಿದುಕೊಂಡು ಬಿದ್ದಿದ್ದವು. ಇವರ ಸುಂದರಿಯರು ಪಟ್ಟಣಕ್ಕೆ ಹಾಲು ಮಾರಲು ಹೋದಾಗ ಬಾದಷಹನ ಕಣ್ಣಿಗೆ ಬಿದ್ದರು 'ನಿಕಾ' ಮಾಡಿಕೊಡಲು ಕೇಳಿದಾಗ 'ಹಾಲಿನಂಥ ಕುಲ ನೀರಾಗುತ್ತದೆ' ಎಂದು ತಿರಸ್ಕರಿಸಿದರು. ಆದಿಲ್‌ಷಹ ಇವರ ಸುಂದರಿಯರನ್ನು ಸೆರೆ ಹಿಡಿಯಲು ಬಂದಾಗ ಎಲ್ಲ ಸುಂದರಿಯರು ತಪ್ಪಿಸಿಕೊಂಡರು. ಆದರೆ ದೊಡ್ಡಭೈರಮ್ಮ ಎಂಬುವಳು ಸಿಕ್ಕಿಬಿದ್ದಳು. ಇನ್ನು ಇಲ್ಲಿರುವುದು ಸರಿಯಲ್ಲವೆಂದು ರಾತ್ರೋರಾತ್ರಿ ಸುಮಾರು ನೂರಾರು ಎತ್ತಿನ ಬಂಡಿಗಳಲ್ಲಿ ವಲಸೆ ಹೊರಟರು. ಇವರ ಜೊತೆಯಲ್ಲಿ ಕಾಡುಗೊಲ್ಲರ ಚಂದ್ರಮುತ್ತಿ, ಕಂಬಳಿ ಮಗ್ಗದ ಬಸವೇಗೌಡ, ತಳವಾರ ರಾಮಣ್ಣ ಮುಂತಾದವರು ಹೊರಟರು. ವಲಸೆಯ ನೇತೃತ್ವವನ್ನು ಕುಂಚಿಟಿಗ, ಕಾಡುಗೊಲ್ಲ ಹಾಗೂ ಮ್ಯಾಸಬೇಡರ ಗುರುಗಳಾದ ಸಾರ್ವದೇಶ್ವರ

ಸ್ವಾಮಿಗಳು ವಹಿಸಿದ್ದರು. ಇವರು ಚಳ್ಳಕೆರೆ ತಾಲ್ಲೂಕಿನ ಗೋಸಿಕೆರೆಯಲ್ಲಿ ನೆಲಸಿ ಅಲ್ಲಿಯೇ ಸಮಾಧಿ ಗೊಳ್ಳುತ್ತಾರೆ.

ಸಾರ್ವದೇಶ್ವರ ಸ್ವಾಮಿಗಳ ಸಮಾಧಿಯ ಮೇಲೆ ಅಪೂರ್ವವಾದ ಶಿವಲಿಂಗವನ್ನು ಸ್ಥಾಪಿಸಿದ್ದು ಲಿಂಗದ ಮುಂಭಾಗದಲ್ಲಿ ಯೋಗಿಯ ಭಂಗಿಯಲ್ಲಿ ಕುಳಿತ ಶಿವಷಟ್ಚಕ್ರಗಳನ್ನು ಬಿಡಿಸಿದ್ದಾರೆ. ಯೋಗಿ ಭಂಗಿಯ ತಳಭಾಗದಲ್ಲಿ ಬೀಜಾಕ್ಷರಗಳನ್ನು ಕೆತ್ತಲಾಗಿದೆ. ಬಹುಶಃ ಈ ಬಗೆಯ ಶಿವಲಿಂಗ ಅತ್ಯಂತ ಅಪರೂಪದ್ದಾಗಿದೆ.

ವಲಸೆ ಹೊರಟವರೆಲ್ಲ ಬರುವಾಗ ಗಂಗಾ (ತುಂಗಭದ್ರಾ) ನದಿ ತುಂಬಿ ಹರಿಯುತ್ತಿತ್ತು. ಗಂಗೆಗೆ ದಾರಿ ಕೇಳಲಾಗಿ ಅದು ನರಬಲಿಯನ್ನು ಕೇಳುತ್ತದೆ. ನರಬಲಿಗಾಗಿ ಯಾರೂ ಮುಂದೆ ಬರದೆ ಇದ್ದಾಗ ಅಲ್ಲಿಯೇ ಕುರಿಕಾಯುತ್ತಿದ್ದ ಕುರುಬರ ಬೊಪ್ಪರಾಯ ತಾನು ಗಂಗೆಗೆ ಅರ್ಪಿತವಾಗುತ್ತೇನೆ ಎಂದು ಮುಂದೆ ಬರುತ್ತಾನೆ. ತಾನು ಸತ್ತ ನಂತರ ನನ್ನ ಮುಂಡಕ್ಕೆ ನಿಮ್ಮ ಕುಂಚಿಟಿಗ ಕುಲದ ಹೆಣ್ಣು ಕೊಟ್ಟು ಧಾರೆಯೆರೆಯಬೇಕು ಎಂಬ ಷರತ್ತು ಹಾಕುತ್ತಾನೆ. ಬೇರೆ ದಾರಿಯಿಲ್ಲದೆ 'ಉಂಡೆ ಎತ್ತರಾಯ' ತನ್ನ ಪುತ್ರಿಯಾದ ಚಿಕ್ಕ ಬೈರಮ್ಮಳನ್ನು ಕೊಡಲು ಒಪ್ಪುತ್ತಾನೆ. ಬೊಪ್ಪರಾಯನ ರುಂಡವನ್ನು ಕಡಿದು ಗಂಗೆಗೆ ಆರತಿ ಮಾಡುತ್ತಾರೆ. ಆಗ ಗಂಗೆಯು ದಾರಿಬಿಡುತ್ತಾಳೆ. ಎಲ್ಲರೂ ನದಿ ದಾಟುತ್ತಾರೆ. ಬಾದಶಹ ಬೆನ್ನಟ್ಟಿ ಬಂದರೆ ಗಂಗೆ ಅವನಿಗೆ ದಾರಿಕೊಡದೆ ತುಂಬಿಹರಿಯುತ್ತಾಳೆ. ಹತಾಶನಾದ ರಾಜ ಹಿಂದಕ್ಕೆ ಮರಳಿ ಹೋಗುತ್ತಾನೆ.

ಜನರೆಲ್ಲರೂ ಈಚೆಯ ದಡ ಸೇರಿದ ಮೇಲೆ ಉಂಡೆ ಎತ್ತರಾಯ ಕೊಟ್ಟ ಮಾತಿನಂತೆ ಬೊಪ್ಪರಾಯನನ್ನು ಕುಂಚಿಟಿಗರು ತಮ್ಮ ಕುಲದಲ್ಲಿ ಸೇರಿಸಿಕೊಳ್ಳುತ್ತಾರೆ. ಕೂಡಲೇ ಆಶ್ಚರ್ಯಕರ ರೀತಿಯಲ್ಲಿ ಮುಂಡಕ್ಕೆ ರುಂಡ ಬಂದು ಸೇರಿ ಬೊಪ್ಪರಾಯ ಜೀವಂತವಾಗುತ್ತಾನೆ. ಹೀಗೆ ಬದುಕಿದ ಬೊಪ್ಪರಾಯನ ಸಂತತಿಯವರನ್ನು ಜಲದೇವನ ಗೋತ್ರ (ಬೆಡಗು)ದಿಂದ ಗುರುತಿಸಿ ಕೊಳ್ಳುತ್ತಾರೆ. ಆದ್ದರಿಂದ ಬೊಪ್ಪರಾಯನನ್ನು ಕುಂಚಿಟಿಗರು, ಕಾಡುಗೊಲ್ಲರು, ಕುರುಬರು ಮತ್ತು ಮ್ಯಾಸಬೇಡರು ಒಟ್ಟಾಗಿ ಆರಾಧಿಸುತ್ತಾರೆ. ಕುಂಚಿಟಿಗರ ಮದುವೆ ಸಮಾರಂಭಗಳಲ್ಲಿ ಮೊದಲು ಕಾಡುಗೊಲ್ಲ, ಕುರುಬ, ಮ್ಯಾಸಬೇಡ ಸಮುದಾಯದವರಿಗೆ ಪ್ರಥಮ ವೀಳ್ಯದ ಗೌರವ ಸಲ್ಲುತ್ತದೆ. ಇವರು ಕುರುಬ ಕುಲದ ಸಂಕೇತವಾದ ಉಣ್ಣೆಕಂಕಣ ಕಟ್ಟಿಕೊಳ್ಳುತ್ತಾರೆ ಇದಕ್ಕೆ ಕುರುಬ ಕಂಕಣ"[೧೧] ಎಂದೇ ಕರೆಯಲಾಗುತ್ತದೆ.

ಬೆಜ್ಜಿಹಳ್ಳಿ ಜಲದೇನವರ ಬೆಡಗಿನವರಿಗೆ ಕಟ್ಟೆಮನೆ. ಬೊಪ್ಪರಾಯ ಮನೆದೇವರು. ವಲಸೆ ನೇತೃತ್ವ ವಹಿಸಿದ್ದ ಶ್ರೀ ಗುರು ಸಾರ್ವದೇಶ್ವರರು ಬೆಜ್ಜಿಹಳ್ಳಿಯಿಂದ ಆಂಧ್ರ ಪ್ರದೇಶದ ಮಡಕ ಶಿರಾ ತಾಲೂಕಿನ ಕೋಮಾರೇನಹಳ್ಳಿಯಲ್ಲಿ ಜಲಧಿ ಬೊಪ್ಪರಾಯನಿಗೆ ಗುರುವಾಗಿದ್ದ ಬೀರಲಿಂಗೇಶ್ವರನನ್ನು ಪ್ರತಿಷ್ಠಾಪಿಸಿದ್ದಾರೆ.

ಕುಂಚಿಟಿಗರ ಎಲ್ಲಾ ಕುಲದವರೂ ನಡೆದುಕೊಳ್ಳುತ್ತಾರೆ. ಕುಂಚಿಟಿಗ ಒಕ್ಕಲಿಗರು, ಕುಡುಒಕ್ಕಲಿಗರು ಹಾಗೂ ಕುರುಬರೂ ಅಭಿನ್ನರು ಎಂದು ಇಲ್ಲಿ ಸ್ಪಷ್ಟವಾಗುತ್ತದೆ. ಶ್ರೇಣೀಕೃತ ಸಮಾಜದಲ್ಲಿ ತಮ್ಮ ಕುಲವನ್ನು ಉನ್ನತವೆಂದು ಹೇಳಲು ಬಳಸುತ್ತಿರುವ ಬೇರೆ ಬೇರೆ ಕಥೆಗಳು ಇಲ್ಲಿ ಬಳಕೆಯಾಗಿವೆ.

ಕುಂಚಿಟಿಗ ಸಮುದಾಯದ ಆರಂಭದಲ್ಲಿ ಉಂಡೆ ಎತ್ತರಾಯ, ಜಲಧಿ ಬೊಪ್ಪರಾಯ, ಹಾವಿನ ಕಾಮರಾಯರುಗಳು ಸಾಹಸಿಗರಾಗಿ ಕಂಡು ಬರುತ್ತಾರೆ. ಇವರು ಸ್ಥಳೀಯ ಜನರ ನಾಯಕರೂ ಆಡಳಿತಗಾರರೂ ಆಗಿದ್ದರೆಂಬುದರಲ್ಲಿ ಸಂಶಯವಿಲ್ಲ, 'ರಾಯ' ಎನ್ನುವ ಪದವೇ ರಾಜ, ಧಣಿ ಎನ್ನುವುದು ಅನ್ವಯವಾಗುತ್ತದೆ.

ಕುಂಚಿಟಿಗರಲ್ಲಿ ನೂರಾರು ಸಾಂಸ್ಕೃತಿಕ ವೀರರ ಚಾರಿತ್ರಿಕತೆ ಲಭ್ಯವಾಗುತ್ತದೆ. ಅವರುಗಳು ನಾಡು ನುಡಿಗಾಗಿ, ಭಾರತಿಯ ಸಂಸ್ಕೃತಿಯ ರಕ್ಷಣೆಗಾಗಿ, ಜನರ ಮಾನ ಪ್ರಾಣ ಕಾಪಾಡಲು ಹೋರಾಡಿದ್ದಾರೆ. ದುಷ್ಟರ ದಮನ ಮಾಡಿ ಶಿಷ್ಟರ ರಕ್ಷಣೆ ಮಾಡುವ ಪ್ರಜಾಪರಿಪಾಲಕರಾಗಿದ್ದರು. ನೆಲಮಂಗಲದ ಪಾಳೆಗಾರ ಕಂಚುಗಾರ ಬೈಚನನ್ನು, ತುಂಬಾಡಿಯ ಪಾಳೆಗಾರ ಮಲ್ಲನಾಯ್ಕನನ್ನು ವೀರಕ್ಯಾತರಾಯ ಸದೆಬಡಿಯುತ್ತಾನೆ. ಪೆನುಗೊಂಡೆಯ ಪ್ರತಾಪರಾಯನ ವಿರುದ್ಧವೂ ಹೋರಾಡಿ ಜಯಗಳಿಸಿದನು. ಇದೇ ರೀತಿಯಲ್ಲಿ ರಾಜವಂತಿಪುರದ ನಾಡ ಪ್ರಭು ವೀರಬಡಣ್ಣ, ನಿಡುಗಲ್ಲಿನ ಶೂಲದ ಈರಣ್ಣ ಮೊದಲಾದ ರಾಜರು ಧೈರ್ಯ, ಸಾಹಸ, ತ್ಯಾಗ, ಬಲಿದಾನಗಳಿಂದ ಕುಂಚಿಟಿಗ ಸಮುದಾಯದ ಚಾರಿತ್ರಿಕತೆಯನ್ನು ಎತ್ತಿ ಹಿಡಿದಿದ್ದಾರೆ.

ವಿಜಯನಗರ ಪತನಾನಂತರ ಸಾಮಂತರಾಗಿದ್ದ ನಾಡ ಪ್ರಭುಗಳು, ಪಾಳೆಗಾರರು, ಸ್ವತಂತ್ರರಾದರು. ಅವರಲ್ಲಿ ಮಧುಗಿರಿ, ಮಿಡಿಗೇಶಿ, ಕೊರಟಗೆರೆ, ರತ್ನಗಿರಿ, ರಾಜಬಂಡೆ, ಹೊಳವನಹಳ್ಳಿ, ಪಾವಗಡ, ಸಂಕರ ಕಲ್ಲುದುರ್ಗ, ಚನ್ನರಾಯದುರ್ಗ, ಮಧುರೈ, ಕೋಂಬೆ, ಅಂಬತ್ತೂರು, ಕೊಯ್ಮತ್ತೂರು, ಪಳನಿ, ದಿಂಡಿಗಲ್, ಪೆರಿಯಾಕುಲಂ, ನೀಲಿಕೊಟ್ಟಾಯಂ, ಗುಡೂರು ಪಾಳೆಗಾರರು, ರಾಜವಂತಿ ಪುರದ ನಾಡಗೌಡರು, ಹೇಮಾವತಿ ಅರಸರು ಮುಖ್ಯರಾಗಿದ್ದಾರೆ.

ನೊಣಬ ಕುರುಬರು

ಕುರುಬರಲ್ಲಿ ಕೆಲವು ವೀರರು ಸಾಹಸಮಾಡಿ, ರಾಜ್ಯಕಟ್ಟಿ ಆಳಿದವರಿದ್ದಾರೆ. ಅಂತವರಲ್ಲಿ ವಿಜಯನಗರದ ಹಕ್ಕ ಬುಕ್ಕ ಸೋದರರು, ಕನಕದಾಸರು, ಬಳ್ಳಾರಿ ಕೋಟೆಯನ್ನು ಕಟ್ಟಿ ಆಳಿದ ಹಂಡೆಯ ಪಾಳೆಯಗಾರ ಬಾಲದ ಹನುಮಪ್ಪನಾಯಕ ಪ್ರಮುಖರು. ಇವರೆಲ್ಲರಿಗಿಂತ ಮೊದಲು ಕರ್ನಾಟಕ ಪ್ರದೇಶವನ್ನು ಸು.ಕ್ರಿ.ಶ. ೭೫೦ರಿಂದ ೧೦೫೪ರವರೆಗೂ ಆಳಿದ ಒಂದು ಸಮುದಾಯವೇ ಕುರುಬರು ಆಗಿದ್ದು ಮುಂದೆ ಅವರೇ ನೊಳಂಬರು ನೊಣಬರು ಎಂದು ಕರೆಸಿಕೊಳ್ಳುತ್ತಾರೆ.

ಕ್ರಿ.ಶ. ೧೧೧೫ರ ಶಿಲಹರ ಗಂಡಾದಿತ್ಯರ ಕೊಲ್ಲಾಪುರದ ತಾಮ್ರಪತ್ರಗಳಲ್ಲಿ ನೊಳಂಬರ ವಂಶಾವಳಿಯ ಮೂಲ ಪುರುಷ 'ನಿಗುಂಬ'ನೆಂದು ಗುರ್ತಿಸಲಾಗಿದೆ. ಈ ನಿಗುಂಬನೇ ಕುಂಭಕರ್ಣನ ಮಗನೆಂದು

ಭಾವಿಸಲಾಗಿದೆ. ಈ ತಾಮ್ರಪತ್ರಗಳಲ್ಲಿ ನೊಳಂಬರ ಮೂಲ ಪುರುಷನನ್ನು ರಾಕ್ಷಸ ವಂಶದಿಂದ ಗುರುತಿಸಿರುವುದು ಚೋದ್ಯವೆನಿಸಿದೆ. ಬಹುತೇಕ ಸಮುದಾಯಗಳೆಲ್ಲವೂ ತಮ್ಮ ಪೌರಾಣಿಕ ಉಗಮವನ್ನು ರೋಚಕ ರೀತಿಯಲ್ಲಿ ರೂಪಿಸಿಕೊಂಡಿರುವುದು ಇತಿಹಾಸದಲ್ಲಿ ತಿಳಿದು ಬರುತ್ತದೆ. ಈ ಸಂಗತಿಗೆ ಮತ್ತಷ್ಟು ಪುಷ್ಟಿ ಕೊಡುವ ಸಂಗತಿಯೆಂದರೆ ಪುಲಿನಾಡನ್ನು ಆಳುತ್ತಿದ್ದ ಬಾಣರು ತಮ್ಮ ಮೂಲ ಪುರುಷ ಬಾಣನೆಂದು ಗುರುತಿಸಿಕೊಂಡಿರುವುದು.

ಕ್ರಿ.ಶ. ೧೧ನೇ ಶತಮಾನದ ನಂತರ ಶಾಸನಗಳಲ್ಲಿ ನೊಳಂಬರ ಮೂಲ ಪುರುಷ 'ರಕ್ಕಸ ನೊಳಂಬ ಪಲ್ಲವಾಭರಣ ಪಾಲಿಗೆ' ಇದಲ್ಲದೆ ೧೮ನೇ ಶತಮಾನದ ಕೈ ಬರಹದಲ್ಲಿ ಕಂಡು ಬರುವ ಮಿಡಿಗೇಶಿಯ ಪ್ರಭುಗಳ ವಿವರಣೆಯಲ್ಲಿ ನೊಳಂಬಾಸುರನೆಂಬ ಶೈವ ಗುರುವನ್ನು ಏಳು ಜನ ಸಹೋದರರು ವಧೆ ಮಾಡಿದರೆಂದು ತಿಳಿದು ಬರುತ್ತದೆ. ಈ ಸಂಗತಿಗೆ ಪೂರಕವಾಗಿ ಪಲ್ಲವರಾಜ ಅಪರಾಜಿತ ವರ್ಮನ ಶಾಸನದಲ್ಲಿ ಕುಂಭೀ ಕರ್ಣೇಶ್ವರ ದೇವಸ್ಥಾನದ ಕುರುಹು ಇದೆ. ಕೊಲ್ಲಾಪುರ ತಾಮ್ರ ಪತ್ರಗಳನ್ವಯವೂ ರಾಕ್ಷಸ ಮೂಲವೇ ಆಗಿದೆ. ನೊಣಬಾಸುರನೇ ಮೂಲಪುರುಷ ಆಗಿದ್ದು ರಾಕ್ಷಸರು ಶೈವ ಪಂಥದವರೆಂತಲೂ ಪುರಾವೆಗಳಿಂದ ಪೌರಾಣಿಕ ನೊಳಂಬ ರಾಕ್ಷಸ ಎಂದು ಗುರ್ತಿಸಲಾಗಿದೆ.

ಇನ್ನೊಂದು ಕತೆಯ ಪ್ರಕಾರ "ಒಬ್ಬ ಒಕ್ಕಲಿಗನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಅವರಿಬ್ಬರೂ ಹೊಲದಲ್ಲಿ ಕೆಲಸ ಮಾಡುವಾಗ ತಾಯಿಯು ಊಟ ತರುತ್ತಾಳೆ. ಇಬ್ಬರೂ ಊಟಮಾಡಲು ಗಂಗಾಳ (ತಟ್ಟೆ)ದಲ್ಲಿ ಆಹಾರ ಬಡಿಸಿಕೊಂಡು ಕುಳಿತಿರುವಾಗ ಎಲ್ಲಿಂದಲೋ ನೊಣಗಳ ಹಿಂಡು ಇವರ ಹತ್ತಿರ ಬರುತ್ತದೆ. ಅಣ್ಣನಾದವನು ತಮ್ಮನಿಗೆ 'ನೊಣಗಳನ್ನು ದೂರ ಓಡಿಸಿ ಬಾ' ಎಂದು ಸೂಚನೆ ನೀಡುತ್ತಾನೆ. ತಮ್ಮ ನೊಣಗಳನ್ನು ಬಹುದೂರದವರೆಗೆ ಓಡಿಸಿಕೊಂಡು ಹೋಗುತ್ತಾನೆ. ತಮ್ಮ ಈಗ ಬಂದಾನು, ಆಗ ಬಂದಾನು ಎಂದು ಅಣ್ಣ ದಾರಿ ಕಾಯುತ್ತಾ ಕುಳಿತು ಬಿಡುತ್ತಾನೆ. ತಮ್ಮನು ಮರುದಿನ ಬೆಳಗಾದ ಮೇಲೆ ಮರಳುತ್ತಾನೆ. ಇದರಿಂದ ತಮ್ಮನ ಮೇಲೆ ಪಂಚಾಯಿತಿ ಹಾಕಿ ಅವನನ್ನು ಕುಲದಿಂದ ಹೊರಗೆ ಇಡುತ್ತಾನೆ. ಊಟದ ಗಂಗಳ ಕಾಯುತ್ತಾ ಕುಳಿತವನಿಗೆ ಗಂಗಡಿಕಾರ ಒಕ್ಕಲಿಗನೆಂದು ಕರೆದರೆ, ನೊಣ ಓಡಿಸಿಕೊಂಡು ಹೋದ ತಮ್ಮ ನೊಣಬನಾದ"[೨] ಎಂದು ಡಾ. ನಲ್ಲೂರು ಪ್ರಸಾದ್ ತಿಳಿಸುತ್ತಾರೆ.

ನೊಳಂಬ ಪದವನ್ನು ಚಾರಿತ್ರಿಕವಾಗಿಯೂ ಎರಡು ಬಗೆಯಲ್ಲಿ ವಿವರಿಸಬಹುದು. ಕ್ರಿಯಾಪದದ ನೆಲೆಯಿಂದ 'ನೊಳ್' ಎಂದರೆ ಮುನ್ನುಗ್ಗು, ಮುಂದಾಳು, ಮುಂಚೂಣಿ ಹೋರಾಟಗಾರರು ಮುಂತಾದ ಅರ್ಥಗಳು ಬಿಚ್ಚಿಕೊಳ್ಳುತ್ತವೆ. ನೊಳಂಬರ 'ನೊಳಂಬಲಿಗ' (ಪ್ರಾಚೀನರಾಜಧಾನಿ) ಪ್ರದೇಶ ಮೂಲದಲ್ಲಿ ಅತ್ಯಂತ ದುರ್ಗಮವಾಗಿತ್ತು. ಇತರ ಪ್ರದೇಶಗಳ ದಾಳಿಕೋರರು ಈ ಆಯಕಟ್ಟಿನ ಪ್ರದೇಶವನ್ನು ಹಾಯ್ದು ಮುಂದೆ ಸಾಗಬೇಕಾಗಿತ್ತು. ಈ ಪ್ರದೇಶವು ಕನ್ನಡ-ತಮಿಳು ರಾಜರುಗಳ ಸಂಘರ್ಷದ ತಾಣವಾಗಿತ್ತು.

ಆದ್ದರಿಂದ ಇವರು ಈ ಆಯಕಟ್ಟಿನ ಪ್ರದೇಶದ ನಾಯಕರಾಗಿದ್ದು ಧೈರ್ಯದಿಂದ ಬೇರೆಯವರನ್ನು ಮುನ್ನಡೆಸುತ್ತಿದ್ದುದರಿಂದ ನೊಳಂಬರು ಎಂಬ ಹೆಸರು ಅನ್ವರ್ಥವಾಗಿದೆ.

ಕರ್ನಾಟಕದಲ್ಲಿ ಕ್ರಿ.ಶ. ೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ನೊಣಬರು ಅಥವಾ ನೊಳಂಬರು ಅಥವಾ ನೊಳಂಬ ಪಲ್ಲವರು ದಕ್ಷಿಣ ಭಾರತದ ಪ್ರಮುಖ ಸಾಮಂತರಾಗಿದ್ದರು. ಇವರ ರಾಜಧಾನಿ ಈಗಿನ ಆಂಧ್ರ ಪ್ರದೇಶದ ಮಡಕಶಿರಾ ತಾಲೂಕಿನ ಹೆಂಜೇರು ಅಥವಾ ಹೇಮಾವತಿಯಾಗಿತ್ತು, ನಂತರ ೧೧ನೇ ಶತಮಾನದ ವೇಳೆಗೆ ತಮ್ಮ ರಾಜಧಾನಿಯನ್ನು ತುಂಗಭದ್ರಾ ತೀರದಲ್ಲಿರುವ ಕಂಪಲಿಗೆ ವರ್ಗಾಯಿಸಿದರು. ಪ್ರಾರಂಭದಲ್ಲಿ ನೊಣಬರು 'ಸಾಸಿರ'ವೆಂಬ ಸಣ್ಣ ಪ್ರಾಂತ್ಯದ ಆಧಿಪತ್ಯ ನಡೆಸುತ್ತಿದ್ದರು. ಈ ಪ್ರಾಂತ್ಯವು ಈಗಿನ ಚಿತ್ರದುರ್ಗ ಜಿಲ್ಲೆ ಮತ್ತು ಸುತ್ತಮುತ್ತಲ ಪ್ರದೇಶವಾಗಿತ್ತು. ೧೦ನೇ ಶತಮಾನದ ವೇಳೆಗೆ ಇವರು ಪ್ರಾಬಲ್ಯ ಸಾಧಿಸಿ ಬಹುಮಟ್ಟಿಗೆ ವಿಸ್ತಾರಗೊಂಡು 'ನೊಳಂಬವಾಡಿ ೩೨೦೦೦' ಎಂಬ ಸವಿಸ್ತಾರ ಪ್ರಾಂತವಾಯಿತು. ಈ ಪ್ರಾಂತ್ಯಕ್ಕೆ ಈಗಿನ ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳು ಸೇರಿದ್ದವು.

ಕರ್ನಾಟಕದಲ್ಲಿ ನೊಣಬರು ಸುಮಾರು ೩೦೦ ವರ್ಷಗಳ ಕಾಲ ತಮ್ಮ ಆಳ್ವಿಕೆ ನಡೆಸಿದರು ಎಂಬುದಕ್ಕೆ ಸಾಕ್ಷ್ಯಗಳಿವೆ. ಕ್ರಿ.ಶ. ೧೦೫೪ರವರೆಗೆ ಎರಡನೇ ತ್ರೈಲೋಕ್ಯ ಮಲ್ಲ ಆಳ್ವಿಕೆ ನಡೆಸುತ್ತಿದ್ದ ಚೋಳರಾಜ ರಾಜೇಂದ್ರ ದೇವನು ಕೊಪ್ಪ ಯುದ್ಧದಲ್ಲಿ ನೊಳಂಬನನ್ನು ಕೊಂದು ಹಾಕಿದ. ನಂತರ ಇವನ ಮಗನಾದ ಜಯಸಿಂಹ ದೇವನು ಆಳ್ವಿಕೆ ನಡೆಸಿದನು. ತಲಕಾಡಿನ ಗಂಗರ ಕೈ ಕೆಳಗೆ ತಮ್ಮ ಆಡಳಿತ ನಡೆಸಿದ ನೊಣಬರು ಕಾಲಕ್ರಮೇಣ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಮುಂತಾದವರ ಮಾಂಡಲೀಕರಾಗಿ ಆಳ್ವಿಕೆ ನಡೆಸಿದರು.

ಚಾಮರಾಜ ನಗರ ಶಾಸನವೊಂದರಲ್ಲಿ ರಾಜಕುಮಾರಿಯೊಬ್ಬಳು ತಾನು 'ನೊಳಂಬಕುಲ'ದವಳೆಂದು ಹೇಳಿಕೊಂಡಿದ್ದಾಳೆ. ಅಲ್ಲದೆ ಗಂಗಮಾರ ಸಿಂಹನು 'ನೊಳಂಬಕುಲಾಂತಕ'ನೆಂದೂ, ನೊಳಂಬರೆಲ್ಲರನ್ನೂ ಕೊಂದು ಹಾಕಿದೆನೆಂದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಈ ನೊಳಂಬವಂಶವು ಕಂಚಿಯ ಪಲ್ಲವ ಕುಲದ ಒಂದು ಶಾಖೆ ಎಂದು ಹೇಮಾವತಿ ಸ್ತಂಭ ಶಾಸನದಲ್ಲಿ ಉಲ್ಲೇಖಿತವಾಗಿದೆ. ಕಂಚಿಯ ಪಲ್ಲವರಿಗೂ ಇವರಿಗೂ ವ್ಯತ್ಯಾಸ ತಿಳಿಯಲು ನೊಳಂಬ ಪಲ್ಲವರೆಂದು ಹೆಸರು ಬಂದಿರಬಹುದಾಗಿದೆ.

ರಾಷ್ಟ್ರಕೂಟರು ಮತ್ತು ಗಂಗರ ಹೋರಾಟದಲ್ಲಿ ನೊಳಂಬರ ಶಕ್ತಿ ಸಾಮರ್ಥ್ಯಗಳು ಫಲಕಾರಿಯಾಗಲಿಲ್ಲ. ೯ನೇ ಶತಮಾನದಲ್ಲಿ ಬಾಣರನ್ನು ಹಿಂದಕ್ಕಟ್ಟಿದರು. ತಲಕಾಡಿನ ಗಂಗರ ಕೈ ಕೆಳಗೆ ತಮ್ಮ ಆಡಳಿತವನ್ನು ಆರಂಭಿಸಿ ಕಾಲಕ್ರಮೇಣ ಗಂಗರು, ರಾಷ್ಟ್ರಕೂಟರು, ಚಾಲುಕ್ಯರ ಮಾಂಡಲೀಕರಾಗಿ ಆಳ್ವಿಕೆ ನಡೆಸಿದರು. ತಲಕಾಡಿನ ಗಂಗರ, ಬನವಾಸಿ ಕದಂಬರ ಹಾಗೂ ಕಲ್ಯಾಣಿ ಚಾಲುಕ್ಯರ ವಂಶಗಳ ಜೊತೆಗೆ ವೈವಾಹಿಕ

ಸಂಬಂಧಗಳನ್ನೂ ಬೆಳೆಸಿದರು. ಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕವನ್ನು ಆಳಿದ ನೊಳಂಬರು ನಾಡಿನ ರಮ್ಯೇತಿಹಾಸ ಪರಂಪರೆಗೆ ಭದ್ರ ಬುನಾದಿಯನ್ನು ಹಾಕಿದವರಲ್ಲಿ ಒಬ್ಬರಾಗಿದ್ದಾರೆ. ಹೀಗಾಗಿ ಶಂ.ಭಾ.ಜೋಷಿಯವರು ಒಂದು ಕಾಲದಲ್ಲಿ ಕುರುಬರು ಕರ್ನಾಟಕದ ತುಂಬಾ ಇದ್ದರೆಂಬ ಮಾತನ್ನು ಅಲ್ಲಗಳೆಯಲಾಗದು.

ಗೊಲ್ಲ ಕುರುಬರು

"ಮಾನವ ಎಂದು ಪ್ರಕೃತಿಯನ್ನು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಲು ಅನುವಾದನೋ ಆ ದಿನದಿಂದಲೇ ಅವನಲ್ಲಿ ಪುರಾಣ ಕಲ್ಪನೆಗಳು ಮೂಡಲಾರಂಭಿಸಿದವು. ದೇವರನ್ನು ಮುಂದು ಮಾಡಿಕೊಂಡು ತನಗೆ ಹೊಳೆದ ಅನೇಕ ಸಂಗತಿಗಳನ್ನು ಊಹೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ ಫಲವಾಗಿಯೇ ಪುರಾಣದ ಕಲ್ಪನೆಗಳು ಚಿಗುರೊಡೆದವು"[೪೩] ಎಂದು ಎಚ್.ಜೆ.ಲಕ್ಕಪ್ಪಗೌಡರು ವಿವೇಚಿಸುತ್ತಾರೆ. ಐತಿಹ್ಯ ಮತ್ತು ಮತ ಧರ್ಮಗಳೊಡನೆ ಪುರಾಣದ ಸಂಬಂಧ ನಿಕಟವಾದುದು. ಧಾರ್ಮಿಕ ನೆಲೆಗಟ್ಟಿನ ಶಿಷ್ಟ ಪುರಾಣಗಳು ಜಗತ್ತಿನೆಲ್ಲೆಡೆ ನೆಲೆಗೊಂಡಿರುವಂತೆ ಸಾಮಾಜಿಕ ವ್ಯವಸ್ಥೆಯಲ್ಲಿ ಯಥೇಚ್ಛವಾಗಿ ರೂಪುಗೊಂಡಿವೆ. ಈ ಪುರಾಣಗಳೆಲ್ಲ ಬಹುಪಾಲು ಮೇಲು ಸಮುದಾಯಗಳ ಆಶೋತ್ತರಗಳ ಸೂಚಕವಾಗಿ ಗೋಚರಿಸುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.

ವೈದಿಕ ನೆಲೆಗಟ್ಟಿನ ಸೃಷ್ಟಿ ಪುರಾಣಗಳಿಗೆ ಪ್ರತಿಯಾಗಿ, ಪರ್ಯಾಯವಾಗಿ, ಬುಡಕಟ್ಟು ಸಮುದಾಯಗಳಲ್ಲಿ ಸೃಷ್ಟಿ ಪುರಾಣಗಳು ರೂಪುಗೊಂಡಿವೆ. ಈ ಪುರಾಣಗಳಲ್ಲಿ ಆ ಬುಡಕಟ್ಟುಗಳ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಸಮರ್ಥನೆ ನೀಡುತ್ತವೆ. ಒಂದು ಬುಡಕಟ್ಟಿನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸೃಷ್ಟಿಗೆ ಸಂಬಂಧಿತವಾದ ಪುರಾಣಗಳು ಹೆಚ್ಚು ಸಹಕಾರಿಯಾಗುತ್ತವೆ. ಈ ಹಿನ್ನೆಲೆಯಲ್ಲಿ ಗೊಲ್ಲರಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳನ್ನು ಪರಿಶೀಲಿಸಬೇಕಾಗಿದೆ.

ಗೊಲ್ಲರ ಕಾವ್ಯಗಳಲ್ಲಿ ಕಂಡುಬರುವ ಸಾಂಸ್ಕೃತಿಕ ವೀರರು, ಅಲೌಖಿಕ ವೀರರು, ದೈವಾಂಶ ಸಂಭೂತರು ಇಲ್ಲವೇ ಅವತಾರ ಪುರುಷರಾದವರು. ಇವರ ಹುಟ್ಟು ಸಹ ಅಲೌಖಿಕ ಹಾಗೂ ಅಪ್ರಾಕೃತ ಇವರಾರೂ ಗರ್ಭ ಸಂಭವರಲ್ಲ.

ಭೂಲೋಕದಲ್ಲಿ ಶಿವಪಾರ್ವತಿಯರು ಲೋಕ ಸಂಚಾರ ಮಾಡುತ್ತಿರುವಾಗ ಸಮೀಪದ ಕಾಡೊಂದಕ್ಕೆ ಬೆಂಕಿ ಬಿದ್ದಿರುತ್ತದೆ. ಕಾಡಿನೊಳಗಿದ್ದ ಪಶು ಪಕ್ಷಿಗಳ ಆರ್ತನಾದವು ಕೇಳಿ ಬರುತ್ತದೆ. ಬೆಂಕಿಯನ್ನು ನಂದಿಸಲು ಪಾರ್ವತಿಯು ಆಗ್ರಹಿಸುತ್ತಾಳೆ. ಶಿವನು ಬೆಂಕಿ ಆರಿಸುತ್ತಿರುವಾಗ ಅವನ ಮೈಮೇಲಿನ ಬೆವರಿನ ಮೂರು ಹನಿಗಳು ಭೂಮಿಗೆ ಬಿದ್ದು ಮೂರು ಮಕ್ಕಳಾಗುತ್ತವೆ. ಆ ಮೂವರು ಮಕ್ಕಳೇ ಚಿತ್ತಯ್ಯ, ಕಾಟಯ್ಯ, ಓಬಳನರಸಿಂಹ. ಹುಟ್ಟಿದ ಮಕ್ಕಳ ಲಾಲನೆ ಪಾಲನೆಗೆ ಶಿವಪಾರ್ವತಿಯರು ಮಾಡುವ ರಕ್ಷಣಾ ವ್ಯವಸ್ಥೆ ನಿಬ್ಬೆರಗಾಗಿಸುತ್ತದೆ.

"ಬೇವಿನ ಮರದಮ್ಮ ಬೆಲ್ಲ ನೀಡಲು ಬೇಕು
ಆಲದ ಮರದಮ್ಮ ಹಾಲು ಕೊಡಲು ಬೇಕು
ಹತ್ತಿಯ ಮರದಮ್ಮ ಎತ್ತಿ ಮುದ್ದಾಡಮ್ಮ
ಭೂದೇವಿ ಭೂವಮ್ಮ ಬರವಣಿಗೆ ಕಲಿಸಮ್ಮ
ಆಕಾಶ ರೇಣಮ್ಮ ಬುದ್ಧಿಯ ನೀಡಮ್ಮ"[೪೪]

ಪ್ರಕೃತಿಯೊಂದಿಗೆ ಬೆಳೆದ ಮಕ್ಕಳಿಗೆ 'ಕುಲನೆಲೆ' ಹೇಳಿಕೊಳ್ಳುವುದಕ್ಕೆ ಚಿತ್ರಗಿರಿ ಪಟ್ಟಣವನ್ನು ನಿರ್ಮಿಸಿ ಚಿತ್ರಯ್ಯನನ್ನು ರಾಜನನ್ನಾಗಿ ಮಾಡುತ್ತಾರೆ ಶಿವಪಾರ್ವತಿಯರು.

ಎತ್ತಪ್ಪನ ಹುಟ್ಟಿನ ಬಗ್ಗೆ ಮತ್ತೊಂದು ವರ್ಣನೆಯಿದೆ. "ಕಾಮಧೇನು ಅಂತ ಒಂದು ಆಕಳು, ಅದು ಕೈಲಾಸದಲ್ಲಿ ಶಿವಪೂಜೆಗೆ ಹಾಲು ಕೊಡುತ್ತಿತ್ತು. ಮೇವಿಗಾಗಿ ದೇವಲೋಕದಿಂದ ನರಲೋಕಕ್ಕೆ ಬರುತ್ತಿತ್ತು. ಅಡವಿಯಲ್ಲಿ ಒಬ್ಬ ಗೊಲ್ಲ ಗೂಡು ಹಾಕಿಕೊಂಡು ದನಕರು ಕಟ್ಟಿಕೊಂಡು ಒಂದು ಸಂಸಾರ ನಡೆಸುತ್ತಿದ್ದ. ಪ್ರತಿದಿನ ಆಕಳು ಆತನ ಹೊಲಕ್ಕೆ ಬರುತ್ತಿತ್ತು. ಮೇದು ಹೋಗುವಾಗ ಅದನ್ನು ಕಟ್ಟಿಹಾಕಿ ಹಾಲು ಕರೆದುಕೊಂಡು ಬಿಡುತ್ತಿದ್ದ. ರಾತ್ರಿ ಹೋಗೋದು, ಬೆಳಿಗ್ಗೆ ಬರೋದು ಹೀಗೆ ಮೂರು ತಿಂಗಳು ಕಳೆಯಿತು. ದಿನಾ ಕರೆದ ಹಾಲು ಕಾಯಿಸಿ ಹೆಪ್ಪಿಗೆ ಮಜ್ಜಿಗೆ ಬಿಟ್ಟು ಬೆಣ್ಣೆ ತೆಗೆದು ತುಪ್ಪ ಮಾಡಿ ಒಂದು ಗಡಿಗೆಗೆ ಹಾಕುತ್ತಿದ್ದ. ಗಡಿಗೆ ತುಂಬಿತು. ಆಕಳನ್ನು ದೇವಲೋಕಕ್ಕೆ ಬಿಡದೆ ಅಲ್ಲೆ ಕಟ್ಟಿ ಹಾಕಿದ, ಮಾಮೂಲಿನಂತೆ ಶಿವಪೂಜೆಗೆ ದೇವಲೋಕಕ್ಕೆ ಹೋಗಿ ಹಾಲು ಕರೆಯಬೇಕಾದ ಹಸು ಎಲ್ಲಿ ಹೋಯಿತು ಎಂದು ಶಿವನೇ ಹುಡುಕಿಕೊಂಡು ಬಂದು ತನ್ನ ಹಸು ಗೊಲ್ಲನಲ್ಲಿರುವುದನ್ನು ಕಂಡ. ಶಿವನು ಯಾಕಪ್ಪ ನನ್ನ ಆಕಳನ್ನು ಕಟ್ಟಿ ಹಾಕಿದ್ದೀಯಾ? ಇದು ಇಲ್ಲಿಯವರೆಗೆ ಕರೆದ ಹಾಲು ಎಲ್ಲಿ? ಎಂದು ಕೇಳುತ್ತಾನೆ. ಆಗ ಗೊಲ್ಲನು ತುಪ್ಪದ ಗಡಿಗೆಯನ್ನು ತರಲು ಹೋಗುತ್ತಾನೆ. ಗಡಿಗೆ ನಾಲ್ಕು ಹೋಳಾಗಿ ಬಿರಿದಿತ್ತು. ಅದರಲ್ಲಿ ಎತ್ತಪ್ಪ ಸೂರ್ಯಪ್ರಕಾಶದಂತೆ ಹೊಳೆಯುತ್ತಿದ್ದ. ಹೆತ್ತ ತುಪ್ಪದಲ್ಲಿ ಹುಟ್ಟಿದ್ದರಿಂದ 'ಎತ್ತಪ್ಪ' (ಹೆತ್ತಪ್ಪ) ಅಂತ ಕರೀರಿ"[೪೫] ಎಂದು ನಾಮಕರಣ ಮಾಡಿ ಶಿವಪಾರ್ವತಿಯರು ಹೊರಟು ಹೋದರು. ಅಲ್ಲದೆ ಜನಪದ ತ್ರಿಪದಿಯೊಂದು ಎತ್ತಪ್ಪನ ಹುಟ್ಟನ್ನು ಹೀಗೆ ವರ್ಣಿಸುತ್ತದೆ.

"ಎತ್ತಯ್ಯ ಹುಟ್ಟವನೆ ಎತ್ತು ತುಪ್ಪದಾಗೆ
ಎತ್ತಿನಿಂಡಿನಾಗೆ ಬೆಳೆದಾನ । ಮಾರಗಾನಿ
ಎತ್ತಿನ ಕೀರುತಿಯ ಪಡೆದಾನು"[೪೬]

ಎಂದು ಎತ್ತಪ್ಪನ ಚಿತ್ರಣ ನೀಡುತ್ತದೆ.

ಶಿವ ಒಮ್ಮೆ ಭಿಕ್ಷೆ ಬೇಡುತ್ತ ದರೂಡಿ ದಾನಸಾಲಮ್ಮಳ ಪಟ್ಟಣಕ್ಕೆ ಬಂದ. ಅವಳ ಮನೆಯ ಮುಂದೆ ಬಂದು ಈಶ್ವರ ಭಿಕ್ಷೆ ಬೇಡಿದ. ದಾನಶಾಲಮ್ಮ ಮುತ್ತು ರತ್ನಗಳನ್ನು ಭಿಕ್ಷೆ ನೀಡಲು ಬಂದಳು.

ಅವಳು ಬಂಜೆಯಾದ ಕಾರಣದಿಂದ ಈಶ್ವರನು ಭಿಕ್ಷೆ ಸ್ವೀಕರಿಸಲಿಲ್ಲ. ಆಗ ತನಗೆ ಮಕ್ಕಳಾಗುವಂತೆ ವರ ಕೊಡಬೇಕೆಂದು ಬೇಡಿದಳು ಶಿವನನ್ನು. ಈಶ್ವರ ಅವಳ ಭಕ್ತಿಗೆ ಮೆಚ್ಚಿ ವರವನ್ನು ಕೊಟ್ಟು ಹೊರಟು ಹೋದ. ಕೆಲ ದಿನಗಳು ಕಳೆದ ಮೇಲೆ ಅವಳ ಮನೆಯ ಹಿತ್ತಲಲ್ಲಿ ಒಂದು ಕುಂಬಳ ಬಳ್ಳಿ ಹುಟ್ಟಿ ಕಾಲಕಳೆಂದತೆ ದೊಡ್ಡದಾಗಿ ಹಲವು ಕಾಯಿಗಳನ್ನು ಬಿಟ್ಟಿತು. ದಾನಶೀಲಮ್ಮ ಅವುಗಳಲ್ಲಿ ಬಹುಪಾಲನ್ನು ದಾನ ಮಾಡಿದಳು. ದಷ್ಟವಾಗಿದ್ದ ಒಂದು ಕಾಯಿಯನ್ನು ಮಾತ್ರ ತನ್ನ ಉಪಯೋಗಕ್ಕೆ ಇಟ್ಟುಕೊಂಡು ಅದನ್ನು ಒಡೆದು ಚೂರುಗಳನ್ನಾಗಿ ಮಾಡಿ ಮನೆಯ ಒಂದೊಂದು ಭಾಗದಲ್ಲಿ ಒಂದೊಂದು ಚೂರನ್ನ ಇಟ್ಟು ಚಿನ್ನದ ಕೊಡವನ್ನು ತೆಗೆದುಕೊಂಡು ನೀರನ್ನು ತರಲು ಕೆರೆಗೆ ಹೋದಳು. ಅಲ್ಲಿ ಇರುವ ಸಂದರ್ಭದಲ್ಲಿ ಅವಳ ಎದೆಯಲ್ಲಿ ಧಿಮ್ಮೆಂದು ಮೊಲೆಗಳು ಹಾಲಿನಿಂದ ತುಂಬಿದವು. ಅವಳಿಗೆ ಆಶ್ಚರ್ಯವಾಗಿ ಮನೆಗೆ ಬಂದು ನೋಡಿದಾಗ ಕುಂಬಳಕಾಯಿಯ ಎಷ್ಟು ಚೂರುಗಳನ್ನಿಟ್ಟಿದ್ದಳೋ ಅಷ್ಟು ಮಕ್ಕಳು ಹುಟ್ಟಿದವು. ಕುಂಬಕಾಯಿಯ ಅರ್ಧಭಾಗವನ್ನು ಚೂರು ಮಾಡದಂತೆ ದರೂಡಿ ದಾನ ಶಾಲಮ್ಮ ಹಾಗೆ ಇಟ್ಟಿದ್ದಳು. ಅದರಲ್ಲಿ ಹುಟ್ಟಿದವನೇ 'ಪಾತೇಲಿಂಗ' ಮುಂದೊಂದು ದಿನ ಶಿವಪಾರ್ವತಿಯರ ಸಾಕುಮಗನಾಗಿ ಸೇರುತ್ತಾನೆ. ಇವನಿಗೆ ಯಾವಾಗಲೂ ಹಾವು ಚೇಳುಗಳ ಒಡನಾಟ. ಇವನ ಉಪದ್ರವವನ್ನು ತಾಳಲಾರದೆ, ಶಿವಪಾರ್ವತಿಯರು ಭೂಲೋಕಕ್ಕೆ ಕಳುಹಿಸುತ್ತಾರೆ. ಭೂಲೋಕದಲ್ಲಿ ಪಾತೇಲಿಂಗ ಗೊಲ್ಲರಿಗೆ ಒಲಿಯುತ್ತಾರೆ.

"ಹಾವಿನ ಹಾಸಿಗೆ ಚೇಳಿನ ತಲೆದಿಂಬು
ಮ್ಯಾಲೆ ಕೆಂಜಿಗುನ ಒಳಹೊದಿಕೆ ಹೊದ್ದುಕೊಂಡು
ನಿಂಗಣ್ಣ ಮಾಡವ್ನೆ ಸುಖ ನಿದ್ದೆ"[೪೭]

ಎಂದು ಅಂಬಳಿಕೆ ಹಿರಿಯಣ್ಣನವರು ಪಾತೇಲಿಂಗ ಗೊಲ್ಲರಿಗೆ ಒಲಿದುದನ್ನು ವಿವರಿಸುತ್ತಾರೆ.

ಕ್ಯಾತಪ್ಪ (ಕೇತೇಲಿಂಗ) ಕೈಲಾಸದಿಂದ ತಪ್ಪಿಸಿಕೊಂಡು ಭೂಲೋಕಕ್ಕೆ ಬಂದು ಜಂಗಮಧಾರಿಯಾಗಿ ಊರೂರು ಸುತ್ತಿ ಪವಾಡಗಳನ್ನು ಮಾಡುತ್ತ ಕಾಡುಹೊಕ್ಕು ಕಾಡುಗೊಲ್ಲನೊಬ್ಬನಿಗೆ ಒಲಿಯುತ್ತಾನೆ. ಅಂತರ್ಧಾನನಾಗಿ ಮುಂದೆ ಗೊಲ್ಲರಿಗೆ ದೇವರಾಗುತ್ತಾನೆ.

"ಮಾಡದಾಗಳ ಮಿಂಚು ನೋಡೋರಿಗೆ ಅಳವಿಲ್ಲ
ತಾನೇ ಗಾಡಿಗಾನೆ ನಿಜಲಿಂಗ ಉಟ್ಟೀದ
ಮಾಯಾ ಮಾನ್ಯರಿಗೆ ತಿಳಿಯಾವು"[೪೮]

ವೀರಭದ್ರನ ಪ್ರತಿರೂಪವನ್ನು ಜುಂಜಪ್ಪನಲ್ಲಿ ಕಂಡುಕೊಳ್ಳಲಾಗಿದೆ. 'ನರಲೋಕ ಸುರಲೋಕ ಒತ್ತಿ ಆಳುವಂತೆ' ವೀರನನ್ನು ಕರೆತರುವ ಪ್ರಯತ್ನವಾಗಿದೆ. ಕೈಲಾಸದಲ್ಲಿ ಪುಂಡಾಟಿಕೆ ಮಾಡುತ್ತಿದ್ದ ವೀರಭದ್ರನನ್ನು

ಶಿವ ಹೇಗೆ ಬಂಧಿಸಿಟ್ಟಿದ್ದನು ಎಂಬುದನ್ನು ಕಾವ್ಯ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಜುಂಜಪ್ಪ ಚಿನ್ನಮ್ಮನ ಗರ್ಭದೊಳಗೆ ಮಾತಾಡುವುದು, ಅವಳಿಗೆ ತಿಳುವಳಿಕೆ ನೀಡುವುದು, ನಡುಬೆನ್ನಿನಿಂದ ಹುಟ್ಟುವುದು ಹುಟ್ಟಿದ ತಕ್ಷಣ ಹುತ್ತದ ಮೇಲೆ ಕುಳಿತುಕೊಳ್ಳುವುದು ಹೀಗೆ ಹತ್ತಾರು ಪವಾಡ ಸದೃಶ ಸಂದರ್ಭಗಳು ಜುಂಜಪ್ಪನ ಹುಟ್ಟಿನಲ್ಲಿ ವೈಭವೀಕೃತವಾಗಿದೆ.

ಜೀ.ಶಂ.ಪರಮಶಿವಯ್ಯನವರು ಶಿವನ ಬೆವರಿನಿಂದ ಕಾಟಯ್ಯ ಮತ್ತು ಚಿತ್ತಯ್ಯ ಎಂಬುವವರು ಹುಟ್ಟುತ್ತಾರೆ. ಆದರೆ ಓಬಳನರಸಿಂಹನ ಪ್ರಸ್ತಾಪ ಮಾಡುವುದಿಲ್ಲ. ಗೊಲ್ಲರಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡಿದ್ದರೂ, ಶೈವ ಸಂಪ್ರದಾಯವೇ ಪ್ರಧಾನ. ಚಿನ್ನಮ್ಮನಿಗೆ ಮಕ್ಕಳಾಗದಿದ್ದಾಗ ಮೂಲ ಪುರುಷ ಚಿತ್ತಯ್ಯನನ್ನು ಸ್ಮರಿಸಿ ಜುಂಜಪ್ಪನ ಜನ್ಮಕ್ಕೆ ಕಾರಣವಾಯಿತೆಂದು, ಮತ್ತೊಂದು ಪುರಾಣ ಕಾಟಯ್ಯ, ಚಿತ್ತಯ್ಯ, ಓಬಳನರಸಿಂಹ ನಮ್ಮ ಮೂಲಪುರುಷರೆಂದು ಕಾಡುಗೊಲ್ಲರಾದಿಯಾಗಿ ಪೂಜಿಸುತ್ತಾರೆ.

ಕ್ರೈಸ್ತ ಕುರುಬರು

ಒಂದು ಸಮುದಾಯದ ಇತಿಹಾಸವು ಪುರಾತನವಾದುದು ಮತ್ತು ಸಾರ್ವತ್ರಿಕವಾದುದು. ಜಗತ್ತಿನ ಇತಿಹಾಸದಲ್ಲಿ ಪ್ರತಿಯೊಂದು ಜನಾಂಗವೂ ಒಂದೊಂದು ಧರ್ಮವನ್ನು ಆಚರಿಸಿಕೊಂಡು ಬರುವ ವಿಚಾರ ಸರ್ವೇಸಾಮಾನ್ಯ. ಧರ್ಮ, ಪುರಾಣಗಳ ಮೂಲಕವಾಗಿ ಪ್ರತಿ ಜನಾಂಗವು ತನ್ನನ್ನು ಗುರುತಿಸಿಕೊಳ್ಳುವ ಕಾರ್ಯವನ್ನು ಮಾಡಿದೆ. ಪ್ರಪಂಚದಲ್ಲಿ ಪ್ರಬಲವಾದ ಧರ್ಮಗಳು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡು ಮೆರೆದ ಧರ್ಮಗಳಲ್ಲಿ ಕ್ರಿಶ್ಚಿಯನ್ ಧರ್ಮವೂ ಒಂದು.

ಪ್ರಪಂಚದಲ್ಲಿ ಹೆಚ್ಚು ಜನರ ಆರಾಧ್ಯ ಗ್ರಂಥ ಬೈಬಲ್. ಇದು ಕ್ರಿಸ್ತಪೂರ್ವ ೨-೩ ಶತಮಾನಗಳ ಹಿಂದೆ ಆ ಪ್ರದೇಶದಲ್ಲಿರುವ ಜನರು ಬಾಯಿಂದ ಬಾಯಿಗೆ ಹೇಳಿಕೊಂಡು ಬಂದ ಕಥೆಗಳನ್ನು ಸಂಗ್ರಹಿಸಿ ಕ್ರಿಸ್ತನು ಕಾಲವಾದ ಒಂದು ಶತಮಾನದ ತರುವಾಯ ಹೀಬ್ರೂ ಭಾಷೆಯಲ್ಲಿ ರಚಿಸಲಾದ 'ಜೆನೆಸಿಸ್ ಹಾಗೂ 'ಪೇಗನ್' ಎಂಬ ಎರಡು ಗ್ರಂಥಗಳ ಮತ್ತು 'ಯುನಾನಿ' ಹಾಗೂ 'ಲ್ಯಾಟಿನ್' ಭಾಷೆಗಳಲ್ಲಿ ಬರೆದ ಪ್ರಾಚೀನ ಗ್ರಂಥಗಳನ್ನು ಆಧರಿಸಿಯೇ ಇಂದಿನ ಬೈಬಲ್ ರಚಿಸಲಾಯಿತು.

ಜೆನೆಸಿಸ್ ಮತ್ತು ಪೇಗನ್ ಗ್ರಂಥಗಳಲ್ಲಿ ಸೃಷ್ಟಿಯ ಬಗೆಗೆ ಇರುವ ಕತೆಗಳಲ್ಲಿ ಸಾಮ್ಯಗಳಿವೆ. ಪ್ರಾಚೀನ ಹಿಬ್ರೂ ಭಾಷೆಯಲ್ಲಿ ರಚಿಸಲಾದ 'ಜೆನೆಸಿಸ್'ದ ಪ್ರಕಾರ ಈಶ್ವರನು ಒಬ್ಬನೆ. ಇವನು ಪ್ರಥಮ ದಿನದಲ್ಲಿ ಶೂನ್ಯದಿಂದ ಬ್ರಹ್ಮಾಂಡವನ್ನ ಸೃಷ್ಟಿ ಮಾಡಿದನು. ಐದು ದಿನಗಳವರೆಗೆ ಸತತವಾಗಿ ಪ್ರಯತ್ನಿಸಿ ಜೀವರಾಶಿಗಳನ್ನು ಹಾಗೂ "ಆದಮ್"ನನ್ನು ಸೃಷ್ಟಿಸಿದನು. ಆರನೆಯ ದಿನ ಆದಮ್‌ನಲ್ಲಿ ಆತ್ಮವನ್ನು ಸೇರಿಸಿದ. ಆದಮ್‌ನಿಗಾಗಿ ಪೂರ್ವ ದಿಕ್ಕಿನಲ್ಲಿ ಸ್ವರ್ಗದ ತೋಟ (ಈಡನ್ ಗಾರ್ಡನ್)

ನಿರ್ಮಿಸುತ್ತಾನೆ. ಮಧ್ಯದಲ್ಲಿ ಒಂದು ವಿಶೇಷವಾದ ಹಣ್ಣಿನ ಮರವನ್ನು ಸೃಷ್ಟಿಸಿ ಅದರಲ್ಲಿ ಹಣ್ಣುಗಳನ್ನು ನೀಡಿದನು. ಆದಮನನ್ನು ಕರೆದು 'ನೀನು ಯಾವ ಕಾಲಕ್ಕೂ ಈ ಹಣ್ಣುಗಳನ್ನು ತಿನ್ನಬಾರದು, ತಿಂದರೆ ನಿನ್ನ ಅಂತ್ಯವಾಗುತ್ತದೆ ಎಂದು ಎಚ್ಚರಿಸಿದನು. ಮುಂದೆ ಅನೇಕ ಜೀವಿಗಳಿಗೆ ಆದಮನೇ ಹೆಸರನ್ನ ಕೊಡಬೇಕೆಂದು ಈಶ್ವರನು ಆಜ್ಞಾಪಿಸಿದನಂತೆ, ಅದರಂತೆ ಆದಮನು ಎಲ್ಲಾ ಪ್ರಾಣಿಗಳಿಗೆ ಹೆಸರನ್ನು ಕರುಣಿಸಿದನು.

ಕೆಲಕಾಲದ ನಂತರ ಈಶ್ವರನೂ ಆದಮ್‌ನ ಏಕಾಂತವಾಸವನ್ನು ನೀಗಿಸಲು ಅವನಿಗೆ ದೀರ್ಘ ನಿದ್ದೆ ಬರಿಸಿ ಅವನ ಒಂದು ಪುಗ್ಗುಲಿನ ಎಲುಬಿನಿಂದ ಒಂದು ಹೆಣ್ಣನ್ನು ಸೃಷ್ಟಿಸಿ ಅವಳಿಗೆ 'ಹವ್ವಾ' ಎಂದು ಹೆಸರಿಸಿದನು. ಹೀಬ್ರೂ ಭಾಷೆಯಲ್ಲಿ 'ಹವ್ವಾ' ಎಂದರೆ ಭೂಮಿ, ಪೃಥ್ವಿ ಎಂಬರ್ಥವಿದೆ. ಈಗ ಆದಮನಿಗೆ ಒಳ್ಳೆಯ ಸಂಗಾತಿಯು ದೊರೆತು ಅವನು ಅವಳಲ್ಲಿ ಅನುರಕ್ತನಾದನು. ಈಶ್ವರನು ಹೇಳಿದ ಹಣ್ಣಿನ ಮರದ ರಹಸ್ಯವನ್ನು ಹವ್ವಾಳಿಗೆ ತಿಳಿಸಿದನು. ಇದೆ ಸಮಯದಲ್ಲಿ ಮಾತನಾಡುವ ನಾಗವು ಹವ್ವಾಳಿಗೆ 'ನೀವು ಈ ಸ್ವರ್ಗದಲ್ಲಿರುವ ಎಲ್ಲ ಹಣ್ಣುಗಳನ್ನು ತಿನ್ನಲು ಹಕ್ಕುಳ್ಳವರಾಗಿದ್ದೀರಿ. ಆ ಹಣ್ಣನ್ನು ತಿನ್ನುವುದರಿಂದ ನೀವು ಅಜ್ಞಾನ ಅಂಧಕಾರದಿಂದ ಹೊರಗೆ ಬರುತ್ತೀರಿ' ಎಂದು ಪುಸಲಾಯಿಸಿತು.

ಇದರಿಂದ ಈಶ್ವರನು ಯಾವ ಮರದ ಹಣ್ಣನ್ನು ತಿನ್ನಬಾರದು ಎಂದು ಕಟ್ಟಪ್ಪಣೆ ಮಾಡಿದ್ದನೋ ಅದೇ ಹಣ್ಣನ್ನು ಹವ್ವಾ (ಈವ್) ಆದಮ್‌ನಿಂದ ಕೀಳಿಸಿ ತಾನು ಸ್ವಲ್ಪ ತಿಂದು ಆದಮ್‌ನಿಗೆ ಬಹುಪಾಲು ನೀಡಿದಳು. ಸದಾ ನಗ್ನರಾಗಿದ್ದರೂ ನಾಚಿಕೊಳ್ಳದ ಇವರಿಗೆ ಜ್ಞಾನದ ಹಣ್ಣನ್ನು ತಿಂದ ಕೂಡಲೇ ನಾಚಿಕೆ ಆವರಿಸಿ (ಸಂಸ್ಕೃತಿಯ ಅರಿವು ಮೂಡಿ) ಗಿಡಮರಗಳ ಪೊದರಿನಲ್ಲಿ ಅಡಗಿಕೊಳ್ಳತೊಡಗಿದರು. ಈಶ್ವರನು ತನ್ನ ಆಜ್ಞೆಯನ್ನು ಉಲ್ಲಂಘಿಸಿದ ವಿಷಯ ತಿಳಿದು ಇವರಲ್ಲಿಗೆ ಬರುತ್ತಾನೆ. ಈಶ್ವರನನ್ನು ಕಂಡ ಕೂಡಲೇ ನಗ್ನರಾದ ಇಬ್ಬರೂ ಒಂದು ಮರದ ಪೊದೆಯಲ್ಲಿ ಅಡಗಿಕೊಳ್ಳುತ್ತಾರೆ. ಈಶ್ವರನು "ಎಲ್ಲಿರುವಿರಿ?" ಎಂದು ಇಬ್ಬರನ್ನು ಉದ್ದೇಶಿಸಿ ಕೂಗುತ್ತಾನೆ. ಆದಮ್ ಮತ್ತು ಹವ್ವಾ "ನಾವು ಸಂಪೂರ್ಣವಾಗಿ ನಗ್ನರಾಗಿದ್ದೇವೆ ಹೇಗೆ ಹೊರಗೆ ಬರುವುದು?" ಎಂದು ಅಲ್ಲಿಂದಲೇ ಪ್ರಶ್ನಿಸುತ್ತಾರೆ. ಆಗ ಈಶ್ವರನಿಗೆ ಇವರು ತಾನು ತಿನ್ನಬಾರದು ಎಂದು ಹೇಳಿದ ಹಣ್ಣನ್ನು ತಿಂದಿರುವುದು ಮನವರಿಕೆಯಾಗುತ್ತದೆ. ಈಶ್ವರನು 'ಯಾರು ಹಣ್ಣನ್ನು ತಿಂದದ್ದು?' ಎಂದು ಪ್ರಶ್ನಿಸಿದಾಗ ಆದಮನು "ನಾನಲ್ಲ, ಹವ್ವಾಳೆ ಮೊದಲು ಕೀಳು ಎಂದಳು, ಅದಕ್ಕೆ ಕಿತ್ತೆ ನಾನು, ಆದರೆ ಅವಳೇ ಮೊದಲು ತಿಂದದ್ದು" ಎಂದು ಸಮಜಾಯಿಷಿ ನೀಡುತ್ತಾನೆ.

ಹಾಗಾದರೆ ನಾನು ಹೇಳಿದ ರಹಸ್ಯವನ್ನು ಹವ್ವಾಳಿಗೆ ಹೇಳಿದ್ದು ಯಾರು? ಎಂದು ಪ್ರಶ್ನಿಸಿದಾಗ ತಾವಿಬ್ಬರೂ ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ತನ್ನ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಇಬ್ಬರನ್ನೂ ಈಶ್ವರನು ಭೂಲೋಕಕ್ಕೆ ಕಳಿಸುತ್ತಾನೆ. ಮತ್ತು ಸ್ವರ್ಗದ ಬಾಗಿಲನ್ನು ಭದ್ರಪಡಿಸಿ ಅದಕ್ಕೆ ಕಾವಲು

ಹಾಕುತ್ತಾನೆ. ಅದರಂತೆ ಭೂಲೋಕಕ್ಕೆ ಬಂದ ಆದಮ್ ಮತ್ತು ಈವರು ಸಂತೋಷದಿಂದಿರುವಾಗ 'ಕೇನ್' ಮತ್ತು 'ಎಬಲ್' ಎಂಬ ಇಬ್ಬರು ಪುತ್ರರು ಜನಿಸುತ್ತಾರೆ. ಆಗ "ಮಕ್ಕಳೇ ನೀವು ಪರಿಶ್ರಮದಿಂದ ದುಡಿದು ಬದುಕಿರಿ" ಎಂದು ತಂದೆತಾಯಿಗಳು ಇಬ್ಬರನ್ನು ಹರಸುತ್ತಾರೆ.

ಕೇನ್ ಕಾಡಿನಲ್ಲಿರುವ ಹಣ್ಣಿನ ಮರಗಳನ್ನು ಸಂರಕ್ಷಿಸುವ ಕಾಯಕದಲ್ಲಿ ತೊಡಗುತ್ತಾನೆ. ಎರಡನೇ ಮಗ ಎಬಲನು ಕುರಿಕಾಯಲು ಪ್ರಾರಂಭಿಸುತ್ತಾನೆ. ಕೆಲಕಾಲದ ನಂತರ ಈಶ್ವರನಿಗೆ ಹಿರಿಯ ಮಗನಾದ ಕೇನ್‌ನು ಮರದಲ್ಲಿ ಬೆಳೆದ ಒಂದು ಸೇಬುಹಣ್ಣನ್ನು ನೈವೇದ್ಯ ರೂಪದಲ್ಲಿ ಅರ್ಪಿಸುತ್ತಾನೆ. ಎರಡನೇ ಮಗನಾದ ಎಬಲನು ಕುರಿಗೆ ಹುಟ್ಟಿದ ಚೊಚ್ಚಿಲ ಮರಿಯನ್ನು ಈಶ್ವರನಿಗೆ ನೈವೇದ್ಯ ರೂಪದಲ್ಲಿ ಅರ್ಪಿಸುತ್ತಾನೆ. ಕಿರಿಯ ಮಗನ ಕಾಣಿಕೆಯಿಂದ ಈಶ್ವರನು ಸಂತೋಷಗೊಂಡು ಅವನನ್ನು ಕೊಂಡಾಡುತ್ತಾನೆ. ಇದರಿಂದ ಸಿಟ್ಟಿಗೆದ್ದ ಕೇನ್ ತನ್ನ ತಮ್ಮನ ವಿರುದ್ಧ ಹಗೆ ಸಾಧಿಸತೊಡಗುತ್ತಾನೆ. ಉಪಾಯದಿಂದ ತನ್ನ ತಮ್ಮನನ್ನು ತೋಟಕ್ಕೆ ಕರೆಯಿಸಿಕೊಂಡು ಅವನನ್ನು ಕೊಲೆ ಮಾಡುತ್ತಾನೆ. ಕೊಲೆಯ ಆರೋಪ ಹೊತ್ತ ಕೇನನಿಗೆ ಈಶ್ವರನು ಮರಣದಂಡನೆಯನ್ನು ಕೊಡುವುದರ ಬದಲಾಗಿ ಸದಾ ಸಂಚಾರಿಯಾಗಿ ಪೃಥ್ವಿಯಲ್ಲಿ ಕಾಡುಮೇಡುಗಳನ್ನು ಸುತ್ತಾಡುತ್ತಿರುವಂತೆ ಶಾಪಕೊಡುತ್ತಾನೆ.

ಇಬ್ಬರು ಮಕ್ಕಳ ತರುವಾಯ ೨೦ ವರ್ಷಗಳವರೆಗೆ ಆದಮ್ ಈವರಿಗೆ ಸಂತಾನಗಳಾಗಲಿಲ್ಲ. ನಂತರ ಮೂರನೇ ಮಗುವಿಗೆ ಜನ್ಮ ನೀಡುತ್ತಾಳೆ. ಇವನಿಗೆ 'ಸೆಟ್' ಎಂದು ನಾಮಕರಣ ಮಾಡಲಾಗುತ್ತದೆ. ಭೂಲೋಕದಲ್ಲಿರುವ ತನ್ನ ತಂದೆತಾಯಿಯರಿಗೆ ಸ್ವರ್ಗದಿಂದ ಮುಕ್ತಿಯ ಗಿಡವನ್ನು ತರಲು ಸ್ವರ್ಗಕ್ಕೆ ಹೋಗುತ್ತಾನೆ, ಅಲ್ಲಿ 'ಮೈಕಲ್' ಎಂಬ ದೇವದೂತನು 'ಸೆಟ್'ನಿಗೆ ಸ್ವರ್ಗ ಪ್ರವೇಶಕ್ಕೆ ತಡೆಯೊಡ್ಡಿ, "ಯಾವ ಕಾಲಕ್ಕೂ ಮಾನವರಿಗೆ ಮುಕ್ತಿಯ ಔಷಧಿ ಸಿಗಲಾರದು" ಎಂದು ಖಂಡತುಂಡವಾಗಿ ಹೇಳಿಕಳುಹಿಸುತ್ತಾನೆ. ಮರಳಿ ಬರುವಾಗ ಸೆಟ್ ಒಂದು ಬೀಜವನ್ನು (ಅಕ್ರೋಟ) ಕದ್ದು ತಂದು ಭೂಮಿಯಲ್ಲಿ ಬಿತ್ತುತ್ತಾನೆ. ಅವನು ಬಿತ್ತಿದ ಬೀಜದಿಂದ ಅನೇಕ ಮರಗಳು ಬೆಳೆಯುತ್ತವೆ. ಇದೆ ಮರದ ಕಟ್ಟಿಗೆಯಿಂದಲೇ ಏಸುವಿನ ಶಿಲುಬೆಯನ್ನು ತಯಾರಿಸಲಾಯಿತು ಎಂದು ಬೈಬಲ್ ಹೇಳುತ್ತದೆ. ಇಂದಿನ ಸಂಶೋಧಕರು ನೂರಾರು ವರ್ಷಗಳ ಸಂಶೋಧನೆಯಿಂದ ಇದನ್ನು ದೃಢಪಡಿಸಿದ್ದಾರೆ.

ಜೆನೆಸಿಸ್‌ದಲ್ಲಿಯ ಮೂರು ಮಕ್ಕಳ ಕಡೆಯಿಂದ ಮೊದಲನೆಯ ಮಗನು ಮೃಗರೂಪಿಯಾಗಿದ್ದು, ಗಿಡಮರಗಳ ಫಲಗಳನ್ನು ಅವಲಂಬಿಸಿ ಕಾಡಿನಲ್ಲಿ ಉಳಿದು ಸಂಚಾರಿಯಾಗಿದ್ದುದರಿಂದ ಕಾಡು ಮಾನವನ ಮೊದಲನೆಯ ಹಂತವನ್ನು ಸಂಕೇತಿಸಿದರೆ, ಎರಡನೆಯ ಮಗನು ಕುರಿಕಾಯ್ದು ಕುರುಬನಾಗುತ್ತಾನೆ. ಇದು ಪಶುಪಾಲನೆಯ ಹಂತವನ್ನು ಸಂಕೇತಿಸುತ್ತದೆ. ಮೂರನೇ ಮಗನು ಬೀಜ ತಂದು ಬಿತ್ತಿದ್ದರಿಂದ ಮೂರನೆಯ ಹಂತವನ್ನು ಅದರಲ್ಲೂ ಕೃಷಿಯನ್ನೂ ಸೂಚಿಸುತ್ತದೆ. ಈ ಹಂತದಲ್ಲಿ ಕುರುಬ ಜನಾಂಗದವರಿಗೆ ಯೇಸುವಿನ ಜನನ ಕುರುಬರ ದೊಡ್ಡಿಯಲ್ಲಿ ಆಯಿತು. ಯೇಸುವಿನ ಮೊದಲ ದರ್ಶನವನ್ನು ಪಡೆದವರು

ಕುರುಬರೇ ಆಗಿದ್ದಾರೆ. ಅಷ್ಟೇ ಅಲ್ಲ, ಸ್ವಾಮಿಯು ತನ್ನ ಮೊದಲ ಸಂದೇಶವನ್ನು ನೀಡಿದ್ದು ಮೊದಲ ಕುರುಬರಿಗೆ. ಅವನೇ ಈ ಜಗತ್ತನ್ನು ಸಂರಕ್ಷಿಸುವ ದೇವರು ಎನ್ನುವ ಸಂದೇಶಗಳ ಮೂಲಕ ಕುರುಬರನ್ನು ಕ್ರೈಸ್ತ ಧರ್ಮಕ್ಕೆ ಸೆಳೆಯುವ ಮೂಲಕ ಕ್ರೈಸ್ತ ಕುರುಬರು"[೬೯] ಎಂಬ ಒಳಪಂಗಡವೊಂದು ಹುಟ್ಟಿಕೊಂಡುದರ ಪೌರಾಣಿಕ ಮತ್ತು ಚಾರಿತ್ರಿಕ ಮಹತ್ವವನ್ನು ಗ್ರಹಿಸಬಹುದಾಗಿದೆ. ಒಟ್ಟಾರೆಯಾಗಿ ನಾಗರಿಕತೆಯತ್ತ ವಾಲಿದ ಮಾನವನ ಮೊದಲಿನ ವೃತ್ತಿಪರ ಜಾತಿ ಪಶುಪಾಲನೆಯೇ ಆಗಿತ್ತು ಎಂದು ಅನೇಕ ಸಂದರ್ಭಗಳು ಸಾರಿ ಸಾರಿ ಹೇಳುತ್ತವೆ. ಅಂತೆಯೇ ಕ್ರೈಸ್ತ ಕುರುಬರೂ ಇದ್ದಾರೆ.

ಹೆಗ್ಗಡೆ ಕುರುಬರು

ಹಾಲುಮತಕ್ಕೆ ಸೇರಿದ ಕುರುಬ ಹೆಗ್ಗಡೆಗಳು ಗ್ರಾಮ ಪ್ರಧಾನವಾದ ಪಶು, ಕುರಿಪಾಲನೆ ಮತ್ತು ಕೃಷಿಕ ಸಮುದಾಯದವರಾಗಿದ್ದರು. ಹೆಗ್ಗಡೆಗಳು ಕುರುಬ ಸಮುದಾಯದ ಒಂದು ಒಳಪಂಗಡವಾಗಿ ದಕ್ಷಿಣ ಕರ್ನಾಟಕದ ವಿಶೇಷವಾಗಿ ಹಳೆಯ ಮೈಸೂರು ಭಾಗದಲ್ಲಷ್ಟೇ ಕಂಡು ಬರುವವರಾಗಿದ್ದಾರೆ. ಹೆಗ್ಗಡೆಗಳ ಸಮುದಾಯದ ಮೂಲವನ್ನು ಕುರಿತ ಜನಪದ ಕತೆಯೊಂದು ನಮಗೆ ಲಭ್ಯವಾಗುತ್ತದೆ.

"ಒಂದಾನೊಂದು ಕಾಲದಲ್ಲಿ ಋತುಮತಿಯಾದ ಬ್ರಾಹ್ಮಣ ಕನ್ಯೆಯೋರ್ವಳನ್ನು ವಿಪ್ರರಾರೂ, ಅವಳು ಋತುಮತಿಯಾಗಿದ್ದಾಳೆ ಎನ್ನುವ ಕಾರಣಕ್ಕಾಗಿ ವಿವಾಹವಾಗದೇ ಇರುವುದರಿಂದ ಅವಳ ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿನಲ್ಲಿ ಬಿಟ್ಟು ಬಂದರು. ಆಕೆಯನ್ನು ಕಾಡಿನಲ್ಲಿ ನೋಡಿದ ಕುರಿಪಾಲನೆ ಮಾಡುತ್ತಿದ್ದ ಕುರುಬನೋರ್ವನು ಆಕೆಯನ್ನು ಸಂರಕ್ಷಿಸುತ್ತಾನೆ. ಆಕೆಗೆ ಆತನೇ ವಸತಿಯನ್ನು ಕಲ್ಪಿಸಿಕೊಡುತ್ತಾನೆ. ಆಗ ಆ ಬ್ರಾಹ್ಮಣ ಕನ್ಯೆಯು ಕುರುಬನಲ್ಲಿ ಅನುರಕ್ತಳಾಗುತ್ತಾಳೆ. ಹೀಗೆ ಬ್ರಾಹ್ಮಣ ಕನ್ಯೆ ಮತ್ತು ಕುರುಬನೋರ್ವನ ದಾಂಪತ್ಯದಲ್ಲಿ ಜನಿಸಿದವರೇ ಈ ಹೆಗ್ಗಡೆಗಳು ಎಂದು ಜನಪದ ಕತೆಯು ಹೇಳುತ್ತದೆ. ಅಲ್ಲದೆ ಶಿವನಿಗೆ ಗಂಗೆಯಿದ್ದಂತೆ ಕುರುಬ ತಂದೆಗೆ ಬ್ರಾಹ್ಮಣ ಕನ್ಯೆಯು ಎರಡನೆಯ ಹೆಂಡತಿಯಾಗುತ್ತಾಳೆ."[೭೦]

ಮೈಸೂರು ಜಿಲ್ಲೆಯಲ್ಲಿ 'ಹೆಗ್ಗಡ ದೇವನ ಕೋಟೆ' ಎಂಬುದೊಂದು ಅತಿ ಪ್ರಸಿದ್ಧವಾದ ಐತಿಹಾಸಿಕ ಸ್ಥಳವೊಂದಿದೆ. ಇದರ ನಿರ್ಮಾಪಕನು ಹೆಗ್ಗಡೆ/ಕುರುಬರ ಜಾತಿಯವನಾದ 'ದೇವಹೆಗ್ಗಡೆ'. ಇದರಿಂದಲೇ ಹೆಗ್ಗಡದೇವನ ಕೋಟೆ ಎಂಬ ಹೆಸರು ಬಂದಿರಲಿಕ್ಕೂ ಸಾಕು.

ಹೆಗ್ಗಡೆದೇವನ ಕೋಟೆಗೆ ಬಲವಾದ ಪೂರ್ವೇತಿಹಾಸವಿದೆ. ಸುಮಾರು ೫೦೦ ವರ್ಷಗಳ ಹಿಂದೆ ಆನೆಗೊಂದಿ ರಾಜನ ಸಹೋದರ 'ದೇವಹೆಗ್ಗಡೆ' ಎಂಬಾತನು ಅಣ್ಣನೊಡನೆ ಮನಸ್ತಾಪ ಮಾಡಿಕೊಂಡು ತನ್ನ ಅಲ್ಪ ಪರಿವಾರದೊಡನೆ ನಮ್ಮ ಈಗಿರುವ ಮಹಿಸೂರು ಸೀಮೆಗೆ ಬಂದು ಇಂದಿನ ಹೆಗ್ಗಡದೇವನ ಕೋಟೆಯಲ್ಲಿ ನೆಲಸಿದನು. ದೇವಹೆಗ್ಗಡೆಯು, ಈ ಸ್ಥಳಕ್ಕೆ ಬಂದಾಗ ಈ ಪ್ರಾಂತವೆಲ್ಲ ದಟ್ಟವಾದ ಅರಣ್ಯವಾಗಿತ್ತು. ಈತನು ಮೊದಲು ತನ್ನ ಸಂರಕ್ಷಣೆಯ ನಿಮಿತ್ತವಾಗಿ ಒಂದು ಸಾಧಾರಣವಾದ ಕೋಟೆಯನ್ನು

ನಿರ್ಮಿಸಿದನು. ತದನಂತರ ಈ ಕಾಡನ್ನೆಲ್ಲ ಕಡಿಸಿ ಪಟ್ಟಣವನ್ನು ನಿರ್ಮಾಣಗೊಳಿಸಿ ಒಕ್ಕಲು ಜನರನ್ನು ಕರೆಯಿಸಿ ಊರನ್ನು ತುಂಬಿಕೊಂಡು ಅವರಿಗೆಲ್ಲ ಸಹಾಯ ಪ್ರೋತ್ಸಾಹವಿತ್ತು ಅಭಿವೃದ್ಧಿಗೊಳಿಸಿದನು.

ಒಂದಾನೊಂದು ದಿನ ಈ ರಾಜಪುತ್ರನು ಬೇಟೆಗೆ ಹೋದಾಗ ಈಗ ನಿರ್ಮಿಸಲ್ಪಟ್ಟಿರುವ ಪಟ್ಟಣ ಪ್ರದೇಶದ ಕಾಡಿನಲ್ಲಿ ಒಂದು ಮೊಲವು ತನ್ನ ನಾಯಿಗಳ ಮೇಲೆರಗಿ ಅಟ್ಟಿಸಿಕೊಂಡು ಬಂದ ದೃಶ್ಯವನ್ನು ಕಂಡು ಆಶ್ಚರ್ಯ ಹೊಂದಿ, ಇದೊಂದು ಗಂಡುಭೂಮಿ ಎಂದು ಮನದಲ್ಲಿ ಎಣಿಸಿ, ಆ ಸ್ಥಳದಲ್ಲಿಯೇ ಏಳುಸುತ್ತಿನ ಕಂದಕಗಳಿಂದ ಕೂಡಿದ ಒಂದು ಅರಮನೆಯನ್ನು ಕಟ್ಟಿಸಿದನು. ಅಂದಿನ ಸಣ್ಣಪುಟ್ಟ ಪಾಳೆಯಗಾರರಿಗೆಲ್ಲ ಈ ಹೆಗ್ಗಡದೇವನ ಕೋಟೆಯಲ್ಲಿರುವ ಪಾಳೆಯಗಾರನೇ ಪ್ರಮುಖನಾಗಿದ್ದನೆಂದು ಹೇಳಬಹುದು.

ದೇವಹೆಗ್ಗಡೆಯ ಕುಮಾರನಾದ ಸಿಂಗಪ್ಪ ಒಡೆಯರು ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ನಮ್ಮ ಮಹಿಸೂರು ಸಂಸ್ಥಾನದ ರಾಜರಾದ ಬೆಟ್ಟದ ಚಾಮರಾಜ ಒಡೆಯರು ಈತನನ್ನು ಸೋಲಿಸಿದರು. ಇದಾದ ೧೩೦ ವರ್ಷಗಳ ನಂತರ ಈ ಸಿಂಗಪ್ಪ ಒಡೆಯರ ವಂಶಸ್ಥ ಚಿಕ್ಕದೇವಹೆಗ್ಗಡೆ ಎಂಬುವವನು ಈಗಿರುವ ಕೋಟೆಯನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ.

ಹೆಗ್ಗಡೆ ಎನ್ನುವ ಹೆಸರನ್ನು ದಕ್ಷಿಣ ಕನ್ನಡ ಜಿಲ್ಲೆಯ ಆಳುವ ವರ್ಗವಾಗಿದ್ದ ಜೈನರು ಗೌಡ ಸಾರಸ್ವತ ಸಮುದಾಯದ ಕೆಲವು ಕುಟುಂಬಗಳು, ಸವರ್ಣೀಯ ಹಿಂದೂಗಳಾದ ಭೂ ಮಾಲೀಕ ವರ್ಗದ ಬಂಟರಲ್ಲೂ ಮತ್ತು ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಬ್ರಾಹ್ಮಣರ ಕುಟುಂಬಗಳಲ್ಲಿ ಹೆಗ್ಗಡೆಗಳು ಎಂಬ ಹೆಸರು ಇಟ್ಟುಕೊಂಡಿರುವುದು ತಿಳಿದು ಬರುತ್ತದೆ. ಇಂದಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಬೆಟ್ಟ ಗುಡ್ಡಗಳ ತಪ್ಪಲಿನಲ್ಲಿ ಹೆಗ್ಗಡೆ ಎಂಬ ಜಾತಿಯ ಅಲ್ಪ ಸಂಖ್ಯಾತ ಪಂಗಡವಿದೆ. ಈ ಪಂಗಡದ ಜನರು ತಾವು ಹಂಪಿಯಿಂದ ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಜೀವ ಸಂರಕ್ಷಣೆಗಾಗಿ ಪಲಾಯನಗೈದವರೆಂದು ಹೇಳುತ್ತಾರೆ. ಇದು ಮೌಖಿಕ ಇತಿಹಾಸ.

ಈ ಎಲ್ಲಾ ಅನ್ಯ ಜಾತಿಗಳ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಮೂಲಗಳ ಜನವರ್ಗಗಳಲ್ಲಿ ಹೆಗ್ಗಡೆ ಎಂಬ ಪದವು ಸೀಮಿತವಾಗಿ ಕೆಲವು ಕುಟುಂಬಗಳಿಗಷ್ಟೇ ಬಳಸಲ್ಪಡುವುದರಿಂದ ಅದು ಸ್ಥಾನ ಸೂಚಕವಾಗಿರಬಹುದು. ಅದು ಹಾಲುಮತ ಹೆಗ್ಗಡೆಗಳಂತೆ ಜಾತಿಸೂಚಕವಾಗಿಲ್ಲ. ಕಾರ್ಕಳ ತಾಲೂಕಿನ ಹಂಪಿ ಮೂಲದ ಹೆಗ್ಗಡೆಗಳು ಅರಮನೆಯ ಉಪಚಾರ, ಅಡುಗೆಮನೆ ಮತ್ತು ವಿಲಾಸೀ ಜೀವನದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ಮನೆ ಹೆಗ್ಗಡೆಗಳೇ ಅಥವಾ ಹಂಪಿ ಹೆಗ್ಗಡೆಗಳು ಹಾಲುಮತದ ಹೆಗ್ಗಡೆಗಳೇ ಆಗಿದ್ದಾರೆ. ಹಂಪಿಯ ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರುಗಳಾದ ಹಕ್ಕಬುಕ್ಕರು ಕುರುಬರಾದುದರಿಂದ ಕಾರ್ಕಳ ತಾಲೂಕಿನ ಹಂಪಿ ಹೆಗ್ಗಡೆಗಳಿಗೂ, ಹಳೆಯ ಮೈಸೂರು ಪ್ರಾಂತ್ಯದ

ಹಾಲುಮತದ ಹೆಗ್ಗಡೆಗಳಿಗೂ ರಕ್ತ ಸಂಬಂಧ ಬೆಸೆಯಬಹುದು. ಈ ಹಾಲುಮತ ಹೆಗ್ಗಡೆಗಳು ಟಿಪ್ಪುವಿನ ಸೇನೆ ಮತ್ತು ಆಡಳಿತದಲ್ಲಿ, ವಿಜಯನಗರ ಸಾಮ್ರಾಜ್ಯದ ಸೇನೆ ಮತ್ತು ಸೇವೆಯಲ್ಲಿದ್ದರೆಂದು ವಿದ್ವಾಂಸರು ಹೇಳುತ್ತಾರೆ. ಈ ವಿಚಾರವು ಜನಪದ ನಂಬಿಕೆಯಾಗಿಯೂ ತಲೆತಲಾಂತರದಿಂದ ಅಸ್ತಿತ್ವದಲ್ಲಿದೆ. ಕೆಲವು ಹಾಲುಮತ ಹೆಗ್ಗಡೆಗಳು ತಾವು ಆರ್ಯ ಜನಾಂಗದವರೆಂದು ಹೇಳುವ ಶ್ರೇಷ್ಠತೆಯ ವ್ಯಸನಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ.

ಕಂಬಳಿ ಕುರುಬರು

ಕೃತ ಅಥವಾ ಸತ್ಯಯುಗದ ಮಾನವ ವಂಶದ ಇತಿಹಾಸವೇ ವೇದದ ವಿಚಾರವಾಗಿದೆ. ನಾಲ್ಕು ವೇದಗಳಲ್ಲಿ ಋಗ್ವೇದವೇ ಅತಿ ಪ್ರಾಚೀನವಾದುದು. ಇದು ಸುಮಾರು ೧೦,೫೫೨ ಶ್ಲೋಕಗಳುಳ್ಳ ಮಹಾಗ್ರಂಥವಾಗಿದೆ. ಋಗ್ವೇದದಲ್ಲಿ ವಸ್ತ್ರ ವಿದ್ಯೆಯ ಇತಿಹಾಸವು ಬಹಳಷ್ಟು ಕಡೆಗಳಲ್ಲಿ ಪ್ರಸ್ತಾಪ ಗೊಂಡಿರುತ್ತದೆ. ಮಾನವನ ಪ್ರಪ್ರಥಮ ಅವಶ್ಯಕತೆಗಳಲ್ಲಿ ಅನ್ನದ ಉತ್ಪಾದನೆಯು ಮೊದಲಾದರೆ, ನಂತರ ವಸ್ತ್ರ ಉತ್ಪನ್ನವು ಕಂಡು ಬರುತ್ತದೆ. ಅನ್ನದ ಉತ್ಪಾದನಾ ವಿದ್ಯೆಯಂತೆಯೇ ವಸ್ತ್ರ ವಿದ್ಯೆಯು ಬಹುಮುಖ್ಯವಾದುದು.

ವಸ್ತ್ರ ವಿದ್ಯೆಯು ವೇದದಲ್ಲಿ ಹೇಳಲ್ಪಟ್ಟಿರುವಂತೆ ಬ್ರಹ್ಮಸೂತ್ರ, ಕಾರ್ಪಸ ಸೂತ್ರಗಳಲ್ಲಿಯೂ ಹೇಳಲ್ಪಟ್ಟಿದೆ. ತತ್ವವಾಯು, ತಂತುವಾಯುಗಳಲ್ಲಿ ತತ್ವವಾಯು (ಜ್ಞಾನಿಯು) ಹೇಗೆ ಆತ್ಮಕ್ಕೆ ರಕ್ಷಣೆ ಕೊಡುತ್ತಿರುವನೋ ಹಾಗೆಯೇ ನೇಕಾರನು ಎಂದರೆ ತಂತುವಾಯು ದೇಹಕ್ಕೆ ರಕ್ಷಣೆ ಕೊಡಬಲ್ಲವನಾಗಿದ್ದಾನೆ. ತತ್ವವಾಯು, ತಂತುವಾಯು ಎಂಬ ಪದಗಳಲ್ಲಿ ಬಹಳ ಗಂಭೀರವಾದ ಬಹು ಅರ್ಥಗರ್ಭಿತವಾದ ವಿಚಾರ ಸಮುದ್ರವೇ ಅಡಗಿಕೊಂಡಿರುವುದನ್ನು ನಾವು ಕಾಣಬಹುದು.

ಮಹಾವಿಷ್ಣುವನ್ನು 'ಸುತಂತು' ಎಂದೂ ತಂತುವರ್ಧನನೆಂದೂ ಸಂಬೋಧಿಸಲಾಗಿದೆ. ಭಗವಾನ್ ಕೃಷ್ಣನು ವಸುದೇವನ ಮಗನು. ವಸುದೇವನು ವೃಷ್ಣಿ ವಂಶದವನು. ವೃಷ್ಣಿ ಎಂದರೆ 'ಕುರಿ' ಎಂಬ ಅರ್ಥವಿರುತ್ತದೆ. ಕುರಿಯಿಂದ ಉಣ್ಣೆಯ ಉತ್ಪಾದನೆಯಾಗುವುದರಿಂದ, ಅದರ ನೂಲನ್ನು ಹೊಸೆದು ಹಸನುಗೊಳಿಸಿ ಕಂಬಳಿಯನ್ನು ನೇಯುವ ಕಲೆಯು ಪ್ರಾರಂಭವಾಯಿತು. ಹೀಗಾಗಿ ಕಂಬಳಿ ನೇಯುವ ಕಲೆಯೂ ಕೂಡ ವೇದೋಕ್ತವಾದುದು. 'ಕಂಬಲ' ಶಬ್ದದಿಂದಲೇ ಕಂಬಳಿ ಎಂಬ ಪದವು ನಿಷ್ಪತ್ತಿಯಾಗಿದ್ದು ಋಗ್ವೇದದಲ್ಲಿ ಇದರ ಪ್ರಸ್ತಾಪವು ಕಂಡು ಬರುವುದು ಮಾತ್ರವಲ್ಲದೆ ಅಥರ್ವಣ ವೇದದಲ್ಲೂ ಕಂಬಳಿಯ ಬಗೆಗೆ ಉಲ್ಲೇಖವಾಗಿರುವುದನ್ನು ಗಮನಿಸಬಹುದಾಗಿದೆ.

ವೇದಕಾಲದಿಂದಲೂ ಕುರುಬರಲ್ಲಿ ಕೆಲವೊಂದು ಒಳಪಂಗಡದವರು ಮೂಲತಃ ಕಂಬಳಿಯ ನೇಯ್ಗೆ ಕಸುಬನ್ನೇ ಪ್ರಧಾನ ವೃತ್ತಿಯಾಗಿಸಿಕೊಂಡಿರುವುದು ಐತಿಹಾಸಿಕವಾಗಿ ಸಾಬೀತಾಗುತ್ತದೆ. ಆನಂತರದಲ್ಲಿ ಉಪಕಸುಬು ಕಂಬಳಿ ನೇಯ್ಗೆಯೊಂದಿಗೆ ಕೃಷಿಯನ್ನು ಅವಲಂಬಿಸಲು ಪ್ರಾರಂಭಿಸಿದರು. ಅಪರೂಪವಾಗಿ

ಆದರೊಂದಿಗೆ ವ್ಯವಸಾಯವನ್ನು ಮಾಡಿದರೂ ಇವರಿಗೆ 'ಕಂಬಳಿಕುರುಬರು' ಎಂಬ ಹೆಸರೇ ವಾಡಿಕೆಗೆ ಬಂದಿತು.

ಈ ನೇಯ್ಗೆ ಕಲೆಯು ಸಾಧಾರಣವೆನಿಸಲು ಇರುವ ಕಲೆಯಂತೂ ಅಲ್ಲ, ಅದೊಂದು ಚಮತ್ಕಾರಿಕ ವಿದ್ಯೆಯಾಗಿದ್ದು ಪ್ರಪಂಚದಲ್ಲಿ ಪ್ರಪ್ರಥಮ ನಾಗರಿಕತೆಗೆ ಮೂಲಕಾರಣವಾದ ಈ ನೇಯ್ಗೆ ಕಲೆಯನ್ನು ಮೊದಲು ಜಗತ್ತಿಗೆ ತೋರಿಸಿ ಕೊಟ್ಟವರೆಂದರೆ ಈ ಕುರುಬರೊಳಗಿರುವ ಹಟ್ಟಿಕಾರ ಧನಗಾರರೆಂಬುವವರೆ. ಇತ್ತೀಚೆಗೆ ನೇಯ್ಗೆ ಕಸುಬಿನವರು ಅನೇಕ ಜಾತಿ ಮತ ಪಂಗಡಗಳಾಗಿ ಭಿನ್ನ ಭಿನ್ನರಾಗಿ ಎಣಿಸಲ್ಪಡುತ್ತಿದ್ದಾರೆ. ಜಾಡರು, ದೇವಾಂಗದವರೂ, ಅದರಲ್ಲೂ, 'ಹಟ್ಕಾರ ದೇವಾಂಗ'ದವರು ಎಂಬ ಒಳಪಂಗಡವಿದ್ದು ಅವರ ಕಸುಬು ಇಂದು ನೇಯ್ಗೆಯೇ ಆಗಿರುವುದನ್ನು ಕಾಣಬಹುದಾಗಿದೆ.

ಕಂಬಳಿ ಬಳಕೆಯ ಹಂತದಿಂದಲೇ ಈ ಕುರುಬರಿಗೆ ಹೆಸರು ಬಂದಿರಬಹುದು. "ಕಂಬಳಿಯನ್ನು ನೇಯುವುದು ಹಾಗೂ ಹೆಣ್ಣು ಮಕ್ಕಳು ಕಂಬಳಿಯನ್ನೇ ಹೊದ್ದುಕೊಳ್ಳುವ ರೂಢಿಯಿದ್ದ ಪಂಗಡಕ್ಕೆ ಜಾಡಿ ಇಲ್ಲವೆ ಕಂಬಳಿ ಕುರುಬರೆಂದು ಕರೆದಂತೆ ತೋರುತ್ತದೆ"[೫೧] ಎಂದು ಶಿವಾನಂದ ಗುಬ್ಬಣ್ಣವರ ಅಭಿಪ್ರಾಯ ಪಡುತ್ತಾರೆ.

ವಾರದ ಕುರುಬರು

ಒಂದು ಜನಪದ ಐತಿಹ್ಯದ ಪ್ರಕಾರ ಹೆಗ್ಗಡೆಗಳಿಗೂ ಮತ್ತು ವಾರದ ಕುರುಬರಿಗೂ ಪರಸ್ಪರ ಸಂಬಂಧವಿರುವುದು ತಿಳಿದು ಬರುತ್ತದೆ. ಒಂದಾನೊಂದು ಕಾಲದಲ್ಲಿ ಋತುಮತಿಯಾದ ಬ್ರಾಹ್ಮಣ ಕನ್ಯೆಯೋರ್ವಳನ್ನು ವಿಪ್ರರಾರೂ, ಅವಳು ಋತುಮತಿಯಾಗಿದ್ದಾಳೆಂಬ ಕಾರಣದಿಂದ ವಿವಾಹವಾಗದೆ ಉಳಿಯುತ್ತಾಳೆ. ಆಗ ಆ ಕನ್ಯೆಯನ್ನು ಕಾಡಿಗೆ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಬಿಟ್ಟು ಬರುತ್ತಾರೆ. ಆಕೆಯನ್ನು ಕಾಡಿನಲ್ಲಿ ಕುರಿಪಾಲನೆ ಮಾಡುತ್ತಿದ್ದ ಕುರುಬನೋರ್ವನು ರಕ್ಷಿಸಿದನು. ಆಗ ಆತನಲ್ಲಿ ಆ ಬ್ರಾಹ್ಮಣ ಕನ್ಯೆಯು ಅನುರಕ್ತಳಾದಳು. ಹೀಗೆ ಬ್ರಾಹ್ಮಣ ಕನ್ಯೆ ಮತ್ತು ಕುರುಬನೋರ್ವನ ದಾಂಪತ್ಯದಲ್ಲಿ ಜನಿಸಿದವರು ಹೆಗ್ಗಡೆಗಳಾದರೆ ಮೂಲ ಪುರುಷನ ಮೊದಲ ದಾಂಪತ್ಯದಲ್ಲಿ ಜನಿಸಿದವರು ಸೋಮವಾರದ ಕುರುಬರು, ಈತನ ಎರಡನೇ ದಾಂಪತ್ಯದಲ್ಲಿ ಬ್ರಾಹ್ಮಣ ಪತ್ನಿಯಲ್ಲಿ ಜನಿಸಿದವರು ಗುರುವಾರದ ಕುರುಬರು ಎಂದು ಕರೆಯಲ್ಪಟ್ಟರು.

ಇಲ್ಲಿ ವರ್ಗೀಕರಣವು ಸೋಮವಾರ ಮತ್ತು ಗುರುವಾರವೆಂದು ದಿನದ ಹೆಸರಿನ ಪ್ರಕಾರ ನಡೆದಿದೆ. ಇದರರ್ಥ ಕುರುಬರ ಕುಲದೈವವಾದ ಶ್ರೀ ಬೀರೇಶ್ವರನನ್ನು ಪೂಜಿಸಲು ಮೊದಲ ಪತ್ನಿ ಮಕ್ಕಳಿಗೆ ಸೋಮವಾರವನ್ನು ಮತ್ತು ಎರಡನೇ ಪತ್ನಿಯಾದ ಬ್ರಾಹ್ಮಣ ಕನ್ಯೆಯಲ್ಲಿ ಜನಿಸಿದ ಮಕ್ಕಳಿಗೆ ಗುರುವಾರವನ್ನು ಮೂಲಪುರುಷನು ಗೊತ್ತು ಪಡಿಸಿದನು. ಹೀಗೆ ಒಂದೇ ತಂದೆಯಿಂದ ಆದರೆ ಕುರುಬ ಮತ್ತು ಬ್ರಾಹ್ಮಣ ಜಾತಿಯ ತಾಯಂದಿರ ಗರ್ಭದಲ್ಲಿ ಜನಿಸಿದ ಮಕ್ಕಳೇ ಮುಂದೆ ಹಾಲುಮತದವರು ಎಂದು ಬೆಳೆದು ಎಲ್ಲೆಡೆ ವಾಸಿಸುವರು ಎನ್ನುವ ಕಥೆಯೊಂದಿಗೆ ಮುಕ್ತಾಯವಾಗುತ್ತದೆ.

ಈ ಮೇಲಿನ ಜನಪದ ಐತಿಹ್ಯವು ಒಂದು ನಂಬಿಕೆಯನ್ನು ಹುಟ್ಟು ಹಾಕಿತು. ಅದೇ ಸೋಮವಾರ ಮತ್ತು ಗುರುವಾರದ ಕುರುಬರು ಪರಸ್ಪರ ಅಣ್ಣತಮ್ಮಂದಿರು ಎನ್ನುವುದಾಗಿದೆ. ಈ ಕಾರಣದಿಂದಾಗಿ ತೀರಾ ಇತ್ತೀಚಿನವರೆಗೆ ಈ ಎರಡು ಸಮುದಾಯಗಳ (ಒಳಪಂಗಡಗಳು) ನಡುವೆ ವೈವಾಹಿಕ ಸಂಬಂಧಗಳನ್ನು ನಿಷೇಧಿಸಲಾಗಿತ್ತು. ಈ ನಂಬಿಕೆಯು ಶಿಕ್ಷಣ ಪ್ರಸರಣವು ಹೆಚ್ಚಾದಂತೆ ಸಡಿಲಗೊಳ್ಳತೊಡಗಿದೆ.

ಸಾದ ಕುರುಬರು

ಆರ್ಯಾವರ್ತವು ವಿಸ್ತಾರವಾಗುತ್ತಾ ಹೋದಂತೆಲ್ಲಾ ಅಂತಹ ಪ್ರದೇಶಗಳಲ್ಲಿ ದಾಳಿಕೋರರ ಹಾವಳಿಯು ಹೆಚ್ಚಾಗತೊಡಗಿತ್ತು. ಕುರುಬರಿಗೆ ತಾವು ನಿಂತ ನೆಲೆಯು ಅಭದ್ರವೆನಿಸಿ ಜೀವನ ನಡೆಸುವುದು ಕಷ್ಟಕರವಾಯಿತು. ಆಗ ದಕ್ಷಿಣದೆಡೆಗೆ ವಲಸೆಯು ಅನಿವಾರ್ಯವಾಯಿತು. ವಲಸೆ ಹೊರಟ ವೇಳೆಯಲ್ಲಿ ಕೆಲವು ಸ್ಥಳೀಯ ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು. "ವಲಸಿಗರ ನೆಲೆಗಳಿಗೆ ಹೋಗಿ ಅವರಿಗೆ ಮಾನಸಿಕ ಸ್ಥೈರ್ಯ ತುಂಬುವ, ಸಾಧ್ಯವಾದ ಪರಿಹಾರ ಕಂಡುಕೊಳ್ಳುವ ಕಾರ್ಯವನ್ನು ನಾಥ ಸಂಪ್ರದಾಯ ಮೂಲದ ಸಿದ್ಧರು ಕೈಗೊಂಡಿರಬೇಕು. ಇಂಥ ಒಂದು ಕಾರ್ಯದ ಸುಳಿವು ಸಿದ್ಧಮಂಕ ಚರಿತೆ ಕಾವ್ಯದ ವಸ್ತುವಿನಲ್ಲಿ ಸಿಗುತ್ತದೆ"[೫೨].

ಸಿದ್ಧಮಂಕ ಚರಿತ್ರೆಯಲ್ಲಿ ಶಿವನು ಹೆಗ್ಗಗೌಡನೆಂಬುವನಿಗೆ ತುಪ್ಪಳ ಕತ್ತರಿಸುವ, ನೂಲುವ ನೇಯುವ ವಿಧಾನ ತಿಳಿಸಿಕೊಡುವ ಪ್ರಸ್ತಾಪ ಬರುತ್ತದೆ. ಸಿದ್ಧರಾಮ ಕೆರೆಕಟ್ಟಿಸುವ ಕಾರ್ಯವನ್ನು ಗಮನದಲ್ಲಿಟ್ಟು ನೋಡಿದಾಗ ವಲಸಿಗರಿಗಾಗಿ ಉದ್ಯೋಗ ಸೃಷ್ಟಿಯ ತಂತ್ರ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಶರಣರ ಕಾಯಕವೆ ಕೈಲಾಸ ತತ್ವದ ಅಂತರಂಗ ತಿಳಿಯುತ್ತದೆ. ಮತ್ತು ಅದಕ್ಕೆ ಹೊಸ ಆಯಾಮ ಸಿಗುತ್ತದೆ. ಯಾವ ಕಾಯಕ ಎನ್ನುವುದಕ್ಕಿಂತ ಕಾಯಕ ನಿಷ್ಠೆ ಮುಖ್ಯ. ಈ ಹಿನ್ನೆಲೆಯಲ್ಲಿಯೆ ಚರ್ಮಕಾಯಕದ ಕುರುಬರು ಸಾದರು ಮಾದಿಗರೆನಿಸಿರಬೇಕು. ಇದರ ಮೂಲಕವೇ ಸಾದರೋ ಮಾದರೋ ಎಂಬ ಗಾದೆಯೂ ಹುಟ್ಟಿಕೊಂಡಿರಬೇಕು. ಈ ಮೂರು ಸಮುದಾಯಗಳಲ್ಲಿ ಸಮಾನ ಬೆಡಗುಗಳಿರುವುದು ಕಾಣಬಹುದು. ಈ ಹಿನ್ನೆಲೆಯಲ್ಲಿ ಪ್ರೊ. ಎಸ್.ಎಸ್. ಹಿರೇಮಠರು "ಕುರುಬ ರೇವಣಸಿದ್ಧನ ಶಿಷ್ಯ ಮಾದಿಗ ಮರುಳಸಿದ್ಧ"[೫೩] ಎಂದು ಹೇಳಿದ್ದು ಅರ್ಥಪೂರ್ಣವೆನಿಸುತ್ತದೆ.

ಶರಣ ಚಳುವಳಿಯು ಸಿದ್ಧ ಸಂಪ್ರದಾಯ ಚಟುವಟಿಕೆಗಳ ಮುಂದುವರಿದ ಭಾಗ "ಜ್ಞಾನಿಗಳಾದ ಸಿದ್ಧರು ಚಾತುರ್ವರ್ಣದ ಕಟ್ಟುಗಳನ್ನು ಪಾಲಿಸುತ್ತಿರಲಿಲ್ಲ"[೫೪] ಎಂಬ ಶಂಭಾ ಜೋಶಿಯವರ ಮಾತು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜನಿಯ ಮರುಳಸಿದ್ಧನಿಗೂ ಅನ್ವಯಿಸುತ್ತದೆ. ಈ ಮರುಳಸಿದ್ಧನಿಗೆ ಮುಂಚೆ ಮಧ್ಯಪ್ರದೇಶದ ಉಜ್ಜಯಿನಿ ಪೀಠದ ಮರುಳಸಿದ್ಧ ಬೇರೆ ಇರಬೇಕು. ಅವನು ರೇವಣಸಿದ್ಧನ ಮಗ-ಶಿಷ್ಯ. ಇಲ್ಲಿಯೂ ರೇವಣಸಿದ್ಧನ ಬಗ್ಗೆ ಸಂದೇಹ ಮೂಡಬಹುದು. ರೇವಣಸಿದ್ಧನು ಗುರುಮಠಗಳಿಗೆ ಚಾಲನೆ ನೀಡುತ್ತಾನೆ. ಪ್ರತಿ ಊರು ಇಲ್ಲವೆ ಊರುಗಳ ಸಮುಚ್ಚಯಕ್ಕೆ

ಒಬ್ಬ ಗುರುವನ್ನು ನೇಮಕ ಮಾಡುತ್ತಾನೆ. ಅವು ರೇವಣಸಿದ್ಧರ ಮಠಗಳಾಗಿ ಶತಮಾನಗಳಿಂದ ಮುಂದುವರಿದುಕೊಂಡು ಬಂದಂಥವು. ಇವುಗಳಿಗೆ ಕುರುಬರ ಗುರುಗಳು ಒಡೆಯರು ಆಗಿರುತ್ತಾರೆ. ರೇವಣರಿಂದ ಗುರುಪೀಠವೊಂದು ಆರಂಭವಾಗುತ್ತದೆ. ಇಲ್ಲಿ ಮರುಳಾರಾಧ್ಯರು ಮುಖ್ಯ. ಯಾಕೆಂದರೆ "ಲಿಂಗಾಯತರಾದ ಸಾದ ಕುರುಬರ ಸಂಬಂಧ ಮರುಳಸಿದ್ಧರೊಂದಿಗೆ ಹೆಣೆದುಕೊಂಡಿದೆ. ಅವರನ್ನು 'ಆರಾಧ್ಯ' ಎಂದು ಪಂಚಾಚಾರ್ಯರ ಭಾಷೆಯಲ್ಲಿ ಕರೆಯುತ್ತಿದ್ದರೂ ಅವರು ಸಿದ್ಧ ಸಂಪ್ರದಾಯ ಮರುಳಸಿದ್ಧರು"[೫೫] ಎಂದು ಡಾ. ಎಂ.ಎಂ. ಕಲಬುರ್ಗಿ ಅಭಿಪ್ರಾಯಪಡುತ್ತಾರೆ.

"ಯಾವುದೇ ಜನಾಂಗವು ಗುಳೆ ಕಟ್ಟಿಕೊಂಡು ಎದ್ದಾಗ ಮೊದಲು ನೆಲೆಯಾಗಿದ್ದ ದೇವ ದೇವತೆಗಳ ನೆನಹುಗಳನ್ನು, ಸ್ಥಳ ಪುರಾಣಗಳನ್ನು ಕಟ್ಟಿಕೊಂಡೆ ಹೊರಡುವುದುಂಟು"[೫೬] ಉಜ್ಜಯನಿ, ಮಧ್ಯಪ್ರದೇಶಗಳ ಕಡೆಯಿಂದ ಹೊರಟ ಕುರುಬರು ಅಲ್ಲಲ್ಲಿ ನೆಲೆನಿಂತು ತಾವು ನೆಲೆನಿಂತ ಸ್ಥಳಗಳಿಗೆ ಉಜ್ಜಯನಿ ಎಂಬ ಹೆಸರನ್ನು ಇಟ್ಟುಕೊಂಡರು. ಅವು ವಲಸೆಬಂದ ಕುರುಬರ ಹೆಜ್ಜೆ ಗುರುತುಗಳನ್ನು ಸೂಚಿಸುತ್ತವೆ. ಹೆಸರಿನಲ್ಲಿ ಕೆಲವು ಪ್ರಾದೇಶಿಕ ವ್ಯತ್ಯಾಸಗಳಿದ್ದರೂ ಕರ್ನಾಟಕದಲ್ಲಿ ಕೆಲವು ಊರುಗಳು ಕಂಡು ಬರುತ್ತವೆ.

ಮಧ್ಯಪ್ರದೇಶದ ಉಜ್ಜಯಿನಿ ಜಬ್ಬಲ್ಪುರ ಪ್ರದೇಶಗಳು ಕುರುಬರು ದಟ್ಟವಾಗಿ ನೆಲಸಿದ್ದ ಪ್ರದೇಶಗಳಾಗಿದ್ದವು. ರೇವಣರು ನಾಥ ಸಂಪ್ರದಾಯದ ಮತ್ಸ್ಯೇಂದ್ರನಾಥ, ಗೋರಖನಾಥರ ಸಂಪರ್ಕ ಪಡೆದದ್ದು ಜಬಲ್ಪುರದ ಬಂಧುಲ-ಶಿವನಿಯಲ್ಲಿ. ಹತ್ತಿರದಲ್ಲಿಯೇ ಬೇಡಾಘಾಟ್ (ಕುರಿಘಟ್ಟ) ಇದೆ. ಈ ಪ್ರದೇಶದಿಂದ ವಲಸೆ ಬಂದ ಕುರುಬರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಶಿವನಿಯಲ್ಲಿ ನೆಲೆನಿಂತರು. ವಿಜಯನಗರ ಸಾಮ್ರಾಜ್ಯದ ಪತನಾನಂತರ ತಾಳಿಕೋಟೆಯಿಂದ ವಲಸೆ ಬಂದ ಕುರುಬರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆಯಲ್ಲಿ ವಾಸಸ್ಥಾನ ಕಂಡುಕೊಂಡರು. ಅದರಂತೆ ಉಜ್ಜಯಿನಿ ಕಡೆಯಿಂದ ಬಂದ ಅಥವಾ ಆ ಸಂಪ್ರದಾಯವನ್ನು ಹೊತ್ತು ತಂದ ಕುರುಬರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ನೆಲೆಸಿದರು. ಅದು ಉಜ್ಜನಿಯಾಯಿತು. "ಮೊದಲು ಆ ಪ್ರದೇಶವನ್ನು 'ಕಗ್ಗಲ್ಲು' ಎಂದು ಕರೆಯುತ್ತಿದ್ದರು. ಕಗ್ಗಲ್ಲು ಗೌಡ (ಕುರುಬ) ಮೈಲಾರನ ಭಕ್ತ"[೫೭] ಎಂದು ಮಹದೇವ ಬಣಕಾರ ತಿಳಿಸುತ್ತಾರೆ.

ಕಗ್ಗಲ್ಲು ಗೌಡ ವಲಸಿಗರು ನೆಲಸಲು ಸಹಕರಿಸಿದಂತೆ ತೋರುತ್ತದೆ. ಸಮೀಪದಲ್ಲಿಯೇ ಮೈಲಾರನ ಬಂಡೆ ಇದೆ. ಉಜ್ಜನಿಯಲ್ಲಿ ಈಗಲೂ ಕುರುಬರೇ ಹೆಚ್ಚು. ಅವರಲ್ಲಿ ಲಿಂಗಾಯತರಾದವರಲ್ಲಿಯೇ ನಂತರದ ದಿನಗಳಲ್ಲಿ ಎರಡು ಪಂಗಡಗಳಾದಂತೆ ತೋರುತ್ತದೆ. ಮರುಳಸಿದ್ಧ ಕಗ್ಗಲುಗೌಡನ ಸಾಕುಮಗನೆಂದು ಹೇಳಲಾಗುತ್ತದೆ. ಕಗ್ಗಲ್ಲುಗೌಡನ ಹಿನ್ನೆಲೆಯಲ್ಲಿ ಕಗ್ಗಲ್ಲೋರು ಎಂಬ ಬೆಡಗು ರೂಢಿಗೆ ಬಂದಿದೆ. ಈ ಬೆಡಗು ಕುರುಬರಲ್ಲಿಯೂ ಇದೆ. ಸಾದಲಿಂಗಾಯತರಲ್ಲಿಯೂ ಇದೆ. ಸಾದ ಕುರುಬರ ಮೂಲವು ಇದರಿಂದಲೂ ವ್ಯಕ್ತವಾಗುತ್ತದೆ.

ಕಾವ್ಯ ಮತ್ತು ಶಾಸನಗಳಲ್ಲಿ ಮರುಳಸಿದ್ಧ, ಮಂಕುಸಿದ್ಧ, ಮರುಳ, ಮಂಕಯ್ಯ ಎಂದು ಉಕ್ತವಾದ ಸಿದ್ಧನೊಬ್ಬ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರಿನ ಪರಿಸರದಲ್ಲಿ ಆಗಿ ಹೋಗಿದ್ದಾನೆ. ಅಲ್ಲಿ ರೇವಣಸಿದ್ಧರ ಮಗ ಶಾಂತ ಮುತ್ತಯ್ಯನ ಮಠ ಇದೆ. ಮಲ್ಲಿಕಾರ್ಜುನ (ಈಗ ರೇವಣಸಿದ್ಧ) ದೇವಸ್ಥಾನವಿದೆ. ಮರುಳಸಿದ್ಧ ಇಲ್ಲಿಯ ಬಂಡೆಯ ಮೇಲೆ ಘೋರ ತಪಸ್ಸು ಮಾಡಿದನೆಂದೂ, ಕಲ್ಯಾಣ ಪ್ರವೇಶದ ನಿರಾಕರಣೆಗೆ ಒಳಗಾದ ಕುರುಬರಿಗೆ ತನ್ನ ತಪೋಬಲದ ಪವಾಡದಿಂದ ಪ್ರವೇಶಾವಕಾಶ ಕಲ್ಪಿಸಿಕೊಟ್ಟನೆಂದು ತಗರಪವಾಡ ಮತ್ತು ಸಿದ್ಧಮಂಕ ಚರಿತೆಗಳಲ್ಲಿ ಕಂಡು ಬರುತ್ತದೆ.

ಹಾಲುಮತ ಪುರಾಣದಲ್ಲಿ ಮರುಳಸಿದ್ಧನು ಕುರುಬನೆಂಬುದನ್ನು ಹೇಳುವುದಕ್ಕೆ ಸಾಕ್ಷ್ಯ ದೊರೆಯುತ್ತದೆ.

> "ಮರುಳಸಿದ್ಧನವನ ವರಚರಿತವ ಕೇಳೆ
> ಹರನೊಲಿದನು ಕರುಣದಿ
> ಕುರುಬರ ಕಥೆಯೆಂದು ಜರಿಯಲು ಬೇಡ
> ಮರುಳ ಸಿದ್ಧಯ್ಯ ತಾ ಕುರುಬ"[೫೮]
>
> (ಸಂಧಿ ೫, ಪದ್ಯ ೧೦೭)

ಎನ್ನುತ್ತದೆ. ಇದರಿಂದ ಕುರುಬ ಮಂಕುಸಿದ್ಧನು ರೇವಣಸಿದ್ಧ, ಸಿದ್ಧರಾಮನೊಂದಿಗೆ ಇವನು ಕಲ್ಯಾಣಕ್ಕೆ ಹೋದ ಬಗ್ಗೆ ಬಸವಣ್ಣನನ್ನು ಕಂಡು ಸಮಸ್ಯೆ ಬಗೆಹರಿಸಿದ ಬಗ್ಗೆ ಪ್ರಸ್ತಾಪಗಳಿವೆ.

ಒಕ್ಕಲು ಕುರುಬರು

ನೂರಾರು ವರ್ಷಗಳ ಹಿಂದೆ ಐದಾರು ತಲೆಮಾರಿನ ಜನರಲ್ಲಿ ಘಟಿಸಿರಬಹುದಾದ ಒಂದ ಆಕಸ್ಮಿಕ ಪರಿಸ್ಥಿತಿಯ ಕಾರಣಾಂತರದಿಂದ ಬೇರೆ ಕಾಡಿನಿಂದ ವಲಸೆ ಬಂದ ಒಂದು ಗುಂಪಿನ ಜನರು ಮೀಣ್ಯಂ, ಗಾಜನೂರು, ಲಕ್ಕುಂಡಿ ಮತ್ತು ಹೂಗ್ಯಂ ಪ್ರದೇಶದಲ್ಲಿ ತಮ್ಮ ವಾಸ್ತವ್ಯವನ್ನು ಕಂಡುಕೊಂಡು ಕಾಡಿನಲ್ಲಿ ಆಹಾರೋತ್ಪನ್ನಗಳನ್ನು ಸಂಗ್ರಹಿಸುವ ಮೂಲಕ ತಮ್ಮ ನಿತ್ಯದ ಬದುಕನ್ನು ಸಾಗಿಸುತ್ತಿದ್ದರು. ಮನೆಯಲ್ಲೇ ಉಳಿಯುತ್ತಿದ್ದ ಹೆಣ್ಣುಮಕ್ಕಳು ಮಳೆಗಾಲದಲ್ಲಿ ತಾವು ವಾಸವಿದ್ದ ಗುಡಿಸಲ ಸುತ್ತಲಿನ ನೆಲವನ್ನು ಹಸನುಮಾಡಿ ಅಲ್ಲಿ ತಮ್ಮ ಆಹಾರಕ್ಕೆ ಪೂರಕವಾದ ಕೆಲವು ಧಾನ್ಯದ ಬೀಜಗಳನ್ನು ನೆಟ್ಟು ಕೆತ್ತಲು ಬೇಸಾಯವನ್ನು ಆರಂಭಿಸಿದರು.

ಹೀಗೆ ಕಡಿಮೆ ಪ್ರಮಾಣದಲ್ಲಿ ಆರಂಭವಾದ ಬೇಸಾಯವು ವರ್ಷಗಳು ಕಳೆದಂತೆ ವಿಸ್ತಾರವಾಗತೊಡಗಿತು. ಆಗ ಮನೆಯಲ್ಲಿದ್ದ ಹೆಣ್ಣುಮಕ್ಕಳೇ ಅಲ್ಲದೆ ಗಂಡಸರೂ ಸೇರ್ಪಡೆಯಾದರು. ಆದರೆ ಇದರಲ್ಲಿ ಹೆಣ್ಣುಮಕ್ಕಳ ಪಾಲು ಅಧಿಕವಾಗಿತ್ತು. ಅದಕ್ಕಾಗಿ ಹೆಚ್ಚು ಸಮಯ ಬೇಸಾಯದ ಕೆಲಸದಲ್ಲಿ ನಿರತರಾಗುತ್ತಿದ್ದರು. ಹೀಗೆ ಬೇರೆಡೆಯಿಂದ ಅನಿವಾರ್ಯ ಕಾರಣಗಳಿಂದ ವಲಸೆ ಬಂದ ಸಮುದಾಯವು ಭೌಗೋಳಿಕ ಪರಿಸರ

ಹಾಗೂ ಪರಿಸ್ಥಿತಿಯ ಒತ್ತಡಗಳಿಂದ ಕೆತ್ತಲು ಬೇಸಾಯದಲ್ಲಿ ತೊಡಗಿಸಿಕೊಂಡರು. ಆಗ ಹೆಣ್ಣುಮಕ್ಕಳು ತಮ್ಮ ಎರಡೂ ಕೈಗಳಿಗೆ ಗಾಜಿನ ಬಳೆಗಳನ್ನು ತೊಡುವುದು ಕಡ್ಡಾಯ ಮತ್ತು ಸಂಪ್ರದಾಯವಾಗಿತ್ತು, ಹೆಣ್ಣಿನ ಐದು ಭಾಗ್ಯಗಳಲ್ಲಿ ಬಳೆಯು ಮುತ್ತೈದೆತನದ ಸಂಕೇತ ಅಥವ ಪ್ರತೀಕ. ಆದರೆ ತಾವು ರೂಢಿಸಿಕೊಂಡಿದ್ದ ಕೆತ್ತಲು ಬೇಸಾಯವು ಬಳೆಗಳನ್ನು ತೊಟ್ಟು ಕೆಲಸ ನಿರ್ವಹಿಸಲು ಸಹಕರಿಸುತ್ತಿರಲಿಲ್ಲ. ಅಂದರೆ ಬಿದಿರು ಅಥವಾ ಕಾರೆ ದಸಿಯಿಂದ ನೆಲವನ್ನು ಹಸನು ಮಾಡುವಾಗ ಇಲ್ಲವೇ ಕಳೆ ಕೀಳುವ ಸಂದರ್ಭದಲ್ಲಿ ವಿಶೇಷವಾಗಿ ಬಳಕೆಯಾಗುತ್ತಿದ್ದ ಬಲಗೈನ ಬಳೆಗಳಿಂದ ಕೆಲಸ ನಿಧಾನವಾಗುತ್ತಿತ್ತು. ಈ ತೊಂದರೆಯನ್ನು ತಾತ್ಕಾಲಿಕವಾಗಿ ಬಗೆಹರಿಸುವ ನಿಟ್ಟಿನಲ್ಲಿ ಉಪಾಯವೊಂದನ್ನು ಕಂಡುಕೊಂಡರು ಅಂದರೆ ಕೆತ್ತನೆ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮುಂಚೆ ಬಲಗೈನಲ್ಲಿ ತೊಟ್ಟಿರುವ ಬಳೆಗಳನ್ನು ಕಳಚಿ ಮನೆಯಲ್ಲಿ ಇರಿಸುವುದು, ಕೆಲಸ ಮುಗಿದ ಮೇಲೆ ಆ ಬಳೆಗಳನ್ನು ಬಲಗೈಗೆ ತೊಟ್ಟುಕೊಳ್ಳುತ್ತಿದ್ದರು. ಇದು ಅವರಿಗೆ ಹೆಚ್ಚು ಅನುಕೂಲಕರವಾಗಿತ್ತು.

ಕೆಲವು ಕಾಲ ಈ ಅಭ್ಯಾಸ ಮುಂದುವರಿಸಿದ ನಂತರ ಅವರಿಗೆ ಪ್ರತಿನಿತ್ಯ ಕೆಲಸ ಆರಂಭಿಸುವ ಮುನ್ನ ಬಳೆಗಳನ್ನು ತೆಗೆದಿರಿಸಬೇಕು ಹಾಗೂ ಕೆಲಸ ಮುಗಿದ ಬಳಿಕ ಪುನಃ ಬಳೆಗಳನ್ನು ಕೈಗೆ ತೊಟ್ಟುಕೊಳ್ಳಬೇಕಾಗುತ್ತಿತ್ತು. ಇದೂ ಒಂದು ರೀತಿಯ ಅನಗತ್ಯ ಶ್ರಮ ಹಾಗೂ ಬಳೆಗಳು ಒಡೆದು ಹೋಗುವ ಸಂದರ್ಭಗಳು ಬಂದೊದಗುತ್ತಿದ್ದವು. ಇದನ್ನ ತಪ್ಪಿಸುವ ಸಲುವಾಗಿ ಉತ್ತಮವಾದ ನಿರ್ಧಾರವನ್ನು ತೆಗೆದುಕೊಂಡು ಶಾಶ್ವತವಾಗಿ ಬಲಗೈಗೆ ಬಳೆಗಳನ್ನು ತೊಡುವುದನ್ನು ನಿಲ್ಲಿಸಿದರು. ಅಂದರೆ ಸಂಪ್ರದಾಯಕ್ಕೂ ಮಿಗಿಲಾದ ಅನುಕೂಲ ಹಾಗೂ ಸೂಕ್ತವೆಂದು ಕಂಡುಕೊಂಡ ಒಂದು ಹೊಸ ವ್ಯವಸ್ಥೆಯನ್ನು ರೂಢಿಸಿ ಕೊಳ್ಳುವುದಕ್ಕೆ ಅಂದಿನ ಪರಿಸ್ಥಿತಿಯಲ್ಲಿ ಸಮಸ್ಯೆಯಾಗಿರಲಿಕ್ಕಿಲ್ಲ. ಅಂತಹ ಒಂದು ಕ್ರಾಂತಿಕಾರಿ ಬದಲಾವಣೆ ಯನ್ನು ಒಕ್ಕೈ ಕುರುಬ ಎಂದು ಕರೆಯಲ್ಪಡುವ ಸಮುದಾಯ ನೂರಾರು ವರ್ಷಗಳ ಹಿಂದೆಯೇ ಮಾಡಿಕೊಂಡಿತ್ತು.

ಕಾಲಾಂತರದಲ್ಲಿ ಇದೇ ಸಮುದಾಯಕ್ಕೆ ಸೇರಿದ್ದ ಮೂಲನೆಲೆಯ ಜನರು ಇವರ ಬಳಿ ಬಂದು ಸಂಬಂಧ ಬೆಳೆಸುವ ಉದ್ದೇಶದೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದರು. ಆದರೆ ಅವರಿಗೆ ಇಲ್ಲಿನ ಹೆಣ್ಣುಮಕ್ಕಳು ಒಂದೇ ಕೈಗೆ (ಎಡಗೈಗೆ) ಮಾತ್ರ ಬಳೆಯನ್ನು ತೊಟ್ಟಿರುವುದು ಗಮನಕ್ಕೆ ಬರುತ್ತದೆ. ಆಶ್ಚರ್ಯ ಮತ್ತು ಆತಂಕದಿಂದ ಏನಿದು ಒಂದೇ ಕೈಗೆ ಬಳೆ ಎಂದು ಉದ್ಗರಿಸುತ್ತಾರೆ. ಹಾಗೂ ಇವರು ನಮ್ಮ ಕಟ್ಟು ಕಟ್ಟಳೆಯಂತೆ ಇಲ್ಲವಾದ್ದರಿಂದ, ಇವರ ಜೊತೆ ಯವುದೇ ಸಂಬಂಧವನ್ನು ಬೆಳೆಸುವುದು ಸೂಕ್ತವಲ್ಲವೆಂದು ತಿಳಿದು ಶಾಶ್ವತವಾಗಿ ಬೇರ್ಪಟ್ಟು, ಒಂದೇ ಸಮುದಾಯ ಎರಡು, ಮೂರು ಒಳಪಂಗಡಗಳಾಗಿ ಬೇರ್ಪಡುತ್ತದೆ"[೫೯] ಎಂಬ ಕತೆಯನ್ನು ಕೇಶವನ್ ಪ್ರಸಾದ್ ಅವರು ವಿವರಿಸುತ್ತಾರೆ.

ಝುಂಡೆ ಕುರುಬರು

ಮಹಾರಾಷ್ಟ್ರ ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಝುಂಡೆ ಕುರುಬರು ವತನದಾರರಾಗಿ, ಪಟೇಲರಾಗಿ, ದೇಶಮುಖರಾಗಿ ಹಿಂದಿನಿಂದಲೂ ಕಾರ್ಯಭಾರವನ್ನು ಮಾಡುತ್ತಾ ಬಂದಿದ್ದಾರೆ. ಮಧ್ಯಪ್ರದೇಶದ ಇಂದೋರ್ ಈ ಸಮುದಾಯದ ಪ್ರಾಚೀನ ವಾಸಸ್ಥಾನ. ಅಲ್ಲಿ ಧನಗರ್ ಝುಂಡೆ ಎಂಬ ಆಡಳಿತಗಾರರಿದ್ದು ಅವರಲ್ಲಿ ಮಹಾರಾಣಿ ಅಹಲ್ಯಾಬಾಯಿ ತುಂಬಾ ಜನಪ್ರಿಯರಾದವರು. ಇವರು ಇಂದೋರದಿಂದ ಹಿಡಿದು ಮಲಪ್ರಭಾ ನದಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡಿದ್ದರು.

ಮುನವಳ್ಳಿಯ ಮಲಪ್ರಭಾ ನದಿಯ ದಂಡೆಯ ಮೇಲೆ ಕಟ್ಟಿದ ವಿಶಾಲವಾದ ಕೋಟೆ ಹಾಗೂ ಸಿಂಧೆ ಹೋಳ್ಕರ್ ಅವರ ಹೆಸರಿನಲ್ಲಿ ಕಟ್ಟಿದ ಸಿಂಧೋಗಿ ಎಂಬ ಹೆಸರು ಇರುವ ಊರನ್ನ ಗಮನಿಸಬಹುದು. ಮಹಾರಾಷ್ಟ್ರದ ಇಂದೋರಿನ ಹೋಳ್ಕರ್ ಅರಸು ಮನೆತನವು ಝುಂಡೆ ಕುರುಬರಿಗೆ ಸೇರಿದುದಾಗಿತ್ತು. 'ಮಲ್ಹಾರಿ ರಾವ್' ಈ ಅರಸು ಮನೆತನದ ಸಂಸ್ಥಾಪಕ. ತದ ನಂತರದಲ್ಲಿ ಅಹಲ್ಯಾದೇವಿ ಈ ಮನೆತನದ ಜನಪ್ರಿಯ ರಾಣಿಯಾಗಿ ಮೂವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದಳು.

ವಿ.ಆರ್. ಹನುಮಂತಯ್ಯನವರು ಹೇಳುವಂತೆ "ಈಕೆಯ ನ್ಯಾಯೈಕ ಪರಾಯಣತೆ, ನಿಷ್ಪಕ್ಷ ಪಾತ ಧೋರಣೆ, ಪರೋಪಕಾರ, ರಾಜಕಾರ್ಯ ನಿರ್ವಾಹಕ ಶಕ್ತಿ, ದಕ್ಷತೆ, ಶಾಂತಿ, ಸಹನೆಗಳನ್ನು ಕಂಡ ಜನ ಹಿಂದೆ ಇಂಥವರು ಇರಲಿಲ್ಲವೆಂದೂ, ಮುಂದೆ ಬರಲಾರರೆಂದೂ ಭಾವಿಸಿಕೊಂಡು, ಈಕೆ ದೈವಾಂಶ ಸ್ವರೂಪಿಣಿ ಎಂಬಂತೆ 'ದೇವಿ ಅಹಲ್ಯಾಬಾಯಿ' ಎಂದು ಸಂಭೋದಿಸತೊಡಗಿದರು. ಈಗಲೂ ಈಕೆಯನ್ನು ದೇವತೆಯೆಂದು ಪೂಜಿಸುವರು"[೬೦] ಎಂದಿದ್ದಾರೆ.

ಹೀಗೆ ಝುಂಡೆ ಸಮುದಾಯದವರು ತಮ್ಮ ರಾಜರ ಆಶ್ರಯವನ್ನು ಪಡೆದು ಇಂದೋರ್ ಗ್ವಾಲಿಯರ್ ನಿಂದ ಹಿಡಿದು ಕೃಷ್ಣಾ, ಮಲಪ್ರಭಾ ನದಿಯ ತೀರಗಳವರೆಗೂ ವ್ಯಾಪಿಸಿಕೊಂಡಿರುವುದು ಕಂಡುಬರುತ್ತದೆ. ಕಾಲಕ್ರಮೇಣ ಮಲಪ್ರಭಾ, ಕೃಷ್ಣಾ ನದಿತೀರಗಳನ್ನು ಬಿಟ್ಟು ಕಾವೇರಿ ನದಿ ತೀರದವರೆಗೂ ಹಾಗೂ ಪಶ್ಚಿಮಘಟ್ಟ ಪ್ರದೇಶಗಳವರೆಗೂ ವ್ಯಾಪಕವಾಗಿ ಹರಡಿಕೊಳ್ಳುತ್ತಾರೆ. ಇವರಿಂದಲೇ ಝುಂಡೇ ಕುರುಬರು ಎಂಬ ಒಳಪಂಗಡವೊಂದು ಹುಟ್ಟಿಕೊಂಡಿದ್ದು ಹೋಳ್ಕರ್ ಮನೆತನವೇ ಇದರ ಮೂಲವೆಂದೂ ಝುಂಡೇ ಕುರುಬರ ಚಾರಿತ್ರಿಕತೆಯನ್ನು ಅವಲೋಕಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಶಂಭಾ ಜೋಶಿ ಕೃತಿ: ಸಂಪುಟ-೩, (ಸಂ) ಮಲ್ಲೇಪುರಂ ಜಿ. ವೆಂಕಟೇಶ, ಪುಟ ೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೧೯೯೯.

೨. ಪುರಾಣ ನಾಮ ಚೂಡಾಮಣಿ: ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ, ಪುಟ ೩೭೮, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೨೦೦೭.

೩. ಪುರಾಣ: ಓ.ಎಲ್. ನಾಗಭೂಷಣಸ್ವಾಮಿ, ಪುಟ ೨೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ. ೧೯೯೩.

೪. ದಿ.ಸೈನ್ಸ್ ಆಫ್ ಫೋಕ್‌ಲೋರ್: ಕ್ರಾಫೆ, ಪುಟ ೩೧೭-೧೮.

೫. ಮಿಥ್ ಇನ್ ಪ್ರಿಮಿಟಿವ್ ಸೈಕಾಲಜಿ: ಮಲಿನೋವಸ್ಕಿ, ಪುಟ ೭೯.

೬. ವಿಸ್ಮೃತಿ ಮತ್ತು ಸಂಸ್ಕೃತಿ: ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೪೪, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು ಪ್ರ. ೨೦೦೧.

೭. ಅದೇ

೮. ಸ್ಟ್ಯಾಂಡರ್ಡ್ ಡಿಕ್ಶನರಿ ಆಫ್ ಫೋಕ್ ಮೈಥಾಲಜಿ ಅಂಡ್ ಲೆಜೆಂಡ್.

೯. ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ: ಡಾ. ಎಂ.ಹೆಚ್.ನಾಗರಾಜು, ಪುಟ ೯, ಅನಿಕೇತನ ಪ್ರಕಾಶನ, ತುಮಕೂರು, ಪ್ರ. ೨೦೦೩.

೧೦. ಕುರುಬ ಜನಪದ: (ಸಂ) ಪ್ರೊ. ಚನ್ನಪ್ಪಕಟ್ಟಿ ಮತ್ತು ಆರ್.ಎಸ್.ವಾಡೇದ, ಪುಟ ೪, ಕನಕ ಜಯಂತ್ಯೋತ್ಸವ, ಸಿಂದಗಿ, ಪ್ರ. ೧೯೯೭.

೧೧. ಒರಿಜಿನಲ್ ಇನ್ ಹ್ಯಾಬಿಟೆಂಟ್ಸ್ ಆರ್ಫ ಇಂಡಿಯಾ: ಗುಸ್ತಾವ್ ಒಪರ್ಟ್, ಪುಟ ೧೨೩, ಏಶಿಯನ್ ಎಜುಕೇಷನ್ ಸೊಸೈಟಿ, ನ್ಯೂಡೆಲ್ಲಿ, ೧೯೮೮.

೧೨. ಬಳ್ಳಾರಿ ಗೆಝೆಟಿಯರ್: ೧೯೫೬.

೧೩. ಮದ್ರಾಸ್ ಜನಗಣತಿ ವರದಿ: ೧೮೯೧.

೧೪. ವಿಸ್ಮೃತಿ ಮತ್ತು ಸಂಸ್ಕೃತಿ: ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೭೭-೭೮. ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು ಪ್ರ. ೨೦೦೧.

೧೫. ಕರ್ನಾಟಕ ಕುರುಬರು: ಶಿವಾನಂದ ಗುಬ್ಬಣ್ಣವರ, ಪುಟ ೧೩, ಅಕ್ಷಯ ಪ್ರಕಾಶನ, ಧಾರವಾಡ, ಪ್ರ. ೧೯೯೩.

೧೬. ಕುರುಬರ ಹೆಜ್ಜೆಗಳು: ಚಂದ್ರಕಾಂತ ಬಿಜ್ಜರಗಿ, ಪುಟ ೧೭೯, ಶೈಲಚಂದ್ರ ಪ್ರಕಾಶನ, ಬಿಜಾಪುರ, ಪ್ರ. ೨೦೦೬.

೧೭. ಅಲೆಮಾರಿ ಕುರುಬ: ಡಾ. ಡಿ.ಯರ್ರಪ್ಪ, ಪ್ರವೇಶ, ಪುಟ ೧೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೨೦೦೮.

೧೮. ಕನ್ನಡ ವಿಷಯ ವಿಶ್ವಕೋಶ ಸಂ-೧: (ಸಂ) ಹಾ.ಮಾ.ನಾಯಕ್, ಪುಟ ೫೨೮-೨೯, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೭೩.

೧೯. ಗೊಂಡರ ಸಂಸ್ಕೃತಿ: ಸೈಯದ್ ಜಮೀರುಲ್ಲಾ ಷರೀಫ್, ಪುಟ ೨೧೭-೧೮, (ಅಪ್ರಕಟಿತ) ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೮೬.

೨೦. ಆಗ್ನೇಯ ಪುರಾಣ

೨೧. ತಗರ ಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೫, ೨೧, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೨೨. ಹಾಲುಮತ ಪುರಾಣವು: ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಸಂಧಿ-೪, ಪುಟ ೪೭-೪೮, ವಿದ್ಯಾನಿಧಿ ಪ್ರಕಾಶನ ಗದಗ, ಪ್ರ. ೧೯೯೯.

೨೩. ತಗರ ಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೭೧, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೨೪. ಅದೇ, ಪುಟ ೮೨

೨೫. ಹಾಲುಮತ ಪುರಾಣವು: ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಪದ್ಯ, ೧೦೭ ವಿದ್ಯಾನಿಧಿ ಪ್ರಕಾಶನ ಗದಗ ಪ್ರ. ೧೯೯೯.

೨೬. ಸಿದ್ಧಮಂಕ ಚರಿತೆ: (ಸಂ) ಡಾ. ಎಂ.ಎಂ.ಕಲಬುರ್ಗಿ, ಡಾ. ವೈ.ಸಿ.ಭಾನುಮತಿ, ಪುಟ ೪೬, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ಪ್ರ. ೨೦೦೪.

೨೭. ಅದೇ

೨೮. ಅದೇ

೨೯. ತಗರಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮ್ಯ, ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೭೨, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೩೦. ಅದೇ

೩೧. ಕುರುಬರ ಹೆಜ್ಜೆಗಳು: ಚಂದ್ರಕಾಂತ ಬಿಜ್ಜರಗಿ, ಪುಟ ೧೬೭, ಶೈಲಚಂದ್ರ ಪ್ರಕಾಶನ, ವಿಜಾಪುರ, ಪ್ರ. ೨೦೦೬.

೩೨. ಬುಕ್ಕರಾಯ ಚರಿತ್ರೆ (ಹಂಡೆ ಅರಸರ ವಂಶಾವಳಿ) ಡಾ. ಎಸ್.ಸಿ. ಪಾಟೀಲ, ಪ್ರ. ೨೦೦೨.

೩೩. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ: ಡಾ. ಸಿ. ನಾಗಭೂಷಣ, ಪುಟ ೧೬೩.

೩೪. ಹಾಲುಮತೋತ್ತೇಜಕ ಪುರಾಣ: (ಸಂ) ಭಾಗುತನಯ ನವಿಲೂ, ಪುಟ ೩, ಪ್ರ. ೧೯೮೨.

೩೫. ಅದೇ

೩೬. ತಗರ ಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೧೧, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೦೪.

೩೭. ಅದೇ ಪುಟ ೨೧.

೩೮. ಭಾರತ ದೇಶದ ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ, ಪುಟ ೧೧೧, ಮಿಥಿಕ್ ಸೊಸೈಟಿ, ಬೆಂಗಳೂರು ೧೯೨೬.

೩೯. ಮುಂಬೈ ಕರ್ನಾಟಕ ಗೆಝೆಟಿಯರ್: ಅನು: ವೆಂಕಟರಂಗೋ ಕಟ್ಟಿ, ಪುಟ ೧೨೩.

೪೦. ಸಿದ್ಧಮಂಕ ಚರಿತೆ: ಡಾ. ಎಂ.ಎಂ.ಕಲಬುರ್ಗಿ, ಡಾ. ವೈ.ಸಿ.ಭಾನುಮತಿ, ಪುಟ ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ಪ್ರ. ೨೦೦೪.

೪೧. ಹಾಲತೊರೆ: (ಸಂ) ಎಂ. ಕರಿಯಪ್ಪ, ಪುಟ ೧೫೫.

೪೨. ಗಂಗಡಿಗಾರ ಒಕ್ಕಲಿಗರು: ಡಾ. ನಲ್ಲೂರು ಪ್ರಸಾದ್, ಪುಟ ೫೭-೫೯, ಪ್ರ. ೨೦೦೧.

೪೩. ಜಾನಪದ ಕೈಪಿಡಿ: ಡಾ. ಎಚ್.ಜೆ.ಲಕ್ಕಪ್ಪಗೌಡ, ಪುಟ ೩೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೨೦೦೦.

೪೪. ಚಿತ್ರದೇವರ ಕಾವ್ಯ: ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಪುಟ ೦೫, ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಶಿರಾ ಪ್ರ. ೨೦೦೨.

೪೫. ಕಾಡುಗೊಲ್ಲರ ಬುಡಕಟ್ಟು ವೀರರು: ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪು ೨೧೧, ಸಿವಿಜಿ ಪ್ರಕಾಶನ, ಬೆಂಗಳೂರು ಪ್ರ. ೨೦೦೫.

೪೬. ಸಾವಿರದ ಸಿರಿಬೆಳಗು: ಡಾ. ಕೃಷ್ಣಮೂರ್ತಿ ಹಸೂರು, ಪುಟ ..., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ. ೨೦೦೫.

೪೭. ಕಾಡುಗೊಲ್ಲರ ಜನಪದ ಗೀತೆಗಳು: ಅಂಬಳಿಕೆ ಹಿರಿಯಣ್ಣ, ಪುಟ ೧೫೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರ. ೧೯೭೮,

೪೮. ಅದೇ ಪುಟ

೪೯. ಆದಿಕಾಂಡ (ಜಿನೆಸಿಸ್): ಅಧ್ಯಾಯ: ೨-೨೪, ಅಧ್ಯಾಯ ೪-೨, ಉದ್ಧೃತ: ಕುರುಬರ ಹೆಜ್ಜೆಗಳು, ಚಂದ್ರಕಾಂತ ಬಿಜ್ಜರಗಿ.

೫೦. ಹಾಲುಮತ ವ್ಯಾಸಂಗ-೨, (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರ. ೨೦೧೦.

೫೧. ದೇವರ್ ಬಂದಾವ್ ಬನ್ನೀರೆ: (ಸಂ) ಶಿವಾನಂದ ಗುಬ್ಬಣ್ಣವರ, ಪುಟ... ಪ್ರಸ್ತಾವನೆ xvii

೫೨. ಸಿದ್ಧಮಂಕ ಚರಿತೆ: (ಸಂ) ಡಾ. ಎಂ.ಎಂ.ಕಲಬುರ್ಗಿ, ಡಾ.ವೈ.ಸಿ.ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ, ಗದಗ, ಪ್ರ. ೨೦೦೪.

೫೩. ಜನಪದ ಸಮಾಜ ಸಂಸ್ಕೃತಿ: ಪ್ರೊ. ಎಸ್.ಎಸ್.ಹಿರೇಮಠ, ಪುಟ ೪೫, ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ ಪ್ರ. ೨೦೦೫.

೫೪. ಶಂಭಾ ಕೃತಿಃ ಸಂಪುಟ-೧, ಪುಟ ೨೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೧೯೯೯.

೫೫. ಸಂಸ್ಕೃತಿ-ವಿಕೃತಿಃ ಡಾ. ಎಂ.ಎಂ.ಕಲಬುರ್ಗಿ, ಪುಟ ೧೪೦-೪೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪ್ರ. ೨೦೦೯.

೫೬. ಅದೇ, ಪುಟ ೫೩.

೫೭. ವಿಶ್ವಬಂಧು ಮರುಳಸಿದ್ಧ ಕಾವ್ಯಃ ಮಹದೇವ ಬಣಕಾರ, ಪುಟ ೨೩೯, ತರಳಬಾಳು ಪ್ರಕಾಶನ, ಸಿರಿಗೆರೆ, ಪ್ರ. ೧೯೮೯.

೫೮. ಹಾಲುಮತ ಪುರಾಣವುಃ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಪುಟ ೯೮, ವಿದ್ಯಾನಿಧಿ ಪ್ರಕಾಶನ ಗದಗ ಪ್ರ. ೧೯೯೯.

೫೯. ಹಾಲುಮತ ವ್ಯಾಸಂಗಃ ಸಂ-೨, (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೧೭-೧೮, ಲೇಃ ಕಾಡು ಕುರುಬರು, ಕೇಶವನ್ ಪ್ರಸಾದ್ ಕೆ. ಮರಟ್ಟಿಯವರ ಲೇಖನವನ್ನು ಬಳಸಿಕೊಳ್ಳಲಾಗಿದೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ. ೨೦೧೦.

೬೦. ಭಾರತ ದೇಶದ ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, (ಸಂ) ಪ್ರೊ. ಸುಧಾಕರ, ಪುಟ ೬೩, ಪ್ರತಿಭಾ ಪ್ರಕಾಶನ, ಮೈಸೂರು, ೧೭೯೬.

ಅಧ್ಯಾಯ ೪

ಕುರುಬರ ಒಳಪಂಗಡಗಳು ಮತ್ತು ಬೆಡಗುಗಳು

ಅ. 'ಬೆಡಗು' ಪದನಿಷ್ಪತ್ತಿ-ಲಕ್ಷಣ

ಆ. ಬೆಡಗುಗಳ ಐತಿಹ್ಯ

ಅಧ್ಯಾಯ ೪

ಕುರುಬರ ಒಳಪಂಗಡಗಳು ಮತ್ತು ಬೆಡಗುಗಳು

ಭಾರತದಲ್ಲಿ ಹಿಂದೂ ಧರ್ಮದ ಆಧಾರದ ಮೇಲೆ ರೂಪಿಸಿಕೊಂಡಿರುವ ಎಲ್ಲಾ ಸಮುದಾಯಗಳ ಸಾಮಾಜಿಕ ವ್ಯವಸ್ಥೆಗಳಲ್ಲಿ ಬೆಡಗುಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಪರಸ್ಪರ ಕೊಡು ಕೊಳೆ ಇಲ್ಲದೆ, ವೈವಾಹಿಕ ಸಂಬಂಧಗಳನ್ನು ನಿಷೇಧಿಸಿರುವ ಗುಂಪೊಂದನ್ನು 'ಕುಲ' ಎಂದು ಗುರುತಿಸಲಾಗುತ್ತದೆ. ಈ ದೃಷ್ಟಿಯಿಂದ ಕುಲ ಎಂದು ಹೇಳುವುದು ಸರಿ ಬರದಿದ್ದಾಗ ಗೋತ್ರಗಳು ಸೃಷ್ಟಿಯಾದವು. ಗೋ (ಆಕಳು)+ತ್ರಯ (ಬೇಲಿ) ಗೋತ್ರ (ದನಗಳದಡ್ಡಿ) ಎಂದರೆ ಮಾನವನು ಪಶುಪಾಲನೆಯ ಅವಸ್ಥೆಗೆ ಬಂದಾಗ ಅವರ ಒಂದೊಂದು ಗುಂಪನ್ನು ಗುರುತಿಸಲು ಒಂದು ಹೆಸರಿನ ಅವಶ್ಯಕತೆಯುಂಟಾಗಿ ಆ ಗುಂಪಿನ ಯಜಮಾನನ ಹೆಸರು ಸಂಕೇತವಾಗಿ ಬಳಕೆಯಾಯಿತು. ಇದು ಮುಂದೆ ಗೋತ್ರವೆನಿಸಿಕೊಂಡಿತು. ರಕ್ತ ಸಂಬಂಧಿಗಳ ಗುಂಪು ಗೋತ್ರವಾಯಿತು.

ವೈದಿಕ ಸಂಸ್ಕೃತಿಯ ಗೋತ್ರಗಳಿಗೆ ಸಮನಾಗಿ ವೈದಿಕೇತರ ಸಮುದಾಯಗಳವರು ಬೆಡಗುಗಳನ್ನು ರೂಪಿಸಿಕೊಂಡರು. ವೈದಿಕ ಸಂಸ್ಕೃತಿಯ ಗೋತ್ರಗಳು ಋಷಿ ಮೂಲದಿಂದ ಗುರುತಿಸಿಕೊಂಡರೆ, ವೈದಿಕೇತರ ಸಂಸ್ಕೃತಿಯವರು ಕುಲದೇವರ ಸ್ವರೂಪವನ್ನು ಗುರುತಿಸಿಕೊಳ್ಳಲು ಸೃಷ್ಟಿಮಾಡಿಕೊಳ್ಳುತ್ತಾರೆ. ಗೋತ್ರವು ಜಾನುವಾರುಗಳಿಗೆ ಒಂದು ಪ್ರತ್ಯೇಕ ಕೋಣೆ (ಕೊಟ್ಟಿಗೆ) ಹೇಗೋ ಹಾಗೆ ಆಯಾ ಜಾತಿಯ ಕುಲ, ಗೋತ್ರ ವಂಶ ಅವರವರ ಗುರುತುಗಳ ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ. ಇದರಿಂದ ಅವರ ಉಪಕಸುಬು, ವಲಸೆ, ಮೂಲಪುರುಷ, ಪ್ರಾಚೀನತೆಯಂತಹ ಸಂಗತಿಗಳು ತಿಳಿದು ಬರುತ್ತವೆ. ವಲಸೆಯಂತಹ ಸಂದರ್ಭಗಳಲ್ಲಿ ಸೋದರತ್ವದ ಬಳ್ಳಿ ಗುರುತಿಸಿ ಸಂಬಂಧಗಳನ್ನು ಹೊಂದಲು ಸಹಕಾರಿಯಾಗುತ್ತವೆ. ಹೀಗಾಗಿ 'ಗೋತ್ರ' ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ವಂಶಪರಂಪರೆ, ಜಾತಿಸಂತತಿ, ಮನೆತನ ಮುಂತಾದ ಪರ್ಯಾಯ ಹೆಸರುಗಳೂ ಪ್ರಾಪ್ತವಾಗಿವೆ.

ಕುಲ ಎಂಬುದು ವಂಶಾನುಕ್ರಮ ಬಂಧುಗಳ, ಸಂಬಂಧಗಳ, ಆಧಾರದ ಮೇಲೆ ರಚಿತವಾಗಿರುತ್ತವೆ. ಸಮುದಾಯದ ಸದಸ್ಯರೆಲ್ಲರೂ ಪೂರ್ವಜರ ವಂಶಾವಳಿಯ ಜೊತೆಗೆ ಸಂಬಂಧವಿದೆ ಎಂದು ನಂಬುತ್ತಾರೆ.

ಇಲ್ಲಿ ಕುಲವನ್ನು ಪ್ರಾಣಿ, ಪಕ್ಷಿ, ಮರ, ಬಳ್ಳಿ ಕೆಲವೊಂದು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದರ್ಭಕ್ಕೆ ತಕ್ಕ ಹಾಗೆ ರೂಪುಗೊಂಡಿರುತ್ತವೆ. ಸಾಮಾನ್ಯವಾಗಿ ಕುಲ ಎಂದರೆ ಒಂದು ನಿರ್ದಿಷ್ಟ ಪೂರ್ವಜರಿಂದ ಉದ್ಭವಿಸಿದ ಸಂಬಂಧಿಕರ ಒಂದು ಸಮೂಹವೆಂದು ಹೇಳಬಹುದಾಗಿದೆ. ವಂಶಾವಳಿಯನ್ನು ಮೂಲ ದಂಪತಿಗಳಿಂದ ಗುರುತಿಸಲಾಗುವುದು. ಒಮ್ಮೊಮ್ಮೆ ಕುಟುಂಬ ದೊಡ್ಡದಾಗಿದ್ದರೆ (ಅವಿಭಕ್ತ) ಅವರು ಮುಂದೆ ಬೇರೆ ಬೇರೆಯಾದರೂ ತಮ್ಮ ಪೂರ್ವಜರೊಬ್ಬರಿಂದ ಸೃಷ್ಟಿಯಾಗಿದ್ದೇವೆಂಬ ಬಲವಾದ ನಂಬಿಕೆಯು ಅವರಲ್ಲಿ ಬೇರೂರಿರುತ್ತದೆ.

ಅ. 'ಬೆಡಗು' ಪದನಿಷ್ಪತ್ತಿ-ಲಕ್ಷಣ

ಕುಲಗೋತ್ರದ ಸ್ವರೂಪವನ್ನು ತಿಳಿದುಕೊಳ್ಳಲು ಬೆಡಗುಗಳು ಅಸ್ತಿತ್ವವನ್ನು ಪಡೆದುಕೊಂಡಂತೆ ಕಾಣುತ್ತವೆ. ಸಮುದಾಯ ವಿಕಾಸದ ಎಷ್ಟೋ ವರ್ಷಗಳ ನಂತರ ಒಂದೇ ರಕ್ತ ಸಂಬಂಧಿಗಳಲ್ಲಿ ಹಲವಾರು ತಲೆಮಾರುಗಳ ಕಾಲ ವಿವಾಹ ಸಂಬಂಧಗಳು ಏರ್ಪಟ್ಟು ಜನಾಂಗದ ದೈಹಿಕ ಮತ್ತು ಮಾನಸಿಕ ಕ್ಷೀಣತೆ, ತೊಂದರೆಗಳಿಗೆ ಕಾರಣವಾದ ಮೇಲೆ ಭವಿಷ್ಯದ ದೃಷ್ಟಿಯಿಂದ ಇದು ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬಂದಿರಬೇಕು. ಸಪಿಂಡ, ಸೋದರ ಸಂಬಂಧಿ ವಿವಾಹ ಪ್ರಕ್ರಿಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಬೆಡಗುಗಳನ್ನು ವಿಂಗಡಿಸುವ ಪರಿಪಾಠಕ್ಕೆ ನಾಂದಿಯಾಗಿರುವಂತೆ ಕಂಡುಬರುತ್ತದೆ.

ಬೆಡಗು ಎನ್ನುವುದಕ್ಕೆ ಸಾಮಾನ್ಯಾರ್ಥದಲ್ಲಿ 'ಕುಲಗಳ ಸಂಬಂಧದ ಮಹತ್ವ ತಿಳಿಸುವುದು' ಎಂದು ಹೇಳಬಹುದು. ಈ ಪರಿಕಲ್ಪನೆಯು ಉತ್ತರ ಅಮೇರಿಕಾದ 'ಓಜಿಬ್ವಾ'ದಿಂದ ನಿಷ್ಪತ್ತಿಯಾದ "ototeman" ದಿಂದ ಹುಟ್ಟಿಕೊಂಡ ಶಬ್ದ. ಇದರರ್ಥವೂ 'ಸೋದರ ಸಂಬಂಧಿ' ಎಂದೇ ಹೇಳಲಾಗುತ್ತದೆ. ಆಂಗ್ಲ ಭಾಷೆಯ 'totem' ಎಂಬ ಶಬ್ದದ ಕನ್ನಡ ರೂಪಾಂತರವೇ 'ಬೆಡಗು' ಎಂಬ ಶಬ್ದವು 'ಕುಲಚಿಹ್ನೆ' 'ಕುಲಸಂಕೇತ' ಎಂಬರ್ಥ ನೀಡುವ ಈ ಪದವು ೧೭೯೧ರಿಂದ ಬೆಳಕಿಗೆ ಬಂದಿದೆ.

'ಬೆಡಗು ಶಬ್ದದ ಮೂಲವೂ ಪುರಾತನವಾದುದೇ ಆಗಿದೆ. ಇದೊಂದು ಶುದ್ಧ ದ್ರಾವಿಡ ಶಬ್ದ ವೇಡನ್>ವೇಡಂಕು>ವೆಡಂಗು>ಬೆಡಂಗು>ಬೆಡಗು ಎಂದಾಗಿದೆ. ಬ್ರಾಹ್ಮಣದ ಬ್ರಾಹ್ಮಣತನಕ್ಕೆ ಬ್ರಾಹ್ಮಣ್ಯವೆಂದಂತೆ, ಬೇಡನ ಬೇಡತನದಿಂದ ಬೆಡಗು ಬಂದಿದೆ"[೧] ಎಂದು ಡಾ. ಮಂಜುನಾಥ ಬೇವಿನಕಟ್ಟಿಯವರು ಅಭಿಪ್ರಾಯಿಸುತ್ತಾರೆ.

ಬೆಡಗು ಎನ್ನುವುದನ್ನು ಸಾಮಾನ್ಯವಾಗಿ ವ್ಯಾಖ್ಯಾನಿಸುವುದಾದರೆ ಒಂದು ಸಮುದಾಯದಲ್ಲಿ ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಪರಸ್ಪರರ ಸಂಬಂಧವನ್ನು ಗುರುತಿಸುವುದಕ್ಕೆ ವಿಂಗಡಿಸಿರುವ ಗುಂಪು ಎಂದು ಹೇಳಬಹುದಾಗಿದೆ.

'ಬೆಡಗು ಎಂದರೆ ಕುಲಚಿಹ್ನೆ ಅಥವಾ ಕುಲಲಾಂಛನ. ಇದು ನಿರ್ದಿಷ್ಟ ರಕ್ತ ಸಂಬಂಧಿ ಪಂಗಡದ ಸದಸ್ಯರು ವಿಶೇಷ ಆಧ್ಯಾತ್ಮ ಸಂಬಂಧ ಹೊಂದಿರುವ ವಸ್ತು ಅಥವಾ ಚಿಹ್ನೆಯಾಗಿರುತ್ತದೆ. ಆ ವಸ್ತು

ಅಥವಾ ವಸ್ತುವಿನ ಹೆಸರಿನ ಮೂಲಕ ಒಂದು ಪಂಗಡ ಗುರುತಿಸಲ್ಪಡುವುದು, ಒಂದೇ ಕುಲ ಚಿಹ್ನೆಯಿರುವುದರಿಂದಾಗಿ ಗುರುತಿಸಲ್ಪಡುವ ಬಂಧುತ್ವ"[೩]ವಾಗಿರುತ್ತದೆ ಎಂದು ಡಾ. ಚಂದ್ರಶೇಖರ ದಾಮ್ಲೆಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಸ್.ಬಸವಾರಾಧ್ಯರು ಕನ್ನಡ ನಿಘಂಟುವಿನಲ್ಲಿ "ಜಾತಿಯೊಳಗಿರುವ ಒಂದು ಉಪವಿಭಾಗ, ಪಂಗಡ, ವರ್ಗ, ಬಣ, ಕುಲ, ತಳಿ, ಬಳಿ ಈ ರೀತಿಯ ಗುಂಪುಗಳಿಗೆ ಬೆಡಗುಗಳೆಂದು ಹೆಸರು. ಬೆಡಗುಗಳೆಂದರೆ ಮನೆತನಗಳು ಇಲ್ಲವೆ ಗೋತ್ರಗಳು ಇರುತ್ತವೆ"[೪] ಎಂದು ಬೆಡುಗಳನ್ನು ಕುರಿತು ಅರ್ಥೈಸುತ್ತಾರೆ.

ಜೇಮ್ಸ್ ಜಿ. ಫ್ರೇಜರ್ ಎಂಬ ಮಾನವಶಾಸ್ತ್ರಜ್ಞನು ಬೆಡಗುಗಳನ್ನು ಕುರಿತು "The classical definition was made by james frazer that 'Totemism is an intimate relation which is supported to exist between a group of kindered people on the one side and a species of natural or artificial objects on the otherside, which objects are called the totems of the group"[೫] ಎನ್ನುವ ವ್ಯಾಖ್ಯಾನವನ್ನು ನೀಡಿದ್ದಾರೆ.

ಇವರೇ ಮುಂದುವರಿದು "ಸ್ಪಷ್ಟವಾದ ಕುಲಚಿಹ್ನೆ ಬಗೆಗಿನ ಶ್ರದ್ಧೆ ಗೌರವಗಳು ಸ್ವತಂತ್ರ ಧರ್ಮನೀತಿಗಳಲ್ಲ, ಏಕೆಂದರೆ ದೇವರಂತೆ ನಂಬಿ ಯಾರೂ ಇವನ್ನು ಪೂಜಿಸುವುದಿಲ್ಲ. ಅದೇ ಬೆಡಗು, ಎಂದಿದ್ದಾರೆ.

ಮನೋವಿಜ್ಞಾನದ ಪಿತಾಮಹನೆನಿಸಿದ 'ಸಿಗ್ಮಂಡ್ ಪ್ರಾಯ್ಡ್' ಪ್ರಕಾರ "ಬೆಡಗುಗಳೆಂದರೆ ಒಂದು ಪ್ರಾಣಿಯ ಸಂಕೇತ ಎಂದಷ್ಟೇ ಅರ್ಥ. ಆ ಪ್ರಾಣಿ ತಿನ್ನಲು ಬರುವಂಥದ್ದೋ ಅಥವಾ ನಿರುಪದ್ರವಿಯೋ ಆಗಿರಬಹುದು. ಹಾಗೆಯೇ ಆ ಚಿಹ್ನೆಯು ಗಿಡ, ಮರ ಅಥವಾ ಮಳೆಯೂ ಆಗಿರಬಹುದು."[೬] ಎನ್ನುತ್ತಾನೆ.

ಕುಲಚಿಹ್ನೆ ಅಥವಾ ಸಂಕೇತಗಳನ್ನು ಹಿಂದಿನ ಜನರು ಪ್ರಾಣಿ, ಸಸ್ಯ ಮತ್ತು ವಸ್ತುಗಳು ತಮ್ಮೊಡನೆ ಸಂಬಂಧ ಹೊಂದಿವೆ ಎಂದು ಬಲವಾಗಿ ನಂಬಿದ್ದರು. ಆ ನಂಬಿಕೆಯನ್ನು ವ್ಯಕ್ತಪಡಿಸಲು ಆಯಾ ಗುರುತುಗಳನ್ನು ಬಳಸುತ್ತಿದ್ದರು. ಆಯಾ ಗುರುತುಗಳು ಒಂದೊಂದು ಕುಲಕ್ಕೆ ಪ್ರತ್ಯೇಕವಾಗಿ ಸಂಬಂಧಿಸಿದ್ದು ಅವುಗಳಿಗೆ ಗೌರವವನ್ನು ನೀಡುವುದು ಸಾಮಾನ್ಯವಾಗಿತ್ತು. ಒಂದು ಸಮುದಾಯಕ್ಕೆ ಗೌರವ ಪ್ರತಿಷ್ಠೆಯ ಸಂಕೇತಗಳಾಗಿ ಕುಲಚಿಹ್ನೆಗಳಿದ್ದು ಅದು ಆ ಕುಲದ ಎಲ್ಲಾ ಸಾರ್ವಜನಿಕ ರಕ್ಷಕ ಭವಿಷ್ಯ ಸೂಚಕ ಶಕ್ತಿಯೂ ಹೌದು. ಕುಲ ಚಿಹ್ನೆಯಾಗಿಸಿಕೊಂಡಿರುವುದು ಪ್ರಾಣಿಯಾಗಿದ್ದರೆ ಆ ಸಮುದಾಯದವರು ಆ ಪ್ರಾಣಿಯನ್ನು ಕೊಲ್ಲಬಾರದು ಮತ್ತು ಅದನ್ನು ಆಹಾರವನ್ನಾಗಿ ಬಳಸಬಾರದೆಂಬ ನಿಷೇಧವನ್ನೂ ಹೇರಲಾಗಿರುತ್ತಿತ್ತು.

ಬೆಡಗುಗಳು ಮತ್ತು ಗೋತ್ರಗಳ ಅಧ್ಯಯನ ತೊಡಕಿನದು ಮತ್ತು ಸಂಕೀರ್ಣವಾದುದು. ನಾಗರಿಕ ಮತ್ತು ಸಂಸ್ಕೃತಿಯ ವಿಕಾಸದ ಚಾರಿತ್ರಿಕ ಹೆಜ್ಜೆ ಗುರುತುಗಳೇ ಬೆಡಗುಗಳು. ಇವು ಅನಾದಿ ಅಲಿಖಿತ ಮತ್ತು ಬ್ರಾಹ್ಮಣೇತರವು. ಬೆಡಗುಗಳು ಬಹುಪಾಲು ಸಮುದಾಯಗಳ ಕುಲಚಿಹ್ನೆಗಳಾಗಿರುತ್ತವೆ. ಇವುಗಳ ಸಂಖ್ಯೆ ಬೆಳೆಯುತ್ತಿದ್ದು ಎಣಿಕೆಗೆ ನಿಲುಕದಂತಿವೆ. ಇವುಗಳನ್ನು ಕ್ಷೇತ್ರಕಾರ್ಯದಿಂದ ಅರಿಯುವುದು ಸಾಧ್ಯ. ಬೆಡಗುಗಳು ಬ್ರಾಹ್ಮಣೇತರ ಸಮುದಾಯಗಳ ಧಾರ್ಮಿಕ, ಸಾಮಾಜಿಕ ಮತ್ತು ಲೈಂಗಿಕ ಜೀವನದ ಮೇಲೆ ಅಧಿಕೃತವಾಗಿ ಅಧಿಕಾರವನ್ನು ಚಲಾಯಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇವು ಮುಕ್ತ ಲೈಂಗಿಕ ಸ್ವೇಚ್ಛಾಚಾರಕ್ಕಂತೂ ಲಗಾಮುಗಳಿದ್ದಂತೆ. ಇವುಗಳ ವಿಧಿ ನಿಷೇಧಗಳನ್ನು ಮೀರಿದವರಿಗೆ ಶಿಕ್ಷೆಯಾಗುತ್ತದೆ ಮತ್ತು ಪಾಪ ಕಾರ್ಯ ಮಾಡಿದಂತೆ ಎಂದು ನಂಬಲಾಗುತ್ತದೆ.

ಸ್ವಬೆಡಗಿನಿಂದ ಎಷ್ಟೋ ಬುಡಕಟ್ಟುಗಳು ಮತ್ತು ಸಮುದಾಯಗಳು ನಾಶವಾಗಿವೆ. ಆಧುನಿಕ ಕಾಲದಲ್ಲಿ ಸಮಾಜಗಳ ಮೇಲೆ ಇವುಗಳ ಹಿಡಿತ ಸಡಿಲವಾಗುತ್ತದೆ ಎಂದು ಭಾವಿಸುವವರು ಭ್ರಮನಿರಸನಕ್ಕೆ ಒಳಗಾಗಿದ್ದಾರೆ. ಸ್ವಬೆಡಗು ಮತ್ತು ಸ್ವಗೋತ್ರ ವಿವಾಹ ನಿಷೇಧಕ್ಕೆ ವೈಜ್ಞಾನಿಕ ರಕ್ತ ಪರೀಕ್ಷೆಯ ಬೆಂಬಲವೂ ದೊರೆತಿದೆ. ಎಸ್. ಎಸ್. ಮೆಹ್ತಾರವರ ಪ್ರಕಾರ "Women are prohibited from marrying if they belong to the same gotra or if they are sapinda or common ancestor or descended from the great important rule lay in the fact, if marriages would be cemented among such, the issue would be quite effected and they would be consititute good citizens, even western science has proved in our days of progressive civilisation"[2] ಎಂದು ಹೇಳಿದ್ದಾರೆ. ಇದು ಬ್ರಾಹ್ಮಣರಲ್ಲಿ ಮಾತ್ರವಲ್ಲದೆ ಬ್ರಾಹ್ಮಣೇತರ ಬುಡಕಟ್ಟು, ಜನಾಂಗಗಳಲ್ಲಿಯೂ ರೂಢಿಯಲ್ಲಿದೆ. ಸ್ವಬೆಡಗುಗಳ ವಿವಾಹ ನಿಷಿದ್ಧವಾಗಿದೆ. ಅವು ತಾಯಿ ಮೂಲದ ಬೆಡಗು ಅಥವಾ ತಂದೆ ಮೂಲದ ಬೆಡಗುಗಳಾಗಿರಬಹುದು.

ಬೆಡಗುಗಳನ್ನು ತಾಯಿ ಮೂಲ ಅಥವಾ ತಂದೆ ಮೂಲದಿಂದ ಗುರುತಿಸಿದರೂ, ತಾಯಿಯ ಮೂಲವೇ ಬೆಡಗುಗಳ ಅಸಲಿ ಮೂಲ ಎನ್ನಿಸುತ್ತವೆ. ಬೆಡಗುಗಳು ಮಾತೃ ಸಂಸ್ಕೃತಿ ಪ್ರಧಾನವಾದವು. ಬ್ರಾಹ್ಮಣೇತರರು ಬ್ರಾಹ್ಮಣೀಕರಣ ಮತ್ತು ಶೂದ್ರೀಕರಣಕ್ಕೆ ಒಳಗಾದಂತೆ ಮಾತೃ ಸಂಸ್ಕೃತಿಯ ಜನಾಂಗಗಳು ಪಿತೃ ಸಂಸ್ಕೃತಿಯನ್ನು ಅನುಕರಣೆ ಮಾಡಿದವು. ಇದರಿಂದ ಬೆಡಗುಗಳು ವಿಸ್ಮೃತಿಗೆ ಒಳಗಾಗಿ ಬ್ರಾಹ್ಮಣೇತರರಲ್ಲೂ ಗೋತ್ರಗಳು ರೂಢಿಗೆ ಬಂದವು.

ಬೆಡಗುಗಳ ಕುಲಚಿಹ್ನೆಗಳು ಪಿತೃಗಳು ಸಾಕ್ಷಾತ್ ದೈವಸ್ವರೂಪಿಗಳು. ಕುಲಚಿಹ್ನೆಗಳು ರಕ್ತ ಸಂಬಂಧಿ ಗುಂಪುಗಳು ಸದಾ ಸಂಘಟಿತರಾಗಿರುವಂತೆ, ಕುಲ ಚಿಹ್ನೆಗಳು ಮಾನವ ಜನಾಂಗದಷ್ಟು ಪ್ರಾಚೀನವಾದವು. ಬೆಡಗಿನ ಸಂಸ್ಕೃತಿ ಗೋತ್ರ ಸಂಸ್ಕೃತಿಗಿಂತ ತೀರಾ ಭಿನ್ನವಾದುದು. ಇದರಿಂದಾಗಿ ಬೆಡಗುಗಳು ಅವರ

ವೃತ್ತಿ ಪರಿಸರದ ಪಾತ್ರವನ್ನು ಮಾತ್ರವಲ್ಲದೆ ಅವರ ಪ್ರಾಚೀನತೆಯನ್ನು ಪರಿಚಯಿಸುವ ಆಕರಗಳಾಗಿವೆ. ಮರವನ್ನು ಕುಲಚಿಹ್ನೆಯಾಗಿಸಿಕೊಂಡಿದ್ದರೆ ಮರವನ್ನು ಕಡಿಯುವಂತಿರಲಿಲ್ಲ ಮತ್ತು ಅದನ್ನು ಉರುವಲುಗಳಾಗಿ ಬಳಸುವಂತಿರಲಿಲ್ಲ. ಬೆಡಗು ವಂಶಪಾರಂಪರ್ಯವಾಗಿ ಬಂದಿದ್ದು ಈ ಕುಲಚಿಹ್ನೆಯನ್ನು ಆರಾಧಿಸುವ ಸಮುದಾಯವೆಲ್ಲ ಒಂದೇ ಕಡೆ ವಾಸಿಸಬೇಕೆಂದೇನೂ ಇಲ್ಲ. ಎಲ್ಲೇ ಚದುರಿ ಹೋಗಿದ್ದರೂ ಕೂಡ ಚಿಹ್ನೆಗಳನ್ನು ಗೌರವಿಸುವುದನ್ನು ಉಳಿಸಿಕೊಂಡಿರಬೇಕಾಗುತ್ತದೆ. ಇದು ಕಟ್ಟು ನಿಟ್ಟಾಗಿ ಅನುಸರಿಸಬೇಕಾದ ಸಂಗತಿಯಾಗಿರುತ್ತದೆ.

ಕುಲದೇವತಾರಾಧನೆ ಮತ್ತು ಕುಲಚಿಹ್ನೆ ಎರಡೂ ಬೇರೆ ಬೇರೆಯಾಗಿದ್ದು ಕುಲಚಿಹ್ನೆಯು ಒಂದು ಪ್ರಾಣಿ, ಸಸ್ಯ ಅಥವಾ ಆ ಸಮುದಾಯವು ನಂಬಿಗೆಯನ್ನಿರಿಸಿಕೊಂಡಿರುವ ವಸ್ತುವಾಗಿರುತ್ತದೆ. ಇದೊಂದು ಬಾಂಧವ್ಯ ಆಧಾರಿತ ಪದ್ಧತಿಯಾಗಿರುವುದು. ಇವು ಸಾಂಪ್ರದಾಯಿಕವಾದ ನಿರ್ದಿಷ್ಟ ದೇವತಾ ಪೂಜಾ ಅಥವಾ ಆರಾಧನೆಯಾಗಿರುವುದಿಲ್ಲ. ಉದಾ: ಚಾಮುಂಡೇಶ್ವರಿ, ಕರಿಯಮ್ಮ, ಉಡುಸಲಮ್ಮ, ಇನ್ನಾವುದೇ ದೇವರು ಒಂದು ಕುಲದೇವತೆ ಅಥವಾ ಗ್ರಾಮದೇವತೆಯಾಗಿದ್ದರೆ ಒಂದು ಜಾತಿಯ ಗಿಡ, ಮರ, ವಸ್ತು ಇತ್ಯಾದಿ ಒಂದು ಕುಲ ಚಿಹ್ನೆಯಾಗಿರುತ್ತವೆ.

ಕುಲಚಿಹ್ನೆಯ ಆರಾಧನೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಇಂದಿಗೂ ಅಸ್ತಿತ್ವದಲ್ಲಿದ್ದು ಆರ್ಯರಲ್ಲಿಯೂ ಈ ಪದ್ಧತಿ ಇದ್ದಿತು. ವಿಶ್ವದ ಹಲವೆಡೆಗಳಲ್ಲಿ ಕುಲಚಿಹ್ನೆಗಳನ್ನು ಹೊಂದಿರುವ ಸಮುದಾಯಗಳನ್ನು ಇಂದಿಗೂ ಗುರುತಿಸಬಹುದು. ಕೆಲವೊಂದು ಬೆಡಗುಗಳನ್ನು ಸೋದರ ಬೆಡಗುಗಳು, ಅಣ್ಣದಾಯಾದಿಗಳು ಎಂದು ಕರೆದು ಪರಸ್ಪರ ವಿವಾಹ ಸಂಬಂಧವನ್ನು ನಿಷೇಧಿಸಿದರು. ಒಂದೇ ರೀತಿಯ ಕುಲಚಿಹ್ನೆ ಹೊಂದಿರುವ ಜನರ ನಡುವೆ ಪರಸ್ಪರ ಲೈಂಗಿಕ ಸಂಬಂಧವನ್ನಾಗಲಿ ಅಥವಾ ವಿವಾಹವಾಗಲಿ ಆಗುವಂತಿರಲಿಲ್ಲ. ಒಳಸಂಬಂಧದ ಒಳಗಡೆ ವಿವಾಹ ನಿಷಿದ್ಧ ಎಂದು ತಿಳಿಸುವುದು ಕಾನೂನಿನಂತೆ ನಿರ್ಬಂಧವಾಗಿದೆ. ಅವುಗಳನ್ನು ಹೊರತುಪಡಿಸಿ ಉಳಿದೆಲ್ಲ ಬೆಡಗುಗಳ ನಡುವೆ ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಸಂಪ್ರದಾಯಕ್ಕೆ ಅನುವು ಮಾಡಿಕೊಟ್ಟರು. ಜನಾಂಗದ ಸ್ವಾಸ್ಥ್ಯ, ನೆಮ್ಮದಿ, ಏಳಿಗೆ ಮತ್ತು ಶಿಸ್ತಿನ ಕಾರಣದಿಂದಲೂ ಬೆಡಗುಗಳನ್ನು ವರ್ಗೀಕರಿಸಿರುವ ಸಾಧ್ಯತೆ ಕಂಡುಬರುತ್ತದೆ.

ಒಂದು ಸಮುದಾಯದಲ್ಲಿರುವ ವಿಶಿಷ್ಟ ಉಪಘಟಕಗಳಿಗೆ ಬೆಡಗುಗಳು ಎಂದು ಹೇಳಬಹುದು. ಈ ಬೆಡಗುಗಳ ಹುಟ್ಟಿಗೆ ನಿರ್ದಿಷ್ಟ ಕಾರಣ ಹೇಳಲು ಸಾಧ್ಯವಿಲ್ಲ, ಒಂದೇ ಜನಾಂಗಕ್ಕೆ ಸೇರಿದ ಜನಸಮುದಾಯವು ಸಾಂಸ್ಕೃತಿಕ, ಭೌಗೋಳಿಕ ಪರಿಸ್ಥಿತಿಯಿಂದಾಗಿ ಬೇರೆ ಬೇರೆ ಕಡೆ ವಾಸಿಸಲು ಪ್ರಾರಂಭಿಸಿದಾಗ ಅಂತಹ ಒಂದೊಂದು ಗುಂಪು ಒಂದೊಂದು ಬೆಡಗು ಆಗಿರಬೇಕು. ಪ್ರತಿ ಬೆಡಗಿಗೂ ಹಬ್ಬ ಹರಿದಿನಗಳಲ್ಲಿ ತನ್ನದೇ ಆದ ವಿಶಿಷ್ಟ ಆಚರಣೆಗಳಿರುತ್ತವೆ. ಆಯಾ ಕುಲದವರು ಆಯಾ ಕುಲಚಿಹ್ನೆಯನ್ನು ಶುಭ ಕಾರ್ಯಗಳ ಸಂದರ್ಭದಲ್ಲಿ ಪೂಜಿಸುವ ಸಂಪ್ರದಾಯವನ್ನು ಹೊಂದಿರುತ್ತಾರೆ.

ಕುಲಚಿಹ್ನೆಗಳು ಧರ್ಮದ ಅವಲಂಬನೆಯಾಗಿಯೂ ಬೆಳೆದು ಬಂದಿರುವುದು ಗೋಚರಿಸುತ್ತದೆ.

ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಬೆಡಗುಗಳ ವಿಂಗಡಣೆ ಎರಡು ರೀತಿಯಲ್ಲಿ ಆಗಿರುವುದು ಗೋಚರಿಸುತ್ತದೆ. ಋಷಿ ಮುನಿಗಳ ಹೆಸರಿನಲ್ಲಿ ಆರ್ಯ ಮೂಲದವರು ಬೆಡಗುಗಳನ್ನು ವಿಂಗಡಿಸಿದರೆ, ಶ್ರಮ ಸಂಸ್ಕೃತಿಯ ಶೂದ್ರ ವರ್ಗದವರು ಗಿಡ, ಮರ, ಪ್ರಾಣಿಪಕ್ಷಿ ಮತ್ತು ಇನ್ನಿತರ ಬದುಕಿಗೆ ಹತ್ತಿರವಾದ ನಿಸರ್ಗಕ್ಕೆ ಪೂರಕವಾದ ಹೆಸರಿನಲ್ಲಿ ಬೆಡಗುಗಳನ್ನು ವಿಂಗಡಿಸಿದ್ದಾರೆ. ಸಾಮಾನ್ಯವಾಗಿ ದ್ರಾವಿಡ ಬುಡಕಟ್ಟಿನಿಂದ ವಿಕಾಸಗೊಂಡ ಜನಾಂಗಗಳು ನಿಸರ್ಗದ ಹೆಸರುಗಳಲ್ಲಿ ವರ್ಗೀಕರಣ ಮಾಡಿದ್ದಾರೆ. ಎಲ್ಲರೂ ಒಪ್ಪುವಂತಹ ಸರ್ವ ಸಮ್ಮತ ಬೆಡಗುಗಳು ಇಲ್ಲದಿದ್ದರೂ ಊಹಿಸಲಾದ ಮತ್ತು ಅಸ್ತಿತ್ವದಲ್ಲಿರುವ ಬೆಡಗುಗಳಿಂದು ಮತ್ತೊಂದು ವಿಂಗಡಣೆಗೂ ಅವಕಾಶ ಮಾಡಿಕೊಡುತ್ತದೆ.

ಬೆಡಗುಗಳ ಲಕ್ಷಣಗಳು

೧. ಗಿಡಮರ, ಪಶುಪಕ್ಷಿ, ದವಸಧಾನ್ಯಗಳ ಹೆಸರುಗಳಿರುತ್ತವೆ.

೨. ಎರಡು, ಮೂರು ನಾಲ್ಕು ಬೆಡಗುಗಳು ಸೇರಿ ಅಣ್ಣ ತಮ್ಮಂದಿರು ಬಡ್ಡೇರು, ಮನೆತನ ಎಂದು ವಿಭಾಗಿಸಬಹುದು.

೩. ಸ್ವಗೋತ್ರ ಮತ್ತು ಸೋದರ ಸಂಬಂಧಿ ಗೋತ್ರಗಳು ಅಣ್ಣ ತಮ್ಮಂದಿರು ಎಂಧು ಪರಿಗಣಿಸಿ ಅವರಲ್ಲಿ ಪರಸ್ಪರ ವಿವಾಹ ಸಂಬಂಧವನ್ನು ನಿಷೇಧಿಸಲಾಗಿರುತ್ತದೆ.

೪. ಕೆಲವು ಸೋದರ ಗೋತ್ರಗಳವರಿಗೆ ಮತ್ತೆ ಒಂದು ಅಥವಾ ಎರಡು ಗೋತ್ರಗಳನ್ನು ಅಡ್ಡ ದಾಯಾದಿ ಎಂದು ಪರಿಗಣಿಸಿ ವಿವಾಹ ನಿಷೇಧಿಸಿದೆ. ಆದರೆ ಈ ನಿಷೇಧವು ಕಡ್ಡಾಯವಾಗಿರದೆ ಕೆಲವೊಮ್ಮೆ ವಿವಾಹಕ್ಕೆ ಅನುಮತಿ ನೀಡಲಾಗುತ್ತದೆ.

೫. ಪ್ರತಿಯೊಂದು ಬೆಡಗಿನವರಿಗೆ ಪ್ರತ್ಯೇಕ ಮನೆದೇವರುಗಳು ವಿಶೇಷವಾಗಿ ಹೆಣ್ಣುದೇವರುಗಳ ಮೂಲಕವೇ ಮದುವೆ ಸಂಬಂಧಗಳು ನಿರ್ಧಾರವಾಗುವುದು ಪ್ರಮುಖವಾಗಿದೆ. ಅವರೆಲ್ಲರೂ ಅಣ್ಣ ತಮ್ಮಂದಿರಂತೆ ದೇವರಂತೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

೬. ಪ್ರತಿಯೊಂದು ಬೆಡಗಿಗೂ ಕಟ್ಟೆಮನೆ; ಹರಿವಾಣದ ನೆಲೆಗಳಿರುತ್ತವೆ.

೭. ಸ್ವಗೋತ್ರ ಮತ್ತು ಸೋದರ ಬೆಡಗಿನವರು ಸಾವು ನೋವು ಸೂತಕಗಳಲ್ಲಿ ಒಂದೇ ಮನೆಯವರಂತೆ ನಡೆದುಕೊಳ್ಳುವರು.

೮. ವಿವಾಹ ಸಂದರ್ಭಗಳಲ್ಲಿ ತಂದೆಯ ಬೆಡಗಿನ ಜೊತೆಗೆ ತಾಯಿಯ ಬೆಡಗುಗಳನ್ನು ಗಮನಿಸಲಾಗುತ್ತದೆ. ಅಲ್ಲೇನಾದರೂ ಸಹಗೋತ್ರ, ಸೋದರಗೋತ್ರಗಳಿದ್ದರೆ ವಿವಾಹವು ನಿಂತು ಹೋಗುತ್ತದೆ.

೯. ಬೆಡಗುಗಳ ವರ್ಗೀಕರಣದ ಮುಖ್ಯ ಉದ್ದೇಶ ಸೋದರಿಕೆ ವಿವಾಹವನ್ನು ತಪ್ಪಿಸುವ ಮೂಲಕ ಆರೋಗ್ಯವಂತ ಸದೃಡ ಸಮುದಾಯದ ನಿರ್ಮಾಣವಾಗಿರುತ್ತದೆ.

೧೦. ಪ್ರತಿಯೊಂದು ಬೆಡಗಿಗೂ ಒಂದಕ್ಕಿಂತಲೂ ಹೆಚ್ಚು ಮನೆದೇವರುಗಳಿವೆ. ಜನಸಂಖ್ಯೆಯು ಜಾಸ್ತಿಯಾದಂತೆ, ಗೋತ್ರಗಳಲ್ಲಿ ವೈಮನಸ್ಸು ತಲೆದೋರಿದಂತೆ ಮನೆದೇವರು ಮತ್ತು ಕಟ್ಟೇಮನೆಗಳು ಜಾಸ್ತಿಯಾಗಿರುವುದು ಕಂಡು ಬರುತ್ತದೆ.

೧೧. ಸಮುದಾಯಗಳು ಮತ್ತು ಅವುಗಳೊಳಗಿನ ಬೆಡಗುಗಳಿಂದಾಗಿ ಗಂಡು ಹೆಣ್ಣಿನ ಆಯ್ಕೆಗೆ ಅವಕಾಶಗಳು ಕಡಿಮೆಯಿದ್ದರೂ ವ್ಯವಸ್ಥಿತವಾದ ಶಿಸ್ತಿನ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ.

೧೨. ಒಂದು ಕಾಲಕ್ಕೆ ಬೆಡಗುಗಳು ವಾಸಿಸುವ ಹಟ್ಟಿಯ ಹೆಸರುಗಳೂ ಆಗಿದ್ದವು.

ಈ ಮೇಲ್ಕಂಡ ವೈಲಕ್ಷಣಗಳ ಮೂಲಕ ಬೆಡಗುಗಳು ನಿರ್ವಹಿಸಬಹುದಾದ ಕಾರ್ಯ ಚಟುವಟಿಕೆಯು ನಮಗೆ ಮನವರಿಕೆಯಾಗದಿರದು.

ಕುರುಬ ಸಮುದಾಯದ ಬೆಡಗುಗಳನ್ನು ಅವಲೋಕಿಸಿದರೆ ಪ್ರಾಚೀನ ಕಾಲದಲ್ಲಿ ತಮ್ಮ ದನಕರು, ಕುರಿಗಳ ಸಂರಕ್ಷಣೆಗಾಗಿ ಹುಲ್ಲು ನೀರು ಇರುವ ಪ್ರದೇಶಗಳನ್ನು ಗುರುತಿಸಿ ಹಟ್ಟಿಗಳನ್ನು ಕಟ್ಟಿಕೊಂಡು ಅಲೆದಾಡುತ್ತಿದ್ದರು. ಬೆಟ್ಟಗುಡ್ಡಗಳಲ್ಲಿ ಬೀಡು ಬಿಟ್ಟುಕೊಂಡು ವಾಸಿಸುತ್ತಿರುವಾಗ ಗುಂಪಿನಿಂದ ಪ್ರತ್ಯೇಕತೆ ಉಂಟಾಗಲು ತಮ್ಮದೇ ಆದ ಸಂಕೇತಗಳನ್ನು ಇಟ್ಟುಕೊಳ್ಳಲಾರಂಭಿಸಿದರು. ಗಿಡ, ಮರ, ಪ್ರಾಣಿ, ಇತ್ಯಾದಿಗಳು ಪ್ರಾಚೀನಕಾಲದ ಹಟ್ಟಿಕಾರರ ಗುಂಪಿನ ಹೆಸರುಗಳು. ಇವೇ ಮುಂದೆ ಬೆಡಗುಗಳಾಗಿ ಮಾರ್ಪಾಡಾದವು. ಈ ಹಿನ್ನೆಲೆಯಲ್ಲಿ ಕಳ್ಳುಬಳ್ಳಿಯವರು ಒಂದೇ ಬೆಡಗಿನವರಾದರು. ವಿಭಿನ್ನ ಬೆಡಗುಗಳನ್ನು ಗುರುತಿಸಿ ಹೆಣ್ಣು ಕೊಟ್ಟು ತರುವುದು ಬಳಕೆಯಾಗಲು ಸಹಕಾರಿಯಾದವು ಬೆಡಗುಗಳು. ಕಂಕಣ ಒಂದೇ ಆಗಿದ್ದರೂ ಬೆಡಗು ಮಾತ್ರ ಬೇರೆಯಾಗಿರಲೇಬೇಕಾದ ನಿಯಮವಿದೆ.

ಕುರುಬರು ತಮ್ಮ ಒಳಪಂಗಡಗಳನ್ನು ಕುಲಗಳ ಆಧಾರದಲ್ಲಿ ಗುರುತಿಸಿಕೊಳ್ಳುವುದು ವಾಡಿಕೆ. ತಮ್ಮ ಮೂಲ ಸಂಸ್ಕೃತಿಯ ಗುರುತುಗಳನ್ನು ಗುಣಲಕ್ಷಣಗಳನ್ನು ಉಳಿಸಿಕೊಂಡಿರುವ ಕುರುಹುಗಳು ಇವರ ಬೆಡಗುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಬೆಡಗುಗಳ ಪದ್ಧತಿಯಿಂದಾಗಿ ಇವರ ಸೋದರತ್ವ, ವೃತ್ತಿ, ಕುಲದ ಪೂರ್ವಿಕರು, ವಂಶಸ್ಥರು ಹಾಗೂ ಪ್ರಾದೇಶಿಕತೆಗಳನ್ನು ಗುರುತಿಸಿಕೊಳ್ಳಲು ಸಹಕಾರಿಯಾಗಿವೆ. ಆ ಮೂಲಕವೆ ಮದುವೆ, ದೇವತಾ ಕಾರ್ಯ, ಕೌಟುಂಬಿಕ ಶುಭಕಾರ್ಯಗಳಲ್ಲಿ ಸ್ಥಾನಮಾನಗಳನ್ನು ನಿರ್ಧರಿಸಲಾಗುತ್ತದೆ. ಬೆಡಗುಗಳ ಪದ್ಧತಿಯು ಸಾಮಾನ್ಯವಾಗಿ ಪ್ರಾಕೃತಿಕ ಪರಿಸರದಲ್ಲಿ ಬೆಳೆದ ಜನರಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಅದರಂತೆ ಈಗಲೂ ಕುರುಬರಲ್ಲಿ ಬೆಡಗುಗಳು ಉಳಿದುಕೊಂಡಿವೆ. ಅವುಗಳಿಗೆ ಸಂಬಂಧಿಸಿದ ಸ್ಥಳೀಯ ಕಥೆ, ಐತಿಹ್ಯಗಳನ್ನೂ ಹೇಳುತ್ತಾರೆ.

ಬೆಡಗುಗಳು ಕುರುಬರಲ್ಲಿ ವಿವಾಹ ಸಂಬಂಧವನ್ನು ನಿರ್ಮಿಸಿಕೊಳ್ಳುವಲ್ಲಿ ಬಹು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಇವರಲ್ಲಿರುವ ಬೆಡಗುಗಳಲ್ಲಿ ಪಶು, ಪಕ್ಷಿ, ಆಯುಧ, ಲೋಹ, ಧಾತು, ಊರು-ಕೇರಿಗಳ ಹೆಸರುಗಳಿವೆ. ಅಣ್ಣೆ, ಅತ್ತಿ, ಅರಳಿ, ಸುಗ್ಗಿ, ನೆಲ್ಲಿ, ಹತ್ತಿ, ಬನ್ನಿ ಎಂಬ ಗಿಡ ಮರಸೂಚಿ ಬೆಡಗುಗಳೂ, ಎಮ್ಮೆ, ಚೇಳು, ನವಿಲು, ಗೀಜಗದಂತಹ ಪಶುಪಕ್ಷಿ ಸೂಚಿ ಬೆಡುಗುಗಳೂ, ಕುಂದಣ, ಸುವರ್ಣ, ಕೆಂಗಲ್ಲದಂತಹ ಲೋಹಸೂಚಿ ಬೆಡಗುಗಳೂ, ಕತ್ತಿ, ಕೊಡಲಿ, ಚೂರಿಯಂಥಹ ಆಯುಧ ಸೂಚಿ ಬೆಡಗುಗಳೂ, ಕಂಬಳಿ, ಕೋರಿ, ಗೊಂಗಡಿಯಂತಹ ವಸನ ಸೂಚಿ ಬೆಡಗುಗಳು ದಟ್ಟವಾಗಿ ಬಳಕೆಗೊಂಡಿವೆ.

ಬೆಡಗುಗಳು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬರುವುದು ತಂದೆಯಿಂದ ಮಕ್ಕಳಿಗೆ ಮತ್ತು ಮದುವೆಯೊಂದಿಗೆ ಹೆಣ್ಣು ಮಗಳ ಮೂಲ ಬೆಡಗು ಕರಗಿ ಹೋಗುತ್ತದೆ. ಕುರುಬರ ಹೆಣ್ಣುಮಗಳು ಗಂಡನ ಮನೆಗೆ ಹೋದ ಮೇಲೆ ಗಂಡನ ಮನೆಯ ಬೆಡಗು ಪ್ರಾಧಾನ್ಯತೆ ವಹಿಸುತ್ತದೆ. ಬೆಡಗುಗಳು ಮದುವೆಯ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತವೆ. ಒಂದು ವೇಳೆ ಒಂದೇ ಬೆಡಗಿನ ಹೆಣ್ಣು ಗಂಡು ಮದುವೆಯಾದರೆ ಅವರಿಂದ ಜನಿಸುವ ಮಕ್ಕಳು ಆರೋಗ್ಯಕರವಾಗಿರುವುದಿಲ್ಲ ಎಂಬ ನಂಬಿಕೆಯೂ ಇದೆ. ಬೆಡಗುಗಳ ಹೆಸರುಗಳನ್ನು ಗಮನಿಸಿದರೆ ಕುರುಬರಲ್ಲಿಯೂ ತಮ್ಮ ಸುತ್ತಲ ಬದುಕಿನಲ್ಲಿ ಕಂಡುಬರುವ ವಸ್ತು ವಿಚಾರ ವಿಷಯಗಳನ್ನೇ ಹೆಚ್ಚಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಒಂದು ಬೆಡಗಿನ ಹೆಸರನ್ನು ಪಡೆದುಕೊಂಡ ಕುಲದವರು ಅದಕ್ಕೆ ಸಂಬಂಧಿತವಾದ ವಿಧಿ ನಿಷೇಧಗಳನ್ನು ಅನುಸರಿಸಬೇಕಾಗುತ್ತದೆ.

ಕುರುಬ ಸಮುದಾಯದ ಬೆಡಗುಗಳನ್ನು ಅವಲೋಕಿಸಿದರೆ ಆಡು ಕುಲದವರು ಮೇಕೆಯನ್ನು ಕೊಲ್ಲುವುದಾಗಲಿ, ಅದರ ಮಾಂಸವನ್ನು ಉಪಯೋಗಿಸುವುದಾಗಲಿ ನಿಷಿದ್ಧ. ಮೇಕೆಗಳನ್ನು ಸಾಕಿ ಮಾರಾಟ ಮಾಡಬಹುದೇ ವಿನಾ ಕೊಲ್ಲುವಿಕೆ, ಆಹಾರವಾಗಿ ಬಳಸುವಂತಿಲ್ಲ. ಇದು ಕುಲದ ಚಿಹ್ನೆಯಾಗಿರುವುದರಿಂದ ಅದು ಗೌರವದ ಹಾಗೂ ಶ್ರೇಷ್ಠತೆಯ ಸಂಕೇತವಾಗಿ ಬಳಕೆಯಾಗುತ್ತದೆ. ಅದರಂತೆ ಆನೆ ಕುಲದವರು ಆನೆ ಸವಾರಿ ಮಾಡುವಂತಿಲ್ಲ. ಆದರೆ ಆನೆಯಿಂದ ಇತರೆ ಸೇವೆಗಳನ್ನು ಆ ಕುಲದವರು ಪಡೆಯಬಹುದಾಗಿದೆ. ಅರಿಶಿನ ಕುಲದವರು ಅರಿಶಿನವನ್ನು ಬಳಸುವಂತಿಲ್ಲ. ಅತ್ತಿ ಕುಲದವರು ಅತ್ತಿ ಮರವನ್ನು ಕತ್ತರಿಸುವಂತಿಲ್ಲ. ಅಲ್ಲದೆ ಅತ್ತಿಯ ಹಣ್ಣನ್ನು ತಿನ್ನಬಾರದು ಎಂಬ ನಂಬಿಕೆ ಮನೆ ಮಾಡಿದೆ. ಬೇಲ ಮತ್ತು ಬಸರಿ ಕುಲದವರು ಆಯಾ ಜಾತಿಯ ಮರವನ್ನು ಕಡಿಯುವುದಾಗಲಿ ಬಳಸುವುದಾಗಲಿ ಸಲ್ಲದು. ಬೆಳ್ಳಿ ಕುಲದವರು ಬೆಳ್ಳಿಯ ಕಾಲುಂಗುರ ತೊಡುವಂತಿಲ್ಲ. ಚಟ್ಟ ಕುಲದವರು ಶವವನ್ನು ಚಟ್ಟದ ಮೇಲೆ ತೆಗೆದುಕೊಂಡು ಹೋಗುವಂತಿಲ್ಲ. ಪೊನ್ನುಂಗುರದವರು ಚಿನ್ನ ಧರಿಸಬಾರದು. ಮೆಣಸು ಕುಲದವರು ಮೆಣಸನ್ನು ಬಳಸಬಾರದು. ಒನಕೆ ಕುಲದವರು ಒನಕೆ ಬಳಸಬಾರದು. ಗಂಧದ ಕುಲದವರು ಶ್ರೀಗಂಧವನ್ನು

ಬಳಸುವಂತಿಲ್ಲ. ಹೀಗೆ ವಿಧಿ ನಿಷೇಧಗಳಿಗೊಳಪಟ್ಟು ರಕ್ತ ಸಂಬಂಧ ಬೆಳೆಸಿಕೊಳ್ಳಲು ಕುರುಬರು ಕೆಲವು ನಿಬಂಧನೆಗಳನ್ನು ಮಾಡಿಕೊಂಡವುಗಳೇ ಬೆಡಗುಗಳು ಎನಿಸಿಕೊಂಡವು. ಭಿನ್ನ ಬೆಡಗುಗಳಲ್ಲಿ ಸಂಬಂಧ ಕುದುರಿಸಿದರೆ, ಸಮ ಬೆಡಗುಗಳಲ್ಲಿ ಸಹೋದರ ಬಾಂಧವ್ಯ ಉಂಟಾಗುವುದರಿಂದ ರಕ್ತ ಸಂಬಂಧ ಬೆಳೆಸಲೇಬಾರದೆಂಬ ಅಭಿಪ್ರಾಯವಿದೆ.

ಬೀದರಿನ ಗೊಂಡ ಕುರುಬರಲ್ಲಿ ಬೆಡಗುಗಳಿರುವುದಿಲ್ಲ. ಅವರೆಲ್ಲ ಕಂಕಣಕ್ಕೆ ಪ್ರಾಧಾನ್ಯತೆ ನೀಡುವುದರಿಂದ ಮದುವೆಯ ನಂತರವೂ ಉಣ್ಣೆಕಂಕಣದವರಾಗಿ ಉಳಿಯುತ್ತಾರೆ. ಭಟ್ಕಳದ ಗೊಂಡರಲ್ಲಿ ಬುಡ ಮತ್ತು ಬಳಿಗಳಿವೆ. ಕುರುಬರ ಬೆಡಗು ಪುರುಷ ಪ್ರಾಧಾನ್ಯತೆ ಸೂಚಿಸಿದರೆ, ಭಟ್ಕಳದ ಗೊಂಡ ಕುರುಬರಲ್ಲಿ ಮಾತೃ ಪ್ರಧಾನ ಬೆಡಗು ಸೂಚಿಸಲ್ಪಡುತ್ತದೆ. ಕುರುಬರಲ್ಲಿ ಸಮ ಬೆಡಗು ವಿವಾಹ ನಿಷಿದ್ಧವಾದಂತೆ ಗೊಂಡ ಕುರುಬರಲ್ಲಿಯೂ ಸಮಬಳಿಯು ವಿವಾಹ ನಿಷೇಧವನ್ನೇ ಸೂಚಿಸುತ್ತದೆ.

ಬುಡದ ವಿಷಯದಲ್ಲೂ ಗೊಂಡ ಕುರುಬರು ಮಾತೃ ಪ್ರಧಾನವಾದ ಸಂಪ್ರದಾಯ. ಸದ್ಯದಲ್ಲಿ ಬೇರೆ ಬೇರೆ ಬಳಿ ಹೊಂದಿರುವ ಗೊಂಡ ಮಹಿಳೆಯರ ತಾಯಿಯರ ತಾಯಂದಿರು ಮೂಲದಲ್ಲಿ ಒಂದೇ ದೈವವನ್ನು ಆರಾಧಿಸುತ್ತಿದ್ದರೆ ಆ ದೈವವನ್ನು ಬುಡ ಅಥವಾ ತಳವೆಂದು ಕರೆಯಲಾಗುತ್ತದೆ. ಅಂದರೆ ಬೇರೆ ಬೇರೆ ಬಳಿಯ ಮಹಿಳೆಯರು ಮೂಲದಲ್ಲಿ ಒಂದೇ ಬುಡಕಟ್ಟಿನವರಾಗಿರಬಹುದು. ಇಲ್ಲಿನ ವಿಶೇಷವೆಂದರೆ ಬುಡಕ್ಕೆ ನಡೆದುಕೊಳ್ಳುವವರು ಪುರುಷರಲ್ಲ ಮಹಿಳೆಯರಾಗಿರುತ್ತಾರೆ. ಇದು ಗೊಂಡ ಕುರುಬರ ಬಳಿಗಳ ವೈಶಿಷ್ಟ್ಯ. ಇನ್ನಾವುದೇ ಬೆಡಗುಗಳಲ್ಲಿಯೂ ಈ ರೀತಿ ಕಂಡು ಬರುವುದಿಲ್ಲ.

ಹತ್ತಿಕಂಕಣ ಕುರುಬರಲ್ಲಿ ಕೆಲವು ಗುಂಪುಗಳಿವೆ. ಇವುಗಳಿಗೆ ಬೆಡಗುಗಳ ನಿರ್ದಿಷ್ಟತೆಯು ಇರುವುದಿಲ್ಲ. ಎಲ್ಲ ಬೆಡಗಿನವರೂ ಸೇರಿಕೊಂಡಂತೆ ತಮ್ಮ ಸಾಂಸ್ಕೃತಿಕ ಕಾರ್ಯಕಲಾಪಗಳು ಸುಗಮವಾಗಿ ನೆರವೇರಿಸುವ ಅನುಕೂಲಕ್ಕಾಗಿ ತಮ್ಮ ತಮ್ಮಲ್ಲಿಯೇ ಈ ಗುಂಪುಗಳನ್ನು ಮಾಡಿಕೊಂಡಿದ್ದಾರೆ. ಇವಕ್ಕೆ ಪಣ ಅಥವಾ ಬಣ ಎಂದು ಕರೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ಒಂದೇ ಪಣಕ್ಕೆ ಸೇರಿದ ವಧೂವರರಾದರೆ ಗಂಡು ಹೆಣ್ಣಿನ ಕಡೆಯವರಿಬ್ಬರೂ ಕೂಡಿಕೊಂಡು ಲಗ್ನದ ಎಲ್ಲಾ ಶಾಸ್ತ್ರ ಕಾರ್ಯಗಳನ್ನು ನೆರವೇರಿಸುತ್ತಾರೆ. ಹೀಗಲ್ಲದೆ ವಧೂವರರ ಪಣ ಬೇರೆ ಬೇರೆಯಾದರೆ ಕನ್ಯೆಯನ್ನು ಎತ್ತಿ ಕೊಡುವ ಶಾಸ್ತ್ರ ಮಾಡುತ್ತಾರೆ.

ಕನ್ಯೆಯನ್ನು ಎತ್ತಿ ಕೊಡುವುದು ಎಂದರೆ ವಿವಾಹದ ಶಾಸ್ತ್ರ ವಿಧಿಗಳನ್ನು ನೆರವೇರಿಸುವುದಕ್ಕಾಗಿ ಕನ್ಯೆಯನ್ನು ಗಂಡಿನವರ ವಶಕ್ಕೆ ಒಪ್ಪಿಸುವುದು ಎಂದರ್ಥ. ಇಂತಹ ಸಂದರ್ಭದಲ್ಲಿ ಕನ್ಯೆಯ ಬಳಗದವರು ಲಗ್ನದ ಯಾವುದೇ ಕಾರ್ಯದಲ್ಲಿ ಪಾಲ್ಗೊಳ್ಳುವಂತಿಲ್ಲ. ಅವರೇನಿದ್ದರೂ ಕರೆದಾಗ ಊಟ ಮಾಡುವುದು ಮತ್ತು ಧಾರೆ ಮುಹೂರ್ತದ ವೇಳೆ ಹೆಣ್ಣುಗಂಡಿನ ತಲೆಯ ಮೇಲೆ ಅಕ್ಷತೆಯ ಕಾಳು ಹಾಕುವುದು ಮಾತ್ರವಷ್ಟೇ ಇವರ ಕೆಲಸವಾಗಿರುತ್ತದೆ. ಇದು ಒಂದು ವಿಶಿಷ್ಟ ಬಣ ಅಥವಾ ಪಣದ ಲಕ್ಷಣವಾಗಿದೆ.

ಒಟ್ಟಾರೆಯಾಗಿ ಬೆಡಗುಗಳು ರಕ್ತ ಸಂಬಂಧದ ಬೇರೆ ಬೇರೆ ಗುಂಪುಗಳನ್ನು ನಿರ್ದೇಶಿಸುತ್ತವೆ. ಇವರು ತಮ್ಮ ಎಲ್ಲಾ ಬೆಡಗುಗಳ ನೆನಪಿಗಾಗಿ ಪ್ರತಿಯೊಂದು ಬೆಡಗುಗಳ ಆಧಾರದ ಮೇಲೆ ಅವರವರ ಮನೆತನದ ಅಡ್ಡ ಹೆಸರುಗಳಿಂದಲೂ ಕರೆಯಲು ಸಹಾಯಕವಾಗಿವೆ. ತಮ್ಮ ಹೆಸರು ಅಥವಾ ವಿಳಾಸ ಹೇಳುವಾಗ ಹೆಸರಿನ ಕೊನೆಯಲ್ಲಿ ಅವರ ಕುಲ ಅಥವಾ ಬೆಡಗನ್ನು ಸೇರಿಸಿ ಹೇಳುವುದು ವಾಡಿಕೆ. ಇದರಿಂದ ಆ ವ್ಯಕ್ತಿಯು ಯಾವ ಕುಲ ಅಥವಾ ಬೆಡಗಿಗೆ ಸೇರಿದವನೆಂಬ ವಿಷಯವು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತದೆ. ಕಾಲಚಕ್ರದಲ್ಲಿ ಇಂದು ಮದುವೆಯಂತಹ ಶಿಷ್ಟಾಚಾರದಲ್ಲಿಯೂ, ಧಾರ್ಮಿಕ ಆಚರಣೆಯಲ್ಲಿ ಕುಲ ಬೆಡಗುಗಳು ಪ್ರಮುಖ ಪಾತ್ರ ವಹಿಸುತ್ತವೆ.

ಈ ಬೆಡಗುಗಳ ಶಬ್ದಗಳಲ್ಲಿ ಸ್ವಂತಿಕೆಯಿದೆ. ಜೀವಂತಿಕೆ ಇದೆ. ಇನ್ನೂ ಮುಂದೆ ಹೋಗಿ ಹೇಳಬಹುದಾದರೆ ಅರ್ಥಗಾರುಡಿಯಿದೆ. ರಕ್ತ ಸಂಬಂಧಗಳು ವಿಪುಲವಾಗಿ ಬೆಳೆಯಬೇಕಾದರೆ ಬೆಡಗುಗಳು ಬೇರೆ ಬೇರೆಯಾಗಿರಬೇಕೆಂಬ ನಿಯಮವಿದೆ. ಸಗೋತ್ರ ಮಧ್ಯೆ ವಿವಾಹ ನಿಷೇಧಿಸಿರುವುದರ ಹಿಂದಿನ ಮರ್ಮ ರಕ್ತ ಸಂಬಂಧದಲ್ಲಿ ಲಗ್ನ ಮಾಡಿಕೊಳ್ಳುವುದರಿಂದ ಹುಟ್ಟುವ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯ ಕೊರತೆ, ಅನುವಂಶಿಕ ರೋಗಗಳ ಶಂಕೆ, ಬುದ್ಧಿ ವೈಕಲ್ಯ, ಅಂಗಹೀನತೆ ಅಥವಾ ಅಶಕ್ತ ಮಕ್ಕಳ ಜನ್ಮಕ್ಕೆ ಕಾರಣವಾಗುತ್ತದೆಂಬ ವೈಜ್ಞಾನಿಕ ಸಂಗತಿಗಳ ಮೇಲೂ ಬೆಡಗುಗಳು ಬೆಳಕು ಚೆಲ್ಲುತ್ತವೆ. ಆಯಾ ಜಾತಿಯ ಪ್ರಾಚೀನತೆ ಕಂಡು ಹಿಡಿಯಲು ಬೆಡಗುಗಳು ಅಳತೆಗೋಲುಗಳೂ ಹೌದು. ಯಾವುದೇ ಒಂದು ಜಾತಿ ಸಮುದಾಯದವರು ಗೋತ್ರ ಬೆಡಗುಗಳಿಂದ ಬೇರೆ ಧರ್ಮ ಪಂಥಕ್ಕೆ ಸೇರ್ಪಡೆಯಾದ ಕಾಲವನ್ನು ಕಂಡು ಹಿಡಿಯಲು ಸಹಕಾರಿಯಾಗುತ್ತವೆ.

ಕಾಡುಕುರುಬರು

ಬೆಟ್ಟ ಕುರುಬರಲ್ಲಿ ೩ ಕುಲದವರು, ೫ ಕುಲದವರು, ೭ ಕುಲದವರು ಎಂದು ಮೂರು ಬಗೆಗಳಲ್ಲಿ ಕುಲಗಳಿವೆ. ಒಂದೇ ಕುಟುಂಬದಲ್ಲಿ ಒಂದೇ ಕುಲದಲ್ಲಿ ವಿವಾಹಸಂಬಂಧ ಬೆಳಸುವುದಿಲ್ಲ. ೭ ಕುಲದಲ್ಲಿ ಹುಡುಗ ಅಥವಾ ಹುಡುಗಿಯರ ಸಂಬಂಧವನ್ನು ಬೆಳಿಸುವಂತಿಲ್ಲ, ೫ ಕುಲದವರು ೩ ಕುಲದವರಲ್ಲಿ ವಿವಾಹ ಸಂಬಂಧ ಬೆಳೆಸಬಹುದು. ೫ ಕುಲದವರು ಮತ್ತು ೩ ಕುಲದವರನ್ನು ಭಾವಮೈದುನ ಎಂದು ತಿಳಿಯುತ್ತಾರೆ. ಇಂತಹ ಕುಲದವರ ಜೊತೆ ವಿವಾಹ ಸಂಬಂಧವನ್ನು ಏರ್ಪಡಿಸಲಾಗುತ್ತದೆ.

೩ ಕುಲದವರು	೫ ಕುಲದವರು	೭ ಕುಲದವರು
ನಿಮ್ಮಲಮೊಗೆ	ಜಿಲ್‌ಗಲ್ ಮೊಗೆ	ಕೊಟ್ಟಗಿನ್ ಮೊಗೆ
ಅಲ್ಮಜಲಿಮೊಗೆ	ಕಣ್‌ಮೈಲ್ ಮೊಗೆ	ಸಾಗಡೊ ಮೊಗೆ

ಕಳ್ಳರ ಮೊಗೆ	ಜಿರ್‍ಗಾಲ್ ಮೊಗೆ	ಪಾಬರ್ ಮೊಗೆ
	ಬಾಲ್‌ಕಿನ್ ಮೊಗೆ	ಯಾರ್‍ಗೊ ಗೋಲ್ ಮೊಗೆ
	ಮೂವರ್ ಮೊಗೆ	ಐತಿರ್‍ಗೊಕೊಟ್ಟಿಮೊಗೆ
		ಪಾರೆಮೊಗೆ
		ಕುಪರೆಕೊಂಡಂ ಮೊಗೆ

ಇವೆಲ್ಲವೂ ಆನೆ, ಬೇವಿನ ಕೊಳ್ಳಿ ಎಂಬ ಪ್ರಧಾನ ಕುಲಗಳಲ್ಲಿ ಬರುವಂತವು. ೩ ಕುಲದವರಿಗೆ ಕಪಾಲಿ ಮಹದೇಶ್ವರ ಕುಲದೇವರು, ಇವರಿಗೆ ಮೂರಾಡಿ, ಮೂರು ಕೊಪ್ಪಲು ಮೂಳ್ತೆಲ್ಲೆ ಎಂಬ ಪರ್ಯಾಯ ಹೆಸರುಗಳಿವೆ. ೫ ಕುಲದವರಿಗೆ ಐದು ಎಲ್ಲೆ ಕುಲ, ಐದು ಹಳ್ಳಿ ಗ್ರಾಮದವರು, ಜಮ್ಮ ಕುಲ ಎಂದೂ ಕರೆಯಲಾಗುತ್ತದೆ. ಕೇರಳದಲ್ಲಿರುವ ಮೂಗಪ್ಪ ಇವರ ಕುಲದೇವರು. ೭ ಕುಲದವರಿಗೆ ಏಳುಕೊಪ್ಪಲು, ಏಳು ಎಲ್ಲೆ ಕುಲ ಎಂಬ ಪರ್ಯಾಯ ನಾಮಗಳಿವೆ. ತಾವರೆಕಟ್ಟೆ ಮಾದೇಶ್ವರ ಇವರ ಕುಲದೇವರು. ಕೇರಳದ ಮೂಳೆಹೊಳೆ ಕಾಡಿನಲ್ಲಿರುವ 'ಅದಿರ್ ಕಾಳಪ್ಪ'ನಿಗೂ ಒಕ್ಕಲಾಗಿ ನಡೆದು ಕೊಳ್ಳುತ್ತಾರೆ. ಬೆಟ್ಟ ಕುರುಬರು ತಮ್ಮ ಬೆಡಗುಗಳಿಗೆ ಸಾಲುಗಳೆಂದು ಕರೆಯುವರು. ಇವರ ಬೆಡಗುಗಳು ಈ ಕೆಳಕಂಡಂತಿವೆ.

೧. ಮತ್ತಿರು ಮಕ್ಕ, ೨. ತೋಪೆಟ್ ಮಕ್ಕ, ೩. ಖಂದೀರ್ ಮಕ್ಕ ೪. ಬಾಳೇಜಿಮಕ್ಕ ೫. ಬೋಳ್ಗೋಳ್ ಮಕ್ಕ ೬. ಸೋಣ್‌ಜೀನ್ ಮಕ್ಕ ೭. ಕೆಮ್‌ಸಲ್ ಮಕ್ಕ ೮. ಕಮೆಟಿ ಮಕ್ಕ. ೯. ಕೋಟುಮ್ ಮಕ್ಕ ೧೦. ಗಮ್ಮೇಟಿ ಮಕ್ಕ ೧೧. ತಿರುಮಲ್ ಮಕ್ಕ. ೧೨. ಕೂಗುರಕ್‌ನ ಮಕ್ಕ. ೧೩. ಬಳ್‌ಕುರ್ ಮಕ್ಕ ೧೪. ಕೂದೇರ್ ಮಕ್ಕ ೧೫. ಕಿಂದರಿಮಕ್ಕ ೧೬. ಬಲ್ತಮಕ್ಕ. ೧೭. ಕೂಪಸ್ಸ ಮಕ್ಕ ೧೮. ಕೊಟಮಕ್ಕ ೧೯. ದಾಳು. ೨೦. ಕಲ್ಕರ್. ೨೧. ಕುಲ್ ಮಂಜಲ್ ೨೨. ಶಂಕಿರಲ್ ೨೩. ಸೇಲೇರ್ ೨೪. ಕುಪ್ಪಲ್ಸಿ. ೨೫. ನಾನ್ಸಿ. ೨೬. ಸಾಂಬಾಳಕ್ಕನ್ ೨೭. ಸರ್ಕಲಕ್ಕಿನ್ ೨೮. ಜೇಡ್ಸ ೨೯. ಕೆಂಪ್ಸಿಲಕ್ಕ.

ಇವು ಕಾಡು ಕುರುಬರಲ್ಲಿ ಕಂಡು ಬರುವ ಬೆಡಗುಗಳು. ಜೇನುಕುರುಬರಲ್ಲಿ ಬೆಡಗುಗಳಿಗೆ ಮಹತ್ವ ವಿದ್ದಂತೆ ಕಾಣುವುದಿಲ್ಲ.

ಅಲೆಮಾರಿ ಕುರುಬರು

ಅಲೆಮಾರಿ ಕುರುಬರು ನೆಂಟಸ್ಥಿಕೆ ಬೆಳೆಸುವ ಸಂದರ್ಭದಲ್ಲಿ ಬೆಡಗುಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಒಂದೇ ಬೆಡಗಿಗೆ ಸೇರಿದವರು ಅಥವಾ ಒಳಬಾಂಧವ್ಯಗಳು, ನೆಂಟರ ಸಂಬಂಧ ಎನ್ನುವ ಕಾರಣಕ್ಕೋಸ್ಕರ ಒಳಬಾಂಧವ್ಯದಲ್ಲಿ ವಿವಾಹ ನಿಷೇಧವಿದ್ದು ಹೊರಬಾಂಧವ್ಯಗಳಲ್ಲಿ ವಿವಾಹ ನಡೆಸುತ್ತಾ

ಬಂದಿರುವುವನ್ನು ಕಾಣುತ್ತೇವೆ. ಅಂದರೆ ನೆಂಟಸ್ಥಿಗೆ ಮಾಡುವಾಗ ಬೇರೆ ಬೆಡಗಿನವರನ್ನು ಗುರುತಿಸಿ ಹೆಣ್ಣು ಕೊಡುವ ಮತ್ತು ತರುವುದನ್ನು ನೋಡುತ್ತೇವೆ. ಉದಾಹರಣೆ ಗವಡೆ+ಗವಡೆ, ಕರಗಾರ+ ಕರಗಾರ. ಇವು ಸಮ ಬೆರಗಾದರೆ ಕಾಲಪುರೆ+ಗವಡೆ, ಕರಗಾರ+ಕಾಲಮರೆ ಈ ರೀತಿಯ ಬೆಸ ಬೆಡಗುಗಳಲ್ಲಿ ವೈವಾಹಿಕ ಸಂಬಂಧ ಬೆಳೆಸಲು ಅರ್ಹವಾಗುತ್ತವೆ.

೧. ಅನುಷೆ. ೨. ಅವಾಡಿಖಾನ್ ೩. ಬನ್ನೇ ೪. ಬನ್ನೇಗೋಳ್ ೫. ಬೋರಗೊಂಡೆ ೬. ಬೋರಾಟವಾಳ್ ೭. ಚೆಂಡ್ಕೆ ೮. ಚೊಪಡೆ ೯. ದಿವಟೆ ೧೦. ಡೋಣೆ ೧೧. ಡೊಂಗರೆ, ೧೨. ಗವಂಡೆ. ೧೩. ಗವಡೆ ೧೪. ಗೋಸಂಡೆ ೧೫. ಗೋಸರವಾಡೆ. ೧೬. ಗೌಡ್ಲರು ೧೭. ಹಡಕರ್ ೧೮. ಹೊಗಡೆ ೧೯. ಹೊನ್ನೆಬನ್ನೇ ೨೦. ಹೊನ್ನೆಶಿಂಗಾಡಿ ೨೧. ಝುಂಡೆ ೨೨. ಕರಗಾರ ೨೩. ಕವಳೆ ೨೪. ಕಾಗನೇಕರ್. ೨೫. ಕೊಳಸೆ ೨೬. ಕೊರಲ್ಲೆರ್ ೨೭. ಕೋಡೆ ೨೮. ಕೋಳಕರ್ ೨೯ ಕೌಲಾಪುರೆ. ೩೦. ಲಟ್ಕೆ ೩೧. ಲಾಂಡೆ ೩೩. ಲಿಂಗಗೋಳ್ ೩೩. ಮುರಡೆ. ೩೪. ಮುತ್ತಿನವರು ೩೫. ಮುತ್ತು ಮಾಣಿಕ್ಯ ೩೬. ನರಾಟೆ ೩೭. ಪಡುವಾಳಿಕರ ೩೮. ರಾಣೆ ೩೯ ರಾಣೆಗೆ ೪೦. ಸೆಂಡಿಗೆ ೪೧. ಶಿಂಗಡೆ ೪೨. ವಾಸ್ಕರ್ ೪೩. ಯಮಗಾರ್.

ಈ ಎಲ್ಲಾ ಬೆಡಗುಗಳಿಂದ ಅಲೆಮಾರಿ ಕುರುಬರು ಸಂಘಟಿತರಾಗಿದ್ದಾರೆ. ಮದುವೆಯಂತಹ ಮಂಗಳ ಕಾರ್ಯಗಳಲ್ಲಿ ಮತ್ತು ಧಾರ್ಮಿಕ ಆಚರಣೆಯಲ್ಲಿ ಒಂದೇ ಬೆಡಗಿನವರು ಒಂದುಗೂಡಿಕೊಳ್ಳುವುದುಂಟು. ಒಂದು ಕಾಲಕ್ಕೆ ಬೆಡಗುಗಳು ಅಲೆಮಾರಿ ಕುರುಬರಲ್ಲಿ ವಾಸಿಸುವ ಹಟ್ಟಿಯ ಹೆಸರುಗಳಾಗಿದ್ದವು. ಶಿಷ್ಟಾಚಾರದ ಸಂದರ್ಭದಲ್ಲಿ ಕುಲ ಬೆಡಗುಗಳು ಮಹತ್ವದ ಪಾತ್ರ ವಹಿಸುತ್ತವೆ.

ಗೊಂಡ ಕುರುಬರು

ಗೊಂಡರಲ್ಲಿ ಬೆಡಗುಗಳಿಗೆ 'ಬಳಿ' ಎಂದು ಕರೆಯುತ್ತಾರೆ. ಅದರ ಮೂಲ 'ಬಳ್ಳಿ' ಇರಬೇಕೆಂದು ಊಹಿಸಬಹುದು. 'ಬಳಿ' ಎಂಬ ಸಾಮಾನ್ಯ ಪದದೊಡನೆ ತಮ್ಮ ಕುಲಚಿಹ್ನೆಯನ್ನು ಸೇರಿಸಿ ಹೇಳುವುದು ರೂಢಿಯಲ್ಲಿದೆ. ಉದಾಹರಣೆಗೆ 'ಆನೆ' ಕುಲ ಚಿಹ್ನೆಯಾಗಿದ್ದರೆ 'ಆನೆ ಬಳಿ' ಎನ್ನುವರು. ಇದಲ್ಲದೆ ಕುಲ, ಬಳಿ, ಬೆಡಗುಗಳಿಗೆ 'ಖೋಮ' ಎಂದೂ ಕರೆಯುವರು. 'ಖೋಮ' ಎಂದರೆ ಮೂಲವಂಶ ಎಂದರ್ಥ.

೧. ಆಜ್ರಬಳಿ ೨. ಆರ್ಮ್‌ನಾಥ ಬಳಿ ೩. ಆನ್ ಬಳಿ ೪. ರಾಯಿಬಳಿ ೫. ತೋಳಾರ್ ಬಳಿ (ನೀರ್ ಹಾಳ್) ೬. ದ್ಯಾವತರ ಬಳಿ ೭. ನಾಗಬಳಿ ೮. ಮಲ್ಲಿಗೆಬಳಿ ೯. ಶಿತಿವ್ ಬಳಿ ೧೦. ಶೆಟ್ ಬಳಿ ೧೧. ಹಾಲ್ ಬಳಿ. ೧೨. ಹೊನ್ ಬಳಿ ೧೩. ಹೊಲಿ ಬಳಿ ೧೪. ಸಿರಿನ್ ಬಳಿ ೧೫. ತೊಡರಬಳಿ ೧೬. ಗಂಗ್ರಬಳಿ ೧೭. ಕಾಯಿಬಳಿ.

ಗೊಂಡರಲ್ಲಿ ಬಳಿಗೆ ಬುಡ, ಬಳ್ಳಿ, ಕುಲ ಎಂಬ ಪರ್ಯಾಯ ಹೆಸರುಗಳೂ ಕೂಡ ಇವೆ.

ಉಣ್ಣೆಕಂಕಣ ಕುರುಬರು

ಕರ್ನಾಟಕ ಕುರುಬರ ಒಳಪಂಗಡಗಳ ಬೆಡಗುಗಳನ್ನು ಇಂತಿಷ್ಟೇ ಎಂದು ಹೇಳಲು ಸಾಧ್ಯವಾಗದಿದ್ದರೂ ಈ ಸಮುದಾಯದ ಮೂಲಗುರುವೆಂದು ಹೇಳಲಾದ ರೇವಣಸಿದ್ಧರು ಈ ಸಮುದಾಯದ ಜನರನ್ನು ನಾಲ್ಕು ಸೇರು ಭತ್ತದ ಧಾನ್ಯದಷ್ಟು ಗೋತ್ರಗಳನ್ನಾಗಿ ವಿಂಗಡಿಸಿ ಎಲ್ಲಾ ಪ್ರಾಣಿ ಹಾಗೂ ಸಸ್ಯಗಳ ಹೆಸರುಗಳನ್ನು ಅವುಗಳಿಗಿಟ್ಟರೂ ಇನ್ನೂ ಕೆಲವು ಉಳಿದಾಗ ಕ್ಷುಲ್ಲಕ ವಸ್ತುಗಳ ಹೆಸರಿಡುತ್ತಾನೆ. ಪ್ರಾಣಿ ಸೂಚಕ ಕುಲಚಿಹ್ನೆಗಳು ಅನ್ವರ್ಥವಾದರೂ ಮಿಕ್ಕುಳಿದವುಗಳಿಗೆ ಕೊಟ್ಟ ಚಿಹ್ನೆಗಳು ಯಾವುದೇ ಆಂತರಿಕ ಅರ್ಥವನ್ನು ಸೂಚಿಸುವುದಿಲ್ಲ. ಹಾಗೆಯೇ ಕೆಲವು ಕುಲಗಳಿಗೆ ನೀಡಲಾದ ಹೆಸರಿನ ವಸ್ತುಗಳು ಈಗಲೂ ಕೂಡ ತಿನ್ನಲು ಅಥವಾ ಮತ್ತಿನ್ನಾವುದಕ್ಕೂ ಬಳಸಲಾಗುವುದಿಲ್ಲ "ನಿರ್ದಿಷ್ಟ ಸ್ಥಳಕ್ಕೆ ನಿರ್ಬಂಧಿತ ಹಾಗೂ ಚದುರಿ ಹೋದ ಕುರುಬರ ಕುಲಗಳನ್ನು ೧೧೧"[೧೦] ಎಂದು ನಂಜುಂಡಸ್ವಾಮಿ ಮತ್ತು ಅಯ್ಯರ್‌ರವರು 'ದಿ ಮೈಸೂರ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ಸ್' ಸಂಪುಟ ನಾಲ್ಕರಲ್ಲಿ ದಾಖಲಿಸಿದ್ದಾರೆ.

೧. ಆಡುಕುಲ ೨. ಅಲಗೆ ೩. ಅಠದರ ೪. ಆನೆ ೫. ಅರೆ ೬. ಅರಸಿನ ೭. ಅರಸು ೮. ಅತ್ತಿ ೯.ಬಂಡಿ ೧೦.ಬಸರಿ ೧೧.ಅನ್ನೆ ೧೨. ಬೆಲ ೧೩. ಬೆಳ್ಳಿ ೧೪. ಬಳಿಗೇರ ೧೫. ಬಸರ ೧೬. ಬೆಣಚಿ ೧೭. ಬೇವು ೧೮. ಬೆಲು ೧೯. ಬೀರ ೨೦. ಬಾನ ೨೧. ಬೆಣ್ಣೆ ೨೨. ಬನ್ನಿ ೨೩. ಅವರೆ ೨೪. ಬೊಲೆ ೨೫. ಬೂದಲಿ ೨೬. ಬುಗುಡಿ ೨೭. ಚೇಳು ೨೮. ಚಿಟ್‌ಲು ೨೯. ಚಿಲ್ಲ ೩೦. ಚಂದನ ೩೧. ಚಂದು ೩೨. ಚೂರಿ ೩೩. ಚಟ್ಟ ೩೪. ದೇವದಾರು ೩೫. ದಂಡೆ ೩೬. ಡಾನಿ ೩೭. ದಸರಿ ೩೮. ಎಮ್ಮೆ ೩೯. ಗಾಳಿ ೪೦. ಗೌಡ ೪೧ ಗರಿಕೆ ೪೨. ಗೊಬ್ಬರ ೪೩. ಗರನಿ. ೪೪. ಗುಡಿ ೪೫. ಗುಲಮಿ ೪೬. ಅರಳೆ ೪೭. ಹಾಲು ೪೮. ಹಾವು ೪೯. ಹೊನ್ನು ೫೦. ಹುಣಸೆ ೫೧. ಹುರುಳಿ ೫೨. ಇರುಳು ೫೩. ಇರುವೆ ೫೪. ಜಲಕುಪ್ಪ ೫೫. ಜನ್ನಿ ೫೬. ಜೀರಿಗಿ ೫೭. ಜೀವಲ ೫೮. ಜಿಲ್ಲದಿ (ಎಕ್ಕ) ೫೯. ಕದಳಿ ೬೦. ಕೆಚ್ಚಲು ೬೧. ಕಂಚು ೬೨. ಕಗ್ಗಲ್ಲು ೬೩. ಕಡಗ ೬೪. ಕವದಿ ೬೫. ಕೊಂಗಂಡಿ ೬೬. ಕೊಪ್ಪು ೬೭. ಕೋಟ ೬೮. ಕೊಳ್ಳಿ ೬೯. ಕುಂಬಳ ೭೦. ಮಲ್ಲಿಗೆ ೭೧. ಮಜ್ಜಿಗೆ ೭೨. ಮಜ್ಜನ ೭೩. ಮಾಸಲು ೭೪. ಮರಸಲ ೭೫. ಮದ ೭೬. ಮೆಣಸು ೭೭. ಮಿಂಚು ೭೮. ಮೀಸೆ ೭೯. ಮೊಲ ೮೦. ಮೋಟ ೮೧. ಮೂರು ಹಿಂಡಿನ ೮೨. ಮುತ್ತು ೮೩. ನಗರೆ ೮೪. ನಳಿ ೮೫. ನವಿಲು ೮೬. ನಾಯಿ ೮೭. ನಗ್ಗಲು ೮೮. ನಲ್ಲಿ ೮೯. ಒನಿಕೆ ೯೦. ಹೋತ ೯೧. ಪುತ್ತರ ೯೨. ಪೊನ್ನೀರು ೯೩. ಸಾಗರ ೯೪. ಸಾಂವಿ ೯೫. ಸಾಮುಂತಿ ೯೬. ಸಕಲು ೯೭. ಪಾಂಡೆ ೯೮. ಶಂಖು ೯೯. ಸೂಜಿ ೧೦೦. ಸೂರ್ಯ, ೧೦೧. ಸೌದೆ ೧೦೨. ಗುಂಬ ೧೦೩. ಉಂಗುರ ೧೦೪. ಉಪ್ಪು ೧೦೫. ಹತ್ತಿ ೧೦೬. ಹುತ್ತ ೧೦೭. ಗೋಸೆ ೧೦೮. ಲಾಳಿ ೧೦೯. ಮಣಿ ೧೧೦. ಅಸಲಿ.

ಮೇಲಿನ ಪಟ್ಟಿಗೆ ಇನ್ನೂ ೩೩ ಕುಲಗಳನ್ನು ಸೇರಿಸಿ ಕುರುಬರ ಕುಲಗಳ ಸಂಖ್ಯೆ ಒಟ್ಟು ೧೪೪ ಎಂದು ಹನುಮಂತಪ್ಪನವರು ಹೇಳುತ್ತಾರೆ.

೧. ಅಂದಿನ ೨. ಅಸಲು ೩. ಐದುವರ್ಷದ ಸಾಲೆ ೪. ಓಲೆ ೫. ಕಂದನ ೬. ಕಣಿವರು ೭. ಕೋತಿಯವರು ೮. ಜಂಡೆಯವರು ೯. ಜಾಡಿ ೧೦. ಟಗರು ೧೧. ದುಡ್ಡಿನವರು ೧೨. ನಲಿಗೆ ೧೩. ಬಣಗೇರ ೧೪. ಬನದವರು ೧೫. ಬಸಲು ೧೬. ಬಜಿನಿಗೇರಿ ೧೭. ಭೋಜನರು. ೧೮. ಮಲೆಯವರು ೧೯.ಮಲ್ಲಿಗೆ ೨೦. ಮಜ್ಜಿಗೆ ೨೧. ಮಜ್ಜಿನದೇವರು ೨೨. ಮಸಲು ೨೩. ಮನೆ ೨೪. ಮಸಲಗುರು ೨೫.ಶಾವಿಗೇರು ೨೬. ಸಂಗಮದೇವರು ೨೭. ಶಂಪಿಗೇರು ೨೮. ಸಣಗರು ೨೯. ಸಾಸಲು ೩೦. ಸಾಲದವರು ೩೧. ಸಾಧು ೩೨. ಸಂಮತಿಗರು ೩೩. ಹರ್ಷದವರು.

ಈ ಮೇಲಿನ ಕುಲಗಳ ಮೂಲಕವೆ ಕುಲಚಿಹ್ನೆಗಳನ್ನು ಕೊಟ್ಟು ಸಾವಿರಾರು ಬೆಡಗುಗಳು ಹುಟ್ಟಿಕೊಂಡಿವೆ. ಇವು ಮದುವೆಯ ಗಂಡು ಹೆಣ್ಣಿನ ಆಯ್ಕೆ ಮತ್ತು ಮದುವೆಯ ನಿಯಮಗಳನ್ನು ನಿಯಂತ್ರಿಸುವಲ್ಲಿ ಸಹಕರಿಸುತ್ತವೆ. ಹಾಗೆ ಕುಲಸಂಘಟನೆಯ ಜೊತೆ ಜೊತೆಗೆ ಧರ್ಮಾಚರಣೆಯ ಜೀವನವನ್ನೂ ನಿಯಂತ್ರಿಸುತ್ತದೆ.

ಉಣ್ಣೆಕಂಕಣ ಕುರುಬರನ್ನು ಆಗುರುಬರು, ಹಾವಿನ ಕುರುಬರು, ಸಣ್ಣ ಕುರುಬರು ಚಿಕ್ಕಮ್ಮನ ಮಕ್ಕಳು, ಚಿಕ್ಕೇರು, ಚಿಕ್ಕೋರು, ಸುಮಾರಾದವರು ಎಂಬ ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. ಇವರಲ್ಲಿಯೂ ಸಾಕಷ್ಟು ಬೆಡಗುಗಳಿರುವುದನ್ನು ಗುರುತಿಸಬಹುದು. ಇವೆಲ್ಲ ಬೆಡಗುಗಳಿಗೆ ಬೀರಲಿಂಗೇಶ್ವರ, ಮೈಲಾರಲಿಂಗೇಶ್ವರ, ರಂಗನಾಥ ಸ್ವಾಮಿ, ಆಂಜನೇಯ ಸ್ವಾಮಿ ಗಂಡು ದೇವರುಗಳಾದರೆ, ಹೆಣ್ಣು ದೇವರುಗಳಾಗಿ ಕೋಟೆಮ್ಮ, ಕರಿಯಮ್ಮ, ಲಕ್ಕಮ್ಮ, ಲಕ್ಷ್ಮೀದೇವಿ, ಗಂಗಮಾಳಮ್ಮ, ಕೆರೆ ಸಂತಮ್ಮ, ಮಲಿಯಮ್ಮ, ಹೊಸೂರಮ್ಮ ಎಂಬ ಪಾರ್ವತಿ, ಲಕ್ಷ್ಮಿಯರ ಪ್ರತಿರೂಪಗಳು ನಮಗೆ ಲಭಿಸುತ್ತವೆ. ಉಣ್ಣೆಕಂಕಣ ಕುರುಬರಲ್ಲಿಯೂ ಹೆಣ್ಣು ದೇವತೆಯು ಬೆಡಗುಗಳನ್ನು ನಿರ್ಧರಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಆ ಮೂಲಕವೇ ಹೆಣ್ಣು ಗಂಡಿನ ಆಯ್ಕೆಗೆ ಅವಕಾಶ ಮತ್ತು ನಿಯಂತ್ರಿಸುವ ಎರಡೂ ಕಾರ್ಯಗಳೂ ನೆರವೇರುತ್ತವೆ.

೧. ಕಂಪಲಕುರುಬ ೨. ಅನಗಂಡಿ ಕುರುಬ ೩. ಚನ್ನನಕುರುಬ ೪. ಕಪ್ಪನ ಕುರುಬ ೫. ಕಾನನ ಕುರುಬ ೬. ಬೆಳ್ಳಿಕುರುಬ ೭. ಮರಸಾಲೆ ಕುರುಬ ೮. ದ್ಯಾವನ ಕುರುಬ ೯. ತುರುವಿನ ಕುರುಬ ೧೦. ಉದ್ದಿನ ಕುರುಬ ೧೧. ಬಾಳನ ಕುರುಬ ೧೨. ತುಪ್ಪದ ಕುರುಬ ೧೩. ಬೇವಿನ ಕುರುಬ ೧೪. ರೆಡ್ಡಿ ಕುರುಬ ೧೫. ಎಕ್ಕೆ ಕುರುಬ ೧೯. ಬೇವಿನ ಕುರುಬ. ೧೭. ಹಟ್ಟಿನ ಕುರುಬ ೧೮. ಸೆಣಬಿನಕುರುಬ

೧೯. ಕಡಗೆರೆ ಕುರುಬ ೨೦. ಹಾಲು ಕುರುಬ ೨೧. ಶಂಗೆ ಕುರುಬ ೨೨. ಬುಗುಟ ಕುರುಬ ೨೩. ಬಸ್ಳೇನ ಕುರುಬ ೨೪. ಬ್ಯಾಲನ ಕುರುಬ ೨೫. ಬಲ್ಲಾಳ ಕುರುಬ ೨೬. ಬೇಲನ ಕುರುಬ ೨೭. ಆಸಲನಕುರುಬ ೨೮. ಆಯಕುರುಬ ೨೯. ಗಂಡುಗೊಲೆ ಕುರುಬ ೩೦. ದಂಡೆ ಕುರುಬ ೩೧. ಅರ್ಧನ ಕುರುಬ ೩೨. ಅರಸುಕುರುಬ ೩೩. ಧಾರೆ ಕುರುಬ ೩೪. ಹೊನ್ನುಂಗುರ ಕುರುಬ ೩೫. ಸಿಂಗನ ಕುರುಬ ೩೬. ಕರ್ಸನ ಕುರುಬ ೩೭. ತೊಯ್ಯನ ಕುರುಬ ೩೮. ದಾರ ಕುರುಬ ೩೯. ಶಾವಂತ ಕುರುಬ ೪೦. ಜಾವ ಕುರುಬ ೪೧. ಹೊಲೊಕುಳಿ ಕುರುಬ ೪೨. ಬೆಳ್ಳಿ ಕುರುಬ ೪೩. ಬಿಜ್ಜನ ಕುರುಬ ೪೪. ಕೂಕನ ಕುರುಬ ೪೫. ಮನ್ನೆ ಕುರುಬ ೪೬. ಕೊಲ್ಲ ಕುರುಬ ೪೭. ಓರಿಕುರುಬ ೪೮. ಜಾಗರಕುರುಬ ೪೯. ಆನೆ ಕುರುಬ ೫೦. ಅಗ್ನಿಕುರುಬ ೫೧. ಅನೆಕುರುಬ ೫೨. ಕ್ಯಾಟ್ಲೆ ಕುರುಬ ೫೩. ಹಾರೆ ಕುರುಬ ೫೪. ಎಮ್ಮೆ ಕುರುಬ ೫೫. ಕೋಲ್ಕರ ಕುರುಬ ೫೬. ಬಂಡಾರಿಕುರುಬ ೫೭. ಕಪ್ಪೇನ ಕುರುಬ ೫೮. ದಂದೂರ ಕುರುಬ ೫೯. ಚಳಕುರುಬ ೬೦. ಸೊರೆ ಕುರುಬ ೬೧. ಕಗ್ಗೊಲೆ ಕುರುಬ ೬೨. ತಳ್ಳಿ ಕುರುಬ ೬೩. ಮಾದಿಗ ಕುರುಬ ೬೪. ಆರೆಕುರುಬ ೬೫. ಹೋರಿ ಕುರುಬ ೬೬. ತೋವಿನ ಕುರುಬ ೬೭. ಬೆಳ್ಳು ಕುರುಬ ೬೮. ಸಣ್ಣಕ್ಕಿ ಕುರುಬ ೬೯. ಕಡುಬ ಕುರುಬ ೭೦. ಬೀರನಕುರುಬ೭೧. ಬ್ಯಾಲಕ ಕುರುಬ ೭೨. ಹಾಯನ ಕುರುಬ ೭೩. ಕೆನ್ನನ ಕುರುಬ ೭೪. ದ್ಯಾವನ ಕುರುಬ ೭೫. ಬನ್ನೆಕುರುಬ ೭೬. ಕೆಂಗುರುಬ ೭೭. ವೀಳ್ಯದ ಕುರುಬ ೭೮. ಬೆಳ್ಳನ ಕುರುಬ ೭೯. ಕಣ್ಣಿನ ಕುರುಬ ೮೦. ಬಾಲದ ಕುರುಬ ೮೧. ಚಟ್ಟಿನಕುರುಬ ೮೨.ಮಲ್ಲಿಗೆ ಕುರುಬ ೮೩. ಮೂಡಲ ಕುರುಬ ೮೪. ಹಾಲಣ್ಣ ಕುರುಬ ೮೫. ಎಳ್ಳಣ್ಣ ಕುರುಬ ೮೬.ಹರಿವಾಣ ಕುರುಬ ೮೭. ಬಿಜ್ಜಳ ಕುರುಬ ೮೮. ಅರಸೆಲ್ಲೆ ಕುರುಬ ೮೯. ಮಾಡದ ಕುರುಬ ೯೦. ಅತ್ತಿ ಕುರುಬ ೯೧. ಹೋತನ ಕುರುಬ ೯೨. ಗಾಳಿ ಕುರುಬ ೯೩. ಜಾಡಿ ಕುರುಬ ೯೪. ತಗರು ಕುರುಬ ೯೫. ನಾಯಿಕುರುಬ ೯೬. ನಗರಕುರುಬ ೯೭. ಊಟಿ ಕುರುಬ ೯೮. ಪರ್ವತ ಕುರುಬ ೯೯.ಗಂಗಿನ ಕುರುಬ ೧೦೦. ಅಚ್ಚೆ ಕುರುಬ ೧೦೧. ಶಾಂತನ ಕುರುಬ ೧೦೨. ಬಿಜ್ಜಣಗಿ ಕುರುಬ ೧೦೩. ಹಾಲಕ್ಕಿ ಕುರುಬ ೧೦೪. ಕುಂಡೆ ಕುರುಬ ೧೦೫. ಉಂಡೆ ಕುರುಬ ೧೦೬. ಈರನಾಗನಕುರುಬ ೧೦೭. ಕಾಮಗೊಂಡ್ಲ ಕುರುಬ ೧೦೮. ಬಿಳಿಸೆಟ್ಟಿ ಕುರುಬ ೧೦೯. ಕನ್ನೈ ಕುರುಬ ೧೧೦. ಪಂಚಮಕುರುಬ ೧೧೧. ಬುಸನ ಕುರುಬ ೧೧೨. ಈರಮಲ್ಲ ಕುರುಬ ೧೧೩. ಕೊಂಗೆಂಡೆ ಕುರುಬ ೧೧೪. ಉತ್ತಮ ಕುರುಬ ೧೧೫. ಹೆಡಗೆ ಕುರುಬ ೧೧೬. ಪುತ್ತುಮ ಕುರುಬ ೧೧೭. ಹೆಬ್ಬಿ ಕುರುಬ ೧೧೮. ಬಸುರಿ ಕುರುಬ ೧೧೯. ಬಿಜ್ಜಲ ಕುರುಬ ೧೨೦. ಹುಟ್ಟು ಕುರುಬ ೧೨೧. ಬೋಚಕುರುಬ ೧೨೨. ರಾಮಕುರುಬ ೧೨೩. ಬಸ್ತು ಕುರುಬ ೧೨೪. ತುಗ್ಗಲ ಕುರುಬ ೧೨೫. ಚಿಟ್ಟಿನ ಕುರುಬ ಇನ್ನೂ ಮುಂತಾದ ಬೆಡಗುಗಳನ್ನು ಉಣ್ಣೆಕಂಕಣ ಕುರುಬರಲ್ಲಿ ಕಾಣಬಹುದಾಗಿದೆ. ಉಣ್ಣೆಕಂಕಣ ಕುರುಬರ ಬೆಡಗುಗಳು ಪ್ರಾಣಿಪಕ್ಷಿ

ಗಿಡಗಳ ಹೆಸರುಗಳಿಂದ ಕರೆಯಲಾಗುತ್ತದೆ. ಇದಕ್ಕೆ ಪ್ರಕೃತಿ ಮಧ್ಯೆ ವಾಸ ಮಾಡುತ್ತಿದ್ದ ಮೂಲ ಪುರುಷ ಉಂಡಾಡು ಪದ್ಮಣ್ಣನ ನೆಲೆಯಿಂದ ಬಂದವುಗಳಾಗಿರುವುದು.

ಹತ್ತಿಕಂಕಣ ಕುರುಬರು

ಹತ್ತಿಕಂಕಣ ಕುರುಬರ ಬೆಡಗುಗಳು ಸಾಮಾನ್ಯವಾಗಿ ನಿಸರ್ಗವಾಚಿ, ಕೃಷಿ ಚಟುವಟಿಕೆ ಹಾಗೂ ಶೌರ್ಯದ ಕುಲಚಿಹ್ನೆಗಳಾಗಿ ಕಂಡು ಬರುತ್ತವೆ. ಇದರಲ್ಲಿ ಗಂಡು ದೇವರುಗಳಾಗಿ ಮೈಲಾರ ಲಿಂಗೇಶ್ವರ ಹನುಮಂತರಾಯ, ರಂಗಾನಾಥಸ್ವಾಮಿ, ಪರಶುರಾಮ, ಸೋಮೇಶ್ವರ, ತಿರುಪತಿ ವೆಂಕಟರಮಣ, ಬೀರಲಿಂಗೇಶ್ವರ ಕಂಡುಬಂದರೆ, ಹೆಣ್ಣು ದೇವರುಗಳಾಗಿ ತುಳಸಮ್ಮ, ಪದ್ಮಾವತಿ, ಬನಶಂಕರಿ, ಅದ್ಯಾನಮ್ಮ, ಏಕನಾಥೇಶ್ವರಿ, ಯಲ್ಲಮ್ಮ, ಈರಸಿದ್ಧಮ್ಮ ಮುಂತಾದವುಗಳನ್ನು ಗುರುತಿಸಬಹುದು.

೧. ಕಂಚಿನಬಾಗಾರು ೨. ಸಾವಂತದವರು ೩. ಬಿಜ್ಜನರು ೪. ಬಳಿಬಾಗಾರು ೪. ಆರೆಯವರು ೬. ಗೌಡನಾರು ೭. ಹಾಳನಾರು ೮. ಮಾಸಲರು ೯. ಬಾಗನಾರು ೧೦.ಮಲ್ಲಿಗೇರು ೧೧. ಅರಸಿನೇರು ೧೨. ಶಂಬಿನರು ೧೩. ಅನೇರು ೧೪. ಸತ್ಯನಾರು ೧೫. ಬ್ಯಾಲನರು ೧೯. ಹುಲೇನರು ೧೭. ಪಾವಿನಾರು ೧೮. ಬೆಳ್ಳಿನಾರು ೧೯. ಬಿಲ್ಲನಾರು ೨೦. ತೆಕ್ಕಿನಾರು ೨೧. ದಾಣೇರು ೨೨. ಕೆಂಚನಾರು ೨೩. ಮಧ್ದಿನರು ೨೪. ಸೊಪ್ಪಿನವರು ೨೫. ಕರಡೇರು ೨೯. ಬಳೇ ಬಿಚ್ಯಾಲೇರು ೨೩. ಜ್ಯೋತೇರು ೨೮. ಹೊರೇರು ೨೯. ಚಿಟ್ಟಿನಾಕು ೩೦. ದೊಡ್ಡೇರು ೩೧. ಸೂರೇರು ೩೨. ಮಸ್ಕೇರು ೩೩. ಹವಳದವರು ೩೪. ಅಗ್ನೇರು ೩೫. ಹಿಟ್ಟಿನಾರು ೩೬. ಮನ್ನೇರು ೩೭. ಧಾರೇರು ೩೮. ಸಂಗೇರು ೩೯. ಗಂಡುಗಲೇರು ೪೦. ಶೆಟ್ಟೆಲ್ಲವರು ೪೧. ಮಳ್ಳಣ್ಣವರ ೪೨. ಗಂಟೆಲ್ಲವರು ೪೩. ಉಡದರ ೪೪. ಹೊನ್ನರಾಯರ ೪೫. ಹೊನ್ನಬಣ್ಣೆಲ್ಲವರ ೪೬. ಬೀಳೆಲ್ಲವರ ೪೭. ಹುಲಣ್ಣವರ ೪೮. ದಾರಿಯವರ ೪೯. ಬಸಲಿಂಗವರ ೫೦. ಮಣ್ಣೆನವರ ೫೧. ಓರೆಯವರ ೫೨. ಬಸವಣ್ಣೇರ ೫೩. ಓಡಲದವರ, ೫೪. ಹೊನ್ನ ಪೊರೆಯವರ ೫೫. ನಡುಕೋಟೇರ ೫೬. ಸೀತಾಳದವರ ೫೭. ಕರ್ಕಲ್ಲದವರ ೫೮. ಕರ್ವಿಲ್ಲದವರ ೫೯. ಎಣ್ಣೆ ಮಣ್ಣೇಲ್ಲವರ ೬೦. ಬೋಳೆಲ್ಲವರ ೬೧. ಕೋಟೆ ಗೊಳವರ ೬೨. ಹೊನ್ನ ಮಣ್ಣೆಲ್ಲವರ ೬೩. ಆಲನೇರು ೬೪. ಕಪ್ಪಿನೇರು ೬೫. ಹುಲೇರು ೬೬. ಗೌಡ್ನೇರು ೬೭. ಬನ್ನೇಲರು ೬೮. ಚಿಮ್ಮನೇರು ೬೯. ಅಲಕಟ್ಟಿಗೇರು ೭೦. ಎಣ್ಣೆಲ್ಲನೇರು ೭೧. ಬಸರಲ್ಲೇರು ೭೨. ಹೊನ್ನಲ್ಲೇರು ೭೩. ದಾತ್ಲಾವರು ೭೪. ಆಲವಾರು ೭೫. ಅಂಡೇರು ೭೯. ಸೆಣಬಿನೋರು ೭೭. ಹಟ್ಟಿನೋರು.

ಉಣ್ಣೆಕಂಕಣ ಅಥವಾ ಸಣ್ಣ ಕುರುಬರ ಪ್ರತಿ ಬೆಡಗಿನ ಮುಂದೆ ಕುರುಬ ಪದವನ್ನು ಸೇರಿಸಲೇ ಬೇಕೆಂದು ಹೇಳುತ್ತಾರೆ. ಆದರೆ ಹತ್ತಿಕಂಕಣ ಅಥವಾ ದೊಡ್ಡ ಕುರುಬರ ಬೆಡಗಿನ ಮುಂದೆ ಕುರುಬ

ಪದ ಸೇರಿಸಬಾರದೆಂದು ತಾಳಿಕಟ್ಟೆ ಕೆಂಚಪ್ಪನವರು ಹೇಳುತ್ತಾರೆ. ಹತ್ತಿಕಂಕಣ ಕುರುಬರಲ್ಲಿ ವೈವಿಧ್ಯಮಯವಾದ ಬೆಡಗುಗಳಿದ್ದು ವಿವಾಹ ಸಂದರ್ಭದಲ್ಲಿ ಇವುಗಳ ಮಹತ್ವ ಅರಿವಿಗೆ ಬರುತ್ತದೆ.

ಹಂಡೆ ಕುರುಬರು

ಕುರುಬರಲ್ಲಿ ಹಂಡೆಕುರುಬರು ಎಂಬ ಒಳಪಂಗಡವು ಇದ್ದು ಇವರನ್ನು ಕೆಲವು ಪ್ರಾಂತ್ಯಗಳಲ್ಲಿ 'ಹಂಡೆರಾವುತರು', 'ಹಂಡೆವಜೀರ' ಎಂದೂ ಕರೆಯಲಾಗುತ್ತದೆ. ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಇವರು ಹೆಚ್ಚಾಗಿ ಕುರಿಗಳನ್ನು ಸಾಕುವುದಿಲ್ಲ. ಆದರೆ ಕಂಬಳಿಗಳನ್ನು ನೇಯುತ್ತಾರೆ. ಅಲ್ಲದೆ ಆಕಳು ಎಮ್ಮೆಗಳನ್ನು ಸಾಕಿಕೊಂಡು ಹಾಲು, ಮೊಸರು, ತುಪ್ಪ ಮಾರಿ ತಮ್ಮ ಜೀವನ ಸಾಗಿಸುತ್ತಾರೆ. ಇವರೂ ಕೂಡ ವಿವಾಹ ಸಂದರ್ಭದಲ್ಲಿ ಬೆಡಗುಗಳನ್ನು ನೋಡಿಯೇ ಗಂಡು ಹೆಣ್ಣಿನ ಆಯ್ಕೆ ಮಾಡುತ್ತಾರೆ. ಇವರಲ್ಲೂ ಸ್ವಬೆಡಗು ನಿಷಿದ್ಧ. ಹಂಡೆಕುರುಬರಲ್ಲೂ ಬೆಡಗುಗಳಿದ್ದು ಈ ಕೆಳಕಂಡಂತಿವೆ.

೧. ಹಂಡೆಲಾರ ೨. ಹೊನ್ನೆಬನ್ನೆನವರ ೩. ಹೊನ್ನಕರಿಯೊಲೆ ೪. ಸಾಮಂತ ೫. ಅರಸು ೬. ರಾಜ ೭. ಗೌಡ ೮. ಸಂಗಮ ೯. ಒಡೆಯ ೧೦. ನಾಯಕ ೧೧. ಬಿಜ್ಜಣ ೧೨. ಬಲ್ಲಾಳ ಮುಂತಾದವು.

ನೊಣಬ ಕುರುಬರು

ನೊಣಬರಲ್ಲಿ ಬೆಡಗುಗಳಿಗೆ 'ಬಣ'ಗಳೆಂದು ಕರೆಯಲಾಗುತ್ತದೆ. ಪ್ರಮುಖವಾಗಿ ಎರಡು ಕುಲಗಳಿದ್ದು ಒಂದು ಮೂರು ದಿವಸದವರು, ಮತ್ತೊಂದು ನಾಲ್ಕು ದಿವಸದವರೆಂಬ ವಿಂಗಡಣೆಯಿದೆ. ಒಂದು ದೇವರನ್ನು ವಾರದಲ್ಲಿ ಪೂಜಿಸುವ ಆಧಾರದ ಮೇಲೆ ವಾರಕ್ಕೆ ಮೂರು ದಿನಗಳ ಪೂಜೆ ಮಾಡುವವರನ್ನು 'ಮೂರು ದಿವಸ'ದವರೆಂದೂ, ನಾಲ್ಕು ದಿನಗಳು ಪೂಜೆ ಮಾಡುವವರನ್ನು 'ನಾಲ್ಕು ದಿವಸ'ದವರೆಂದು ಕರೆಯಲಾಗುತ್ತದೆ. ಹಾಗೆ ಪೂಜೆ ಸಲ್ಲಿಸುವ ಕಾರ್ಯ ಅವರವರ ಕುಲದ ಸ್ಥಾನದಿಂದ ನಿರ್ಧರಿಸಲ್ಪಡುತ್ತದೆ. ಐತಿಹಾಸಿಕವಾಗಿ ನಾಲ್ಕು ದಿವಸದ ನೊಣಬರು ಆಳುವ ವರ್ಗದ ನಾಡಪ್ರಭುಗಳಾಗಿ ಮತ್ತು ನಾಡಗೌಡರಾಗಿ ಮೂರು ದಿವಸದವರಿಗಿಂತಲೂ ಉನ್ನತ ಶ್ರೇಣಿಯ ಅಂತಸ್ತನ್ನು ಹೊಂದಿದ್ದರಿಂದ ಇವರು ಶ್ರೇಷ್ಠರೆಂದು ತಿಳಿದಿದ್ದಾರೆ.

೧. ಕಂಬಿಯವರು ೨. ಪಾಕದವರು ೩. ಪತ್ರೆಯವರು ೪. ಸುಣ್ಣದವರು ೫. ಬಗ್ಗಡದವರು ಮುಂತಾದ ಬೆಡಗುಗಳು ನೊಣಬ ಕುರುಬರಲ್ಲಿ ಕಂಡುಬರುತ್ತದೆ.

ಕುಂಚಿಟಿಗ ಕುರುಬರು

ಕುಂಚಿಟಿಗ ಕುರುಬರಲ್ಲೂ ಎಲ್ಲಾ ಒಳಪಂಗಡಗಳಲ್ಲಿರುವಂತೆಯೇ ಪ್ರಾಣಿಪಕ್ಷಿ, ಗಿಡಮರ, ಎಲೆಬಳ್ಳಿ,

ದವಸಧಾನ್ಯ ರಾಜಮನೆತನ, ಸೈನ್ಯಕ್ಕೆ ಸಂಬಂಧಿಸಿದಂತಹ ಹೆಸರಿನ ಬೆಡಗುಗಳು, ವೃತ್ತಿ ಮತ್ತು ನಂಬಿಕೆ ಮೂಲದಿಂದ ಬಂದ ಬೆಡಗುಗಳು ಕಂಡು ಬರುತ್ತವೆ.

೧. ಅಂಡೇನವರು ೨. ಅಟ್ಟೇನವರು ೩. ಅಪ್ಪೇನರು ೪. ಅರಸನವರು ೫. ಅಲ್ಪೇನವರು ೬. ಅರಳೇನರು ೭. ಅಳುವನರು ೮. ಉಂಡೇನವರು ೯. ಎರಡು ಕೆರೆಯುವರು ೧೦. ಕರಡೇನವರು ೧೧. ಕರಿಕೇನವರು ೧೨. ಕಂಬಳಿಯವರು ೧೩. ಕಕ್ಕೇನವರು ೧೪. ಕಠಾರದವರು ೧೫. ಕಾಗೇನವರು ೧೬. ಕೊಗ್ಗೇನವರು ೧೭. ಗಾಳೇನವರು ೧೮. ಗುಡಿಯವರು ೧೯. ಗೋಣೇನವರು ೨೦. ಜಲಧೇನರು ೨೧. ಜರಿಯವರು ೨೨. ಜಾನಕಲ್ಲುನರು ೨೩. ಜೀರಿಗೆಯವರು ೨೪. ದುಮಗುತ್ತಿಯವರು ೨೫. ಧಾನ್ಯದವರು ೨೬. ದಸಲೇನವರು ೨೭. ಬಸಲೇನವರು ೨೮. ಬಡವನವರು ೨೯. ಬೆಳ್ಳೇನವರು ೩೦. ಮಾಣಸೇನವರು ೩೧. ಮಾಯಿನವರು ೩೨. ಮಿಸ್ಲೇನವರು ೩೩. ಯಮ್ಮೇನವರು ೩೪. ರಾಗೇನವರು ೩೫. ರಾವುತದವರು ೩೬. ಮನುಮನವರು ೩೭. ವಳಕಲ್ಲಿನವರು ೩೮. ಹುಳ್ಳೇನರು ೩೯. ಶೆಟ್ಟೇನವರು ೪೦. ಸಹಸ್ರದವರು ೪೧. ಸಾರಂಗದವರು ೪೨. ಸೂರೇನವರು ೪೩. ಹಾಲೇನವರು ೪೪. ಹಾವಿನವರು ೪೫. ಹುಳಿಯಾರರು ೪೬. ಹುತ್ತದವರು ೪೭. ಯಲೆನವರು ೪೮. ಯರ್ರೇನವರು

ಪ್ರತಿಯೊಂದು ಬೆಡಗಿನ ಹೆಸರಿನ ಮೂಲ ಅವುಗಳಿಗಿರುವ ಪರಸ್ಪರ ಸಂಬಂಧಗಳು ಆರಾಧನೆಯ ಕೇಂದ್ರಗಳು ಮನೆದೇವರುಗಳೂ ಪ್ರತಿಯೊಂದು ಬೆಡಗುಗಳಿಗಿರುವುದು ಸಹಜವಾದುದಾಗಿದೆ.

ಗೊಲ್ಲ ಕುರುಬರು

ಗೊಲ್ಲ ಕುರುಬರಲ್ಲಿ ಚಿತ್ತ ಮುತ್ತಿ ಕುಲದವರು ಚಂದಮುತ್ತಿ ಕುಲದವರು ರಾಮೇಗೌಡನ ಕುಲದವರು ಎಂಬ ಮೂರು ಪ್ರಧಾನ ಕುಲಗಳಿವೆ. "ಚಿತ್ತಮುತ್ತಿಯ ಕುಲದವರು ಸೂರ್ಯನ ಅಂಶದಿಂದ ಹುಟ್ಟಿದವರು ಎಂಬ ಪ್ರತೀತಿಯಿದೆ. ಚಂದ್ರಮುತ್ತಿ ಎಂದರೆ ಚಂದ್ರನ ಅಂಶದಿಂದ ಹುಟ್ಟಿದವರು ಎಂಬ ಪ್ರತೀತಿಯಿದೆ. ಈ ಎರಡು ಕುಲದವರು ಅಂಬೆರಾಯ ಮತ್ತು ತುಂಬೆರಾಯ ಎಂಬ ಋಷಿಗಳು ಮೂಲದಿಂದ ಬಂದವರು ಎಂಬ ಐತಿಹ್ಯವಿದೆ"[೨]. ಈ ಮೂರು ಕುಲಗಳಲ್ಲಿ ಅನೇಕ ಬೆಡಗುಗಳಿದ್ದು ಇವರೆಲ್ಲರ ಜಾತಿಯ ಮೂಲ ಒಂದೇ ಆದರೂ ಮದುವೆ ವಿಚಾರ ಬಂದಾಗ ಸ್ವ ಬೆಡಗು ಸಂಪೂರ್ಣ ನಿಷಿದ್ಧವಾಗಿದೆ. ಗೊಲ್ಲಕುರುಬರ ಬೆಡಗುಗಳನ್ನು ಕೆಳಕಂಡಂತೆ ಗುರುತಿಸಬಹುದು.

೧. ಅಜ್ಜಿಯವರ ೨. ಅರಸಿನಕಲ್ಲಿ ೩. ಆರೇನವರ ೪. ಉಪ್ಪಳರ ೫. ಎಗಡಿನವರ ೬. ಎಗಡಿಮತ್ತಿನ ೭. ಎರಿಯರ ೮. ಒಡೆಯರ ೯. ಒನಕೆಯವರ ೧೦. ಓಬೇರ ೧೧. ಕಂಬೇರ ೧೨. ಕಟ್ಟಿಗೇರ ೧೩. ಕರಡೇರ ೧೪. ಕರಡಿಬುಳ್ಳನಾಯ್ಕ ೧೫. ಕರಿಮತ್ತಿ ೧೬. ಕಲ್ಲಿಯರ ೧೭. ಕವುಕನವರ ೧೮. ಕಹಳೆಯವರ ೧೯. ಕಳ್ಳಿಯವರ ೨೦.ಕಾಳಿನವರ ೨೧. ಕ್ಯಾತನಾರು ೨೨. ಕುರಿಯವರ ೨೩. ಕೆಂಗುರಿ ೨೪. ಕೆಂಜೆಡೆಯವರ ೨೫. ಕೆಂಡಗನರು ೨೬. ಕೋಣನವರ ೨೭. ಚಂದಮತ್ತಿ, ೨೮.

ಚನ್ನೇರ ೨೮. ಚಿತ್ತಮುತ್ತಿ ೩೦. ಚಿತ್ತರ. ೩೧. ಬೀರವರ ೩೨. ಜಂಪಾಳರ ೩೩. ಜವಾದಿ ೩೪. ಜಿವಾಜಿ ೩೫. ತೋಲಯಾನೆನ ೩೬. ದೇವರೊರ ೩೭. ನಂದಿಹಳ್ಳಿಯವರ ೩೮. ನರೆನರ. ೩೯. ಪಜುಗಾವರ ೪೦. ಪದದವರ ೪೧. ಪನ್ನೇರ ೪೨. ಪಲ್ಲೇರ ೪೩. ಪಯ್ಯೊರ ೪೪. ಬಳಗೊಳಲರ, ೪೫. ಬಾಲೇನವರ ೪೬. ಬುಗುಡಿನವರ ೪೭. ಬೆಳ್ಳೋರ ೪೮. ಬೊಮ್ಮನವರ ೪೯. ಮಲಿನಾರ ೫೦. ಮೂಜಲವರ ೫೧. ಮಾನೋನು ೫೨. ಮಾರನವರ ೫೩. ಮಾಸಿನವರ ೫೪. ಮುದ್ದಾರು ೫೫. ಮೇರೆನವರ. ೫೬. ಮರಿಯೋರ ೫೭. ಮೇಶಿಯೋರ ೫೮. ರಾಮೇಗೌಡನರ ೫೯. ರಾಶಿನರ ೬೦. ಸನ್ನಮುತ್ತಿ. ೬೧. ಸನ್ನರ ೬೨. ಸಣ್ಣೇರ ೬೩. ಸೀಲುವಾಡಿ ೬೪. ಸೋಮನಕ ೬೫. ಸೋಮುತ್ತಿ ೬೬. ಹಟ್ಟಿಯವರ ೬೭. ಹಬ್ಬುನವರ ೬೮. ಹಬ್ಬೊಳ ೬೯. ಹರೇನೊರ ೭೦. ಹುರಳೀಯವರ ೭೧. ಹೂವಿನಾರು ೭೨. ಹೆಗ್ಗಣವರ ೭೩. ಹೊನ್ನೇರ

ಗೊಲ್ಲ ಕುರುಬರ ಬೆಡಗುಗಳು ಗೊಲ್ಲರಿಗೂ ಮತ್ತು ಕುರುಬ ಸಮುದಾಯಕ್ಕೂ ಇರುವ ಬಾಂಧವ್ಯವನ್ನ ತಿಳಿಸುತ್ತವೆ. ಅಲ್ಲದೆ ಕೆಲವು ಬೆಡಗುಗಳು ಕುರುಬ ಮೂಲದಿಂದಲೇ ಬಂದಿರುವುದನ್ನು ಕಾಣಬಹುದಾಗಿದೆ.

ದನಗರ ಗವಳಿಗರ ಕುರುಬರು

ಯಾವುದೇ ಸಮುದಾಯದಲ್ಲಿ ವೈವಿಧ್ಯಮಯವಾದ ಬೆಡಗುಗಳಿರುವುದು ಸಹಜ. ಅದರಂತೆ ಗವಳಿಗರ ಸಮುದಾಯದಲ್ಲಿಯೂ ಐವತ್ತಕ್ಕೂ ಹೆಚ್ಚು ಬೆಡಗುಗಳಿವೆ. ಇವರಲ್ಲಿಯೂ ಒಂದು ಬೆಡಗಿನವರು ಇನ್ನೊಂದು ಬೆಡಗಿನವರ ಜೊತೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ. ಅಂದರೆ ಇತರೆ ಸಮುದಾಯಗಳಂತೆ ಇಲ್ಲಿಯೂ ಸಗೋತ್ರ ಮದುವೆ ನಿಷೇಧವಿದೆ. ಇವರಲ್ಲಿ ಎಡಿಗೆ ಎಂಬ ಬೆಡಗಿನವರು ಇನ್ನುಳಿದ ಗವಳಿಗ ಕುರುಬರಿಗೆ ಗುರುಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಜನನ, ನಾಮಕರಣ, ಮದುವೆ ಮರಣಗಳಂಥ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಪುರೋಹಿತರ ಹಾಗೆ ಕಾರ್ಯ ನಿರ್ವಹಿಸವರು. ಹೀಗಾಗಿ ಈ ಬೆಡಗಿನವರಿಗೆ ಗವಳಿಗ ಕುರುಬರಲ್ಲಿ ಉನ್ನತವಾದ ಗೌರವ ಸ್ಥಾನವಿದೆ.

೧. ಚೋರ್ಯಾ ೨. ಗಾವಡಿ ೩. ಪಿಂಗಳಿ ೪. ಕೊಕರಿ ೫. ಸಿಂಧ್ಯಾ ೬. ವರುಕಾ ೭. ಎಡಿಗೆ ೮. ಖಾತ್ರಟ ೯. ಜೋರೆ ೧೦. ಕೋಕರೆ ೧೧. ಪಾಂಡುರಮೀಸೆ ೧೨. ತೊರವತ ೧೩. ಗೌಳಿ.

ಹೆಗ್ಗಡೆ ಕುರುಬರು/ವಾರದ ಕುರುಬರು

ಹೆಗ್ಗಡೆ/ವಾರದ ಕುರುಬರಲ್ಲಿಯೂ ಇತರೆ ಕುರುಬರ ಒಳಪಂಗಡಗಳಂತೆ ಬೆಡಗುಗಳು ಇರುವುದನ್ನು ಗಮನಿಸಬಹುದು. ಇವರಲ್ಲೂ ಸ್ವಗೋತ್ರ/ಬೆಡಗು ವಿವಾಹ ನಿಷಿದ್ಧ. ಬೇರೆ ಬೇರೆ ಬೆಡಗಿನ ಜೊತೆಗೆ ಹೆಣ್ಣು ಕೊಟ್ಟು ತರುವುದು ಇರುತ್ತದೆ. ಇವರ ಬೆಡಗುಗಳನ್ನು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

೧. ಮೇಟಿಕುಲ ೨. ಬೇಲಗುಲ ೩. ಶಾವಂತಿಗೆ ಕುಲ ೪. ಗೊಬ್ಬಳಿ ೫. ಮೊಲಗುಲ ೬. ಮದಗುಲ ೭. ರಾಣಿಗುಲ ೮. ಉಪ್ಪುಗುಲ ೯. ಕಾಗುಲ ೧೦. ಹಮ್ಮುಗುಲ ೧೧. ಅರಿಶಿನ ಗುಲ

೧೨. ಇಲ್ಲಿಗ ಗುಲ ೧೩. ಸೋಮವಾರದವರು ೧೪. ಗುರುವಾರದವರು ೧೫. ಆದಿತ್ಯ (ಭಾನು)ವಾರದವರು ಪ್ರಮುಖವಾದ ಬೆಡಗುಗಳಾಗಿವೆ.

ಕುಡುವೊಕ್ಕಲಿಗ ಕುರುಬರು

ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಗಡಿಭಾಗಗಳಲ್ಲಿ ಹೆಚ್ಚು ವಾಸ್ತವ್ಯವಿರುವ ಈ ಸಮುದಾಯದವರು ವೀರಶೈವ ಪ್ರಭಾವಿತರಾಗಿ ಇವರ ವೈವಾಹಿಕ ಸಂಬಂಧಗಳು ಆಂಧ್ರದಿಂದ ಬರುವ ಮುತ್ತುಗಾರರು ತಾವೂ ಕೂಡ ಕುಡುವೊಕ್ಕಲಿಗರೆಂದು ಹೇಳಿಕೊಳ್ಳುವುದರಿಂದ ಬೆಳೆಸಿಕೊಂಡಿದ್ದಾರೆ. ಸೊಲ್ಲಾಪುರದವರಲ್ಲಿಯೂ ಪರಸ್ಪರ ವೈವಾಹಿಕ ಸಂಬಂಧಗಳಿವೆ. ಇವರಲ್ಲಿ ಪ್ರಮುಖವಾಗಿ ನಾಲ್ಕು ಬೆಡಗುಗಳಿವೆ.

೧. ದಂಡೋತಿ (ದಂಡಾವತಿ) ೨. ತಬ್ಬಾವಾಡಿ (ತದ್ದೋಡಿ) ೩. ಎತ್ತಿರಕ ೪. ಮಿಣೆಗಚಕ ಇವುಗಳ ನಿಷ್ಪತ್ತಿ ಕುರಿತಾಗಿ ರೂಢಿಗತವಾದ ಕೆಲವು ತಿಳುವಳಿಕೆಗಳಿವೆ.

ಕುಡುವೊಕ್ಕಲಿಗ ಕುರುಬ ಸಮುದಾಯದಲ್ಲಿ ಮರುಮದುವೆಗೆ ಅವಕಾಶವಿರಲಿಲ್ಲ. ಆದರೆ ಕೆಲವು ಜನರು ಗಂಡ ತೀರಿಕೊಂಡ ಮೇಲೆ ಮಹಿಳೆಯರಿಗೆ ಮರು ಮದುವೆ ಮಾಡಿದರು. ಆಗ ಸಮಾಜದವರೆಲ್ಲ ಕೂಡಿಕೊಂಡು ದಂಡ ಕಟ್ಟಿದರು. ಆಗ ಅವರಿಗೆ 'ದಂಡಾವತಿ' ಎನ್ನಲಾಗುತ್ತದೆ. ಅದರಂತೆ ತರ್ದವಾಡಿ ನಾಡಿನಲ್ಲಿ ಇದ್ದವರು 'ತದ್ದೋಡಿ'ಗಳಾದರು. ವಿವಾಹ ಸಂದರ್ಭದಲ್ಲಿ ಚಪ್ಪರದಲ್ಲಿ ಮಿಣೆ ಹಾಕುವುದರಿಂದ 'ಮಿಣೆಗಡಕ' ಎಂಬ ಪದ ಹುಟ್ಟಿಕೊಂಡಿತು. ಇನ್ನು ಕೆಲವರು ಒಳ್ಳೆಯ ಜಾತಿಯ ಎತ್ತುಗಳನ್ನು ಕಟ್ಟಿದ್ದರಿಂದ ಇವು ಇರಕ ಇದ್ದುದರಿಂದ 'ಎತ್ತಿರಕ' ಎಂಬ ಬೆಡಗು ಉತ್ಪತ್ತಿಯಾಗುತ್ತದೆ.

ಸಾದ ಕುರುಬರು

ಕುರುಬ ಸಮುದಾಯದಲ್ಲಿದ್ದುಕೊಂಡ ಲಿಂಗಾಯತ ಪ್ರಭಾವ ಪಡೆದು, ಸಾದಲಿಂಗಾಯಿತ ಎಂದು ಹೆಸರು ಪಡೆದ ಇವರು ಮೂಲತಃ ಕುರುಬ ಸಮುದಾಯಕ್ಕೆ ಸೇರಿದವರು. ಈಗಾಗಲೆ ತಿಳಿದಿರುವಂತೆ ಅಂಡೆ, ನೊಣಬ, ಕುಡುವೊಕ್ಕಲಿಗ ಸಾದ ಕುರುಬರು ವೀರಶೈವ ಪ್ರಭಾವಿತರಾಗಿ ತಾವು ಕುರುಬರಿಗಿಂತ ಭಿನ್ನ ಅಥವಾ ನಾವು ಕುರುಬರೇ ಅಲ್ಲ ಎನ್ನುವ ಶ್ರೇಷ್ಠತೆಯ ವ್ಯಸನಕ್ಕೆ ಸಿಕ್ಕಿರುವ ಈ ಸಮುದಾಯಗಳಲ್ಲಿ ಬೆಡಗುಗಳಿವೆ. ಅವುಗಳಲ್ಲಿ ಸಾದ ಕುರುಬರಲ್ಲೂ ಕೆಳಕಂಡಂತೆ ಬೆಡಗುಗಳನ್ನು ಗುರುತಿಸಬಹುದು.

೧.ಅಡ್ನಲ್ಲೋರು ೨. ಅಟ್ಟೆಲ್ಲೋರು ೩. ಅಂಡೆಲ್ಲೋರು ೪. ಅನ್ನೆಲ್ಲೋರು ೫. ಉಳ್ಳಲ್ಲೇರು ೬. ಒನಕೆಲ್ಲೋರು ೭. ಕಗ್ಗಲ್ಲೋರು ೮. ಕರೆಕಲ್ಲೋರು ೯. ಕುಬಳದೋರು ೧೦. ಕೆಂಚನೋರು. ೧೧. ಕೊಟ್ಲೋರು ೧೨. ಕೊಡ್ಲೇಕು ೧೩. ಕೊಪ್ಪಿನೋರು. ೧೪. ಗಂಟೆಲ್ಲೋರು ೧೫. ಗೌಡ್ಲೋರು.೧೬. ಚಕ್ರಕೋಣದೋರು ೧೭. ಚಂದ್ರನೋರು ೧೮. ಚಲ್ಲೆಲ್ಲೋರು ೧೯. ಬೆಳ್ಳೇರು ೨೦. ತುಪ್ಪದೋರು. ೨೧. ದಂಡೆಲ್ಲೋರು ೨೨. ನಲ್ಲೇರು ೨೩. ಪಾಂಡದೋರು ೨೪. ಬಸಿಯಲ್ಲೋರು ೨೫. ಬಾಳಪ್ಪನೋರು

೨೬. ಬಾಳೇರು ೨೭. ಬಿಲ್ಲೇರು ೨೮. ಬೆಣ್ಣೆಲ್ಲೋರು ೨೯.ಬೆನಕಲ್ಲೋರು ೩೦. ಬೆನಕದೋರು೩೧. ಬೆಲ್ಲದೋರು ೩೨. ಬೆಳ್ಳಿಲ್ಲೋರು ೩೩. ಬೋಚೇರು ೩೪. ಮಲ್ಲಿನೋರು ೩೫. ಮಲ್ಲೆಲ್ಲೋರು ೩೬. ಮಾಣಿಕದೋರು ೩೭. ಮಾನ್ಯದೋರು ೩೮. ಮಾಲೇರು ೩೯. ಮಾಮಲೇರು ೪೦.ಮಿಳ್ಳಿಲ್ಲೋರು. ೪೧. ಮುತ್ತಿನೋರು ೪೨. ಎಳ್ಳಲ್ಲೋರು ೪೩. ಶೆಟ್ಟೆಲ್ಲೋರು ೪೪. ಸಕ್ಕರೇರು ೪೫. ಸಣ್ಣಕ್ಕೇರು ೪೬. ಸಾಲೆಲ್ಲೋರು ೪೭. ಸಾಲೇರು ೪೮. ಸುರಿಗೇರು ೪೮. ಹಟ್ಟೆಲ್ಲೋರು ೫೦. ಹಟ್ಟೇರು. ೫೧. ಹಾಲು ಕೊಡದೋರು ೫೨. ಹಾವಿನೋರು ೫೩. ಹೊನ್ನ ಹಬ್ಬಿಗೆಲ್ಲೋರು ೫೪. ಹೊನ್ನ ಬಲ್ಲೋರು.

ಮೇಲಿನ ಬೆಡಗುಗಳಿಂದ ಎಲ್ಲಾ ಜಾತಿ ಒಳಸಂಬಂಧಗಳನ್ನು ತಿಳಿಯ ಬೇಕು ಎಂದರೆ ಪ್ರತಿಯೊಂದು ಜಾತಿಯ ಬೆಡಗುಗಳನ್ನು ಹೆಕ್ಕಿ ತೆಗೆಯಬೇಕಾಗುತ್ತದೆಂಬ ಅರಿವು ಬರದಿರದು.

ದಾಸ ಕುರುಬರು

ದಾಸ ಕುರುಬರು ಮೂಲತಃ ಹತ್ತಿಕಂಕಣದವರು. ಹೀಗಾಗಿ ಇವರು ಉಣ್ಣೆಕಂಕಣ ಕುರುಬರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದಿಲ್ಲ. ಉಳಿದ ಕುರುಬರಂತೆ ಇವರಲ್ಲಿಯೂ ಸಮ ಬೆಡಗಿನವರಲ್ಲಿ ವೈವಾಹಿಕ ಸಂಬಂಧ ನಿಷಿದ್ಧ. ಕುರುಬರ ಕುಲಗುರುಗಳು ರೇವಣಸಿದ್ಧ ಸಂಪ್ರದಾಯದ ಒಡೆಯರದೂ ಸಾವಂತ್ಲರ ಎಂಬ ಬೆಡಗು. ಸಾವಂತ್ಲರ ಬೆಡಗಿನ ದಾಸ ಕುರುಬರು ರೇವಣಸಿದ್ಧ ಸಂಪ್ರದಾಯದ ಒಡೆಯರೊಂದಿಗೆ ವಿವಾಹ ಸಂಬಂಧ ಬೆಳೆಯಿಸುವುದಿಲ್ಲ. ಕಾರಣ ಬಹುಶಃ ಸಮಬೆಡಗು ಇರಬಹುದಾಗಿದೆ. ಇದಲ್ಲದೆ ಬನ್ನೇನವರ ಮತ್ತು ಮನ್ನೇನವರೂ ಒಡೆಯರೊಂದಿಗೆ ಸಂಬಂಧ ಬೆಳೆಯಿಸುವುದಿಲ್ಲ. ಇದಕ್ಕೆ ಕಾರಣ ಕೇಳಿದರೆ ಸೋದರ ಸಂಬಂಧಿಗಳಾಗುತ್ತೇವೆ ಎನ್ನುವರು. ಇವರ ವಿವಾಹ ಸಂಬಂಧ ನಿಷೇಧದ ಹಿನ್ನೆಲೆಗೆ ತಾರತಮ್ಯದ ಕಾರಣವಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಇವರಲ್ಲಿರುವ ಬೆಡಗುಗಳು ಈ ಕೆಳಕಂಡಂತಿದೆ.

೧. ಸಾವಂತ್ಲರು ೨. ಬನ್ನೇನವರ ೩. ಮನ್ನೇನವರ ೪. ಬಾಗಾನವರ.

ಇವು ಇವರಲ್ಲಿನ ಪ್ರಮುಖವಾದ ಬೆಡಗುಗಳಾಗಿವೆ. ಇವರು ತಿರುಪತಿ ತಿಮ್ಮಪ್ಪನ ಒಕ್ಕಲು ಮಕ್ಕಳಾಗಿರುತ್ತಾರೆ.

ಝುಂಡೆ ಕುರುಬರು

ಧನಗಾರರು ಮತ್ತು ಝುಂಡೆ ಕುರುಬರು ಒಂದೇ ಆಗಿದ್ದು ಕಾಲಾನುಕ್ರಮದಲ್ಲಿ ಇವೆರಡು ಸಮುದಾಯದವರು ಬೇರೆ ಬೇರೆಯಾದಂತೆ ಕಂಡುಬರುತ್ತಾರೆ. ಅಲ್ಲದೆ ಆರಾಧಿಸುವ ದೈವಗಳೂ ಕೂಡ. ಧನಗಾರರ ಮೂಲದೇವರುಗಳಾದ ವಿಠಲ ಮತ್ತು ಬೀರಪ್ಪ ಈ ಎರಡು ದೇವರುಗಳನ್ನು ಝುಂಡೆ ಕುರುಬರಲ್ಲಿ ಕೆಲವು ಬೆಡಗಿನವರು ವಿಠಲನನ್ನು ಆರಾಧಿಸಿದರೆ, ಮತ್ತೆ ಕೆಲವರು ಬೀರಪ್ಪನನ್ನು ಆರಾಧಿಸುತ್ತಾರೆ.

ಇನ್ನುಳಿದ ಕೆಲವು ಬೆಡಗಿನವರು ಖಂಡೋಬಾ, ಥರೋಬಾ, ಧೂಳೋಬಾ, ಮಾಳಿಂಗರಾಯನನ್ನು ಆರಾಧಿಸುವರು.

ಝುಂಡೆ ಕುರುಬರು ಮನೆದೇವರು ಹಾಗೂ ಬೆಡಗುಗಳು ಒಂದೇ ಆದರೆ ಮದುವೆ ಮಾಡಲು ಬರುವುದಿಲ್ಲ. ಹೆಚ್ಚಾಗಿ ರಕ್ತ ಸಂಬಂಧದಲ್ಲಿಯೆ ಮದುವೆಗಳು ನಡೆಯುವುದುಂಟು. ಸೋದರತ್ತೆಯ ಇಲ್ಲವೆ ಅಕ್ಕನ ಮಗಳನ್ನು ಮದುವೆಯಾಗುತ್ತಾರೆ. ಇಲ್ಲವೆ ಬೇರೆ ಬೆಡಗಿನ ಹೆಣ್ಣುಮಕ್ಕಳನ್ನು ಮದುವೆಯಾಗುತ್ತಾರೆ. ಇವರ ಬೆಡಗುಗಳನ್ನು ಈ ಕೆಳಕಂಡಂತೆ ಕಾಣಸಬಹುದಾಗಿದೆ. ಇದರಲ್ಲಿಯೂ ಸಮಬೆಡಗು ವಿವಾಹ ನಿಷಿದ್ಧ.

೧. ಕುಳೆಡಾರ ೨. ಕಟ್ಟೇಕಾರ ೩. ಮುಡಸಿನಕಾರ ೪. ತೌಡೆ ೫. ತಾಂದಳೆ ೬. ಲೌವಚರ ೭. ಕೊಳೆಕರ ೮. ಸೋಳಂಕರ ೧೦. ದೇವಕತೆ ೧೧. ಹಾಲಿನವರ ೧೨. ಕೋಕರೆ ೧೩. ಜಾನಕರ ೧೪. ಕಾಳೆ ೧೫. ಗಡದೆ ೧೬. ಲೋಕರೆ ೧೭. ದಾಯಗೋಡೆ.

ಇವು ಝುಂಡೆ ಕುರುಬರ ಪ್ರಮುಖವಾದ ಬೆಡಗುಗಳಾಗಿವೆ.

ಕ್ರೈಸ್ತ ಕುರುಬರು

ಕ್ರೈಸ್ತ ಕುರುಬರಿಗೆ ಮೂರ್‍ನಾಲ್ಕು ತಲೆಮಾರುಗಳ ಇತಿಹಾಸವಿದೆ. ಮೊದಲ ತಲೆಮಾರಿನಲ್ಲಿ ಹಿಂದೂ ಸಂಪ್ರದಾಯದಂತೆ ವಿವಾಹವಾಗುತ್ತಿದ್ದರು. ನಂತರ ಮಗ, ಮೊಮ್ಮಗ, ಮೊಮ್ಮಕ್ಕಳ ಕಾಲಕ್ಕೆ ಸಂಪೂರ್ಣ ಪರಿವರ್ತನೆಯಾಗುತ್ತಾ ಬಂದು ಕ್ರೈಸ್ತ ಧರ್ಮಾನುಸಾರ ವಿವಾಹ ನಡೆಯುತ್ತಿದೆ. ಇಲ್ಲಿಯೂ ಬೇರೆ ಬೆಡಗಿನ ಜೊತೆ ವಿವಾಹವಿದೆಯೋ ಹೊರತು ಸ್ವ ಬೆಡಗುಗಳ ಜೊತೆಯಲ್ಲ. ಇವರಲ್ಲಿ ಪ್ರಮುಖವಾಗಿ ಮೂರು ಬೆಡಗಿನವರು ಕಂಡು ಬರುತ್ತಾರೆ.

೧. ಕುರಿ ೨. ನಾಯ್ಕರ್ ೩. ಹುಂಡೇದರು.

ಒಕ್ಕಿ ಕುರುಬರು

ಕಾಡು ಕುರುಬರಾಗಿದ್ದುಕೊಂಡು ಬೆಟ್ಟಸಾಲಿನಲ್ಲಿ ವಾಸಮಾಡುತ್ತಿದ್ದ ಸಮುದಾಯದ ಒಂದೆರಡು ಕುಟುಂಬಗಳು ಪರ್ಯಾಯ ಬದುಕನ್ನು ಹುಡುಕಿಕೊಂಡು ಹೊರಟಾಗ ಒಕ್ಕಿ ಕುರುಬರೆಂಬ ಒಂದು ಒಳಪಂಗಡ ಸೃಷ್ಟಿಯಾಗಿರುವುದನ್ನು ತಳ್ಳಿಹಾಕುವಂತಿಲ್ಲ. ಒಕ್ಕಿ ಕುರುಬರಲ್ಲಿಯೂ ಇತರೆ ಕುರುಬರಂತೆ ಹದಿನೈದು ಬೆಡಗುಗಳನ್ನು ಗುರುತಿಸಬಹುದಾಗಿದೆ. ಇವರು ಬೆಡಗುಗಳಿಗೆ 'ಕೊಲ' ಎನ್ನುತ್ತಾರೆ.

೧. ಆರೀಗೊಲ ೨. ಕುಮಟುಗೋಲ ೩. ಅರಸುಗೋಲ ೪. ಬನ್ನಿಗೊಲ ೫. ಬೆಳ್ಳಿಗೊಲ ೬. ಸಾಮುಗೊಲ ೭. ಆನೆಗೊಲ ೮. ಒಸಕೆಗೊಲ ೯. ಸುಣ್ಣಾರುಗೊಲ ೧೦. ಒಟ್ಟುಗೊಲ ೧೧. ಸಂತೇಗೊಲ ೧೨. ಸೋಮಗೊಲ ೧೩. ಕೋಟುಗೊಲ ೧೪. ದಾರುಗೊಲ ೧೫. ಚಂದ್ರಗೊಲ

ಇವರಿಗೆ ತಮಿಳು ಪ್ರಭಾವ ಹೆಚ್ಚಾಗಿದ್ದು ಇಲ್ಲಿಯೂ ಸ್ವಗೋತ್ರ ವಿವಾಹ ನಿಷಿದ್ಧ. ಬೇರೆ ಬೇರೆ ಬೆಡಗುಗಳ ಮೂಲಕವೇ ವಿವಾಹ ಸಂಬಂಧವನ್ನು ಏರ್ಪಡಿಸುತ್ತಾರೆ. ಇವರೂ ಕೂಡ ಕಾಡುವಾಸಿಗಳಾಗಿದ್ದಾರೆ.

ಕಂಬಳಿ ಕುರುಬರು

ಕಂಬಳಿಯನ್ನೇ ತಮ್ಮ ಬದುಕಾಗಿಸಿಕೊಂಡ ಕಂಬಳಿ ಕುರುಬರು ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವಾಗ ಮುಖ್ಯವಾಗಿ ಬೆಡಗುಗಳ ಮೊರೆ ಹೋಗುತ್ತಾರೆ. ಇವರೂ ಕೂಡ ಬೇರೆ ಬೇರೆ ಬೆಡಗುಗಳ ಮಧ್ಯೆ ವಿವಾಹ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ ವಿನಾ ಸಮ ಬೆಡಗುಗಳ ಜೊತೆಯಲ್ಲ. ಇವರ ಬೆಡಗುಗಳನ್ನು ಕೆಳಕಂಡಂತೆ ಗುರುತಿಸಬಹುದಾಗಿದೆ.

೧. ಮುತ್ತೇನವರು ೨. ಲಿಂಗನಗೌಡರು ೩. ಸಕ್ಕರಿಯವರು ೪. ಲಿಂಗದವರು ೫. ಚಿಲಕದವರು ೬. ಹೊನ್ನಿನವರು ೭. ಸುರಗಿಯವರು ೮. ಕಡಗೋಲದವರು ೯. ಉದ್ದಿನವರು ೧೦. ದಟ್ಟಿಯವರು ೧೧. ಗಂಜೀಹೋಳಿನವರು ೧೨. ಕನ್ನಡಿಯವರು ೧೩. ಕಡ್ಡಿಯವರು ೧೪. ಜೀರಿಗೆಯವರು ೧೫. ಹೊನ್ನಲ್ಲೇರು ೧೬. ಕರಡಿಯವರು ೧೭. ಕಳಸದವರು ೧೮. ಹೊನ್ನಕಳಸದವರು.

ಇವು ಇವರ ಪ್ರಮುಖ ಬೆಡಗುಗಳಾಗಿವೆ.

ಆ. ಬೆಡಗುಗಳ ಐತಿಹ್ಯ

'ಐತಿಹ್ಯ'ವೂ 'ಇತಿಹಾಸ'ವೂ ಒಂದೇ ಮೂಲದ ಸಂಸ್ಕೃತ ಪದಗಳು. ಅವುಗಳ ಅರ್ಥ ಹೀಗೆ(ಹಿಂದೆ) ಇತ್ತು' ಎಂಬುದಾಗಿದೆ. ಈ ಅರ್ಥದಲ್ಲಿ ಯಾವುದೋ ಒಂದು ಊರು ಅಥವಾ ಯಾವುದೋ ಪ್ರದೇಶ, ಜನಾಂಗ ಅವುಗಳ ಬಗ್ಗೆ ಪ್ರಚಲಿತವಿರುವ ಕತೆಗಳನ್ನು ಐತಿಹ್ಯ ಎನ್ನುತ್ತೇವೆ. ಈ ಕತೆಗಳು ವಾಸ್ತವವಾಗಿ ನಿಜವಿರಬಹುದು ಅಥವಾ ನಿಜವಿಲ್ಲದಿರಬಹುದು. ಬಹುಪಾಲು ಸಂದರ್ಭಗಳಲ್ಲಿ ವಾಸ್ತವವಾಗಿ ನಡೆದ ಘಟನೆ ಮುಂದೆ ಕಲ್ಪಿತಾಂಶಗಳನ್ನು ಕಲೆಹಾಕಿಕೊಂಡು ಬೆಳೆದು ಬಂದಿರುತ್ತವೆ. ಅಥವಾ ಶುದ್ಧ ಕಲ್ಪನೆಯೇ ಅಲ್ಲಿರಬಹುದು.

ಐತಿಹ್ಯ ಎಂಬ ಪದವನ್ನು 'Legend' ಎಂಬುದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಇದಕ್ಕೆ 'ದಂತಕಥೆ' ಎಂಬ ಪರ್ಯಾಯ ಪದವೂ ಇದೆ. 'Legend' ಎಂಬುದು ಲ್ಯಾಟಿನ್ ಮೂಲವಾಗಿದ್ದು 'Things to be read' ಎಂಬರ್ಥವಿದೆ. ೧೯-೨೦ನೇ ಶತಮಾನದ ಲೆಜೆಂಡ್ ಪದವು 'ಪರಂಪರೆಯಿಂದ ಬಂದದ್ದು' ಎಂಬ ವಿಶಾಲಾರ್ಥ ಪಡೆದುಕೊಂಡಿರುವಂತೆ ಕಂಡು ಬರುತ್ತದೆ.

ಕಿಟೆಲ್‌ರವರು ತಮ್ಮ 'ಕನ್ನಡ ಇಂಗ್ಲೀಷ್ ನಿಘಂಟುವಿನಲ್ಲಿ 'Oral tradition', 'Legend' ಎಂಬುದನ್ನು ಸಮಾನಾರ್ಥವಾಗಿ ಬಳಸಿರುವುದಲ್ಲದೆ ಕನ್ನಡದಲ್ಲಿ "ಐತಿಹ್ಯ" ಎಂಬ ಪದವನ್ನೂ ಗುರ್ತಿಸಲಾಗಿದೆ."[೧೩]

ಎ.ಕೆ.ಘೋಷ್‌ರವರು ತಮ್ಮ 'Legend from Indian History' ಎಂಬ ಕೃತಿಯಲ್ಲಿ "History becomes much move exciting and interesting when we read stories of what people said and did. No one knows if those stories are true, but they are generally believed to be true, They are legends"[೧೪] ಎಂದಿದ್ದಾರೆ.

ವಸಂತಕುಮಾರ ತಾಳ್ತಜೆಯವರ ಪ್ರಕಾರ "ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಕಲ್ಪಿತ ದಂತಕತೆಯೂ ಅಲ್ಲ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಆ ನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ, ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿಬಿಡುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದ"[೧೫] ಎನ್ನುತ್ತಾರೆ.

ಐತಿಹ್ಯ ಸೃಷ್ಟಿಯಲ್ಲಿ ಕೆಲವೊಮ್ಮೆ ಉಪಲಬ್ಧ ದಾಖಲೆಗಳನ್ನು ಬಳಸಿಕೊಳ್ಳಲಾಗುತ್ತದೆ. ಆದರೆ ಇವು ನೈಜ ಚರಿತ್ರೆಯಾಗಲು ಬೇಕಾದ ವಸ್ತು ನಿಷ್ಠತೆಯಿಂದ, ವೈಜ್ಞಾನಿಕ ದೃಷ್ಟಿಕೋನದಿಂದ ದೂರ ಸರಿದು ಕಲ್ಪನೆಯ ಆಶ್ರಯವನ್ನು ಪಡೆದು ಕಾವ್ಯದ ಧಾಟಿಯಲ್ಲಿ ಸಾಗುತ್ತದೆ. ಭಾವುಕತೆ ವಿಜೃಂಭಿಸುತ್ತದೆ. ಆದಾಗ್ಯೂ ನಡೆದಿರಬಹುದಾದ ಘಟನೆಯೊಂದು ಅದರ ತಳದಲ್ಲಿ ರೂಪಾಂತರಗೊಳ್ಳದೇ ಇರುವುದುಂಟು. ಸಂಭಾವ್ಯ ಅಂಶಗಳು ಮೇಲಿಂದ ಮೇಲೆ ಸೇರುತ್ತಿದ್ದರೂ ಮೂಲಸತ್ಯ ಪೂರ್ಣ ನಾಶವಾಗಿರುವುದಿಲ್ಲ. ಕಲಾಕೃತಿಯೊಂದರಲ್ಲಿ ನಡೆಯುವಂತೆ ಪೂರ್ಣವಾಗಿ ಹೊಸಮೈಯನ್ನು ಪಡೆಯುವುದಿಲ್ಲ. ಅಂದರೆ ಪ್ರಾಚೀನ ಕಾಲದ ಚಾರಿತ್ರಿಕ ಸಂಗತಿಯೊಂದು ಕ್ರಮೇಣ ಅಪೂರ್ವವೂ ಅದ್ಭುತವೂ ಆದ ಸನ್ನಿವೇಶ ಗಳನ್ನೊಳಗೊಳ್ಳುತ್ತ ತಲೆಮಾರುಗಳ ಮೂಲಕ ಹರಿದು ಬರುವಾಗ ಒಂದು ಹಂತದಲ್ಲಿ ಐತಿಹ್ಯ ನಿಧಾನವಾಗಿ ರೂಪುಗೊಳ್ಳುತ್ತ ಸಾಗಿ ಕೊನೆಗೆ ನಿರ್ದಿಷ್ಟ ಆಕೃತಿಯನ್ನು ಪಡೆದು ಗಟ್ಟಿಯಾಗುತ್ತದೆ.

ಆ ಸಾಮಾನ್ಯವಾದ ಅಥವಾ ವಿಶಿಷ್ಟವಾದ ವ್ಯಕ್ತಿಯೊಬ್ಬನ ಸಾಧನೆಯ ನಿರೂಪಣೆಯಿದ್ದರೆ ವ್ಯಕ್ತಿ ಪ್ರಧಾನ ಐತಿಹ್ಯಗಳೆಂತಲೂ, ಸ್ಥಳಕ್ಕೆ ಪ್ರಾಧಾನ್ಯತೆ ನೀಡಿ ಪ್ರಕೃತಿ ನಿಷ್ಠವಾಗಿದ್ದರೆ ಸ್ಥಳ ಪ್ರಧಾನ ಐತಿಹ್ಯಗಳೆಂತಲೂ ಒಂದು ನಿರ್ದಿಷ್ಟ ಘಟನೆ ಪ್ರಧಾನವಾಗಿದ್ದು ಸ್ಥಳ ಮತ್ತು ವ್ಯಕ್ತಿಗಳು ಎರಡನೇ ಸ್ಥಾನದಲ್ಲಿ ಬರುತ್ತಾರೆ. ಎಷ್ಟೋ ಬಾರಿ ಒಬ್ಬ ವ್ಯಕ್ತಿಯು ಇರುವುದರ ಬದಲಿಗೆ ಜನಸಮೂಹವೇ ಇರುತ್ತದೆ. ಹೀಗಾಗಿ ಚರಿತ್ರೆಯ ಗೂಢ ಸತ್ಯವೊಂದನ್ನು ಗರ್ಭದಲ್ಲಿ ಹುದುಗಿಸಿಕೊಂಡು ಜನರನ್ನು ಸಾಂಕೇತಿಕವಾಗಿ ಆಳುತ್ತಿರುತ್ತವೆ. ಐತಿಹ್ಯದ ಅವಲಂಬನೆಯಿಲ್ಲದೆ ಸಮುದಾಯವೊಂದು ಮುಂದೆ ಸುಗಮವಾಗಿ ಸಾಗಲಾರದು. ಅದರಂತೆಯೇ

ಕುರುಬರ ಬೆಡಗುಗಳಿಗೂ ಐತಿಹ್ಯಗಳು ಕಂಡುಬಂದಿದ್ದು ಮೇಲಿನ ಮೂರು ಪ್ರಕಾರಗಳಲ್ಲಿ ಯಾವುದಾದರೂ ಒಂದು ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ.

ಕಂಪಲ ಕುರುಬರು

ಸರಿ ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಕಂಪಲಕೋಟೆಯು ಯುದ್ಧದ ಭೀತಿಗೊಳಗಾಗಿ ಅಲ್ಲಿದ್ದ ಕುರುಬ ಸಮುದಾಯದವರು ತಮ್ಮ ಮನೆ ದೇವರಾದ ಶ್ರೀ ಬೀರಲಿಂಗೇಶ್ವರನನ್ನು ತಲೆಯ ಮೇಲೆ ಹೊತ್ತು ವಲಸೆ ಹೊರಡುತ್ತಾರೆ. ಹೋಗುತ್ತಾ ಇಂದಿನ ಚಿಕ್ಕನಾಯಕನಹಳ್ಳಿ ತಾಲೂಕು ಶೆಟ್ಟೀಕೆರೆ ಹೋಬಳಿಗೆ ಬಂದು ನೆಲೆಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಶೆಟ್ಟೀಕೆರೆಯು ಒಂದು ಬ್ರಾಹ್ಮಣರ ಅಗ್ರಹಾರವಾಗಿರುತ್ತದೆ. ಕೆಳವರ್ಗದವರಾದ್ದರಿಂದ ನೆಲೆ ಸ್ಥಾಪಿಸಿಕೊಳ್ಳಲು ಅನುಮತಿ ನೀಡುವುದಿಲ್ಲ. ಕೊನೆಗೆ ಕುರುಬರ ಮುಖ್ಯಸ್ಥನೊಬ್ಬ ಬ್ರಾಹ್ಮಣರ ಹಿರಿಯರನ್ನು ಭೇಟಿ ಮಾಡಿ ಜನರಿಗೆ ಆಶ್ರಯ ನೀಡದಿದ್ದರೆ ಹೋಯಿತು. ಈ ದೇವರನ್ನು ಪ್ರತಿಷ್ಠಾಪಿಸಿಕೊಳ್ಳಲು ಸ್ವಲ್ಪ ಜಾಗ ನೀಡಬೇಕೆಂದು ವಿನಂತಿಸುತ್ತಾರೆ. ಆಗ ಬ್ರಾಹ್ಮಣರ ಹಿರಿಯರೆಲ್ಲ ಒಂದು ಷರತ್ತನ್ನು ವಿಧಿಸುತ್ತಾರೆ. ಅದೇನೆಂದರೆ ಆರುತಿಂಗಳವರೆಗೆ ಮಾತ್ರ ಈ ದೇವರನ್ನು ಪ್ರತಿಷ್ಠಾಪಿಸುವುದು ನಂತರ ಇಲ್ಲೇನಾದರೂ ಈ ದೇವರಿದ್ದರೆ ಇದನ್ನು ತೆಗೆದು ಎಸೆಯುತ್ತೇವೆ ಎಂದು ಹೇಳುತ್ತಾರೆ. ಅದರಂತೆ ಕುರುಬರು ಒಪ್ಪಿ ಸದ್ಯ ದೇವರ ಪ್ರತಿಷ್ಠಾಪನೆಗಾದರೂ ಜಾಗ ಸಿಕ್ಕಿತಲ್ಲ ಎಂದು ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ.

ಆರು ತಿಂಗಳಾದರೂ ದೇವರನ್ನು ತೆಗೆದುಕೊಳ್ಳಲಾಗುವುದಿಲ್ಲ. ಆಗ ಬ್ರಾಹ್ಮಣರ ಉಪಟಳ ಜಾಸ್ತಿಯಾಗುತ್ತದೆ. ಕೊನೆಗೆ ದೇವರ ಸಮೇತ ವಲಸೆ ಬಂದ ಜನರು ಶೆಟ್ಟೀಕೆರೆಯಿಂದ ಎರಡು ಕಿಲೋಮೀಟರ್ ದೂರದಲ್ಲಿ ಮೂರುಕಡೆ ನೀರಿರುವ, ಕರೀಕಲ್ಲುಗಳಿಂದ ಆವೃತ್ತವಾದ ಒಂದು ಸುರಕ್ಷಿತವಾದ ಜಾಗವನ್ನು ಆಯ್ಕೆ ಮಾಡಿಕೊಂಡು ವಾಸಿಸಲು ಆರಂಭಿಸುತ್ತಾರೆ. ಆ ಊರಿನ ಹೆಸರೇ ಕರೇಕಲ್ಲು ಪಾಳ್ಯ ಎಂಬುದಾಗಿಯೂ, ಮುಂದೆ ಅಜ್ಜೇನಹಳ್ಳಿ ಎಂಬ ಸ್ಥಳನಾಮ ಪಡೆದುಕೊಳ್ಳುತ್ತದೆ. ಅಲ್ಲಿ ವಾಸಿಸುವ ಕುರುಬರೆಲ್ಲರೂ 'ಕಂಪಲು ಕುರುಬರು' ಎಂಬ ಹೆಸರನ್ನು ಪಡೆಯುವರು. ಈ ಬೆಡಗೇ ಪ್ರಸ್ತುತ ಅಧ್ಯಯನಕಾರನ ಬೆಡಗೂ ಹೌದು. ಅದೇ ಸಂದರ್ಭದಲ್ಲಿ ಬನಶಂಕರಿ ದೇವಿಯನ್ನು ಹೊತ್ತು ತಂದ ಮತ್ತೊಂದು ಕುರುಬರ ಬೆಡಗು ಆ ಊರಿಗೆ ಪ್ರವೇಶ ಪಡೆಯುತ್ತದೆ. ಇವರು ಆನೆಗೊಂದಿಯಿಂದ ಬಂದವರು ಎಂದು ಹೇಳಿಕೊಳ್ಳುವುದರಿಂದ ಇವರ ಬೆಡಗು 'ಅನಗಂಡಿ' ಕುರುಬರು ಎಂದಾಗುತ್ತದೆ. ಈ ರೀತಿಯಲ್ಲಿ ಒಂದು ಬೆಡಗು ಹುಟ್ಟಿಕೊಳ್ಳಲು ಅವಕಾಶ ನೀಡಿದ ಐತಿಹ್ಯವೂ ಚಾರಿತ್ರಿಕ ಮಹತ್ವವೂ ಆದ ಘಟನೆ ಜರುಗಿದೆ ಇಂತಹುದೇ ಅನೇಕ ಘಟನೆಗಳು ಜರುಗಿ ಬೆಡಗುಗಳ ಐತಿಹ್ಯ ಉಂಟಾಗಿರಬಹುದು.

ಬ್ಯಾಲನ ಕುರುಬರು

ಒಂದಾನೊಂದು ಕಾಲದಲ್ಲಿ ದ್ಯಾವೇಗೌಡನೆಂಬ ಕುರುಬಗೌಡನಿದ್ದನು. ಅವನಿಗೆ ಸುಂದರವಾದ ಏಳು ಜನ ಹೆಣ್ಣುಮಕ್ಕಳಿದ್ದರು. ಅವರೆಲ್ಲರೂ ತಮ್ಮ ಚೆಲುವು ಲಾವಣ್ಯಗಳಿಗೆ ಸುತ್ತ ಏಳೂರಿನ ಜನರ ಕಣ್ಣಲ್ಲಿ ನೆಲಸಿದ್ದರು. ಹೀಗಾಗಿ ದ್ಯಾವೇಗೌಡ 'ಹೆಣ್ಣುಮಕ್ಕಳ ದ್ಯಾವೇಗೌಡ' ಎಂದೇ ಜನ ಕರೆಯುತ್ತಿದ್ದರು. ದ್ಯಾವೇಗೌಡನಿಗೆ ಗಂಡು ಮಕ್ಕಳಿಲ್ಲದಿದ್ದರೂ ಆ ಕೊರಗನ್ನು ಹೆಣ್ಣುಮಕ್ಕಳು ಮರೆಸಿದ್ದರು. ಒಬ್ಬಳು ಕುರಿಗೆ, ಹನಿಗೆ, ಎಮ್ಮೆಗೆ, ಹೊಲಕ್ಕೆ, ನೀರಿಗೆ ಮನೆಗೆ ಹಾಗೂ ಕಿರಿಯವಳಾದ ಚಿಕ್ಕ ಬೀರಮ್ಮ ಹಾಲಿಗೆ ನೇಮಕವಾಗಿದ್ದರು. ಎಂದಿನಂತೆ ಅವರವರ ಕೆಲಸ ಮಾಡಿಕೊಂಡು ಸಂತೋಷದಿಂದ ಇರುವಾಗ ಒಂದು ದಿನ ದ್ಯಾವೇಗೌಡನ ಹಸುವೊಂದು ಹಿಂಡಿನಿಂದ ತಪ್ಪಿಸಿಕೊಂಡು ಬಹುದೂರ ಹೋಗಿ ಮುಸ್ಲಿಂ ದೊರೆ ನಿಜಾಮನಿಗೆ ಸೇರಿದ ಕುದುರೆ ಲಾಯಕ್ಕೆ ನುಗ್ಗಿ ಹಿಗ್ಗಿನಿಂದ ಕುಣಿದಾಡುತ್ತಿತ್ತು. ಯಾರೊಬ್ಬರಿಂದಲೂ ಹಿಡಿದು ಕಟ್ಟಲು ಸಾಧ್ಯವಾಗದೆ ನಾನಾ ಪ್ರಯತ್ನ ಮಾಡಿ ಸುಸ್ತಾಗಿದ್ದರು.

ದ್ಯಾವೇಗೌಡನ ಎಲ್ಲಾ ಹೆಣ್ಣುಮಕ್ಕಳು ಅವರವರ ಕೆಲಸದಲ್ಲಿ ತಲ್ಲೀನರಾಗಿದ್ದರು. ದ್ಯಾವೇಗೌಡರು ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದನು. ವಿಷಯ ತಿಳಿದ ಚಿಕ್ಕಬೀರಮ್ಮ ಹಸುವಿರುವಲ್ಲಿಗೆ ಹೋಗುತ್ತಾಳೆ. ಹೋಗಿ ನೋಡಿದರೆ ಮೂಗುದಾರವಿಲ್ಲದ ಹಸು. ಸುತ್ತ ಮುತ್ತ ಹಸು ಕಟ್ಟಲು ಏನೂ ಸಿಗದಿದ್ದಾಗ ಕಡೆಗೆ ತನ್ನ ಮುಡಿಯ ಉದ್ದನೆಯ ಕೂದಲಿನಿಂದ ಹಸುವಿನ ಕೊರಳನ್ನು ಕಟ್ಟಿಕೊಂಡು ಹೋಗುತ್ತಿರುತ್ತಾಳೆ. ಅವಳ ಸೌಂದರ್ಯ, ಶಕ್ತಿ ಸಾಮರ್ಥ್ಯವನ್ನು ಸ್ವತಃ ನಿಜಾಮನೆ ಕಣ್ಣಾರೆ ಕಂಡು ಬೆರಗಾಗುತ್ತಾನೆ. ಅವಳ ಬಗ್ಗೆ ವಿಚಾರಿಸಿ ಅವಳನ್ನು ತಾನು ವಿವಾಹವಾಗುವುದಾಗಿಯೂ, ಮದುವೆಯಾಗಲು ಒಪ್ಪದಿದ್ದರೆ ಕೊಲ್ಲುವುದಾಗಿ ಹೇಳಿ ಕಳುಹಿಸುತ್ತಾನೆ.

ದ್ಯಾವೇಗೌಡ ಆಗ ಚಿಂತೆಗೊಳಗಾಗುತ್ತಾನೆ. ನಿಜಾಮನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟರೆ ಹಾಲಿನಂತಹ ಕುಲ ಹಾಳಾಗುತ್ತದೆ ಎಂದು ಭಾವಿಸಿ ಒಂದು ಉಪಾಯ ಹೂಡುತ್ತಾನೆ. ಅದರಂತೆ ದೊರೆಗೆ ತನ್ನ ಮಗಳನ್ನು ನಿಜಾಮನಿಗೆ ಮದುವೆ ಮಾಡಿಕೊಡುವುದಾಗಿ ಹೇಳಿಕಳುಹಿಸುತ್ತಾನೆ. ನಡುಮನೆಯಲ್ಲಿ ಆಳವಾದ ಹೊಂಡವೊಂದನ್ನು ತೆಗೆಸಿ ಅರ್ಧಭಾಗ ಸುಣ್ಣವನ್ನು ತುಂಬಿಸಿ ಉಳಿದರ್ಧ ಭಾಗ ನೀರು ತುಂಬಿಸಿ ಅದರ ಮೇಲೆ ಗೊತ್ತಾಗದ ಹಾಗೆ ಮರದ ಮಣೆ ಹಾಕುತ್ತಾರೆ. ಅದು ಗಂಡು ಕುಳಿತುಕೊಳ್ಳುವ ಹಸೆಮಣೆಯಾಗಿದ್ದು ಸಿಂಗಾರಗೊಳಿಸಲಾಗುತ್ತದೆ.

ದೊರೆ ಮತ್ತು ಅವನ ಸೈನಿಕರು ದ್ಯಾವೇಗೌಡನ ಮನೆಯ ಮುಂದೆ ಬಂದು ನಿಲ್ಲುತ್ತಾರೆ. ಮನೆಯ ಒಳಗಡೆ ಕರ್ಪೂರ, ಗಂಧದಕಡ್ಡಿ, ಸಾಂಬ್ರಾಣಿ ಹೊಗೆ ಹಾಕಿ ಗಂಟೆಯನ್ನೂ ಬಾರಿಸುತ್ತಿರುತ್ತಾರೆ. ಕೊನೆಗೆ ದೊರೆಯೊಬ್ಬನೇ ಒಳಗೆ ಬರಬೇಕೆಂದೂ, ಮದುವೆ ಶಾಸ್ತ್ರ ಮಾಡಬೇಕೆಂದೂ ಕರೆಯುತ್ತಾರೆ. ಚಿಕ್ಕ ಬೀರಮ್ಮನನ್ನು ಗುಂಡಿಯ ಪಕ್ಕದ ಮಣೆಯಲ್ಲಿ ಕುಳ್ಳಿರಿಸಿ ಸುಣ್ಣದ ಹೊಂಡದ ಮೇಲಿನ ಹಸೆ

ಮಣೆಗೆ ನಿಜಾಮನನ್ನು ಕರೆತರುತ್ತಾರೆ. ಈ ರೀತಿ ಒಳಬಂದ ನಿಜಾಮನಿಗೆ ಸಾಂಬ್ರಾಣಿಯ ಹೊಗೆ ಹಾಗೂ ಮಂದಬೆಳಕಿನಲ್ಲಿ ಹುಡುಗಿಯ ಮುಖ ಅವಳ ಪಕ್ಕದಲ್ಲಿರುವ ಖಾಲಿ ಹಸೆಮಣೆ ಮಾತ್ರ ಕಾಣುತ್ತದೆ. ಆಸೆಯಿಂದ ಬಂದ ನಿಜಾಮ ಮಣೆಯ ಮೇಲೆ ಕೂರುತ್ತಲೇ ಸುಣ್ಣದ ಹೊಂಡದಲ್ಲಿ ಮುಳುಗಿ ಹೋಗುತ್ತಾನೆ. ನಂತರ ಹೊಂಡದ ಬಾಯಿಗೆ ಅಗಲವಾದ ಮರದ ಹಲಗೆಯಿಟ್ಟು ಗುಂಡುಕಲ್ಲು ಹೇರುತ್ತಾರೆ. ಬೆಕ್ಕಿನ ಕತ್ತಿಗೆ ಗಂಟೆ ಕಟ್ಟಿ ಒಂದು ಮರದ ಕಡ್ಡಿಗೆ ಕಟ್ಟುತ್ತಾರೆ. ಅದರ ಸುತ್ತಲೂ ಗಂಧದ ಕಡ್ಡಿ ಹಚ್ಚಿಡುತ್ತಾರೆ. ಬೆಕ್ಕು ತಪ್ಪಿಸಿಕೊಳ್ಳಲು ಹೋದಂತೆಲ್ಲಾ ಗಂಧದ ಕಡ್ಡಿ ಬೆಂಕಿ ತಗುಲಿ ಜೋರಾಗಿ ಕುಣಿಯುತ್ತಿರುತ್ತದೆ. ಆಗ ಕೊರಳಲ್ಲಿನ ಗಂಟೆ ಜೋರಾಗಿ ಬಡಿದುಕೊಳ್ಳುತ್ತದೆ. ಹೊರಗಿದ್ದ ಸೈನಿಕರು ತಮ್ಮ ರಾಜನಿಗೆ ಮದುವೆ ಶಾಸ್ತ್ರ ನಡೆಯುತ್ತಿದೆ ಎಂದು ತಿಳಿಯುತ್ತಾರೆ.

ಆದರೆ ಇತ್ತ ದ್ಯಾವೇಗೌಡ ಮತ್ತು ಅವರ ಹೆಣ್ಣುಮಕ್ಕಳು ಸಮೇತ ಹಿತ್ತಲ ಕಡೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮನೆಯ ಹಿತ್ತಲಿನ ಬೇಲಿ ಅವರಿಗೆ ಅಡ್ಡವಾಗಿರುತ್ತದೆ. ಆಗವರು ಬೇಲಿ ಕಿತ್ತು ಆ ರಾಜ್ಯದಿಂದ ತಪ್ಪಿಸಿಕೊಂಡು ಬಂದವರಾದ್ದರಿಂದ 'ಬೇಲನಕುರುಬರು' ಎಂದೂ, ಗ್ರಾಮೀಣರ ಬಾಯಲ್ಲಿ ಇದು "ಬ್ಯಾಲನಕುರುಬರು" ಎಂಬ ಬೆಡಗಾಗಿರುವುದನ್ನು ಕಾಣಬಹುದು. ಬೇಲಿ ಇವರ ಕುಲ ಮೂಲ ಚಿಹ್ನೆ. ಕುಲದಿಂದ ಕುಲಕ್ಕೆ ಬೆಡಗುಗಳಿಂದ ಬೆಡಗುಗಳಿಗೆ ಐತಿಹ್ಯದ ಕಥೆಗಳು ಭಿನ್ನವಾಗಿರುತ್ತದೆ.

ಹಾವಿನ ಕುರುಬರು

ಹಾವಿನ ಕುರುಬರ ಮೂಲ ದೆಹಲಿ ಎಂತಲೂ, ಅಲ್ಲಿಂದ ವಲಸೆ ಬಂದು ಚಿತ್ರದುರ್ಗ ಜಿಲ್ಲೆಯ ಕೋಟೆಕಲ್ಲುಪುರದಲ್ಲಿ ನೆಲಸುತ್ತಾರೆ. ಇಲ್ಲಿಯೂ ಪಾಳೆಯಗಾರರ ಹಾವಳಿ ತಡೆಯಲಾರದೆ ಶಿವನಿ ಹೋಬಳಿ ಡಣಾಯಕಪುರದ ಹತ್ತಿರವಿರುವ ಕೊಪ್ಪದಹಳ್ಳಿಯಲ್ಲಿ ನೆಲಸಿದರೆಂದು ತಿಳಿದುಬರುತ್ತದೆ. ಇದರಿಂದಾಗಿ ಈಗಲೂ ರಂಗನಾಥಸ್ವಾಮಿ ದೇವಸ್ಥಾನವನ್ನು ಕಾಣಬಹುದಾಗಿದೆ. ಇವರಲ್ಲಿ ಮೂರು ಜನ ಅಣ್ಣ ತಮ್ಮಂದಿರು ಕೋಟೆಕಲ್ಲು ಪುರದಿಂದ ವಿಭಾಗವಾಗಿ ಬರುವಾಗ ದೇವರ ಪಲ್ಲಕ್ಕಿ ಒಬ್ಬನಿಗೂ, ಮತ್ತೊಬ್ಬನಿಗೆ ಭೂತವನ್ನು ಇನ್ನೊಬ್ಬನಿಗೆ ಬೆಳ್ಳಿಯ ಹಾವನ್ನು ಹಂಚಿಕೆ ಮಾಡಿಕೊಡಲಾಯಿತು. ಈ ಬೆಳ್ಳಿಯ ಹಾವನ್ನು ಪಡೆದವನ ಕುಲಮೂಲದವರೇ ಮುಂದೆ 'ಹಾವಿನ ಕುರುಬರು' ಎಂದು ಹೆಸರು ಪಡೆಯುತ್ತಾರೆ. ಇವರಿಗೆ ಹಾವು ಕುಲಮೂಲ ಚಿಹ್ನೆಯಾಗುತ್ತದೆ.

ಬಿಜ್ಜನ ಕುರುಬರು

ಬಿಜ್ಜನ ಕುರುಬರು ಅನುವನಹಳ್ಳಿ, ಗೋಸಿಕೆರೆ ಸಿದ್ಧಯ್ಯನ ಭಕ್ತರು ಉತ್ತರದಿಂದ ಬಂದ ಏಳು ಜನ ಅಣ್ಣತಮ್ಮಂದಿರಲ್ಲಿ ಈಗಿನ ಬೇಜಾರತ್ ಗ್ರಾಮವೆಂದೇ ಕರೆಯಲಾದ ವೀರಾಪುರದಲ್ಲಿ ನೆಲಸಿ ತನ್ನ ವಂಶ ಬೆಳೆಸಿ ಉಳಿಸಲು ವಂಶಾವಳಿಯ ಹಿರಿಯನಾಗಿ ಬಿಜ್ಜಣನೆಂಬುವನು ಉಳಿದು ಬರುತ್ತಾನೆ. ಇವರಿಗೆ 'ಕೂಕನ ಕುರುಬರು' ಎಂಬ ಪರ್ಯಾಯ ಹೆಸರೂ ಇದೆ. ಅಲ್ಲದೆ ಇವರಿಗೆ 'ನೀರಾಮೃದವರು'

ಎಂಬ ಕುಹಕದ ಮಾತೂ ಇವರಿಗೆ ಬಂದಿದೆ. ಒಮ್ಮೆ ಸಮಾರಾಧನೆಯೊಂದರಲ್ಲಿ ಸಾರು ಕಡಿಮೆಯಾದಾಗ ಅದನ್ನು ಹೆಚ್ಚಿಸಲು ನೀರನ್ನು ಬೆರಸಿ ಉಣ ಬಡಿಸಿದ್ದರಿಂದ 'ನೀರಾಮೃದವರು' ಎಂಬ ಹೆಸರನ್ನು ಪಡೆಯುತ್ತಾರೆ.

ಕೆಂಗುರುಬರು

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಬಾಣಾವರದ ಹತ್ತಿರವಿರುವ ಕೆಂಗೂರಿನಲ್ಲಿ ವಾಸಮಾಡುವುದರಿಂದ ಕೆಂಗುರುಬರು ಎಂದು ಹೆಸರು ಬಂದಿದೆ ಎಂದು ಹೇಳುವರು. ಅಲ್ಲದೆ ಇವರು ವಿವಾಹ ಸಂದರ್ಭದಲ್ಲಿ ಕೆಂಪಾದ ಕುದುರೆಯ ಮೇಲೆ ವರನನ್ನು ಕೂರಿಸಿಕೊಂಡು ಮೆರವಣಿಗೆ ಬರುವುದರಿಂದಲೂ 'ಕೆಂಗುರುಬರು' ಎಂದು ಹೆಸರಾಗಿದೆ ಎಂದು ತಿಳಿದು ಬರುತ್ತದೆ. ಇತರ ಕುರುಬರಂತೆ ಇವರ ನಡಾವಳಿಕೆಯಿದ್ದರೂ ಯಾವುದೇ ಗುಡಿಕಟ್ಟಿಗೂ ಸೇರಿರುವುದಿಲ್ಲ.

ತಾಳಿಕಟ್ಟದವರು

'ಗೊಲ್ಲ ಕುರುಬರಲ್ಲಿ' ಕಳ್ಳೇರು ಎಂಬ ಬೆಡಗಿದೆ. ಇದರಲ್ಲಿ ಚಿತ್ತಮುತ್ತಿ-ಮಾರಮುತ್ತಿ ಎಂಬ ಅಣ್ಣತಮ್ಮಂದಿರಿದ್ದರು. ಇವರು ಒಬ್ಬ ಸಾಹುಕಾರನ ಬಳಿ ಸಾಲ ಮಾಡಿದ್ದರು. ಸಾಲ ತೀರಿಸಲಿಕ್ಕಾಗದೆ ಬೆಳೆದ ಬಡ್ಡಿಯನ್ನು ನೀಡಲಾಗದೆ ಸಾಲಗಾರ ಸೋದರರು ಚಿಂತಾಕ್ರಾಂತರಾದರು. ಕೊನೆಗೊಮ್ಮೆ ಹೆಂಡತಿಯರ ಒಡವೆಗಳನ್ನು ಸಾಲಕ್ಕಾಗಿ ತೂಕಕ್ಕಿಟ್ಟಾಗ ಮೂಲ ಹಣಕ್ಕೆ ಸರಿಹೊಂದದೆ ಒಂದಷ್ಟು ಹಣ ಸಾಲದೆ ಬಂದಿತು. ವಿಧಿಯಿಲ್ಲದೆ ತಮ್ಮ ತಮ್ಮ ಹೆಂಡತಿಯರ ತಾಳಿಗಳನ್ನು ಕೇಳಿದಾಗ ಹಿರಿಯನ ಹೆಂಡತಿಯಾದ ಚಿತ್ತಮುತ್ತಿಯ ಹೆಂಡತಿ ತಾಳಿ ಬಿಚ್ಚಿಕೊಟ್ಟರೆ ಕಿರಿಯ ಮಾರಮುತ್ತಿಯ ಹೆಂಡತಿ ತಾಳಿಬಿಚ್ಚಿ ಕೊಡಲು ನಿರಾಕರಿಸುತ್ತಾಳೆ. ಅಂದಿನಿಂದ ಉಂಟಾದ ಅಣ್ಣ-ತಮ್ಮಂದಿರ ಒಡಕು ಸ್ಥಿರವಾಗಿ ದೂರದೂರವಾಗುತ್ತಾರೆ. ಸಾಲದ ದಂಡಕ್ಕೆ ಒಳಗಾದ ಚಿತ್ತಮುತ್ತಿ ವಂಶದವರು ತಾಳಿ ಕಟ್ಟುವ ಸಂಪ್ರದಾಯವನ್ನು ಕೈ ಬಿಟ್ಟದ್ದರಿಂದ "ತಾಳಿಕಟ್ಟದವರು" ಎಂಬ ಬೆಡಗು ಉತ್ಪತ್ತಿಯಾಯಿತೆಂಬ ಕುತೂಹಲಕರ ಐತಿಹ್ಯವೊಂದು ಹುಟ್ಟಿಕೊಳ್ಳುತ್ತದೆ.

ಶೀಲವಾಡೇರು

ಶೀಲವಾಡೇರು ಎಂಬ ಹೆಸರು ರೂಪುಗೊಂಡ ಬಗೆ ತುಂಬಾ ಕುತೂಹಲಕರವಾಗಿದೆ. ಊರೂರು ಸಂಚಾರದಲ್ಲಿದ್ದ ಪಾತೇದೇವರು ಹೂವಿನ ಹೊಳೆ (ಹಿರಿಯೂರು ತಾ.) ಗ್ರಾಮದಲ್ಲಿ ಒಂದು ರಾತ್ರಿ ನೆಲೆ ನಿಲ್ಲುತ್ತದೆ. ಮರುದಿನ ಮುಂಜಾನೆ ದೇವರ ಪೂಜೆಗಾಗಿ ಪೋಲಮುತ್ತಿ ಎಂಬ ಗೊಲ್ಲ ಪೂಜಾರಿ ಲಿಂಗಾಯತರ (ಶೀಲವಂತರು) ಬಸಪ್ಪನವರ ತೋಟಕ್ಕೆ ಹೋಗುತ್ತಾನೆ. ಬಸಪ್ಪ ಹೂ ಕೊಡಲು ನಿರಾಕರಿಸಿ ಪೋಲಮುತ್ತಿಯನ್ನು ಕಟ್ಟಿಹಾಕುತ್ತಾನೆ. ಇದನ್ನರಿತ ಪಾತೆದೇವರು ಉರಿಗಣ್ಣು ಬಿಡಲಾಗಿ ಬಸಪ್ಪನ ತೋಟ ಕ್ಷಣಾರ್ಧದಲ್ಲಿ ನಾಶವಾಗುತ್ತದೆ. ನಿಜ ಪರಿಸ್ಥಿತಿಯನ್ನು ಅರಿತ ಲಿಂಗಾಯತರ ಬಸಪ್ಪ ದೇವರಿಗೆ ಶರಣಾಗಿ ತಪ್ಪೊಪ್ಪಿಗೆ ನೀಡಿ ತನ್ನ ಹಿರಿಮಗ ಮತ್ತು ಸೊಸೆಯನ್ನು ಪಾತೇದೇವರಿಗೆ ಬಿಟ್ಟುಕೊಡುವುದಾಗಿ

ಭಾಷೆ ಕೊಡುತ್ತಾನೆ. ಅಂದಿನಿಂದ ನಿರಂತರವಾಗಿ ಲಿಂಗಾಯತ ಬಸಪ್ಪನ ಮುಂದಿನ ಪೀಳಿಗೆ ಲಿಂಗಾಯತ ನಡಾವಳಿ ಬಿಟ್ಟುಕೊಟ್ಟು ಗೊಲ್ಲರ ನಡಾವಳಿಯನ್ನು ರೂಢಿಸಿಕೊಂಡು 'ಶೀಲವಾಡೇರು' ಎಂಬ ಬೆಡಗಿನ ಐತಿಹ್ಯವೊಂದು ಕಂಡು ಬರುತ್ತದೆ.

ಅಂಡೇನವರು/ಹಂಡೇನವರು

ವೃತ್ತಿಮೂಲದಿಂದ ಅಥವಾ ಮನೆಯಲ್ಲಿ ಬಳಸುವ ವಸ್ತುವಿನಿಂದ ಈ ಬೆಡಗು ವಿಂಗಡಿಸಲ್ಪಟ್ಟಿದೆ. ಅಂಡೆ/ಹಂಡೆ ಎಂಬುದು ಮನೆಯಲ್ಲಿ ನೀರು ಕಾಯಿಸಲು ಬಳಸುವ ಬಹುದೊಡ್ಡ ಪಾತ್ರೆ. ಇದಲ್ಲದೆ ಹೈನುಗಾರಿಕೆ ಮಾಡುತ್ತಿದ್ದವರು ಹಾಲನ್ನು ಮಾರಲು ಬಳಸುತ್ತಿದ್ದ ಅಳತೆ ಮಾಡುವ ಬಿದಿರುವಿನ ಒಂದು ಭಾಗ. ಈ ಮೂಲದಿಂದ ಹುಟ್ಟಿದವರೇ ಅಂಡೇನವರು/ಹಂಡೇನವರು ಎನ್ನುತ್ತಾರೆ. ಅಂಡೆ/ಹಂಡೆ ಎಂಬುದು ಕುಲದ ಚಿಹ್ನೆಯಾಗಿ ಬಳಕೆಯಾಗುತ್ತದೆ.

ಕಂಬಳಿಯುವರು

ಕಂಬಳಿಯನ್ನು ತಯಾರಿಸುವ ವೃತ್ತಿಯನ್ನು ಮಾಡುವವರಿಂದಲೋ ಅಥವಾ ವಿವಿಧ ಶಾಸ್ತ್ರಗಳಲ್ಲಿ, ಹೊದೆಯಲು, ಹಾಸಲು ಕಂಬಳಿಯನ್ನು ಬಳಸುವವರಿಂದಲೋ ಈ ಬೆಡಗು ಹುಟ್ಟಿಕೊಂಡಿದೆ. ವೃತ್ತಿಮೂಲದ ಕಂಬಳಿಯವರಿಗೆ ದಾಯಾದಿ ಬೆಡಗುಗಳಿದ್ದು, ಅಡ್ಡದಾಯಾದಿಗಳು ಯಾರೂ ಇರುವುದಿಲ್ಲ. ಕಂಬಳಿಯ ಬೆಡಗು ಕುಂಚಿಟಿಗ ಕುರುಬರಲ್ಲಿಯೂ ಕಂಡು ಬಂದಿದ್ದು, ಇವರಿಗೆ ಮದ್ದಮ್ಮ ತಾಯಿಯು ಮನೆದೇವತೆಯಾಗಿದ್ದಾಳೆ. ಇದು 'ಕಂಬಳಿ' ಬೆಡಗಿನ ಐತಿಹ್ಯವಾಗಿದ್ದು ವೃತ್ತಿಮೂಲವೋ ಅಥವಾ ವಸ್ತು ಬಳಕೆಯಿಂದಲೋ ಹುಟ್ಟಿಕೊಂಡದ್ದಾಗಿದೆ.

ಬೆಳ್ಳಿನೋರು

ಆಭರಣ ತಯಾರಿಕೆಯಲ್ಲಿ ಬಳಸುವ ಖನಿಜ ಬೆಳ್ಳಿ. ಬೆಳ್ಳಿಯನ್ನು ಕುಲಮೂಲ ಚಿಹ್ನೆಯಾಗಿ ಇರಿಸಿಕೊಂಡವರು 'ಬೆಳ್ಳಿನೋರು'. ಈ ಬೆಡಗಿನವರಿಗೂ ದಾಯಾದಿಗಳಿದ್ದು ಅಡ್ಡದಾಯಾದಿಗಳು ಇರುವುದಿಲ್ಲ. ಬೆಳ್ಳಿಯ ಹೆಚ್ಚು ಬಳಕೆಯಿಂದಲೂ ಈ ಬೆಡಗು ಹುಟ್ಟಿಕೊಂಡಿರುವ ಸಾಧ್ಯತೆಯಿದೆ.

ಅರಸನವರು

ಅರಸನವರು ಅಥವಾ ಅರಸಿನ ಕುರುಬರು ರಾಜಮನೆತನಕ್ಕೆ ಸೇರಿದವರಾಗಿರಬೇಕು ಅಥವಾ ರಾಜರುಗಳಿಗೆ ಸೇವಕರಾಗಿ ಕಾರ್ಯ ನಿರ್ವಹಿಸಿದ್ದರಿಂದ ಬಂದಿರಬೇಕು ಅಥವಾ ಅರಸರಾಗಿ ಆಳ್ವಿಕೆ ಮಾಡಿದ್ದರಿಂದಲೂ ಬಂದಿರಬಹುದಾಗಿದೆ. ಇವರ ಮೂಲಕ ಹುಟ್ಟಿಕೊಂಡ ಬೆಡಗಿನವರಿಗೆ 'ಅರಸನವರು' ಅಥವಾ 'ಅರಸಿನ ಕುರುಬರು' ಎಂದು ಕರೆಯಲಾಗುತ್ತದೆ.

ಹೊನ್ನುಂಗುರದವರು

ಸುಮಾರು ಕ್ರಿ.ಶ ೧೬೮೦ರ ಆಷಾಢ ಮಾಸದಲ್ಲಿ ಜರುಗಿದ ಘಟನೆಯಾಗಿದ್ದು ಐತಿಹ್ಯ ರೂಪವನ್ನು ತಾಳಿದೆ. ಮಡಕ ಶಿರಾ ತಾಲೂಕು ಗುಂಡಾಮಲ್ಯೆ ಸಂಸ್ಥಾನದ ಆದಿಪತ್ಯ ಪಾರುಪತ್ಯದವರು ನಡೆಸಿದ ಶ್ರೀ ಕರಿಯಮ್ಮ ತಾಯಿಯ ಆರತಿ ಉತ್ಸವದಲ್ಲಿ ದೇವಿಯು ಪೂಜಾರಿಯ ಮೈದುಂಬಿ ನರಬಲಿಯನ್ನು ಕೋರುತ್ತಾಳೆ. ಆಗ ದಳಪತಿಗಳು ಬೆಟ್ಟದ ಬುಡದಲ್ಲಿ ದನಗಾಹಿಯೋರ್ವನನ್ನು ಹಿಡಿದು ತಂದು ಬಲಿಕೊಟ್ಟು ಜಲ್ಲೆಯನ್ನು ಮುಚ್ಚಿದರು.

ಈ ವಿಷಯವನ್ನು ತಿಳಿದ ಕುಂಪಣಿ ಸರ್ಕಾರ (ಬ್ರಿಟಿಷ್)ದವರು ಪೋಲಿಸ್ ಅಧಿಕಾರಿಗಳು ಮದ್ದುಗುಂಡುಗಳ ಸಮೇತ ಬೆಟ್ಟಕ್ಕೆ ಮುತ್ತಿಗೆ ಹಾಕಿದರು. ಇದನ್ನು ಕಂಡ ಜನಸ್ತೋಮ ದಿಕ್ಕಾಪಾಲಾಗಿ ಬೆಟ್ಟದಿಂದ ಏಳುತ್ತಾ ಬೀಳುತ್ತಾ ಕಾಡಿನಲ್ಲಿ ಕಣ್ಮರೆಯಾಗುವರು. ಹೀಗೆ ದಿಕ್ಕು ತಪ್ಪಿದ ಗುಂಡಾಮಲ್ಯೆ ಸಂಸ್ಥಾನದ ದೊರೆಗಳ ಮಕ್ಕಳಾದ 'ವಗ್ಗಪ್ಪ' ಮತ್ತು 'ಬರಮಪ್ಪ' ಎಂಬ ಎಂಟು ಹತ್ತು ವರ್ಷದ ಬಾಲಕರು ಕಾಡುಮೇಡುಗಳಲ್ಲಿ ಅಲೆಯುತ್ತಾ ಶಿರಾ ತಾಲೂಕು ಹುಲಿಕುಂಟೆಯ ಊರ-ಮುಂದಿನ ಅರಳಿ ಕಟ್ಟೆಯ ಮೇಲೆ ಕುಳಿತು ಅಳುತ್ತಿದ್ದರು. ಆ ಊರಿನ ಗೌಡಿಕೆಯ ಶೆಟ್ಟಿನವರ ಶಿವಲಿಂಗಪ್ಪ ಇವರನ್ನು ನೋಡಿ ಕನಿಕರ ಪಟ್ಟು ಇವರ ಪೂರ್ವಾಪರ ವಿಚಾರಗಳನ್ನು ತಿಳಿದು ತಮ್ಮ ಮನೆಯಲ್ಲಿಯೇ ಇವರಿಬ್ಬರನ್ನು ಇರಿಸಿಕೊಳ್ಳುತ್ತಾನೆ.

ತರುವಾಯ ವಗ್ಗಪ್ಪನನ್ನು ಎರಡು ಸಾವಿರ ಕುರಿಗಳಿದ್ದುದರಿಂದ ಕುರಿಯ ಆಡಳಿತಕ್ಕೂ ಬರಮಪ್ಪನನ್ನು ಮನೆಯ ಆಡಳಿತಕ್ಕೂ ನೇಮಿಸಿಕೊಳ್ಳುವನು. ತನ್ನ ವಂಶದ ಸಣ್ಣ ನಾಗಮ್ಮನನ್ನು ವಗ್ಗಪ್ಪನಿಗೂ, ನಾಗಮ್ಮನನ್ನು ಬರಮಪ್ಪನಿಗೂ ಕೊಟ್ಟು ವಿವಾಹ ನೆರವೇರಿಸುತ್ತಾನೆ. ವಗ್ಗಪ್ಪನಿಗೆ ಸಂತಾನಾಭಿವೃದ್ಧಿಯಾಗಲಿಲ್ಲ. ಬರಮಪ್ಪನಿಗೆ ವಂಶಾಭಿವೃದ್ಧಿಯಾಗಿ ಮುಂದುವರಿದು ಈ ವಂಶಿಕರು ಗುಂಡಮಲ್ಯೆನಿಂದ ಸಿಡಿದು ಬಂದು ಹೊನ್ನುಂಗುರವೆಂಬ ಬೆಡಗು ಅಸ್ತಿತ್ವ ಪಡೆದುಕೊಳ್ಳುತ್ತದೆ.

ಸುಮಾರು ಕ್ರಿ.ಶ. ೧೭೩೦ರ ವೇಳೆಗೆ ಅಂದರೆ ೫೦ ವರ್ಷಗಳ ನಂತರ ಹುಲಿಕುಂಟೆಯ ಗೌಡಿಕೆಯ ಅಧೀನದಲ್ಲಿದ್ದ ಎರಡನೇ ತಲೆಮಾರಿನ ಮೈಲಾರಪ್ಪ ಎಂಬುವರು ಹೇಮಾವತಿ ಹೆಂಜಾರು ಭೈರೇದೇವರ ಜಾತ್ರೆಯಲ್ಲಿ ಮಕ್ಕಳ ಆಟಕ್ಕಾಗಿ ಕುದುರೆ ಸವಾರಿ ಸಹಿತವಾಗಿರುವ ಎರಡು ಕಂಚಿನ ಗೊಂಬೆಗಳನ್ನು ತರುತ್ತಾರೆ. ಮಕ್ಕಳು ದೊಡ್ಡವರಾದ ಮೇಲೆ ಆ ಗೊಂಬೆಗಳನ್ನು ಅಡಕೆ ಪಟ್ಟೆಯಲ್ಲಿ ಕಟ್ಟಿ ರಾಗಿ ಕಣಜದ ಮೇಲಿಟ್ಟರು. ದಿನಗಳೆದಂತೆ ಈ ಗೊಂಬೆಗಳಿದ್ದ ಜಾಗದಿಂದ ಆಗಾಗ್ಗೆ ಪಟಪಟನೆ ಸದ್ದು ಕೇಳಿಸುತ್ತಿದ್ದು ಮನೆಯಲ್ಲಿ ಕಷ್ಟ ಕೋಟಲೆಗಳು ಹೆಚ್ಚಾಗತೊಡಗಿದವು. ಈ ಬಗ್ಗೆ ಶಾಸ್ತ್ರ ಕೇಳಿಸಲಾಗಿ ನಿಮ್ಮ ಮನೆಯನ್ನು ಮೈಲಾರ ದೇವರು ಹೊಕ್ಕಿರುವುದರಿಂದ ಇದನ್ನು ನಿಮ್ಮ ಮನೆದೇವರಾಗಿ ಸ್ವೀಕರಿಸಿ ಎಂದು ಹೇಳುತ್ತಾರೆ. ಇದರಂತೆ ಮೇಲ್ಕಂಡ ಮೈಲಾರಪ್ಪನವರ ಹಿರಿಯ ಮಗನಾದ ನಿಂಗಪ್ಪನು

ಗೊರವನೊಡಗೂಡಿ ಶ್ರೀ ಕ್ಷೇತ್ರ ಮೈಲಾರಕ್ಕೆ ದಟ್ಟ ಕಾಡುಗಳ ಮಧ್ಯೆ ಕಾಲ್ನಡಿಗೆಯಲ್ಲಿ ಹೋಗಿ ಮೈಲಾರದಲ್ಲಿ ಗುರುಗಳಿಂದ ದೇವತಾ ಸ್ಥಾಪನೆಗೆ ಬೇಕಾದ ಲಿಂಗ, ಭೂತಾಳೆ ಮುಂತಾದವುಗಳನ್ನು ಪಡೆದು ದಟ್ಟಡವಿಯ ಮಧ್ಯೆ ಬರುವಾಗ ರಾಣೆಬೆನ್ನೂರಿನ ಕಾಡಿನ ಮಧ್ಯೆ ಹುಲಿಯೊಂದು ಇವರಿಗೆ ಅಡ್ಡ ಬರುತ್ತದೆ. ದೇವರ ಪ್ರೇರಣೆಯಿಂದ ಗೊರವನು ಮೈದುಂಬಿ ಹುಲಿಯ ಸುತ್ತ ನರ್ತಿಸಿದನು. ಆ ವೇಳೆಗೆ ಹುಲಿಯ ಪ್ರಾಣವು ಹೋಗಿರುತ್ತದೆ.

ಅಲ್ಲಿಂದ ಮುಂದೆ ಸಾಗಿದ ಇವರು ಶಿರಾ ತಾಲೂಕು ಬರಗೂರಿನ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ವಿಧಿ ವಿಧಾನಗಳಿಂದ ಇದನ್ನು ಪ್ರತಿಷ್ಠಾಪನೆ ಮಾಡುತ್ತಾರೆ. ಈವರೆಗೆ ವಾಸವಿದ್ದ ಇಟ್ಟಿಗೆಹಳ್ಳಿ ಲಿಂಗಪ್ಪ ಎಂಬ ಪೂಜಾರಿಯು ವಾರಕ್ಕೊಮ್ಮೆ ಬರಗೂರಿಗೆ ಬಂದು ಪೂಜೆಯನ್ನು ಸಲ್ಲಿಸುತ್ತಿದ್ದನು. ಅಂದಿನಿಂದ ಈ ಲಿಂಗಪ್ಪ ಈ ದೇವರಿಗೆ ಮೊದಲ ಪೂಜಾರಿಯಾಗುವನು. ತದನಂತರ ಈ ಮನೆತನದವರು ೨೮ ವರ್ಷಗಳ ತರುವಾಯ ನಿಡಗಟ್ಟೆಗೆ ಬಂದು ನೆಲಸಿ ಅಲ್ಲಿ ದೇವಸ್ಥಾನವನ್ನು ಕಟ್ಟಿಸಿ ದೇವರನ್ನು ಪ್ರತಿಷ್ಠಾಪಿಸಿದರು. ಪೂಜಾರಿ ಮಾತ್ರ ಇಟ್ಟಿಗೆಹಳ್ಳಿಯಿಂದಲೇ ಪ್ರತಿವಾರ ನಿಡಗಟ್ಟೆಗೆ ಎತ್ತಿನ ಸಬರದಲ್ಲಿ ಪ್ರಯಾಣಿಸಿ ಪೂಜೆ ಸಲ್ಲಿಸುತ್ತಿದ್ದನು. ನಂತರ ಪೂಜಾರಿ ಮನೆಯವರೂ ನಿಡಗಟ್ಟೆಗೆ ಬಂದು ನೆಲಸುವರು.

ಪೂಜಾರಿ ಲಿಂಗಪ್ಪನಿಗೆ ಗಂಡು ಮಕ್ಕಳಿಲ್ಲದ ಕಾರಣದಿಂದಾಗಿ ಇವನ ತಮ್ಮನಾದ ಕರಿಸಿದ್ಧಜ್ಜನ ಹಿರಿಯ ಮಗನಾದ ಮೈಲಾರಪ್ಪನಿಗೆ ಪೂಜೆಯ ದೀಕ್ಷೆ ಮಾಡುತ್ತಾರೆ. ಇವರ ಎರಡನೇ ತಲೆಮಾರಿನ ಸಿದ್ಧಪ್ಪನ ಮಕ್ಕಳಾದ ನಿಂಗಜ್ಜ ನಷ್ಟ ಸಂತತಿ ಹೊಂದಿ ಎರಡನೇ ಮಗನಾದ ಲುಂಕಜ್ಜನಿಗೆ ಹಣ್ಣು ಹೂವಿನ ಹೆಡಿಗೆ ಹಂಚಿಕೆಯಾಯಿತು. ನಂತರ ಮೂರನೇ ಮಗ ಬರಮಪ್ಪನನ್ನು ಎರಡನೇ ತಲೆಮಾರಿನ ಮೂರನೇ ಲುಂಕಜ್ಜ ದತ್ತು ಪಡೆದನು. ಅವರಿಗೆ ತಣ್ಣೀರು ಬಿಂದಿಗೆ ಬಾಬತ್ತು ಹಂಚಿಕೆಯಾಯಿತು. ಕಳಸ, ಖೇಲು, ಪೂಜಾರಿಗುಂಪಿಗೂ, ಹಣ್ಣುಹೂವಿನ ಹೆಡಿಗೆ ಗೌಡರ ಗುಂಪಿಗೂ, ತಣ್ಣೀರು ಬಿಂದಿಗೆ ಯಜಮಾನನ ಗುಂಪಿಗೆ ಪ್ರಾಪ್ತವಾಯಿತೆಂದು ಹೇಳುವ ಹೊನ್ನುಂಗುರ ಬೆಡಗಿನ ಐತಿಹ್ಯವು ನಮಗೆ ಲಭ್ಯವಾಗುತ್ತದೆ. ಇದಲ್ಲದೆ ಈ ಬೆಡಗು ವಿಶೇಷವೆನಿಸಿದ್ದು ಸಂಪ್ರದಾಯವಾಗಿ ಸಾಗುತ್ತ ಬಂದಿವೆ.

ಕಗ್ಗಲ್ಲೋರು

ಉಜ್ಜಯಿನಿ ಕಡೆಯಿಂದ ಬಂದ ಅಥವಾ ಆ ಸಂಪ್ರದಾಯ ಹೊತ್ತು ತಂದ ಕುರುಬರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ನಲೆ ಕಂಡುಕೊಂಡರು. ಅದೇ 'ಉಜ್ಜಿನಿ'ಯಾಯಿತು. ಮೊದಲು ಆ ಪ್ರದೇಶವನ್ನು 'ಕಗ್ಗಲ್ಲು' ಎಂದು ಕರೆಯುತ್ತಿದ್ದರು. ಮೈಲಾರ ದೇವರ ಭಕ್ತನಾದ ಕಗ್ಗಲುಗೌಡ ವಾಸವಾಗಿದ್ದುದರಿಂದಲೂ ಈ ಹೆಸರು ಬಂದಿರಬಹುದು. ಸಮೀಪದಲ್ಲಿಯೇ ಮೈಲಾರನ ಬಂಡೆ ಇರುವುದು ಸಾಕ್ಷಿಯಾಗಿದೆ. ವಲಸೆ ಬಂದ ಕುರುಬರಿಗೆ ಕಗ್ಗಲ್ಲುಗೌಡ ನೆಲೆ ಕಂಡುಕೊಳ್ಳಲು ಸಹಕರಿಸಿದಂತೆ ತೋರುತ್ತದೆ. ಉಜ್ಜನಿಯಲ್ಲಿ ಈಗಲೂ ಕುರುಬರೇ ಹೆಚ್ಚಾಗಿ ವಾಸವಾಗಿದ್ದಾರೆ. ಅವರಲ್ಲಿ ಲಿಂಗಾಯತರಾದವರಲ್ಲಿಯೇ

ಎರಡು ಪಂಗಡಗಳಾಗಿರುವುದು ನಂತರದ ಬೆಳವಣಿಗೆ ಇರಬಹುದು. ಮರುಳಸಿದ್ಧ ಕಗ್ಗಲ್ಲುಗೌಡನ ಸಾಕುಮಗನೆಂದೂ ಹೇಳಲಾಗುತ್ತದೆ.

ಲೌಕಿಕ ದೃಷ್ಟಿಯಲ್ಲಿ ಮರುಳಸಿದ್ಧ ತನ್ನ ಭಕ್ತಿಯ ಪಾರಮ್ಯದಿಂದ ಎಲ್ಲರ ಗಮನ ಸೆಳೆದ. ಕಾವ್ಯಗಳ ಆಧಾರದಿಂದ ಅವನೊಬ್ಬ ಮಚ್ಚೆಕಾಯಕದ ಮಾದಿಗನೆಂದು ಹೇಳಲಾಗುತ್ತಿದೆಯಾದರೂ ಐತಿಹಾಸಿಕ ಆಧಾರಗಳು ಲಭ್ಯವಾಗಿಲ್ಲ. ಇವನ ಭಕ್ತಿಯನ್ನು ಮೆಚ್ಚಿದ ಒಬ್ಬ ಕುರುಬ ಒಡೆಯ ರೇವಣರು ತಮ್ಮ ಶಿಷ್ಯನೆಂದು ಸ್ವೀಕರಿಸಿ ಧಾರ್ಮಿಕ ಗುರುವನ್ನಾಗಿ ಮಾಡಿದಂತೆ ತೋರುತ್ತದೆ. ಕಗ್ಗಲ್ಲುಗೌಡನ ಹಿನ್ನೆಲೆಯಲ್ಲಿ 'ಕಗ್ಗಲ್ಲೋರು' ಎಂಬ ಬೆಡಗು ರೂಢಿಗೆ ಬಂದಿದೆ.

೧. ಅಗರಳೆಣಿರ ೨. ಅರಳೆ ೩. ಅಂದಿನ ೪. ಅಳೆಣ್ಣವರ ೫. ಅಗ್ಗಣಿ, ೬. ಅಗ್ನಿಕೋಲು ೭. ಅಂಬಾಲೆಲಿ ೮. ಅನೆನ್ನವರ ೯. ಅವಾಲಿನವರ ೧೦. ಅವಾಲವರ ೧೧. ಅಲಿಗೆ ೧೨. ಅಯ್ಯನವರ ೧೩. ಅವರೆ ೧೪. ಅಗಸ್ತ್ಯ ೧೫. ಅಮೋಘ ೧೬. ಅಠದರ ೧೭. ಅರೈ ೧೮. ಅಟ್ಟಲ. ೧೯. ಅಡ್ಲನ ೨೦. ಅಡಸಲ ೨೧. ಅಣ್ಣೆ. ೨೨. ಅಮ್ಮೆ. ೨೩. ಅದ್ದನ ೨೪. ಅರ್ದನ ೨೫. ಅಸಲಿ ೨೬. ಅರಳಿ ೨೭. ಅಮಲಗೊಂಡ ೨೮. ಅರೆಸೀಯ ೨೯. ಅರಳು ೩೦. ಅರಳೆಲಿ ೩೧. ಅರಿಶಿನ ೩೨. ಅವ್ವಲಗೊಂಡ್ಲ ೩೩. ಆಡೆ. ೩೪. ಆಡಿನ. ೩೫. ಆನೆಗುಂದಿ ೩೬. ಆನೆಗುಂದಿ ಗಡಿಯಂಕ ೩೭. ಆಸ್ಪಂಡೆ ೩೮. ಆಳವಿ ೩೯. ಆಲಮಟ್ಟಿ ೪೦. ಇರುವು ೪೧. ಇರುಳು ೪೨. ಇರುವೆ ೪೩. ಉತ್ತಲು ೪೪. ಉಪ್ಪು ೪೫. ಉಳಿಕಾರ ೪೬. ಉಪ್ಪಲವರ ೪೭. ಉದ್ದು ೪೮. ಉದೇಲ ೪೯. ಉಂಗುರ ೫೦. ಉಗ್ಗಿ. ೫೧. ಉಂಡಾಡು ೫೨. ಉತ್ತೆನ ೫೩. ಉಳ್ಳೊಳ್ಳೆರ ೫೪. ಉಂಡಿ ೫೫. ಊಂಕಿ ೫೬. ಊಟ್ಟಿ. ೫೭. ಎಮಗರ. ೫೮. ಎಕ್ಕ. ೫೯. ಎಡವಹರ್ದಸೆಲೆ ೬೦. ಎರ್ಲು ೬೧. ಎಮ್ಮೆನವರ ೬೨. ಎಳ್ಳು ೬೩. ಎಳಿಗಲ್ಲ ೬೪. ಎಕ್ಕೆಲಿ ೬೫. ಎಡೊಲಿ ೬೬. ಎಲ್ಲೆಲಿ ೬೭. ಐಗಳೋರು ೫೮. ಐದು ವರಹ ೫೯. ಐದುವರಹಸಾ ೭೦. ಒಣಕಿ ೭೧. ಒಂಟೆತ್ತ ೭೨. ಒದಲು ೭೩. ಓತಿನ ೭೪. ಓಸ್ಸೆಲ ೭೫. ಓಕಾಲ ೭೬. ಔಡಲ ೭೭. ಕಗ್ಗಾಲ ೭೮. ಕವಲ ೭೯. ಕವಡಿ ೮೦. ಕಡಗ ೮೧. ಕಡ್ಲಿ ೮೨. ಕಡಗೋಲ ೮೩. ಕಡಿ ೮೪. ಕಡಗದ ೮೫. ಕಡ್ಲೇಲಿ ೮೬. ಕಟ್ಟಡ ೮೭. ಕಡೆದೇಲಿ ೮೮. ಕಡೆಲ ೮೯. ಕಣೇದ ೯೦. ಕತಪಾಲ. ೯೧. ಕತಲ ೯೨. ಕವರಿ ೯೩. ಕತ್ರಿ ೯೪. ಕನಕಯ್ಯ ೯೫. ಕಬ್ಬಳ್ಳಿ ೯೬. ಕಪಲೆ ೯೭. ಕಬುಳಿ ೯೮. ಕರಮಲ ೯೯. ಕರಿಮಾವಿನ ೧೦೦. ಕರಿಯಾಪಿ ೧೦೧. ಕರಿಯಪ್ಪನ ೧೦೨. ಕರಿಹೊಲಿ ೧೦೩. ಕರುಣ ೧೦೪. ಕರಲ್ಲೆವರ ೧೦೫. ಕರೂಲಿ ೧೦೬. ಕವಡೆ ೧೦೭. ಕಸ್ತೂರಿ ೧೦೮. ಕರಕ ೧೦೯. ಕೃಷ್ಣ ೧೧೦. ಕಂಚಲ ೧೧೧. ಕಂದ್ರ ೧೧೨. ಕಚನ ೧೧೩. ಕಂಡಲ್ಲವರ ೧೧೪. ಕಂಕಾಯನ ೧೧೫. ಕಂಬ ೧೧೬. ಕಳಸಗಿಂಡಿ ೧೧೭. ಕಂದಿ ೧೧೮. ಕುಣೆವ ೧೧೯. ಕಟ್ಟೀಮನಿ ೧೨೦. ಕಳ್ಳ ೧೨೧. ಕಾಮಣ್ಣ ೧೨೨. ಕಾಗಲ ೧೨೩. ಕಾಮಲೇರು ೧೨೪. ಕಾವಡಿ ೧೨೫. ಕಾಂಪಿಲ್ಯ

೧೨೬. ಕಿನೆರ ೧೨೭. ಕೀಚಲು ೧೨೮. ಕುಂಭ ೧೨೯. ಕುಂದನ ೧೩೦. ಕುಕಿಲ ೧೩೧. ಕುರಶಲ ೧೩೨. ಕುಪ್ಪಿಯ ೧೩೩. ಕುಗೆನ್ನವರ ೧೩೪. ಕುಂದಣ ೧೩೫. ಕುಂಬಳ ೧೩೬. ಕೆಂಗಾಳ ೧೩೭. ಕೆಂಗಲ್ಲ ೧೩೮. ಕೆಂಡದವರು ೧೩೯. ಕೆಂಗರ ೧೪೦. ಕೆಂಗುರಿ ೧೪೧. ಕೆಂಚಲು ೧೪೨. ಕೆಂದೂಳಿ ೧೪೩. ಕೆಂದೋಳ ೧೪೪. ಕೆಚ್ಚಲು ೧೪೫. ಕೆಂಡ ೧೪೬. ಕೊಟಾ ೧೪೭. ಕೊಟೇ ೧೪೮ ಕೊಡ್ಲಿ ೧೪೯. ಕೊಳ್ಳಿ ೧೫೦. ಕೊಟ್ಟಲ ೧೫೧. ಕೊಡ್ಲೆಲೀ ೧೫೨. ಕೊಲೆಲೀ ೧೫೩. ಕೊಂಗಡಿ ೧೫೪. ಕೊಪ್ಪು ೧೫೫. ಕೊಂಡೇರ ೧೫೬. ಕೊಂಡಿಕರ ೧೫೭. ಕೋಕಿನ್ನ ೧೫೮. ಕೋಗಿಲೆ ೧೫೯. ಕೋರಿ ೧೬೦. ಕೋಟೆ ೧೬೧. ಕೋಶ ೧೬೨. ಕೋಪ್ಪಿನ ೧೬೩. ಕೋರಿರುಘುಂಡೆ ೧೬೪. ಕೋಸಲ ೧೬೫. ಕೋಟ್ಟಲ ೧೬೬. ಕೋರೆಲ್ಲೇರು ೧೬೭. ಖಂಡೆಲ ೧೬೮. ಖಂಡಕರ ೧೬೯. ಖಂಡೆಕಾರ ೧೭೦. ಖೆಂಡ ೧೭೨. ಗಡಿವಾಡಕ ೧೭೩. ಗಣಕ ೧೭೪. ಗಲಿ ೧೭೫. ಗಳೇದ ೧೭೬. ಗರಣೆ ೧೭೭. ಗರಕಿನಿ ೧೭೮. ಗರಿಕಿ ೧೭೯. ಗಡದೆನ್ನವರ ೧೮೦. ಗಸ್ತೇನ ೧೮೧. ಗಂಡೇಲ ೧೮೨. ಗಂಗೇಲ ೧೮೩. ಗಟ್ಟಿಲ ೧೮೪. ಗಂಧ ೧೮೫. ಗಂಗೆಯ ೧೮೯. ಗಂಗೂರ ೧೮೩.ಗರುಡ ೧೮೮. ಗಳೇಲ ೧೮೯. ಗಂಟಿ ೧೯೦. ಗಾಡ ೧೯೧. ಗ್ಯಾನಪ್ಪಗೋಳ ೧೯೨. ಗಾಳಿ ೧೯೩. ಗೀಜಲ ೧೯೪. ಗುಡ್ಲಿ. ೧೯೫. ಗುಂಡ ೧೯೯. ಗುಲೇಲವರ ೧೯೭. ಗುಲಮಿ ೧೯೮. ಗುಮ್ಮೆ ೧೯೯. ಗುಳ್ಳೆ ೨೦೦. ಗುರನ ೨೦೧. ಗುಂಡಕಲ್ಲು ೨೦೨. ಗುಳಿಮಿ ೨೦೩. ಗೋಡೇಲ ೨೦೪. ಗೊಳೆತ್ತು ೨೦೫. ಗೋದೇಲ ೨೦೬. ಗೊಬ್ಬರ ೨೦೭. ಗೋಠಿ. ೨೦೮. ಗೊಗ್ಗ ೨೦೯. ಗೋಶೆ ೨೧೦. ಗೊಂಗಡಿ ೨೧೧. ಗೋಸಾಲಿ ೨೧೨. ಗೋಸಲೇರು ೨೧೩. ಗೌಡ್ಲೆಲಿ ೨೧೪. ಘಂಟೇಲ ೨೧೫. ಘಂಟಿಚೂಡೆ ೨೧೭. ಘೋಶಲ ೨೧೭. ಚಕ್ರ ೨೧೮. ಚಟ್ಟ ೨೧೯. ಚಂದನ ೨೨೦. ಚಂಜೇಲ ೨೨೧. ಚಂದ್ರಶೇಖರ ೨೨೨. ಚಂದ್ರ ೨೨೩. ಚಂದೋಸಿ ೨೨೪. ಚನಗೇಲ ೨೨೫. ಚವಡೆ ೨೨೬. ಬೈಲಹುಲೇನವರ ೨೨೭. ಚವಲಿ ೨೨೮. ಚಕ್ಕಲಿ ೨೨೯. ಚಟ-ಮುಟ ೨೩೦. ಚಿಟಾವಿ ೨೩೧. ಚಿಲ್ಲಾ ೨೩೨. ಚೂರಿ ೨೩೩. ಚಿಟ್ಲು ೨೩೪. ಚೇಳು ೨೩೫. ಚೌದರಿ ೨೩೬. ಜಗ್ಗಲ ೨೩೭. ಜಲ್ಲಧಿ ೨೩೮. ಜಲಕುಷ್ಪ ೨೩೯. ಜಗ್ಗಲಿ ೨೪೦. ಜಡೇಲ ೨೪೧. ಜನ್ನಿ. ೨೪೨. ಜಡಮಳೆ ೨೪೩. ಜಡೆ ೨೪೪. ಜನ್ನೆಲ ೨೪೫. ಜನಿಗೆಲವರ ೨೪೬. ಜಲಕುಷ್ಪೆ ೨೪೭. ಜಂಗೀನ ೨೪೮. ಜಾಡರ ೨೪೮. ಜಾಡೆ ೨೫೦. ಜಾಡಿ ೨೫೧. ಜಾಲ ೨೫೨. ಜಿನಗೆ ೨೫೩. ಜೀರಿಗೆ ೨೫೪. ಜೀವಳ ೨೫೫. ಜೀವಲ ೨೫೬. ಜೋಗೆಲ್ಲ ೨೫೭. ಜೋತೆ ೨೫೮. ತಗರಿನ ೨೫೯. ತಡವಲ ೨೬೦. ತಡಮ ೨೬೧. ತದನಿ ೨೬೨. ತಳುಲ ೨೬೩. ತಾಳಿ ೨೬೪. ತರಕೆ ೨೬೫. ತಿರವಾಲ ೨೬೬. ತಿಪ್ಪಾಲವರ ೨೬೭. ತಿಲಕದ ೨೬೮. ತುಪದ ೨೬೯. ತುರಾಯಿ ೨೭೦. ತುರುಗಾರ ೨೭೧. ತುರುವೆ ೨೭೨. ತುರುಬ ೨೭೩. ತುರುಬೆಲಿ ೨೭೪. ತುರುಬಿನ ೨೭೫. ತುಂಬೆ ೨೭೬. ತುಂಬೆತೆಕ್ಕೆನ ೨೭೭. ತೆಜ ೨೭೮. ತೆರವಾಲ ೨೭೯. ತೆವರಲ್ಲ

೨೮೦. ತೊಟ್ಟಿಲು ೨೮೧. ತೊಳಲಿ ೨೮೨. ತೋಪಿನ ೨೮೩. ತೊವಿನ ೨೮೪. ಥಗ್ರು ೨೮೫. ದಶಕ ೨೮೬. ದರ್ಶನ ೨೯೭. ದಣ್ಣೆಲ ೨೮೮. ದಂದಲ ೨೮೯. ದಸರಿ ೨೯೦. ದಾಸ್ರೆ ೨೯೨. ದಂಡೆ ೨೯೨. ದಂಡೆಲ ೨೯೩. ದಳವಡಿ ೨೯೪. ದಂಡಾವತಿ ೨೯೫. ದದ್ದನವರ ೨೯೬. ದನಗೊಂಡ ೨೯೭. ದಾಣೆಲಿ ೨೯೮. ದಾಯ ೨೯೯. ದಾಡೆ ೩೦೦. ದಾಸರಿ. ೩೦೧. ದ್ಯಾಮಕ್ಕಗೋಳ ೨೦೨. ದರ ೩೦೩. ದಾಸ ೩೦೪. ದಾನಸೂರ ೩೦೫. ದ್ಯಾಮಣ್ಣವರ ೨೦೬. ದ್ಯಾರೆಲ್ಲವರ ೨೦೭. ದುದ್ದಲ ೨೦೮. ದುಡ್ಡಿನ ೨೦೯. ದಡೇದನ ೩೧೦. ದುಂಡೆ ೩೧೧. ಧೂಳಪ್ಪಗೋಳ ೩೧೨. ಧೂಳವ್ವಗೋಳ ೩೧೩. ದೇವದಾರು ೩೧೪. ದೇವ ೩೧೫. ದೇವಲ್ ೩೧೬. ದೊಣ್ಣೆ ೩೧೭. ನಗರಿ ೩೧೮. ನಡವಟ್ಟಲ ೩೧೯. ನಗ್ಗಳು ೩೨೦. ನಗಾರ ೩೨೧. ನಡಹಟ್ಟಿ ೩೨೨. ನಗರ ೩೨೩. ನಡಗೋಷ್ಟಿ ೩೨೪. ನಳ ೩೨೫. ನಡೆಕ್ಕನವರ ೩೨೬. ನರಟ್ಟಿ ೩೨೭. ನಳಿ ೩೨೮. ನವರೆ ೩೨೯. ನಳಿಗೆ ೩೩೦. ನವಿಲು ೩೩೧. ನಲಿ ೩೩೨. ನಸ್ಸೆನ ೩೩೩. ನಲ್ಲಿ ೩೩೪. ನಾಗ ೩೩೫. ನಾಲಿಗೆ ೩೩೬. ನಾಗರ ೩೩೭. ನಾಗೋಲಿ ೩೩೮. ನಾವಿಗೇರು ೩೩೯. ನಾಯಿ ೩೪೦. ನಾಳಿ ೩೪೧. ನೀಲೆ ೪೩೨. ನುಚ್ಚು ೩೪೪. ನೆಲ್ಲಿ ೩೪೫. ನೆಲ್ಲ ೩೪೬. ನೆಗಲ ೩೪೭. ನಳೇನ ೩೪೮. ಟಕ್ಕೇಲ ೩೪೯. ಟಗರ ೩೫೦. ಡಾಣೆ ೩೫೧. ಡೋಣೆ ೩೫೨. ಡೊಮ್ಮೆಲ್ಲ ೩೫೩. ಡೊಳ್ಳಿ ೩೫೪. ಪಡವ ೩೫೫. ಪಂಚಗುಂಡಿಗಿ ೩೫೬. ಪಟ್ಟದ ೩೫೭. ಪಟ್ಟೇದ ೩೫೮. ಪಟ್ನಿ. ೩೫೯. ಪತ್ರೆ ೩೬೦. ಪ್ರಭಾವಂತ ೩೬೧. ಪುಲೆ ೩೬೨. ಪರಕಂಚಿ ೩೬೩. ಪ್ರಭಲ ೩೬೪. ಪರಿ ೩೬೫. ಪಾಲವೆ ೩೬೬. ಪಾಂಡವರು ೩೬೭. ಪುಂಡನವರ ೩೬೮. ಪುತ್ತರ ೩೬೯ ಪನ್ನಿರು ೩೭೦. ಪೆಂಟೆಲ ೩೭೧. ಪ್ರಥಕ ೩೭೨. ಬಫೇಲ ೩೭೩. ಬಡವಿನ ೩೭೪. ಬಣತೆ ೩೭೫. ಬನ್ನಿ ೩೭೬. ಬನ್ನೇಲಿ ೩೭೭. ಬನ್ನೇಲರ ೩೭೮. ಬಲ ೨೭೯. ಬನ ೩೮೦. ಬದುಕಿನ ೩೮೧. ಬಜ್ಜನಾರು ೩೮೨. ಬಲಗೊಂಡ ೩೮೩. ಬಸವ ೩೮೪. ಬರವೆನ ೩೮೫. ಬಂಟ ೩೮೬. ಬಸಲು ೩೮೭. ಬರಡಾವಿ ೩೮೮. ಬಜನಿಗೇರಿ ೩೮೯. ಬಸಳ್ಳಿ ೩೯೦. ಬಸರಾಲ ೩೯೧. ಬಸರೆ ೨೯೨. ಬಲ್ಲರಿ ೨೮೩. ಬಲವತ್ತ ೩೮೪. ಬಸಲೆಲ್ಲೆರು ೩೮೫. ಬಸೆ ೩೬೯. ಬಗಡ ೩೯೭. ಬಗೇಲ ೩೯೮. ಬಳಗಾರ ೩೯೯. ಬಳಗೇರ ೪೦೦. ಬಳ್ಳಾರಿ ೪೦೧. ಬಳೆರ ೨೦೨. ಬಣ್ಣದ ೪೦೩. ಬಳಗರು ೪೦೪. ಬಳ್ಳೊಳ್ಳಿ ೪೦೫. ಬಮಗೇರರು. ೪೦೬. ಬನದ ೪೦೭. ಬಂಡಗರ ೪೦೮. ಬಂಡಾಲೆ ೪೦೯. ಬಂಡೇಲ ೪೧೦. ಬಂಡೆ ೪೧೧. ಬನಶಂಖರಿ. ೪೧೨. ಬರೆಮನ್ನೆ ೪೧೩. ಬಂಗಾರ ೪೧೪. ಭಂಡಾರೆ ೪೧೫. ಬಂಡಿ ೪೧೬. ಬಂದೇಲ ೪೧೭. ಬಾಚಲ ೪೧೮. ಭಾರತ ೪೧೯. ಬಾಣದ ೪೨೦. ಬಾಲ್ಯ ೪೨೧. ಬಾಲ ೪೨೨. ಬಾಣಗೇರ ೪೨೩. ಬಾಳಳ್ಳಿ ೪೨೪. ಬಾಸರಾ ೪೨೫. ಬಾಸಲು ೪೨೬. ಬಾಸಿಂಗ ೪೨೭.. ಬಾಂದ ೪೨೮. ಬಾಸೇಲ ೪೨೯. ಬಾಳೆ ೪೩೦. ಭಂಡಾರಿ ೪೩೧ ಬೀರ ೪೩೨. ಬಿಲ್ಲಾರ ೪೩೩. ಬಿಜ್ಜಳ ೪೩೪. ಬಿರದಹುಂಡೆ ೪೩೫. ಬಿನು. ೪೩೬. ಬಿಲ್ಲಿ ೪೩೭.

ಶಿಲ್ಪಲೋರು ೫೯೬. ಶಿವಮೊಗ್ಗೆ ೫೯೭. ಶಿವನಾಡಗೌಡ ೫೯೮. ಶೃಣೇ ೫೯೯. ಶುಂಠಿ ೬೦೦. ಶೇಜೆಲ್ಲೆರು ೬೦೧. ಸಕಲೆ ೬೦೨. ಸಕ್ರಲ ೬೦೩. ಸಗಲ ೬೦೪. ಸಗರ ೬೦೫. ಸಟ್ಟೈಲಾರ ೬೦೬. ಸಟ್ಟೈಗಲ ೬೦೭. ಸಕ್ರಿ ೬೦೮. ಸಡ್ಡೆಲು ೬೦೯. ಸಣಗಾರ ೬೧೦. ಸತ ೬೧೧. ಸದರನ ೬೧೨. ಸನ್ನನವರ ೬೧೩. ಸರಿಗೆ ೬೧೪. ಸಕ್ರಿಸನ್ನವರ ೬೧೫. ಸಕ್ರಿವರ್ಣ ೬೧೬. ಸಂಗಮ ೬೧೭. ಸಂಪಿಗೆ ೬೧೮. ಸಂಗರ ೬೧೯. ಸಂಡ್ಲಕ ೬೨೦. ಸಂಪಗಾನ ೬೨೧. ಸಂಗಮದೇವರು ೬೨೨. ಸಕೆಲು ೬೧೩. ಸರೂರು ೬೨೪. ಸಾಲ್ವ ೬೨೫. ಸರಸಮುತ್ತಣ ೬೨೬. ಸಾಕಲ ೬೨೭. ಸಾಧು ೬೨೮. ಸಾಮಂತಿ ೬೨೯. ಸಾಮಂತ ೬೩೦. ಸಾಂಡೆ ೬೩೧. ಸಾಕೆಲು ೬೩೭. ಸಾಳುಂಕಿ ೬೩೩. ಸಾರಣ ೬೩೪. ಸಾಲಮನೆ ೬೩೫. ಸಾವಿತ್ರಿ ೬೩೬. ಸಾಗರ ೬೩೭. ಸಾಸಾಲು ೬೩೮. ಸಾಸಲು ೬೩೯. ಸಾಸರ ೬೪೦. ಸಾವಿಗೆ ೬೪೧. ಸಿಂಗೆ ೬೪೨. ಸಿಂಗ್ರಿ ೬೪೩. ಸಿಖಂಡಿ ೬೪೭. ಸಿದ್ಧನ ೬೪೫. ಸಿಂಗಣ್ಣ ೬೪೯. ಸಿಂಗ್ಲ ೬೪೭. ಸಿಂಪಲ ೬೪೮. ಸಿತ್ತಳ ೬೪೯. ಸಹಿಜೇನು ೬೫೦. ಸುಗ್ಗಲ ೬೫೧. ಸುಲಪನ ೬೫೨. ಸುರಗಿ ೬೫೩. ಸುವಣ ೬೫೪. ಸೂಜಿ ೬೫೫. ಸೂರ್ಯವಂಶಿ ೬೫೬. ಸೂರ್ಯ ೬೫೭. ಸೇನ ೬೫೮. ಸೇವ ೬೫೯. ಸೆಟ್ಟೈಲ್ಲ ೬೬೦. ಸೇವಂತಿಗೆ ೬೬೧. ಸೆಟ್ಟಿ ೬೬೨. ಸೆಂಡಿಗೆ ೬೬೩. ಸೇಮಂತ ೬೬೪. ಸೇವಿಗೆ ೬೬೫. ಸೆಡೆಲು ೬೬೬. ಸೊಪ್ಪಿನ ೬೬೭. ಸೊಂಟೇಲಿ ೬೬೮. ಸೌತೆ, ೬೬೯. ಸೌದೆ ೬೭೦. ಸೈನ ೬೭೧. ಹಗ್ಗದ ೬೭೨. ಹಡಸೇಲ ೬೭೩. ಹಲ್ಲೂ ೬೭೪. ಹರದ ೬೭೫. ಹರಿಯಾಲ ೬೭೬. ಹರಲೇರು ೬೭೭. ಹರಳೆಲೆ ೬೭೮. ಹರಿವಾಣ ೬೭೯. ಹಳ್ಳ ೬೮೦. ಹಸ್ತೇನ ೬೮೧. ಹತ್ತೇನ ೬೮೨. ಹರುಷ ೬೮೪. ಹಂಡಗರಿ ೬೮೫. ಹಂದರ ೬೮೬. ಹಂಡೆವಜೀರ ೬೮೭. ಹನುಮ ೬೮೮. ಹಂಡೆಗಿಡದ ೬೮೯. ಹಳೇಪೈಕ ೬೯೦. ಹಾಲುಕಂಕಣ ೬೯೧. ಹಲೇಲ್ಲರು ೬೯೨. ಹಾಲರು ೬೯೩. ಹಾಲಕವಡೆ ೬೯೪. ಹಾವಲ ೬೯೫. ಹಾಲಕಂಚೆನ್ನವರ ೬೯೬. ಹಿರೇಮನಿ ೬೯೭. ಹಿರೇಹೋಳಿ ೬೯೮. ಹಿಂಡಿನ ೬೯೯. ಹುರಗೆಜ್ಜೆ ೭೦೦. ಹುಣಬೇಲಿ ೭೦೧. ಹುಣಶ್ಯಾಳ ೭೦೨. ಹುಣಸಿಕಟ್ಟಿ ೭೦೩. ಹುಲೆಣ್ಣವರ ೭೦೪. ಹುರುಳಿ ೭೦೫. ಹುತ್ತಿನ ೭೦೬. ಹುಲಕೆ ೭೦೭. ಹುರಳಿ ೭೦೮. ಹುಗ್ಗಿ ೭೦೯. ಹುಂಡೇಲ ೭೧೦. ಹುಂಟರ ೭೧೧. ಹೂಡೆ ೭೧೨. ಹೂವಿನ ಹಚ್ಚಡ ೨೭೩. ಹೂವಿನ ೭೧೪. ಹುವಣ್ಣ ೭೧೫. ಹೆಬ್ಬುಲಿ ೭೧೬. ಹೊಡ್ಡಿ ೭೧೭. ಹೊನ್ನ ೭೧೮. ಹೊನ್ನಾವರೆ ೭೧೯. ಹೊಸಲೆ ೭೨೦. ಹೊನೆ ೭೨೧. ಹೊನ್ನಬನ್ನಲಿ ೭೨೨. ಹೊನ್ನೇಲಿ ೭೨೩. ಹೊಂಬಿಸಿಲ ೭೨೪. ಹೊನ್ನಹಂಡೆ ೭೨೫. ಹೊನ್ನಬಳ್ಳಿ ೭೨೬. ಹೊರಲಿಂಗ ೭೨೭. ಹೊನ್ನಬನ್ನಯ್ಯ ೭೨೮. ಹೊನ್ನುರಲ ೭೨೯. ಹೊನ್ನಸಕ್ರಿ ೭೩೦. ಹೊನ್ನಬನ್ನೆ ೭೩೧. ಹೊನ್ನಬಿಲ್ಲು ೭೩೨. ಹೊನ್ನಛತ್ರ ೭೩೩. ಹೊನ್ನಮನ್ನೇರು ೭೩೪. ಹೊನ್ನಹಾಲು ೭೩೫. ಹೊನ್ನಖರ್ಚೆ ೭೩೬. ಹೊನ್ನಕೆಂಗಾರ ೭೩೭. ಹೊನ್ನಚಾಡೆ ೭೩೮. ಹೊನ್ನಬಂಡೆ ೭೩೯. ಹೊನ್ನಮೇಲುಪ್ಪರಗಿ ೭೪೦. ಹೊನ್ನಬೇವಿನ ೭೪೧. ಹೊನ್ನಬಂಡಾರಿ ೭೪೩. ಹೊನ್ನಜಡಿಮಳೆ

೭೪೪. ಹೊನ್ನೆಚ್ಚಲ ೭೪೫. ಪೊನ್ನಪುಂಚೆಲ್ಲ ೭೪೬. ಹೊನ್ನ ಜಗಲಿ ೭೪೭. ಹೊನ್ನಸಾರ ೭೪೮. ಪೊಳೆಪ್ಪಗೋಳ ೭೪೯. ಹೊನ್ನಮನೆ ೭೫೦. ಹೊನ್ನಚಂಡಕಿ ೭೫೧. ಹೊನ್ನಕಂಬಳಿ ೭೫೨. ಹೊನ್ನಕೋರೆ ೭೫೩. ಹೊನ್ನಹಾಲಿನ ಕೆಂಚಲ ೭೫೪. ಹೊನ್ನಬೂತಲ ೭೫೫. ಹೊನ್ನಹಾವಿನ ೭೫೬. ಹೊನ್ನಕಳಸ ೭೫೭. ಹೊನ್ನನಡವಟಲ ೭೫೮. ಹೊನ್ನ ಹೆಬ್ಲೋರ. ೭೫೯. ಹೊನ್ನ ಕೋಟೆ ೭೬೦. ಹೊನ್ನಬಸರೇಲಿ ೭೬೧. ಹೊನ್ನರನ್ನಪರಶೆ ೭೬೨. ಹೊನ್ನಚವರಿ ೭೬೩. ಹೊನ್ನ ಶೃಂಗಾರ ೭೬೪. ಹೊನ್ನಹೋರಿ ೭೬೫. ಹೊನ್ನಮಡಿಸಿರಿ ೭೬೬. ಹಾಲಹೊನ್ನೆ ೭೬೭. ಹೊನ್ನಶಿಂದೆ ೭೬೮. ಅಗಾಪೆ ೭೬೯. ಅಖಾಡ ೭೭೦. ಅಸ್ವಲೆ ೭೭೧. ಅಗುಣೇ ೭೭೨. ಅಂಬಾಡೆ ೭೭೩. ಅಟಪಡೆ ೭೭೪. ಅಮಾಸೆ ೭೭೫.ಅನಾವಸೆ. ೭೭೬. ಅರ್ಜುನ ೭೭೭. ಆಯಿನವರ ೭೭೮. ಆಗಲಾವೆ ೭೭೯. ಇರಾಳೆ ೭೮೦. ಇರಾಲೆ ೭೮೧. ಇರಕರ ೭೮೨. ಇಕ್ಕರ ೭೮೩. ಉರಾಡೆ ೭೮೪. ಉಂಡಾಡು ೭೮೫. ಉಸಕೆ ೭೮೬. ಉತ್ತರೆ ೭೮೭. ಎಳ ೭೮೮. ಎರಡೆ ೭೮೯. ಒಗರೆ ೭೯೦. ಕಮಾಡೆ ೭೯೧. ಕಸುಗಡೆ ೭೯೨. ಕಚರೆ ೭೯೩. ಕರ್ಹಾಡೆ ೭೯೪. ಕರಗಳ ೭೯೫. ಕಟ್ಗೆ ೭೯೬. ಕರಪೆ ೭೯೭. ಕರನವರ ೭೯೮. ಕಂಬಾರೆ ೭೯೯. ಕಂಖರೆ ೮೦೦. ಕಪ್ಡಿ ೮೦೧. ಕಸ್ಕೆ ೮೦೨. ಕಪ್ರಿ ೮೦೩. ಕರಮಾರೆ ೮೦೪. ಕಾಕಡೆ ೮೦೫. ಕಾಳಜಾತೆ ೮೦೬. ಕಾಂಡುರೆ ೮೦೭. ಕರಂಡೆ ೮೦೮. ಕಾಲುಗುಡೆ ೮೦೯. ಕಾಂಬಳೆ ೮೧೦. ಕಾರಂಡೆ ೮೧೧. ಕಾಟಮಾರೆ ೮೧೨. ಕಾವಳೆ ೮೧೩. ಕಾಷಿದ ೮೧೪. ಕಾಟೊರೆ ೮೧೫. ಕುವಲಕುಡೆ ೮೧೬. ಕುಲಾಗೋಳ ೮೧೭. ಕುಸಪೆ ೮೧೮. ಕುಡಲೀಕ ೮೧೯. ಕೀಸೆ ೮೨೦. ಕಿಸವೆ ೮೨೧. ಕ್ಷೀರಸಾಗರ ೮೨೨. ಕೆಂಡೆ ೮೨೩. ಕೆಸಕರ ೮೨೪. ಕೊಡಲಕರ ೮೨೫. ಕೊಕೆ ೮೨೬. ಕೋಳೆಕರ ೮೨೭. ಕೋರೆ ೮೨೮. ಕೋಳಪೆ ೮೨೯. ಕೊಳಸೆ ೮೩೦. ಕೊಯಿನವರ ೮೩೧. ಕೈಟಕಲ್ ೮೩೨. ಖರಾಡೆ ೮೩೩. ಖಂಗಳ ೮೩೪. ಖರ್ಗೆ ೮೩೫. ಖರಾಟೆ ೮೩೬. ಖಡಕೆ ೮೩೭. ಖರಜೆ ೮೩೮. ಖಾಜಣೆ ೮೩೯. ಖುಪಕರ ೮೪೦. ಖಿಲಾರಿ. ೮೪೧. ಖೋಚೆ ೮೪೨. ಕಡೆಕರ ೮೪೩. ಗಡೆಕರ ೮೪೪. ಗವಂಡಿ ೮೪೫. ಗಹಿನೆ ೮೪೬. ಗರಾಲೆ ೮೪೭. ಗಡವೆ ೮೪೮. ಗಲಂಡೆ ೮೪೯. ಗರವಾಡ ೮೫೦. ಗವಟೆ. ೮೫೧. ಗರಂಡೆ ೮೫೨. ಗಾಸ್ಕೆ ೮೫೩. ಗಾವಡೆ ೮೫೪. ಗಾಡೆಕರ ೮೫೫. ಗಾಫರೆ ೮೫೬. ಗುಟುಕಡೆ ೮೫೭. ಗುರುವ ೮೫೮. ಗುಲದವಡೆ ೮೫೯. ಗುಂಡ ೮೬೦. ಗೆಡ್ಗೆ ೮೬೧. ಗೆಟೆ ೮೬೨. ಗೆಳೆ ೮೬೩. ಗೊರೆ ೮೬೪. ಗೊಪಣೆ ೮೬೫. ಗೊಯಿಕರ ೮೬೬. ಗೊರಡ ೮೬೭. ಗೊಲಾರಿ ೮೬೮. ಗೊಲತಡೆ ೮೬೯. ಗೊನಮಾಸಾಳ ೮೭೦. ಗೊರ ೮೭೧. ಘಲಮೆ ೮೭೨. ಘರಬುಡವೆ ೮೭೩. ಘೋಡಕೆ ೮೭೪. ಚವಧಾರೆ ೮೭೫. ಚಿಟಾರ ೮೭೬. ಚೆಂಡ್ಕೆ ೮೭೭. ಚೊರಮಲೆ ೮೭೮. ಚುತಕಲೆ ೮೭೯. ಚೊರೆ ೮೮೦. ಜವಳಗೆ ೮೮೧. ಜಧವ ೮೮೨. ಜಾಲಿಂಧರೆ ೮೮೩. ಜುಗಧಾರ ೮೮೪. ಜಿಂಗಾಡೆ ೮೮೫. ಜಿಟಿ ೮೮೯. ಜೆಡೆಗೆ ೮೯೦. ಜೊಹರೆ ೮೯೧. ಜೊಂಧಳೆ ೮೯೨. ಝಾಡೆ ೮೯೩. ಝಾಡಗರ ೮೯೪. ಝಾಲಗರ ೮೯೫. ಝುರಳೆ

೮೬೬. ಝುರಕ ೮೬೭. ಝೋರೆ ೮೬೮. ತರಡೆ ೮೬೯. ತಳೆ ೯೦೦. ತಾಗಾಡ ೯೦೧. ತಾರನವರ ೯೦೨. ತಾಂಬೆ ೯೦೩. ತಾಟೆ ೯೦೪. ತಾಮಖಡೆ ೯೦೫. ತಾನಾಳ ೯೦೬. ತಾಂದಳೆ ೯೦೭. ತಾಟೆ ೯೦೮. ತಾನೆರೆ ೯೦೯. ತಿಂಗಳೆ ೯೧೦. ತಿಗ್ರೆ ೯೧೧. ತುರಬಾರೆ ೯೧೨. ತುಪೆ ೯೧೩. ತೊಂಬಾರ ೯೧೪. ತೊಂಗ ೯೧೫. ತೊರಬಾಲೆ ೯೧೬. ಥಿಟೆ ೯೧೭. ಟಕಲೆ ೯೧೮. ಠವರೆ ೯೧೯. ದರಗುಡೆ ೯೨೦. ದಯಾಡೆ ೯೨೧. ದಹಿಬಾತೆ ೯೨೨. ದಡಸ ೯೨೩. ದಳವಿ ೯೨೪. ದಪಲ್ ೯೨೫. ದಾಳೆ ೯೨೬. ದಾಯಿಂಗಡೆ ೯೨೭. ದಾಬೆ ೯೨೮. ಧಾಗರೆ ೯೨೯. ದಿಂಡೆ ೯೩೦. ದೀಡಗಾಂವ ೯೩೧. ದುಧೆ ೯೩೨. ದುಲೆ ೯೩೩. ದುವೆ ೯೩೪. ದುಧಾಳ ೯೩೫. ದುಯಿಮಡೆ ೯೩೬. ಧೂಳೆ ೯೩೭. ದೇವಮುಂಜೆ ೯೩೮. ಧೇಬೆ ೯೩೯. ದೇವರ ೯೪೦. ದೇವರ ೯೪೧. ದೇವಕರ ೯೪೨. ಧಕರ ೯೪೩. ಧುಪೆ ೯೪೪. ದೊಯಿನಾಪುಡಾ ೯೪೫. ಧುಲವಡೆ ೯೪೬. ದೊರವೆ ೯೪೭. ದೊನ ೯೪೮. ನಗರೆ ೯೪೯. ನಾಂಬಳಕರ ೯೫೦. ನಾಮಕಡೆ ೯೫೧. ನಿಗುಂಡೆ ೯೫೨. ನೀಗಡೆ ೯೫೩. ನಿಟವೆ ೯೫೪. ನೆಮಾಣೆ ೯೫೫. ಡಬಳೆ ೯೫೬. ಡಕನವರ ೯೫೭. ಢಮಡೆರೆ ೯೫೮. ಢವಣ ೯೫೯. ಡಾಪಟವರ ೯೬೦. ಡೊಬ್ಳೆ ೯೬೧. ಡೆರೆ ೯೬೨. ಡೆಂಗೆ ೯೬೩. ಡೊಂಗರೆ ೯೬೪. ಡೊಂಬಾಳೆ ೯೬೫. ಢಳಪೆ ೯೬೬. ಪಂಡಿತ ೯೬೭. ಢೊಣೆ ೯೬೮. ಪಂಡಿತ ೯೬೯. ಪಾವಣೆ ೯೭೦. ಪಟಕಾರೆ ೯೭೧. ಪಡಳಕರ ೯೭೨. ಪಟರೆ ೯೭೩. ಪಲೇರಿ ೯೭೪. ಪಾರಕರ ೯೭೫. ಪಾಂಡ್ರೆ ೯೭೬. ಪಳಸಗಾವಡೆ ೯೭೭. ಪಾಲವೆ ೯೭೮. ಪಾಡುಳೇ ೯೭೯. ಪಾವಣೆ ೯೮೦. ಪಾಂಡರ ಮೀಸೆ ೯೮೧. ಪಾಟೊಳೆ ೯೮೨. ಪುಕಾಳೆ ೯೮೩. ಪುಣೇಕರ ೯೮೪. ಪಿಸುಂದರೆ ೯೮೫. ಪಿಂಗಳೆ ೯೮೬. ಪಿಸೆ. ೯೮೩. ಪಿಂಜಾರೆ ೯೮೮. ಪಿಸಾಳೆ ೯೮೯. ಪಿಪರೆ ೯೯೦. ಪೆಂಡಾರೆ ೯೯೧. ಪೆರವಲೆ ೯೯೨. ಪೊಕಳೆ ೯೯೩. ಪೊಲೆ ೯೯೪. ಪೊಂಡೆ ೯೯೫. ಫನಸರೆ ೯೯೬. ಬರ್ಗೆ ೯೯೭. ಬಗಡೆ ೯೯೮. ಬನೆ ೯೯೯. ಬಧನ್ನವರ ೧೦೦೦. ಬರಲೆ ೧೦೦೧. ಬನಗೆ ೧೦೦೨. ಬಲಾರ ೧೦೦೩. ಬರಂಗೆ ೧೦೦೪. ಬಡಕೆ ೧೦೦೫. ಬರವೆ ೧೦೦೬. ಬಡಗರ ೧೦೦೭. ಬರಕಡೆ ೧೦೦೯. ಬಂಡಗರ ೧೦೧೦. ಬಂಗಾಲೆ ೧೦೧೧. ಬಲದವರ ೧೦೧೨. ಬನಸೊಡೆ ೧೦೧೩. ಬನ್ನೆಲ ೧೦೧೪.ಬಾರ್ಗಹ ೧೦೧೫. ಬಾತಡೆ ೧೦೧೯.ಬಾವರೆ ೧೦೧೭. ಬಾವದಾನ ೧೦೧೮.ಬಾರಗಾಲೆ ೧೦೧೯. ಬಿಚುಕುಲೆ ೧೦೨೦. ಬಿರಜೆ ೧೦೨೧. ಬಿಡಘರ ೧೦೨೨. ಬೀದರ ೧೦೨೩. ಬಿಂದುಗಡೆ ೧೦೨೪. ಬಿಂದುಗಡೆ ೧೦೨೫. ಬಿಜುಗಡೆ ೧೦೨೬. ಬಿರಕರ ೧೦೨೭. ಬಿರೆ ೧೦೨೮. ಬುಧನವರ ೧೯೨೯. ಬುಚಟೆ ೧೦೩೦. ಬುರಂಗಲೆ ೧೦೩೧. ಬೂಲೆ ೧೦೩೨. ಬೆಂದರೆ ೧೦೩೩. ಬೆಲವನಲನವರ ೧೦೩೪. ಭಡಕೆ ೧೦೨೫. ಭಾಗೆ ೧೦೩೬. ಭಾಲೆರಾವ ೧೦೩೭. ಭಾಂಡಗೆ ೧೦೩೮. ಭಾಡನವರ ೧೦೩೯. ಬಕ್ಷೆ ೧೦೪೦. ಭಾನವಸೆ ೧೦೪೧. ಭಾಗವತ್ರ ೧೦೪೨. ಭೂಸಾರೆ ೧೦೪೩. ಭಿಸೆ ೧೦೪೪. ಭೀಟೆ ೧೦೪೫. ಭೇಂಡ ೧೦೪೯. ಭೊರಕರ ೧೦೪೭. ಬೊರಾಟೆ ೧೦೪೮.

ಬೊಟ್ಯಾಟೆ ೧೦೪೯. ಬೋರ್ಷೆ ೧೦೫೦. ಭೋಪಳೆ ೧೦೫೧. ಮದನೆ ೧೦೫೨. ಮಳಗೆ ೧೦೫೩. ಮಕನವರ ೧೦೫೪. ಮಹಲ ೧೦೫೫. ಮರಗಳೆ ೧೦೫೬. ಮಹಾನವರ ೧೦೫೭. ಮಹಿನ ೧೦೫೮. ಮಲಗೊಂಡೆ ೧೦೫೯. ಮಾಂಡ್ಲಿಕ ೧೦೬೦. ಮಾನವರ ೧೦೬೧. ಮಾಲವೆ ೧೦೬೨. ಮಾಳಿ ೧೦೬೩. ಮಾಮಲೆ ೧೦೬೪. ಮಾಳವದೆ ೧೦೬೫. ಮಾಂಗ ೧೦೬೬. ಮಾರ್ಗಾಲೆ ೧೦೬೭. ಮಿಟ್ಗೆ ೧೦೬೮. ಮುರಡೆ ೧೦೬೯. ಮುಟಕರ ೧೦೭೦. ಮೆಟಕರಿ ೧೦೭೧. ಮುಗುಟರಾವ ೧೦೭೨. ಮಾಟೆ ೧೦೭೩. ಯೆಳೆ ೧೦೭೪. ರತ್ನಪಾರಖೆ ೧೦೭೫. ರಾಹಿಂಜ ೧೦೭೬. ರಾಸಿಂಕರ ೧೦೭೭. ರಾಜಕರ ೧೦೭೮. ರಾಜಗರ ೧೦೭೯. ರಾಜನೆ ೧೦೮೦. ರಾಯರಲ ೧೦೮೧. ರೆವೆ ೧೦೮೨. ರೆಡಕೆ ೧೮೩. ರೊಡೆ ೧೦೮೪. ರೊಡ್ಗೆ ೧೦೮೫. ಲಕಡೆ ೧೦೮೬. ಲಟೆ ೧೦೮೭. ಲಾಂಬಾಟೆ ೧೦೮೮. ಲಾಂಡ್ಗೆ ೧೦೮೯. ಲಾಳಗೆ ೧೦೯೦. ಲಾಡೆ ೧೦೯೧. ಲಾಂಡಗೆ ೧೦೯೨. ಲುಬಾಳೆ ೧೦೯೩. ಲೆಂಗರೆ ೧೦೯೪. ಲೊಂಗರೆ ೧೦೯೫. ವಲಕರ ೧೦೯೬. ವ್ಹಡೆ ೧೦೯೭. ವ್ಹರಕಾಟೆ ೧೦೯೮. ವಂಬಾಸೆ ೧೦೯೯. ವಲೆಕರ ೧೧೦೦. ವಡೆರ ೧೧೦೧. ವಡರೆ ೧೧೦೨. ವಗರೆ ೧೧೦೩. ವರಗೆ ೧೦೦೪. ವಳಂಸೆ ೧೧೦೫. ವಾಫೆ ೧೧೦೭. ವಾಕಸೆ ೧೧೦೮. ವಾಯಕುಳೆ ೧೧೦೯. ವಾಯ. ೧೧೧೦. ವಾಫಮೋರೆ ೧೧೧೧.ವಾವರೆ ೧೧೧೨. ವೆಳೆ ೧೧೧೩. ಶಿಂದೆ ೧೧೧೪. ಶಿರಗಿರೆ ೧೧೧೫. ಶಿಂಗಾಡೆ ೧೧೧೬. ಶಿವರಕರ ೧೧೧೭. ಶಿರೊಳ ೧೧೧೮. ಶಿವಗಟೆ ೧೧೧೯. ಶಿರಶ್ಯಾಟ ೧೧೨೦. ಶೆಂಡ್ಗರ ೧೧೨೧. ಶೆಲಾರ ೧೧೨೨. ಶೆಮಡೆ ೧೧೨೩. ಶೆಮಾಳೆ ೧೧೨೪. ಶೆಳ್ಕೇ ೧೧೨೫. ಶೆಂಡ್ಗೆ ೧೧೨೬. ಸಲಗರ ೧೧೨೭. ಸರಗರ ೧೧೨೮. ಸರಕ ೧೧೨೯. ಸಂಸಾಲಾಟೆ ೧೧೩೦. ಸರವದೆ. ೧೧೩೧. ಸವಳೆ ೧೧೩೨. ಸ್ವಾರ ೧೧೩೩. ಸಾತಕುಳೆ ೧೧೩೪. ಸಾರಸೆ ೧೧೩೫. ಸಾಳ ೧೧೩೬. ಸಾಡನವರ ೧೧೩೭. ಸಾವಳೆ ೧೧೩೮. ಸಾತಪುತೆ ೧೧೩೯. ಸುರಸುಳೆ ೧೧೪೦. ಸುಂಪಪೆ ೧೧೪೧. ಸುಟೆ ೧೧೪೨. ಸುಪಣೆ ೧೧೪೩. ಸುಡನವರ ೧೧೪೪. ಸುಮನೆ ೧೧೪೫. ಸುಡಳಕ ೧೧೪೬. ಸುಪಕರ ೧೧೪೭. ಸೀದ ೧೧೪೮. ಸಿಗಾರೆ ೧೧೪೯. ಸಿನಗಾರೆ ೧೧೫೦. ಸೆಜಾಳ ೧೧೫೧. ಸೊಲಾಟೆ ೧೧೫೨. ಸೊನವಾಲೆ ೧೧೫೩. ಸೊನೆ ೧೧೫೪. ಸೊಲನಕರ ೧೧೫೫. ಸೊನಟಕ್ಕೆ ೧೧೫೬. ಸೊನುರೆ ೧೧೫೭. ಹಜಾರೆ ೧೧೫೮. ಹರಾಳೆ ೧೧೫೯. ಹಾಜಗೆ ೧೧೬೦. ಹಾಲನವರ ೧೧೬೧. ಹಾಂಡವರೆ ೧೧೬೨. ಹಾಗರೆ ೧೧೬೩. ಹಾಂಡೆ ೧೧೬೪. ಹಾಕೆ ೧೧೬೫. ಹಿರ್ವಾ ೧೧೬೬. ಹಿರವೆ ೧೧೬೭. ಹುಲ್ಯನ ೧೧೬೮. ಹುಲಕರ ೧೧೬೯. ಹುಬಾಳೆ ೧೧೭೦. ಹುಲಗಡೆ ೧೧೭೧. ಹನುಮಾನ ೧೧೭೨. ಹೆಗಡೆಕರ ೧೧೭೩. ಹಮ್ಮಮ್ಮಖೋರೆ ೧೧೭೪. ಹೊಗಡೆ ೧೧೭೫. ಹೊಳ್ಕರ ೧೧೭೬. ಹೊನ್ನಬಾಡೆನವರ.

*ಚಂದ್ರಕಾಂತ ಬಿಜ್ಜರಗಿ ಅವರ ಕುರುಬರ ಹೆಜ್ಜೆಗಳು ಮತ್ತು ಹೆಚ್.ಚಂದ್ರಪ್ಪನವರ ಕುರುಬರ ಕುರುಹುಗಳು ಕೃತಿಗಳ ಸಹಾಯ ಪಡೆಯಲಾಗಿದೆ. ಅಲ್ಲದೆ ಬೆಡಗುಗಳಿಗೆ ಕ್ಷೇತ್ರಕಾರ್ಯದ ಮೂಲಕ ವಿಂಗಡಿಸಿ ಬರೆಯಲಾಗಿದೆ.

ಕುರುಬರ ಒಳಪಂಗಡಗಳಲ್ಲಿರುವ ಸುಮಾರು ಒಂದೂವರೆ ಸಾವಿರಕ್ಕೂ ಮಿಗಿಲಾದ ಬೆಡಗುಗಳನ್ನು ಅವಲೋಕಿಸಿದರೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ಧರ್ಮ ಜಾತಿ ಪ್ರಭಾವಗಳಿಗೆ ಒಳಗಾಗುತ್ತ ಸಂಕರಗೊಳ್ಳುತ್ತಾ ಸಾಗಿರುವುದರಿಂದ ಇಷ್ಟೆಲ್ಲ ಬೆಡಗುಗಳ ಅಸ್ತಿತ್ವಕ್ಕೆ ಕಾರಣವಿರಬಹುದು ಎಂದೆನಿಸುತ್ತದೆ. ಇವಲ್ಲದೆ ಇನ್ನೂ ಕ್ಷೇತ್ರಕಾರ್ಯವನ್ನು ಕೈಗೊಂಡರೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಕರ್ನಾಟಕ ಕುರುಬರ ಒಳಪಂಗಡಗಳ ಅಧ್ಯಯನ ಪರಪೂರ್ಣವಾಗಬೇಕಾದರೆ ಬೆಡಗುಗಳ ಅಧ್ಯಯನವು ಅವಶ್ಯವಾಗುತ್ತದೆ. ಇವುಗಳಲ್ಲಿ ಕೆಲವು ಬುಡಕಟ್ಟಿನಿಂದ ಬಂದವರೊ, ಋಷಿಮೂಲದಿಂದ ಬಂದವರೋ, ಮತಾಂತರಕ್ಕೆ ಒಳಗಾದವರೊ ಎಂಬ ಪ್ರಶ್ನೆಗಳಿಗೆ ಬೆಡಗುಗಳು ಉತ್ತರಿಸುತ್ತವೆ. ಒಟ್ಟಾರೆ ಬೆಡಗುಗಳು ಅವರ ವೃತ್ತಿ ಪರಿಸರದ ಪಾತ್ರವನ್ನು ಮಾತ್ರವಲ್ಲದೆ ಅವರ ಪ್ರಾಚೀನತೆಯನ್ನು ಪರಿಚಯಿಸುವ ಆಕರಗಳೂ ಆಗಿರುತ್ತವೆ. ಕುರುಬ ಸಮುದಾಯದ ಮೂಲ ಸಂಸ್ಕೃತಿ ಪರಿಚಯಕ್ಕೆ ಸಹಕಾರಿಯಾಗುತ್ತವೆ.

ಕೊನೆಟಿಪ್ಪಣಿಗಳು

೧. ವ್ಯಾಧಚರಿತೆ: (ಸಂ) ಡಾ. ಮಂಜುನಾಥ ಬೇವಿನಕಟ್ಟಿ, ಪುಟ ೧೮೮, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪ್ರ. ೨೦೦೬.

೨. ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ: (ಸಂ) ಡಾ. ಚಂದ್ರಶೇಖರ ದಾಮ್ಲೆ, ಪುಟ ೪೯೨, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪ್ರ. ೨೦೦೩.

೩. ಕನ್ನಡ ನಿಘಂಟು: (ಪ್ರ.ಸಂ) ಎನ್. ಬಸವಾರಾಧ್ಯ, ೭ನೇ ಸಂಪುಟ, ಪುಟ ೯೫೭೦, ಕ.ಸಾ.ಪ., ಬೆಂಗಳೂರು ಪ್ರ. ೧೯೯೩.

೪. ಎನ್‌ಸೈಕ್ಲೋಪೀಡಿಯಾ ಆಫ್ ಆಂಥ್ರೋಪಾಲಜಿ: ಎಚ್. ಜೇಮ್ಸ್ ಬರ್ಕ್, ಸಂಪುಟ-೫, ಪುಟ ೨೨೧೬, ಸೇಜ್ ಪಬ್ಲಿಕೇಷನ್ಸ್, ನವದೆಹಲಿ, ಪ್ರ. ೧೦೦೬.

೫. ಮಾನವಶಾಸ್ತ್ರದ ಮೂಲಾಂಶಗಳು: ಬಿ.ಆರ್.ಸತ್ಯಲಿಂಗರಾಜು, ಪುಟ ೬೨, ಚೇತನಬುಕ್ ಹೌಸ್, ಮೈಸೂರು ಪ್ರ. ೧೦೦೬.

೬. ಅದೇ

೭. ಬಿಹಾರ್ ಮತ್ತು ಒರಿಸ್ಸಾ ಸಂಶೋಧನಾ ಸಮಾಜ: ಎಸ್.ಎಸ್. ಮೆಹತಾ, ಸಂಪುಟ ೧, ಪುಟ-೨, (ಉದ್ಧೃತ) ದೇವಾಂಗ ಸಂಸ್ಕೃತಿ, ಪ್ರೊ. ಕೆ.ಜಿ.ನಾಗರಾಜಪ್ಪ, ಪ್ರ. ೨೦೦೩.

೮. ಅದೇ

೯. ಅದೇ

೧೦. ದಿ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್: ಎಚ್.ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್, ಸಂಪುಟ ೪, ಪುಟ ೬೩-೬೭.

೧೧. ಹಿಸ್ಟರಿ ಆಫ್ ದಿ ಇಂಡಿಯನ್ ಶೇಫರ್ಡ್ಸ್: ವಿ.ಆರ್.ಹನುಮಂತಯ್ಯ, ಪುಟ ೩೫, ಮಿಥಿಕ್ ಸೊಸೈಟಿ, ಬೆಂಗಳೂರು, ಪ್ರ. ೧೯೨೬.

೧೨. ಗೊಲ್ಲರಟ್ಟ: ಬಿ.ವಿ.ನಾಗರಾಜು, ಪುಟ ೮, ಆಪ್ತ ಪ್ರಕಾಶನ ಬೆಂಗಳೂರು ಪ್ರ. ೧೯೯೮.

೧೩. ಕನ್ನಡ-ಇಂಗ್ಲೀಷ್ ಡಿಕ್ಶನರಿ: ಆರ್.ಎಫ್.ಕಿಟೆಲ್, ಪುಟ ೨೬೫, ಬಾಸೆಲ್ ಮಿಷನ್ ಬುಕ್ ಡೆಪಾಸಿಟರಿ ಲಂಡನ್, ೧೮೯೪.

೧೪. ಲೆಜಂಡ್ ಫ್ರಂ ಇಂಡಿಯನ್ ಹಿಸ್ಟರಿ: ಎ.ಕೆ.ಘೋಷ್, ಪೀಠಿಕೆ, ಚಿಲ್ಡ್ರನ್ ಬುಕ್ ಟ್ರಸ್ಟ್, ನ್ಯೂಡೆಲ್ಲಿ, ೧೯೮೫.

೧೫. ಸಾರಸ: ತಾಳ್ತಜೆ ವಸಂತಕುಮಾರ, ಪುಟ ೧೨೧, ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು, ಪ್ರ. ೧೯೮೫.

ಅಧ್ಯಾಯ ೫

ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನ

ಅ. ಸಂಪ್ರದಾಯ-ಆಚರಣೆಗಳು

ಆ. ದೈವಗಳು-ಸಾಂಸ್ಕೃತಿಕ ವೀರರು

ಇ. ಕುರುಬರ ಕಲೆಗಳು-ಸಾಂಸ್ಕೃತಿಕ ನೆಲೆಗಳು

ಅಧ್ಯಾಯ ೫

ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನ

ಮಾನವ ಸಂಸ್ಕೃತಿಯು ಸಾರ್ವತ್ರಿಕವಾದುದು. ಆದರೆ ಪ್ರತಿಯೊಂದು ಸ್ಥಳೀಯ ಅಥವಾ ಪ್ರಾದೇಶಿಕ ಸಂಸ್ಕೃತಿಯ ರೂಪಲಕ್ಷಣಗಳು ಅಪೂರ್ವವಾದವುಗಳು. ಯಾವುದೇ ಪ್ರದೇಶವೊಂದರ, ಸಮುದಾಯವೊಂದರ ಸಾಂಸ್ಕೃತಿಕ ಅಧ್ಯಯನದಲ್ಲಿ ಆ ಜನಸಮುದಾಯ ವಾಸಿಸುವ ಪ್ರದೇಶ, ನಾಗರೀಕತೆ, ಅವರ ಪರಂಪರೆ, ಸಂಪ್ರದಾಯ ಮತ್ತು ಇತಿಹಾಸ, ಹಾಗೆಯೇ ಅದರ ಆಂತರಿಕ ಸಮಾಜ ರಚನೆ, ಕಲೆ, ಕಸುಬು, ಸಾಮಾಜಿಕ ಸ್ಥಾನಮಾನಗಳು, ಕೌಟುಂಬಿಕ ವ್ಯವಸ್ಥೆ, ಮದುವೆ, ಜನನ, ಮರಣ, ಸಂಸ್ಕಾರ, ಪದ್ಧತಿಗಳು ರೀತಿರಿವಾಜುಗಳು, ವೇಷಭೂಷಣ, ಆಹಾರ ಪಾನೀಯಗಳು, ಹವ್ಯಾಸಗಳು ಇತ್ಯಾದಿಗಳನ್ನು ಗಮನಿಸಿದಾಗ ಸಮುದಾಯವೊಂದರ ಅಧ್ಯಯನವು ಸಾಂಸ್ಕೃತಿಕವಾಗಿ ಮಹತ್ವ ಪಡೆಯುತ್ತದೆ.

'ಸಂಸ್ಕೃತಿ' ಎನ್ನುವುದು ಮನುಷ್ಯನ ಉಸಿರಾಗಿದ್ದು ಇದಕ್ಕೆ ತಾರತಮ್ಯದ ಲೇಪನವಂತೂ ಇರಲಾರದು. ಮನುಷ್ಯನ ವಾಸಸ್ಥಾನ ಎಲ್ಲಿರುತ್ತದೋ ಅಂತಹ ಕಡೆಯಲ್ಲಿ ಸಂಸ್ಕೃತಿಯೊಂದು ಜೀವಂತವಾಗಿದ್ದು ಅದು ವಿಶೇಷವಾಗಿ ಅವರದ್ದೇ ಆಗಿರುತ್ತದೆ. ಸಂಸ್ಕೃತಿಯು ಸಮುದಾಯದ ಆಸ್ತಿಯಾಗಿ ಸಂವಹನಗೊಳ್ಳುತ್ತ ಬಂದರೂ ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿರಲು ಸಾಧ್ಯ. ವ್ಯಕ್ತಿಯೊಬ್ಬನ ಬಾಹ್ಯ ಹಾಗೂ ಆಂತರಿಕ ಸ್ತರಗಳಲ್ಲಿ ರೂಪುಗೊಳ್ಳುವ ನಡೆ-ನುಡಿ, ಉಡುಗೆ-ತೊಡುಗೆ, ಆಚಾರ-ವಿಚಾರಗಳೆಲ್ಲವೂ ಸಾಮಾಜಿಕ ವಿನ್ಯಾಸದ ಬೇರೆ ಬೇರೆ ಆಯಾಮಗಳಲ್ಲಿ ಒಡಮೂಡುತ್ತವೆ.

ಕರ್ನಾಟಕದ ಬಹುಭಾಗಗಳಲ್ಲಿ ಬದುಕುತ್ತಿರುವ ಕುರುಬ ಸಮುದಾಯದಲ್ಲೂ ವಿಶಿಷ್ಟ ಅನುಭವ ಮತ್ತು ಪರಿಸರದ ಪ್ರಭಾವ ಹಾಗೂ ಕಾರಣಗಳಿಗೆ ತಕ್ಕಂತೆ ತಮ್ಮನ್ನು ಹೊಂದಿಸಿಕೊಂಡು ಜೀವನ ನಡೆಸುವ ಇವರ ಮೇಲೆ ಈ ಅಂಶಗಳೆಲ್ಲ ಪ್ರಭಾವ ಬೀರಿ ಅದನ್ನು ವಿಭಿನ್ನವಾಗಿಸುತ್ತದೆ. ಹೀಗಾಗಿ ಮಾನವನ ಜೀವನ ವಿಧಾನವು ಸಮಷ್ಠಿಯಾಗಿ ಒಂದೇ ರೀತಿಯಾಗಿದ್ದರೂ ವ್ಯಷ್ಠಿಯಾಗಿ ಅದು ಒಂದೊಂದು ಸಮುದಾಯಕ್ಕೂ ಪ್ರತ್ಯೇಕವಾದುದೇ ಆಗಿರುತ್ತದೆ.

ಸಮುದಾಯವೊಂದರ ಪ್ರಾದೇಶಿಕತೆಯ ಚೌಕಟ್ಟನ್ನು ನಿರ್ಮಿಸಿಕೊಂಡು ಪರಂಪರಾನುಗತ ಸಂಸ್ಕೃತಿಯ ಅಭಿವ್ಯಕ್ತಿಯ ಪ್ರಕ್ರಿಯೆಯನ್ನು ಗ್ರಹಿಸಬೇಕಾಗುವುದು. ಪ್ರಕೃತಿ ಆರಾಧಕರಾದ ಕುರುಬರು ಭಾರತೀಯ

ಮೂಲನಿವಾಸಿಗಳು ಮಾತ್ರವಲ್ಲ, ಕರ್ನಾಟಕದ ಬಹುಸಂಖ್ಯಾತ ಜನಾಂಗಗಳಲ್ಲೊಂದಾಗಿದೆ. ಕುರಿ ಪಶುಪಾಲನೆಗಳ ಜೊತೆಗೆ ವ್ಯವಸಾಯ, ಕಂಬಳಿ ನೇಯ್ಗೆಯನ್ನು ವೃತ್ತಿಯಾಗಿಸಿಕೊಂಡವರು. ಬುಡಕಟ್ಟು ಸಮುದಾಯದ ಲಕ್ಷಣಗಳು ಇವರಲ್ಲಿಯೂ ಇದ್ದು ಗಿಡ, ಮರ, ಗಾಳಿ, ನೀರು, ಬೆಂಕಿ, ಪಶುಪಕ್ಷಿಗಳನ್ನು ಪೂಜಿಸುವ ಕುರುಬರಿಗೆ ಪ್ರಕೃತಿ ಆರಾಧನಾ ಹಿನ್ನೆಲೆಯಂತೂ ಇದ್ದೇ ಇದೆ.

ಸಂಸ್ಕೃತಿಯೆಂಬುದು ಮನುಷ್ಯನನ್ನು ಪ್ರಾಣಿ ಸಮಾಜದಿಂದ ಬೇರ್ಪಡಿಸಿ ಸಮಾಜದ ಜೀವನ ವಿಧಾನಗಳನ್ನು ವಿವರಿಸಲು ಬಳಸುವ ಒಂದು ವಿಶಿಷ್ಟವಾದ ಪರಿಕಲ್ಪನೆಯಾಗಿ ಬಳಕೆಯಾಗಿದೆ. ಆಧುನಿಕವಾಗಿ ಈ ಬಗ್ಗೆ ಆಲೋಚನೆಗಳು, ಚಿಂತನಾಕ್ರಮಗಳು ಹುಟ್ಟಿಕೊಂಡಿವೆ. ಸಮಾಜ ಮತ್ತು ಸಂಸ್ಕೃತಿಗಳಿಗೆ ಅಂತರ್ ಸಂಬಂಧವಿರುವುದು ಸ್ಪಷ್ಟ. ಆದ್ದರಿಂದ ಒಂದನ್ನು ಬಿಟ್ಟು ಮತ್ತೊಂದಿರಲಾರದು. ಸಮಾಜದಲ್ಲಿ ಸಂಸ್ಕೃತಿಯು ಅಂತರ್ಗತವಾಗಿದ್ದು ಅದರ ಆರಂಭದಿಂದಲೂ ಒಡನಾಟವನ್ನು ಉಳಿಸಿಕೊಂಡು ಬೆಳೆಯುತ್ತಿರುವ ಪ್ರಕ್ರಿಯೆ ಸಂಸ್ಕೃತಿಯೆನಿಸಿಕೊಳ್ಳುತ್ತದೆ. ಇಂತಹ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಅರಿಯುವ ಮುನ್ನ ಸಂಸ್ಕೃತಿಯೆಂದರೇನು ಎಂದು ಸ್ಥೂಲವಾಗಿ ತಿಳಿಯುವುದು ಅವಶ್ಯವಾಗುತ್ತದೆ.

ಸಂಸ್ಕೃತಿ ಎಂಬುದರ ಮೂಲರೂಪವು ಲ್ಯಾಟಿನ್ ಭಾಷೆಯ 'Cults' ಎಂಬುದರಿಂದ ನಿಷ್ಪನ್ನವಾಗಿದೆ. ಈ ಪದಕ್ಕೆ 'ವ್ಯವಸಾಯ ಮಾಡು' 'ಪರಿಷ್ಕರಿಸು' 'ಪೂಜಿಸು' ಎಂಬರ್ಥಗಳು ಪ್ರಾಪ್ತವಾಗಿವೆ. ಲ್ಯಾಟಿನ್ ಮೂಲದಿಂದ ಜರ್ಮನ್ ಭಾಷೆಯಲ್ಲಿ 'Culture' ಎಂಬ ಪದವು ರೂಪುಗೊಂಡು ಇಂಗ್ಲಿಷ್‌ನಲ್ಲೂ ಅದೇ ಪದ ಬಳಕೆಯಾಗತೊಡಗಿತು. ಈ ಮಾತಿಗೆ ಕಾಲಕ್ರಮೇಣ ಎರಡು ಅರ್ಥ ಪರಂಪರೆಗಳು ಹುಟ್ಟಿಕೊಂಡಂತೆ ಕಾಣಿಸುತ್ತದೆ.

೧. ದೈವಭಕ್ತಿ, ವ್ರತದೀಕ್ಷೆ, ಮತಸಿದ್ಧಾಂತ

೨. ಭೂದೇವಿಯ ಆರಾಧನೆ, ಭೂಮ್ಯಾಸಕ್ತಿ, ಕೃಷಿ, ಉಳುಮೆ, ಪೈರು ಬೆಳೆಸುವುದು, ಇತ್ಯಾದಿ. ಇವುಗಳಲ್ಲಿ ಎರಡನೆಯದರ ಅರ್ಥ ಇರಿಸಿಕೊಂಡು ಇಂದು ಬಳಸಲ್ಪಡುವ 'Agriculture' ಎಂಬ ಪದವು ಹುಟ್ಟಿದೆ. ಅಂದರೆ ಭೂ ವ್ಯವಸಾಯ, ಕೃಷಿಯಂತೆಯೇ 'ಆತ್ಮನಕೃಷಿ'ಗೆ ಸಂಬಂಧಿದುದನ್ನು 'Culture' ಎಂದು ಕರೆಯಲಾಗಿದೆ. ಕನ್ನಡದಲ್ಲಿ 'ಸಂಸ್ಕೃತಿ' ಎಂಬ ಪದವು ಹೀಗೆ ಬಳಕೆಗೆ ಬಂದಿತು.

"ಸಂಸ್ಕೃತಿ ಎಂಬುದು 'Culture' ಎಂಬರ್ಥದಲ್ಲಿ ಬಳಕೆಯಾಗುತ್ತಿರುವುದು ನೂರು ವರ್ಷಗಳಿಂದೀಚೆಗೆ"[೧] ಎಂದು ಡಿ.ವಿ.ಗುಂಡಪ್ಪನವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅವರೇ ಮುಂದುವರಿದು ಸಂಸ್ಕೃತಿ ಎಂದರೆ ಮನಸ್ಸಿನ ಮೇಲ್ಮೆಯನ್ನು ಅಂತರಂಗದ ಸಂಸ್ಕಾರವನ್ನು ಕುರಿತದ್ದು ಎಂದು ಪ್ರಚಾರ ಪಡೆಯಿತು ಎನ್ನುವರು. ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ ಮುಂತಾದವುಗಳ ಮೂಲಕ ಉಂಟಾಗುವ ಉತ್ತಮ ಭಾವನೆಯೇ ಸಂಸ್ಕೃತಿ ಎಂದು ರೂಢಿಯಾಯಿತು. ಇದನ್ನು ಡಿ.ವಿ.ಜಿ. ಅವರು ಮ್ಯಾಥ್ಯೂ

ಆರ್ನಾಲ್ಡನ ಅಭಿಪ್ರಾಯವನ್ನು ಉಲ್ಲೇಖಿಸಿ "ಸಂಸ್ಕಾರದಿಂದ ಸಂಸ್ಕೃತಿ ಬೆಳೆಯುತ್ತದೆ. ಸಂಸ್ಕಾರ ಅಥವಾ ಸಂಸ್ಕರಣ ಎಂದರೆ ಸಮ್ಯಕ್‌ಕರಣ -ಸಮ್ಯಕ್‌ಕೃತಿ -ಸಂಸ್ಕೃತಿ"[೨] ಎಂದಿದ್ದಾರೆ.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಅರ್ಥವ್ಯಾಪ್ತಿಯ ಬಗೆಗೆ ವಾದ ವಿವಾದಗಳಿವೆ. ಇಂಗ್ಲೀಷ್ ಮತ್ತು ಲ್ಯಾಟಿನ್ ಶಬ್ದಕೋಶಗಳಲ್ಲಿ 'Culture' ಪದಕ್ಕಿರುವ ಅರ್ಥವನ್ನು ಎಫ್.ಆರ್.ಕೊವೆಲ್‌ರವರು ಗುರ್ತಿಸಿದ್ದಾರೆ. 'Cultus animi' ಎಂಬುದಕ್ಕೆ 'Improvement of mind' ಎಂತಲೂ, ಇಂಗ್ಲೀಷ್ ಶಬ್ದಕೋಶದಲ್ಲಿ 'Culture' ಎಂಬುದರ ಅರ್ಥವು 'Husbandry', 'till age' 'Improvement of good education' ಎಂದಿದೆ. ಒಟ್ಟಿನಲ್ಲಿ ಇವು ವ್ಯಕ್ತಿಯ ಮನಸ್ಸು ಬುದ್ಧಿಗಳ ಸದಾಚಾರ ಶುದ್ಧೀಕರಣ ಕುರಿತು ಹೇಳುತ್ತವೆ.

ಸಂಸ್ಕೃತಿಯಂತಹ ಬಹುಮುಖೀ ಪರಿಕಲ್ಪನೆಯನ್ನು ವಿವರಿಸುವುದು ಸುಲಭ ಸಾಧ್ಯವಾದುದಲ್ಲ. ಅದನ್ನು ಸೂತ್ರೀಕರಿಸುವುದಾಗಲೀ, ನಿರ್ದಿಷ್ಟ ನಿರ್ವಚನ ನೀಡುವುದು ಸಾಧ್ಯವಿಲ್ಲದಿದ್ದರೂ ಕೆಲವು ವಿದ್ವಾಂಸರು ವ್ಯಾಖ್ಯಾನಗಳನ್ನು ನೀಡುವ ಪ್ರಯತ್ನ ಮಾಡಿರುವುದನ್ನು ಗಮನಿಸಬಹುದು.

ಡಿ.ವಿ.ಜಿ.ಯವರು ಅಭಿಪ್ರಾಯಿಸುವಂತೆ "ಸಂಸ್ಕೃತಿಯು ನಾನಾ ವಿಜ್ಞಾನಗಳ ನಾನಾ ವಿವೇಕಗಳ ಸಮಾವೇಶದ ಫಲಿತಾಂಶ"[೩] ಎನ್ನುತ್ತಾರೆ.

ಮ್ಯಾಥ್ಯೂ ಆರ್ನಾಲ್ಡ್ ಎಂಬ ಆಂಗ್ಲ ಕವಿಯು ತನ್ನ 'Culture and Anarchy' ಎನ್ನುವ ಕೃತಿಯಲ್ಲಿ "ಪರಿಪೂರ್ಣತೆಗಾಗಿ ಹಾಗೂ ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳಲು ಕೈಗೊಳ್ಳುವ ಪ್ರಯತ್ನವೇ ಸಂಸ್ಕೃತಿ"[೪] ಎಂದಿದ್ದಾನೆ.

ಎಫ್.ಆರ್.ಕೊವೆಲ್ ಅವರು ತಮ್ಮ ಕೃತಿಯಾದ Culture in private and public lifeನಲ್ಲಿ "What word culture really means seems to have been accepted as one of the insoluble puzzles of the modern age"[೫] ಎನ್ನುವರು.

ಟಿ.ಎಸ್.ಎಲಿಯಟ್ ಸಂಸ್ಕೃತಿಯ ವ್ಯಾಖ್ಯಾನವನ್ನು ನೀಡುತ್ತಾ "Culture is not merely sum of several activities, but way of life"[೬] ಅಂದರೆ ಸಂಸ್ಕೃತಿಯೆಂಬುದು ಹಲವು ಚಟುವಟಿಕೆಗಳ ಮೊತ್ತವಾಗಿರದೆ ಜೀವನ ವಿಧಾನವೇ ಆಗಿರುತ್ತದೆ ಎನ್ನುವನು.

೧೯೩೯ರಲ್ಲಿ ಜೀವಿಸಿದ್ದ 'ಪಾಲ್‌ಸಿಯರ್ಸ್' ಎಂಬ ಜೀವವಿಜ್ಞಾನಿಯು ಟೇಲರ್ ಪಂಥೀಯ ವಿದ್ವಾಂಸನಾಗಿದ್ದು ೧೯೫೨ರಲ್ಲಿ ಪ್ರಕಟವಾದ Culture, a critical review of concepts and definitions ಕೃತಿಯಲ್ಲಿ "ಯಾವುದೇ ಒಂದು ಸಮುದಾಯದ ವ್ಯಕ್ತಿಗಳು ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ತೊಡಗುವ ವಿಧಾನ, ಉಪಕರಣಗಳ ತಯಾರಿಕೆ ಮತ್ತು ಬಳಕೆ, ಅವರು ತಮ್ಮ ತಮ್ಮೊಳಗೆ ಮತ್ತು ಇತರ ಸಮುದಾಯಗಳೊಡನೆ ಹೊಕ್ಕು ಬಳಸಿ ಬದುಕುವ ರೀತಿನೀತಿಗಳು, ಬಳಸುವ

ಶಬ್ದಗಳು, ಅವುಗಳನ್ನು ಅವರು ಪ್ರಯೋಗಿಸುವ ಬಗೆ, ಅವರ ಚಿಂತನಾಕ್ರಮ ಈ ಎಲ್ಲವನ್ನು ನಾವು ಆ ಜನಸಮುದಾಯದ ಸಂಸ್ಕೃತಿ"[೭] ಎಂದು ಕರೆಯುತ್ತೇವೆ ಎಂದಿದ್ದಾನೆ.

ಹಿಲ್ಲರ್ ಎಂಬ ಮಾನವ ಶಾಸ್ತ್ರಜ್ಞನು ೧೯೩೩ರಲ್ಲಿ ಸಂಸ್ಕೃತಿಯ ಬಗ್ಗೆ ವ್ಯಾಖ್ಯಾನಿಸುತ್ತ "ನಂಬಿಕೆಗಳು, ವಿವೇಚನಾಕ್ರಮಗಳು, ನೈಜಕಲೆಗಳು, ಜೀವನವಿಧಾನ, ಸಂಪ್ರದಾಯಗಳು ಪರಂಪರೆಗಳು ಮತ್ತು ಸಾಮಾಜಿಕವಾಗಿ ನಿಯಂತ್ರಿತವಾದ ಸಮಸ್ತ ಕ್ರಿಯಾವಿಧಾನಗಳು, ವ್ಯಕ್ತಿಗಳು ಒಂದು ಸಮಾಜದೊಳಗೆ ಬದುಕುತ್ತ ಕಲಿಯತಕ್ಕಂತಹ ಸಮಸ್ತ ವರ್ತನೆಗಳನ್ನು ಒಳಗೊಳ್ಳುತ್ತದೆ"[೮] ಎನ್ನುತ್ತಾರೆ.

ಇ.ಬಿ.ಟೇಲರ್ ಎಂಬ ಮಾನವ ಶಾಸ್ತ್ರಜ್ಞನು ಅಭಿಪ್ರಾಯಪಡುವಂತೆ "Culture of civilization, taken in its wide ethnographic sense is that complex whole. which includes knowledge, belief, art, morals, law, customs and any other capabalities and habits aquired by man as a member of society"[೯] ಅಂದರೆ ಮನುಷ್ಯನು ಸಮಾಜವೊಂದರ ಸದಸ್ಯನಾಗಿ ಗಳಿಸಿಕೊಂಡ ಬುದ್ಧಿ, ನಂಬಿಕೆ, ಕಲೆ, ನೀತಿ, ಸಂಪ್ರದಾಯ, ಕಾನೂನು ಮತ್ತು ಅವನ ಕಲಿಕೆ ಹಾಗೂ ಹವ್ಯಾಸಗಳ ಸಂಕೀರ್ಣ ಮೊತ್ತವೇ ಸಂಸ್ಕೃತಿ ಎಂದಿದ್ದಾನೆ.

ರವೀಂದ್ರನಾಥ ಠಾಗೂರರು ಸಂಸ್ಕೃತಿಯನ್ನು ವ್ಯಾಖ್ಯಾನಿಸುತ್ತ "ಒಂದು ಆಕಾರವನ್ನು ತಳೆದು ನಿಂತ ಆಕಸ್ಮಿಕ ಘಟನೆಗಳ ಮೊತ್ತವಲ್ಲ. ನಮ್ಮ ಪೂರ್ಣತೆಗಾಗಿ ರೂಪಿಸಿಕೊಂಡ ಯಾವುದೋ ದಿವ್ಯಾದರ್ಶದ ಅಭಿವ್ಯಕ್ತಿ. ಮನುಷ್ಯ ನಿಜವಾಗಿ ಏನಾಗಿದ್ದನೋ ಅದರ ಅತ್ಯುತ್ತಮ ಅಭಿವ್ಯಕ್ತಿಯಾಗಿದ್ದು ಅದೊಂದು ಮನೋಮಯ ಜೀವನ"[೧೦] ಎಂದಿದ್ದಾರೆ.

ದೇವುಡು ನರಸಿಂಹಶಾಸ್ತ್ರಿಗಳು ಸಂಸ್ಕೃತಿಯನ್ನು ಕುರಿತು "ಕಲಿತ ವಿದ್ಯೆಯ ಪ್ರಭಾವವೆನ್ನುವುದಕ್ಕಿಂತಲೂ ಅರಗಿದ ವಿದ್ಯೆಯ ಪರಿಣಾಮ. ಅದು ತಳದಿಂದ ತುದಿಯವರೆಗೂ ಆಸ್ತಿಕವಾದುದು. ಧರ್ಮ, ಕರ್ಮ, ಜೀವ, ಬ್ರಹ್ಮ, ಜನ್ಮ ಸಂಸ್ಕಾರಗಳನ್ನು ಅಂಗೀಕರಿಸುವುದು. ಇಹದಲ್ಲಿ ಋಣಗಳನ್ನು, ಪರದಲ್ಲಿ ಲೋಕಾಂತರಗಳನ್ನು ಒಪ್ಪಿರುವುದು. ಬದುಕು ಈಗ ಬೇಕಾದ ಹಾಗೆ ಎದ್ದು ಬಿದ್ದರೂ ಕೊನೆಗೆ ಎಂದಾದರೊಂದು ದಿನ ಆನಂದದಲ್ಲಿ ಮುಗಿಯುವುದು ಎಂಬುದನ್ನು ನಂಬಿರುವುದು ಸಂಸ್ಕೃತಿ"[೧೧] ಎಂದಿದ್ದಾರೆ.

ಮೆಲ್ವಿಲ್ಲೆ ಜೆ. ಹರ್ಸ್‌ಕೋವಿಟ್ಸ್ ಎಂಬ ಮಾನವಶಾಸ್ತ್ರಜ್ಞನು "Culture is the man made part of an environment"[೧೨] ಅಂದರೆ ಪರಿಸರದ ಮಾನವ ನಿರ್ಮಿತಿಯೆಲ್ಲವೂ ಸಂಸ್ಕೃತಿಯಾಗಿರುತ್ತದೆ ಎಂದಿದ್ದಾನೆ.

ಟಿ.ಎಸ್.ಎಲಿಯಟ್‌ನ ಅಭಿಪ್ರಾಯವನ್ನು ಡಾ. ಎಂ.ಚಿದಾನಂದಮೂರ್ತಿಯವರು ಉಲ್ಲೇಖಿಸುತ್ತ "ಸಂಸ್ಕೃತಿಯೆನ್ನುವುದು ಒಂದು ಜನಾಂಗದ ಅಥವಾ ಒಂದು ಸಮಾಜದ ಸಮಸ್ತ ಕ್ರಿಯೆಗಳನ್ನು ಅಭಿರುಚಿಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಗಳು ಏನಿದ್ದರೂ ಈ ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕೆ ಹರಿಸುತ್ತಾರೆ"[೧೩] ಎನ್ನುತ್ತಾರೆ.

ಪಂಡಿತ ಶಿವಮೂರ್ತಿಶಾಸ್ತ್ರಿಗಳು ತಮ್ಮ ಲೇಖನವೊಂದರಲ್ಲಿ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ನಾಗರೀಕ ಜನಾಂಗದ ಪಾಮರ ಕುಲಗಳಲ್ಲಿ ಕಾಣಬರುವ ತಿಳಿವು ಅರಿವು ಅದೇ ಜನತೆಯ ಸಂಸ್ಕೃತಿ ಎಂತಲೂ, ಮುಂದುವರಿದು ಒಂದು ದೇಶದಲ್ಲಿರುವ ವ್ಯಕ್ತಿಗಳ, ಕುಲಗಳ, ಗುಂಪುಗಳ ಪದ್ಧತಿಗಳು ಆಚಾರಗಳು, ನಂಬಿಕೆಗಳು ವೈದುಷ್ಯಾದಿಗಳಿಂದ ಬದಲಾಯಿಸದಿರುವ ಕುಲಗಳಲ್ಲಿ ಬಳಕೆಯಲ್ಲಿರುವ ಪುರಾಣಗಳ ಮನೋವೇದನೆಯ ಪ್ರಕಟರೂಪವೇ ಸಂಸ್ಕೃತಿ"[೧೪] ಎನ್ನಲಾಗುತ್ತದೆ ಎಂದಿದ್ದಾರೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಕಾಳಿದಾಸನು "ಪ್ರಜಾನಾಂ ವಿನಯಾದಾನಾತ್ ರಕ್ಷಣಾತ್ ಭರಣಾದಪಿ ಸಪಿತಾ ಪಿತರಸ್ತಾಸಾ ಕೇವಲಂ ಜನ್ಮ ಹೇತವಃ"[೧೫] ಎಂಬ ಶ್ಲೋಕದಲ್ಲಿ ಸಂಸ್ಕೃತಿಯ ನಿರ್ವಚನವನ್ನು ನೀಡಿದ್ದಾನೆ. ಅಂದರೆ ಹೊಸ ಮಾತು ಎಂದು ನಾವು ನೂಕಬೇಕಾಗಿಲ್ಲ. ಹಳೆಯ ಮಾತು ಎಂದು ಹೆಚ್ಚು ಆದರ ತೋರಬೇಕಾಗಿಲ್ಲ. ನಮಗೆ ಸಂಸ್ಕೃತಿ ವಿನಯಗಳಿರಡೂ ಇರಲಿ ಎಂಬರ್ಥವನ್ನು ನೀಡುತ್ತಾನೆ.

ಡಾ. ರಂಗರಾಜು ವನದುರ್ಗರವರು ಹೇಳುವಂತೆ "ಜನರು ಆಡುವ ಮಾತು, ಮಾಡುವ ಕೆಲಸ ಕಟ್ಟಿಕೊಳ್ಳುವ ಮನೆ, ಉಟ್ಟುಕೊಳ್ಳುವ ಬಟ್ಟೆ, ಉಣ್ಣುವ ಊಟ, ಬೆಸೆಯುವ ಭಾಂದವ್ಯ, ಆಚರಿಸುವ ಆಚರಣೆ, ಇಟ್ಟುಕೊಳ್ಳುವ ನಂಬಿಕೆ, ಆಡುವ ಕ್ರೀಡೆ, ಪ್ರದರ್ಶಿಸುವ ಕಲೆ, ಸಾಗಿಸುವ ಸಂಪ್ರದಾಯ ಇತ್ಯಾದಿಗಳ ಒಟ್ಟು ಮೊತ್ತವನ್ನು ಸಂಸ್ಕೃತಿ"[೧೬] ಎಂದು ಕರೆಯಬಹುದು ಎನ್ನುವರು. ಮನುಷ್ಯನ ಬದುಕಿನಲ್ಲಿ ಘಟಿಸುವ ಎಲ್ಲಾ ಅಂಶಗಳು ಇಲ್ಲಿ ಒಳಗೊಳ್ಳುತ್ತವೆ.

ಮೇಲಿನ ವ್ಯಾಖ್ಯಾನಗಳೆಲ್ಲವನ್ನೂ ಅವಲೋಕಿಸಿದರೆ ಪ್ರಕೃತಿಯ ಪರಿಷ್ಕೃತ ರೂಪ ಸಂಸ್ಕೃತಿಯಾಗಿರುತ್ತದೆ. ಪ್ರಕೃತಿಯು ಶಿವಮಯವಾದುದು. ಸಂಸ್ಕೃತಿ ವ್ಯಕ್ತಿಮಯವಾದುದು. ಅಲ್ಲದೆ ಮಾನವೀಯ ಮೌಲ್ಯಗಳ ಜೀವಾಳವೇ ಸಂಸ್ಕೃತಿಯೆಂದರೂ ತಪ್ಪಾಗಲಾರದು. ವ್ಯಕ್ತಿಯೊಬ್ಬನು ಹುಟ್ಟಿನೊಡನೆ ತನ್ನೊಂದಿಗೆ ಬಂದ ಪಶುತ್ವವನ್ನು ಹೋಗಲಾಡಿಸಿ ವ್ಯಕ್ತಿತ್ವವನ್ನು ಸಾಧಿಸುವುದೇ ಸಂಸ್ಕೃತಿ. ವಿಶಾಲಾರ್ಥದಲ್ಲಿ ಸಂಸ್ಕೃತಿ ಎನ್ನುವುದು ವ್ಯಕ್ತಿಯ ಒಳಿತು ಕೆಡುಕುಗಳ ದೇಹ ಮನಸ್ಸುಗಳ ಭೌತಿಕ-ಅಭೌತಿಕಗಳ ಅವಿರತ ಸಂಘರ್ಷದ ಫಲವೆನ್ನಬಹುದು. ಸಂಸ್ಕೃತಿ ಎನ್ನುವುದು ಕೇವಲ ವ್ಯಕ್ತಿಯ ಸೊತ್ತು ಮಾತ್ರವಲ್ಲದೆ ಉಳಿದೆಲ್ಲ ಪ್ರಾಣಿವರ್ಗದಿಂದ ವ್ಯಕ್ತಿಯನ್ನು ಬೇರ್ಪಡಿಸಿದ ವಿಶಿಷ್ಟವಾದ ಅಂಶವೂ ಆಗಿದೆ.

ಇತ್ತೀಚೆಗೆ ಸಂಸ್ಕೃತಿ ಮತ್ತು ನಾಗರೀಕತೆಗಳನ್ನು ಏಕಾರ್ಥದಲ್ಲಿ ಬಳಸಲಾಗುತ್ತದೆ. ಈ ಎರಡೂ ಪರಿಕಲ್ಪನೆಗಳು ವ್ಯಕ್ತಿ ಜೀವನಕ್ಕೆ ಸಂಬಂಧಿಸಿದುವೇ ಆದರೂ ಸೂಕ್ಷ್ಮವೆನಿಸುವ ಅರ್ಥ ಭೇದವಿದೆ. ನಾಗರೀಕತೆಯು ವ್ಯಕ್ತಿಯ ಬಾಹ್ಯ ಇರುವಿಕೆಯನ್ನು ಅರ್ಥೈಸುತ್ತದೆ. ಮನುಷ್ಯನು ತಾನಾಗಿಯೇ ನಿರ್ಮಿಸಿಕೊಂಡ ಪುರವ್ಯವಸ್ಥೆಯೇ ನಾಗರೀಕತೆ. ಇವುಗಳೊಂದಿಗೆ ವೈಜ್ಞಾನಿಕತೆ, ಯಾಂತ್ರಿಕತೆ, ತಾಂತ್ರಿಕತೆಯೆಲ್ಲವೂ ನಾಗರೀಕತೆಗೆ ಸಂಬಂಧಿಸಿದವುಗಳಾಗಿವೆ. "Creative abilities built up culture, civilization is the process by

which culture is spread"[೧೭] ಅಂದರೆ ಕ್ರಿಯಾತ್ಮಕವಾದ ಭೌತಿಕ ಸಂಸ್ಕೃತಿಯ ರೂಪವೇ ನಾಗರೀಕತೆ. ನಾಗರೀಕತೆಯು ಸಂಸ್ಕೃತಿಯ ಮಾಧ್ಯಮವಾದ ಕಾರಣ ಅದು ಸಂಸ್ಕೃತಿಯ ಅಂಗವಾಗಬಹುದೇ ವಿನಾ ಅದೇ ಸಂಸ್ಕೃತಿಯಾಗಲಾರದು. ಆದರೂ ವ್ಯಕ್ತಿಯ ನಾಗರೀಕತೆಯ ಮುಖೇನ ಆತನ ಸಂಸ್ಕೃತಿಯ ಸ್ಥೂಲವಾದ ನಿಲುವನ್ನು ಪಡೆಯಬಹುದಾಗಿದೆ. ಸಂಸ್ಕೃತಿ ಎಂಬುದು ಮಾನವನ ಬದುಕಿನ ಕತೆ, ಇದು ಕಾಲದ ನಡಾವಳಿ ನುಡಿವಳಿಗಳ ಜೊತೆಯಲ್ಲಿ ಬೆಳೆಯುತ್ತಿರುತ್ತದೆ.

ಒಟ್ಟಾರೆಯಾಗಿ ಮನುಷ್ಯನೆಂಬ ವ್ಯಕ್ತಿ ಹಲವಾರು ಅಂಗಾಂಗಗಳಿಂದ ಒಡಗೂಡಿ ಸಿದ್ಧವಾದ ದೇಹಕ್ಕಿಂತ ಹೇಗೆ ಮಿಗಿಲಾದವನೋ ಅಂತೆಯೇ ಸಂಸ್ಕೃತಿಯೆನ್ನುವುದು ಕಲೆ, ಸಂಪ್ರದಾಯ ಮತ್ತೀಯ ಮೂಢನಂಬಿಕೆಗಳಿಂದ ಕೂಡಿದ್ದರೂ ಅವುಗಳಿಗಿಂತ ಮಿಗಿಲಾದುದು ಈ ಸಂಸ್ಕೃತಿ. ಇದು ಅಂತಿಮವಾಗಿ ಜೀವನ ವಿಧಾನವೇ ಆಗಿದ್ದು ಹುಟ್ಟುವುದು ವ್ಯಷ್ಠಿಯಲ್ಲಾದರೂ ಅದು ಬದುಕಿಬಾಳುವುದು ಸಮಷ್ಠಿಯಲ್ಲಿ ಎಂದರೆ ಅತಿಶಯೋಕ್ತಿಯ ಮಾತಾಗಲಾರದು. ಹೀಗೆ ಸಂಸ್ಕೃತಿಯ ಅರ್ಥವು ಸರಸ್ವತೀ ನದಿಯಂತೆ ಗುಪ್ತಗಾಮಿನಿಯಾಗಿ, ಹಿಮಾಲಯದ ಗೌರೀಶಂಕರದಂತೆ ಗಗನ ಚುಂಬಿತವಾಗಿ, ಶಾಂತಸಾಗರದ ವೈಶಾಲ್ಯದಂತೆ ಅತಿವ್ಯಾಪಕವಾಗಿ ಕಂಡುಬಂದರೂ ಅದರ ಪ್ರಭಾವವು ಎಲ್ಲಾ ನಾಗರೀಕ ಸಮಾಜಗಳ ಮೇಲೆಯೂ ಉಂಟಾಗಿದೆ. ಇದರಲ್ಲಿಯೇ ಸಂಸ್ಕೃತಿಯ ಚೈತನ್ಯ, ಮಹತ್ವ ಮತ್ತು ಅದರ ಅವ್ಯಕ್ತ ಶಕ್ತಿ ತುಂಬಿಕೊಂಡಿದೆ ಎಂದು ಹೇಳಬಹುದು.

ಒಂದು ಜನಸಮುದಾಯದ ಸಂಸ್ಕೃತಿ ಸ್ಥಿರವೂ ಸ್ಪಷ್ಟವೂ ಮುಷ್ಟಿಗ್ರಾಹ್ಯವೂ ಆಗಿ ತೋರಬಹುದಾದರೂ, ವಾಸ್ತವದಲ್ಲಿ ನಿಯತವೂ ನಿರಂತರವೂ ಆದ ಬದಲಾವಣೆಯನ್ನು ಹೊಂದುತ್ತ ಸಾಗುವುದು ಅದರ ಸ್ವಭಾವ. ಯಾವುದೇ ವ್ಯಕ್ತಿಗೆ ಸಂಸ್ಕೃತಿಯು ಸಂಪೂರ್ಣವಾಗಿ ಕರಗತವಾಗಿರದೆ ವಿವಿಧ ವೃತ್ತಿಯನ್ನುಳ್ಳ ಜನ ಒಂದೇ ಸಮುದಾಯದಲ್ಲಿ ಬದುಕುತ್ತಿದ್ದರೂ ಪರಸ್ಪರರಲ್ಲಿ ವೃತ್ತಿ ಪರಿಣತಿಗಳು ಪೂರ್ಣ ಪ್ರಮಾಣದಲ್ಲಿ ಅರಿವಾಗಿರಲಾರವು. ಇದು ವ್ಯಕ್ತಿಯೋರ್ವನಿಗೆ ತಂತಾನೆ ಲಭಿಸುವ ಆನುವಂಶಿಕ ಕೊಡುಗೆಯಲ್ಲ. ವ್ಯಕ್ತಿ ಹುಟ್ಟಿದ ಮೇಲೆ ಆರಂಭಿಸುವ ದುಡಿಮೆಯ ಫಲ. ಸಂಸ್ಕೃತಿಯು ಇದಕ್ಕಿದ್ದಂತೆ ಹುಟ್ಟಿದ ಅಥವಾ ಸ್ವಯಂ ಸಿದ್ಧ ವಸ್ತುವೂ ಅಲ್ಲ. ಅದರ ಹಿಂದೆ ವ್ಯಕ್ತಿಯ ಸತತ ಪ್ರಯತ್ನ ಹಾಗೂ ಅಪರಿಮಿತವಾದ ಕಾಲಾವಕಾಶಗಳಿರುತ್ತವೆ. ಜೀವಂತ ಪ್ರಕ್ರಿಯೆಯಾದ ಈ ಸಂಸ್ಕೃತಿಯಲ್ಲಿ ಏಳುಬೀಳುಗಳು ಬದಲಾವಣೆಗಳು ಇರುವುದರಿಂದ ಅದಕ್ಕೊಂದು ನಿರಂತರತೆಯು ಇರುತ್ತದೆ. ಇಂತಹ ಜನಸಮುದಾಯ ಸಂಸ್ಕೃತಿಯಲ್ಲಿ ಕುರುಬ ಸಮುದಾಯದ ಸಾಂಸ್ಕೃತಿಕ ಅಧ್ಯಯನವು ಸಮಗ್ರವಾಗಿ ನಡೆಯಬೇಕಾದ ಅಗತ್ಯವಿದೆ. ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನವು ಅದರ ಒಂದು ಭಾಗವಾಗಿ ರೂಪುಗೊಳ್ಳಬೇಕಾದ ಅನಿವಾರ್ಯತೆಯಿದೆ.

ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಹೊರಟರೆ ನಮಗೆ ಲಭ್ಯವಾಗುವ ಮೌಖಿಕ ಆಕರಗಳು ಹಾಗೂ ಶಿಷ್ಟ ಆಕರಗಳು ಪ್ರಧಾನವಾಗುತ್ತವೆ. ಶಿಷ್ಟ ಸಾಹಿತ್ಯ

ಆಕರಗಳಾದ ಶಾಸನಗಳು, ಕಾವ್ಯ, ಪುರಾಣಗಳು ಒಂದೆಡೆಯಾದರೆ, ಮೌಖಿಕ ಆಕರಗಳಾದ ಜಾನಪದ ಸಾಹಿತ್ಯ ಪ್ರಮುಖವಾಗುತ್ತದೆ. ಅಂತಹ ಮೌಖಿಕ ಪರಂಪರೆಯ ಆಕರವಾದ 'ಡಾ. ವೀರಣ ದಂಡೆ'ಯವರು ಸಂಪಾದಿಸಿರುವ 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ಕಾಣಿಸುವ ವಸ್ತು ಚಿತ್ರಣ ಭಿನ್ನವಾಗಿದೆ. ಲಿಖಿತ ಹಾಲುಮತ ಪುರಾಣಗಳ ತಾತ್ವಿಕತೆಗಿಂತ ಭಿನ್ನವಾಗಿ ಕಂಡುಬರುವ ಒಳಪಂಗಡಗಳ ಸ್ವರೂಪವನ್ನು ಜನಪದರು ಕಟ್ಟಿಕೊಟ್ಟಿದ್ದಾರೆ.

"ತಾಯಿ ಮಕ್ಕಳು ಕೂಡಿದರಯ್ಯ ತಂದಿಮಕ್ಕಳು ಕೂಡಿದರಯ್ಯ
ತಂದಿ ಮಕ್ಕಳು ಕೂಡ್ಯಾರವರು ಪದುಮಗೊಂಡ ಹೇಳ್ಯಾನ
ಉಣ್ಣೆಕಂಕಣದವರಿಗಪ್ಪ ಹಿರಿಯಾ ಮಗನಂದಾರ
ಹತ್ತಿಕಂಕಣದವರಿಗಪ್ಪ ಸಣ್ಣಮಗನ ನೀನಯ್ಯಾ
ನೀನೆ ದೊಡ್ಡ ತಮ್ಮನೇ ಆದರೆ ಅವರೇ ಸಣ್ಣ ತಮ್ಮದೇರಾ
ಶಿವಲಿಂಗಮ್ಮನ ಮಕ್ಕಳಿಗಯ್ಯ ಹತ್ತಿಕಂಕಣದವರಿಗೆ
ಹತ್ತಿಕಂಕಣದವರಿಗಯ್ಯ ನೀವೇ ತಮ್ಮದೇರು ಅಂದಾಳು
ಮಡ್ಡಪ್ಪ ಪಾಲ ಕೊಟ್ಟಾನೆ ಅಣ್ಣದೇರು ಪಾಲಕೊಟ್ಟಾನ
ಶಿವಲಿಂಗಮ್ಮನ ಮಕ್ಕಳಿಗಯ್ಯ ಇಬ್ಬರಿಗೆ ಪಾಲ ಕೊಟ್ಟಾರ
ತಾಯಿದೇರಿಗೆ ಹಿಡಿದೇವೆ ತಂದಿನ ಬಿಟ್ಟು ಬಂದೀವೆ
ಸಿದ್ಧಮ್ಮನ ಗಂಡ ಪದುಮಗೊಂಡ ಶಿವಲಿಂಗಮ್ಮನ ಗಂಡ ಪದುಮಗೊಂಡ
ಇಬ್ಬರ ಇಬ್ಬರಿಗಲ್ಲೇಳಯ್ಯ ಪದುಮಗೊಂಡನಿದ್ದಾನೆ
ತಂದಿ ಹಿಡಿದು ಬಂದಾರೆ ನಾವೇ ಗೊಂಡಗುರುಬರೆ
ಕಾಡಿನಲ್ಲಿ ಇದ್ದರ ನಾವ ಕಾಡುಕುರುಬರಾದೇವೆ
ಕಾಡುಕುರುಬರು ನಾವೇನಾದೇವು ಅಡವಿಯ ಕುರುಬರು ನಾವೇನ
ಗೊಂಡ ಗುರುಬರು ನಾವೇನಯ್ಯ ಪದುಮಗೊಂಡನ ಮಕ್ಕಳೆ
ಗೊಂಡಗೋಳಾ ಪದಗೋಳಯ್ಯ ಇಲ್ಲಿಗೆ ಮುಗದಾವೇನಯ್ಯ"[೧೮]

ಇದರಿಂದ ಪದ್ಮಗೊಂಡನ ಮಕ್ಕಳೇ ಎರಡು ಒಳಪಂಗಡಗಳಾಗಿ ಕವಲೊಡೆದರು. ಜೊತೆಗೆ ಕಾಡುಕುರುಬ ಮತ್ತು ಗೊಂಡಕುರುಬ ಒಳಪಂಗಡಗಳ ಸೃಷ್ಟಿ ಮೂಲವನ್ನು ಹತ್ತಿಕಂಕಣ ಮತ್ತು ಉಣ್ಣೆಕಂಕಣ ಸೃಷ್ಟಿ ಮೂಲದೊಂದಿಗೆ ತಳುಕು ಹಾಕಿಕೊಂಡಿವೆ. ಗೊಂಡ ಮತ್ತು ಕಾಡುಕುರುಬ ಕುಲಗಳ ಸೃಷ್ಟಿಯನ್ನು ಹೇಳುವ ವಿಧಾನವೂ ಭಿನ್ನವಾದುದು. ಇವೆರಡು ವಿಭಜನೆಗೊಂಡ ಕುಲಗಳಲ್ಲ. ವಾಸಿಸುವ ಪ್ರದೇಶದಿಂದ ಮತ್ತು ವಂಶವನ್ನು ಗುರುತಿಸುವ ಪದದ ಬಳಕೆಯ ಹಿನ್ನೆಲೆಯಲ್ಲಿ ನಾಮಾಂಕಿತ ಪಡೆದ ಕುಲಗಳು

ಎನ್ನುವ ತಾತ್ವಿಕತೆಯನ್ನು ನಮ್ಮ ಮುಂದಿಡುತ್ತವೆ. ಕಾಡುಕುರುಬರಿಗೆ ಕಾಡಿನಲ್ಲಿ ವಾಸಿಸುವ ಕಾರಣಕ್ಕೆ ಈ ಹೆಸರು ಬಳಕೆಗೆ ಬಂತು ಎನ್ನುವುದನ್ನು ಹಲವು ವಿದ್ವಾಂಸರು ಒಪ್ಪಿದ್ದಾರೆ. ಕಾಡುಕುರುಬ ಮತ್ತು ಗೊಂಡಗುರುಬ ಉಣ್ಣೆಕಂಕಣಕ್ಕೆ ಸೇರಿದವರು ಎನ್ನುವುದು ಜನಪದ ಹಾಲುಮತ ಮಹಾಕಾವ್ಯದ ವಾದವಾಗಿರುತ್ತದೆ.

ಅ. ಸಂಪ್ರದಾಯ-ಆಚರಣೆಗಳು

ಮನುಷ್ಯ ಬದುಕನ್ನು ಕಲಿತ ಹಾಗೆ ಉತ್ತಮವಾಗಿ ಬದುಕಬೇಕೆಂಬ ಅಪೇಕ್ಷೆ ಆತನಲ್ಲಿ ಬಲವಾಯಿತು. ಮುಂದೆ ಅದಕ್ಕೊಂದು ಕ್ರಮಬದ್ಧ ರೂಪಕೊಡಲು, ಇತರರೂ ಅದನ್ನು ಅನುಸರಿಸುವಂತಾಗಲು ಅನೇಕ ಕಟ್ಟು ಕಟ್ಟಲೆಗಳನ್ನು ವಿಧಿಸತೊಡಗಿದನು. ಕುಲದ ಅಥವಾ ಸಮುದಾಯದ ಒಬ್ಬ ಹಿರಿಯ ಅಥವಾ ಬುದ್ಧಿವಂತನ ದೂರದೃಷ್ಟಿ, ಚಿಂತನೆಗಳು ಇತರರಿಗೆ ಮಾರ್ಗದರ್ಶನ ರೂಪದಲ್ಲಿ ವಿಧಿ ನಿಯಮಗಳು ರೂಪಗೊಂಡವು. ಸಮಾಜದ ಇತರ ಸದಸ್ಯರೂ ಒಪ್ಪಿ ಹಾಗೆ ಬದುಕಿನಲ್ಲಿ ತಂದಾಗ ಅವು ಹಿರಿಯರೆನಿಸಿದವರು ಮಾಡಿದ ಶಾಸ್ತ್ರ ಸಂಪ್ರದಾಯಗಳಾದವು. ಮುಂದೆ ಅವು ಆಯಾ ಸಮುದಾಯದಲ್ಲಿ ಪಾಲಿಸಬೇಕಾದ ಸಂಪ್ರದಾಯಗಳೆನಿಸಿದವು.

ಮಾನವನ ಬದುಕಿನ ಒಂದೊಂದು ಅವಸ್ಥೆಗೂ ಒಂದೊಂದು ಸಂಸ್ಕಾರ, ಸಂಪ್ರದಾಯ, ಒಂದೊಂದು ಸಂಸ್ಕಾರದಲ್ಲೂ ಹಲವು ವಿಧದ ವಿಧಿ ಆಚರಣೆಗಳಿರುತ್ತವೆ. ಯಾವುದೇ ಧರ್ಮವನ್ನು ತೆಗೆದುಕೊಂಡರೂ ಅನೇಕ ಸಂಪ್ರದಾಯಗಳಿಂದ ಕೂಡಿರುತ್ತವೆ. ಸಂಪ್ರದಾಯಗಳು ತಾತ್ಕಾಲಿಕ ತಿಳುವಳಿಕೆಗಳಾಗಿರದೆ ಸಮುದಾಯ ಪ್ರಜ್ಞೆಯಲ್ಲಿ ವಿಕಸಿತವಾದ ಜೀವನ ಸಂಹಿತೆಗಳಾಗಿವೆ. ಸಂಪ್ರದಾಯಗಳು ಅನೇಕ ಆಚರಣೆಗಳ ರೂಪದಲ್ಲಿ ವ್ಯಕ್ತವಾಗುತ್ತವೆ. ಆಚರಣೆಗಳು ಅನೇಕ ವಿಧಿಗಳಿಂದ ಕೂಡಿರುತ್ತವೆ. ವಿಧಿಗಳು ನಂಬಿಕೆಗಳಿಂದ ಸುತ್ತುವರಿದಿರುತ್ತವೆ. ಇವೆಲ್ಲವುಗಳ ಕ್ರಿಯಾತ್ಮಕ ಅಭಿವ್ಯಕ್ತಿಯನ್ನು ನಾವು ನಡಾವಳಿಕೆಗಳು ಎಂದು ಕರೆಯುತ್ತೇವೆ. [1]

ಸಂಪ್ರದಾಯ ನಿಷ್ಠವಾದ ಬದುಕು ಜನನ ಪೂರ್ವದಿಂದ ಮರಣೋತ್ತರದವರೆಗೂ ಅನೇಕ ಶಾಸ್ತ್ರಾಚರಣೆಗಳಿಂದ ಕೂಡಿರುತ್ತದೆ. ಇಂತಹ ಬದುಕಿನಲ್ಲಿ ವಿವಾಹ ಮತ್ತು ಶವಸಂಸ್ಕಾರ ಸಂಪ್ರದಾಯಗಳಾಗಿ ಗುರುತಿಸಬಹುದು. ಇವು ಬದುಕಿನ ಎರಡು ಅವಸ್ಥೆಗಳನ್ನು ಗುರುತಿಸುವುದರ ಜೊತೆಗೆ ಅನೇಕ ಶಾಸ್ತ್ರಾಚರಣೆಗಳಿಂದ ಕೂಡಿ ಸಂಕೀರ್ಣಗೊಂಡಿರುತ್ತವೆ. ಹಲವು ದಿನಗಳ ಆಚರಣೆಗಳ ಮೊತ್ತವೇ ಸಂಪ್ರದಾಯಗಳು ಎನಿಸಿಕೊಳ್ಳುತ್ತವೆ.

ಮನುಷ್ಯ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಪೋಷಿಸುವಲ್ಲಿ ಆಚರಣೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿ ಆಚರಣೆಗಳು ಬೆಳೆದು ಸಂಪ್ರದಾಯಗಳಾಗಿ ಮಾರ್ಪಾಡುಗೊಳ್ಳುತ್ತವೆ. ವೈಯಕ್ತಿಕವಾಗಿ ರೂಪತಾಳುವ ಆಚರಣೆ ಸಾಮೂಹಿಕವಾಗಿ

ಮಹತ್ವವನ್ನು ಗಳಿಸಿಕೊಳ್ಳುತ್ತವೆ. ಮನುಷ್ಯನ ನಂಬಿಕೆಗಳಿಗನುಸಾರವಾಗಿ ಪ್ರಕೃತಿಯೊಂದಿಗೆ ತನ್ನ ಸಮುದಾಯದೊಂದಿಗೆ ಬೆರೆತು ತನ್ನ ಸುಖಸಂತೋಷ, ಸಂಭ್ರಮಗಳನ್ನು ಅಭಿವ್ಯಕ್ತಪಡಿಸುವ ಸಲುವಾಗಿ ಧಾರ್ಮಿಕ ವಿಧಿಕ್ರಿಯೆಗಳನ್ನು ರೂಢಿಸಿಕೊಂಡು ಆಚರಣೆಗಳು ಬೆಳೆದು ಬಂದಿರುತ್ತವೆ. ಈ ಆಚರಣೆಗಳೇ ಸಂಪ್ರದಾಯಗಳಾಗಿ ಮಾರ್ಪಟ್ಟು ಅಲಿಖಿತ ಒಪ್ಪಂದದಂತೆ ಅನುಸರಣೆಯಾಗುತ್ತವೆ. ಆದ್ದರಿಂದ ಸಂಪ್ರದಾಯಗಳು ಸಾಮೂಹಿಕ ಸ್ವರೂಪದ್ದಾಗಿರುತ್ತದೆ. ಆದರೆ ಆಚರಣೆಗಳ ಪರಿಮಿತಿಯನ್ನು ನಿರ್ಧಿಷ್ಟವಾಗಿ ಗುರುತಿಸಿಕೊಳ್ಳುವ ಅಗತ್ಯವಿರುತ್ತದೆ.

ಇಡೀ ಸಮಾಜದ ಅಥವಾ ಒಂದು ನಿರ್ದಿಷ್ಟ ಪ್ರದೇಶದ ಜನತೆಯ ಅಂಗೀಕಾರದ ಮುದ್ರೆಯನ್ನು ಪಡೆಯದೆ ಕೇವಲ ಒಂದು ಗುಂಪಿಗೆ ಅಥವಾ ಕುಟುಂಬಕ್ಕೆ ಸೀಮಿತಗೊಂಡಿರುವ ಆಚರಣೆಗಳು ಸಂಪ್ರದಾಯಗಳೆನಿಸಿಕೊಳ್ಳುವುದಿಲ್ಲ. ಅಂದರೆ ಸಂಪ್ರದಾಯವು ಯಾವತ್ತೂ ಸಾರ್ವತ್ರಿಕವಾಗಿ ಸಾಮೂಹಿಕವಾದುದಾಗಿದ್ದರೆ, ಆಚರಣೆಗಳು ಒಂದು ನಿರ್ದಿಷ್ಟ ಚೌಕಟ್ಟಿಗೆ ಸೀಮಿತವಾಗಿರುತ್ತವೆ. ಆದರೆ ಆಚರಣೆಗಳು ನಿರ್ಧಿಷ್ಟ ಚೌಕಟ್ಟಿಗೆ ಮತ್ತು ಗುಂಪಿಗೆ ಸೀಮಿತಗೊಂಡಿದ್ದರೂ ಸಾಂಸ್ಕೃತಿಕವಾಗಿ ಹೆಚ್ಚು ಮನ್ನಣೆಯನ್ನು ಗಳಿಸಿರುವುದುಂಟು. ಇವುಗಳು ತಮ್ಮದೇ ಆದ ವಿಶಿಷ್ಟವಾದ ನಂಬಿಕೆಗಳಿಂದ ನಿಯಮಬದ್ಧವಾಗಿ ನಡೆಯುತ್ತವೆ. ಅನೇಕ ವೇಳೆ ಈ ಆಚರಣೆಗಳು ಸಮುದಾಯಗಳಿಗೆ ಆಕರ್ಷಣೀಯವಾಗಿ ಕಂಡುಬಂದು ಸಾರ್ವಜನಿಕವಾದ ಸಹಭಾಗಿತ್ವವನ್ನು ಗಳಿಸಿಕೊಂಡಿರುತ್ತವೆ.

ಆಚರಣೆಗಳಿಗೆ ನಂಬಿಕೆಗಳೇ ಬೆನ್ನೆಲುಬು. ನಂಬಿಕೆ, ಸಿದ್ಧಾಂತ, ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಪುರಾಣಗಳು ಮರೆತು ಹೋದ ಸಂದರ್ಭದಲ್ಲೂ ನಿರಾತಂಕವಾಗಿ ಆಚರಣೆಗಳು ಮುಂದುವರಿಯುತ್ತಾ ಹೋಗುತ್ತವೆ. ಮತಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ ಕರ್ಮವಿಧಿಗಳಿಗೆ ಈ ಹೆಸರಿದೆ. ಆಚರಣೆಗಳಿಗೆ ನಂಬಿಕೆಯ ತಳಹದಿಯಿರುವುದರಿಂದ ಅವುಗಳು ನಶಿಸಿ ಹೋಗಲು ಸಾಧ್ಯವಿಲ್ಲ. ಒಪ್ಪಿಗೆಯ ಸೂಚನೆಯನ್ನು ಆಚರಣೆಗಳು ಪ್ರಕಟಪಡಿಸುತ್ತವೆ. "ಸಂಪ್ರದಾಯಗಳು ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಸಂಗತಿಗಳ ಮೊತ್ತವೇ ಆಚರಣೆ"[೧೯] ಎನ್ನಲಾಗುತ್ತದೆ. ಹೀಗೆ ಆಚರಣೆಗಳು ವಿಧಿವತ್ತಾದ ಸಂಪ್ರದಾಯಗಳಾಗಿಯೂ ಮುಂದುವರಿದು ಬಂದಿರುತ್ತವೆ.

ಆಚರಣೆಗಳು ಒಂದು ನಿರ್ದಿಷ್ಟ ಕಾರಣಗಳಿಗಾಗಿ, ನಿಗಧಿತ ಸಮಯಗಳಲ್ಲಿ ನಿಯಮಬದ್ಧವಾಗಿ ನಡೆಯುವುದರಿಂದ ತನ್ನ ಪರಿವಾರ ಅಥವಾ ಸಮುದಾಯವನ್ನು ನಿಯಂತ್ರಿಸುವ ಮತ್ತು ಅದನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಸಮುದಾಯದ ಸದಸ್ಯನಾದವನು ಆಚರಣೆಗಳಿಗೆ ಬದ್ಧನಾಗಿರುವಂತೆ ನಿಯಂತ್ರಿಸುತ್ತವೆ. "ತಲತಲಾಂತರದಿಂದ ಸಮುದಾಯದ ಅಂಗೀಕಾರವನ್ನು ಪಡೆದು ಬಳಕೆಯಲ್ಲಿರುವ ಧಾರ್ಮಿಕ ವಿಧಿಗಳೇ ಆಚರಣೆಗಳು"[೨೦] ಎಂದೂ ಹೇಳಬಹುದಾಗಿದೆ.

ಸಾಮಾಜಿಕವಾಗಿ ಕೆಳಜಾತಿ ಮತ್ತು ವರ್ಗದ ಜನರ ಆಚರಣೆಗಳು ತಮಗಿಂತ ಮೇಲಿನವರ ಪ್ರಭಾವಗಳಿಗೆ ತುತ್ತಾಗಿ ವೈದಿಕೀಕರಣಕ್ಕೆ ಒಳಪಡುತ್ತವೆ. ಹೀಗಾಗಿ ಆಚರಣೆಗಳು ಆಧುನಿಕ ಸಮಾಜಕ್ಕಿಂತ ಸಾಂಪ್ರದಾಯಿಕ ಸಮಾಜದಲ್ಲಿ, ಬುಡಕಟ್ಟು ಸಮಾಜದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಅನಕ್ಷರಸ್ಥರಲ್ಲಿ ಹೆಚ್ಚು ಪ್ರಬಲವಾಗಿರುತ್ತವೆ. ಆಚರಣೆಗಳನ್ನು ನಡೆಸುವ ಗುಂಪುಗಳು ಮಿತವಾಗಿದ್ದಷ್ಟು ಆಚರಣೆಗಳು ವಿಧಿವತ್ತಾಗಿ ನಡೆಯುತ್ತವೆ. ಅನೇಕ ವೇಳೆ ಆಚರಣೆಗಳೇ ಸಂಪ್ರದಾಯಗಳಾಗಿ ಮಾರ್ಪಡುವುದರಿಂದ ಅವುಗಳು ಪ್ರಸಿದ್ಧಿ ಪಡೆಯುತ್ತವೆ. ಒಟ್ಟಾರೆಯಾಗಿ ಸಂಪ್ರದಾಯಗಳು ಮತ್ತು ಆಚರಣೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರೆ ತಪ್ಪಾಗಲಾರದು.

ಕಾಡು ಬೆಟ್ಟ | ಬೆತ್ತ ಕುರುಬರು

ಕಾಡು ಕುರುಬರಿಗಿರುವ ಪರ್ಯಾಯ ಹೆಸರುಗಳೇ ಬೆಟ್ಟ | ಬೆತ್ತ ಕುರುಬರು. ಈ ಬೆಟ್ಟ ಕುರುಬರು ಬಿದಿರನ್ನು ಬಳಸಿಕೊಂಡು ಅದರಿಂದ ಸಾರ್ವಜನಿಕರ ನಿತ್ಯ ಬಳಕೆಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಸಿದ್ಧಪಡಿಸಿ ಹತ್ತಿರದ ಗ್ರಾಮೀಣ ಸಂತೆ ದಿನಗಳಲ್ಲಿ ಮಾರಾಟವನ್ನು ಮಾಡಿ ಬಂದ ಹಣದಿಂದ ದೈನಂದಿನ ಬದುಕನ್ನು ಸಾಗಿಸುತ್ತಿರುವುದರಿಂದ ಇವರಿಗೆ 'ಬೆತ್ತ ಕುರುಬರು' ಎಂಬ ಹೆಸರು ಪ್ರಾಪ್ತವಾಗಿರಬೇಕು. ಮೂಲತಃ ಇವರು ಅರಣ್ಯವಾಸಿಗಳಾಗಿರುವುದರಿಂದ 'ಕಾಡುಕುರುಬರು' ಎಂತಲೂ, ಬೆಟ್ಟಗುಡ್ಡಗಳಲ್ಲಿ ಆವಾಸಸ್ಥಾನ ನಿರ್ಮಿಸಿಕೊಂಡು ಬದುಕು ನಡೆಸುತ್ತಿದ್ದುದರಿಂದ "ಬೆಟ್ಟ ಕುರುಬರು' ಎಂದು ಹೆಸರು ಪಡೆದಿರಬಹುದು. ಕಾಡುಕುರುಬರು ದಟ್ಟವಾದ ಕಾಡು ಪ್ರದೇಶಗಳಲ್ಲಿ, ಬೆಟ್ಟಗುಡ್ಡ, ಬಯಲು ಪ್ರದೇಶಗಳಲ್ಲಿ ವಾಸವಾಗಿದ್ದು ಅಲ್ಲಿನ ಭೌಗೋಳಿಕ ಪರಿಸರ ಅವರ ಜೀವನ ನಿರ್ವಹಣೆಗೆ ಸಹಕಾರಿಯಾಗಿದೆ.

ಕುರುಬರನ್ನು ಈ ನಾಡಿನ ಮೂಲನಿವಾಸಿಗಳೆಂದು ಕರೆಯಲಾಗುತ್ತದೆ. ಕಾಲಕ್ರಮೇಣ ಕುರುಬ, ಕುರುಂಬ ಹೆಸರುಗಳಿಗೆ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಸ್ಥಳೀಯ ಹೆಸರುಗಳನ್ನು ನೀಡಿರಬೇಕು. 'ಲೂಯಿರೈಸ್'ರವರು "ಕುರುಬ ಹಾಗೂ ಕುರುಂಬರನ್ನು ಊರು ಕುರುಬ ಮತ್ತು ವನ್ಯ ಕುರುಬ"[೨೧] ಎಂಬ ಹೆಸರುಗಳಿಂದ ಗುರ್ತಿಸಿದ್ದಾರೆ. ಮೊದಲು ಊರು ಅಥವಾ ನಾಗರಿಕ ಕುರುಬ ಮತ್ತು ಕಾಡು ಅಥವಾ ಅನಾಗರಿಕರ ಕುರುಬರ ವರ್ಗಗಳು ಅನನ್ಯವಾಗಿರಬೇಕು. ಪಶುಪಾಲನೆ ಮತ್ತು ಬೇಸಾಯವನ್ನು ಅವಲಂಬಿಸಿಕೊಂಡು ಬಹುಮಟ್ಟಿಗೆ ನಾಗರಿಕ ಸ್ಥಿತಿಯಲ್ಲಿದ್ದುಕೊಂಡು ಗ್ರಾಮ ಜೀವನವನ್ನು ನಡೆಸುತ್ತಿದ್ದವರನ್ನು ಊರು ಕುರುಬರೆಂದು ಕರೆಯುವುದು ವಾಡಿಕೆಯಾಯಿತು. ಕಾಡಿನಲ್ಲಿ ವಾಸಿಸುವ ಕುರುಬರು ತಮ್ಮನ್ನು ಅವರೇ ಹೇಳಿಕೊಳ್ಳುವಂತೆ "ನಾವು ಕಾಡುಕುರುಬ ಮಕ್ಕಳು ದೂರಿದೂರಿ ನಾವು ಕಾಡಿಗೆ ಅರಸರು ದೂರಿ ದೂರಿ"[೨೨] ಎಂಬ ಮಾತು ಇವರ ಬದುಕಿನ ಮಹತ್ವವನ್ನು ತಿಳಿಸುತ್ತದೆ.

ಕಾಡು ಕುರುಬರು ವಾಸ ಮಾಡುವ ಸ್ಥಳವನ್ನು 'ಹಾಡಿ' ಎಂದು ಕರೆಯಲಾಗುತ್ತದೆ. ಹಾಡಿ, ಪೋಡು, ಮಾಡ ಎಂಬ ಪದಗಳು ಗ್ರಾಮವೆಂಬ ಅರ್ಥ ಬರುವ ರೀತಿಯಲ್ಲಿ ಬಳಕೆಯಾಗಿರುತ್ತವೆ.

ಒಂದೊಂದು ಹಾಡಿಯಲ್ಲಿ ಕನಿಷ್ಠ ೨೦ರಿಂದ ೩೦ ಕುಟುಂಬಗಳು ಇರುವುದು ಕಂಡು ಬರುತ್ತದೆ. ಚಂದ್ರಶೇಖರ ಬೆಳಗೆರೆಯವರು ಈ ಸಮುದಾಯದ ವಸತಿಯ ಬಗ್ಗೆ ಬರೆಯುತ್ತ "ಕಾಡುಕುರುಬರ ವಸತಿ ಗುಂಪುಗುಂಪಾಗಿವೆ. ಅವರು ನೆಲಸಿರುವ ಸ್ಥಳಕ್ಕೆ ಅವರ ಭಾಷೆಯಲ್ಲಿ 'ಮತರಿ' ಎಂದು ಕರೆಯುತ್ತಾರೆ. ಅವರ ಗುಡಿಸಲುಗಳು ಐದು ಅಡಿ ಅಗಲ ಏಳು ಅಡಿ ಉದ್ದದ ಜಾಗದಲ್ಲಿ ಪುಟ್ಟಗುಡಿಸಲು. ಕಾಡಿನ ಬಿದಿರು ತಟಿಕೆಯ ಮೇಲೆ ಹುಲ್ಲು ಎಲೆಗಳ ಛಾವಣಿ ಮತ್ತು ಮಣ್ಣಿನ ನೆಲ. ಅವರು ಚಕ್ರಾಕಾರದ ಗೋಡೆಯನ್ನು ನಿರ್ಮಿಸಿ ಅದರ ಮೇಲೆ ಶಂಕುವಿನಾಕಾರದ ಗುಡಿಸಲನ್ನು ನಿರ್ಮಿಸಿಕೊಂಡಿದ್ದಾರೆ. ಕಲ್ಲುಗೂಡೆಯಲ್ಲಿ ಒಬ್ಬ ಮನುಷ್ಯನು ಮಾತ್ರ ಹೋಗುವುದಕ್ಕೆ ಸಾಕಾಗುವಷ್ಟು ಜಾಗವನ್ನು ಬಿಟ್ಟಿರುತ್ತಾರೆ. ಇದೇ ಬಾಗಿಲು, ಒಂದೊಂದು ಕಡೆ ಇಂತಹ ೧೦ರಿಂದ ೨೦ ಗುಡಿಸಲು ಮನೆಗಳು ಕಂಡುಬರುತ್ತವೆ."[೨೩]

ಹಾಡಿಯನ್ನು ರಚಿಸುವುದಕ್ಕೆ ಮುನ್ನ ಇವರು ತಾವು ಆರಿಸಿರುವ ಸ್ಥಳದಲ್ಲಿ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಿಟ್ಟು ಪೂಜೆಮಾಡಿ ಹಿಂದಿರುಗುತ್ತಾರೆ. ಮರುದಿನ ಬಂದು ನೋಡಿದಾಗ ಕಲ್ಲುಗಳು ಹಾಗೆಯೇ ಉಳಿದಿದ್ದರೆ ವಾಸಯೋಗ್ಯ ಸ್ಥಳವೆಂದು ನಿರ್ಧರಿಸಲಾಗುತ್ತದೆ. ಒಂದು ವೇಳೆ ಕಲ್ಲುಗಳೇನಾದರೂ ಉರುಳಿ ಬಿದ್ದಿದ್ದರೆ ಅಪಾಯ ಅನಿಷ್ಟಗಳಿಗೆ ಆಹ್ವಾನ ನೀಡಿದಂತೆ ಎಂಬ ನಂಬಿಕೆಯಿದೆ. ಗುಡಿಸಲು ಎರಡು ಭಾಗವಾಗಿ ವಿಂಗಡಿಸಿರುತ್ತದೆ. ಒಂದು ಅಡುಗೆಮನೆ, ಮತ್ತೊಂದು ಊಟ ಮತ್ತು ವಿಶ್ರಾಂತಿ, ಸಾಂಪ್ರದಾಯಿಕವಾಗಿ ಗುಡಿಸಲು ಪ್ರವೇಶಿಸುವ ಸಮಾರಂಭಕ್ಕೆ 'ಹೊಸಮನೆ ಸೇರುವುದು' ಎನ್ನುತ್ತಾರೆ. "ಹೊಸದಾಗಿ ವಿವಾಹವಾದ ದಂಪತಿಗಳಿಗೆ ಬೇರೆ ಗುಡಿಸಲನ್ನು ಕಟ್ಟಿಕೊಡಲಾಗುತ್ತದೆ. ಇದಕ್ಕೆ 'ಕೇರಿ' ಎಂದು ಕರೆಯುವರು"[೨೪] ಎಂದು ಎ.ಸಿ.ಲಲಿತಾರವರು ಅಭಿಪ್ರಾಯ ಪಡುತ್ತಾರೆ. ಮನೆಗಳಲ್ಲಿ ಚಾಪೆಗಳ ಹೊರತಾಗಿ ಮತ್ಯಾವ ಪೀಠೋಪಕರಣಗಳು ಮೊದಲಿಗೆ ಕಂಡು ಬರದಿದ್ದರೂ ಇತ್ತೀಚೆಗೆ ಕೆಲವು ಹಾಡಿಗಳಲ್ಲಿ ಪ್ಲಾಸ್ಟಿಕ್ ಕುರ್ಚಿಗಳು ಆಧುನಿಕ ಪೀಠೋಪಕರಣಗಳು ಪ್ರವೇಶ ಪಡೆದಿರುವುದನ್ನು ಗಮನಿಸಬಹುದಾಗಿದೆ.

ಕಾಡುಕುರುಬರ ಹಾಡಿಗಳು ಚಿಕ್ಕದಾಗಿದ್ದು ಚೊಕ್ಕವಾಗಿರುತ್ತವೆ. ಬಿದಿರಿನ ಗುಡಿಸಲುಗಳನ್ನು ನಡುಮಧ್ಯದಲ್ಲಿರುವ ಬಯಲಿನಲ್ಲಿ ನಾಲ್ಕು ಕಂಭಗಳ ಆಧಾರದ ಮೇಲೆ ನಿರ್ಮಿಸಲಾಗಿರುತ್ತದೆ. ಇಂತಹ ತೆರೆದ ಗುಡಿಸಲನ್ನು 'ಅಂಬಾಲ' ಎನ್ನುವರು. ಇಲ್ಲಿ ವಿಶೇಷ ಸಾಮಾಜಿಕ ಹಾಗೂ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಬುಡಕಟ್ಟಿನ ಹಿರಿಯರೆಲ್ಲ ಸೇರಿ ಕರ್ಮಾಚರಣೆಯ ವಿಷಯ ಹಾಗೂ ಹಾಡಿಯ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗುತ್ತದೆ. ವಿವಾಹಿತ ಪುರುಷರು ಮತ್ತು ಅವಿವಾಹಿತ ಮಕ್ಕಳು ಮಾತಾಡಲು ಮತ್ತು ಮಲಗಲು ಬಳಸುವುದುಂಟು. ಇಲ್ಲಿಗೆ ಚಪ್ಪಲಿ ಧರಿಸಿ ಬರುವುದು ನಿಷಿದ್ಧ. ಬೇಸಿಗೆಯಲ್ಲಿ ಗುಡಿಸಲ ಮುಂಭಾಗದಲ್ಲಿ ಮಲಗಿದರೆ, ಚಳಿಗಾಲದಲ್ಲಿ ಕೊರೆಯುವ ಚಳಿಯಿಂದ ತಪ್ಪಿಸಿಕೊಳ್ಳಲು ಬೆಂಕಿಯನ್ನು ಉರಿಸುವ ಮೂಲಕ ಸುತ್ತಲೂ ಮಲಗುತ್ತಾರೆ.

ನೋಡಿದ ತಕ್ಷಣ ಕಾಡುಕುರುಬರೇ ಎಂದು ಗುರುತಿಸುವಷ್ಟರ ಮಟ್ಟಿಗೆ ಇವರ ಉಡುಪುಗಳು ವಿಶಿಷ್ಟ. ಪುರುಷರು ಲಂಗೋಟಿ ಅಥವಾ ತುಂಡು ಪಂಚೆಯನ್ನು ಮಂಡಿಯವರೆಗೆ ಧರಿಸುವುದರ

ಜೊತೆಗೆ ಅರ್ಧತೋಳಿನ ಅಂಗಿಯನ್ನು ಉಡುಪಾಗಿ ಧರಿಸುತ್ತಾರೆ. ಇತ್ತೀಚೆಗೆ ತುಂಬುದೋಳಿನ ಅಂಗಿಗಳನ್ನು ಧರಿಸುವುದು ಗೋಚರಿಸುತ್ತದೆ. ಸ್ತ್ರೀಯರು ಸೀರೆಯನ್ನು ಎದೆಯ ಭಾಗದಿಂದ ಮಂಡಿಯವರೆಗೆ ಮುಚ್ಚುವಂತೆ ಸುತ್ತಿ ಹಿಂದೆ ಗಂಟುಹಾಕಿ ಬಿಗಿದುಕೊಳ್ಳುತ್ತಾರೆ. ತೊಡುವ ಆಭರಣಗಳನ್ನು ಗಮನಿಸಿದರೆ ವಿವಾಹಿತ ಸ್ತ್ರೀಯರು ತಾಳಿಯ ಜೊತೆಗೆ ಕರಿಮಣಿಸರ, ಕಾಲುಂಗುರ, ಕಿವಿಯೋಲೆಗಳನ್ನು ತೊಡುತ್ತಾರೆ.

ಕಾಡು ಕುರುಬರನ್ನು ಸರ್ವಭಕ್ಷಕರು ಎಂದು ಕರೆಯಬಹುದಾದರೂ ಪಥ್ಯವಿಧಿ ಸರಳವಾದುದು. ರಾಗಿ ಪ್ರಧಾನ ಬೆಳೆಯಾದ್ದರಿಂದ ಇವರ ದೈನಂದಿನ ಆಹಾರ ರಾಗಿಮುದ್ದೆ ಸೊಪ್ಪಿನಸಾರು. ಮೊದಲು ಅಕ್ಕಿ ಬಳಕೆ ಸೀಮಿತವಾಗಿತ್ತು. ಈಗ ಅಕ್ಕಿ ಬಳಕೆ ಹೆಚ್ಚಾಗಿದೆ. ಆಧುನಿಕ ಆಹಾರಪದ್ಧತಿಗಳೂ ಇವರ ಹಾಡಿಗಳಿಗೆ ಪ್ರವೇಶ ಪಡೆದಿವೆ. ಮದುವೆ ಇನ್ನಿತರ ಶುಭಕಾರ್ಯಗಳಲ್ಲಿ, ಹಬ್ಬಗಳಲ್ಲಿ ಇಡ್ಲಿ, ದೋಸೆ, ಪಾಯಸ, ಬೂಂದಿಕಾಳು ಇತ್ಯಾದಿಗಳು ಬಳಕೆಯಲ್ಲಿವೆ. ಇದಲ್ಲದೆ ಮಾಂಸಾಹಾರವೂ ಅಸ್ತಿತ್ವದಲ್ಲಿದೆ.

ಕಾಡಿನ ಮಕ್ಕಳಾಗಿ ಹುಟ್ಟಿ ಬೆಳೆದ ಇವರಿಗೆ ಸಹಜವಾಗಿ ಗೆಡ್ಡೆಗೆಣಸು, ಹಣ್ಣುಹಂಪಲುಗಳು ಸೊಪ್ಪುಸೊದೆಗಳ ಬಳಕೆಯೂ ಹೆಚ್ಚು. ನಿಸರ್ಗದಲ್ಲಿದ್ದು ಲಭ್ಯವಾಗುವ ಪ್ರಾಕೃತಿಕ ವಸ್ತುಗಳನ್ನು ಬಳಸಿ ರೋಗ ರುಜಿನಗಳಿಗೆ ಔಷಧಿ ತಯಾರಿಸಿಕೊಂಡು ರೋಗಗಳನ್ನು ವಾಸಿ ಮಾಡಿಕೊಳ್ಳುತ್ತಾರೆ.

ವಿಭಕ್ತ ಕುಟುಂಬಗಳ ವ್ಯವಸ್ಥೆ ಇವರಲ್ಲಿ ಹೆಚ್ಚು. ಶೇ. ೮೦ ರಷ್ಟು ಕುಟುಂಬಗಳು ಪತಿ, ಪತ್ನಿ ಮತ್ತು ಮಕ್ಕಳನ್ನು ಒಳಗೊಂಡಿವೆ. ಪಿತೃಪ್ರಧಾನ ವ್ಯವಸ್ಥೆಯ ಜೊತೆಗೆ ಲಿಂಗಾಧಾರಿತ ಶ್ರಮ ವಿಭಜನೆ ಕಂಡು ಬರುತ್ತದೆ. ಸ್ತ್ರೀಯರಿಗೆ ಸ್ವಾತಂತ್ರ ನೀಡಲಾಗಿದೆ. ಮನೆಯಲ್ಲಿ ಮಕ್ಕಳ ಲಾಲನೆ-ಪಾಲನೆ ಜೊತೆಗೆ ಮನೆಗೆ ಬೇಕಾದ ಅಗತ್ಯ ವಸ್ತುಗಳನ್ನು ತರುವವರು ಸ್ತ್ರೀಯರೆ. ಕೃಷಿಸಮಯದಲ್ಲಿ ಕೃಷಿ ಕಾರ್ಮಿಕರಾಗಿ, ಬೀಡಿ ಸುತ್ತುವ ಮೂಲಕ ಕುಟುಂಬದ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿದ್ದಾರೆ. ಸಾಮಾಜಿಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಅವಕಾಶವಿದ್ದು ಕೆಲವು ವೇಳೆ ಹಾಡಿಯ ಯಜಮಾನಿಯೂ ಆಗಬಹುದು.

ಜೀವನ ಸಂಸ್ಕಾರಗಳು ಕಾಡುಕುರುಬರಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಬೆಟ್ಟ ಕುರುಬರ ಹೆಣ್ಣು ಮಗಳು ಪ್ರೌಢಾವಸ್ಥೆಗೆ ಬಂದಾಗ ಪ್ರೌಢ ವಿಧಿ ಸಂಸ್ಕಾರವನ್ನು ಅತ್ಯಂತ ಸಂಭ್ರಮದಿಂದ ಆಚರಿಸುವರು. ಮೊದಲ ಬಾರಿ ಹೆಣ್ಣು ಮಗಳು ಋತುಮತಿಯಾದಾಗ 'ಸೂತಕ'ವೆಂದು ಪರಿಗಣಿಸುವರು. ಪ್ರೌಢಾವಸ್ಥೆಗೆ ಬಂದ ಹೆಣ್ಣು ಮಗಳನ್ನು ಏಳುದಿನಗಳವರೆಗೆ ಮನೆಯ ಪಕ್ಕದಲ್ಲಿರುವ ಪ್ರತ್ಯೇಕವಾದ ಗುಡಿಸಲಿಗೆ ಬಿಡುತ್ತಾರೆ. ಮೊದಲ ದಿನ ಅವಳಿಗೆ ಸ್ನಾನ ಮಾಡಿ ಮಡಿ ಉಡಲು ಕೊಟ್ಟು ಅವಳ ಸಹಾಯಕ್ಕೆ ಹುಡುಗಿಯೊಬ್ಬಳನ್ನು ಬಿಡುತ್ತಾರೆ. ಎಲ್ಲಾ ಅಲಂಕಾರಿಕ ಸಾಧನಗಳ ಜೊತೆಗೆ ಊಟ ತಿಂಡಿ ತಿನಿಸುಗಳು ಗುಡಿಸಲಿಗೆ ಕಳುಹಿಸಲ್ಪಡುತ್ತವೆ. ಜೊತೆಯಲ್ಲಿರುವ ಹುಡುಗಿಯ ಜೊತೆಯಲ್ಲಿಯೇ ಹೊರಗೆ ಹೋಗಬೇಕು. ಜೊತೆಯಲ್ಲಿರುವ ಹುಡುಗಿಯನ್ನೂ ಯಾರೂ ಮುಟ್ಟಿಸಿಕೊಳ್ಳುವುದಿಲ್ಲ. ಇದಕ್ಕೆ 'ಗುಡ್ಲುಕೂಟ್' ಎಂದು ಕರೆಯುವರು.

ಹೆಣ್ಣು ಮಗಳನ್ನು ಮನೆಯವರಾದಿಯಾಗಿ ಎಲ್ಲರೂ ಜೋಪಾನವಾಗಿ ಕಾಯುತ್ತಾರೆ. ಪ್ರೌಢಾವಸ್ಥೆಗೆ ಬಂದ ಹೆಣ್ಣುಮಗಳಿಗೆ ಏನೂ ಕೆಲಸವಿರುವುದಿಲ್ಲ. ಹೀಗೆ ಏಳು ದಿನಗಳು ಕಳೆಯುತ್ತವೆ. ಏಳನೇ ದಿನ ಸೂತಕ ಮುಗಿಯುವ ದಿನ. ಆ ದಿನ ಹುಡುಗಿಗೆ ಸ್ನಾನ ಮಾಡಿಸುವರು. ಅವಳಿದ್ದ ಗುಡಿಸಲಿಗೆ ಬೆಂಕಿ ಇಟ್ಟು ಸುಡುತ್ತಾರೆ. ನಂತರ ಹುಡುಗಿಯ ಮನೆಯವರು ತಮ್ಮ ಹಾಡಿಯ ಯಜಮಾನ ಮತ್ತು ಕುಲಸ್ಥರನ್ನು ಕರೆಸುವರು. ಈ ಹುಡುಗಿಯಿಂದ ಹಾಡಿಯ ದೇವಸ್ಥಾನಕ್ಕೆ ಪೂಜೆಮಾಡಿಸುತ್ತಾರೆ. ಅದೇ ದಿನ ಹಾಡಿಯ ಮುಖ್ಯಸ್ಥರಿಗೆ ಊಟವನ್ನು ನೀಡಿದರೆ ಅವಳ ಸೂತಕ ಕಳೆಯಿತು ಎಂದು ಭಾವಿಸಲಾಗುತ್ತದೆ. ಇದು ಪ್ರೌಢಾವಸ್ಥೆಗೆ ಬರುವ ಎಲ್ಲಾ ಜಾತಿಯ ಹೆಣ್ಣು ಮಕ್ಕಳಿಗೆ ನೀಡುವ ಮೊದಲ ಸಂಸ್ಕಾರ ದೀಕ್ಷೆಯಾಗಿರುತ್ತದೆ.

ಕಾಡುಕುರುಬರ ವಿವಾಹ ಪದ್ಧತಿ ಅತಿಸರಳವಾದುದು. ಪಲಾಯನ ವಿವಾಹಪದ್ಧತಿ ಆಚರಣೆಯಲ್ಲಿದೆ. ಆದರೆ ಆಚರಣೆಗಳು ಮಾತ್ರ ಮಹತ್ವದ ಪಾತ್ರ ವಹಿಸುತ್ತವೆ. ವಿವಾಹಯೋಗ್ಯ ಹುಡುಗಿಯನ್ನು ಹುಡುಗನೊಬ್ಬ ಕರೆದೊಯ್ದು ಸ್ವಲ್ಪ ದಿನಗಳ ನಂತರ ಹಾಡಿಗೆ ಬಂದು ಹಾಡಿಯ ಮುಖ್ಯಸ್ಥ ವಿಧಿಸುವ ಶುಲ್ಕವನ್ನು ಸಲ್ಲಿಸಿ ವಿವಾಹವಾಗುವುದು 'ಪಲಾಯನ ವಿವಾಹ' ಎನ್ನಲಾಗುತ್ತದೆ. ಇವರಲ್ಲಿ ಒಳಬಾಂಧವ್ಯ ಅಸ್ತಿತ್ವದಲ್ಲಿದ್ದು "ತಂದೆಯ ಅಕ್ಕನ ಮಗಳು ಇಲ್ಲವೆ ತಂಗಿಯ ಮಗಳನ್ನು, ತಾಯಿಯ ಅಣ್ಣ ಅಥವಾ ತಮ್ಮನ ಮಗಳನ್ನು ಮದುವೆಯಾಗುತ್ತಾರೆ. ಒಂದೇ ಕುಟುಂಬದವರನ್ನು ಮತ್ತು ಒಂದೇ ಗೋತ್ರಕ್ಕೆ ಸೇರಿದವರನ್ನು ಮದುವೆ ಮಾಡಲಾರರು"[೨೫] ಎಂದು ಮುತ್ತುರಾಯಪ್ಪನವರು ಬರೆಯುತ್ತಾರೆ. ಮದುವೆಗೆ ಹೆಣ್ಣಿನ ಮನೆಯವರನ್ನು ಸಂದರ್ಶಿಸಿ ಅವರ ಒಪ್ಪಿಗೆ ಪಡೆದು ನಂತರ ಮದುವೆಯನ್ನು ನಿಶ್ಚಯ ಮಾಡುತ್ತಾರೆ. ಮದುವೆಯು ವರನ ಮನೆಯಲ್ಲಿ ನಡೆಯುತ್ತದೆ.

ಬೆಟ್ಟ ಕುರುಬರು ವಿವಾಹ ಸಂಬಂಧವನ್ನು ಏರ್ಪಡಿಸುವಾಗ ಅಲ್ಲಿಯ ಹಾಡಿಯ ಪ್ರಮುಖರನ್ನು ಯಜಮಾನರನ್ನು, ಹಿರಿಯರನ್ನು ಭೇಟಿಮಾಡಿ ವಿವಾಹ ಸಂಬಂಧವನ್ನು ಏರ್ಪಡಿಸುತ್ತಾರೆ. ಇವರಲ್ಲಿ ಹೆಣ್ಣಿಗೆ ತಾಳಿ ಕಟ್ಟುವ ಸಂಪ್ರದಾಯವಿಲ್ಲ. ಮಣಿಸರವನ್ನು ಹಿರಿಯರ ಸಮ್ಮುಖದಲ್ಲಿ ತಾಯಿಯ ಸಹೋದರಿಯರು ಕಟ್ಟುತ್ತಾರೆ. ನಂತರ ಊಟದ ವ್ಯವಸ್ಥೆ ಮಾಡಿರುತ್ತಾರೆ. ಬಾರದ ಸಂಬಂಧಿಕರಿಗೆ ಅವರು ವಾಸಿಸುವ ಸ್ಥಳಕ್ಕೆ ಎಲೆ ಮತ್ತು ಅಡಿಕೆ ತಲುಪಿಸುತ್ತಾರೆ. ಇದೇ ವಿವಾಹ ಆಗಿದೆ ಎಂಬುದಕ್ಕೆ ಗುರುತು. ಅನಂತರ ಹುಡುಗನ ಮನೆಯಲ್ಲಿ ಶೋಭನ ನಡೆಯುತ್ತದೆ. ಇವರಲ್ಲಿ ವಿಧವೆ, ವಿಧುರ ಅಥವಾ ವಿವಾಹ ನಂತರ ಗಂಡು ಅಥವಾ ಹೆಣ್ಣು ಅಕಾಲಿಕ ಮರಣಕ್ಕೆ ತುತ್ತಾದರೆ ವಿವಾಹವಾಗಲು ಅವಕಾಶವಿದೆ. ಇಂತಹವರು ಹಾಡಿಯ ಮುಖ್ಯಸ್ಥರ ಒಪ್ಪಿಗೆ ಪಡೆಯಬೇಕಾಗುತ್ತದೆ. ಗಂಡು ಮತ್ತು ಹೆಣ್ಣನ್ನು ಹಾಡಿಯ ಮುಖ್ಯಸ್ಥನು ಆಶೀರ್ವದಿಸುತ್ತಾನೆ. ಲೈಂಗಿಕ ಅಪರಾಧವೆಸಗಿದ ಗಂಡು ಹೆಣ್ಣಿಗೆ ಒಂದುಗೂಡಿಸಲು ಮತ್ತು ವಿವಾಹ ವಿಚ್ಛೇದನಕ್ಕೂ ಹಾಡಿಯ ಮುಖ್ಯಸ್ಥನ ತೀರ್ಮಾನವೇ ಅಂತಿಮ

ವಾಗಿನುತ್ತದೆ. ಈ ರೀತಿ ಬೆಟ್ಟಕುರುಬರ ವಿವಾಹಪದ್ಧತಿಯಿದ್ದು ಹೆಚ್ಚಿನ ಆಚರಣೆಗಳು ಕಂಡುಬರುತ್ತವೆ.

ಗರ್ಭವತಿಯಾದ ಹೆಣ್ಣು ಮಗಳು ಪ್ರಸವ ವೇದನೆ ವ್ಯಕ್ತಪಡಿಸಲಾರಂಭಿಸಿದರೆ ಹೆರಿಗೆ ಮಾಡಿಸಲು ಅನುಭವಿ, ತಿಳುವಳಿಕೆ ಇರುವ ಸೂಲಗಿತ್ತಿಯನ್ನು ಕರೆಸಲಾಗುತ್ತದೆ. ಹಾಡಿಯ ಮನೆಯಲ್ಲಿ ಚಾಪೆ ಹಾಸಿ ಹೆರಿಗೆ ಮಾಡಿಸುವರು. ಹೆರಿಗೆ ಸಂದರ್ಭದಲ್ಲಿ ತೊಂದರೆಗಳೇನಾದರೂ ಆದರೆ ಮನೆದೇವತೆಗೆ ಪೂಜೆ ಸಲ್ಲಿಸುತ್ತಾರೆ. ಹೆರಿಗೆಯ ನಂತರ ಮಗು ಮತ್ತು ತಾಯಿಯನ್ನು ಬಿಸಿನೀರಿನಿಂದ ಸ್ನಾನ ಮಾಡಿಸಲಾಗುತ್ತದೆ. ಬಾಣಂತಿಯು ಯಾವಾಗಲೂ ಶಾಖದಿಂದ ಕೂಡಿರಲು ಬೆಂಕಿ ಕಾಯಿಸುವುದು, ಉಷ್ಣಾಧಾರಿತ ಆಹಾರ ಪದಾರ್ಥಗಳ ಸೇವನೆ ಮುಖ್ಯ. ಏಳನೇ ದಿನಕ್ಕೆ ಸೂತಕವನ್ನು ತೆಗೆದುಕೊಳ್ಳಲು ಮನೆಯನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸಿ ದೇವರಿಗೆ ಪೂಜೆ ಸಲ್ಲಿಸುವರು. ದೇವರಿಗೆ ಎಡೆಹಾಕಿ ಹಾಡಿಯ ಮುಖ್ಯಸ್ಥರಾದಿಯಾಗಿ ಊಟವನ್ನು ನೀಡಲಾಗುತ್ತದೆ. ಸೂಲಗಿತ್ತಿಗೆ ತಮ್ಮ ಕೈಲಾದ ಮಟ್ಟಿಗೆ ಗೌರವಿಸುತ್ತಾರೆ.

ಜನಿಸಿದ ಶಿಶುವಿಗೆ ನಾಮಕರಣ ಮಾಡುವ ಪದ್ಧತಿ ಇದೆ. ಅವರ ಮನೆದೇವತೆಯ ನಿಯಮಾನುಸಾರ ನಾಮಕರಣ ಮಾಡಲಾಗುತ್ತದೆ. ಮಾದೇಶ್ವರ (ತಾವರೆಕಟ್ಟೆ) ಮನೆದೇವರಾದರೆ, ತಂದೆಯ ಹೆಸರು ಮಾದ ಎಂದಿದ್ದರೆ ಹಿರಿಯ ಮಗನ ಹೆಸರು ದೊಡ್ಡಮಾದ, ಚಿಕ್ಕಮಗನಾದ ಸಣ್ಣ- ಚಿಕ್ಕಮಾದ ಹೀಗೆ ಕರೆಯುತ್ತಾರೆ. ಹೆಂಗಸರಿಗೂ ಸಹ ಇದೇ ರೀತಿ ಹೆಸರುಗಳು ಬಳಕೆಯಲ್ಲಿವೆ. ಹೆಸರುಗಳನ್ನು ಬೇರೆ ಇಟ್ಟರೆ ಮನೆದೇವರ ಮುನಿಸಿಗೆ ತುತ್ತಾಗುತ್ತೇವೆಂಬ ನಂಬಿಕೆಯಿದೆ.

ಕಾಡುಕುರುಬರಲ್ಲಿ ಮಕ್ಕಳು ಸತ್ತರೆ ಹೂಳುತ್ತಾರೆ. ವಯಸ್ಕರು ಸತ್ತರೆ ಸುಡುವ ಪದ್ಧತಿಯಿದೆ. ಸತ್ತಿರುವ ವ್ಯಕ್ತಿಯ ಮನೆಯಲ್ಲಿ ೧೨ ದಿವಸಗಳ ಕಾಲ ಸೂತಕವನ್ನಾಚರಿಸಿ ತಿಥಿ ಸಂಸ್ಕಾರವನ್ನು ಏರ್ಪಡಿಸುತ್ತಾರೆ. ಅದಕ್ಕೆ ಸಂಬಂಧಿಕರನ್ನು, ಹಾಡಿಯ ಪ್ರಮುಖರನ್ನು ಆಹ್ವಾನಿಸುತ್ತಾರೆ. ಇವರ ಭಾವನೆಯಲ್ಲಿ ಒಳ್ಳೆಯ ಮನುಷ್ಯ ದೇವರಿಗೆ ಪ್ರೀತಿಯಾದರೆ, ಕೆಟ್ಟವ್ಯಕ್ತಿಯು ದೆವ್ವ ಪಿಶಾಚಿಯಾಗಿ ಹಾಡಿಯ ಜನರಿಗೆ ತೊಂದರೆ ನೀಡುವನು. ಹಾಲು ತುಪ್ಪ ಬಿಡುವ, ಸಮಾಧಿಯ ಬಳಿ ಹೋಗುವ ಪದ್ಧತಿ ಕಂಡು ಬರುವುದಿಲ್ಲ.

ಬೆತ್ತ ಕುರುಬರು ತಮ್ಮ ದೈನಂದಿನ ಬದುಕು ಸಾಗಿಸಲು ಕಾಡುಗಳಲ್ಲಿ ಸಿಗುವ ಆಹಾರ ಪದಾರ್ಥಗಳ ಸಂಗ್ರಹಣೆ-ಬೇಟೆ ಪ್ರಮುಖ ಪಾತ್ರ ವಹಿಸುತ್ತವೆ. ಇದಲ್ಲದೆ ಮುಖ್ಯ ಕಸುಬಾಗಿ ಬೆತ್ತ ಹಾಗೂ ಬಿದಿರಿನ ಕೆಲಸ ಮಾಡುತ್ತಾರೆ. ವರ್ಷಪೂರ್ತಿ ಕೆಲಸದಲ್ಲಿ ತೊಡಗಿಕೊಳ್ಳುವ ಇವರು ಶ್ರಮಜೀವಿಗಳು. ಮೀನು ಹಿಡಿಯುವ ಮತ್ತೊಂದು ಉಪಕಸುಬಿನೊಂದಿಗೆ ಕೃಷಿಕಾರ್ಯದಲ್ಲೂ ತೊಡಗುತ್ತಾರೆ. 'ಕುಮರಿ' ಬೇಸಾಯ ಪದ್ಧತಿ ಆಚರಣೆಯಲ್ಲಿದ್ದು ಕೃಷಿ ಚಟುವಟಿಕೆಗಳ ನಂತರ ತಾತ್ಕಾಲಿಕ ಉದ್ಯೋಗಿಗಳಾಗಿ, ಕೂಲಿಕಾರ್ಮಿಕರಾಗಿ ತೋಟಗಾರಿಕೆ ಮತ್ತು ಅರಣ್ಯ ಇಲಾಖೆಗಳಲ್ಲಿ ದುಡಿಯುತ್ತಾರೆ. ಆನೆಗಳನ್ನು ಹಿಡಿಯುವ ಕೆಲಸದಲ್ಲೂ ನಿಪುಣತೆಯಿದೆ.

ಹಾಡಿಯ ಮುಖ್ಯಸ್ಥನಿಂದಲೇ ನ್ಯಾಯನಿರ್ಣಯವಾಗುವುದು. ಸಾಮಾಜಿಕ ಮತ್ತು ಧಾರ್ಮಿಕ ನೀತಿ ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿದವರನ್ನು, ಯಜಮಾನರಿಗೆ ವಿರುದ್ಧವಾಗಿ ನಡೆದುಕೊಂಡವರನ್ನು ದಂಡಿಸುವ ಹಕ್ಕನ್ನು ಯಜಮಾನ ಹೊಂದಿರುತ್ತಾನೆ. ಸಾಂಸಾರಿಕ, ವ್ಯವಹಾರಿಕ, ಲೈಂಗಿಕ ವಿರಸ ಹಾಗೂ ಮನಸ್ತಾಪಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಯಜಮಾನನು ಖುದ್ದಾಗಿ ತೀರ್ಮಾನಿಸಿ ತಪ್ಪಿತಸ್ಥರಿಗೆ ದಂಡವನ್ನು ವಿಧಿಸುವನು.

ಮತಧರ್ಮದ ಪ್ರಕಾರ ಹಲವು ದೇವರುಗಳ ಆರಾಧಕರು. ವಿಶೇಷವಾಗಿ ತಾವರೇಕಟ್ಟೆ ಮಾದೇಶ್ವರನ ಭಕ್ತರು, ಇದಲ್ಲದೆ ಪಿತೃಪೂಜೆ ಮತ್ತು ಭೂತಾರಾಧನೆಯಿದೆ. ಜೊತೆಗೆ 'ಬುಂಡೆ ಕರೆಯುವುದು' ಅಂದರೆ ದೇವರೊಡನೆ ಮಾತನಾಡುವುದು, ಮಾತನಾಡಿಸುವುದು ಯಾವುದೇ ಕೆಲಸದ ಆರಂಭಕ್ಕೆ ಮುಂಚೆ ಈ ಆಚರಣೆ ಇದೆ. ಬಳು ಸಂಪ್ರದಾಯವಿದ್ದು ಮಕ್ಕಳಿಲ್ಲದವರು ಸಂತಾನಾಪೇಕ್ಷೆಯಿಂದ ಹರಕೆ ಹೊರಬಹುದು, ಕೊಡಗಿನ ಕಾಡುಕುರುಬರಲ್ಲಿ ಕುಂಡೆ ಹಬ್ಬದ ಆಚರಣೆಯಿದೆ. ಹಿಂದುಗಳ ಹಬ್ಬಗಳಾದ ಶಿವರಾತ್ರಿ, ಯುಗಾದಿ, ಗೌರಿ ಗಣೇಶ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ಬೆಟ್ಟಕುರುಬರಲ್ಲಿ ಮೌಖಿಕ ಸಾಹಿತ್ಯ ಪರಂಪರೆಯು ಅಗಾಧವಾಗಿದೆ. ಅಜ್ಜಯ್ಯನನ್ನು ಕುರಿತ ದೇವರ ಪದಗಳು, ಬಂಜೆಪಾಡುಗ, (ದೇವರನ್ನು ಕರೆಯುವ ಹಾಡು) ಕುಣಿತದೊಂದಿಗೆ ಮದುವೆ ಪದಗಳು, ರಾಗಿ ಭತ್ತ ಕುಟ್ಟುವಾಗ ಹೇಳುವ ಗೀತೆಗಳು, ಹುಲಿರಾಜನ ಕಥೆ, ಇವೆಲ್ಲವೂ ಅವರ ದೈನಂದಿನ ಬದುಕಿನಲ್ಲಿ ಹುಟ್ಟಿದ ಅನುಭವದಿಂದ ಗಟ್ಟಿಗೊಂಡ ಸಾಹಿತ್ಯವಾಗಿದೆ. ವಿದ್ಯಾವಂತರ ಸಂಖ್ಯೆಯು ಕಡಿಮೆಯಿದ್ದೂ ಇತ್ತೀಚೆಗೆ ಗಿರಿಜನ ಆಶ್ರಮಶಾಲೆಗಳನ್ನು ಸರ್ಕಾರ ತೆರೆದಿದ್ದರೂ ಓದುಗರ ಸಂಖ್ಯೆ ಕಡಿಮೆಯೆಂದೇ ಹೇಳಬೇಕು.

ಕಾಡುಕುರುಬರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಅನೇಕ ಪ್ರಯತ್ನಗಳು ಸರ್ಕಾರಿ, ಅರೆಸರ್ಕಾರಿ ಸಂಸ್ಥೆಗಳಿಂದ ನಡೆಯುತ್ತಿದ್ದರೂ ಕಾಡಾಡಿಗಳಾದ ಇವರು ನಾಡಾಡಿಗಳ ಜೊತೆ ಬೆರೆತು ಬದುಕುವುದು ಅಸಾಧ್ಯವಾಗಿದೆ. ನಾಗರೀಕತೆಯಿಂದ ದೂರವಿದ್ದರೂ ಹಿಂಸಾಪ್ರವೃತ್ತಿಯವರಲ್ಲದ ಸಮುದಾಯದ ಕಟ್ಟುಪಾಡುಗಳಿಗೆ ಬದ್ಧರಾಗಿ ಸಭ್ಯತೆಯಿಂದ ವರ್ತಿಸುವರು. ಅಲ್ಪತೃಪ್ತರಾದ ಇವರು ತಮಗೆ ಬೇಕಾದುದನ್ನೆಲ್ಲ ಅರಣ್ಯದೇವತೆ ಒದಗಿಸುವಳೆಂಬ ಬಲವಾದ ನಂಬಿಕೆ. ನಾಳಿನ ಯೋಚನೆ ಇಲ್ಲದೆ ಬದುಕುವ ಇವರನ್ನು ಪ್ರಧಾನ ಜನವಾಹಿನಿಗೆ ಸೇರಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವೆಂಬುದನ್ನು ಮರೆಯಬಾರದು. ಆದ್ದರಿಂದ ಇವರ ಬಗ್ಗೆ ಸಾಧಿಸಿರುವುದು ಅತ್ಯಲ್ಪ. ಸಾಧಿಸಬೇಕಾಗಿರುವುದು ಅಗಾಧವಾಗಿದೆಯೆಂಬುದನ್ನು ಮನಗಾಣಬೇಕು.

ಜೇನು ಕುರುಬರು

ಪ್ರಾಕೃತಿಕ ಅಲೆಮಾರಿಗಳಂತೆ ಜೇನುಕುರುಬರು ಬದುಕು ನಡೆಸುತ್ತಾರೆ. ಇವರು ಎಲ್ಲಿಯೂ ಸ್ಥಿರವಾಗಿ ನೆಲಸಲಾರರು. ಮನಸ್ಸು ಬಂದೆಡೆಯಲ್ಲಿ ಹಾಡಿ ಕಟ್ಟಿಕೊಳ್ಳುವ ಪರಿಪಾಠವಿದೆ. ಜೇನುಕುರುಬರು

ಕಾಡುವಾಸಿಗಳಲ್ಲಿ ಪ್ರಾಚೀನರು. ಜೇನು ಸಂಗ್ರಹಿಸುವ ವೃತ್ತಿಯೇ ಇವರ ಹೆಸರಿಗೆ ಅನ್ವರ್ಥವಾಗಿದೆ. ಕೆ.ಎಸ್.ಸಿಂಗ್ ರವರು 'ಜೇನು ಕುರುಬರಿಗೆ ಜೇನು ಸಂಗ್ರಹಿಸುವುದು ವಂಶಪಾರಂಪರ್ಯವಾಗಿ ಬಂದ ಮೂಲವೃತ್ತಿಯಾಗಿದೆ. ಮತ್ತು ಕಾಡಿನಲ್ಲಿ ದೊರೆಯುವ ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾರೆ. ಅವರು ಕಾಡು ಪ್ರಾಣಿಗಳನ್ನು ಹಿಡಿಯುವ ಹಾಗೂ ಅವುಗಳನ್ನು ಪಳಗಿಸುವ ಕೆಲಸದಲ್ಲಿ ತೊಡಗಿರುತ್ತಾರೆ"[೨೬] ಎನ್ನುತ್ತಾರೆ.

ಚಾರಿತ್ರಿಕವಾಗಿ ಸ್ಥಳೀಯರೇ ಆಗಿರುವ ಜೇನುಕುರುಬರು ಹೆಸರೇ ಸೂಚಿಸುವಂತೆ ಇವರು ತಮ್ಮ ಜೀವನದ ಬಹುಭಾಗವನ್ನು ಜೇನಿನ ಬೇಟೆಯಲ್ಲಿ ಕಳೆಯುತ್ತಾರೆ. ಜೇನು ಇಳಿಸುವುದು ಒಂದು ಸಾಮೂಹಿಕ ಕ್ರಿಯಾವಿಧಿ. ಇವರು ಜೇನು ಹುಳುಗಳು ಹಾರಾಡುವುದನ್ನು ನೋಡಿಯೇ ಅದೆಷ್ಟು ದೂರದಲ್ಲಿ ಯಾವ ದಿಕ್ಕಿನಲ್ಲಿ ಜೇನುಗೂಡು ಕಟ್ಟಿದೆ ಎಂಬುದನ್ನು ಪತ್ತೆ ಹಚ್ಚಬಲ್ಲರು. ಯಾವ ಕಾಲದಲ್ಲಿ ಯಾವ ರುಚಿಯ ಜೇನು ಸಿಗುತ್ತದೆಂದೂ ಹೇಳಬಲ್ಲರು. ಆದರೆ ಕಂಡ ಕಂಡ ಹೊತ್ತಿನಲ್ಲಿ ಜೇನು ಬಿಡಿಸಿ ತರುವುದಿಲ್ಲ. ಇದನ್ನು ಸಂಪ್ರದಾಯದಂತೆ ಆಚರಿಸುವರು.

ಜೇನು ಕುರುಬರು ಹತ್ತು ಹದಿನೈದು ಗುಡಿಸಲುಗಳನ್ನು ಕಟ್ಟಿಕೊಂಡು ಒಂದೆಡೆ ವಾಸಿಸುತ್ತಾರೆ. ಈ ವಾಸ್ತವ್ಯದ ರೀತಿ ವಿಶಿಷ್ಟವಾದುದು. ಈ ವಾಸ್ತವ್ಯಕ್ಕೆ 'ಗ್ರಾಮ' ಎನ್ನುವರು. ಗ್ರಾಮ ಅಂಡಾಕಾರದ ವಿನ್ಯಾಸದಲ್ಲಿ ರಚನೆಗೊಂಡಿರುತ್ತದೆ. ಪ್ರವೇಶ ಮತ್ತು ಹೊರ ಹೋಗುವ ಮಾರ್ಗವನ್ನವಲಂಬಿಸಿ ಗ್ರಾಮದ ವಿಸ್ತಾರವು ನಿರ್ಧಾರಿತವಾಗುತ್ತದೆ. ಮಧ್ಯದಲ್ಲಿ ಚಿಕ್ಕಗುಂಡಿಯಿದ್ದು ಅಗ್ನಿಕುಂಡವಿರುತ್ತದೆ. ಸಮುದಾಯದ ಆಗುಹೋಗುಗಳಲ್ಲಿ ಈ ಅಗ್ನಿಕುಂಡವು ಮಹತ್ವದ ಪಾತ್ರ ವಹಿಸುತ್ತದೆ. ಕತ್ತರಿಸಿದ ಬಿದಿರುಗಳಿಂದ ಆಯತಾಕಾರದಲ್ಲಿ ಗುಡಿಸಲುಗಳನ್ನು ಕಟ್ಟಲಾಗಿರುತ್ತದೆ. ಅದರ ಪ್ರವೇಶಕ್ಕೆ ಹೊರಗಿನವರು, ಒಳಗಿನವರು ಎಂಬ ಭೇದವಿದೆ. ಗಂಡ ಹೆಂಡತಿ ಮಕ್ಕಳು ಒಳಗಿನವರು ಎನಿಸಿಕೊಂಡರೆ ಮದುವೆಯಾದ ಮಕ್ಕಳು ಹೊರಗಿನವರಾಗುತ್ತಾರೆ. ಇದರಲ್ಲಿ ತಲೆಕಡೆ, ಕಾಲ್ಕಡೆ ಎಂಬ ಎರಡು ಭಾಗಗಳಿಂದ ವಿಂಗಡಣೆ ಮಾಡಲಾಗಿರುತ್ತದೆ.

ಬೆಟ್ಟ ಕುರುಬರಂತೆ ಇವರೂ ಸ್ಥಳದ ಆಯ್ಕೆ ಮಾಡುತ್ತಾರೆ. ಆಯ್ಕೆ ಮಾಡಲಾದ ಸ್ಥಳದಲ್ಲಿ ರಾತ್ರಿ ಅಲ್ಲಿಯೇ ಮಲಗಿದ್ದು ಶುಭ ಸ್ವಪ್ನ ಬಿದ್ದರೆ ಆ ಸ್ಥಳ ಯೋಗ್ಯ ಎಂದು ಆಯ್ಕೆ ಮಾಡುತ್ತಾರೆ. ಇಲ್ಲದಿದ್ದರೆ ಬೇರೆ ಪ್ರದೇಶದಲ್ಲಿ ಆಯ್ಕೆಗೆ ತೊಡಗುತ್ತಾರೆ. ಈ ನಿರ್ಧಾರದಲ್ಲಿ ಹಾಡಿಯ ಯಜಮಾನ ಮತ್ತು ಹಿರಿಯರೊಟ್ಟಿಗೆ ಸೇರಿಸಿ ನಿರ್ಧರಿಸುತ್ತಾರೆ. ಈ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ಸ್ಥಳ ಆಯ್ಕೆಯು ಕಾರಣಗಳನ್ನಿಟ್ಟುಕೊಂಡು ಪರಿಶೀಲಿಸುತ್ತಾರೆ. ಪ್ರಮುಖವಾಗಿ ಗಾಳಿಯ ಒತ್ತಡ ಕಡಿಮೆ ಇರುವ ಪ್ರದೇಶ, ನೀರಿನ ಸೌಲಭ್ಯ ದೊರೆಯುವ ಮತ್ತು ಸಣ್ಣಕೃಷಿ ಚಟುವಟಿಕೆ ಕೈಗೊಳ್ಳಲು ಅನುಕೂಲಕರವಾದ ರೀತಿಯಲ್ಲಿ ವಾಸದ ನೆಲೆಯನ್ನು ಗುರ್ತಿಸುತ್ತಾರೆ. ಇದು ಹಾಡಿಯ ಜನರನ್ನು ಕಾಪಾಡುವ ಹಾಡಿಯ ಯಜಮಾನ ಹಾಗೂ ಹಿರಿಯರ ಜವಾಬ್ದಾರಿಯೆಂದೇ ಭಾವಿಸಲಾಗಿದೆ.

ಜೇನು ಕುರುಬರ ಉಡುಪುಗಳ ಬಗ್ಗೆ ಹೇಳುವುದಾದರೆ ಗಂಡಸರು ಲುಂಗಿ ಮತ್ತು ಮೇಲಂಗಿ ಧರಿಸುವರು. ಗಂಡು ಮಕ್ಕಳು ಚಡ್ಡಿ ಮತ್ತು ಮೇಲಂಗಿ ಧರಿಸುವರು. ಹೆಣ್ಣು ಮಕ್ಕಳು ಲಂಗ ಮತ್ತು ಕುಪ್ಪಸ ಧರಿಸುತ್ತಾರೆ. ಹೆಂಗಸರು ಬಲಗಡೆಯ ಭುಜದ ಮೆಲೆ ಹಾಯ್ದು ಬರುವಂತೆ ಸೀರೆಯ ಸೆರಗನ್ನು ಗಂಟುಹಾಕಿ ಸೀರೆಯನ್ನು ಉಡುತ್ತಾರೆ.

ಜೇನು ಕುರುಬರೂ ಆಹಾರ ಹುಡುಕುತ್ತ ಕಾಡಿನಲ್ಲಿ ಅಲೆದಲೆದು ಬದುಕು ಸಾಗಿಸಿದವರು. ವ್ಯವಸಾಯ ಇವರಿಗೆ ಗೌಣ. ಅವರು ತಮ್ಮ ಜೀವನ ನಿರ್ವಹಣೆಗೆ ಎರಡು ವೃತ್ತಿಗಳನ್ನು ಹೆಚ್ಚಾಗಿ ಅವಲಂಬಿಸಿರುತ್ತಾರೆ. ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸುಗಳನ್ನು ಅಗೆದು ತಿನ್ನುವುದು ಮತ್ತು ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ಆಹಾರವಾಗಿ ಬಳಸುವುದು. ಈ ಎರಡು ವೃತ್ತಿಗಳ ಜೊತೆ ಆಹಾರ ಸಂಗ್ರಹಣೆ ಮತ್ತು ಬೇಟೆ ಪ್ರಮುಖ. ಇವುಗಳ ಜೊತೆಗೆ ಜೇನು ಇಳಿಸುವ ಕಾಯಕವೂ ಇವರದಾಗಿದೆ.

ಜೇನು ಕುರುಬರ ಮೂಲ ವೃತ್ತಿ ಜೇನು ಸಂಗ್ರಹಣೆ. ಜೇನು ಸಂಗ್ರಹಿಸಲು ಒಂದು ಗುಂಪು ಗುಂಪಾಗಿ ಹೋಗಿ ಇಳಿಸುವರು. ಹೆಜ್ಜೇನು, ತುಡುಬೆಜೇನು, ಕಿರುಜೇನು, ಮಿಶ್ರಜೇನು ಎಂಬ ನಾಲ್ಕು ಬಗೆಯ ಜೇನುಗಳನ್ನು ಬಿಚ್ಚುವರು. ಎಲ್ಲರೂ ಕೂಡಿ ಮಾಡಬೇಕಾದ ಕಾರ್ಯವಾದ್ದರಿಂದ ಸಂಗ್ರಹಿಸಿದ ಜೇನನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುತ್ತಾರೆ. ಇದೇ ಅವರ ಜೀವನದ ಆದಾಯ ಮೂಲವೂ ಹೌದು. ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸು, ನೆಲ್ಲಿಕಾಯಿ ಪಾಚಿಯಂತಹ ವಸ್ತುಗಳ ಸಂಗ್ರಹಕ್ಕೂ ಜೊತೆಯಾಗಿ ಹೋಗಿ ಅರಣ್ಯದಲ್ಲಿ ಸಂಗ್ರಹಿಸುವುದು ಸಾಮಾನ್ಯವಾಗಿರುತ್ತದೆ.

ಜೇನು ಕುರುಬರ ಜೀವನ ಸಂಸ್ಕಾರಗಳಲ್ಲಿ ಹೆಣ್ಣು ಮಕ್ಕಳು ಋತುಮತಿಯಾದಾಗ ಒಂದು ತಿಂಗಳವರೆಗೆ ಹಸಿರು ಎಲೆಗಳಿಂದ ನಿರ್ಮಿಸಿದ ಚಪ್ಪರದಲ್ಲಿ ಇಡುತ್ತಿದ್ದರು. ಒಂದು ತಿಂಗಳು ಕಳೆದ ನಂತರ ಆ ಹೆಣ್ಣು ಮಗಳಿಗೆ ಮೈಗೆ ನೀರು ಹಾಕಿ ಮಡಿಬಟ್ಟೆ ತೊಟ್ಟು ಹಾಡಿಯ ಜನರನ್ನು ಕರೆದು ಎಲ್ಲಾ ಒಟ್ಟಾಗಿ ಸೇರಿ ಗಂಗಾದೇವಿಗೆ ಎಲೆ ಶಾಸ್ತ್ರ ಮಾಡಿ ಅಶುದ್ಧವನ್ನು ಕಳೆದು ಮನೆಗೆ ಸೇರಿಸಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಅವರದೇ ಆದ ಕುಣಿತ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತದೆ. ಬಸವರಾಜು ಅವರು ಹೇಳುವಂತೆ "ಋತುಮತಿಯಾದ ಯುವತಿಯ ಮುಖವನ್ನು ಪುರುಷರು ನೋಡಬಾರದು. ನೋಡಿದರೆ ತಮ್ಮ ದೇವತೆಗಳಿಗೆ ಕೋಪ ಬಂದು ವಂಶಕ್ಕೆ ಹಾನಿಯಾಗುತ್ತದೆ ಮತ್ತು ಸೂತಕದ ಪ್ರತೀಕವೆಂದು ನಂಬುತ್ತಾರೆ. ಅಲ್ಲದೆ ಹೊರಗಡೆ ಓಡಾಡಬಾರದು. ಋತುಮತಿಯಾದ ಮೂರು ತಿಂಗಳಿಗೆ ಪ್ರೌಢಾವಸ್ಥೆಯ ಸಂಸ್ಕಾರ ಆಚರಿಸುವರು. ಅಂದು ಹಾಡಿಯವರಿಗೆಲ್ಲ ಮತ್ತು ರಕ್ತಸಂಬಂಧಿಕರಿಗೆ ಊಟವನ್ನು ಏರ್ಪಡಿಸಲಾಗುತ್ತದೆ. ಅವಿವಾಹಿತ ಯುವತಿಯರೇ ಅಡುಗೆ ತಯಾರಿಸಬೇಕೆಂಬ ನಿಯಮವಿದೆ"[೨೭] ಎಂದು ಆಚರಣೆ ಕುರಿತು ಬರೆಯುತ್ತಾರೆ.

ಬೆಟ್ಟ ಕುರುಬರಂತೆ ಜೇನುಕುರುಬರಲ್ಲೂ ಒಳಬಾಂಧವ್ಯ ಅಸ್ತಿತ್ವದಲ್ಲಿದೆ. ಹದಿನೈದು ವಯಸ್ಸು ತುಂಬಿದ ಹುಡುಗ ಹುಡುಗಿಯರಿಗೆ ಮದುವೆ ಮಾಡುವ ಪದ್ಧತಿ ವಾಡಿಕೆಯಲ್ಲಿದೆ. ಕೆ.ಎಸ್.ಸಿಂಗ್‌ರವರು

ಹೇಳುವಂತೆ “ಏಕಪತ್ನಿತ್ವ ಇವರಲ್ಲಿ ರೂಢಿಯಲ್ಲಿದೆ. ಗಂಡ ಸತ್ತರೆ ಆ ಹೆಣ್ಣು ಬೇರೆಯವರನ್ನು ಮದುವೆಯಾಗುವ ‘ವಿಧವಾ ವಿವಾಹ’ ಪದ್ಧತಿಯೂ ಜಾರಿಯಲ್ಲಿದೆ. ಈ ವಿವಾಹವು ಮಾಮೂಲಿ ಮದುವೆಯ ರೂಪದಲ್ಲಿಲ್ಲದಿದ್ದರೂ ‘ಕೂಡಾವಳಿ’ ರೂಪದ್ದಾಗಿರುತ್ತದೆ”[೨೮] ಎಂದು ಅಭಿಪ್ರಾಯಪಡುತ್ತಾರೆ.

ಚಂದ್ರಶೇಖರ್ ಬೆಳಗೆರೆಯವರ ಪ್ರಕಾರ “ಜೇನು ಕುರುಬರ ವೈವಾಹಿಕ ಜೀವನವು ಸರಳತೆ ಹಾಗೂ ವೈವಿಧ್ಯತೆಯಿಂದ ಕೂಡಿರುತ್ತದೆ. ಈ ಜನಾಂಗದಲ್ಲಿ ಪ್ರೀತಿಸಿ ಮದುವೆಯಾಗಿರುವುದು ಕಂಡು ಬರುತ್ತದೆ. ಸ್ವಜಾತಿಯಲ್ಲಿ ಗಂಡು ಹೆಣ್ಣು ಪ್ರೀತಿಸಿದರೆ, ಪ್ರೀತಿಯ ಸಂಬಂಧಗಳನ್ನು ಯಾರೂ ಧಿಕ್ಕರಿಸುವುದಿಲ್ಲ. ಅದ್ದೂರಿಯ ಮದುವೆ ಸಮಾರಂಭಗಳು ನಡೆಯುವುದಿಲ್ಲ. ಇವರಲ್ಲಿ ಸ್ವಜಾತಿಯಲ್ಲಿ ಮದುವೆಯಾಗದೆ ಬೇರೆ ಬೇರೆ ಜಾತಿಯ ಹುಡುಗಿಯರನ್ನು ಪ್ರೀತಿಸಿ ಮದುವೆಯಾಗಿರುವುದೂ ಸಹ ಕಂಡು ಬರುತ್ತದೆ. ಪ್ರೀತಿಸಿದವರಿಬ್ಬರೂ ಎಂಡು ದಿನ ಕಾಡಿನಲ್ಲಿದ್ದು ನಂತರ ‘ಹಾಡಿಗೆ’ ಬರುತ್ತಾರೆ. ಬಂದು ಹಾಡಿಯ ಗುಂಪಿನ ಯಜಮಾನರಿಗೆ ತಪ್ಪು ಕಾಣಿಕೆ ನೀಡುತ್ತಾರೆ. ಅಲ್ಲಿಗೆ ಅವರು ಮದುವೆ ಆದಂತೆ. ಅವರು ಒಂದು ಗೊತ್ತಾದ ದಿನದಿಂದ ಬೇರೆ ಗುಡಿಸಲಿನಲ್ಲಿ ಹೊಸ ಬದುಕನ್ನು ಪ್ರಾರಂಭಿಸುತ್ತಾರೆ”[೨೯] ಎನ್ನುತ್ತಾರೆ.

ಸಾಮಾನ್ಯವಾಗಿ ಹಣವಿರುವವರು ಮದುವೆ ಸಮಾರಂಭಗಳನ್ನು ‘ಹಾಡಿ’ ಗುಂಪಿನ ಮುಖ್ಯಸ್ಥರ ಮುಖಾಂತರ ಮಾಡುತ್ತಾರೆ. ಇವರಲ್ಲಿ ಹೆಣ್ಣಿಗೆ ತಾಳಿಕಟ್ಟುವ ಸಂಪ್ರದಾಯವಿದೆ. ವಧುವಿಗೆ ರವಿಕೆ, ಸೀರೆ, ಮೂಗುತಿ, ಓಲೆ, ಮುಂತಾದ ವಸ್ತುಗಳನ್ನೂ ಕೊಡಿಸುವ ಸಂಪ್ರದಾಯವೂ ಇದೆ. ಸಾಮಾನ್ಯವಾಗಿ ಮದುವೆಯನ್ನು ತಂದೆಯ ಸಹೋದರಿಯ ಮಗಳ ಜೊತೆ ಇಲ್ಲವೆ ತಾಯಿಯ ಸಹೋದರನ ಮಗಳ ಜೊತೆ ಮತ್ತು ಹಿರಿಯಕ್ಕನ ಮಗಳ ಜೊತೆ ವಿವಾಹ ಏರ್ಪಡಿಸುವುದು ಕಂಡು ಬರುತ್ತದೆ.

ಗಂಡು ಹೆಣ್ಣು ಸಾಂಸಾರಿಕ ಬದುಕನ್ನು ಆರಂಭಿಸುತ್ತಾರೆ. ಹೆಣ್ಣು ಗರ್ಭವತಿಯಾದರೆ ಪತಿಯಾದವನು ಎಲ್ಲಾ ರೀತಿಯ ಸಹಕಾರ ಮತ್ತು ಸೇವೆ ಸಲ್ಲಿಸುತ್ತಾನೆ. ಪ್ರಸವವಾಗುವ ಮುನ್ನ ಪತಿಯು ಹಾಡಿಯ ಯಜಮಾನನಿಗೆ ಪ್ರತ್ಯೇಕ ಗುಡಿಸಲಿನ ನಿರ್ಮಾಣಕ್ಕೆ ಮನವಿ ಮಾಡುತ್ತಾನೆ. ಹಾಡಿಯವರ ಸಹಾಯದಿಂದ ಗುಡಿಸಲು ನಿರ್ಮಾಣವಾದಾಗ ಗರ್ಭವತಿಗೆ ಪ್ರಸವ ವೇದನೆ ಕಾಣಿಸಿಕೊಂಡರೆ ಅನುಭವಸ್ಥ ತಿಳುವಳಿಕೆ ಇರುವ ಸ್ತ್ರೀಯರನ್ನು ಹೆರಿಗೆ ಮಾಡಿಸಲು ಕರೆತರಲಾಗುತ್ತದೆ. ಹೆರಿಗೆಯಾದ ನಂತರ ತಾಯಿ ಮತ್ತು ಮಗುವಿಗೆ ಬಿಸಿನೀರಿನ ಸ್ನಾನ ಮಾಡಿಸಲಾಗುತ್ತದೆ. “ಬಾಣಂತಿಯು ಶಾಖವಾಗಿರುವಂತೆ ಬೆಂಕಿಯನ್ನು ಕಾಯಿಸಲು ಹೇಳುತ್ತಾರೆ. ಯಾವ ಆಹಾರವನ್ನು ಬೇಕಾದರೂ ಸೇವಿಸಬಹುದೆಂದು ಸಾಮಾನ್ಯವಾಗಿ ಹೇಳಿದರೂ ರಾಗಿ ಗಂಜಿ, ಸೊಪ್ಪು, ಗೆಡ್ಡೆಗೆಣಸು ಮುಂತಾದ ಆಹಾರವನ್ನು ಸೇವಿಸುತ್ತಾಳೆ”.[೩೦] ಪ್ರತ್ಯೇಕ ಗುಡಿಸಲಿನಲ್ಲಿದ್ದ ತಾಯಿ ಮಗುವನ್ನು ವಾರಗಳ ತರುವಾಯ ಶಾಶ್ವತ ಗುಡಿಸಲಿಗೆ ಕರೆತರಲಾಗುತ್ತದೆ.

ನಾಮಕರಣವನ್ನು ಮಗು ಹುಟ್ಟಿದ ಹನ್ನೆರಡನೆಯ ದಿನ ನೆರವೇರಿಸುತ್ತಾರೆ. ಇದನ್ನು ತಾಯಿಯ ಚಿಕ್ಕಪ್ಪ ನೆರವೇರಿಸುತ್ತಾನೆ. ಇವರು ಕೂಡ ಮನೆಯ ದೇವರ ಹೆಸರುಗಳನ್ನೇ ನಾಮಕರಣ ಮಾಡುತ್ತಾರೆ. ಕೆಲವು ಸಲ ಮಗುವಿನ ದೈಹಿಕ ಲಕ್ಷಣದ ಆಧಾರದ ಮೇಲೂ ಹೆಸರಿಡಲಾಗುತ್ತದೆ. ಆ ಮಗುವಿಗೆ ಪದೇ

ಪದೇ ರೋಗರುಜಿನಗಳು ಸಂಭವಿಸುತ್ತಿದ್ದರೆ 'ಬುಂಡೆಕರದು' ಪ್ರಶ್ನೆ ಕೇಳಿ ದೇವತೆಯು ಸೂಚಿಸಿದಂತೆ ನಾಮಕರಣ ಮಾಡುತ್ತಾರೆ. ಮಗುವಿನ ಹೆಸರು ಮನೆದೇವತೆಗೆ ಇಷ್ಟವಾಗದಿದ್ದಲ್ಲಿ ತೊಂದರೆ ಇಲ್ಲವೆ ಯಾವುದಾದರೂ ಕಷ್ಟ ಬರುತ್ತದೆಂಬ ದೃಢವಾದ ನಂಬಿಕೆ.

ಮಗುವಿನ ಪ್ರಥಮ ಮುಡಿಯನ್ನು ಸೋದರಮಾವ ತೆಗೆಯಬೇಕು. ಒಂದು ನಿಗಧಿ ಪಡಿಸಿದ ದಿನ ಸೋದರಮಾವ ಬಂದು ಮಗುವಿನ ತಲೆಗೂದಲನ್ನು ಕತ್ತಿಯಿಂದ ಕತ್ತರಿಸುತ್ತಾನೆ. ಸೋದರಮಾವನಿಗೆ ಎಲೆ ಅಡಿಕೆಯೊಂದಿಗೆ ಕಾಣಿಕೆ ಇಟ್ಟುಕೊಡುತ್ತಾರೆ. ಕತ್ತರಿಸಿದ ಕೂದಲನ್ನು ಕಾಡಿನ ಮರದ ಎಲೆಯಲ್ಲಿ ಶೇಖರಿಸಿ ಒಂದು ಪೊದೆಯ ಒಳಗಿಡುತ್ತಾರೆ. ಅದನ್ನು ಕಾಲಿನಿಂದ ಯಾರೂ ತುಳಿಯಬಾರದು. ತುಳಿದರೆ ಮಗುವಿನ ಆರೋಗ್ಯಕ್ಕೆ ತೊಂದರೆ ಎಂಬ ನಂಬಿಕೆಯಿದೆ. ಈ ರೀತಿಯಲ್ಲಿ ಹೆಣ್ಣು ಗಂಡು, ಅಥವಾ ಅವಳಿ ಮಕ್ಕಳಾದರೂ ಜನನ ಸಂಸ್ಕಾರ ನಡೆಸುತ್ತಾರೆ.

ಜೇನುಕುರುಬರಲ್ಲಿ ಸತ್ತವರನ್ನು ಹೂಳುವ ಪದ್ಧತಿಗೆ ಪ್ರಾಧಾನ್ಯತೆಯಿದೆ. ಇವರಲ್ಲಿ ವ್ಯಕ್ತಿ ಸತ್ತ ಮೂರನೇ ದಿನಕ್ಕೆ ಹಾಲುತುಪ್ಪ ಬಿಡುವುದು ಮತ್ತು ಹನ್ನೆರಡನೆಯ ದಿನಕ್ಕೆ ತಿಥಿಯನ್ನು ಆಚರಿಸುತ್ತಾರೆ. ಇವರ ಮನೆಯಲ್ಲಿ ಯಾರಾದರೂ ಸತ್ತರೆ, ಸತ್ತವರ ಕ್ಷೇತ್ರವು ಕುಲಸ್ಥರ ಕನಸಿನಲ್ಲಿ ಕಾಣಿಸಿಕೊಳ್ಳುವುದೆಂಬ ನಂಬಿಕೆ ಅವರಿಗಿದೆ. ಸತ್ತವರು ದೆವ್ವವಾಗಿ ಕುಟುಂಬದವರಿಗೆ ತೊಂದರೆ ಕೊಡುವರೆಂಬ ನಂಬಿಕೆ ಚಾಲ್ತಿಯಲ್ಲಿದೆ. ಸತ್ತವರ ಮನೆಯಲ್ಲಿ ಉಳಿದಿರುವವರಿಗೆ ಕಾಯಿಲೆ, ರೋಗರುಜಿನಗಳು ಬಂದರೆ ಎಲ್ಲರೂ ಬಯಲಿಗೆ ಬಂದು ಬೆಂಕಿಯ ಸುತ್ತ ಕುಳಿತು ಹಾಡಿಯ ಗಾಳಿ ಕರೆಯುವವನನ್ನು ಕರೆಯಿಸಿ ಅವರ ಕೊರತೆಗಳನ್ನು ವಿಚಾರಿಸುವುದೂ ರೂಢಿಯಲ್ಲಿರುವುದನ್ನು ಗಮನಿಸಬಹುದು.

ಆಕಸ್ಮಿಕ ಮರಣವಾದರೂ ಹೂಳುವ ಪದ್ಧತಿಯೇ ಇದೆ. ಅನಾರೋಗ್ಯ ನಿಮಿತ್ತ ಹಾಡಿಯಿಂದ ಹೊರಗೆ ಸತ್ತರೆ, ಹಾಡಿಗೆ ಶವವನ್ನು ತಂದು ಸ್ನಾನ ಮಾಡಿಸಿ ನಂತರ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಯಥಾರೀತಿ ಶವಸಂಸ್ಕಾರ ಮಾಡುತ್ತಾರೆ. ಮಕ್ಕಳೇನಾದರೂ ಸತ್ತರೆ ಅವರನ್ನು ಹೂಳಲಾಗುತ್ತದೆ. ಎಂ.ಎಂ. ಬಸವರಾಜು ಹೇಳುವಂತೆ "ಹಬ್ಬ ಹರಿದಿನಗಳಲ್ಲಿ, ವಿವಾಹ, ಋತುಮತಿ ಇನ್ನು ಮುಂತಾದ ಧಾರ್ಮಿಕ ಸಂಸ್ಕಾರಗಳಲ್ಲಿ ಸತ್ತವರನ್ನು ನೆನೆದು ಅವರ ಹೆಸರು ಹೇಳಿ ಅನ್ನ ಹಾಕುವರು. ಜೇನುಕುರುಬರ ಮರಣ ಸಂಸ್ಕಾರದ ವೈಶಿಷ್ಟ್ಯತೆ ಇರುವುದು ಸುಡುವ ಪದ್ಧತಿ ಕಂಡುಬರದಿರುವುದು"[೩೧] ಎಂದಿದ್ದಾರೆ.

ಜೇನು ಕುರುಬರು ಅನೇಕ ದೇವತೆಗಳನ್ನು ಪೂಜಿಸುತ್ತಾರೆ. ಇವರ ಮುಖ್ಯ ಆರಾಧ್ಯ ದೇವತೆಗಳೆಂದರೆ ಬೆಳ್ಳಮ್ಮತಾಯಿ, ಬೆಟ್ಟದ ಚಿಕ್ಕಮ್ಮ, ಮಾರಮ್ಮ ಈ ದೇವತೆಗಳ ಮೂರ್ತಿಗಳನ್ನು ಬಂಡೆಯ ಕೆಳಗೆ ಅಥವಾ ಮರದಡಿಯಲ್ಲಿಟ್ಟು ಪೂಜಿಸುತ್ತಾರೆ. ಅವರ ಹಾಡಿಯಲ್ಲಿ ದೇವಸ್ಥಾನಗಳನ್ನು ನಿರ್ಮಿಸಿಕೊಂಡು ಪೂಜಿಸುತ್ತಾರೆ. ಇವರು ಪೂಜಿಸುವ ದೇವತೆಗಳನ್ನು ಊರ ದೇವತೆಗಳು, ವನದೇವತೆಗಳೆಂದು ವರ್ಗೀಕರಿಸಬಹುದು. ವನದೇವತೆಗಳು ವನದಲ್ಲಿದ್ದಾಗ ರಕ್ಷಣೆ ಮಾಡಿದರೆ, ಊರದೇವತೆಗಳು ಊರಲ್ಲಿದ್ದಾಗ ರಕ್ಷಿಸುತ್ತವೆಂಬ ನಂಬಿಕೆಯಿಂದ ನಿರ್ಭಯವಾಗಿ ಜೀವಿಸುತ್ತಾರೆ.

ಆಚರಣೆಗಳ ರೂಪದಲ್ಲಿರುವ ಇನ್ನಿತರ ಸಂಗತಿಗಳನ್ನು ಅವಲೋಕಿಸಿದರೆ ಗಾಳಿ ಕರೆಯುವುದು ನೆರಳು ಕರೆಯುವುದು, ಕೊಂತಿಪೂಜೆ ಪ್ರಮುಖವಾದವು. ಇವುಗಳಲ್ಲಿ ಕೊಂತಿಪೂಜೆಯು ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಮರಗಿಡಗಳೆಲ್ಲ ಹೊಸದಾಗಿ ಚಿಗುರಿ ಹೂಹಣ್ಣು ಬಿಡುವ ಕಾಲದಲ್ಲಿ ಈ ಗಂಡುಕೊಂತ ಮತ್ತು ಹೆಣ್ಣುಕೊಂತಿ ಹುಟ್ಟಿದರಂತೆ. ಅದರ ಹುಟ್ಟಿನ ನೆನಪಿಗಾಗಿ ಕೊಂತ ಪೂಜೆಯನ್ನು ಏಪ್ರಿಲ್, ಮೇ ತಿಂಗಳಲ್ಲಿ ಆಚರಿಸುತ್ತಾರೆ. ಇದು ವರ್ಷಕ್ಕೊಮ್ಮೆ ನಡೆಸುವ ಆಚರಣೆಯಾಗಿದ್ದು ಸಂಪೂರ್ಣ ಸೃಷ್ಟಿಕ್ರಿಯೆ ನಡೆಯಲು ನಲವತ್ತು ದಿನಗಳು ಬೇಕಾದುವಂತೆ. ಇದರ ನೆನಪಿಗೋಸ್ಕರ ಈ ಸೃಷ್ಟಿಕ್ರಿಯೆಯ ಹಬ್ಬವನ್ನು ಆಚರಿಸುತ್ತಾರೆ.

ಒಟ್ಟಾರೆಯಾಗಿ ಜೇನುಕುರುಬರ ಸಂಪ್ರದಾಯ ಮತ್ತು ಆಚರಣೆಗಳನ್ನು ಅವಲೋಕಿಸಿದಾಗ ಸಾಂಸ್ಕೃತಿಕವಾಗಿ ಬದಲಾವಣೆ ಕಾಣದಿದ್ದರೂ, ಗುಂಪು ಮನೆಗಳು ಕಾಣದೆ ಅವರ ಸ್ವಂತ ಮನೆಗಳನ್ನು ನಿರ್ಮಾಣ ಮಾಡಿಕೊಂಡು ಜೀವಿಸುತ್ತಿದ್ದಾರೆ. ಸಾಮಾಜಿಕ ಪದ್ಧತಿಯಲ್ಲಿ ತುಂಬಾ ಬದಲಾವಣೆ ಜೊತೆಗೆ ಹಾಡಿಗಳಲ್ಲಿ ಸ್ವಸಹಾಯ ಸಂಘಗಳು, ಇತರ ಸಂಘಸಂಸ್ಥೆಗಳು ಬೆಳೆದು ನಿಂತಿವೆ. ಈ ಎಲ್ಲಾ ಸಂಘ ಸಂಸ್ಥೆಗಳು ಸಾಮಾಜಿಕ ಬದಲಾವಣೆಯನ್ನು ಉಂಟು ಮಾಡುತ್ತಿವೆ. ಹಾಡಿಗಳಲ್ಲಿ ಗ್ರಾಮ ಪಂಚಾಯ್ತಿ ತಲೆಎತ್ತಿವೆ. ಚುನಾವಣೆಗೆ ಸ್ಪರ್ಧಿಸುವ ಹಕ್ಕು ಲಭಿಸಿದೆ. ಸಮಾಜದ ಮುಖ್ಯ ವಾಹಿನಿಗೆ ತಮ್ಮನ್ನು ತೆರೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದರಾದರೂ, ಸಾಂಪ್ರದಾಯಿಕ ಅವರ ಮನಸ್ಸುಗಳು ಇನ್ನೂ ಕಾಡಿನಲ್ಲಿಯೇ ಉಳಿದಿರುವುದು ವಿಪರ್ಯಾಸವೆನಿಸುತ್ತದೆ.

ಬೆಳಗಾಂ ಕುರೇರು/ಅಲೆಮಾರಿ ಕುರುಬರು

ಮಾನವ ತನ್ನ ಜೀವನೋಪಾಯಕ್ಕಾಗಿ ಕೈಗೊಂಡ ವೃತ್ತಿಯಾಧಾರಿತ ಸಮುದಾಯಗಳಲ್ಲಿ ಕುರುಬರು ಮೂಲಿಗರು. ಅದರ ಒಂದು ಒಳಪಂಗಡವಾದ ಅಲೆಮಾರಿ ಕುರುಬರು ಮೂಲತಃ ಅಲೆಮಾರಿಗಳು. ಕಾಲಾಂತರದಲ್ಲಿ ನೆಲೆಕಂಡುಕೊಂಡವರು. ಇವರಿಗೆ ಬೆಳಗಾಂ ಕುರೇರು ಎಂಬ ಪರ್ಯಾಯ ಹೆಸರೂ ಇದೆ. ಹಟ್ಟಿ ಅಥವಾ ಗ್ರಾಮಗಳಲ್ಲಿ ಮನೆ ಕಟ್ಟಿಕೊಂಡು ಕುರಿಗಳ ಸಂಗೋಪನೆಯು ಜೀವನ ವಿಧಾನವಾಯಿತು. ಅಲೆಮಾರಿ ಕುರುಬರು ವರ್ಷದ ಮಳೆಗಾಲದಲ್ಲಿ ನಾಲ್ಕೈದು ತಿಂಗಳು ಸ್ವಗ್ರಾಮ ಬಿಟ್ಟು ಕುಟುಂಬ ಸಮೇತ ಗಟ್ಟಿಪ್ರದೇಶವಿರುವ ಕಡೆ ವಲಸೆ ಹೋಗಿ ಹಿಂದಿರುಗುತ್ತಿದ್ದರು. ವರ್ಷದ ನಾಲ್ಕು ಐದು ತಿಂಗಳು ಅರೆ-ಅಲೆಮಾರಿಯಾಗಿದ್ದ ಇವರ ಬದುಕು ಸ್ಥಿತ್ಯಂತರಗಳಿಗೊಳಪಟ್ಟು ಅಲೆಮಾರಿತನವಾಗಿ ಮಾರ್ಪಟ್ಟು ಅಲೆಮಾರಿ ಕುರುಬರಾದುದು ಇತಿಹಾಸ.

ಸಂಚಾರಿ ಬದುಕಿಗೆ ಪ್ರಸಿದ್ಧರಾದ ಇವರು ಗುಡ್ಡ-ಬೆಟ್ಟ ಅಥವಾ ಹೊಲ-ಗದ್ದೆಗಳಲ್ಲಿ ತಮ್ಮ ಬದುಕುಗಳನ್ನು ರಕ್ಷಣೆ ಮಾಡಲೋಸುಗ ಕುರಿಗಳ ಮಧ್ಯದಲ್ಲಿ ಗುಡಾರ ಹಾಕಿಕೊಳ್ಳುತ್ತಾರೆ. ಇವರ ಸ್ಥಳಾವರಣ ಮೊದಲಿನದು ಚಳಿಗಾಲ ಮಳೆ ಬಿಸಿಲುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ದಿನನಿತ್ಯದ ಆಹಾರ ಸಾಮಗ್ರಿಗಳನ್ನು

ಜೋಪಾನ ಮಾಡಲು ೮ ಅಡಿ ಅಗಲ, ೧೨ ಅಡಿ ಉದ್ದದ ಗುಡಾರವೇ ಇವರ ವಸತಿ. ಮತ್ತೊಂದು ಸ್ವಗ್ರಾಮ ಸ್ಥಳಾವರಣ. ನಿಸರ್ಗ ಬದಲಾವಣೆಗೆ ಅನುಗುಣವಾಗಿ ಗುಡಾರ ಹೂಡುವುದು ಸಹಜ. ಇವರು ಯಾವುದೇ ನಿರ್ಧಿಷ್ಟ ಭೂಪ್ರದೇಶದಲ್ಲಿ ಗುಡಾರ ಹೂಡಿ ಜೀವನ ಸಾಗಿಸುವುದಿಲ್ಲವಾದ್ದರಿಂದ ಗುಡಾರ ಬದಲಾವಣೆ ಋತು ಋತುಗಳಿಗೆ ಭಿನ್ನವಾಗಿರುತ್ತದೆ. ಇದನ್ನು ಕುರಿತು ಡಾ.ಡಿ.ಯರ್ರಪ್ಪನವರು “ಒಂದು ವೇಳೆ ಕುರಿಗಳು ದಾರಿ ನಡೆದು ದಣಿದಿದ್ದರೆ, ತಾವು ರಾತ್ರಿ ಗುಡಾರ ಹೂಡಿದ ಗ್ರಾಮದ ಸುತ್ತ ಮುತ್ತಲೂ ಬಯಲು ಪ್ರದೇಶವಿದ್ದು ಕುರಿಗಳಿಗೆ ಮೇವು ನೀರು ದೊರೆಯುವಂತಿದ್ದು ಹಾಗೂ ಮಳೆಗಾಲವಾದರೆ ವಾತಾವರಣ ತಿಳಿಯಾಗಿದ್ದಲ್ಲಿ ಒಂದೆರಡು ದಿನ ಗುಡಾರ ಹೂಡಿದ ಸುತ್ತಮುತ್ತಲಿನ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಿಕೊಂಡು ನಂತರ ಗುಡಾರ ಬದಲಾಯಿಸುತ್ತವೆ”[೩೨] ಎಂದು ಅಭಿಪ್ರಾಯಪಡುತ್ತಾರೆ.

ದಕ್ಷಿಣ ಭಾರತದವರಾದ ಅಲೆಮಾರಿ ಕುರುಬರೂ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಇವರಲ್ಲಿಯೂ ಬಂಧುತ್ವ ಮತ್ತು ಆಸ್ತಿಯ ಹಂಚಿಕೆ ಪುರುಷರ ಮೂಲಕವೇ ಆಗುತ್ತದೆ. “ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳನ್ನು ಹೊರತು ಪಡಿಸಿ ಮತ್ತು ಕೇರಳದ ನಾಯರ್‌ಗಳನ್ನು ಬಿಟ್ಟರೆ ಎಲ್ಲಾ ಕಡೆಗಳಲ್ಲಿ ಪಿತೃಪ್ರಧಾನ, ಪಿತೃವಂಶೀಯ ಮತ್ತು ಪಿತೃಸ್ಥಾನೀಯ ಕುಟಂಬಗಳನ್ನು ಕಾಣಬಹುದಾಗಿದೆ”[೩೩] ಎಂದು ಎಂ. ಗುರುಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ. ಅಲೆಮಾರಿ ಕುರುಬರು ಅವಿಭಕ್ತ ಕುಟುಂಬಗಳಲ್ಲಿ ನಂಬಿಕೆಯುಳ್ಳವರು. ಇದಕ್ಕೆ ಕಾರಣ ಕುರಿ ಸಂಗೋಪನೆ ಮಾಡಲು ಹೆಚ್ಚು ಜನರ ಅಗತ್ಯವಿರುವುದು. ಇವರಿಗೆ ಸಂಬಂಧಗಳಲ್ಲಿ ನಂಬಿಕೆ ಮತ್ತು ಭಾವನಾತ್ಮಕ ಗೌರವವಿರುವುದರಿಂದ ಒಟ್ಟಿಗೆ ಬದುಕಲು ಇಷ್ಟಪಡುತ್ತಾರೆ. ಗುಡಾರಗಳನ್ನು ಜನಸಂಖ್ಯೆಗೆ ಅನುಗುಣವಾಗಿ ನಿರ್ಮಿಸಿಕೊಂಡರೂ ಊಟೋಪಚಾರಗಳು, ಸಾಂಸ್ಕೃತಿಕ ಆಚರಣೆಗಳು ಹಬ್ಬ ಹರಿದಿನಗಳೆಲ್ಲವನ್ನು ರಕ್ತಸಂಬಂಧಿಗಳೆಲ್ಲರೂ ಕೂಡಿ ಆಚರಿಸುತ್ತಾರೆ. ಆಸ್ತಿ ಮತ್ತು ಕುರಿಸಂಪತ್ತು ಎರಡೂ ಇರುವವರೇ ಅಲೆಮಾರಿ ಕುರುಬರು.

ಹುಟ್ಟನಿಂದ ಸಾವಿನವರೆಗೆ ಜೀವನದ ಪ್ರಮುಖ ಘಟ್ಟಗಳಲ್ಲಿ ಅಲೆಮಾರಿ ಕುರುಬರು ಆಚರಿಸುವ ಆಚರಣೆ ಮತ್ತು ಸಂಪ್ರದಾಯಗಳು ಇತರೆ ಕುರುಬ ಸಮುದಾಯಗಳಂತೆ ಸಾಮ್ಯವಿರುವುದು ಹೊರ ನೋಟಕ್ಕೆ ಕಂಡರೂ ಒಳಹೊಕ್ಕು ನೋಡಿದರೆ ಭಿನ್ನವಾಗಿರುವುದರ ಜೊತೆಗೆ ಕುತೂಹಲಕರವಾಗಿವೆ. ಇವರು ತಮ್ಮ ಸ್ವಗ್ರಾಮ ಬಿಟ್ಟು ಬಹಳಷ್ಟು ದೂರ ಕುರಿಗಳ ಜೊತೆಗೆ ಕುಟುಂಬ ಸಮೇತ ವಲಸೆ ಬಂದರೂ ತಾವು ಅನುಸರಿಸುವ ಜನನದಿಂದ ಮರಣದವರೆಗಿನ ಆಚರಣೆಗಳು ಸಾಮಾನ್ಯವಾಗಿ ಸ್ವಗ್ರಾಮಗಳಲ್ಲಿಯೇ ಜರುಗುತ್ತವೆ. ಆದರೆ ಕೆಲವು ಶಾರೀರಿಕ ಪ್ರಕ್ರಿಯೆಗಳಾದ ಹೆರಿಗೆ, ಋತುಮತಿ, ಮರಣಗಳನ್ನು ಅಂದಾಜಿಸುವುದು ಅಸಾಧ್ಯ.

ಜನನ ಎಂಬುದು ಸಹಜ ಹಾಗೂ ಶಾರೀರಕ ಕ್ರಿಯೆ. ಅಲೆಮಾರಿ ಕುರುಬರಲ್ಲಿ ಇದರ ಆಚರಣೆಯೂ ವಿಭಿನ್ನ. ಇವರಲ್ಲಿ ಮೊದಲ ಮತ್ತು ಎರಡನೇ ಹೆರಿಗೆಗೆ ಹೆಣ್ಣು ಮಗಳು ತವರು ಮನೆಯಲ್ಲಿರಬೇಕೆಂಬುದು

ಕಡ್ಡಾಯ. ಹೆರಿಗೆಯಾದ ಐದು ದಿನಗಳವರೆಗೆ ಸೂತಕ. ಐದನೇ ದಿನದಲ್ಲಿ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿ ಹತ್ತಿರದ ಸಂಬಂಧಿಕರಿಗೆ ಸಿಹಿ ಊಟ ನೀಡಲಾಗುವುದು.

ಒಂದೂವರೆ ಅಥವಾ ಮೂರು ತಿಂಗಳಲ್ಲಿ ಗಂಗಾಪೂಜೆಯನ್ನು ಮಾಡುತ್ತಾರೆ. ಕುರಿಗಳ ಹತ್ತಿರವಿರುವ ಗಂಡಸರಿಗೆ ಊಟದ ತೊಂದರೆಯಾಗುವಂತಿದ್ದರೆ ೯ ದಿನಗಳಲ್ಲೇ ಗಂಗಾಪೂಜೆ ಕಾರ್ಯಕ್ರಮ ಮಾಡಿ ಮುಗಿಸುತ್ತಾರೆ. ನಾಮಕರಣವು ಗಂಡುಮಗುವಾದರೆ ೧೨ನೇ ದಿನಕ್ಕೆ ಮತ್ತೆ ಹೆಣ್ಣುಮಗುವಾದರೆ ೧೫ನೇ ದಿನದಲ್ಲಿ ನಡೆಯುತ್ತದೆ. ತೊಟ್ಟಿಲು ಶೃಂಗಾರ ಮಾಡಿ ತಾಯಿ ಮಗುವಿಗೆ ಸ್ನಾನ ಮಾಡಿಸಿ ಬಾಣಂತಿ ಕೈಯಿಂದ ಐದು ಧಾನ್ಯಗಳಿಗೆ ನೀರು ಚಿಮಕಿಸಿ ಗುಗ್ಗರಿ ತಯಾರಿಸಲಾಗುತ್ತದೆ. ನಾಮಕರಣ ಕಾರ್ಯಕ್ರಮಕ್ಕೆ ಬಂದವರಿಗೆ ಈ ಗುಗ್ಗರಿಯನ್ನು ವಿತರಿಸಲಾಗುತ್ತದೆ. ಮಗುವಿಗೆ ಹೆಸರಿಡುವಾಗ ಹಿರಿಯರ ಅಥವಾ ಮನೆದೇವರ ಹೆಸರಿಡುವುದು ವಾಡಿಕೆ. ಸತ್ತ ಹಿರಿಯರು ಮಕ್ಕಳ ರೂಪದಲ್ಲಿ ಮರುಜನ್ಮ ತಾಳುತ್ತಾರೆಂಬ ನಂಬಿಕೆ ಗಾಢವಾಗಿದೆ.

ಜನಿಸಿದ ಮಗುವಿಗೆ ಮೂರು ತಿಂಗಳಿಗೆ ಕಿವಿಚುಚ್ಚುವುದು, ಮೂರು ಅಥವಾ ಐದು ವರ್ಷದಲ್ಲಿ ಜನಿಸಿದ ಗಂಡು ಅಥವಾ ಹೆಣ್ಣು ಮಗುವಿನ ಜನಿಸಿದಾಗಿನಿಂದ ಇರುವ ಕೂದಲನ್ನು ಕತ್ತರಿಸುತ್ತಾರೆ. ಇದಕ್ಕೆ ಜವಳ ತೆಗೆಯುವುದು ಎನ್ನುತ್ತಾರೆ. ಕೂದಲು ತೆಗೆಯುವಾಗ ಮಗುವನ್ನು ಕರಿಯ ಕಂಬಳಿಯ ಮೇಲೆ ಕೂರಿಸಿ ಹಣೆಗೆ ಭಂಡಾರ ಹಚ್ಚುವುದು. ಪೂಜೆಗಾಗಿ ದವಸಧಾನ್ಯ ಎಲೆಅಡಿಕೆ ಹಾಗೂ ದಕ್ಷಿಣೆಗಳನ್ನು ಇಟ್ಟು ಪೂಜಿಸುವರು. ಸೋದರ ಮಾವನು ವೀಳ್ಯದೆಲೆ ಹಿಡಿದು ನೆಪಮಾತ್ರಕ್ಕೆ ಮುಟ್ಟಿಸುವ ಸಂಪ್ರದಾಯವಿದೆ. ಇದಾದ ನಂತರ ಕ್ಷೌರಿಕನು ಹುಟ್ಟುಕೂದಲನ್ನು ತೆಗೆಯುವನು. ಪ್ರತಿಯಾಗಿ ದವಸಧಾನ್ಯ ಎಲೆಅಡಿಕೆ, ದಕ್ಷಿಣೆ ನೀಡುವ ಪದ್ಧತಿ ಕಂಡು ಬರುತ್ತದೆ.

ಪ್ರೌಢಾವಸ್ಥೆಗೆ ಬಂದ ಹೆಣ್ಣು ಮಗಳು ಋತುಮತಿಯಾಗುವುದು ಸೃಷ್ಟಿ ನಿಯಮ. ಇದಕ್ಕೆ ಅಲೆಮಾರಿ ಕುರುಬರು ಮೈನೆರೆದಳು ಎನ್ನುವರು. ಮೈನೆರೆದ ೧೦ ದಿನಗಳವರೆಗೆ ಮೈಲಿಗೆಯೆಂದು ಪರಿಗಣಿಸಿ ಅವಳಿಗೆ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಮಾಡುವರು. ಹುಡುಗಿಯ ಸೋದರತ್ತೆಯ ಕೈಯಿಂದ ನೀರು ಹಾಕಿಸುವರು. ಅಡವಿಯಲ್ಲಿದ್ದಾಗ ಹೆಣ್ಣು ಮೈನೆರೆದರೆ ಹತ್ತು ದಿನಗಳವರೆಗೆ ಗುಡಾರ ಬದಲಾಯಿಸುವುದಿಲ್ಲ. ಹತ್ತನೇ ದಿನ ಸೋದರತ್ತೆ ಅಥವಾ ಸೋದರ ಮಾವ ತಂದ ಅಲಂಕಾರ ವಸ್ತುಗಳಿಂದ ಸಿಂಗರಿಸಿ ನೀರು ಹರಿಯುವ ಸ್ಥಳಕ್ಕೆ ಹೋಗಿ ಗಂಗಾಪೂಜೆ ಸಲ್ಲಿಸಿ ಗುಡಾರಕ್ಕೆ ಬರುತ್ತಾರೆ. ನಂತರ ಹೆಣ್ಣಿಗೆ ಮಡಿಲು ತುಂಬಿ ಕುಲದೇವರಿಗೆ ಪೂಜೆ ಸಲ್ಲಿಸುವರು.

ಎಲ್ಲಾ ಸಮುದಾಯಗಳಲ್ಲೂ ಮದುವೆ ಎಂಬ ಉದ್ದೇಶ ಒಂದೇ ಆಗಿದ್ದರೂ ಅದರ ಆಚರಣೆ ಮಾತ್ರ ಭಿನ್ನವಾಗಿದೆ. ಸಮುದಾಯ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಸಾಮಾಜಿಕ ಮನೋಧರ್ಮ ನಂಬಿಕೆ, ಪದ್ಧತಿ ಇತ್ಯಾದಿಗಳಿಗನುಗುಣವಾಗಿ ಆಚರಣೆಗಳು ಭಿನ್ನರೂಪ ತಾಳುತ್ತವೆ. ನಿರ್ದಿಷ್ಟ ಸಮುದಾಯವೊಂದರಲ್ಲಿ ಜರುಗುವ ಮದುವೆ ಆಚರಣೆಗಳು ಆ ಸಮುದಾಯದ ಸಂಸ್ಕೃತಿಯನ್ನು, ಅನಾವರಣಗೊಳಿಸುತ್ತವೆ.

ಅಲೆಮಾರಿ ಕುರುಬರ ಮದುವೆ ಆಚರಣೆಗಳು ನಾಲ್ಕು ಹಂತಗಳಲ್ಲಿ ನಡೆಯುತ್ತವೆ. ಅವುಗಳನ್ನು ಪ್ರಾಥಮಿಕ ಶಾಸ್ತ್ರಾಚರಣೆಗಳು, ಸಿದ್ಧತಾ ಆಚರಣೆಗಳು, ಪ್ರಧಾನ ಮತ್ತೂ ಪೂರಕ ಆಚರಣೆಗಳು ಎಂದು ವಿಂಗಡಿಸಬಹುದು. ಇವರು ಗಂಡುಮಕ್ಕಳ ಮದುವೆ ಮಾಡುವಾಗ ಹೆಣ್ಣು ದೇವರಾದ ಸತ್ಯಬಾಯಿ ಹೆಸರಿನಲ್ಲಿ ಕುರಿಬ್ಯಾಟಿ ಮಾಡುತ್ತಾರೆ. ಇದು ಮೂರು ತಿಂಗಳ ಮಗುವಿನಿಂದ ಇಪ್ಪತ್ತೈದು ವರ್ಷದ ಯುವಕರಿಗೆ ಮಾಡುವುದು ರೂಢಿ. ಆ ದೇವತೆಗೆ ಕುರಿಬ್ಯಾಟಿ ಮಾಡಿದ ಮೇಲೆ ಹುಡುಗನು ಮದುವೆಗೆ ಅರ್ಹನಾಗುವನು. ಹಿಂದೆ ಆ ಕಾರ್ಯದ ಮೂರು ವರ್ಷದ ತರುವಾಯ ಮದುವೆ ಮಾಡಿ ಬಿಡುತ್ತಿದ್ದರೆಂದು ತಿಳಿಯುತ್ತದೆ.

ಹೆಣ್ಣಿನ ಆಯ್ಕೆಯಲ್ಲಿ ಗಂಡುಮಕ್ಕಳಿಗೆ ಅಲೆಮಾರಿ ಕುರುಬರಲ್ಲಿ ಸ್ವಾತಂತ್ರ್ಯವಿಲ್ಲ. ಹಿರಿಯರು ಸಂಬಂಧಿಕರು ಮತ್ತು ತಂದೆತಾಯಿಗಳ ತೀರ್ಮಾನವೇ ಅಂತಿಮ. ಸಂಬಂಧವನ್ನು ಕುದುರಿಸುವಾಗ ತಮ್ಮ ಬಳಗದಲ್ಲಿಯ ಮಾವನ ಮಗಳು, ಅಕ್ಕನ ಮಗಳು, ತಂಗಿಯ ಮಗಳನ್ನು ನೋಡುತ್ತಾರೆ. ದಾರಿಯ ಶಕುನಗಳು, ಕನ್ಯೆಯ ಅಂಗಲಕ್ಷಣ, ಪರೀಕ್ಷೆಯಲ್ಲಿ ಕನ್ಯೆ ಎಲ್ಲರ ಮನಸ್ಸಿಗೆ ಸರಿಯೆನಿಸಿದರೆ ಅಂದೇ ಎಲೆ ಅಡಿಕೆ ಹಣ್ಣುಗಳಿಂದ ಮಡಿಲು ತುಂಬುತ್ತಾರೆ. ಇದು ಕನ್ಯೆಯನ್ನು ಒಪ್ಪಿಕೊಂಡಿರುವುದರ ಸಂಕೇತ. ಮದುವೆ ಮಾಡಿಕೊಳ್ಳುವ ಹೆಣ್ಣನ್ನು ಖಚಿತಪಡಿಸಿಕೊಳ್ಳುವ ನಿಶ್ಚಿತಾರ್ಥಕ್ಕೆ ಇವರಲ್ಲಿ 'ಬಾಟಿಗೆ' ಎನ್ನುವರು. ಶುಭದಿನದಂದು ಗಂಡಿನ ಮನೆಯವರು ಕನ್ಯೆಯ ಮನೆಗೆ ಹೋಗಿ ನಿಶ್ಚಿತಾರ್ಥ ಪೂರೈಸುತ್ತಾರೆ. ಪೂಜಾರಿಯು ಎದ್ದು ನಿಂತು ಕನ್ಯೆಯ ಹಣೆಗೆ ಭಂಡಾರ ಹಚ್ಚಿ, ಈ ಬೆಡಗಿನ ಹೆಣ್ಣು ಇಂತಹ ಬೆಡಗಿನ ಗಂಡಿಗೆ ಗಟ್ಟಿಯಾಯಿತೆಂದು ಜೋರಾಗಿ ಕೂಗಿ ವೀಳ್ಯ ಮತ್ತು ಸಕ್ಕರೆಯನ್ನು ಹಂಚುವರು. ಇವು ಪ್ರಾಥಮಿಕ ಆಚರಣೆಗಳು.

ಸಿದ್ಧತಾ ಆಚರಣೆಗಳಲ್ಲಿ ಲಕ್ಷ್ಮೀ ಪೂಜೆ ಮುಖ್ಯ. ತುಂಬಿದ ಬಿಂದಿಗೆಗೆ ಕೆಂಪುವರ್ಣದ ಸೀರೆ ತೊಡಿಸಿ ಆಭರಣಗಳಿಂದ ಅಲಂಕರಿಸಿದರೆ ಅದೇ ಲಕ್ಷ್ಮೀ. ಅಂದು ಸಿಹಿಮಾಡುವ ಸಂಪ್ರದಾಯವಿದ್ದು ವರನ ಕಡೆಯ ಮುತ್ತೈದೆಯರು ಈ ಅಡುಗೆಯನ್ನು ತಯಾರಿಸಬೇಕು. ವರನ ಅಣ್ಣತಮ್ಮಂದಿರೇ ಊಟ ಮಾಡಬೇಕು. ಹೊರಗೆ ಒಂದು ಅಗುಳೂ ಹೋಗಬಾರದೆಂಬ ನಿರ್ಬಂಧವಿದೆ. ಆ ಕಾರಣಕ್ಕೆ ಊಟ ಮಾಡಿದ ಎಲೆಗಳಾದಿಯಾಗಿ ಮನೆಯ ಮೂಲೆಯೊಂದರಲ್ಲಿ ತಗ್ಗು ತೋಡಿ ಮುಚ್ಚುತ್ತಾರೆ. ಲಕ್ಷ್ಮೀಕಾರ್ಯದ ದಿವಸ ಯಾವ ಕಾರಣಕ್ಕೂ ಲಕ್ಷ್ಮಿಯನ್ನು ಹೊರ ಹೋಗಲು ಬಿಡಬಾರದು ಎಂಬ ನಂಬಿಕೆಯಿದೆ. ಆ ಆಚರಣೆ ಕಟ್ಟುನಿಟ್ಟಾಗಿ ನಡೆಸುತ್ತಾರೆ. ಇದಾದ ನಂತರ ಮದುವೆಗೆ ಕರೆಯುವುದು. ಬಟ್ಟೆ ತೆಗೆಯುವುದು. ವರನಿಗೆ ಎಲೆ ಅಡಿಕೆ ಚೀಲ ತೆಗೆಯಲಾಗುತ್ತದೆ.

ಅಲೆಮಾರಿ ಕುರುಬರ ಮದುವೆ ಮೂರು ದಿನಗಳ ಕಾಲ ನಡೆಯುತ್ತದೆ. ಚಪ್ಪರ ಹಾಕಿಸುವುದು, ಶಾಶಿಕಟ್ಟೆಯ ಪೂಜೆ, ಹತ್ತಿಗಿಡದ ಕೊಂಬೆಯನ್ನು ಕತ್ತರಿಸಿ ತರುವ ಹಾಲುಗಂಬ ಆಚರಣೆ. ಎದುರುಗೊಳ್ಳುವಿಕೆ ಪಲ್ಲಕ್ಕಿ ತರುವುದು, ತಾಳಿಕಟ್ಟುವ ಮತ್ತು ಅರಿಶಿನ ನೀರು ಹಾಕುವ ಸಮಯಕ್ಕೆ ಬೇಕಾಗುವ ಮಣ್ಣಿನ

ಬಿಂದಿಗೆ, ನಾಲ್ಕು ಮಗಿ, ಎರಡು ಪಡಗಗಳನ್ನು ತರುವ ಐರಾಣೆ, ಕಂಕಣ ಕಟ್ಟುವುದು, ಹಾಲುಗಂಭ ತಂದ ಸೋದರ ಮಾವನ ಮನೆ ಮುಂದೆ ಅರಿಶಿನ ನೀರು ಹಾಕುವುದು. ಶಾಸ್ತ್ರಗಳೊಂದಿಗೆ ಮೊದಲ ದಿನ ಶಾಸ್ತ್ರಾಚರಣೆಗಳು ಮುಕ್ತಾಯವಾಗುತ್ತವೆ.

ಧಾರೆ ಮುಹೂರ್ತದಂದು ಈರಗಾರರು ಮತ್ತು ಪೂಜಾರಿಗಳು ಅಲುಗು ಹಾಯಿಸುವುದರೊಂದಿಗೆ ಕಾರ್ಯಕ್ರಮಗಳು ಆರಂಭವಾಗುತ್ತದೆ. ನಂತರ ಬೀರದೇವರಿಗೆ ಬಲಿ, ಬೀರದೇವರನ್ನು ಮನೆ ದೇವರಾಗಿಸಿಕೊಂಡವರು ಗುಗ್ಗಳ ನಡೆಸುವುದು. ಐನೀರು ತರುವುದು, ಸುರಿಗೆ ಸುತ್ತುವುದು, ಬಾಸಿಂಗ ಕಟ್ಟುವುದು, ತಾಳಿಕಟ್ಟುವುದರೊಂದಿಗೆ ಧಾರೆ ಮುಹೂರ್ತ ಮುಗಿಯುತ್ತದೆ. ಇದಾದ ನಂತರ ಉಂಗುರ ಹುಡುಕುವ, ಅಡಿಕೆ ಆಟ, ಗೊಂಬೆಯಾಟ ನಂತರದಲ್ಲಿ ದೈವದೂಟದೊಂದಿಗೆ ಆದಿ ಮುಕ್ತಾಯವಾಗುತ್ತದೆ.

ಅಲೆಮಾರಿ ಕುರುಬರ ಮದುವೆಯ ಮೂರನೇ ದಿನವನ್ನು 'ಮಸಿಯೂಟ' ಎಂದು ಕರೆಯುವರು. ಕರಿನೀರು, ಅಳಿಯನ ಕಾಲು ತೊಳೆಯುವುದು, ಗಂಗೆಶಾಸ್ತ್ರ ಆಚರಣೆ ಮಾಡಿದ ಹನ್ನೊಂದನೆಯ ದಿನ ಅಲೆಮಾರಿ ಕುರುಬರು ಹೊಸ ದಂಪತಿಗಳನ್ನು ಒಟ್ಟುಗೂಡಿಸುವುದು ಸಂಪ್ರದಾಯವಾಗಿದೆ.

ಮನುಷ್ಯ ಬದುಕಿನ ಕಡೆಯ ಸಂಸ್ಕಾರವೇ ಮರಣದ ಆಚರಣೆಗಳು. ಇವರಲ್ಲಿ ಸತ್ತವರನ್ನು ಹೂಳುವ ಮತ್ತು ಸುಡುವ ಪದ್ಧತಿಗಳೆರಡೂ ಇವೆ. ಮೂರನೇ ದಿನದ ಕಾರ್ಯ ಮತ್ತು ಒಂಭತ್ತನೇ ದಿನದ ಕಾರ್ಯಗಳು ಪ್ರಧಾನ. ಮೂರನೇ ದಿನ ಬೇಟೆ ಕೊಯ್ದು ಮಾಂಸದ ಅಡಿಗೆ ಮಾಡಿ ಸತ್ತ ವ್ಯಕ್ತಿಯ ಸಮಾಧಿಯ ಬಳಿ ಎಡೆ ಸಲ್ಲಿಸಿ ಕಾಗೆ ಕರೆಯುವ ಪದ್ಧತಿಯಿದೆ. ಒಂಭತ್ತನೇ ದಿನ ಪೂಜಾರಿಯನ್ನು ಕರೆಸಿ ಮನೆಯನ್ನು ಶುಭ್ರಗೊಳಿಸಿ ಸತ್ತಸೂತಕವನ್ನು ತೆಗೆದುಕೊಳ್ಳಲಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಕಾಲಕ್ಕನುಗುಣವಾಗಿ ಹಲವು ಪ್ರಭಾವಗಳಿಗೆ ಒಳಗಾಗಿ ಸಂಸ್ಕೃತಿಯೊಂದು ಬದಲಾದಂತೆ ಆಚರಣೆಗಳೂ ಬದಲಾವಣೆಗೆ ಒಳಗಾಗುವುದು ಸಹಜವೇ ಆಗಿರುತ್ತದೆ. "ಪ್ರಕೃತಿಗೆ ಸಾಮೀಪ್ಯವಾದ ಕುರಿ ಕಾಯುವುದನ್ನು ಪರಂಪರಾಗತವಾಗಿ ಜೀವನಾಧಾರ ಉದ್ಯೋಗವನ್ನಾಗಿ ಮುಂದುವರಿಸಿಕೊಂಡು ಬಂದಿರುವ ಕುರುಬರ ಆಚರಣೆಗಳು ತೀರಾ ಸಂಪ್ರದಾಯಬದ್ಧವಾಗಿವೆ"[೩೪] ಎನ್ನುತ್ತಾರೆ ಶಿವಾನಂದ ಗುಬ್ಬಣ್ಣನವರ.

ಗೊಂಡ ಕುರುಬರು

ಪ್ರಕೃತಿಯ ಮಡಿಲಲ್ಲೇ ಬದುಕುವ ವ್ಯವಸಾಯಗಾರರಾದ ಗೊಂಡರು ಆರ್ಥಿಕವಾಗಿ ಹಿಂದುಳಿದವರು. ಆದರೂ ಮೂಲ ಸಂಸ್ಕೃತಿಯ ಲಕ್ಷಣಗಳನ್ನು ಬಿಟ್ಟುಕೊಡದ ಇವರ ಸಂಪ್ರದಾಯ ಆಚರಣೆಗಳು ಶ್ರೀಮಂತಿಕೆಯಿಂದ ಕೂಡಿರುತ್ತವೆ. ಪಶುಸಂಗೋಪನೆಯು ಇವರ ಉಪಜೀವನ ವೃತ್ತಿ. ಪ್ರತಿಯೊಂದು ಸಮುದಾಯ ಮತ್ತು ಬುಡಕಟ್ಟಿನಲ್ಲೂ ಹುಟ್ಟಿನ ಆಚರಣೆಗಳು ಆನಂದದಾಯಕವಾಗಿರುತ್ತವೆ. ತಾಯಿಯ ಗರ್ಭದಲ್ಲಿರುವ ಮಗುವಿನ ಬಗ್ಗೆ ಕುಟುಂಬದಲ್ಲಿ ನಿರೀಕ್ಷೆಯ ವಾತಾವರಣ ಮೂಡಿರುತ್ತದೆ. ಹೊಸ ಜೀವಕ್ಕೆ ಜನ್ಮನೀಡಲು ಸಿದ್ಧವಿರುವ ಗರ್ಭಿಣಿಯನ್ನು ಕಂಡಾಗ ಕುಟುಂಬದ ಸದಸ್ಯರಿಗೆ ಎಲ್ಲಿಲ್ಲದ ಸಂತೋಷ. ಗರ್ಭಿಣಿಯನ್ನು ಸುಖಸಂತೋಷದಿಂದ ಇರುವಂತೆ ನೋಡಿಕೊಂಡರೆ ಆಕೆಯ ಗರ್ಭದಲ್ಲಿರುವ ಮಗು ಆರೋಗ್ಯವಾಗಿರುತ್ತದೆ ಎಂದು ಹಿರಿಯರು ನಂಬಿರುತ್ತಾರೆ.

ಗೊಂಡರಲ್ಲಿ ಚೊಚ್ಚಿಲ ಬಾಣಂತಿತನಕ್ಕೆ ಕರೆದೊಯ್ಯುವ ಮುನ್ನ ಪತಿಯ ಮನೆಯವರು ಆಕೆ ಗರ್ಭಿಣಿಯಾದ ಏಳನೇ ತಿಂಗಳಲ್ಲಿ ಔತಣಕೂಟ ಏರ್ಪಡಿಸುತ್ತಾರೆ. ಅದಕ್ಕೆ 'ಚೊಚ್ಚಿಲು ಬಸುರಿಶಾಸ್ತ್ರ' ಎನ್ನುವರು. ಇದಕ್ಕೆ ಇನ್ನುಳಿದ ಕುರುಬರಲ್ಲಿ 'ಸೀಮಂತ' ಎನ್ನಲಾಗುತ್ತದೆ. ಇದು ಗೊಂಡರಲ್ಲಿ ರಾತ್ರಿಯ ವೇಳೆ ನಡೆಯುವುದರಿಂದ ಹೆಣ್ಣಿನ ತಾಯಿ ಮತ್ತು ಸಂಬಂಧಿಕರಾದಿಯಾಗಿ ಬಂದು ಅಲಂಕಾರಗೊಳಿಸಿ ಮಡಿಲು ತುಂಬಿಸಿ ಊಟ ಮುಗಿಸಿಕೊಂಡು ಬೆಳಿಗ್ಗೆ ತಮ್ಮೂರಿಗೆ ವಾಪಸಾಗುವರು. ಮೊದಲ ಮಗುವಿನ ಗರ್ಭಿಣಿಯನ್ನು ಶೃಂಗಾರ ಮಾಡಿ ಆಕೆಯನ್ನು ಸಂತೋಷದಿಂದ ತವರಿಗೆ ಕಳುಹಿಸಿಕೊಡುವುದು ಗಂಡನ ಮನೆಯವರ ಮುಖ್ಯ ಕರ್ತವ್ಯವೆಂದು ಗೊಂಡರು ಭಾವಿಸಿದ್ದಾರೆ.

ತವರಿಗೆ ಬಂದ ಗರ್ಭಿಣಿಗೆ ಒಂಭತ್ತು ತಿಂಗಳು ತುಂಬಿ ಹೆರಿಗೆಯಾದರೆ ಅವಳನ್ನು 'ಚೌಕಿ'ಯಲ್ಲಿಡುತ್ತಾರೆ. ಒಂಭತ್ತು ತಿಂಗಳು ತುಂಬಿದರೂ ಹೆರಿಗೆಯಾಗದಿದ್ದರೆ ತಮ್ಮ ದೇವರುಗಳಾದ ಜಟ್ಟಿಗ ಮತ್ತು ಮಾಸ್ತಿಯವರಿಗೆ ಪೂಜೆ ಸಲ್ಲಿಸಿ ವೈದ್ಯನ ಬಳಿ ಜೋತಿಷ್ಯ ಕೇಳಿಸುತ್ತಾರೆ. ಆರು ಅಥವಾ ಏಳು ದಿನಗಳ ಸೂತಕ ಕಳೆಯುವವರೆಗೂ ಯಾವ ಪ್ರಾಣಿಯನ್ನೂ ಕೊಲ್ಲುವುದಿಲ್ಲ. ಯಾವ ಮರವನ್ನೂ ಕತ್ತರಿಸುವುದಿಲ್ಲ. ಮನೆಯ ಹೆಂಗಸರು ಬೇರೆಯವರ ಮನೆಯ ನೆಲ ಸಾರಿಸುವುದಿಲ್ಲ. ಸೂತಕ ಕಳೆದುಕೊಂಡ ಮಗುವಿಗೆ ನಾಮಕರಣ ಶಾಸ್ತ್ರ ಪೂರೈಸುತ್ತಾರೆ. ಮೊದಲಿಗೆ ಮನೆದೇವರುಗಳ ಹೆಸರುಗಳನ್ನಿಡುತ್ತಿದ್ದ ಇವರು ಇತ್ತೀಚೆಗೆ ಆಧುನಿಕ ಹೆಸರುಗಳೂ ಪ್ರವೇಶ ಮಾಡಿವೆ. 'ಚೋಳಂಗಿ' ಎಂಬ ಕೂದಲು ತೆಗೆಸುವ ಆಚರಣೆಯೂ ಗೊಂಡರಲ್ಲಿದೆ.

ಮದುವೆ ಎನ್ನುವ ಸಾಮಾಜಿಕ ಸಂಸ್ಥೆ ಒಂದೇ ಆದರೂ ಅದರ ಆಚರಣೆಗಳು ವೈವಿಧ್ಯಮಯ. ಗೊಂಡರಲ್ಲಿ ಮದುವೆಗೆ ಗಂಡು ಹೆಣ್ಣುಗಳ ನಿರ್ಧಾರ ಮಾಡುವುದು ಹಿರಿಯರ ಮುಖ್ಯವಾಗಿ ತಂದೆ ತಾಯಂದಿರ ಕರ್ತವ್ಯ. ಇವರಲ್ಲಿ ಪ್ರೇಮ ವಿವಾಹ, ಅಂತರ್ಜಾತಿ ವಿವಾಹಕ್ಕೆ ಮಾನ್ಯತೆಯಿಲ್ಲ. ಮದುವೆಯನ್ನು ಇವರು ಎರಡು ರೀತಿಯಲ್ಲಿ ಆಚರಿಸುತ್ತಾರೆ. 'ಕೈಧಾರೆ' ಎಂದು ಮೊದಲನೆಯದಾದರೆ, 'ಬಿಡಧಾರೆ' ಅಥವಾ ಮರುಮದುವೆ ಎಂದು ಎರಡನೇದು, ಮದುಮಗನಿಗೆ ಹೆಣ್ಣು ಹುಡುಕುವುದು, ಒಪ್ಪಿಗೆಯಾದರೆ ವೀಳ್ಯೆಶಾಸ್ತ್ರ ಹಂಚಿಕೆ, ಅದೇ ವೇಳೆಯಲ್ಲಿ ತುಳಸಿಪೂಜೆ, ಲಗ್ನಪತ್ರಿಕೆ ಬರೆಸಿದಾದ ಮೇಲೆ ಬಂದವರಿಗೆಲ್ಲ ಬೆಲ್ಲದ ಪಾನಕ ಹಂಚುವುದು. ನಿಶ್ಚಯವಾದ ದಿನವೇ ಹೆಣ್ಣಿಗೆ ತಮ್ಮ ಕೈಲಾದ ಮಟ್ಟಿಗೆ ಕನ್ಯಾಶುಲ್ಕ ನೀಡುವುದು, ಜವಳಿ ತರುವುದು. ಗೋಡೆಗಳ ಮೇಲೆ ಹಸಿ ರಂಗೋಲಿಯಿಂದ ಚಿತ್ರ ಬಿಡಿಸುವುದು, ಚಿತ್ರಬಿಡಿಸಿದವಳಿಗೆ ಕಾಣಿಕೆ ನೀಡುವುದು, ಹೆಣ್ಣು ಶೃಂಗಾರಗೊಳಿಸುವುದು ಮುಂತಾಗಿ ಮದುವೆ ಪೂರ್ವಸಿದ್ಧತೆಗಳಾಗುತ್ತವೆ.

ಗಂಡು ಮದುವೆಗಾಗಿ ಹೆಣ್ಣಿನ ಮನೆಗೆ ಹೊರಡುವ ಮುನ್ನ ಗಡ್ಡ ತೆಗೆಸುವ ಶಾಸ್ತ್ರ, ಅರಿಶಿನ ತೆಂಗಿನೆಣ್ಣೆ ತಲೆಗೆ ಹಚ್ಚಿ ಸ್ನಾನ ಮಾಡಿಸುವುದು. ಬೋಳು ಮೀಯುವ ಶಾಸ್ತ್ರ, ಅಕ್ಕ ಮತ್ತು ಜತ್ತಗಾರ (ಭಾವ) ನಿಂದ ಮದುಮಗನ ಶೃಂಗಾರ, ಬಾಸಿಂಗ ಧರಿಸುವುದು, ಹಿಂದೆ ಬಾಕು ಹಿಡಿಯುವ ಪದ್ಧತಿಯಿದ್ದು

ಈಗ ಕುಡುಗೋಲಿಗೆ ಬಟ್ಟೆ ಸುತ್ತಿ ಹಿಡಿಯಲು ಮದುಮಗನ ಕೈಗೆ ನೀಡುವುದು. ಮದುವೆಗೆ ಮುನ್ನವೇ ಹಾಲೆರೆಯುವ ಶಾಸ್ತ್ರ ನಡೆಸುವುದು ಗೊಂಡರ ವಿಶೇಷ. ದೃಷ್ಟಿನಿವಾಳಿಸುವುದು, ಅಕ್ಕಿ ಕೇರುವುದು, ನೀರಿಗೆ ಹೋಗುವುದು. ಉಡುಗೊರೆ ಶಾಸ್ತ್ರವು ವರನ ಕಡೆಯ ಸಂಬಂಧಿಕರ ಮತ್ತು ಹಿರಿಯರ ಸ್ಥಾನಮಾನವನ್ನು ನಿರ್ಧರಿಸುವ ಸಂಪ್ರದಾಯವಾಗಿದೆ. ತುಳಸಿಕಟ್ಟೆಯ ಮುಂದೆ ನಿಂತ ಮದುಮಗನ ಮುಂದೆ ಬಟ್ಟೆ ಗಂಟು ತಂದಿಡುವುದು. ಉಡುಗೊರೆ ನೀಡುವವರ ಹೆಸರು ಕೂಗಿ ಕರೆದಾಗ ಉಡುಗೊರೆ ಪಡೆದವರು ಮೊದಲು ತುಳಸಿಕಟ್ಟೆಗೆ ನಮಸ್ಕರಿಸಿ ಅಲ್ಲಿ ನಿಂತಿರುವ ಹಿರಿಯರಿಗೂ ನಮಸ್ಕರಿಸುವರು. ಗೊಂಡರಿಗೆ ತುಳಸಿಕಟ್ಟೆ ಬಹಳ ಮಹತ್ವದ್ದಾಗಿರುವುದರಿಂದ ಅದರ ಸಮ್ಮುಖದಲ್ಲಿ ಉಡುಗೊರೆ ನೀಡುವ ಪದ್ಧತಿಯಿದೆ.

ದಿಬ್ಬಣ ಹೆಣ್ಣಿನ ಮನೆಗೆ ಹೋಗುವ ಮೊದಲು ಗಂಡಿನ ಮನೆಯಲ್ಲಿ ಊಟ ಮಾಡುತ್ತಾರೆ. ಏಕೆಂದರೆ ಮುಹೂರ್ತದ ದಿನ ಹೆಣ್ಣಿನ ಮನೆಯಲ್ಲಿ ಬಂದವರಿಗೆ ಕೇವಲ ಪಾನಕ ಮತ್ತು ಬಾಳೆಹಣ್ಣಿನ ಉಪಹಾರ ಮಾತ್ರ ಇರುತ್ತದೆ. ಗಂಡಿನ ಮನೆಯವರು ರಾತ್ರಿ ಊಟವನ್ನು ದಿಬ್ಬಣ ಹೊರಡುವ ಮುಂಚಿತವಾಗಿಯೇ ಮುಗಿಸಿಕೊಂಡು ಹೊರಡುತ್ತಾರೆ. ಹೆಣ್ಣಿನ ಮನೆಗೆ ಹೋಗುವಾಗ ಇಂದೂ ಬರಿಗಾಲಲ್ಲಿಯೇ ನಡೆದು ಗಂಡು ಹೋಗಬೇಕು. ಅವರಲ್ಲಿ ಹೆಂಗಸರು ಚಪ್ಪಲಿ ತೊಡುವುದು ನಿಷಿದ್ಧ.

ಗೊಂಡರು ಮಾಡುವ ಮದುವೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ಅವರು ಹೆಣ್ಣು ಮತ್ತು ಗಂಡುಗಳಿಗೆ ಹೂಹಾರಗಳನ್ನು ಹಾಕದಿರುವುದು ಮತ್ತು ವಿನಿಮಯ ಮಾಡಿಸದಿರುವುದು. ವಧೂವರರ ಮೇಲೆ ಮಹೂರ್ತದ ಸಂದರ್ಭದಲ್ಲಿ ಸೇರಿದವರು ಅಕ್ಷತೆ ಕಾಳನ್ನು ಎರಚುವುದಿಲ್ಲ. ಮಲ್ಲಿಗೆ ಹೂವನ್ನು ಗಂಡು ಹೆಣ್ಣಿನ ತಲೆಗೆ ಮುಡಿಸುವ ಸಂಪ್ರದಾಯವನ್ನು ಬಿಟ್ಟರೆ ಬೇರೆ ಯಾವ ವಿಧದಲ್ಲೂ ಅವರೂ ಹೂವನ್ನು ಮುಡಿಸುವುದಿಲ್ಲ.

ಧಾರೆ ಎರೆದ ನಂತರ ಮದುಮಗ ವಧುವಿಗೆ ಧಾರೆಗುಂಡು ಕಟ್ಟುತ್ತಾರೆ. ಗೊಂಡರು 'ಧಾರೆಗುಂಡು' ಎಂದು ಕರೆಯುವ ಸರವು ಸಾಮಾನ್ಯವಾಗಿ ಕರಿಮಣಿ ಸರವಾಗಿರುತ್ತದೆ. ಹಿಂದೆ ಅವರು ಧಾರೆಗುಂಡಿಗೆ ಬದಲಾಗಿ 'ಕೊಳ್‌ನೂಗ್ಲು' ಎಂಬ ಕೆಂಪುದಾರವನ್ನು ಕಟ್ಟುತ್ತಿದ್ದರೆಂದು ಹೇಳುತ್ತಾರೆ. ಧಾರೆ ಎರೆದ ತಂದೆಯು ಅಕ್ಷತೆಯ ಕಾಳನ್ನು ಹೆಣ್ಣು ಗಂಡಿನ ಹಣೆಗೆ ಹಚ್ಚಿ ಪಕ್ಕಕ್ಕೆ ಸರಿಯುತ್ತಾನೆ. ಹಣಹಾಕೋ ಶಾಸ್ತ್ರ ಮುಗಿಸಿ ನವ ದಂಪತಿಗಳನ್ನು ವರನ ಮನೆ ಸೇರಿದ ನಂತರ ಶಾಸ್ತ್ರಗಳಲ್ಲಿ ಬಾಗಿಲು ತಡೆಯೋಶಾಸ್ತ್ರ ಆಚರಣೆ ಇರುತ್ತದೆ. ವಧು ವರರಿಬ್ಬರೂ ಬಾಸಿಂಗಬಿಚ್ಚಿ ಕೋಳ್ ಕಂಬಕ್ಕೆ ಕಟ್ಟುವುದು, ಮಾವ ಬಂದು ಮಗಳನ್ನು ಕರೆದೊಯ್ಯುವುದು, ಹೆಂಡತಿ ತವರಿಗೆ ಹೋದ ಎರಡು ದಿನಗಳ ನಂತರ ಮದುಮಗನೇ ಹೋಗಿ ಕರೆತರುವುದು, ಅಂದು ಅಳಿಯನಿಗೆ ಪೊಸ ಕಜ್ಜಾಯ ಮಾಡೋ ಶಾಸ್ತ್ರವಿರುತ್ತದೆ. ಅತ್ತೆ ಕಜ್ಜಾಯ ಮಾಡಿ ಅಳಿಯ ಮತ್ತು ಮಗಳಿಗೆ ತಿನ್ನಿಸುತ್ತಾಳೆ. ಸಾಮಾನ್ಯವಾಗಿ ಹಿಂದೆ ಕಜ್ಜಾಯ ಮಾಡೋ

ಶಾಸ್ತ್ರದೊಂದಿಗೆ ನಮ್ಮ ಮದುವೆ ಮುಕ್ತಾಯ ಕಾಣಲು ಎಂಟು ದಿನಗಳು ಬೇಕಾಗುತ್ತಿತ್ತು ಎಂದು ಇಂದಿಗೂ ಹೇಳುತ್ತಾರೆ.

ಹೆಣ್ಣು ಮೊದಲ ಬಾರಿಗೆ ಮೈನೆರೆದಾಗ ನಡೆಸುವ ಸಂತೋಷದ ಆಚರಣೆಗೆ 'ದಿಂಡು' ಎಂದು ಕರೆಯುವರು. ಹುಡುಗಿ ಮೈನೆರೆದ ಬಳಿಕವೇ ಮದುವೆ ನಡೆಯುವುದರಿಂದ ದಿಂಡಿನ ಶಾಸ್ತ್ರ ಈಗ ಸ್ವಲ್ಪ ಮರೆಯಾಗಿದೆ. ಸರ್ಕಾರ ಬಾಲ್ಯವಿವಾಹ ತಡೆ ಕಾಯ್ದೆ ತಂದಿದ್ದರೂ ಗೊಂಡರಲ್ಲಿ ಇದು ನಿಂತಂತಿಲ್ಲ. ಗಂಡನ ಮನೆಯಲ್ಲಿ ಹೆಣ್ಣು ಮೈನೆರೆದರೆ ತವರು ಮನೆಗೆ, ತವರು ಮನೆಯಲ್ಲಿ ಮೈನೆರೆದರೆ ಗಂಡನ ಮನೆಗೆ ಈ ಶುಭ ಸುದ್ದಿಯನ್ನು ತಿಳಿಸುತ್ತಾರೆ. ಗಂಡನ ಮನೆಯಲ್ಲಿ ಮೈನೆರೆದರೆ ಅತ್ತೆ ಆಕೆಯನ್ನು ಕರೆತಂದು ಎಣ್ಣೆ ಹಚ್ಚಿ ಸ್ನಾನ ಮಾಡಿಸಿ, ಹೊಸ ಸೀರೆ ಉಡಿಸಿ, ಚಿನ್ನಾಭರಣಗಳಿಂದ ಸಿಂಗರಿಸಿ ಮಗನಿಗೆ ಹೇಳಿ ಹೂ ತರಿಸಿ ಮುಡಿಸುತ್ತಾನೆ. ಈ ಸಂತೋಷದಲ್ಲಿ ಅಕ್ಕಪಕ್ಕದ ಮನೆಯವರೂ ಬಾಗಿಯಾಗುವರು. ಗಂಡನ ಮನೆಯವರು ಹೊರಿ ಕಳಿಸುವ ಶಾಸ್ತ್ರ, ಮೈನೆರೆದ ಮೂರು ದಿನಗಳ ನಂತರದಲ್ಲಿ ಗಂಡನ ಮನೆಯಲ್ಲಿ ತಲೆನೀರು ಹೊಯ್ಯುವ ಶಾಸ್ತ್ರ, ಹದಿನೈದನೇ ದಿನದ ನಂತರ ಶಾವಿಗೆ ಊಟದ ಶಾಸ್ತ್ರ ಮುಟ್ಟು ಮೀಯುವ ಶಾಸ್ತ್ರಗಳನ್ನು ಆಚರಿಸಲಾಗುತ್ತದೆ.

ಗೊಂಡರಲ್ಲಿ ಸತ್ತವರನ್ನು ಹೂಳುವುದಕ್ಕಿಂತ ಸುಡುವುದೇ ಹೆಚ್ಚು. ಸಾಮಾನ್ಯವಾಗಿ ಮದುವೆಯಾಗದ ಹುಡುಗ-ಹುಡುಗಿಯರು ಸಣ್ಣಮಕ್ಕಳು, ಗರ್ಭಿಣಿಯರು, ಪ್ರೌಢಾವಸ್ಥೆಗೆ ಬರದ ಹೆಣ್ಣುಮಕ್ಕಳು ಸತ್ತರೆ ಅವರನ್ನು ಹೂಳುತ್ತಾರೆ. ಮನೆಯಲ್ಲಿ ಯಾರಾರೂ ಸತ್ತರೆ 'ಗರ್ನಲ್'ನ್ನು ಮನೆಯ ಮುಂದೆ ಸಿಡಿಸಿ ಸುದ್ದಿ ತಿಳಿಸುತ್ತಾರೆ. ಹೆಣಕ್ಕೆ ಸ್ನಾನ ಮಾಡಿಸಿದ ನಂತರ ಅದನ್ನು ಅಡಿಕೆ ದಬ್ಬೆಗಳಿಂದ ಮಾಡಿದ ಚಟ್ಟದ ಮೇಲಿಟ್ಟು ಅದರ ಜೊತೆಯಲ್ಲಿ ಒಂದು ಸಿದ್ದೆ ಅಕ್ಕಿ, ಒಂದು 'ಪಾವಲಿ' ಹಣ ಒಂದು ಪಂಚೆ ಇಡುತ್ತಾರೆ. ಹೆಣದ ಮೇಲೆ ಬಿಳಿಯ ಪಂಚೆಯನ್ನು ಹೊದಿಸುತ್ತಾರೆ. ಹೆಣವನ್ನು ಹೊತ್ತು ನಾಲ್ವರು ಮುನ್ನೆಡೆದರೆ ಸತ್ತ ವ್ಯಕ್ತಿಯ ಹಿರಿಯ ಮಗ ಅಥವಾ ಹಿರಿಯ ಮಗಳ ಮಗ ಬೆಂಕಿಯಿಡುವ ಮಡಿಕೆಯನ್ನು ಹಿಡಿದುಕೊಂಡು ಹೋಗುವನು. ಗೊಂಡರಿಗೆ ಸ್ಮಶಾನವೆಂಬುದು ನಿರ್ದಿಷ್ಟವಾಗಿಲ್ಲದಿರುವುದರಿಂದ ಇವರು ತಮ್ಮ ಹೊಲ ಅಥವಾ ಯಾವುದಾದರೂ ಬಯಲು ಪ್ರದೇಶದಲ್ಲಿ ಹೆಣವನ್ನು ಸುಡುವರು. ಬೆಂಕಿ ತೆಗೆದುಕೊಂಡು ಹೋದವನು ಹೆಣಕ್ಕೆ ಬೆಂಕಿ ಕೊಟ್ಟದ್ದರಿಂದ ಮೂರು ದಿನಗಳ ನಂತರ ಆತನ ತಲೆಯನ್ನು ಬೋಳಿಸಲಾಗುತ್ತದೆ.

ವ್ಯಕ್ತಿ ಸತ್ತ ಹತ್ತು ಅಥವಾ ಹನ್ನೆರಡನೇ ದಿನದಂದು ಸೂತಕವನ್ನು ತೆಗೆದುಕೊಳ್ಳುತ್ತಾರೆ. ಆ ದಿನ ಮನೆ ಸಾರಿಸಿ ಮನೆ ಮಂದಿಯೆಲ್ಲ ಸ್ನಾನ ಮಾಡುವರು. ಒಬ್ಬಿಬ್ಬರು ಸತ್ತವ್ಯಕ್ತಿಯನ್ನು ಸುಟ್ಟ ಅಥವಾ ಹೂತ ಸ್ಥಳಕ್ಕೆ ಹೋಗಿ ಸಾಕೀಟು ಅನ್ನವನ್ನು ಮಡಕೆಯಲ್ಲಿಟ್ಟು ಬರುತ್ತಾರೆ. ಅಂದು ಸತ್ತವರ ಮನೆಯಲ್ಲಿ ಅನ್ನಪಾಯಸ, ಉದ್ದಿನ ದೋಸೆ, ಹುಡಿ ಮಾಡುತ್ತಾರೆ. ಹೆಣ ಸುಡುವುದರಲ್ಲಿ ಭಾಗವಹಿಸಿದವರೆಲ್ಲಾ ಊಟಕ್ಕೆ ಬರುತ್ತಾರೆ. ಇವರೆಲ್ಲರಿಗೂ ಬಡಿಸಿಯಾದ ಮೇಲೆ ಪ್ರತಿಯೊಬ್ಬರೂ ತಮ್ಮ ತಮ್ಮ ಎಲೆಯ

ಮೇಲೆ ಹಾಕಿದ ಅನ್ನದೊಂದು ಪಿಂಡ ಮಾಡಿ ಮುಂದಿಟ್ಟಿರುವ ಎಲೆಗೆ ಹಾಕುತ್ತಾರೆ. ಮನೆಯವರೊಬ್ಬರು ಆ ಎಲೆಯನ್ನು ಬೇಲಿಯ ಮೇಲಿಟ್ಟು ಬರುತ್ತಾರೆ. ಆನಂತರ ಊಟಮಾಡುತ್ತಾರೆ.

ಹನ್ನೊಂದನೆಯ ದಿನ ಹೆಣಕ್ಕೆ ಕೂದಲ ಕೊಟ್ಟವನನ್ನು ಅಂಗಳದಲ್ಲಿ ಕೂಡಿಸಿ ತಲೆಗೆ ಎಣ್ಣೆ ಹಚ್ಚಿ ಹೂವಿನ ಮಾಲೆಯನ್ನು ತಲೆಗೆ ಸುತ್ತುತ್ತಾರೆ. ಆಗ ಆ ಹುಡುಗನಿಗೆ ಅಥವಾ ಅಲ್ಲಿ ನೆರೆದವರಲ್ಲಿ ಒಬ್ಬರಿಗೆ ದೈವ ಮೈಮೇಲೆ ಬರುತ್ತದೆ. ದೈವ ಬಂದವರು ಕೂಗುತ್ತ ಅಂಗಳದಲ್ಲಿ ಕುಣಿಯುತ್ತಾರೆ. ಸತ್ತವರ ಆಸೆ ಮನೆಯ ಜನರ ಕರ್ತವ್ಯ ಮುಂದಾಗುವ ಒಳಿತು ಕೆಡುಕುಗಳ ಬಗ್ಗೆ ದೈವ ನುಡಿಯುತ್ತದೆ. ವಾರಸುದಾರರು ದೈವದ ಆದೇಶವನ್ನು ಪಾಲಿಸುತ್ತಾರೆ.

ನಿಸರ್ಗಪ್ರಿಯ ಗೊಂಡರು ವ್ಯವಸಾಯಕ್ಕಾಗಿ ಉಪಯೋಗಿಸುವ ನೆಲ ಜಲವೇ ಅವರ ಸರ್ವಸ್ವ. ನೆಲವನ್ನು ಸದಾ ಹಸಿರಾಗಿಟ್ಟು ಸಂತೋಷಪಡುವುದು. ಬೆವರು ಹರಿಸಿ, ನೆಲದಲ್ಲಿ ಹಸಿರು ಮೂಡಿಸಿರುವ ಹೊಲಗದ್ದೆಗಳೇ ಅವರ ವಾಸಸ್ಥಾನ. ಸುಗ್ಗಿಯ ಕಾಲದಲ್ಲಿ ಶ್ರಮ ನಿರತರು ಕೇರಿಗಳಲ್ಲಿ ವಾಸಿಸುವ ಗೊಂಡರಲ್ಲಿ ಅವಿಭಕ್ತ ಕುಟುಂಬಗಳಿವೆ. ಅವರ ಮನೆಯ ಹೊದಿಕೆ ಹುಲ್ಲಿನದಾಗಿರಲಿ, ಹೆಂಚಿನದಾಗಿರಲಿ ಗೋಡೆಯನ್ನು ಹಸಿ ಇಟ್ಟಿಗೆಯಿಂದ ನಿರ್ಮಿಸುವರು. ಮನೆಯನ್ನು ಕಡುಮಾಡು, ಚೌಕಿ, ಊಟದ ಕೋಣೆ, ಅಡಿಗೆಮನೆ ಮತ್ತು ಇಡೋಕೋಣೆ ಎಂದು ಐದು ವಿಭಾಗಗಳಾಗಿ ವಿಂಗಡಿಸಿಕೊಂಡಿರುತ್ತಾರೆ.

ಬಿಡುವಿನ ವೇಳೆಯಲ್ಲಿ ಗೊಂಡರು ಗೃಹಕೈಗಾರಿಕೆಗಳ ಮೊರೆಹೋಗುತ್ತಾರೆ. ಬಿದಿರಿನ ಬುಟ್ಟಿ ಹೆಣೆಯುವುದು, ಗುರಬ ತಯಾರಿಸುವುದು, ಕಲಾಕೌಶಲ್ಯಕ್ಕೆ ನಿದರ್ಶನವೆನಿಸುವ ಬೀಸಣಿಗೆ, ಚಾಪೆ ಹೆಣೆಯುವುದು, ಮಡ್ಲಿಕಟ್ಟು ತಯಾರಿಕೆಯು ಪ್ರಮುಖವಾದವು. ಇದಲ್ಲದೆ ವ್ಯಾಪಾರ ಮಾಡುವುದರಲ್ಲೂ ನಿಪುಣರಾದ ಗೊಂಡರು ತಮ್ಮ ಗೃಹಕೈಗಾರಿಕೆಯ ವಸ್ತುಗಳನ್ನು ಮಾರಾಟ ಮಾಡುವುದಲ್ಲದೆ ಬೆಳೆದ ದವಸಧಾನ್ಯಗಳು, ತರಕಾರಿ ಮುಂತಾದ ಆಹಾರ ಸಾಮಗ್ರಿಗಳನ್ನು ಮಾರುತ್ತಾರೆ. ಇಷ್ಟೆಲ್ಲ ನಿರ್ವಹಣೆ ಮಾಡಿದರೂ ಇವರು ಆರ್ಥಿಕವಾಗಿ ಹಿಂದುಳಿದಿರುವುದು ಶೋಚನೀಯವೆನಿಸುತ್ತದೆ.

ದೈನಂದಿನ ಆಹಾರಗಳ ಜೊತೆಗೆ ಹಬ್ಬದೂಟಗಳು ಗೊಂಡರ ವಿಶೇಷ. 'ಬಾಳೆ ಮುಂಡ್ಲಿ' ಮತ್ತು 'ಕೊಟ್ಗ' ಎಂಬ ಅಡುಗೆಗಳು ಕ್ರಮವಾಗಿ ದೀಪಾವಳಿ ಮತ್ತು ಸಂಕ್ರಾಂತಿಗಳಲ್ಲಿ ಮಾಡುತ್ತಾರೆ. ತುಳಸಿ ಹಬ್ಬದಲ್ಲಿ ಕಡುಬು ವಿಶೇಷ. ಅಲ್ಲದೆ ಪ್ರತಿಹಬ್ಬದ ಮೂರನೇ ದಿನ ಮೀನಿನ ಊಟ ಕಡ್ಡಾಯ. ಇದು ಗೊಂಡರಲ್ಲಿ ಮಾತ್ರ ಕಾಣುವಂತಹ ವಿಶೇಷ ಆಚರಣೆಯಾಗಿದೆ.

ಗೊಂಡರು ಗಟ್ಟಿಮುಟ್ಟಾದ ದೇಹವುಳ್ಳವರು. ಕಪ್ಪುಮಿಶ್ರಿತ ಬಿಳಿಯ ಬಣ್ಣದವರು. ಅವರ ಮೈ ಕಟ್ಟನ್ನು ನೋಡಿದರೆ ಕಷ್ಟಪಟ್ಟು ದುಡಿಯುವಂತಹವರೆಂಬುದನ್ನು ತಿಳಿಯಬಹುದು. ಇವರು ಉಡುವ ಉಡುಪು ಅವರಿಗೆ ವಿಶಿಷ್ಟವಾದುದು. ಗಂಡಸರು ಮೊಳಕಾಲ ಮೇಲೆ ಪಂಚೆ ತೊಟ್ಟು ಅದರ ಮೇಲೆ ನಿಲುವಂಗಿ ತೊಡುವರು. ತಲೆಗೆ ಕೆಂಪು ಬಣ್ಣದ ಕಂಬಿ ಕಂಬಿಯಂತೆ ಗೆರೆಗಳಿರುವ ವಸ್ತ್ರವನ್ನು

ಸುತ್ತುತ್ತಾರೆ. ಅವರು ಕಟ್ಟಿಕೊಳ್ಳುವ ಪಂಚೆಯನ್ನು 'ಮುಂಡು' ಎನ್ನುವರು. ವಯಸ್ಸಾದವರು ಖಾಕಿ ಬಣ್ಣದ ಕೋಟು ಧರಿಸುತ್ತಾರೆ.

"ಡಾ.ಎಲ್.ಆರ್.ಹೆಗಡೆಯವರು ಗೊಂಡರು ಕಪ್ಪು ಬಣ್ಣದ ಕೋಟನ್ನು ಹಾಕಿಕೊಳ್ಳುವುದುಂಟು ಎಂದು ಹೇಳಿರುವುದು ಸಮಂಜಸವಲ್ಲವೆಂದು ಹೇಳಬಹುದು. ಕಪ್ಪುಕೋಟು ಧರಿಸುವ ಗೊಂಡರು ಬೆರಳೆಣಿಕೆಗೂ ಸಿಗದೆ ಖಾಕಿ ಕೋಟನ್ನು ಧರಿಸುವ ಹಿರಿಯರು ಅಲ್ಲಲ್ಲಿ ಕಾಣಸಿಕೊಳ್ಳುತ್ತಾರೆ. ಕೋಟಿನ ಹೊರಭಾಗದಲ್ಲಿ ನಿಲುವಂಗಿ ಇಣುಕುತ್ತಿರುತ್ತದೆ. ಆ ಕೋಟನ್ನು ಗೊಂಡರು 'ಖಂತಿಅಂಗಿ' ಎಂದು ಕರೆಯುವರೆಂದು"[14] ಡಾ. ಸೈಯದ್ ಜಮೀರುಲ್ಲಾ ಷರೀಫ್ ತಿಳಿಸುತ್ತಾರೆ.

ಸ್ತ್ರೀಯರು ಮೊದಲು ಕೆಂಪುಬಣ್ಣದ ಕಂಬಿಯಿರುವ ಸೀರೆಯನ್ನು ತೊಡುತ್ತಾರೆ. ಅದಕ್ಕೆ ಅವರು 'ಕಡವಾರ ಅಂಚಿನ ಸೀರೆ' ಎನ್ನುವರು. ಸೀರೆಯ ಮೇಲ್ಭಾಗದಲ್ಲಿ ಕುಪ್ಪಸ ತೊಡದೆ ಸೀರೆಯ ಸೆರಗನ್ನು ಕೊರಳಲ್ಲಿರುವ 'ಕೊಳನೂಗ್ಲಿಗೆ' ತ್ರಿಕೋನಾಕಾರ ಬರುವಂತೆ ಸಿಕ್ಕಿಸಿಕೊಂಡು ಎದೆಯಭಾಗವನ್ನು ಮುಚ್ಚಿಕೊಂಡಿರುತ್ತಾರೆ. ಇತ್ತೀಚೆಗೆ ನಾಗರೀಕತೆಯ ಪ್ರಭಾವದಿಂದ ಇವೆಲ್ಲ ಬದಲಾವಣೆಗೊಳಪಟ್ಟಿರುವುದನ್ನು ಕಾಣಬಹುದಾಗಿದೆ.

ಗೊಂಡರಲ್ಲಿ ಬುಡದ ಪೂಜೆ, ವರ್ಗದ ಪೂಜೆ, ಕೋಗ್ತಿಹಬ್ಬ, ಸೆಡಿ ಕಂಬ, ಮಂಡಳ ಕುಣಿತ, ಕಳಸ ಹಾಲು ಹಬ್ಬ, ಬಲೀಂದ್ರಪೂಜೆ, ಬಲಿಹಾಕುವುದು, ಬೀರರಗೋಳಿ, ಬಲಿ, ಬೀರರ ಹುಲಿ, ಹೋಳಿ ಹಬ್ಬ ಮಾರುಕೇರಿ, ಕಾಮನ ಸುಡುವುದು, ಅಜ್ಜಿಕುಡಿ, ಮಾರಿಹಬ್ಬ, ಮೊಗೆ ಬಿಚ್ಚುವ ಸಂಕ್ರಾಂತಿ, ಹೊಸ್ತು ತುಳಸಿಹಬ್ಬ, ಗಂಟಿಹಬ್ಬ, ಚಕ್ರಕಟ್ಟುವುದು ಮುಂತಾದ ಹಲವು ಆಚರಣೆಗಳನ್ನು ಗೊಂಡರು ಆಚರಿಸುವರು. ಗೊಂಡರು ತಮ್ಮ ಪರಂಪರಾನುಗತ ಸಂಪ್ರದಾಯ, ಆಚರಣೆಗಳು, ಮತ್ತು ನಂಬಿಕೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಆದರೆ ಆಧುನಿಕತೆಯ ಪ್ರಭಾವಕ್ಕೂ ಸ್ವಲ್ಪಮಟ್ಟಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಲೇ ತಮ್ಮ ಬದುಕನ್ನು ಸಾಗಿಸುತ್ತಿರುವ ಗೊಂಡರ ಬದುಕನ್ನು ಸುಧಾರಿಸುವ ಅಗತ್ಯ ನಮ್ಮ ಮುಂದಿದೆ.

ಉಣ್ಣೆಕಂಕಣ ಕುರುಬರು

ಹಾಲುಮತ ಸಮುದಾಯದಲ್ಲಿ ಪ್ರಮುಖವಾಗಿ ಕಾಣಸಿಕೊಳ್ಳುವ ಎರಡು ಪಂಗಡಗಳೆಂದರೆ ಉಣ್ಣೆಕಂಕಣ ಮತ್ತು ಹತ್ತಿಕಂಕಣ. ಇವುಗಳು ಅತ್ಯಂತ ಪ್ರಾಚೀನವಾದವು. 'ಕಂಕಣ' ಎನ್ನುವುದು ವಿಶಾಲವಾದ ಅರ್ಥವನ್ನು ಪಡೆದುಕೊಂಡಿದ್ದು 'ಕುಲ', 'ಪಂಗಡ' ಮತ್ತು 'ಮನೆತನ' ಎನ್ನುವ ಜೀವಂತಿಕೆಯ ಸ್ವರೂಪವಿದೆ. ಅಲ್ಲದೆ ಕಂಕಣ ಎನ್ನುವುದು ಅವರ ಕುಲವನ್ನು ಗುರುತಿಸಿಕೊಳ್ಳುವುದಕ್ಕೆ ಬಳಕೆಯಾದ ಸಾಂಕೇತಿಕ ವಸ್ತು. ಹತ್ತಿಕಂಕಣದವರು 'ಹತ್ತಿ'ಯನ್ನು ಸಾಂಕೇತಿಕ ವಸ್ತುವಾಗಿಸಿಕೊಂಡರೆ, ಉಣ್ಣೆಕಂಕಣದವರು 'ಉಣ್ಣೆ'ಯನ್ನು ಸಾಂಕೇತಿಕವಾಗಿ ಬಳಸುತ್ತಿದ್ದಾರೆ. ಇವು ಅವರವರ 'ಕುಲಚಿಹ್ನೆ'ಯೂ ಹೌದು.

"ಒಂದು ಮಾತನ್ನು ಇಲ್ಲಿ ಗಮನಿಸಬೇಕು. ಆರಂಭದಲ್ಲಿ ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು ದೈವವಾಗಿರಲಿಲ್ಲ. ಆದರೆ ಬರುಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸ ಬಯಸಿತು. ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರಿಗೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪುಗೊಂಡಿರಬೇಕು ಎನ್ನುವುದು ಅನೇಕ ವಿದ್ವಾಂಸರ ಅಭಿಪ್ರಾಯ"[೩೭] ಎಂದು ಹಿ.ಚಿ.ಬೋರಲಿಂಗಯ್ಯನವರು ಅಭಿಪ್ರಾಯ ಪಡುತ್ತಾರೆ.

ಹಳೆಯ ಮೈಸೂರು ಮತ್ತು ಮಧ್ಯ ಕರ್ನಾಟಕದಲ್ಲಿ ಕಂಡುಬರುವ ಉಣ್ಣೆಕಂಕಣ ಕುರುಬರನ್ನು ಆಗುರುಬ, ಸಣ್ಣಕುರುಬ, ಹಳೆಕುರುಬ ಎಂಬೆಲ್ಲ ಪರ್ಯಾಯ ಹೆಸರುಗಳು ಇರುವುದನ್ನು ಗಮನಿಸಬಹುದು. ಉಣ್ಣೆಕಂಕಣದವರಲ್ಲಿ ೧೮ ಗುಡಿಕಟ್ಟುಗಳು. ೧೨ ಬಾಳೆ ಹರಿವಾಣಗಳು ಹಾಗೂ ಎರಡು ಕಟ್ಟೆಮನೆಗಳಿವೆ. ಇವರು ಆಸಂದಿಯ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಸಿಂಹಾಸನಕ್ಕೆ ಸೇರಿದವರಾಗಿರುತ್ತಾರೆ. ಮೇಲಿನ ಎರಡು ಕಟ್ಟೆಮನೆಗಳಲ್ಲಿ ಕೊಡಗು ಜಿಲ್ಲೆಯ ಆಲನಹಳ್ಳಿ ಭೂತನಹಳ್ಳಿ (ಪಿರಿಯಾ ಪಟ್ಟಣದ ಬಳಿ) ತಿಪಟೂರು ತಾಲೂಕಿನ ನೊಣವಿನಕೆರೆ ಸಮೀಪದ ಕೋಡಿಹಳ್ಳಿ, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಕಾರೇಹಳ್ಳಿ. ಈ ಸ್ಥಳಗಳಲ್ಲಿ ಸಣ್ಣ ಕುರುಬರ ಅಥವಾ ಉಣ್ಣೆಕಂಕಣ ಕುರುಬರು ಕಟ್ಟೆಮನೆಗಳಿವೆ.

ಒಂದು ನಿರ್ದಿಷ್ಟ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಒಂದೇ ಜಾತಿಗೆ ಸೇರಿದ ಜನರೆಲ್ಲ ನಿರ್ದಿಷ್ಟ ಊರಿನ ಅರಳಿ ಮರದ ಸುತ್ತ ಕಟ್ಟಿದ ಕಟ್ಟೆಯನ್ನು ತಮ್ಮ ಸಾಮಾಜಿಕ, ಧಾರ್ಮಿಕ, ವಿಚಾರ ವಿನಿಮಯಕ್ಕೆ ಬಳಸುತ್ತಾರೆ. ಇದನ್ನು 'ಕಟ್ಟೆಮನೆ' ಎಂದು ಕರೆಯುತ್ತಾರೆ. ಇಲ್ಲಿ ಯಾವುದೇ ರೀತಿಯ ಧಾರ್ಮಿಕ, ಸಾಮಾಜಿಕ ನ್ಯಾಯ ತೀರ್ಮಾನಗಳು ಇತ್ಯರ್ಥವಾಗುತ್ತವೆ. ಯಾವುದೇ ಹರಿವಾಣ ಅಥವಾ ಗುಡಿಕಟ್ಟುಗಳಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಇಲ್ಲಿ ತೀರ್ಮಾನ ಮಾಡಲಾಗುತ್ತದೆ.

ಒಂದು ಗುಡಿಯ ವ್ಯಾಪ್ತಿಯಲ್ಲಿ ಬರುವ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಲಗಳ ಕುಟುಂಬಗಳು ಆ ಗುಡಿಯ ನೀತಿ ನಿಯಮಗಳಿಗೆ ಬದ್ಧವಾಗಿರುವುದು. ಈ ಗುಡಿಕಟ್ಟಿನಲ್ಲಿ ಗೌಡ, ಬುದ್ಧಿವಂತ, ಭಂಡಾರಿ, ಪೂಜಾರಿಕೆಯವರು ಮತ್ತು ಕೋಲ್ಕಾರ ಇರುತ್ತಾರೆ. ಈ ಗುಡಿಕಟ್ಟಿನ ಯಜಮಾನರು ಆಯಾ ಗುಡಿಯ ವಹಿವಾಟು ನೋಡಿಕೊಳ್ಳುತ್ತಾರಲ್ಲದೆ ಯಾವುದಾದರೂ ಸಮಸ್ಯೆಗಳು ಉದ್ಭವಿಸಿದಾಗ ಗುಡಿಯ ಕಟ್ಟಿಗೆ ಆಹ್ವಾನಿಸಿ ನ್ಯಾಯ ಹೇಳುತ್ತಾರೆ. ಗುಡಿಕಟ್ಟಿನ ತೀರ್ಮಾನವನ್ನು ತಿರಸ್ಕರಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಒಂದು ಪಕ್ಷ ಹಾಗೇನಾದರೂ ತಿರಸ್ಕರಿಸಿದರೆ ಬಹಿಷ್ಕಾರ ಹಾಕುವ ಅಥವಾ ದಂಡ ವಿಧಿಸುವ ಅಧಿಕಾರವಿರುವುದನ್ನು 'ಗುಡಿಕಟ್ಟು' ಎಂದು ಕರೆಯಲಾಗುತ್ತದೆ. ಇವು ವಿಶೇಷವಾಗಿ ಉಣ್ಣೆಕಂಕಣ ಕುರುಬರಲ್ಲಿರುವ 'ಸಾಮಾಜಿಕ ನ್ಯಾಯಾಲಯ'ಗಳು ಎಂದರೆ ತಪ್ಪಾಗಲಾರದು.

ಸಾಂಪ್ರದಾಯಿಕ ಅರ್ಥವತ್ತಾದ ಆಚರಣೆಗಳಿಂದ ಗಂಡು ಹೆಣ್ಣುಗಳನ್ನು ಹೊಸ ಜೀವನಕ್ಕೆ ಅನುವು ಮಾಡಿಕೊಡುವುದನ್ನು ಸಾಮಾನ್ಯಾರ್ಥದಲ್ಲಿ ವಿವಾಹವೆಂದು ಕರೆಯಬಹುದು. ವಿವಾಹವೆನ್ನುವ ಸಾಮಾಜಿಕ ಸಂಸ್ಥೆಯು ಒಂದೇ ಆದರೂ ಅದರ ಆಚರಣೆ, ಸಂಪ್ರದಾಯಗಳು ವೈವಿಧ್ಯಮಯವಾಗಿವೆ. ಉಣ್ಣೆಕಂಕಣ ಕುರುಬರಲ್ಲಿ ಹುಟ್ಟಿ ಬೆಳೆದು ತಾರುಣ್ಯಾವಸ್ಥೆಗೆ ಬಂದಾಗ ಮಗ ಅಥವಾ ಮಗಳ ವಿವಾಹ ಮಾಡುವ ಜವಾಬ್ದಾರಿ ಹೆತ್ತ ತಂದೆತಾಯಿಗಳದ್ದಾಗಿರುವುದರಿಂದ ಜಾಗೃತಗೊಂಡು ವಿವಾಹ ಮಾಡಲು ಸಿದ್ಧರಾಗುತ್ತಾರೆ. ಅವರ ಮೂಲ ಉದ್ದೇಶ ತಮ್ಮ ವಂಶವನ್ನು ಬೆಳೆಸುವ ಹಂಬಲವಾಗಿರುವುದು. ಅಲ್ಲದೆ ವಯಸ್ಸಿಗೆ ಬಂದ ಮಗ/ಮಗಳು ದಾರಿ ತಪ್ಪಿ ಕೆಟ್ಟ ಹೆಸರನ್ನು ತರದಿರಲೆಂಬ ಭಯವೂ ಇರುತ್ತದೆ. ತಮ್ಮ ಮಗನಿಗೆ ಸಾಂಸಾರಿಕ ಜವಾಬ್ದಾರಿಯನ್ನು ಹೊರಿಸುವುದು ಹಾಗೂ ತಮ್ಮ ಮನೆಯ ಉತ್ತರಾಧಿಕಾರಿಯನ್ನು ತರಬೇತಿಗೊಳಿಸುವುದು, ಬಂಧು ಬಳಗ, ರೀತಿ ರಿವಾಜು, ಸಂಪ್ರದಾಯ ಮನೆಯನ್ನು ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಆತನ ಮೇಲೆ ಹಾಕಿ ತಾವು ನೆಮ್ಮದಿಯಿಂದಿರೋಣ ಎಂಬ ಭಾವನೆಯೂ ಪ್ರೇರಕವಾಗಿರುತ್ತದೆ.

ಎಲ್ಲಾ ಸಮುದಾಯಗಳಂತೆ ಉಣ್ಣೆಕಂಕಣ ಕುರುಬರಲ್ಲಿಯೂ ಹೆಣ್ಣಿಗೆ ಗಂಡನ್ನು ಅಥವಾ ಗಂಡಿಗೆ ಹೆಣ್ಣನ್ನು ನೋಡಲು ಪ್ರಾರಂಭಿಸುತ್ತಾರೆ. 'ಸರಿಜೋಡು, ಸರಿ ಈಡು' ಇದ್ದರೆ ಮಾತ್ರ ಸಾಂಸಾರಿಕ ಬದುಕು ಹಸನಾಗಿರುತ್ತದೆಂಬುದು ಪ್ರಾಚೀನರ ತತ್ವ. ಇದಕ್ಕೆ ಹೊಂದಿಕೆಯಾಗುವಂತೆ ಹೆಣ್ಣನ್ನು ನೋಡಲು ಗಂಡಿನ ಕಡೆಯವರೂ, ಗಂಡನ್ನು ನೋಡಲು ಹೆಣ್ಣಿನ ಕಡೆಯವರೂ ಹೋಗುತ್ತಾರೆ. ಹೊರಡುವ ಮುನ್ನ ಕೆಲವು ಶಕುನಗಳನ್ನು, ನಂಬಿಕೆಗಳನ್ನು ಕಡ್ಡಾಯವಾಗಿ ಪಾಲಿಸುತ್ತಾರೆ. ಗಂಡನ್ನಾಗಲಿ, ಹೆಣ್ಣನ್ನಾಗಲಿ ನೋಡಹೊರಟಾಗ ಮೂರು ಜನ ಹೋಗಬಾರದು. ಬರಿ ಕೊಡ, ಬಿಂದಿಗೆ, ತಟ್ಟೆ ಮುಂತಾದ ಸಾಮಗ್ರಿಗಳು ಎದುರಾದರೆ ಮನೆಗೆ ವಾಪಸ್ಸಾಗುತ್ತಾರೆ. ಅಲ್ಲದೆ ವಿಧವೆ, ಹೆಣ, ತೊನ್ನು ಹತ್ತಿದವರು ಬಂದರೂ ಅಪಶಕುನವೆಂದೇ ಭಾವಿಸುತ್ತಾರೆ.

ಗಂಡಿನ ಕಡೆಯವರು ಹೆಣ್ಣನ್ನು ನೋಡಲು ಹೊರಟರೆ ಗಂಡಿನ ತಂದೆ, ಸಂಬಂಧಿಕರಲ್ಲಿ ಯಾರಾದರೊಬ್ಬ ಗಂಡಸು, ಮನೆದೇವರ ಪೂಜಾರಿ, ಮತ್ತು ಮಧ್ಯಸ್ಥಗಾರರನ್ನು ಕರೆದೊಯ್ಯುತ್ತಾರೆ. ಹೋದ ಈ ನಾಲ್ವರು ಹೆಣ್ಣನ್ನು, ಹೆಣ್ಣಿನ ಮನೆಯವರ ಪೂರ್ವಾಪರಗಳನ್ನು ಅಕ್ಕಪಕ್ಕದ ಮನೆಯವರೊಂದಿಗೆ ವಿಚಾರಿಸಿ ಮನೆತನ, ಹೆಣ್ಣಿನ ಗುಣಲಕ್ಷಣಗಳ ಪರಿಶೀಲನೆ ಮಾಡಿಕೊಂಡು ಬರುತ್ತಾರೆ. ಹಿಂದಿನ ಕಾಲದಲ್ಲಿ ಗಂಡು ಹೆಣ್ಣನ್ನು ನೋಡಲು ಅವಕಾಶ ನೀಡುತ್ತಿರಲಿಲ್ಲ. ಹೋದವರಲ್ಲಿ ಹೆಣ್ಣು ಒಪ್ಪಿಗೆಯಾದರೆ ಬಹುಪಾಲು ಮದುವೆ ನಿಗಧಿಯಾದಂತೆ. ಆದರೆ ಇತ್ತೀಚೆಗೆ ಈ ಸಂಪ್ರದಾಯ ಬದಲಾಗಿರುವುದು ಕಂಡು ಬರುತ್ತದೆ. ಅಂದೇ ಕೊಟ್ಟು ತೆಗೆದುಕೊಳ್ಳುವುದನ್ನು (ವರದಕ್ಷಿಣೆ, ವಧುದಕ್ಷಿಣೆ) ಮಾತನಾಡುವರು.

ಹೆಣ್ಣನ್ನು ನೋಡಿಕೊಂಡು ಬಂದ ಮರುದಿನವೇ ಮನೆದೇವರ ಅಪ್ಪಣೆಯನ್ನು ಕೇಳುತ್ತಾರೆ. ಮನೆದೇವರ ಒಪ್ಪಿಗೆಯಾದ ನಂತರ ಹೆಣ್ಣಿನ ಮನೆಯವರಿಗೆ ಒಪ್ಪಿಗೆಯನ್ನು ತಿಳಿಸುತ್ತಾರೆ. ಇದಾದ ನಂತರ ಮನಜಯ

(ನಿಶ್ಚಿತಾರ್ಥ)ದ ದಿನವನ್ನು ನಿಗಧಿಪಡಿಸುವರು. ಆ ದಿನ ಗಂಡಿನ ಕಡೆಯ ಹತ್ತು ಹದಿನೈದು ಮಂದಿಹೋಗಿ ಮನಜಯದ ಒಸಗೆಯನ್ನು ಮಾಡಲು ಹೆಣ್ಣಿಗೆ ಅವರ ಶಕ್ತ್ಯಾನುಸಾರ ಒಂದು ಸೀರೆಯನ್ನು ತೆಗೆದುಕೊಂಡು ಹೋಗುವರು. ಹೋದವರಿಗೆ ಹೆಣ್ಣಿನ ಮನೆಯಲ್ಲಿ ಪಾಯಸ, ತೋವೆ (ಅವರೆಬೇಳೆಯಿಂದ ಮಾಡಿದ ಸಾಂಬಾರು) ಅನ್ನ ಮುಂತಾದ ಭಕ್ಷ್ಯಗಳಿಂದ ತೃಪ್ತಿಗೊಳಿಸಿ ಕಳುಹಿಸುವರು. ಅಂದಿನಿಂದ ಮದುವೆಗೆ ವಿಶೇಷ ಚಾಲನೆ ದೊರೆತಂತಾಗುತ್ತದೆ. ಇದು ಇತ್ತೀಚೆಗೆ ಬಹಳ ವಿಜೃಂಭಣೆಯಿಂದ ಜರುಗುತ್ತದೆ.

ನಿಶ್ಚಿತಾರ್ಥದ ನಂತರ ಲಗ್ನದ ದಿನಗಳು ಹಿಂದಿನ ಜನರಲ್ಲಿ ಬಹುಬೇಗ ನಿರ್ಧಾರಿತವಾಗುತ್ತಿದ್ದವು. ಜೋಯಿಸರ ಬಳಿ ಹೋಗಿ ಲಗ್ನದ ದಿನಗಳನ್ನು ಗುರುತು ಹಾಕಿಸಿಕೊಂಡು, ಲಗ್ನಪತ್ರಿಕೆ ಅಚ್ಚುಹಾಕಿಸಲು ವ್ಯವಸ್ಥೆ ಮಾಡುತ್ತಿದ್ದರು. ಮದುವಣಗೆಶಾಸ್ತ್ರ ನಾಳೆ ಇದೆ ಎನ್ನುವಾಗಲೇ ಹೆಣ್ಣು ಗಂಡಿನ ಮನೆಗಳ ಮುಂದೆ ದೊಡ್ಡ ಹಸಿರು ಚಪ್ಪರವನ್ನು ಹಾಕಿಸಲು ಸಿದ್ಧತೆ ಮಾಡಿಕೊಳ್ಳುವರು. ಮದ್ವಿನ್‌ಶಾಸ್ತ್ರದ ದಿನ ಗಂಡು ತನ್ನ ಕ್ಷೌರಿಕನನ್ನು ಮನೆಗೆ ಕರೆಸಿಕೊಂಡು ಅವನಿಗೆ ಆಯ ನೀಡಿ ಕೇಶಾಲಂಕಾರ ಮಾಡಿಸಿಕೊಳ್ಳುವನು. ಅದಾದ ನಂತರ ಮನೆ ದೇವರ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿ ಗಂಡು ಹೆಣ್ಣಿನ ಮನೆಗೆ ಹೊರಡಲು ಸಿದ್ಧನಾಗುತ್ತಾನೆ. ಹಿಂದಿನ ಕಾಲದಲ್ಲಿ ಎಂಟು ದಿನಗಳ ಮದುವೆ, ಐದು ದಿನಗಳ ಮದುವೆ, ನಂತರ ಮೂರು ದಿನಗಳ ಮದುವೆಗಳು ನಡೆಯುತ್ತಿದ್ದವು. ಮದುವೆಯು ಸಂಭ್ರಮದ ವಾತಾವರಣವನ್ನು ಎರಡೂ ಮನೆತನಗಳಿಗೆ ತಂದುಕೊಡುತ್ತಿತ್ತು.

ಗಂಡನ್ನು ಹೊರಡಿಸುವ ಶಾಸ್ತ್ರದೊಂದಿಗೆ ಮದುವೆಯ ಆರಂಭವಾಗುತ್ತದೆ. ಹೊರಡುವಾಗ ಮನೆಗೆ ಬಂದ ಸಂಬಂಧಿಕರಲ್ಲದೆ ಊರಿನವರಿಗೆಲ್ಲಾ ಅಥವಾ ಅವರ ಅಣ್ಣ ತಮ್ಮಂದಿರನ್ನೆಲ್ಲಾ ಕರೆಯುವುದು ವಾಡಿಕೆ. ಹೊರಡುವ ಮುನ್ನ ಮೆಟ್ಟಕ್ಕಿ ಗೂಡೆ ತುಂಬಿಸುವುದು ಕಳಸ ಹೂಡುವುದು ನಡೆಯುತ್ತದೆ. ಮೆಟ್ಟಕ್ಕಿ ಗೂಡೆಗೆ ಅರಿಶಿನ ಕುಂಕುಮ, ಬಳೆಬಂಗಾರ, ಮಾಂಗಲ್ಯ, ಅಕ್ಕಿ, ಎಳ್ಳು, ಬೆಲ್ಲ, ಉತ್ತುತ್ತಿ ಹಣ್ಣು, ಜೀರಿಗೆ, ತೊಗರಿಬೇಳೆ, ಅಂಗುನೂಲು, ಮೆಣಸು ತುಂಬಿಸುತ್ತಾರೆ. ಅದಾದ ನಂತರ ಗೂಡೆಯ ಬಾಯಿಗೆ ಬಿಳಿ ಪಂಚೆಯನ್ನು ಸುತ್ತುತ್ತಾರೆ. ಹಿತ್ತಾಳೆ ತಟ್ಟೆಯೊಂದಕ್ಕೆ ಒಂದು ಸೇರು ಅಕ್ಕಿ ಸುರಿದು ಅದರ ಮೇಲೆ ಕಳಸದ ಚೊಂಬು ಅದಕ್ಕೆ ಹೊಂಬಾಳೆ ಇಟ್ಟು ಗಂಡಿನ ತಂಗಿ ಅಥವಾ ಅಕ್ಕ ಹಿಡಿದುಕೊಂಡು ಊರಿನ ದೇವಸ್ಥಾನಗಳಿಗೆ ಮೆರವಣಿಗೆ ಹೊರಟು ನಂತರ ಗಾಡಿಗಳನ್ನು ಏರಿ ಹೆಣ್ಣಿನ ಮನೆಗೆ ಬರುತ್ತಾರೆ.

ಹೆಣ್ಣಿನ ಊರಿಗೆ ಬಂದರೆ ಊರಿನಲ್ಲಿರುವ ಒಂದು ದೇವಸ್ಥಾನದ ಬಳಿ ಗಂಡು, ಗಂಡಿನ ಕಡೆಯವರನ್ನೆಲ್ಲಾ ಕೂರಿಸಿ ಮುಖ ತೊಳೆಯಲು ನೀರುಕೊಟ್ಟ ನಂತರ ಬಿಡದಿಮನೆಗೆ ಕರೆದೊಯ್ಯುತ್ತಾರೆ. ಗಂಡನ್ನು ಬಿಡದಿ ಮನೆಗೆ ಕರೆತಂದ ನಂತರ 'ಕುಂದ್ಲಿಕೆ ಕುಟ್ಟಿಸುವ ಶಾಸ್ತ್ರ' ಅಂದರೆ ಭತ್ತ ಕುಟ್ಟಿಸುವ ಶಾಸ್ತ್ರ ಮಾಡಿಸುವರು. ಆಮೇಲೆ ಗೌಡ, ಭಂಡಾರಿ, ಯಜಮಾನ, ಏಳೊಕ್ಕಲ ಮುಖ್ಯಸ್ಥರು ಸೇರಿ ವೀಳ್ಯ ಹಂಚುವರು. ಭತ್ತ ಕುಟ್ಟುವವರು ಮೂರು ಜನ ಮಾವಂದಿರು ಅಥವಾ ಅತ್ತೆಯಂದಿರೇ ಆಗಿರಬೇಕೆಂಬ ನಿರ್ಬಂಧವಿದೆ. ಕೆಲವೆಡೆಗಳಲ್ಲಿ ಮುತ್ತೈದೆಯರೇ ಕುಂದ್ಲಿಕೆ ಶಾಸ್ತ್ರ ಮಾಡಿ ಮುಗಿಸುವುದೂ ಉಂಟು.

ಕುಂದ್ಲಿಕೆ ಶಾಸ್ತ್ರವಾದ ಮೇಲೆ ಗಂಡು ಹೆಣ್ಣಿನ ಕಡೆಯವರೆಲ್ಲರೂ ಊಟ ಮಾಡುತ್ತಾರೆ. ಊಟವಾದ ಮೇಲೆ ಹೆಣ್ಣಿಗೆ ಬಳೆ ತೊಡಿಸುವ ಶಾಸ್ತ್ರ ಆರಂಭವಾಗುತ್ತದೆ. ಹೆಣ್ಣು ಎರಡೂ ಕೈಗಳಿಗೆ ಕರಿಯಬಳೆ ತೊಡುವ ಮುನ್ನ ಬಳೆಮಲಾರಗಳಿಗೆ ಪೂಜೆ ಸಲ್ಲಿಸಿದ ಬಳಿಕ ಬಳೆ ತೊಡುತ್ತಾರೆ. ಅದಾದ ಮೇಲೆ ಸರದಿಯ ಪ್ರಕಾರ ಹೆಣ್ಣು ಮಕ್ಕಳಿಗೆ ಎರಡೆರಡು ಕರಿ ಬಳೆಗಳನ್ನು ಹಾಕುತ್ತಾರೆ. ಇಲ್ಲಿಗೆ ಬಳೆ ತೊಡುವ ಶಾಸ್ತ್ರ ಮುಗಿಯುತ್ತದೆ.

ಬಳೆ ಶಾಸ್ತ್ರ ಮುಗಿದ ನಂತರ ಗಂಡು ಹೆಣ್ಣಿಗೆ ಉಣ್ಣೆಕಂಕಣ ಕಟ್ಟಲಾಗುತ್ತದೆ. ಗಂಡಿಗೆ ಮೂರು ಹಸೆ ಹಚ್ಚುವುದು ಆರಂಭವಾಗುತ್ತದೆ. ಸೋಬಾನೆ ಪದಗಳನ್ನು ಹೇಳುತ್ತಾ ಗಂಡಿಗೆ ಅರಿಶಿನ ಎಣ್ಣೆ ಹಚ್ಚುವುದು, ಮೀಯಿಸುವುದು, ಅದೇ ರೀತಿ ಹೆಣ್ಣಿಗೆ ಎರಡು ಹಸೆ ಹಚ್ಚುವುದು, ಅವಳಿಗೂ ಅರಿಶಿನ ಎಣ್ಣೆ ಹಚ್ಚುವುದು ಮೀಯಿಸುವುದರೊಂದಿಗೆ ಅಂದಿನಿಂದ ಗಂಡು ಹೆಣ್ಣು ಇಬ್ಬರೂ 'ಹಸಿಮೈ' ಯವರಾಗುತ್ತಾರೆ. ಹಸಿಮೈಯವರಾದರೆ ಒಬ್ಬೊಬ್ಬರೇ ಹೋಗುವಂತಿಲ್ಲ. ಹೋದುದಾದರೆ ಅವರಿಗೆ ದೆವ್ವ ಭೂತ ಚೇಷ್ಟೆಗಳಾಗುತ್ತವೆಂಬ ಬಲವಾದ ನಂಬಿಕೆಯಿತ್ತು. ಇಲ್ಲಿಗೆ ಮದ್ಲಿನ್‌ಶಾಸ್ತ್ರ ಮುಗಿಯುತ್ತದೆ.

ಮರುದಿನವೇ ಧಾರೆಮುಹೂರ್ತ. ಇದು ಗಂಡು ಹೆಣ್ಣಿನ ಬದುಕಿನ ಸುದಿನವೇ ಆಗಿರುತ್ತದೆ. ಬೆಳಿಗ್ಗೆ ಎದ್ದು ಎಲ್ಲರೂ ತಿಂಡಿಯಾದ ಬಳಿಕ ಗಂಡನ್ನು ಮೆರವಣಿಗೆ ಹೊರಡಿಸುವ ಶಾಸ್ತ್ರದೊಂದಿಗೆ ಆ ದಿನ ಆರಂಭವಾಗುತ್ತದೆ. ಗಂಡಿಗೆ ಕಚ್ಚೆ ಪಂಚೆಯನ್ನು ಉಡಿಸಿ ತಲೆಗೆ ಪೇಟ ತೊಡಿಸಿ ಕಲಶ ತಳಿ (ಒಂದು ಕಪ್ಪು ಛತ್ರಿಯ ಮೇಲೆ ಬಿಳಿ ಪಂಚೆ ಹೊದಿಸಿರುವುದು) ಹಿಡಿದು ಅಲ್ಲೇ ಪಕ್ಕದಲ್ಲಿರುವ ದೇವಸ್ಥಾನಕ್ಕೆ ವಾದ್ಯಗಳ ಮೇಳದೊಂದಿಗೆ ಕರೆದೊಯ್ಯುವರು. ಅದೇ ರೀತಿ ಹೆಣ್ಣಿನ ಕಡೆಯವರು ವಾದ್ಯಗಳೊಂದಿಗೆ ಎದುರುಗೊಳ್ಳುವ ಶಾಸ್ತ್ರಕ್ಕೆ ಬರುತ್ತಾರೆ. ಗಂಡು ಹೆಣ್ಣಿನ ಕಡೆಯವರು ಎರಡೂ ಕಳಶ, ತಳಿಗಳನ್ನು ಮುಟ್ಟಿಸಿ ಅಕ್ಷತೆಯ ಅಕ್ಕಿಯನ್ನಾಗಲಿ, ಹಿಂದಿನ ರಾತ್ರಿ ಕುಂದ್ಲಿಕೆ ಕುಟ್ಟಿಸಿದ ಭತ್ತದಿಂದ ಹೊರ ಬಂದ ಅಕ್ಕಿಯನ್ನಾಗಲಿ ಕೂಗಾಟದೊಂದಿಗೆ ಬೀರುತ್ತಾರೆ. ಇದಕ್ಕೆ ಎದುರುಗೊಳ್ಳುವ ಶಾಸ್ತ್ರ ಎನ್ನುತ್ತಾರೆ.

ಎದುರುಗೊಳ್ಳುವ ಶಾಸ್ತ್ರದ ಬಳಿಕ ಧಾರೆ ಮಂಟಪಕ್ಕೆ ಗಂಡನ್ನು ಕರೆದೊಯ್ಯುತ್ತಾರೆ. ಆಗ ಅತ್ತೆಯಾದವರು ಬಂದು ಗಂಡಿನ (ಅಳಿಯನ) ಪಾದ ತೊಳೆಯುವ ಶಾಸ್ತ್ರ ಮಾಡುತ್ತಾರೆ. ಅದಾದ ನಂತರ ನೇರವಾಗಿ ಧಾರೆ ಮಂಟಪಕ್ಕೆ ಬರುತ್ತಾರೆ. ಧಾರೆ ಮಂಟಪವೂ ವಿಶಿಷ್ಟವಾಗಿರುತ್ತದೆ. ಹಸಿರು ಚಪ್ಪರದಿಂದೊಡಗೂಡಿದ ಅಲಂಕೃತ ವೇದಿಕೆ. ಎರಡು ಹಸೆಮಣೆಗಳ ಮಧ್ಯದಲ್ಲಿ ಮಣ್ಣಿನಿಂದ ಮಾಡಿದ ಪಸಾಲೆಯನ್ನು ಕರಿಕಂಬಳಿಯನ್ನು ಸಿಂಬೆ ಮಾಡಿ ಅದರ ಮೇಲಿಡುತ್ತಾರೆ. ಉಣ್ಣೆಕಂಕಣ ಕುರುಬರಲ್ಲಿ ಒಡೆಯರು ಅಥವಾ ಐನೋರು ಬಂದು ಶಾಸ್ತ್ರಗಳನ್ನು ನಡೆಸಿಕೊಡುತ್ತಾರೆ.

ಗಂಡು ಮೆರೆ ಬಂದನಂತರ ಗಂಡು ಮತ್ತು ಹೆಣ್ಣನ್ನು ಎದುರು ಬದುರು ನಿಲ್ಲಿಸಿ ಜೀರಿಗೆ ಬೆಲ್ಲ ಪುಡಿ ಮಾಡಿದ್ದನ್ನು ಹೆಣ್ಣಿನ ತಲೆಯ ಮೇಲೆ ಹಾಕುವುದು, ಮಧ್ಯೆ ಪರದೆ ಹಿಡಿದಿರುವುದು, ಗಂಡು ಹೆಣ್ಣುಗಳು ಧಾರೆಗೆ ಸಿದ್ಧವಾಗುವಾಗ ಐನೋರು ಮಂತ್ರಗಳನ್ನು ಹೇಳುತ್ತ ಮುಹೂರ್ತಕ್ಕೆ ಅಣಿಗೊಳಿಸುತ್ತಾರೆ.

ಆನಂತರ ಹೆಣ್ಣು ಗಂಡನ್ನು ಕುಳ್ಳಿರಿಸಿ ಅವರ ಕೈಯಲ್ಲಿ ತೆಂಗಿನ ಕಾಯಿಯನ್ನು ನೀಡಿ ಅದರ ಮೇಲೆ ಹಾಲು ಹಾಕುವ ಮುನ್ನ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ಹೆಣ್ಣಿನ ತಂದೆ ತಾಯಿ, ಗಂಡಿನ ತಂದೆತಾಯಿ ಮೊದಲಿಗೆ ಧಾರೆ ಎರೆದು ಹೊರಬಂದ ಮೇಲೆ ಉಳಿದ ಬಂಧು ಬಳಗದವರು ಧಾರೆ ಎರೆಯುತ್ತಾರೆ. ಇಲ್ಲಿಗೆ ಧಾರೆ ಮುಹೂರ್ತ ಮುಗಿಯುತ್ತದೆ.

ಧಾರೆಯ ನಂತರ ಹೆಣ್ಣು ಗಂಡನ್ನು ಮೆರವಣಿಗೆ ಕರೆದೊಯ್ಯುವುದು, ನಂತರ ಗಂಡು ಹೆಣ್ಣುಗಳ ಕಂಕಣವನ್ನು ಮಡಿವಾಳರು ಬಿಚ್ಚುವುದು ಉಣ್ಣೆಕಂಕಣ ಕುರುಬರ ವೈಶಿಷ್ಟ್ಯ. ಮಡಿವಾಳರಿಗೆ ಶಕ್ತ್ಯಾನುಸಾರ ದಕ್ಷಿಣೆ, ಧವಸಧಾನ್ಯ, ತೆಂಗಿನ ಕಾಯಿ, ಬಾಳೆಹಣ್ಣು, ಒಂದು ಬಟ್ಟೆ, ನೀಡಿ ಗೌರವಿಸುತ್ತಾರೆ. ಧಾರೆ ಮಹೂರ್ತದ ಮಾರನೆಯ ದಿನ ಹೆಣ್ಣಿನ ಮನೆಯವರು ಗಂಡಿನ ಮನೆಗೆ ಹೆಣ್ಣನ್ನು ಕರೆಯುವ ಶಾಸ್ತ್ರಕ್ಕೆ ಬರುತ್ತಾರೆ. ಅಂದು ಗಂಡಿನ ಮನೆಯವರು ಯಾವುದಾದರೂ ಮನೆದೇವರಿಗೆ ಹರಕೆ ಮಾಡಿಕೊಂಡಿದ್ದರೆ 'ಮೀಸಲು ಊಟ' ನೆರವೇರಿಸುತ್ತಾರೆ. ಇಲ್ಲದಿದ್ದರೆ ಬಂದ ನೆಂಟರಿಷ್ಟರಿಗೆ ಸಿಹಿಯೂಟದ ಮೂಲಕ ಹೆಣ್ಣಿನ ಮನೆಯವರಿಗೆ ಊಟ ಬಡಿಸಿ ಹಿಂತಿರುಗಿಸುತ್ತಾರೆ. ಇದಾದ ನಂತರ ಶುಭದಿನದಲ್ಲಿ ಶೋಭನಕಾರ್ಯ ನೆರವೇರಿಸುತ್ತಾರೆ. ಇಂತಹ ವಿವಾಹದ ಆಚರಣೆಯು ಇಂದು ತೀರಾ ಸುಲಭವಾಗಿ ನಡೆದು ಹೋಗುತ್ತಿರುವುದರಿಂದ ಮೊದಲಿನ ಸಂಭ್ರಮ ಕಾಣುತ್ತಿಲ್ಲ. ಆಚರಣೆ ಸಂಪ್ರದಾಯಗಳು ಉಣ್ಣೆಕಂಕಣ ಕುರುಬರಲ್ಲಿಯೂ ಮಾಯವಾಗುತ್ತಿರುವುದು ಕಂಡು ಬರುತ್ತದೆ.

ಹೆಣ್ಣು ಮಗಳು ಗರ್ಭಿಣಿಯಾದ ಏಳು ತಿಂಗಳಿಗೆ ಸೀಮಂತದ ಕಾರ್ಯಕ್ರಮದ ಮೂಲಕ ಹೆಣ್ಣು ಮಗಳ ಮತ್ತೊಂದು ದೀಕ್ಷೆ ಆರಂಭವಾಗುತ್ತದೆ. ಮಗುವು ಜನಿಸುವವರೆಗೆ ಗರ್ಭಿಣಿಯನ್ನು ತುಂಬಾ ಜೋಪಾನವಾಗಿ ನೋಡಿಕೊಳ್ಳುತ್ತಾರೆ. ಇದು ತವರು ಮನೆಯವರ ಜವಾಬ್ದಾರಿ ಮತ್ತು ಕರ್ತವ್ಯ ಕೂಡ ಆಗಿರುತ್ತದೆ. ಮಗು ಹುಟ್ಟಿದ ಅಂದಿನಿಂದ ಹನ್ನೊಂದನೇ ದಿನದವರೆಗೆ ಹೆರಿಗೆಸೂತಕ ಎಂದು ಕರೆಯಲಾಗುತ್ತದೆ. ಅಂತಹ ದಿನಗಳಲ್ಲಿ ಯಾವುದೇ ಶುಭಕಾರ್ಯಗಳು ಜರುಗುವುದಿಲ್ಲ. ಹನ್ನೊಂದನೇ ದಿನ ಸೂತಕ ಕಳೆದುಕೊಳ್ಳಲು ಮನೆಯನ್ನು ಸುಣ್ಣ ಬಣ್ಣಗಳಿಂದ ಅಲಂಕಾರ ಮಾಡುತ್ತಾರೆ. ಮನೆದೇವರ ಪೂಜಾರಿಯನ್ನು ಕರೆದುತಂದು ಮನೆಯಲ್ಲಿ ದೀಪ ಹಚ್ಚಿಸಿ ಅಂದು ವಿಶೇಷವಾದ ಸಿಹಿ ಊಟವನ್ನು ಮಾಡಿ ಬಡಿಸಿ ಸೂತಕವನ್ನು ತೆಗೆದುಕೊಳ್ಳುತ್ತಾರೆ.

ಹೆಣ್ಣು ಮಕ್ಕಳು ಬಹಿಷ್ಠೆಯರಾದರೆ ಮೂರು ದಿನಗಳ ಕಾಲ ಹೊರಗೇ ಇರಬೇಕಾಗುತ್ತದೆ. ಹೆಣ್ಣು ಮಕ್ಕಳು ಮೊದಲಬಾರಿಗೆ ಋತುಮತಿಯಾದರೆ 'ಹಸಿರು ಗುಡ್ಲುಶಾಸ್ತ್ರ' ನೆರವೇರಿಸುತ್ತಾರೆ. ಗುಡಿಸಲನ್ನು ಹಾಕುವವನು ಮಾವನೇ ಆಗಿರಬೇಕು. ಹಲಸಿನ ಎಲೆ, ಅಂಕಾಲೆಕಡ್ಡಿ, ಅತ್ತಿಕಡ್ಡಿಯನ್ನು ಗುಡಿಸಲಿನ ಒಳಭಾಗದಲ್ಲಿ ಇಡುತ್ತಾರೆ. ಮೂರು ರಾತ್ರಿಗಳ ಕಾಲ ಗುಡ್ಲು ಕಾಯುವುದು ಇನ್ನಿತರ ಸಮುದಾಯದವರಂತೆ ಉಣ್ಣೆಕಂಕಣ ಕುರುಬರಲ್ಲಿಯೂ ಕಂಡುಬರುತ್ತದೆ. ಮೂರನೇ ದಿನ ಸಂಜೆ ಹೆಣ್ಣುಮಗಳನ್ನೂ ಸ್ನಾನ ಮಾಡಿಸಿ ಒಳಗೆ ಕರೆದುಕೊಳ್ಳುವ ಪದ್ಧತಿಯುಂಟು. ಇದಾದ ನಂತರ ಹದಿನಾರನೇ ದಿನಕ್ಕೆ ಸೂತಕ

ಕಳೆದುಕೊಳ್ಳುವ, ಒಂದು ತಿಂಗಳಿಗೋ, ಮೂರನೇ ತಿಂಗಳೋ, 'ಒಸಗೆ ಕಾರ್ಯಕ್ರಮ' ನಡೆಯುತ್ತದೆ. ಅಂದು ನೆಂಟರಿಷ್ಟರು ಬಂಧು ಬಳಗದವರಿಗೆಲ್ಲ ವಿಶೇಷವಾದ ಅಂದರೆ ಸ್ವಲ್ಪ ಉಳ್ಳವರಾದರೆ ಮಾಂಸದೂಟವನ್ನು, ಬಡವರಾದರೆ ಸಿಹಿಯೂಟವನ್ನೂ ಮಾಡಿ ಒಸಗೆ ಕಾರ್ಯವನ್ನು ನೆರವೇರಿಸುತ್ತಾರೆ. ಇದು ಹೆಣ್ಣಿಗೆ ಮಾಡುವ ಮೊದಲ ದೀಕ್ಷೆಯಾಗಿರುತ್ತದೆ. ಇದು ಕೂಡ 'ಹಸಿಮೈ' ಎಂದೇ ನಿರ್ಧರಿಸಲಾಗುವುದರಿಂದ ಒಬ್ಬಳೇ ಹೊರ ಹೋಗುವಂತಿಲ್ಲ. ಹೊರಗೆಲ್ಲಾದರೂ ಹೋಗುವ ಸಂದರ್ಭದಲ್ಲಿ ಸಂಗಡಿಗರಾಗಿ ಹೆಣ್ಣು ಮಗಳನ್ನು ಕರೆದೊಯ್ಯುತ್ತಾರೆ.

ಹುಟ್ಟು ಸಂಭ್ರಮವನ್ನುಂಟು ಮಾಡುವಂತದ್ದು ಅದಕ್ಕೋಸ್ಕರ ಮಗುವಿಗೆ ಒಂಭತ್ತು ತಿಂಗಳಿಗೆ, ವರ್ಷ ತುಂಬುವ ಮುನ್ನ ನಾಮಕರಣ ಶಾಸ್ತ್ರ ನಡೆಸಲಾಗುತ್ತದೆ. ನಾಮಕರಣ ಶಾಸ್ತ್ರವು ವಿಶೇಷವಾಗಿ ತವರಿನ ಮನೆಯವರೇ ನಡೆಸಿಕೊಡುವುದು ಕಂಡು ಬರುತ್ತದೆ. ನಾಮಕರಣ ಹಿಂದೆಲ್ಲಾ ತಾತ ಮುತ್ತಾತಂದಿರ, ಅಜ್ಜ ಅಜ್ಜಿಯವರ ಹೆಸರುಗಳು, ಮನೆದೇವರುಗಳ ಹೆಸರುಗಳ ಮೂಲಕ ಕರೆಯಲಾಗುತ್ತಿತ್ತು. ಈ ಶಾಸ್ತ್ರವೂ ಕೂಡ ಹಬ್ಬದ ವಾತಾವರಣವನ್ನುಂಟು ಮಾಡುತ್ತಿತ್ತು. ನಾಮಕರಣವಾದ ದಿನ ಬಾಣಂತಿಯೊಂದಿಗೆ ಮನೆಯಲ್ಲಿ ಬಳುವಳಿಯನ್ನು ನೀಡಿ ಕಳುಹಿಸಿಕೊಡುವ ಪರಿಪಾಠವನ್ನು ಇಂದಿಗೂ ಕಾಣುತ್ತೇವೆ. ನಾಗರೀಕತೆಯ ಪ್ರವೇಶ ಎಷ್ಟೇ ಆಗಿದ್ದರೂ ಸಾಂಪ್ರದಾಯಿಕ ಮನಸ್ಸುಗಳು ಇನ್ನೂ ಕೆಲವು ಉಳಿದಿರುವುದರಿಂದ ಮೂಲ ಸಂಸ್ಕೃತಿಯ ಬೇರುಗಳು ಅಷ್ಟೇ ಗಟ್ಟಿಮುಟ್ಟಾಗಿವೆ ಎಂದರೆ ಅತಿಶಯೋಕ್ತಿಯೇನಲ್ಲ.

ಉಣ್ಣೆಕಂಕಣ ಕುರುಬರಲ್ಲಿ ಶವಸಂಸ್ಕಾರವೂ ಒಂದು ವಿಶಿಷ್ಟ ಆಚರಣೆ. ಈ ಸಣ್ಣ ಕುರುಬರಲ್ಲಿ ಹೂಳುವ ಮತ್ತು ಸುಡುವ ಎರಡೂ ಪದ್ಧತಿಗಳಿವೆ. ಕೆಲವು ಕುಟುಂಬಗಳು ದೀಕ್ಷೆಯನ್ನು ತೆಗೆದುಕೊಂಡಿದ್ದರೆ ಅಂತವರಿಗೇ ವಿಶೇಷವಾದ ಆಚರಣೆಗಳ ಮೂಲಕ ಶವಸಂಸ್ಕಾರ ನಡೆಸಲಾಗುತ್ತದೆ. ಅಲ್ಲದೆ ಇವರಲ್ಲಿ ಪೂಜಾರಿಗಳು ಸಾವನ್ನಪ್ಪಿದರೆ ಅವರ ಶವಸಂಸ್ಕಾರವೂ ವಿಶಿಷ್ಟವಾಗಿರುತ್ತದೆ. ಬಾಣಂತಿಯರು ಸಾವನ್ನಪ್ಪಿದರೆ ಅವರನ್ನು ಹೂಳುವುದಲ್ಲದೆ ಅವರ ಸಮಾಧಿಯ ಮೇಲೆ ಚಿಕ್ಕದಾದ ಹಸಿರುಗರಿಯ ಚಪ್ಪರವನ್ನು ಹಾಕಲಾಗುತ್ತದೆ. ಅವರ ಮನೆಯಲ್ಲಿ ಮದುವೆಯೇನಾದರೂ ನಡೆದಿದ್ದರೆ, ತೊನ್ನು ಹತ್ತಿದ್ದವರಾಗಿದ್ದರೆ, ಅವರಲ್ಲಿ ಅಕಾಲಿಕ, ಆತ್ಮಹತ್ಯೆಯಂತಹ ಮರಣಗಳೇನಾದರೂ ಸಂಭವಿಸಿದ್ದರೆ ಅಂತವರ ಶವಗಳನ್ನು ಸುಡುತ್ತಾರೆ. ಸತ್ತ ಹನ್ನೊಂದನೇ ದಿನ ಸೂತಕ ತೆಗೆದುಕೊಳ್ಳಲು ತಿಥಿ ಮಾಡಲಾಗುತ್ತದೆ. ಅಂದು ಅಣ್ಣ ತಮ್ಮಂದಿರಿಗೆ, ನೆಂಟರಿಷ್ಟರಿಗೆ, ಊರಿನವರಿಗೆ ಮಾಂಸದೂಟವಾಗಲಿ, ಸಿಹಿಯೂಟವಾಗಲಿ ಮಾಡುತ್ತಾರೆ. 'ಗುಡ್ಡೆಶಾಸ್ತ್ರ' ವಿಶಿಷ್ಟವೆನಿಸುವಂತಹುದು. ಸತ್ತವರ ಮನೆಯ ಮುಂದೆ ಒಂದು ಹೊಸ ಮಡಕೆಯಲ್ಲಿ ಅರಿಶಿನ ಅನ್ನ (ಕೂಳು) ಮೊಟ್ಟೆಯೊಂದರಂತೆ ಮೂರು ಕಡೆ ಕೂಳು ಹಾಕುತ್ತಾರೆ. ಸಮಾಧಿಯ ಬಳಿಯ ಶಾಸ್ತ್ರವಾದ ಮೇಲೆ ಕಾಗೆ ಬಂದು ಆಹಾರ ಪದಾರ್ಥಗಳನ್ನು ತಿನ್ನದಿದ್ದರೆ ದೆವ್ವ, ಗಾಳಿಯಾಗುತ್ತಾನೆ/ ಳೆನ್ನುವ ಬಲವಾದ ನಂಬಿಕೆಯಿದೆ. ಇವೆಲ್ಲವೂ ನಿತ್ಯದ ಆಚರಣೆಗಳಾದರೆ ಇನ್ನೂ ಕೆಲವು ದೈವದ ಆಚರಣೆ ಸಂಪ್ರದಾಯಗಳನ್ನು ಗಮನಿಸಬಹುದಾಗಿದೆ. ಅಂತಹ ಆಚರಣೆಯಲ್ಲಿ 'ಕರಿಯ ಕಂತೆ'

ತಯಾರಿಕೆ ಪವಿತ್ರವಾದುದು. ಕುರುಬ ಸಮುದಾಯದಲ್ಲಿ ಉಣ್ಣೆಕಂಕಣ ಕುರುಬರಿಗೆ ಕುಲಗುರುವಾಗಿ ಹುಟ್ಟಿದ ರೇವಣಸಿದ್ಧನಿಗೆ ಅರ್ಪಿಸುವ 'ಕಂತೆಸೇವೆ' ನೇಯ್ಗೆ ಸಂಸ್ಕೃತಿಗೆ ಸಂಬಂಧಿತವಾದುದು. ಕಂತೆ ಸೇವೆ ಆಚರಣೆಯಲ್ಲಿ ನೇಯುವ ವಿಧಾನದ ಮಹತ್ವ ಮತ್ತು ಅದರ ಬಗೆಗಿನ ಪಾವಿತ್ರ್ಯ ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಈ ಆಚರಣೆ ಇಲ್ಲ.

ಕುರುಬ ಸಮುದಾಯದಲ್ಲಿ ಉಣ್ಣೆಕಂಕಣ ಕುರುಬರಿಗೆ ಕುರಿಯ ಅಪ್ಪಟ ಉಣ್ಣೆಯಿಂದ ತಯಾರಿಸಿದ ಕರಿಯ ಕಂಬಳಿ ಪರಮ ಪೂಜ್ಯ ವಸ್ತು. ತಮ್ಮ ಯಾವುದೇ ಶುಭ ಸಮಾರಂಭಗಳು ಕರಿಯಕಂಬಳಿ ಗದ್ದುಗೆ ಇಲ್ಲದೆ ಜರುಗಲಾರವು. ಕರಿಯ ಕಂಬಳಿಯ ಮೇಲೆ ಉರು (ಗುರು) ಸ್ವರೂಪರನ್ನು ಕುಳ್ಳಿರಿಸಿ ಪೂಜಾ ಸಾಮಗ್ರಿಗಳನ್ನು ಹಾಸಿದ ಕರಿಯ ಕಂಬಳಿಯ ಮೇಲಿಟ್ಟು ಕೆಲಸ ಆರಂಭಿಸುವುದು ರೂಢಿಯಲ್ಲಿದೆ. ಈ ಕರಿಯ ಉಣ್ಣೆಯಿಂದ ಸಿದ್ಧಪಡಿಸಿದ ಪವಿತ್ರವಾದ ಹಾಗೂ ಪೂಜ್ಯವಾದ ವಸ್ತುವೇ 'ಕರಿಯ ಕಂತೆ'. ಶ್ರೀ ರೇವಣ ಸಿದ್ದೇಶ್ವರರ ಮಠಗಳಿರುವೆಡೆಯಲ್ಲೆಲ್ಲಾ ಕರಿಯ ಕಂತೆಯನ್ನು ಬಳಸಲಾಗುತ್ತದೆ. ಅಲ್ಲದೆ ಸಿದ್ಧರಾಮೇಶ್ವರರ ದೇವಸ್ಥಾನಗಳಲ್ಲಿಯೂ ಈ ವಸ್ತ್ರವನ್ನು ತಯಾರಿಸಲು ನಡೆಸುವ ಆಚರಣೆಗಳು ಪವಿತ್ರವಾದವು. ಸಾಮಾನ್ಯವಾದ ಕಂಬಳಿಯನ್ನು ನೇಯ್ಗೆ ಮಾಡುವಂತೆ ನೇಯದೆ ವಿಶೇಷ ನಿಯಮ ನಿಷ್ಠೆಗಳಿಂದ ತಯಾರಿಸುತ್ತಾರೆ. ಕಂತೆಯನ್ನು ಸಿದ್ಧಪಡಿಸಲು ಅಚ್ಚಕರಿಯ ಉಣ್ಣೆಯನ್ನು ಬಳಸುತ್ತಾರೆ.

ನಿರ್ದಿಷ್ಟ ಕುರಿ ಮಂದೆಗೆ ಹೋಗಿ ಲಕ್ಷಣವಾದ ಮತ್ತು ಆಗತಾನೆ ಹುಟ್ಟಿದ ಮರಿಗೆ ಒಡೆಯರು ತೀರ್ಥಹಾಕಿ 'ಕಂತೆಯಮರಿ' ಎಂದು ಆಯ್ಕೆ ಮಾಡುತ್ತಾರೆ. ದೇಹದ ಮೇಲೆ ಯಾವುದೇ ಊನವಿಲ್ಲದ ನಾಯಿ, ನರಿ ಮುಟ್ಟದ ಗಂಡು ಮರಿಯನ್ನು ಆಯ್ಕೆ ಮಾಡಿ ಸ್ನಾನಮಾಡಿಸಿ ದೇವರ ತೀರ್ಥ ಪ್ರಸಾದ ಹಾಕಿ ಬೇರೆ ಕುರಿಗಳ ಜೊತೆ ಇರದಂತೆ ನೋಡಿಕೊಳ್ಳುತ್ತಾರೆ. ಕಂತೆಸೇವೆ ದಿನದಂದು ಮರಿಯ ತುಪ್ಪಳ ವನ್ನು ಕತ್ತರಿಸುವವರು ಒಂದ್ಹೊತ್ತು ಉಪವಾಸವಿದ್ದು ಬೇಯಿಸದ ಆಹಾರವಾದ ತಂಬಿಟ್ಟು, ನೆನಗಡಲೆ, ಮುಂತಾದವುಗಳ ಮೂಲಕ ಕಂತೆಯ ಮರಿಯನ್ನು ನೇಯುವವರೆಗೆ ನಿಯಮ ಪಾಲಿಸಬೇಕಾಗುತ್ತದೆ. ಉಣ್ಣೆ ಕತ್ತರಿಸುವವರು ಶುಚಿರ್ಭೂತರಾಗಿರುವುದೂ ಅದರ ಪಾವಿತ್ರ್ಯದ ಮಹತ್ವವನ್ನು ಹೆಚ್ಚಿಸುತ್ತದೆ.

ಮುಂದೆ ಒಡೆಯನಿಗೆ ಕಾಣಿಕೆ ನೀಡಿ ಉಣ್ಣೆ ಕತ್ತರಿಸಿಕೊಂಡು ಬಂದು ಉಣ್ಣೆಯನ್ನು ದೇವಸ್ಥಾನದಲ್ಲಿಟ್ಟು ಮನೆಗೆ ಹೋಗುತ್ತಾರೆ. ಬೇಯಿಸದ ಆಹಾರವನ್ನೇನಾದರೂ ತೆಗೆದುಕೊಂಡ ಬಳಿಕ ಮತ್ತೊಮ್ಮೆ ಸ್ನಾನ ಮಾಡಿ ದೇವಾಲಯಕ್ಕೆ ಮರಳಿ ಬಂದು ತಂದಿಟ್ಟಿದ್ದ ಉಣ್ಣೆಯನ್ನು ಹೊಸೆದು ದಾರ ಮಾಡುತ್ತಾರೆ. ಆ ದಾರದಿಂದ ಕೈವಸ್ತ್ರ (ಚೌಕ) ದಷ್ಟು ಅಗಲವಾದ ಕಂಬಳಿಯನ್ನು ಸಿದ್ಧಪಡಿಸುತ್ತಾರೆ. ತಯಾರಿಸಿದ ಕಂತೆ (ಕಂಬಳಿ) ನೂತನವಾಗಿ ಹೆಣೆದ ಬಿದಿರಿನ ಬುಟ್ಟಿಯಲ್ಲಿಟ್ಟುಕೊಂಡು ಮೆರವಣಿಗೆಯಲ್ಲಿ ಸಾಗಿ ದೇವರಿಗೆ ಸಮರ್ಪಿಸಲಾಗುತ್ತದೆ. ಕರಿಯಕಂತೆಯನ್ನು ಧರಿಸುವುದರಿಂದ ದೈವಿಕ ಶಕ್ತಿ ಪ್ರಕಾಶಿಸುತ್ತದೆಂಬ ಪ್ರತೀತಿ ಇದೆ. ಕಂತೆ ಹರಿದು ಹೋದಾಗ, ಹಾಳಾದರೆ ಹೊಸದನ್ನು ಧರಿಸಿ ಹಳೆಯದನ್ನು ವಿಧಿವತ್ತಾಗಿ ವಿಸರ್ಜಿಸುತ್ತಾರೆ.

ಉಣ್ಣೆಕಂಕಣ ಕುರುಬರು ವಿಶೇಷವಾಗಿ ಬೀರದೇವರ ಭಕ್ತರು. ಎಲ್ಲರಂತೆ ಇವರೂ ಹಬ್ಬ ಹರಿದಿನಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹಿರಿಯರ ಹಬ್ಬ ಅಥವಾ ಮಹಾಲಯ ಅಮವಾಸ್ಯೆ ದಿನ ಹಿರಿಯರನ್ನು ಪೂಜಿಸಲು ಮಾಂಸಾಹಾರದ ಉಪಯೋಗ, ಕಾರು ಹುಣ್ಣಿಮೆಯಲ್ಲಿ ಎತ್ತುಗಳನ್ನು ಅಲಂಕರಿಸಿ ಊರತುಂಬ ಮೆರವಣಿಗೆ ಮಾಡುವ ಸಂಪ್ರದಾಯ, ಕರ್ಪೂರ ಸೇವೆ, ಅಂಬು ಹೊಡೆಯುವುದು, (ವಿಜಯದಶಮಿ ದಿನ), ಆಯುಧಪೂಜೆ, ಬೀರದೇವರ ಪಲ್ಲಕ್ಕಿ ಉತ್ಸವಗಳು ಮುಂತಾದ ಆಚರಣೆ, ಸಂಪ್ರದಾಯಗಳು ಇಂದಿಗೂ ಮುಂದುವರಿದುಕೊಂಡು ಬಂದಿರುವುದೂ ಉಣ್ಣೆಕಂಕಣ ಕುರುಬರ ವಿಶೇಷವಾಗಿದೆ.

ಉತ್ತರ ಕರ್ನಾಟಕದಲ್ಲಿ ತಮ್ಮ ಆರಾಧ್ಯ ದೈವಗಳಾದ ಬೀರಪ್ಪ, ಮಾಳಿಂಗರಾಯ, ವಿಠೋಬ (ಇಟ್ಟಪ್ಪ), ಅಮೋಘಸಿದ್ಧ, ಮಾಯವ್ವ (ಚಿಂಚಲಿ) ಮುಂತಾದ ದೈವಗಳಿಗೆ 'ಉಣ್ಣೆ'ಯನ್ನೇ ನೀಡುವುದನ್ನು ಇಂದಿಗೂ ಕಾಣಬಹುದಾಗಿದೆ. ಹಾರಿಸಿದ ಉಣ್ಣೆಯನ್ನು ಮನೆಗೆ ತೆಗೆದುಕೊಂಡು ಹೋಗಿ ದೈವವೆಂದು ಪೂಜಿಸುತ್ತಾರೆ. ರೋಗರುಜಿನಗಳ ಪರಿಹಾರಕ್ಕೆ ಬಳಸುವರು. ಇದು 'ಉಣ್ಣೆ ಸಂಸ್ಕೃತಿ'ಯುನ್ನು ಪ್ರತಿಬಿಂಬಿಸಿದರೆ, ಕಂತೆಸೇವೆ ಆಚರಣೆ 'ನೇಯ್ಗೆ ಸಂಸ್ಕೃತಿ'ಯನ್ನು ಪ್ರತಿಬಿಂಬಿಸುತ್ತದೆ. ಕಂತೆ ಉಣ್ಣೆಯ ಮುಂದುವರಿದ ಭಾಗ. ಈ ಮೂಲಕ ದೇವರುಗಳ ಪ್ರಾಚೀನತೆಯನ್ನು ಗುರುತಿಸುವುದೂ ಸಾಧ್ಯವಿದೆ.

ಉಣ್ಣೆಕಂಕಣ ಕುರುಬರ ಮತ್ತೊಂದು ವೈಶಿಷ್ಟ್ಯಪೂರ್ಣ ಆಚರಣೆಯೆಂದರೆ 'ಹಾಲು ಚೆಲ್ಲುವ ಕಾರ್ಯಕ್ರಮ', ಕುರಿಕಾಯುವುದು ಮತ್ತು ಕುರಿಯ ಉಣ್ಣೆಯನ್ನು ಕತ್ತರಿಸುವ ಸಂಪ್ರದಾಯ ಕೂಡ ವಿಶಿಷ್ಟವಾಗಿದೆ. ಇತ್ತೀಚೆಗೆ ಕುರುಬರಿಗಿಂತ ಕುಂಚಿಟಿಗರು, ಗೊಲ್ಲರು, ಕೆಲವೆಡೆ ಲಿಂಗಾಯತರು, ನಾಯಕರು ಹೆಚ್ಚಾಗಿ ಕುರಿ ಮೇಕೆಗಳನ್ನು ಸಂಗೋಪನೆ ಮಾಡುತ್ತಿದ್ದಾರೆ. ಆದರೆ ಕುರಿಯ ಉಣ್ಣೆಯನ್ನು ಕತ್ತರಿಸುವವರು ಮಾತ್ರ ಕುರುಬರು(ಉಣ್ಣೆಕಂಕಣ). ಉಣ್ಣೆಯನ್ನು ಕತ್ತರಿಸುವ ಮೊದಲು ಕುರಿಯ ಉಣ್ಣೆಯನ್ನು ಶುದ್ಧಗೊಳಿಸುವ ನಿಟ್ಟಿನಲ್ಲಿ ಕುರಿಯನ್ನು ನೀರಿನಲ್ಲಿ ತೊಳೆಯುತ್ತಾರೆ.

ಈ ಕ್ರಿಯೆಗೆ ಕುರಿಯನ್ನು ನೀರಿಗೆ ಹಾಕುವುದು ಎನ್ನುವರು. ನಂತರ ಹಾಲು ಚೆಲ್ಲುವವರು ಹಾಲುಮತದವರು. ಕುರಿಯನ್ನು ನೀರಿಗೆ ಹಾಕಿ ಹಾಲು ಚೆಲ್ಲಿದರೆ ಈ ಕುರಿಯ ಉಣ್ಣೆಯನ್ನು ಬೇರೆಯವರು ಕತ್ತರಿಸುವಂತಿಲ್ಲ. ಒಂದು ವೇಳೆ ಬೇರೆ ಕೆಲಸದ ಒತ್ತಡದಲ್ಲಿ ಅವರು ಕುರಿಯ ಉಣ್ಣೆಯನ್ನು ಕತ್ತರಿಸಲು ಬಾರದಿದ್ದರೆ ಒಂದು ವರ್ಷವಾದರೂ ಬೇರೆ ಕುರುಬರಿಗೆ ಉಣ್ಣೆಯನ್ನು ನೀಡುವಂತಿಲ್ಲ. ಇಂತಹ ಸಂಪ್ರದಾಯವು ಉಣ್ಣೆಕಂಕಣದವರಲ್ಲಿ ಮಾತ್ರವಿದ್ದು ಕುರಿಗೆ ಹಾಲು ಚೆಲ್ಲಿದ ದಿನ ಕುರಿಯ ಮಾಲೀಕರು ಹುಗ್ಗಿ ತುಪ್ಪದಿಂದ ಕುರುಬರಿಗೆ ಊಟವನ್ನು ಮಾಡಿಸಿದರೆ ಕುರಿಯ ಹಿಂಡು ಹೆಚ್ಚುತ್ತದೆಂಬ ವಾಡಿಕೆಯಿದೆ. ಇಂತಹ ಸಂಪ್ರದಾಯದಿಂದ ಕುರಿಯ ಉಣ್ಣೆ ಕತ್ತರಿಸಿಕೊಂಡು ಅವರಿಗೆ ಕರಿಯ ಕಂಬಳಿಯನ್ನು ನೀಡುವಂತಹ ವಸ್ತುವಿನಿಮಯ ಪದ್ಧತಿಯು ಜೀವಂತವಾಗಿರುವುದು, ಅಲ್ಲದೆ ಇವೆರಡೂ ಸಮುದಾಯಗಳಲ್ಲಿ ಪರಸ್ಪರ ಸಹೋದರ ಭಾವನೆಗಳಿಂದ ಅನ್ಯೋನ್ಯ ಜೀವನಕ್ಕೆ ದಾರಿಮಾಡಿಕೊಟ್ಟಿರುವುದೂ ವಿಶೇಷವೆನಿಸುತ್ತದೆ.

ಉಣ್ಣೆಕಂಕಣ ಕುರುಬರು ಹತ್ತಿಕಂಕಣ ಕುರುಬರಿಗಿಂತ ಆರ್ಥಿಕವಾಗಿ ಸುಧಾರಿಸಿದವರು ಎನ್ನುವ ಕಾಲವೊಂದಿತ್ತು. ಅಂದು ಬಡವ, ಬಲ್ಲಿದರು ಎಂಬ ತರತಮವಿಲ್ಲದೆ ಪ್ರತಿಯೊಬ್ಬರೂ ಕಂಬಳಿಯನ್ನು ಬಳಸುತ್ತಿದ್ದರು. ಪ್ರತಿಯೊಂದು ಮನೆಯಲ್ಲಿ ಕಂಬಳಿಯನ್ನು ಇಟ್ಟುಕೊಳ್ಳುವುದು ಪ್ರತಿಷ್ಠೆಯ ಸಂಗತಿಯಾಗಿತ್ತು. ಕಂಬಳಿಗಳನ್ನು ನೇಯುವುದು ಇವರಿಗೆ ಹಿರಿಯರಿಂದ ಬಂದ ಬಳುವಳಿ. ಇಂದು ಜಾಗತೀಕರಣದ ಕರಿನೆರಳಲ್ಲಿ ಕಂಬಳಿ ಉದ್ಯಮ ಕುಂಟುತ್ತಲೇ ಸಾಗಿರುವುದು ಉಣ್ಣೆಕಂಕಣ ಕುರುಬರ ಬದುಕು ಅಸಹನೀಯವಾಗತೊಡಗಿದೆ. ಇಂತಹ ಗೃಹ ಕೈಗಾರಿಕೆಗಳಿಗೆ ಮರು ಜೀವ ನೀಡುವ ಅಗತ್ಯ ಹಿಂದೆಂದಿಗಿಂತಲೂ ಈಗ ಅನಿವಾರ್ಯವಾಗಿರುತ್ತದೆ.

ಒಟ್ಟಾರೆಯಾಗಿ ಉಣ್ಣೆಕಂಕಣ ಕುರುಬರ ಸಂಪ್ರದಾಯ ಮತ್ತು ಆಚರಣೆಗಳು ವೈಶಿಷ್ಟ್ಯಪೂರ್ಣವಾಗಿದ್ದು ಇತರ ಸಮುದಾಯಗಳಂತೆಯೇ ಕೆಲವು ಸಾಮ್ಯತೆಯಿಂದ ಕೂಡಿದ್ದರೆ ಮತ್ತೆ ಕೆಲವು ಆಚರಣೆ ಸಂಪ್ರದಾಯಗಳು ಇತರರಿಗಿಂತ ಭಿನ್ನವಾಗಿರುವುದು ಕಂಡು ಬರುತ್ತದೆ. ಉಣ್ಣೆಕಂಕಣ ಕುರುಬರಿಗೆ ಪ್ರಧಾನ ದೈವ ರೇವಣಸಿದ್ದೇಶ್ವರ, ಈ ದೈವದ ಉತ್ಸವ ಜಾತ್ರೆಗಳು ಕರ್ನಾಟಕದ ಕೆಲವು ಭಾಗಗಳಲ್ಲಿ ಕೆಲವು ಋತುಮಾನಗಳಲ್ಲಿ ವಿಶೇಷವಾಗಿಯೇ ಜರುಗುತ್ತವೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆಯಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ರೇವಣಸಿದ್ದೇಶ್ವರನ ಪಲ್ಲಕ್ಕಿ ಉತ್ಸವ ನೋಡುಗರಿಗೆ ಭಕ್ತಿ ಭಯದ ಭಾವದೊಂದಿಗೆ ಸಂತೋಷವನ್ನುಂಟು ಮಾಡುತ್ತದೆ. ಇವಲ್ಲದೆ ಮೊದಲ ಬೋಣಿ, ಕಂಬಳಿ ಬೀಸಿ ಮಳೆ ಕರೆಯುವುದು, ಮುಂತಾದ ನಂಬಿಕೆ ಸಂಪ್ರದಾಯ, ಆಚರಣೆಗಳು ಉಣ್ಣೆಕಂಕಣ ಕುರುಬರಲ್ಲಿ ಕಂಡುಬರುತ್ತವೆ.

ಹತ್ತಿಕಂಕಣ ಕುರುಬರು

ಎಲ್ಲ ಸಮುದಾಯಗಳಂತೆ ಕುರುಬರ ಒಳಪಂಗಡವಾದ ಹತ್ತಿಕಂಕಣ ಕುರುಬರು ಆಚರಿಸುವ ಆಚರಣೆ ಉದ್ದೇಶ ಒಂದೇ ಆಗಿದ್ದರೂ, ಆಚರಣೆಗಳು ಮಾತ್ರ ಒಂದೇ ತೆರನಾಗಿರುವುದಿಲ್ಲ. ಸಮಾಜ ನೆಲೆಗೊಂಡ ಸ್ಥಿತಿಗತಿ, ಸಾಮಾಜಿಕ ಮನೋಧರ್ಮ, ನಂಬಿಕೆ ಇತ್ಯಾದಿ ಅಂಶಗಳಿಗನುಗುಣವಾಗಿಯೇ ಆಚರಣೆ ರೂಪ ತಾಳುತ್ತದೆ. ಕಾಲಾಂತರದಲ್ಲಿ ಹಲವು ಪ್ರಭಾವಗಳಿಗೆ ಒಳಗಾದಂತೆ ಈ ಆಚರಣೆಗಳೂ ಬದಲಾಗುವುದು ಸಹಜವೇ ಆಗಿರುತ್ತದೆ.

ಹತ್ತಿಕಂಕಣ ಕುರುಬರಲ್ಲಿ ಉತ್ತರ ಕರ್ನಾಟಕದವರಿಗೂ, ದಕ್ಷಿಣ ಕರ್ನಾಟಕದವರಿಗೂ ಆಚರಣೆಗಳು ಸಂಪ್ರದಾಯಗಳಲ್ಲಿ ಸ್ವಲ್ಪ ಮಟ್ಟಿಗೆ ವಿಭಿನ್ನವಾಗಿವೆ. ಉತ್ತರ ಕರ್ನಾಟಕದ ಹತ್ತಿಕಂಕಣ ಕುರುಬರಲ್ಲಿ ಗಂಡುಮಕ್ಕಳಿಗೆ ಮದುವೆಗೆ ಮುನ್ನ ಪಟ್ಟ ಮಾಡುವ ಆಚರಣೆಯಿದೆ. ಈ ಪಟ್ಟವನ್ನು ಮೂರು ತಿಂಗಳ ಮಗುವಿನಿಂದಾರಂಭಗೊಂಡು ಮದುವೆಯಾಗುವ ವಯೋಮಾನದ ಹುಡುಗರಿಗೆಲ್ಲಾ ಮಾಡುತ್ತಾರೆ. ಹೀಗೆ ಸಾಮೂಹಿಕವಾಗಿ ಪಟ್ಟಮಾಡುವಾಗಲೂ ನಿರ್ದಿಷ್ಟ ಬೆಡಗಿನ ಅಣ್ಣತಮ್ಮಂದಿರು ಮಾತ್ರ ಗುಂಪಾಗಿ ಸೇರಿ ಆಚರಿಸುವರು. ಅಂತಹ ಸಮಯದಲ್ಲಿ ಮನೆದೇವರಾದ ಬೀರಲಿಂಗೇಶ್ವರ, ಗಂಗರಾಯನನ್ನು ಹೊರಡಿಸಿಕೊಂಡು ಡೊಳ್ಳಿನ ಸಮೇತ ಹೊಳೆಗೆ ಹೋಗುತ್ತಾರೆ. ಅಲ್ಲಿ ದೇವರಿಗೆ ಗಂಗಾಸ್ನಾನ ಮಾಡಿಸುತ್ತಾರೆ.

ಅನಂತರ ಕುರಿಬಲಿಕೊಟ್ಟು ಅಡುಗೆ ಮಾಡಿ ಬಂದ ಜನರಿಗೆ ಉಣಬಡಿಸುತ್ತಾರೆ. ಅಲ್ಲಿಂದ ಮುಂದೆ ಗುಡಿಗೆ ದೇವರನ್ನು ಕರೆತಂದು ಗುಡಿಗೆ ಕೂರಿಸುತ್ತಾರೆ.

ಗುಡಿಗೆ ಬಂದ ಮೇಲೆ ನಾಲ್ಕು ಹೊಸ ಗಡಿಗೆಗಳಲ್ಲಿ ನೀರು ತಂದು ಚಚ್ಚೌಕಾಕಾರದಲ್ಲಿ ಇಟ್ಟು ಅದಕ್ಕೆ ಸುತ್ತಲೂ ಐದು ಸುತ್ತು ಹತ್ತಿ ನೂಲು ಸುತ್ತುವರು. ಇದಕ್ಕೆ ಸುರಿಗೆ ಸುತ್ತುವುದು ಎನ್ನಲಾಗುತ್ತದೆ. ಹೀಗೆ ಕೂರಿಸುವುದಕ್ಕೆ ಮುಂಚೆ ಹುಡುಗರಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ಧರಿಸುತ್ತಾರೆ. ಇದಾದ ಮೇಲೆ ಹುಡುಗರನ್ನು ಸುರಿಗೆಯಿಂದ ಎಬ್ಬಿಸಿ ಅವರ ತಂದೆ ತಾಯಿಗಳನ್ನು ಕೂರಿಸಿ ಬಂಧು ಬಳಗವನ್ನು ಸೇರಿಸಿಕೊಂಡು ಅವರಿಗೆ ಭಂಡಾರ ಹೊಯ್ಯುತ್ತಾರೆ. ಈ ಆಚರಣೆಯುದ್ದಕ್ಕೂ ಡೊಳ್ಳಿನ ಸೇವೆ ನಿರಂತರವಾಗಿ ನಡೆಯುತ್ತಿರುತ್ತದೆ. ದಕ್ಷಿಣ ಕರ್ನಾಟಕದ ಹತ್ತಿಕಂಕಣ ಕುರುಬರಲ್ಲಿ ಈ ಯಾವ ಆಚರಣೆಯನ್ನು ಆಚರಿಸಲಾಗುವುದಿಲ್ಲ. ಅಲ್ಲದೆ ಮದುವೆಯನ್ನು ಸಾಂಪ್ರದಾಯಿಕವಾಗಿ ಮಾಡಲು ಬೇಕಾದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಪರಿಚಿತರಾದ ಬಂಧುಗಳಲ್ಲಿ ಹೆಣ್ಣು ಹುಡುಕಾಟ ನಡೆಯುತ್ತದೆ. ಅನುರೂಪಳಾದ ಹುಡುಗಿ, ಸರಿಜೋಡಿಯಾದ ಮನೆತನ, ಕುಲ, ಬೆಡಗು, ದೇವರು ಇವುಗಳಲ್ಲಿ ಹೊಂದಾಣಿಕೆ ಆಗುತ್ತದೆಂದಾಗ ಶಕುನ ಕೇಳುವ ಅಥವಾ ನೋಡುವ ಪದ್ಧತಿಯಿದೆ. ದೇವರ ಅಪ್ಪಣೆ ಪಡೆದೂ ಮುಂದುವರಿಯುತ್ತಾರೆ.

ಇವರಲ್ಲಿ ಅರಿಶಿನ ಕೊಂಬಿನ ಶಕುನ, ತುಂಬೆ ಹೂವಿನ ಶಕುನ, ಹೇನಿನ ಶಕುನ, ಮನೆ ದೇವರ ಅಪ್ಪಣೆ ಇವೆಲ್ಲವೂ ಆದ ಬಳಿಕ ತಮ್ಮ ಆಸುಪಾಸಿನಲ್ಲಿ ದೊರೆಯುವ ಕುಲಗುರುಗಳಾದ ಒಡೆಯರು ಅಥವಾ ಜೋತಿಷ್ಯ ಪಂಡಿತರಿಂದ ಗ್ರಹಗತಿ, ಕಂಕಣಬಲ, ಬಲಾಚಾರ, ಸಾಲಾವಳಿಗಳನ್ನು ಕೇಳಿ ಸರಿಬಂದಲ್ಲಿ ವಿವಾಹವನ್ನು ನಿಗದಿಪಡಿಸುತ್ತಾರೆ. ಅಲ್ಲದೆ ವಧುವರರ ಜಾತಕ ಕುಂಡಲಿಗಳ ಆಧಾರದ ಮೇಲೂ ವಿವಾಹವು ನಿಷ್ಕರ್ಷೆ ಮಾಡಲಾಗುತ್ತದೆ. ಇದಾದ ನಂತರ ಹೆಣ್ಣನ್ನು ಕೇಳಲು ಹೊರಡುತ್ತಾರೆ. ಹೆಣ್ಣು ನೋಡಲು ಹೋದವರಿಗೆ ಒಪ್ಪಿಗೆಯಾದಲ್ಲಿ ಅಲ್ಲಿಯೆ ಕೊಟ್ಟು ತರುವ ಬಗ್ಗೆ ಮಾತುಕತೆಯೂ ನಡೆಯುತ್ತದೆ. ಇದು ಸಾಮಾನ್ಯವಾಗಿ ಉಣ್ಣೆಕಂಕಣ ಕುರುಬರ ಮಾದರಿಯಲ್ಲಿಯೇ ವಿವಾಹ ಜರುಗುತ್ತದೆ. ಗಂಡಿಗೆ ಬಾಸಿಂಗ ಕಟ್ಟುವುದು, ಧಾರೆ ಚಪ್ಪರದಲ್ಲಿ ಹತ್ತಿಯ ಕಡ್ಡಿ ನೆಡುವುದು, ಹತ್ತಿಯ ದಾರದಿಂದ ಮಾಡಿದ ಕಂಕಣ ಕಟ್ಟುವುದನ್ನು ಹೊರತುಪಡಿಸಿದರೆ ದಕ್ಷಿಣ ಕರ್ನಾಟಕದ ಹತ್ತಿಕಂಕಣ ಕುರುಬರ ವಿವಾಹವು ಉಣ್ಣೆಕಂಕಣ ಕುರುಬರ ವಿವಾಹದಂತೆಯೇ ನಡೆಯುತ್ತದೆ.

ಹತ್ತಿಕಂಕಣ ಕುರುಬರು ಮದುವೆಗೆ ಸಿದ್ಧನಾಗಿರುವ ಹುಡುಗನಿಗೆ ಕನ್ಯೆಯನ್ನು ನೋಡುವುದಕ್ಕೆ ಮುಂಚೆ ತಮ್ಮ ಮನೆಯಲ್ಲಿಯೇ ಕೆಲವು ಸಂಪ್ರದಾಯಗಳನ್ನು ಆಚರಿಸುತ್ತಾರೆ. ಈ ಆಚರಣಾ ವಿಧಿಗೆ 'ಮನೀರ್ಲು' ಮಾಡೋದು ಎನ್ನುತ್ತಾರೆ. ಆ ಪ್ರಕಾರ ಮೊದಲು ಮನೆಯನ್ನೆಲ್ಲ ಸುಣ್ಣ ಬಣ್ಣ ಬಗ್ಗಡಗಳಿಂದ ಸಾರಿಸಿ ಶುಭ್ರ ಮಾಡಿಸುತ್ತಾರೆ. ಮದುವೆಯಾಗಲಿರುವ ಹುಡುಗನ ಸೋದರಮಾವ ಒಂದು ಕರಿಕಂಬಳಿಯನ್ನು ಹೆಗಲಿನ ಮೇಲೆ ಹಾಕಿಕೊಂಡು ಕೈಯಲ್ಲಿ ಬೀರದೇವರ ಅಥವಾ ತಮ್ಮ ಮನೆದೇವರ ಕತ್ತಿ ಹಿಡಿದುಕೊಂಡು

ಒಂದು ಸೇರು ಪಾವು ಜೋಳದಿಂದ ಮಾಡಿದ ಜೋಳದನ್ನದ ಎಡೆಯನ್ನು ತೆಗೆದುಕೊಂಡು ಆಲದ ಮರದ ಹತ್ತಿರ ಹೋಗುತ್ತಾನೆ. ಆ ಆಲದ ಮರಕ್ಕೆ ಪೂಜೆ ಮಾಡಿ ಎಡೆಯನ್ನು ನೈವೇದ್ಯ ಮಾಡುತ್ತಾನೆ. ನಂತರ ಕತ್ತಿಯಿಂದ ಆಲದ ಕೊನೆಂಯೊಂದನ್ನು ಕಡಿದು ತರುತ್ತಾನೆ. ಈ ಟೊಂಗೆಗೆ 'ಸೊಂಟಿಪ್ಪ' ಎನ್ನುತ್ತಾರೆ.

ಹೀಗೆ ತಂದ ಸೊಂಟಿಪ್ಪನನ್ನು ಮನೆಯಲ್ಲಿ ಒಂದು ಕಡೆ ಇಟ್ಟು ಅದರ ಮುಂದೆ ಅನ್ನ ತುಂಬಿದ ಗಡಿಗೆ ಪಟಗ (ರುಮಾಲು) ನಾಲ್ಕು ಚಪಾತಿ ಇಡುತ್ತಾರೆ. ನಂತರ ಸೊಂಟಿಪ್ಪನಿಗೆ ಮರಿಹಾಕಿದ ಕುರಿಯನ್ನು ಬಲಿಕೊಡುತ್ತಾರೆ. ಹೀಗೆ ಬಲಿಕೊಟ್ಟ ಕುರಿಯ ರಕ್ತವನ್ನು ಮದುವೆಯಾಗಲಿರುವ ಹುಡುಗನ ಹಣೆಗೆ ಹಚ್ಚುತ್ತಾರೆ. ಬಲಿಕುರಿಯಿಂದ ಮಾಡಿದ ಸಾರನ್ನು ಜೋಳದ ಅನ್ನಕ್ಕೆ ಕಲಸಿ ಮನೆಯ ಸುತ್ತ ಚೆರಗ ಹಾಕುತ್ತಾರೆ. ಇದಕ್ಕೆ ಈರ್ಳು ಮಾಡೋದು (ಮನೆ ಇರ್ಳು>ಮನೀರ್ಳು) ಎಂದು ಕರೆಯುತ್ತಾರೆ. ಹೀಗೆ ಬಲಿಕೊಟ್ಟು ರಕ್ತಶಾಂತಿ ಮಾಡಿದ ಮೇಲೆ ಹುಡುಗ ಧೀರನಾದ ಎಂಬುದು ಅವರ ನಂಬಿಕೆ.

ಇದಾದ ಬಳಿಕ ಹೆಣ್ಣನ್ನು ನೋಡಲು ತೊಡಗುತ್ತಾರೆ. ಕನ್ಯೆ ತಮ್ಮ ಬಳಗದಲ್ಲಿಯೇ ಇರಲಿ ಅಥವಾ ಹೊಸ ಸಂಬಂಧವಾಗಲಿ ಕನ್ಯೆಯನ್ನು ತಂದುಕೊಳ್ಳಬೇಕು ಎಂಬ ಇಷ್ಟ ಮೂಡಿದಾಗ ಐನೋರಿಂದ (ಬ್ರಾಹ್ಮಣ ಆಚಾರಿಗಳು ಅಥವಾ ಲಿಂಗಾಯತ ಜಂಗಮರು) ಹೊತ್ತಿಗೆ ತೆಗೆಸಿ ನೋಡುತ್ತಾರೆ. ಎಲ್ಲಾ ಒಳ್ಳೆಯದಾಗಿ ಕೂಡಿ ಬಂತೆಂದರೆ ಒಂದು ಶುಭದಿವಸ ಕನ್ಯೆಯನ್ನು ನೋಡಲು ಹೋಗುತ್ತಾರೆ. ಮೂರಕ್ಕಿಂತ ಹೆಚ್ಚು ಎಷ್ಟು ಜನರಾದರೂ ಹೋಗಬಹುದು. ಕೆಲವೆಡೆ ವಿಧವೆಯರೂ ಹೋಗಬಹುದು.

ಕನ್ಯೆಯನ್ನು ನೋಡುವುದಕ್ಕೆ ಹೊರಟಾಗ ಹುಡುಗನ ಮನೆ ಬಿಟ್ಟು ಕನ್ಯೆಯ ಮನೆಯನ್ನು ಸೇರುವವರೆಗೆ ದಾರಿ ಶಕುನವನ್ನು ತುಂಬಾ ಎಚ್ಚರಿಕೆಯಿಂದ ಜವಾಬ್ದಾರಿಯುತವಾಗಿ ಗಮನಿಸುತ್ತಾರೆ. ಕಾರಣ ಆಗಲಿರುವ ಲಗ್ನ ಸಂಬಂಧ ಗಟ್ಟಿಯಾಗಿರುವುದೇ ಅಲ್ಲವೇ ಎಂಬುದಕ್ಕೆ ದೇವರ ಮನಸ್ಸನ್ನು ಮೊದಲು ತಿಳಿಯಬೇಕೆಂಬುದು ಅವರ ಬಲವಾದ ನಂಬಿಕೆ.

ದಾರಿಯುದ್ದಕ್ಕೂ ಶುಭಸೂಚನೆಗಳು ಕಂಡುಬಂದರೆ ಆ ಸಂಬಂಧದಿಂದ ಒಳ್ಳೆಯದಾಗುತ್ತದೆ. ಅದಾಗದೆ ಅಶುಭಗಳು ಕಂಡು ಬಂದರೆ ಆ ಸಂಬಂಧ ಬೆಳೆಸುವುದು ಒಳ್ಳೆಯದಲ್ಲ. ಆ ಪ್ರಕಾರ ಹಾವು, ನಾಯಿ, ಬೆಕ್ಕು, ಬರಿಗೈಯ ಹಜಾಮ, ರಂಡೆಮುಂಡೆ ದಾರಿಗೆ ಅಡ್ಡವಾದರೆ ಕೆಟ್ಟದಾಗುತ್ತದೆ. ಕಾಗೆ ಎಡಕ್ಕೆ ಅಡ್ಡ ಹೋಗಬಾರದು. ಹೀಗೆ ಅಪಶಕುನಗಳು ಸಂಭವಿಸಿದರೆ ವಾಪಸ್ಸು ಬರುತ್ತಾರೆ. ಹಜಾಮ ತನ್ನ ಹತಾರಗಳ ಸಮೇತ ಅಡ್ಡ ಬಂದರೆ ಒಳ್ಳೆಯದು. ಕಾಗೆ ಬಲಕ್ಕೆ ಹಾರಿ ಹೋದರೆ, ನರಿಕಂಡರೆ ತುಂಬಾ ಒಳ್ಳೆಯದು. ಹೆಂಡದ ಗಡಿಗೆ, ಬಸವೇರು, ಜಂಗಮರು ಎದುರು ಬಂದರೆ ಶುಭ ಸೂಚನೆ, ದಾರಿ ನೋಡಿಕೊಂಡು ಕನ್ಯೆಯ ಮನೆ ಬಾಗಿಲಿಗೆ ಬಂದಾಗಲೂ ಗಮನಿಸುವ ಅಂಶಗಳುಂಟು. ಕನ್ಯೆಯು ಕಸ ಬಳಿಯುತ್ತಿರಬಾರದು. ಊಟ ಮಾಡುತ್ತಿರಬಾರದು. ತಲೆ ಬಾಚಿಕೊಳ್ಳುತ್ತಿರಬಾರದು. ಬರಿಕೊಡವನ್ನಾಗಲಿ ಸಗಣೆತಟ್ಟಿಯನ್ನಾಗಲಿ ತೆಗೆದುಕೊಂಡು ಎದುರಿಗೆ ಬರಬಾರದು. ಕಸ ಬಳಿಯುತ್ತಿದ್ದರೆ ತಂದುಕೊಂಡ ಮನೆಯು

‘ಗುಡಿಸಿಗುಂಡಾಂತರ’ವಾಗುತ್ತದೆಂದೂ, ಊಟ ಮಾಡುತ್ತಿದ್ದರೆ ರಾಕ್ಷಸಿ ಕುಲಕ್ಕೆ ಸೇರಿದ ಹೆಣ್ಣೆಂದು ಭಾವಿಸುತ್ತಾರೆ.

ಕನ್ಯೆ ಕೂಸೊಂದನ್ನು ಎತ್ತಿಕೊಂಡು ಬಂದರೆ, ತುಂಬಿದ ಕೊಡ ತೆಗೆದುಕೊಂಡು ಎದುರಾದರೆ, ಪೂಜೆ ಮಾಡುತ್ತಿದ್ದರೆ, ಅಡುಗೆ ಮಾಡುತ್ತಿದ್ದರೆ ತುಂಬಾ ಒಳ್ಳೆಯದೆಂದೂ ಅಂಥ ಹೆಣ್ಣನ್ನು ತಂದುಕೊಳ್ಳುವುದರಿಂದ ಮನೆತನವು ಬೆಳೆಯುವುದೆಂಬ ನಂಬಿಕೆ ಗಾಢವಾಗಿದೆ. ಮೇಲಿನ ಶಕುನಗಳೆಲ್ಲ ಶುಭವಾಗಿ ಕೂಡಿ ಬಂದ ಮೇಲೆ ಕನ್ಯೆಯ ಅಂಗಲಕ್ಷಣ ನೋಡಲು ಆರಂಭಿಸುತ್ತಾರೆ. ಕನ್ಯೆಗೆ ಎದುರು ಸುಳಿ ಇರಬಾರದು. ಎದುರು ಸುಳಿ ಇದ್ದರೆ ಎದುರು ಮಾತನಾಡುತ್ತಾಳೆ. ಬೆರಳು ಕಿರಿದಾಗಿರಬಾರದು. ‘ಎದೆಸದಿಗೆ’ ಇರಬಾರದು. ಅಂದರೆ ಎದೆಯ ನಡುವೆ ಹಳ್ಳ ಆಳವಾಗಿ ಬಿದ್ದಿರುವುದು, ಇಂಥಹ ಹೆಣ್ಣನ್ನು ತರುವುದು ಸ್ಮಶಾನ ಮನೆಗೆ ತರುವುದು ಎರಡೂ ಒಂದೇ. ಕಾಲು ದಪ್ಪವಿದ್ದ ಹೆಣ್ಣನ್ನಾಗಲಿ ಮೊಣಕಾಲು ಬಡಿದಾಡುವ ಹೆಣ್ಣನ್ನು ತರಬಾರದು. ಮೆಳ್ಳೆಗಣ್ಣಿನ ಅದರಲ್ಲೂ ಎಡಗಣ್ಣು ಮೆಳ್ಳೆಗಣ್ಣಿರುವ ಸೊಸೆ ಮನೆಗೆ ಬಂದರೆ ಬಹಳ ಒಳ್ಳೆಯದಂತೆ. ಕೂಡು ಹುಬ್ಬು, ಕಾಡಿಗೆಗಣ್ಣು ಇದ್ದರೂ ಚೆಂದವೆಂದು ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವಾಗ ಮುತ್ತೈದೆಯರು ಅಂಗಪರೀಕ್ಷೆ ನಡೆಸುತ್ತಾರೆ.

ಇದರಲ್ಲಿ ಹೆಣ್ಣು ಮಗಳು ಒಪ್ಪಿಗೆಯಾದರೆ ಅದೇ ದಿನ ಕೊಬರಿಯ ಹೋಳು, ಉತ್ತುತ್ತಿ, ಕಲ್ಲು ಸಕ್ಕರೆ, ಎಲೆ ಅಡಿಕೆ, ಬಾಳೆಹಣ್ಣುಗಳಿಂದ ಕನ್ಯೆಯ ಮಡಿಲು ತುಂಬುತ್ತಾರೆ. ಇದು ಕನ್ಯೆಯನ್ನು ಒಪ್ಪಿದ್ದರ ಸಂಕೇತವಾಗಿರುತ್ತದೆ. ಇಷ್ಟಾದ ಮೇಲೆ ಅವರ ಮನೆಯಲ್ಲಿ ಒಂದು ಕಪ್ಪು ಚಹಾ ಸಹ ಕುಡಿಯದೆ ವರ ಮತ್ತು ವರನ ಮನೆಯವರು ನೋಡಲು ಹೆಣ್ಣಿನ ಕಡೆಯವರನ್ನು ಆಹ್ವಾನಿಸಿ ಹಿಂತಿರುಗುತ್ತಾರೆ.

ಹೆಣ್ಣಿನವರು ವರನ ಮನೆಗೆ ಬಂದಾಗ ಯಥಾಪ್ರಕಾರ ಹೆಣ್ಣಿನ ಕಡೆಯವರೂ ಶುಭ ಶಕುನಗಳನ್ನು ನಿರೀಕ್ಷಿಸುತ್ತಾರೆ. ಅದಾದ ನಂತರ ಗಂಡಿನ ಮನೆತನ ಒಪ್ಪಿತವಾದರೆ ಮಾತುಕತೆ ಆಡಿ ಮುಗಿಸುತ್ತಾರೆ. ಹಿಂದೆ ತೆರಕೊಡುವ ಪದ್ಧತಿ ಇದ್ದು ಈಗ ವರದಕ್ಷಿಣೆ ಬಂದಿದೆ. ಗಂಡಿನ ಕಡೆಯವರು ಹೆಣ್ಣಿಗೆ ಕೊಡಬಹುದಾದ ವಸ್ತುಗಳನ್ನು ಹೆಣ್ಣಿನ ಕಡೆಯವರು ಗಂಡಿಗೆ ಕೊಡಬಹುದಾದುದನ್ನು ನೀಡುವಂತೆ ತೀರ್ಮಾನಿಸುತ್ತಾರೆ. ಇದೆಲ್ಲಕ್ಕೂ ಒಪ್ಪಿಕೊಂಡ ನಂತರ ಬಂಧುತ್ವ ಬೆಳೆಸುವುದು ಖಾತ್ರಿಯಾದರೆ ಅನ್ನ, ಕೆಂಪು ಸಕ್ಕರೆ, ತುಪ್ಪದ ಸಿಹಿ ಊಟ ಮಾಡಿಸುತ್ತಾರೆ. ಇಲ್ಲಿ ಯಾವುದೇ ಕಾರ ಪದಾರ್ಥ ಬಳಸಲಾಗುವುದಿಲ್ಲ. ಆ ದಿನ ರಾತ್ರಿ ಅಥವಾ ಮರುದಿನ ಬೆಳಿಗ್ಗೆ ಹೋಳಿಗೆ ಊಟ ಮಾಡುವರು. ಅಲ್ಲಿಗೆ ಎರಡೂ ಕಡೆಯವರು ಸಂಬಂಧ ಬೆಳೆಸುವುದಕ್ಕೆ ಒಪ್ಪಿಕೊಂಡ ಹಾಗೆ.

ಒಪ್ಪಿಗೆಯ ಸಿಹಿ ಊಟ ಮಾಡಿದ ನಂತರ ಗಂಡಿನ ಮನೆಯವರು ಒಳ್ಳೆಯ ದಿವಸ ನೋಡಿ ವೀಳ್ಯ ತಿದ್ದಿ ನಿಶ್ಚಯ ಕಾರ್ಯ ಮಾಡುತ್ತಾರೆ. ಈ ದಿನ ಸಂಪ್ರದಾಯದಂತೆ ಗಂಡಿನ ಮನೆಯವರು ತಾವು ಕೊಡಬೇಕಾಗಿರುವ ‘ಬಾಜ’ಗಳನ್ನೆಲ್ಲ ತೆಗೆದುಕೊಂಡು ಬಂದು ಊರಿನ ಹನುಮಂತದೇವರ ಗುಡಿಯಲ್ಲಿ ಕುಳಿತಿರುತ್ತಾರೆ. ಅವರು ಬಂದ ಸುದ್ದಿ ಕೇಳಿದ ಹೆಣ್ಣಿನವರು ಒಂದು ಕೊಡ ನೀರನ್ನು ತೆಗೆದುಕೊಂಡು

ಅವರನ್ನು ಸ್ವಾಗತಿಸಲು ಹೋಗುತ್ತಾರೆ. ಮೊದಲು ಒಬ್ಬ ಮುತ್ತೈದೆ ಮತ್ತು ಒಬ್ಬ ಗಂಡು ಮಗ ಇಬ್ಬರೇ ಮೂವತ್ತೆರಡು ಸೇರು ಅಕ್ಕಿಯನ್ನೂ, ಎರಡು ಕೊಬರಿ, ಒಂದು ಬಿಳಿ ಕುಬಸವನ್ನೂ ತೆಗೆದುಕೊಂಡು ಕನ್ಯೆಯ ಮನೆಗೆ ಹೋಗುತ್ತಾರೆ. ಹೀಗೆ ಬಂದ ಈ ನೂತನ ಬಂಧುಗಳಿಗೆ ತಮಾಷೆಗೋಸ್ಕರ ಮುಸುರೆ ನೀರು ಕೊಡುತ್ತಾರೆ. ಆ ನೀರಿನಿಂದ ಅವರೇನಾದರೂ ಮುಖ ತೊಳೆದುಕೊಂಡರೆ ಎಲ್ಲರೂ ನಗುತ್ತಾರೆ. ಮೊದಲೇ ಊಹಿಸಿದ್ದ ನೆಂಟರು ಮುಖ ತೊಳೆಯದಿದ್ದರೆ ಅವರ ಜಾಣತನಕ್ಕೆ ಮೆಚ್ಚಿಗೆ ಸೂಚಿಸಿ ಬೇರೆ ನೀರು ಕೊಡುತ್ತಾರೆ. ನಂತರ ಊಟಕ್ಕೆ ನೀಡಿದಾಗಲೂ ಜೋಳದ ದಂಟಿನ ಸಣ್ಣ ಸಣ್ಣಗೆ ಕತ್ತರಿಸಿದ ಬೆಂಡನ್ನು ಕಲಸಿದ ಅನ್ನ ಸಕ್ಕರೆಯಂತೆ ಕೊಡುತ್ತಾರೆ. ಈ ಹಾಸ್ಯ ಪ್ರಸಂಗಗಳೂ ಕೂಡ ಆಚರಣೆಯ ಒಂದು ಭಾಗವಾಗಿರುತ್ತವೆ.

ಊಟ ಮಾಡಿದ ನಂತರ ಇವರಿಬ್ಬರೇ ಹಿಂತಿರುಗಿ ಗುಡಿಗೆ ಹೋಗುತ್ತಾರೆ. ಅಲ್ಲಿಂದ ಅವರನ್ನೂ ಕೂಡಿಕೊಂಡು ಉಡಿ ತುಂಬುವ ಕಾರ್ಯಕ್ಕೆ ಮತ್ತೆ ಕನ್ಯೆಯ ಮನೆಗೆ ಬರುತ್ತಾರೆ. ಈಗ ಕುಲಸ್ಥರೆಲ್ಲರೂ ಭಾಗಿಯಾಗುತ್ತಾರೆ. ಜತೆಗೆ ಊರಿನ ಪಂಚರುಗಳನ್ನು ಕೂಡ ಆಹ್ವಾನಿಸಲಾಗಿರುತ್ತದೆ. ಈ ಹಿಂದೆ ಮಾತನಾಡಿದ್ದಂತೆ ಕೊಡಬೇಕಾದ ಆಭರಣಗಳನ್ನೂ ಈ ದಿನ ಕನ್ಯೆಗೆ ತಂದು ಕೊಡಬೇಕು. ಕನ್ಯೆಯು ಅವುಗಳನ್ನು ತೊಟ್ಟುಕೊಳ್ಳಬೇಕು. ಅಲ್ಲದೆ ವೀಳ್ಯಜಂಬ್ರದ ಸೀರೆಯನ್ನು ಉಡಿಸಬೇಕು. ಕನ್ಯೆಯನ್ನು ಅಲಂಕರಿಸಿದ ಮೇಲೆ ಹಸೆ ಮೇಲೆ ಕೂರಿಸಿ ಮುತ್ತೈದೆಯರು ಹೆಣ್ಣುಮಕ್ಕಳು 'ಅಕ್ಷತೆ' (ಶಾಶೆ) ಇಡುತ್ತಾರೆ. ಸೋಬಾನೆ ಪದಗಳೊಂದಿಗೆ ಕೊಬರಿ, ಕಲ್ಲುಸಕ್ಕರೆ, ಅಕ್ಕಿ, ಉತ್ತುತ್ತಿ, ಎಲೆ ಅಡಿಕೆಗಳನ್ನು ಉಡಿಗೆ ತುಂಬುತ್ತಾರೆ. ಗಂಗಾಳದಲ್ಲಿ ತುಂಬಿಟ್ಟ ಅಡಕೆಯನ್ನು ಕನ್ಯೆಯು ಹಿಡಿತುಂಬ ಮೂರು ಸಾರಿಯೂ, ಎಲೆಯನ್ನು ಎರಡು ಬಾರಿಯೂ ತೆಗೆದುಕೊಳ್ಳುತ್ತಾಳೆ. ಆಗ ನಾಲ್ಕು ಜನ ಮುತ್ತೈದೆಯರು ಅವಳ ಬಾಯಿಗೆ ಸಕ್ಕರೆ ಹಾಕುತ್ತಾರೆ.

ಇಷ್ಟೆಲ್ಲ ಆದ ಮೇಲೆ 'ಹಿರೇಕುರುಬ ಅಥವಾ ಒಗ್ಗಯ್ಯ' ಕಟ್ಟೆಯಲ್ಲಿ ಕುಳಿತು ಕುಲಗುರು, ಮಾಲೀಗೌಡ, ಪೋಲೀಸ್‌ಗೌಡ ಇವರಿಗೆಲ್ಲ ಎಲೆ ತೆಗೆದಿಡುತ್ತಾನೆ. ಇವರೆಲ್ಲ ಈ ಕಾರ್ಯಕ್ಕೆ ಬರಲಿ, ಬಾರದಿರಲಿ ಅವರ ಪಾಲಿನ ಎಲೆಯನ್ನು ಅವರಿಗೆ ಮುಟ್ಟಿಸಬೇಕು. ಇದು ಉಣ್ಣೆಕಂಕಣ ಕುರುಬರಲ್ಲಿ ಕೈವಾಡದವರು ವೀಳ್ಯ ಹಂಚುವುದು ಎನ್ನಿಸಿಕೊಳ್ಳುತ್ತದೆ. ನಂತರ ಅಲ್ಲಿ ಸೇರಿದವರಿಗೆಲ್ಲ ವೀಳ್ಯ ಮತ್ತು ಸಕ್ಕರೆಯನ್ನು ಹಂಚುತ್ತಾರೆ. ಇಲ್ಲಿಗೆ ಈ ಕನ್ಯೆಗೆ ಈ ವರ ಎಂದು ಸಂಬಂಧ ನಿಶ್ಚಯವಾಗುತ್ತದೆ. ಈ ನಿಶ್ಚಯ ಕಾರ್ಯವಾದ ಮೇಲೆ ಸಂಬಂಧವನ್ನು ಎರಡೂ ಕಡೆಯವರು ಮುರಿಯಲಾಗದು.

ವರನ ಮನೆಯಲ್ಲಿ ಮದುವೆಗೆ ಐದು ಅಥವಾ ಒಂಭತ್ತು ದಿನ ಮುಂಚೆ ಲಕ್ಷ್ಮೀ ಪೂಜೆಯೊಂದಿಗೆ ಹತ್ತಿಕಂಕಣ ಕುರುಬರ ವಿವಾಹಕ್ಕೆ ಚಾಲನೆ ದೊರೆಯುತ್ತದೆ. ಆ ದಿನ ಮನೆಯವರೆಲ್ಲ ಶುಚಿರ್ಭೂತರಾಗಿ ತುಂಬಿದ ಬಿಂದಿಗೆಯನ್ನು ಬಂಗಾರದ ಒಡವೆಗಳಿಂದ ಅಲಂಕರಿಸಿ ಅದರ ಮುಂದೆ ಲಕ್ಷ್ಮಿ ಸೀರೆ ಫಲ

ತಾಂಬೂಲ ಇಟ್ಟು ಪೂಜಿಸುವರು. ಲಕ್ಷ್ಮೀಸೀರೆ ಪೂರ್ಣ ಕೆಂಪು ವರ್ಣದ್ದಾಗಿರಬೇಕು. ಬೇರೆಯಾದ ಬಣ್ಣದ ಎಳೆಯೂ ಇರಬಾರದೆಂಬುದು ನಿರ್ಬಂಧ. ಹೀಗೆ ಪೂಜಿಸುವ ಬಿಂದಿಗೆಯೇ ಲಕ್ಷ್ಮಿ. ಅಂದು ಸಿಹಿ ಅಡಿಗೆಯನ್ನು ಮಾಡಲು ವರನ ಕಡೆಯ ಮುತ್ತೈದೆಯರು ಬರಬೇಕು. ಅವರೂ ಸ್ನಾನ ಮಾಡಿ ಅಡುಗೆಗೆ ತೊಡಗಬೇಕು. ಮಾಡುವ ಅಡಿಗೆಯ ಪರಿಮಳ ಅಥವಾ ಕಮರು ಹೊರ ಹೋಗದಂತೆ ಕಿಟಕಿ ಬಾಗಿಲುಗಳನ್ನು ಮುಚ್ಚಬೇಕು. ಪೂಜೆ ಮುಗಿದು ನೈವೇದ್ಯ ಆಗುವವರೆಗೆ ಕಿಟಕಿ ಬಾಗಿಲು ತೆರೆಯುವಂತಿಲ್ಲ.

ಲಕ್ಷ್ಮಿಗೆ ನೀಡಲಾದ ನೈವೇದ್ಯವು ವರನ ಮನೆತನದ ಅಣ್ಣತಮ್ಮಂದಿರು ಊಟ ಮಾಡಬೇಕು. ಅಂದು ಮಾಡಿದ ಅಡುಗೆಯ ಒಂದು ಅಗುಳನ್ನು ಹೊರಗೆ ಹಾಕುವಂತಿಲ್ಲ. ಎಲ್ಲಿಗೂ ತುಂಬಿ ಕಳುಹಿಸುವಂತಿಲ್ಲ. ಅದು ಮುಗಿಯುವವರೆಗೂ ಬಂಧು ಬಳಗ ಆಪ್ತೇಷ್ಟರೆಲ್ಲರೂ ಕೂಡಿ ಊಟ ಮಾಡಬೇಕು. ಮದುವೆಯಾಗಿ ಗಂಡನ ಮನೆಗೆ ಹೋಗುವ ಮನೆಯ ಹೆಣ್ಣು ಮಗಳಿಗೂ ಊಟಕ್ಕೆ ನೀಡುವಂತಿಲ್ಲ. ಊಟ ಮಾಡಿದ ಎಂಜಲು ಕೂಡ ಹೊರ ಚೆಲ್ಲುವಂತಿಲ್ಲ. ಮನೆಯಲ್ಲೇ ಒಂದು ಮೂಲೆಯಲ್ಲಿ ಗುಂಡಿ ತೋಡಿ ಎಂಜಲು ಮುಸುರೆ ನೀರನ್ನು ಅದರಲ್ಲಿ ಹಾಕಿ ಮುಚ್ಚುತ್ತಾರೆ. ಅಲ್ಲದೆ ಲಕ್ಷ್ಮಿಪೂಜಾ ದಿನ ಮತ್ತು ಮಾರನೆಯ ದಿನ ಮನೆಯಲ್ಲಿ ಗುಡಿಸಿದ ಕಸವನ್ನು ಹೊರ ಎಸೆಯುವಂತಿಲ್ಲ. ಮನೆಯ ಯಾವುದೇ ಸಾಮಾನನ್ನು ಹೊರಗಿನ ಯಾರಿಗೂ ನೀಡುವುದಿಲ್ಲ. ಕಾರಣ ಲಕ್ಷ್ಮಿ ಕಾರ್ಯದಲ್ಲಿ ಈ ದಿವಸ ಯಾವ ರೀತಿಯಲ್ಲೂ ಲಕ್ಷ್ಮಿಯನ್ನು ಹೊರಗೆ ಕಳುಹಿಸಬಾರದು. ಆ ದಿನ ಲಕ್ಷ್ಮಿಯನ್ನು ಹೊರಗೆಹೋಗಲು ಬಿಟ್ಟರೆ ಮುಂದೆ ಇನ್ನೆಂದೂ ಲಕ್ಷ್ಮಿ ಮನೆ ತುಂಬುವುದಿಲ್ಲ ಎಂಬ ನಂಬಿಕೆಯಿಂದಾಗಿ ಈ ಆಚರಣೆಯು ಕಟ್ಟುನಿಟ್ಟಾಗಿ ಪಾಲನೆಯಾಗುತ್ತದೆ.

ಲಕ್ಷ್ಮೀಪೂಜೆಯ ಮರುದಿನ ಲಗ್ನ ಪತ್ರ ಕಟ್ಟುವ ಆಚರಣೆ. ಈ ಕಾರ್ಯಕ್ಕೆ ಲಿಂಗಾಯತ ಜಂಗಮ ಅಥವಾ ಬ್ರಾಹ್ಮಣ ಪುರೋಹಿತರನ್ನು ಕರೆಸುತ್ತಾರೆ. ಕುಲದ ಹಿರಿಯರು, ಕುಲಗುರುಗಳು, ಪೂಜಾರಿಗಳು ಎಲ್ಲರೂ ಸೇರುತ್ತಾರೆ. ಕೆಲವು ಸಾರಿ ಊರಿನ ಗಣ್ಯರನ್ನು ಕರೆಸುವುದು ರೂಢಿ. ಪುರೋಹಿತರ ಹಸ್ತದಿಂದ ಎರಡು ಲಗ್ನಪತ್ರಿಕೆ (ಒಂದು ಕನ್ಯೆಯ ಮನೆಗೆ, ಇನ್ನೊಂದು ಗಂಡಿನ ಮನೆಗೆ) ಸಿದ್ಧಪಡಿಸುವರು. ಹಾಗೆ ಬರೆದುದನ್ನು ಕುಳಿತು ಸಭೆ ಎದುರು ಓದಿ ನಂತರ ಅರಿಶಿನ ಕುಂಕುಮ ಹಚ್ಚಿ ಪೂಜಿಸುತ್ತಾರೆ. ಗಂಡನ ಮನೆಯಲ್ಲಿ ಜರುಗುವ ಈ ಕಾರ್ಯಕ್ಕೆ ಕನ್ಯೆಯ ಕಡೆಯವರು ಬರಬೇಕೆಂಬ ನಿಯಮವಿಲ್ಲ. ಇದಕ್ಕೆ 'ಕರಾರುಪತ್ರ ಹುಟ್ಟಿಸುವುದು' ಎಂದು ಕರೆಯುತ್ತಾರೆ.

ಲಗ್ನ ಪತ್ರವಾದ ಮೇಲೆ ಕನ್ಯೆಯ ಮನೆಯಲ್ಲಿ ತುಪ್ಪದ ಊಟಕ್ಕೆ ಹೋಗುವ ಕಾರ್ಯಕ್ರಮ, ಮೊದಲೇ ಮಾತುಕತೆಯಾಡಿದಂತೆ ತುಪ್ಪದ ಸೀರೆ ಜೊತೆಗೆ ಉಡಿ ತುಂಬುವ ಕಾರ್ಯ ನಡೆಯುತ್ತದೆ. ಈ ಕಾರ್ಯಕ್ಕೆ ಎಷ್ಟು ಜನ ಬೇಕಾದರೂ ಹೋಗಬಹುದು. ಆದರೆ ಬರುವಾಗ ಗಾಡಿಯನ್ನು ಅಲ್ಲೇ ಬಿಟ್ಟು ಬರಬೇಕು. ಕಾರಣ ಆ ಬಂಡಿಯಲ್ಲಿ ಕನ್ಯೆಯನ್ನು ವರನ ಮನೆಗೆ ಮದುವೆ ಕಾರ್ಯಕ್ಕೆ ಕರೆದೊಯ್ಯುವುದು ಇದರ ಮೂಲ ಉದ್ದೇಶ.

ದೇವರೂಟ ಯಾವಾಗಲೂ ತಾಳಿ ಕಟ್ಟುವ ಹಿಂದಿನ ದಿನ. ಇದು ಗಂಡಿನ ಮನೆಯಲ್ಲಿ ಜರುಗುವ ಕಾರ್ಯಕ್ರಮ. ಹೆಣ್ಣಿನ ಮನೆಯ ತುಪ್ಪದೂಟದ ದಿನವಾಗಬಹುದು ಅಥವಾ ಮರುದಿನವಾಗಬಹುದು. ಊರಿನ ಹಿರಿಯರನ್ನೆಲ್ಲಾ ಕರೆದು ಊಟ ಹಾಕುವ ಸಮಾರಂಭವೇ ದೇವರೂಟ. ಕಾರಣ ಇವರೆಲ್ಲ ಊರ ದೈವದವರು ಎಂಬ ಭಾವನೆ. ದೇವರೂಟದ ದಿನವೇ ಗೌರಿಪೂಜೆ. ಅಂದರೆ ಒಳಕಲ್ಲು ಮತ್ತು ಬೀಸುವ ಕಲ್ಲುಗಳ ಪೂಜೆ. ಇವು ಗೌರಿಯ ಸಂಕೇತ. ಇವುಗಳ ಜೊತೆಗೆ ಶಾವಿಗೆ ಹೊಸೆಯುವ ಮಣೆಯನ್ನೂ ಪೂಜಿಸುತ್ತಾರೆ. ಇದು ಹೆಣ್ಣು ಮಕ್ಕಳ ಪೂಜೆಯಾಗಿರುವುದು ವಿಶೇಷ.

ಅದೇ ದಿನ ಕನ್ಯೆಯನ್ನು ಕರೆದುಕೊಂಡು ಕನ್ಯೆಯ ಮನೆಯವರು ವರನ ಊರಿಗೆ ಬರುತ್ತಾರೆ. ಬಂದವರು ಊರ ಹೊರಗೆ ನಿಂತು ಬಂದಿರುವ ಸೂಚನೆಗಾಗಿ ನಾಲ್ಕೈದು ಜನರನ್ನು ಮುಂದಾಳುಗಳಾಗಿ ವರನ ಮನೆಗೆ ಕಳುಹಿಸುತ್ತಾರೆ. ವರನ ಮನೆಯವರು ಈ ಮುಂದಾಳುಗಳು ಬಂದ ಕೂಡಲೇ ಸಿಹಿ ಊಟ ಮಾಡಿಸುತ್ತಾರೆ. ನಂತರ ಕಳಸ ಸಮೇತರಾಗಿ ವಾದ್ಯವಿಶೇಷಗಳಿಂದ ಬೀಗರನ್ನು ಇದಿರುಗೊಳ್ಳಲು ಬರುತ್ತಾರೆ. ಎದುರುಗೊಂಡು ಸ್ವಾಗತಿಸಿದ ಬೀಗರನ್ನು ಕರೆದುತಂದು ಬಿಡದಿ ಮನೆಯಲ್ಲಿ ಬಿಡುತ್ತಾರೆ. ಈ ಬಿಡದಿ ಮನೆ ದೇವಸ್ಥಾನವಾಗಬಹುದು. ಯಾವುದೇ ಮನೆಯಾಗಬಹುದು. ಅಲ್ಲಿ ಉಳಿದ ಬೀಗರಿಗೆ ಸರ್ವ ವ್ಯವಸ್ಥೆ ಮಾಡಿಕೊಡಲಾಗುತ್ತದೆ. ನಂತರ ವಾದ್ಯಸಮೇತ ಮಸಿಟ್ಟು ತೆಗೆದುಕೊಂಡು ಕನ್ಯೆಯ ಕಡೆಯವರಿಗೆ ಒಪ್ಪಿಸಿ ಪುನಃ ಅದೇ ವಾದ್ಯ ಸಮೇತ ಅವರನ್ನು ಊಟಕ್ಕೆ ಕರೆತರುತ್ತಾರೆ. ಊಟದ ನಂತರ ಅದೇ ವಾದ್ಯ ವಿಶೇಷಗಳೊಂದಿಗೆ ಬಿಡದಿ ಮನೆಗೆ ಕರೆದು ಬಿಟ್ಟು ಹೋಗುತ್ತಾರೆ.

ಐದು ತೆಂಗಿನ ಗರಿ ತಂದು ಮನೆಯ ತಲೆಬಾಗಿಲ ಮುಂದೆ ಚಪ್ಪರ ಹಾಕುವುದು, ಸುತ್ತಲೂ ತಳಿರು ತೋರಣ ಕಟ್ಟುವುದು, ಚಪ್ಪರವನ್ನು ವರನ ಕಡೆಯವರೇ ಹಾಕಬೇಕು. ಈ ಚಪ್ಪರ ಅಲ್ಲದೆ ಇದರ ಮೇಲೊಂದು ದೊಡ್ಡ ಚಪ್ಪರವಿರುತ್ತದೆ. ಇದು ಕೂಡ ದೇವರೂಟದ ದಿನವೇ ನಡೆಯುವಂಥದು. ಮೊದಲೇ ಶುಭ್ರಗೊಳಿಸಲಾದ ವರನ ಮನೆಗೆ ವರನ ಅಕ್ಕ ಅಥವಾ ತಂಗಿಯರು ಹೊರಗಿನ ಗೋಡೆಯ ಮೇಲೆ ಸುಣ್ಣ ಕೆಮ್ಮಣ್ಣಿನಿಂದ ಕೈಯ ಮುದ್ರೆಯೊತ್ತುವರು. ಇದು ಆ ಮನೆಯ ಮೇಲೆ ಹೆಣ್ಣು ಮಗಳ ಆಶೀರ್ವಾದವಿರಲಿ ಎಂಬುದೇ ಆಗಿದೆ. ಇದಕ್ಕೆ 'ಚಟ್ಟು ಬಿಡಿಸುವುದು' ಎನ್ನುವರು. ಹೆಣ್ಣು ಮಗಳಿಂದ ಚಟ್ಟು ಬಿಡಿಸಿದ್ದಾದ ಮೇಲೆ ಆಕೆಯ ಗಂಡನಿಂದ ಕೆಮ್ಮಣ್ಣಿನ ತಿಳಿಯಿಂದ ಜೋರು ಬಿಡಿಸುತ್ತಾರೆ. ನಂತರ ಈ ಗಂಡ ಹೆಂಡಿರಿಬ್ಬರನ್ನು ಒನಕೆಯ ಮೇಲೆ ಕೂರಿಸಿ ನೀರು ಹಾಕಿ ಇಬ್ಬರಿಗೂ ಹೊಸ ಬಟ್ಟೆ ಕೊಡುವುದು ಪದ್ಧತಿ. ಅಲ್ಲದೆ ಹೆಣ್ಣು ಮಗಳಿಗೆ ಉಡಿ ತುಂಬಿ ಮಗಳು ಕೇಳಿದ್ದನ್ನು ಕೊಡಬೇಕಾಗುತ್ತದೆ.

ಹತ್ತಿಕಂಕಣ ಕುರುಬರಲ್ಲಿ ವರನ ಮನೆಯ ತಲೆಬಾಗಿಲ ಬಲಭಾಗದಲ್ಲಿ ಒಂದು ನಿರ್ದಿಷ್ಟ ಜಾಗದಲ್ಲಿ ಗೋಡೆಗೆ ಹೊಂದಿಕೊಂಡಂತೆ ಒಂದು ಅಂಗುಲದ ಎತ್ತರ ಹಸಿ ಮಣ್ಣಿನ ಕಟ್ಟೆಯೊಂದನ್ನು ಕಟ್ಟುತ್ತಾರೆ. ಆ ಕಟ್ಟೆಯ ಗೋಡೆಯ ಮೇಲೆ ಈಶ್ವರಲಿಂಗ, ಎರಡು ಎತ್ತುಗಳು, ಅದರ ಕೆಳಗೆ ಬಾಸಿಂಗ ಮತ್ತು ಸೂಸಗೆ (ಹೂವಿನದಂಡೆ) ಇವೆರಡೂ ಮದುವಣಿಗ ಮತ್ತು ಮದುವಣಗಿತ್ತಿಯರ ಪ್ರತೀಕ. ಇದರ ಕೆಳಗೆ

ಕಳಸ ಹಿಡಿದ ಒಬ್ಬಳು ಮುತ್ತೈದೆ. ಅವಳ ಹಿಂದೆ ತುಂಬಿದ ಕೊಡ ಹೊತ್ತ ನಾಲ್ಕು ಜನ ಮುತ್ತೈದೆಯರ ಚಿತ್ರಗಳನ್ನು ಬರೆಯುತ್ತಾರೆ. ಹೀಗೆ ಬರೆದ ಚಿತ್ರಗಳನ್ನು ಮತ್ತು ಕಟ್ಟೆಯನ್ನು ಪೂಜಿಸುವುದನ್ನು 'ಶಾಶೆಕಟ್ಟೆ ಪೂಜೆ' ಎನ್ನುವರು.

ಕಳಸ ಹಿಡಿದ ಮುತ್ತೈದೆಯರೊಡಗೂಡಿ ವಾದ್ಯಸಮೇತ ಊರಿನ ಹತ್ತಿರವಿರುವ ಒಂದು ಬಸುರೀ ಗಿಡಕ್ಕೆ ಹೋಗಿ ಅಲ್ಲಿ ಮೊಸರನ್ನದ ಎಡೆ ಇಟ್ಟು ಪೂಜೆ ಮಾಡಿ ಅದರಲ್ಲಿ ಒಂದು ಸಣ್ಣ ಕೊಂಬೆ ಕಡಿದುಕೊಂಡು ಮನೆಗೆ ತಂದು ಸಾಶೆಕಟ್ಟೆ ಪಕ್ಕದಲ್ಲಿ ಹಸಿಮಣ್ಣಿನ ಗುಡ್ಡೆ ಹಾಕಿ ಅದರೊಳಗೆ ನೆಡುತ್ತಾರೆ. ಆ ಗುಡ್ಡೆಯ ಒಳಕ್ಕೆ ನೆನಗಡಲೆ, ಸಜ್ಜೆ, ಗೋಧಿ ಹಾಕುತ್ತಾರೆ. ಇದಕ್ಕೆ 'ಹಾಲಗಂಭ ತಂದು ನೆನಗಡಲೆ ಹಾಕೋದು' ಎನ್ನುತ್ತಾರೆ. ಇದಾದ ನಂತರ ಒಂದು ಹೊಸ ಮಡಿಕೆಯ ತುಂಬ 'ಹೆಂಬುಲ' ತುಂಬುತ್ತಾರೆ. ಹೆಂಬುಲವೆಂದರೆ ಬಿಳಿಯ ಜೋಳವನ್ನು ಕುಟ್ಟಿ, ಅದರಿಂದ ಬಂದ ಹೊಟ್ಟನ್ನು ಪ್ರತ್ಯೇಕಿಸಿ ಆ ಹೊಟ್ಟನ್ನು ನೀರಿನಲ್ಲಿ ಕುದಿಸುವುದರಿಂದ ತಯಾರಾಗುವ ವಸ್ತು. ಇದು ಮನೆಯ ಹೆಣ್ಣು ಮಕ್ಕಳು ತಯಾರಿಸುವುದು ಮತ್ತು ಈ ಹೆಂಬುಲ ಕೊಡಲಾರದ ವಸ್ತು. ನಂತರ ಒಂದು ಹೊಸ ಮುಚ್ಚಳದ ತುಂಬ ಹರಳೆಣ್ಣೆ ಹಾಕಿ ಒಂದು ರುಂಬಾಲದ ಬಟ್ಟೆಯಿಂದ ಕಕ್ಕಡದಂತೆ ಬತ್ತಿ ಮಾಡಿ ಹೆಂಬುಲ ತುಂಬಿದ ಮಗೆ ಮೇಲೆ ಇಡುತ್ತಾರೆ. ಆ ಮನೆಯಲ್ಲಿ ಹುಟ್ಟಿದ ಹೆಣ್ಣು ಮಗಳು ಅಥವಾ ಆ ಮನೆತನಕ್ಕೆ ಸೇರಿದ ಹೆಣ್ಣು ಮಗಳು ಬತ್ತಿ ಹಚ್ಚಿ ಪೂಜಿಸುತ್ತಾರೆ. ಇದಕ್ಕೆ 'ಜ್ಯೋತಿಮಗೆ ಪೂಜೆ' ಎನ್ನಲಾಗುತ್ತದೆ. ಆ ದೀಪವನ್ನು ಮೂರು ದಿನಗಳವರೆಗೆ ಆರದಂತೆ ನೋಡಿಕೊಳ್ಳಬೇಕು.

ಕನ್ಯೆ ಮತ್ತು ಗಂಡು ಇಬ್ಬರನ್ನು ಒಟ್ಟಿಗೆ ಒನಕೆ ಮೇಲೆ ಕೂರಿಸಿ, ಅರಿಶಿನ ಸೀಗೆ ಹಚ್ಚಿಸಿ, ಮುತ್ತೈದೆಯರಿಂದ ನೀರುಹಾಕಿಸಿ ಹೊಸಬಟ್ಟೆ ಉಡಿಸಿ ಉಡಿ ತುಂಬಿದ ಮೇಲೆ ಮದುವಣಗ, ಮದುವಣಗಿತ್ತಿಯರಾದಂತೆ. ಇದಾದ ನಂತರ ಐರಾಣಿ ತರುವ ಕಾರ್ಯಕ್ರಮವಿದ್ದು ತಾಳಿಕಟ್ಟುವ ಸಮಯದಲ್ಲಿ ಉಪಯೋಗಿಸುವ ವಿಶಿಷ್ಟ ರೀತಿಯ ಮಣ್ಣಿನ ಪಾತ್ರೆಗಳನ್ನು ಈ ಮೊದಲೇ ಕುಂಬಾರನಿಗೆ ಹೇಳಿ ಮಾಡಿಸಿರುತ್ತಾರೆ. ಇದಕ್ಕೆ 'ಐರಾಣಿ' ಎನ್ನುತ್ತಾರೆ. ಇವೆಲ್ಲವನ್ನು ತೆಗೆದುಕೊಂಡು ಬಂದು ದೇವಾಲಯದಲ್ಲಿ ಇಟ್ಟುಕೊಂಡಿರುತ್ತಾರೆ. ಕಳಸ ವಾದ್ಯ ಸಮೇತರಾಗಿ ದೇವಸ್ಥಾನಕ್ಕೆ ಹೋಗಿ ಆ ಐರಾಣಿಗಳನ್ನು ಪೂಜಿಸಿ ಕುಂಬಾರನಿಗೆ ಪದ್ಧತಿ ಪ್ರಕಾರ ಕೊಡಬೇಕಾಗಿರುವ ಚಾಜ ಕೊಟ್ಟು ಐರಾಣಿಗಳನ್ನು ತೆಗೆದುಕೊಂಡು ಬರುತ್ತಾರೆ.

ಹತ್ತಿಕಂಕಣ ಹಾಗೂ ಉಣ್ಣೆಕಂಕಣ ಕುರುಬರಲ್ಲಿ ಕಂಕಣ ಕಟ್ಟುವುದು ಪ್ರಮುಖವಾದುದು. ಕುಲದ ಪೂಜಾರಿಗಳು ವೀಳ್ಯದೆಲೆ ಮತ್ತು ಅರಿಶಿನದ ಕೊನೆಯಿಂದ ಹತ್ತಿದಾರ ಉಪಯೋಗಿಸಿ ಕೈಗೆ ಕಟ್ಟುವ ಕಂಕಣಗಳನ್ನು ತಯಾರಿಸುತ್ತಾರೆ. ಇವುಗಳನ್ನು ಲಗ್ನಕಾರ್ಯದಲ್ಲಿ ನಿರತರಾಗುವ ಕಾರ್ಯಕರ್ತರುಗಳಾದ ಮುತ್ತೈದೆ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಬಲಗೈಗಳಿಗೆ ಕಟ್ಟುತ್ತಾರೆ. ಈ ಕಂಕಣ

ಕಟ್ಟಿಸಿಕೊಳ್ಳುವವರೂ ವರನ ಬಣದವರೇ ಆಗಿರಬೇಕು. ಇನ್ನು ಮುಂದೆ ಲಗ್ನದ ಎಲ್ಲ ಕಾರ್ಯಗಳನ್ನು ಕಂಕಣಧಾರಿಗಳೇ ನೆರವೇರಿಸಬೇಕು.

ಕಂಕಣಧಾರಿಗಳ ಪೈಕಿ ಇಬ್ಬರು ಮುತ್ತೈದೆಯರು, ಇಬ್ಬರು ಗಂಡುಮಕ್ಕಳು ನಾಲ್ಕು ಮಣ್ಣಿನ ಹೊಸ ಕೊಡಗಳನ್ನೂ, ಕೈಯಲ್ಲೊಂದು ಪ್ರತಿಯೊಬ್ಬರೂ ಮಗೆಯನ್ನು ತೆಗೆದುಕೊಂಡು ವಾದ್ಯ ಕಳಸ ಸಮೇತ ಗಂಗೆ ತರಲು ಹೋಗುತ್ತಾರೆ. ಆ ಕೊಡ ಮಗೆಗಳಿಗೂ ಕಂಕಣ ಕಟ್ಟಲಾಗಿರುತ್ತದೆ. ಗಂಗೆ ಇರುವಲ್ಲಿಗೆ ಹೋಗಿ ಗಂಗೆ ಪೂಜೆ ಮಾಡಿ ಕೊಡಗಳ ಒಳಗೆ ಎಲೆಕಂಕಣ ಕಟ್ಟಿದ ಒಂದೊಂದು ಜೋಳದ ದಂಟನ್ನು ಇಳಿಬಿಟ್ಟುಕೊಂಡು ಮನೆಗೆ ತರುತ್ತಾರೆ. ನಂತರ ಮನೆ ಮುಂದಿನ ದೊಡ್ಡ ಚಪ್ಪರದ ಕೆಳಗೆ ಚೌಕಾಕಾರದಲ್ಲಿ ನೀರು ತುಂಬಿದ ಹೊಸ ಕೊಡಗಳನ್ನಿಟ್ಟು ಅವುಗಳ ಮಗ್ಗುಲಲ್ಲಿಯೇ ಮಗೆಗಳನ್ನು ಇಟ್ಟುಕೊಂಡು ಬೀಳದಂತೆ ಹಿಡಿದು ಕೂರುತ್ತಾರೆ. ಅದಾದ ಮೇಲೆ ನಾಲ್ಕು ಕೊಡಗಳಿಗೆ ಒಂದು ಹತ್ತಿ ನೂಲಿನ ಉಂಡೆಯಿಂದ ಐದು ಸುತ್ತು ಸುತ್ತುತ್ತಾರೆ. ಇದಕ್ಕೆ ಸುರಿಗೆ ಸುತ್ತುವುದು ಎನ್ನುವರು. ಇದಾದ ನಂತರ ಶಾಸ್ತ್ರಗಳನ್ನು ಪೂರೈಸುತ್ತಾರೆ. ಹಾಲಗಂಬಕ್ಕೆ ಸುರಗಿ ಸುತ್ತುವರು.

ಮನೆಯಲ್ಲಿರುವ ದೇವರ ಜಗಲಿ ಮುಂದಾಗಲಿ ಅಥವಾ ಜ್ಯೋತಿ ಮಗೆ ಮುಂದಾಗಲಿ ಒಂದು ಕರಿಕಂಬಳಿ (ಗೊಂಗಡಿ) ಹಾಸಿ ಅದರ ಮೇಲೆ ಮದುಮಗನನ್ನು ಕೂರಿಸಿ ಪೂಜಾರಿ ಅಥವಾ ಕಂಕಣಧಾರಿಗಳು ಗಂಡಿನ ತಲೆಗೆ ರುಮಾಲು ಸುತ್ತಿ ಬಾಸಿಂಗ ಕಟ್ಟುತ್ತಾರೆ. ಅದೇ ರೀತಿ ಹೆಣ್ಣಿಗೆ ಸೂಸುಗ (ಮಲ್ಲಿಗೆ ಹೂವಿನ ದಂಡೆ) ಕಟ್ಟುತ್ತಾರೆ.

ತಾಳಿ ಕಟ್ಟುವ ಮುಹೂರ್ತ ಮೊದಲೇ ನಿಗಧಿಯಾಗಿರುವುದರಿಂದ ಮನೆಯ ತಲೆಬಾಗಿಲಲ್ಲಿ ನಿರ್ಮಿಸಿರುವ ಸಣ್ಣ ಚಪ್ಪರದ ಕೆಳಗೆ ಬಲಭಾಗದಲ್ಲಿ ಒಂದು ತೂರುವ ತಟ್ಟೆಯಲ್ಲಿ ಜೋಳದಕ್ಕಿಯನ್ನು ಹಾಕಿ ಇಟ್ಟಿರುತ್ತಾರೆ. ಮತ್ತೊಂದೆಡೆ ಅದೇ ಹಂದರದ ಎಡಭಾಗದಲ್ಲಿ ಬೀಸುವ ಕಲ್ಲನ್ನು ಇಡುತ್ತಾರೆ. ತೂರುವ ತಟ್ಟೆಯಲ್ಲಿ ವರನನ್ನೂ ಬೀಸುವ ಕಲ್ಲಿನ ಮೇಲೆ ಕನ್ಯೆಯನ್ನು ನಿಲ್ಲಿಸುತ್ತಾರೆ. ಇದಾದ ಮೇಲೆ ಪುರೋಹಿತರು ಅಥವಾ ಜಂಗಮರು ಶ್ಲೋಕ ಪಠಣ ಮಾಡಿ ಕೊಬ್ಬರಿ ಹೋಳೊಂದರಲ್ಲಿ ಇಟ್ಟಿದ್ದ ಮಾಂಗಲ್ಯವನ್ನು ನೆರೆದ ಸಮಸ್ತರ ಹಸ್ತದಿಂದ ಮುಟ್ಟಿಸಿ ಗಂಡಿನ ಕೈಯಿಂದ ಹೆಣ್ಣಿನ ಕೊರಳಿಗೆ ತಾಳಿ ಕಟ್ಟಿಸುತ್ತಾರೆ. ಹೀಗೆ ತಾಳಿ ಕಟ್ಟುವಾಗ ಎಲ್ಲರೂ ಆಶೀರ್ವಾದ ರೂಪವಾಗಿ ಅರಿಶಿನ ಅಕ್ಕಿ ಕಾಳನ್ನು ಬೀರುತ್ತಾರೆ. ತಾಳಿ ಕಟ್ಟಿದ ಕೂಡಲೇ ವಧುವಿನ ಸೆರಗಿನ ತುದಿ ಮತ್ತು ವರನ ಮೇಲೊದಿಕೆಯ ಪಂಚೆಯ ತುದಿಯನ್ನು ಹಿಡಿದು ಬ್ರಹ್ಮಗಂಟು ಹಾಕುತ್ತಾರೆ. ಇದು ಶಾಶ್ವತವಾದ ಬಂಧನದ ಸಂಕೇತವಾಗಿರುತ್ತದೆ.

ಇದಾದ ನಂತರ ಹತ್ತಿಕಂಕಣ ಕುರುಬರಲ್ಲಿ ಭೂಮಿ ತುಳಿಯೋ ಶಾಸ್ತ್ರ, ಅರಿಶಿನ ಎಣ್ಣೆ ಹಾಕೋ ಶಾಸ್ತ್ರ ಉಡಿಕೆ ಹೊಡಿಯೋದು, ಹೆಣ್ಣೊಪ್ಪಿಸುವಶಾಸ್ತ್ರ, ಹಂದರಬ್ಯಾಟಿ ಮುಂತಾದವುಗಳೊಂದಿಗೆ ವಿವಾಹದ ಆಚರಣೆ ಮುಕ್ತಾಯವಾಗುತ್ತದೆ. ಇದಲ್ಲದೆ ವಿಧವೆಯರೇ ಶಾಸ್ತ್ರಕಾರ್ಯ ಮುಗಿಸುವ 'ಅರಣೆಮದುವೆ' ಎಂಬ ಪದ್ಧತಿಯೊಂದು ಹತ್ತಿಕಂಕಣ ಕುರುಬರಲ್ಲಿ ಕಂಡುಬರುತ್ತದೆ.

“ಹತ್ತಿಕಂಕಣ ಕುರುಬರು ಮತ್ತು ಉಣ್ಣೆಕಂಕಣ ಕುರುಬರಲ್ಲಿ ಕಂಕಣ ಕಟ್ಟಲೇ ಬೇಕು. ಕಂಕಣಕ್ಕೆ ಬಹಳ ಪ್ರಾಶಸ್ತ್ಯವಿದೆ. ಶಿವಪಾರ್ವತಿಯರೇ ಬಂದು ಕುರುಬರ ಮೂಲ ಪುರುಷ ಉಂಡಾಡು ಪದ್ಮಣ್ಣನಿಗೆ ಮದುವೆಯಲ್ಲಿ ಕಂಕಣ ಕಟ್ಟಿದ್ದರೆಂದು ಹೇಳಲಾಗುವುದು”[೩೭] ಎಂದು ಎಚ್.ಚಂದ್ರಪ್ಪನವರು ಅಭಿಪ್ರಾಯಪಡುತ್ತಾರೆ.

ಹತ್ತಿಕಂಕಣದವರಲ್ಲಿ ಹೆಣ್ಣು ಗರ್ಭಧರಿಸಿದ ಏಳನೇ ತಿಂಗಳಲ್ಲಿ ಗಂಡನ ಮನೆಯವರು ‘ಮಡಿಲಕ್ಕಿ ಶಾಸ್ತ್ರ’ ಮಾಡಿದರೆ ತವರುಮನೆಯವರು ಸೀಮಂತ ಮಾಡುತ್ತಾರೆ. ಐದು ಜನ ಮುತ್ತೈದೆಯರು ಬಂದು ಅವಳ ಬಯಕೆಗನುಗುಣವಾದ ಸಿಹಿಯೂಟವನ್ನು ಗಂಡನ ಮನೆಯಲ್ಲೇ ತಯಾರು ಮಾಡಿ ಊಟಮಾಡಿಕೊಂಡು ಚೊಚ್ಚಲು ಬಾಣಂತಿತನಕ್ಕೆ ಮಗಳನ್ನು ಕರೆದೊಯ್ಯುತ್ತಾರೆ. ಗರ್ಭಿಣಿಗೆ ಪ್ರಸವ ವೇದನೆ ಕಾಣಿಸಿಕೊಂಡಾಗ ಅನುಭವಸ್ಥ ಸೂಲಗಿತ್ತಿ ಅಥವಾ ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಗೆ ಕರೆದೊಯ್ದು ಹೆರಿಗೆ ಮಾಡಿಸುವರು. ಪ್ರಸವವಾದ ನಂತರದ ಮೂರು, ಹನ್ನೊಂದು ದಿನಗಳಿಗೆ ಸೂತಕ ತೆಗೆದುಕೊಂಡರೆ ಒಂಭತ್ತನೇ ತಿಂಗಳಿಗೆ, ವರ್ಷ ತುಂಬುವ ಮೊದಲೇ ನಾಮಕರಣ ಶಾಸ್ತ್ರ ಮಾಡುತ್ತಾರೆ.

ಹತ್ತಿಕಂಕಣ ಕುರುಬರಲ್ಲಿ ಹೆಣ್ಣು ಮೊದಲಬಾರಿಗೆ ಋತುಮತಿಯಾಗುವುದು ಅಥವಾ ಮೈನೆರೆದರೆ ಉಣ್ಣೆಕಂಕಣ ಕುರುಬರಂತಹ ಆಚರಣೆಗಳನ್ನೇನೂ ನಡೆಸದೆ ಸ್ನಾನ ಮಾಡಿಸಿಕೊಂಡು ಒಳಗೆ ಕರೆದುಕೊಳ್ಳುತ್ತಾರೆ. ಸಾಧ್ಯವಾದರೆ ಒಸಗೆ ಕಾರ್ಯಕ್ರಮ ಏರ್ಪಡಿಸಿ ಸಿಹಿಯೂಟವನ್ನು ಮಾಡಿಸುತ್ತಾರೆ. ಇತ್ತೀಚೆಗೆ ಹೆಣ್ಣುಮಕ್ಕಳಿಗೆ ಅದಕ್ಕೊದಗುವ ಖರ್ಚಿಗೆ ಬಟ್ಟೆ ಆಭರಣ ಕೊಡಿಸುತ್ತಾರೆ.

ಹತ್ತಿಕಂಕಣದವರ ಶವಸಂಸ್ಕಾರವು ಸಾಧಾರಣವಾಗಿ ಉಣ್ಣೆಕಂಕಣದವರ ಆಚರಣೆಗಳನ್ನೇ ಹೋಲುತ್ತವೆ. ಇವರಲ್ಲಿಯೂ ಶವವನ್ನು ಸುಡುವ ಅಥವಾ ಹೂಳುವ ಎರಡೂ ಪದ್ಧತಿಗಳು ಆಚರಣೆಯಲ್ಲಿವೆ. ಮೂರನೇ ದಿನ ಮತ್ತು ಹನ್ನೊಂದನೇ ದಿವಸ ಕೂಳು ಹಾಕುವ ಅಥವಾ ತಿಥಿ ಮಾಡುವ ಪರಿಪಾಠವಿದೆ. ಇದು ಉಣ್ಣೆಕಂಕಣದವರಿಗಿಂತ ಭಿನ್ನವಾಗೇನೂ ಕಾಣುವುದಿಲ್ಲ.

ಹಂಡೆ ಕುರುಬರು

ಮಾನವನು ತನ್ನ ಬದುಕಿನಲ್ಲಿ ಕೆಲವೊಂದು ನಿಯಮ ನಿಷ್ಠೆ ಕಟ್ಟಳೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಂದಿದ್ದಾನೆ. ಅವುಗಳ ಅಡಿಯಲ್ಲಿ ಬದುಕನ್ನು ಸಾಗಿಸುತ್ತ ಇರಬೇಕಾದುದು ಆತನ ಹಿತ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿದೆ. ಜನನದಿಂದ ಮರಣದವರೆಗೆ ನಡುವೆ ಬರುವ ಬದುಕು ಪವಿತ್ರ ವಾಗಬೇಕಾದರೆ ಆತನು ತನ್ನ ಜೀವನದ ಶುದ್ಧೀಕರಣ ಪ್ರಕ್ರಿಯೆಗೆ ಒಳಗುಮಾಡಿಕೊಳ್ಳುತ್ತಾನೆ. ಇವುಗಳೇ ಮುಂದೆ ಆಚರಣೆ ಮತ್ತು ಸಂಪ್ರದಾಯಗಳಾಗಿ ರೂಪುಗೊಂಡವು.

ಸಂಪ್ರದಾಯ ಆಚರಣೆಗಳು ಜೀವನದಷ್ಟೇ ಜಟಿಲವೂ, ಸಂಕೀರ್ಣವೂ ಆದುದರಿಂದ ಅವುಗಳ ವಿಂಗಡಣೆ ಸಮರ್ಪಕವಾಗಲಾರದು. ಈ ಆಚರಣೆಗಳೆಲ್ಲಾ ಆಯಾ ಜನರ ಮನೋಭಾವನೆಗಳಿಗೆ ತಕ್ಕಂತೆ ಗುಂಪಿನಿಂದ ಗುಂಪಿಗೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ

ಸ್ವರೂಪಗಳನ್ನು ತಾಳುತ್ತದೆ. ಭೌಗೋಳಿಕವಾಗಿ ಹಂಡೆ ಕುರುಬರು ಕರ್ನಾಟಕ ಮತ್ತು ನೆರೆಯ ರಾಜ್ಯಗಳೊಂದಿಗೆ ಸಂಬಂಧವಿರುವುದರಿಂದ ಆಚರಣೆಗಳು ಮತ್ತು ಸಂಪ್ರದಾಯಗಳು ಸಹಜವಾಗಿ ಭಿನ್ನವಾಗಿರುತ್ತವೆ.

ಹಂಡೆ ಕುರುಬರ ಜನನದಿಂದ ಮರಣದವರೆಗಿನ ಕ್ರಿಯಾವಿಧಿಗಳು ಹೆಚ್ಚು ಕಡಿಮೆ ವೀರಶೈವ ಧರ್ಮಕ್ಕೆ ಸಂಬಂಧಿಸಿದವುಗಳಾಗಿರುತ್ತವೆ. ಈ ಜನಸಮುದಾಯದಲ್ಲಿ ಮಗು ಜನಿಸಿದರೆ ಸೂಲಗಿತ್ತಿಯಿಂದ ಸ್ವಚ್ಛಗೊಳಿಸಿ ಹೆರಿಗೆಯ ಮಲಿನವನ್ನು ಒಂದು ಮಡಿಕೆಯಲ್ಲಿ ಹಾಕಿ ಮುಚ್ಚಿ ಯಾರೂ ತಿರುಗಾಡದ ಜಾಗದಲ್ಲಿ ಒಂದು ಅಡಿಯಷ್ಟು ಗುಂಡಿ ತೋಡಿ ಮಾಸ ಹಾಕಿದ ಮಡಿಕೆಯನ್ನು ಇಡುವರು. ನಂತರ ಸೂಲಗಿತ್ತಿಗೆ ಸ್ನಾನ ಮಾಡಲು ಹೇಳಿ ಸೂತಕ ನಿವಾರಣೆಗಾಗಿ ಎಲೆ ಅಡಿಕೆ, ಐದು ಹಸಿರು ಬಳೆ, ಒಂದು ಕುಬಸದ ಬಟ್ಟೆ, ಉಡಕ್ಕಿ ನೀಡಿ ಗೌರವಿಸಲಾಗುತ್ತದೆ. ಅದರ ಜೊತೆಗೆ ಶಕ್ತ್ಯಾನುಸಾರ ದಕ್ಷಿಣೆ ನೀಡುವರು. ಇವರಲ್ಲಿ ಒಂದು ಮತ್ತು ಎರಡನೇ ಹೆರಿಗೆಯು ತವರು ಮನೆಯಲ್ಲೇ ಆಗಬೇಕೆಂಬ ನಿಯಮವಿದೆ. ಹಿರೇಮಠದ ಸ್ವಾಮಿಗಳನ್ನೂ ಕರೆಸಿ ಸೂತಕ ತೆಗೆಸಿ ಕೊರಳಿಗೆ ಲಿಂಗವನ್ನು ಕಟ್ಟಲು ಹೇಳುವರು. ಪಂಚಾಕ್ಷರಿ ಮಂತ್ರವನ್ನು ಹೇಳಿ ನಾಮಕರಣ ಮಾಡುವರು.

ಶಿಶು ಜನಿಸಿದ ವೇಳೆ ಚೆನ್ನಾಗಿದೆಯೋ ಇಲ್ಲವೋ ತಿಳಿಯಲು ಜಾತಕ ಟಿಪ್ಪಣೆ ಬರೆಸುವರು. ಝುಂಡೆ ಕುರುಬರಲ್ಲಿರುವಂತೆ ಇವರೂ 'ಐದೇಸಿ' ಕಾರ್ಯ ನೆರವೇರಿಸುತ್ತಾರೆ. ಐದನೆಯ ದಿವಸ ರಾತ್ರಿ ಸೆಟಿಗೆವ್ವ ಬಂದು ಕೂಸಿನ ಹಣೆಬರಹ ಬರೆಯುತ್ತಾಳೆಂದು ನಂಬುವ ಸಂಪ್ರದಾಯ ಇವರಲ್ಲಿದೆ. ಕೂಸಿಗೆ ಸೂಲಗಿತ್ತಿಯಿಂದ ಹೊಸಬಟ್ಟೆ ಧರಿಸಿ, ಕೂಸಿನ ಕೆಳಗಡೆ ಐದು ಧಾನ್ಯಗಳ ರಾಶಿ ಹಾಕುತ್ತಾರೆ. ಅದರ ಮೇಲೆ ಒಂದು ಗುಂಡುಕಲ್ಲು ಇಡುವರು. ಕೂಸು ಎಂದರೆ ಒಂದು ಕಾಡು ಕಲ್ಲು. ಅದು ಯಾವ ರೀತಿ ಬೆಳೆಯುತ್ತದೆಂದು ತಿಳಿಯುವ ಹಣೆಬರಹವನ್ನು ಬರೆಸುವ ಆಚರಣೆಯಾಗಿದೆ. ಕೂಸು ಹುಟ್ಟಿದ ಹದಿಮೂರು ಅಥವಾ ಹದಿನಾಲ್ಕನೇ ದಿನ ನಾಮಕರಣೋತ್ಸವ ಮಾಡುವರು. ಇವರಲ್ಲಿ ಕೂಸಿನ ತಂದೆಯಾದವನು ಮೂರುತಿಂಗಳು ಮುಖ ನೋಡಬಾರದೆಂಬ ನಂಬಿಕೆಯೂ ಇದೆ.

ಹಂಡೆ ಕುರುಬರ ಮನೆತನದಲ್ಲಿ ಕೂಸು ಹುಟ್ಟಿದ ಮೂರು ತಿಂಗಳಿಗೆ ಜಾವುಳ ಇಳಿಸುವ ಕಾರ್ಯ ಮಾಡುತ್ತಾರೆ. ತಮ್ಮ ಮನೆತನದಲ್ಲಿ ದೇವರ ಗದ್ದುಗೆಯ ಹತ್ತಿರ ಕಂಬಳಿ ಹಾಸಿ ಅದರ ಮೇಲೆ ತಾಯಿ ಮತ್ತು ಮಗುವನ್ನು ಕೂರಿಸಿ, ಕೂಸಿನ ಸೋದರಮಾವ ಎಲೆಯನ್ನು ಕತ್ತರಿಯ ಆಕಾರಮಾಡಿ ತಲೆಗೆ ಮುಟ್ಟಿಸುತ್ತಾನೆ. ಇದು ಎಲೆಕತ್ತರಿ ಮುಟ್ಟಿಸುವ ಶಾಸ್ತ್ರ ಎಂದು ಹೇಳುವರು. ದೇವರ ಹೆಸರಲ್ಲಿ ಎರಡು ಮೂರು ವರ್ಷದವರೆಗೆ ಕೂದಲು ಬಿಟ್ಟು ಪೂಜಾರಿಯಿಂದ ಐದು ಕೂದಲು ಕತ್ತರಿಸಿ ನದಿ ಅಥವಾ ಹಳ್ಳದಲ್ಲಿ ಬಿಡುವರು. ಅಂದು ಬಂಧು ಬಾಂಧವರಿಗೆ ಭೋಜನವನ್ನೇರ್ಪಡಿಸುವರು.

ಹೆಣ್ಣುಮಕ್ಕಳು ವಯಸ್ಸಿಗೆ ಬಂದ ಮೇಲೆ ಋತುಮತಿಯಾಗುವುದು ಸಹಜ ಪ್ರಕ್ರಿಯೆ. ಇದರಲ್ಲಿ ಋತುಮತಿಯಾದ ಹೆಣ್ಣುಮಗಳನ್ನು ಐದರಿಂದ ಹತ್ತು ದಿನಗಳವರೆಗೆ ಪ್ರತ್ಯೇಕ ಸ್ಥಳದಲ್ಲಿರಿಸುವರು. ಈ ದಿವಸದಲ್ಲಿ ಮೈಲಿಗೆಯೆಂದು ಅಡಿಗೆಯ ಮನೆ ಮತ್ತು ದೇವರ ಮನೆಗಳಿಗೆ ಪ್ರವೇಶವಿಲ್ಲ. ಅವಳಿಗೆ

ಪ್ರತಿದಿನ ಅರಿಶಿನ ಎಣ್ಣೆ ಹಚ್ಚಿ ಸ್ನಾನ ಮಾಡಿಸುವರು. ಹಸಿರು ಸೀರೆ ಕುಪ್ಪಸ ತೊಡಿಸುವರು. ಹೆಣ್ಣು ಮಗಳಿಗೆ ಬಾಲ್ಯ ವಿವಾಹವಾಗಿದ್ದರೆ ಗಂಡನ ಮನೆಯವರಿಗೆ ತಿಳಿಸುತ್ತಾರೆ. ಗಂಡನಿಗೆ ಗೊತ್ತಿಲ್ಲದಂತೆ ಬಣ್ಣವನ್ನು ಸಿಂಪಡಿಸುತ್ತಾರೆ. ಅಂದು ಹೆಣ್ಣು ಗಂಡನ್ನು ಕರೆಸಿ ಹೊಸಬಟ್ಟೆ ಧರಿಸಿ ಕರಿಯ ಕಂಬಳಿ ಮೇಲೆ ಸಾಸುವೆ ಹೊಯ್ದು ಕೂರಿಸುತ್ತಾರೆ.

ಮದುವೆ ಎನ್ನುವುದು ಮಾನವನ ಜೀವನದ ಪ್ರಮುಖ ಘಟ್ಟ. ದೈಹಿಕವಾಗಿ ಮತ್ತು ಮಾನಸಿಕವಾಗಿ ಗಂಡು ಹೆಣ್ಣು ಬದುಕಿಗೆ ಪದಾರ್ಪಣೆ ಮಾಡುವ ಅವಸ್ಥೆಯಾಗಿರುತ್ತದೆ. ಹೆಣ್ಣುಮಕ್ಕಳಿಗೆ ಹಲವು ಸಂಸ್ಕಾರಗಳಾದರೆ ಗಂಡಿಗೆ ಮೊದಲ ಸಂಸ್ಕಾರ ದೀಕ್ಷೆ ಇದಾಗಿರುತ್ತದೆ. ಇವರಲ್ಲಿಯೂ ಹೆಣ್ಣನ್ನು ನೋಡಲು ಗಂಡಿನ ಮನೆಯವರು ಬರುವುದು. ಹೋಗುವಾಗ ಶಕುನಗಳನ್ನು ಪಾಲಿಸುವುದು, ಬೆಡಗುಗಳ ಬಗ್ಗೆ ಮಾಹಿತಿ ಪಡೆಯುವುದು ಹೆಣ್ಣು ನೋಡಲು ಐದು ಅಥವಾ ಹನ್ನೊಂದು ಜನರು ಹೋಗುವ ಸಂಪ್ರದಾಯವುಂಟು. ಕನ್ಯೆ ಒಪ್ಪಿಗೆಯಾದರೆ ಮಾತ್ರ ಒಪ್ಪು ವೀಳ್ಯಕ್ಕೆ ಬರುವುದಾಗಿ ಮಾತು ಕೊಡುತ್ತಾರೆ. ಅಂದೇ ಕೊಟ್ಟು ತರುವ ಮಾತುಕತೆಯಾಡಿ ಹಿರೇಮಠದ ಸ್ವಾಮಿಗಳು ಗುರುಹಿರಿಯರ ಸಮಕ್ಷಮದಲ್ಲಿ ಸಕ್ಕರೆ ವೀಳ್ಯ ಅಡಕೆ ಹಂಚುವರು. ಇಲ್ಲಿಗೆ ಹೆಣ್ಣಿನ ನಿಶ್ಚಯ ಕಾರ್ಯ ಮುಗಿದಂತಾಗುತ್ತದೆ.

ಮದುವೆಗೆ ಮುನ್ನ ಮನೆಯನ್ನು ಸಾರಣೆಗೊಳಿಸುತ್ತಾರೆ. ತಮ್ಮ ಧರ್ಮದ ಪ್ರಕಾರ ಇವರು ದೇವತಾ ಕಾರ್ಯ ಮಾಡುವರು. ಕುಲದೇವರ ಪೂಜೆಯ ನಂತರ ಮದುವೆಯ ಆಚರಣೆಗಳಿಗೆ ಅಣಿಯಾಗುತ್ತಾರೆ. ಮೊದಲಿಗೆ ಒಳಕಲ್ಲು ಪೂಜೆಯೊಂದಿಗೆ ಇವರ ಶಾಸ್ತ್ರ ಸಂಪ್ರದಾಯಗಳು ಆರಂಭವಾಗುತ್ತವೆ. ನೆಂಟರಿಷ್ಟರೆಲ್ಲ ಸೇರಿ ತಂತಮ್ಮ ಮನೆಯಿಂದ ಒಂದು ತಾಟಿನಲ್ಲಿ ಜೋಳ ಬೆಳ್ಳುಳ್ಳಿ ಹಾಕಿಕೊಂಡು ಬಂದಿರುತ್ತಾರೆ. ಸಾಯಂಕಾಲ ಈ ಪೂಜೆ ನಡೆಯುವುದು ವಿಶೇಷ. ಒಳ್ಳಿಗೆ ಮತ್ತು ಒನಕೆಗೆ ಗಂಡು ಹೆಣ್ಣಿನಂತೆ ಕಂಕಣ ಕಟ್ಟಿ ಪೂಜೆ ಮಾಡುವರು. ಇಲ್ಲವೇ ಭತ್ತವನ್ನು ಒರಳಿಗೆ ಹಾಕಿ ಕುಟ್ಟುವರು. ಆಗ ಐದು ಪದಗಳನ್ನಾಡುವ ಸಂಪ್ರದಾಯವಿದೆ.

ಒಳಕಲ್ಲು ಪೂಜೆಯ ಮರುದಿನ ಮುಂಜಾನೆ ಶುಭವೇಳೆಯಲ್ಲಿ ಕಂಭವೊಂದನ್ನು ನಿಲ್ಲಿಸುತ್ತಾರೆ. ಇದಕ್ಕೆ ಹಂದರಗಂಬವೆಂದು ಕರೆಯುತ್ತಾರೆ. ಗಂಡಿನ ಸೋದರಮಾವನಾದವನು ಮಡಿಯಿಂದ ಬಸುರಿಗಿಡದ ಟೊಂಗೆಯಾಗಲಿ, ಆಲದ ಟೊಂಗೆಯಾಗಲಿ ಕಡಿದುತಂದು ಹನುಮಂತ ದೇವಾಲಯದಲ್ಲಿ ಇರಿಸುವನು. ಮದುವೆ ಮನೆಯಿಂದ ಹನುಮಂತ ದೇವಸ್ಥಾನಕ್ಕೆ ಹೋಗಿ ಅವನನ್ನು ಮೆರವಣಿಗೆಯಿಂದ ಕರೆದು ತರುತ್ತಾನೆ. ಬರುವಾಗ ಹಾಸ್ಯಕ್ಕಾಗಿ ಬಣ್ಣ ಹಚ್ಚುವರು. ಹಾಲಗಂಬಕ್ಕೆ ವಾಡಿಕೆಯಂತೆ ಕುಂಕುಮ ಕೇಸರಿ ಸುಣ್ಣ ಬಳಿದು ಹಸಿರೆಲೆಗಳಿಂದ ಅಲಂಕರಿಸುವರು.

ಹಂದರ ಹಾಕಿದ ರಾತ್ರಿ ವೇಳೆಯಲ್ಲಿ ತಮ್ಮ ಮನೆತನದ ದೇವತಾಕಾರ್ಯ, ಮೈಲಾರಲಿಂಗನ ಬೆಳಕು ಹೊರಡಿಸುವ ಕಾರ್ಯ, ವೀರಭದ್ರನ ಗುಗ್ಗಳ ಕಾರ್ಯ, ರಂಗಸ್ವಾಮಿಯ ಜಾಗರಣೆ ಇತ್ಯಾದಿಗಳನ್ನು ನೆರವೇರಿಸಿ ಲಗ್ನಪತ್ರಿಕೆ ತರಿಸಿದ ನಂತರ ಹಿರೇಮಠದ ಸ್ವಾಮಿಗಳು ಕುಲಬಾಂಧವರು ಹೆಣ್ಣನ್ನು ಕರೆತರಲು

ಹೋಗುವರು. ಆಗ ಹೆಣ್ಣಿನ ಮನೆಯಲ್ಲಿ ಭೋಜನವನ್ನು ಬಂದವರಿಗೆಲ್ಲಾ ಮಾಡಿಸುತ್ತಾರೆ. ನಂತರ ವರನ ಊರಿಗೆ ಕನ್ಯೆಯನ್ನು ಕರೆತರುತ್ತಾರೆ. ಲಗ್ನಮಾಡುವ ಮಿತಿಯ ದಿವಸ ಗಂಡು ಹೆಣ್ಣು ಸೂಚಿಸಿದ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಗಂಡಿನವರು ಎದುರುಗೊಂಡು ಜರೆಯುವ ಪದಗಳನ್ನು ಹಾಡುವರು. ಉಭಯ ಸ್ವಾಮಿಗಳ ನಡುವೆ ನಡೆಯುವ ಶಿಷ್ಟಾಚಾರ, ಎದುರುಗೊಳ್ಳುವ ಸಂಪ್ರದಾಯ ಕಡ್ಡಾಯವಾಗಿ ಹನುಮಂತದೇವರ ಗುಡಿಯ ಮುಂದೆ ನಡೆಯುವುದು. ಇಬ್ಬರು ಸ್ವಾಮಿಗಳ ಪಾದ ಪೂಜೆಯನ್ನು ಮಾಡುತ್ತಾರೆ.

ಇದಾದನಂತರ ಅರಿಶಿನದ ಕಾರ್ಯ ನೆರವೇರುತ್ತದೆ. ಇದಕ್ಕೆ ಬಳಗದ ಸುರಿಗೆಯೆಂದು ಕರೆಯುವರು. ಈ ಕಾರ್ಯ ಮಾಡುವವರು ಮನೆಯ ಮುಂದೆ ಮಣೆಯನ್ನು ಹಾಕಿ ನಾಲ್ಕು ಮೂಲೆಗೆ ನಾಲ್ಕು ಮಣೆಗಳನ್ನಿಟ್ಟು ಸುರಗಿ ಸುತ್ತುವರು. ಸುರಗಿ ಕಾರ್ಯ ಮುಗಿದ ಮೇಲೆ ಹಂದರದಿಂದ ದೇವರ ಮನೆಗೆ ಬಂದು ನವದಂಪತಿಗಳಿಗೆ ಪುರೋಹಿತರು ದೇವರ ಅನುಗ್ರಹ ಕೋರುವ ಮಂತ್ರ ಉಚ್ಚಾರ ಮುಗಿದ ಮೇಲೆ ನೆರೆದವರೆಲ್ಲ ಅಕ್ಕಿ ಕಾಳು ಹಾಕುವರು. ಮದುಮಗಳ ಕೊರಳಿಗೆ ವರನು ಮಂಗಳ ಸೂತ್ರ ಕಟ್ಟುವನು. ಇದಕ್ಕೆ ದೇವರ 'ಅಕ್ಕಿಕಾಳು' ಎಂದು ಕರೆಯುವರು.

ಮದುವೆಯಾದ ನವದಂಪತಿಗಳನ್ನು ಹೆಣ್ಣಿನ ತವರುಮನೆಗೆ ಅಂದೇ ಕರೆದುಕೊಂಡು ಹೋಗುತ್ತಾರೆ. ಗಂಡಿನ ಮನೆಯಲ್ಲಿ ಮೂರುನೀರು ಆದ ಬಳಿಕ ಹೆಣ್ಣಿನ ಮನೆಯಲ್ಲಿ ಎರಡು ನೀರು ಮಾಡುವ ನಿಯಮವಿರುತ್ತದೆ. ಹೆಣ್ಣು ಬಸುರಿಯಾದಾಗ ಕುಬಸ ಮಾಡುವ ಆಚರಣೆಯೂ ಇದೆ. ಇದಕ್ಕೆ ಇನ್ನಿತರ ಕುರುಬರಲ್ಲಿ 'ಸೀಮಂತ' ಎಂದು ಕರೆಯುಲಾಗುತ್ತದೆ.

ಹುಟ್ಟಿದ ಪ್ರತಿಯೊಂದು ಜೀವಿಗೆ ಸಾವು ಅನಿವಾರ್ಯ. ಆ ನಿಯಮಕ್ಕನುಗುಣವಾದ ಕೆಲವೊಂದು ಆಚರಣೆ ಸಂಪ್ರದಾಯಗಳು ಇವೆ. ಸಾವನ್ನಪ್ಪಿದ ವ್ಯಕ್ತಿಯ ಮನೆಗೆ ಕುಲಭಾಂದವರೆಲ್ಲರೂ ಬಂದುಸೇರುತ್ತಾರೆ. ಶವವನ್ನು ಮನೆಯಿಂದ ಹೊರಗೆ ತಂದು ಒಂದು ಮಣ್ಣಿನ ಮಗೆಯಲ್ಲಿ ಎಣ್ಣೆನೀರು ಹಾಕಿ ತಲೆಯ ಮೇಲಿಟ್ಟು ಅದನ್ನು ಒಡೆಯುತ್ತಾರೆ. ಅನಂತರ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸಿ ಸ್ಥಳೀಯ ಸ್ವಾಮಿಗಳನ್ನು ಕರೆಸುತ್ತಾರೆ. ಇವರು ಶವದ ಬಲತೊಡೆಯ ಮೇಲೆ ಪಾದವಿಟ್ಟು ಹೂ, ಕುಂಕುಮ ವಿಭೂತಿ ಹಚ್ಚಿ ಆರತಿ ಬೆಳಗುವರು. ಶವದ ಹತ್ತಿರವಿಟ್ಟ ದೀಪ ಶವವನ್ನು ರುದ್ರಭೂಮಿಗೆ ಕೊಂಡೊಯ್ಯುವವರೆಗೆ ದೀಪ ಆರದಂತ ನೋಡಿಕೊಳ್ಳುತ್ತಾರೆ. ಅಲ್ಲಿಯವರೆಗೆ ಐದು ಪೂಜೆಯಾಗಬೇಕೆಂಬ ನಿಯಮವಿದೆ. ಶವವನ್ನು ರುದ್ರಭೂಮಿಗೆ ತಂದ ಮೇಲೆ ಗುಂಡಿಯಲ್ಲಿ ಸಿದ್ಧಾಸನ ಭಂಗಿಯಲ್ಲಿ ಕೂರಿಸಿ ಪತ್ರೆ ಏರಿಸಿ ತಾಮ್ರದ ತಗಡುಗಳನ್ನು ಎರಡು ತೊಡೆಯ ಮೇಲೆ, ತಲೆಯ ಮೇಲೆ ಇಡುವರು. ನಂತರ ಶವಸಂಸ್ಕಾರಕ್ಕೆಂದು ಬಂದವರೆಲ್ಲ ಋಣದ ಮಣ್ಣೆಂದು ಕುಣಿಯಲ್ಲಿ ಹಾಕುವರು. ಶವದ ಮೇಲೆ ಗೋಲಾಕಾರ ಮಾಡಿ ಮೇಲೆ ನಂದಿಯ ಮೂರ್ತಿಯನ್ನು ಇಡುವರು. ಕುಲಬಾಂಧವರು, ನೆಂಟರಿಷ್ಟರು ನಂದಿಯ ಮೂರ್ತಿಗೆ ಹೂ ಕುಂಕುಮ ಏರಿಸಿ ಕಾಯಿ ಒಡೆಯುತ್ತಾರೆ.

ವ್ಯಕ್ತಿಯು ನಿಧನವಾದ ಹನ್ನೊಂದನೇ ದಿನಕ್ಕೆ ತಿಥಿ ಮಾಡುವ ಸಂಪ್ರದಾಯವಿದೆ. ಕೆಟ್ಟ ನಕ್ಷತ್ರದಲ್ಲಿ ಸಾವನ್ನಪ್ಪಿದ್ದರೆ ಮನೆಯನ್ನು ಬಿಡುವ ಸಂಪ್ರದಾಯವೂ ಇದೆ. ಒಳ್ಳೆಯ ದಿವಸ ಬಂದ ಮೇಲೆ ಬಾಗಿಲು ತೆಗೆದು ಮನೆಯನ್ನು ಸಾರಣೆ ಮಾಡುವರು. ನಿಧನವಾದ ವ್ಯಕ್ತಿಯ ಹೆಸರಿನಲ್ಲಿ ಬೆಳ್ಳಿಯ ಮುಖವಾಡ ಮಾಡಿಸುವರು. ಆ ದಿವಸ ಸತ್ತವರ ಹೆಸರಿನಲ್ಲಿ ಸೀರೆ ದೋತರ ಇಟ್ಟು ಕುಂಕುಮ ವಿಭೂತಿ ಹಚ್ಚಿ ನೈವೇದ್ಯಕ್ಕಾಗಿ ಅವರು ಇಷ್ಟಪಡುವ ಆಹಾರವನ್ನು ಎಡೆಮಾಡುತ್ತಾರೆ. ಬಂದ ನೆಂಟರಿಷ್ಟರಿಗೆ ಕುಲಬಾಂಧವರಿಗೆ ಭೋಜನ ಮಾಡಿಸುವರು. ಬೆಳ್ಳಿಯ ಮುಖವಾಡವನ್ನು ಹಬ್ಬ ಹರಿದಿನಗಳಲ್ಲಿ ದೇವರ ಜಗುಲಿಯ ಮೇಲೆ ಇಟ್ಟು ಪೂಜಿಸುವರು.

ಹಂಡೆ ಕುರುಬರು ಸಸ್ಯಾಹಾರಿಗಳು, ಧಾರ್ಮಿಕ ಆಚರಣೆಗಳು, ಹಬ್ಬ ಹರಿದಿನಗಳು, ಮದುವೆಯ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡದೆ ಸಸ್ಯಾಹಾರವೇ ನೈವೇದ್ಯವಾಗಿರುತ್ತದೆ. ಮನೆದೇವರುಗಳಾಗಿ ಮೈಲಾರಲಿಂಗೇಶ್ವರ, ರಂಗನಾಥಸ್ವಾಮಿ, ಶ್ರೀ ವೀರಭದ್ರೇಶ್ವರ, ಹಂಪೆಯ ವಿರೂಪಾಕ್ಷ, ಸಂಗಮೇಶ್ವರ, ಸೊನ್ನಲಾಪುರ ಸಿದ್ಧರಾಮೇಶ್ವರ, ರೇವಣ ಸಿದ್ಧೇಶ್ವರ, ದೇವರ ಹಿಪ್ಪರಗಿ ರಾವುತರಾಯ, ಧರೆದೂಳಪ್ಪರನ್ನು ಆರಾಧಿಸುವರು. ಇವುಗಳು ಕುಲದೇವರುಗಳೂ ಹೌದು. ಇದಲ್ಲದೆ ಉಟಗಿ ಉಡುವ ಸಂಪ್ರದಾಯ, ಹಡಲಗಿ ತುಂಬಿಸುವ ಸಂಪ್ರದಾಯಗಳೂ ಪ್ರಮುಖವೆನಿಸಿವೆ. ಒಟ್ಟಾರೆಯಾಗಿ ಹಂಡೆ ಕುರುಬರ ಸಂಪ್ರದಾಯ ಆಚರಣೆಗಳು ವೀರಶೈವೀಕರಣಕ್ಕೆ ಒಳಗಾಗಿದ್ದರೂ ಕುರುಬರ ಸಂಪ್ರದಾಯಗಳ ಮೂಲನೆಲೆಗಳನ್ನು ಗುರ್ತಿಸಬಹುದಾಗಿದೆ.

ಒಡೆಯರು

ಗುರುವಿನವರು, ಅಯ್ನೋರು, ಮಾರಾಯಗೋಳು, ಒಡೇರಯ್ನೋರು ಎಂದು ಕರೆಸಿಕೊಳ್ಳುವ ಹಾಲುಮತ ಸಮುದಾಯದ ಧಾರ್ಮಿಕ ಮುಖಂಡರೇ 'ಒಡೆಯರು', ಒಡೆಯರಿಗೆ ಪರಂಪರಾಯುಕ್ತವಾದ ಒಂದು ಚರಿತ್ರೆಯಿದೆಯೆನ್ನುವುದಕ್ಕೆ ಸಿದ್ಧಮಂಕ ಚರಿತೆ, ತಗರಪವಾಡ, ಹಾಲುಮತೋತ್ತೇಜಕ ಪುರಾಣ, ಸಿದ್ಧಸಿರಿ, ಕುರುಬರ ಚರಿತ್ರೆಗಳಂಥಹ ಕಾವ್ಯ ಪುರಾಣಗಳು ಮಹತ್ವದ ಆಕರಗಳಾಗಿವೆ. ಸ್ಥೂಲವಾಗಿ ಈ ಎಲ್ಲಾ ಕೃತಿಗಳಲ್ಲಿ ಪುರಾಣಗಳ ಮೂಲ ಲಕ್ಷಣಗಳಲ್ಲೊಂದಾದ ಅತಿಮಾನುಷತೆಯನ್ನು ಚಿತ್ರಿಸಿದರೂ ಅಲ್ಲಿ ಚಾರಿತ್ರಿಕ ಅಂಶಗಳಿಗೇನೂ ಕೊರತೆಯಿಲ್ಲ. ಅದೇನೆ ಇರಲಿ ಒಡೆಯರು ತಮ್ಮದೇ ಆದ ಗುರುಪರಂಪರೆಯನ್ನು ಹೊಂದಿರುವುದು ಇವರ ಪ್ರಾಚೀನತೆಯ ದ್ಯೋತಕವಾಗಿದೆ.

ಶಾಂತಮುತ್ತಯ್ಯನಿಗೆ ದೀಕ್ಷೆ ನೀಡಿದ ರೇವಣಸಿದ್ದೇಶ್ವರ ಪರಂಪರೆಯ ಒಡೆಯರನ್ನು ಶಾಂತೊಡೆಯರೆಂದೂ, ಸಿದ್ಧಮಂಕನಿಗೆ ದೀಕ್ಷೆ ನೀಡಿದ ಸಿದ್ಧರಾಮೇಶ್ವರ ಪರಂಪರೆಯ ಒಡೆಯರನ್ನು ಮಂಕೊಡೆಯರೆಂದೂ, ಈ ಎರಡೂ ಸಂಪ್ರದಾಯಗಳ ಜೊತೆಗೆ ಅಮೋಘಸಿದ್ಧ ಒಡೆಯ ಸಂಪ್ರದಾಯವನ್ನೂ ಗುರುತಿಸಲಾಗಿದೆ. ಕರ್ನಾಟಕದಲ್ಲಿ ಈ ಮೂರು ಗುರುಪರಂಪರೆಯ ಮಠಗಳು, ದೇವಾಲಯಗಳು, ಸಂಪ್ರದಾಯ, ಆಚರಣೆ, ನಂಬಿಕೆಗಳು ಭಿನ್ನವಾಗಿದ್ದು ವಿಶಿಷ್ಟತೆಯಿಂದ ಕೂಡಿರುವುದು ಒಡೆಯರ ಗುರುಪರಂಪರೆಗೆ ನಿದರ್ಶನ.

ಕರ್ನಾಟಕ ಪ್ರಾಚೀನ ಸಮುದಾಯಗಳಲ್ಲಿ ಒಂದಾದ ಕುರುಬರ ಒಳಪಂಗಡವಾಗಿರುವ ಒಡೆಯರದು ಒಂದು ವಿಶಿಷ್ಟ ಪರಂಪರೆ. ಲಿಂಗಧಾರಿಗಳೂ, ಕಟ್ಟಾಸಸ್ಯಾಹಾರಿಗಳೂ ಆದ ಇವರು ಲಿಂಗಾಯತ ಜಂಗಮರಂತೆ ನಿಂತು ಕುರುಬರ ಹುಟ್ಟಿನಿಂದ ಹಿಡಿದು ಸಾವಿನವರೆಗೆ ನಡೆಯುವ ಸೂತಕ ನಿವಾರಣೆ, ನಾಮಕರಣ, ಗೃಹಪ್ರವೇಶ, ಮದುವೆ, ಮಂಗಳಕಾರ್ಯ, ಅಂತ್ಯಸಂಸ್ಕಾರಗಳನ್ನು ನಡೆಸಿಕೊಡುವ ಪುರೋಹಿತ ವರ್ಗ, ಧಾರ್ಮಿಕ ಮುಖಂಡರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕಂಡುಬರುವ ಒಡೆಯರೆಲ್ಲರೂ ದಾಯಾದಿಗಳು ಅಥವಾ ಅಣ್ಣತಮ್ಮಂದಿರೆಂಬ ನಂಬಿಕೆಯಿದೆ. ಪುರೋಹಿತ ವರ್ಗವು ಭಕ್ತವರ್ಗದೊಂದಿಗೆ ಸಂಬಂಧ ಬೆಳೆಸುವುದು ವೈಶಿಷ್ಟ್ಯ.

ಗುರುವರ್ಗ ಮತ್ತು ಶಿಷ್ಯ ವರ್ಗದ ನಡುವೆ ಸಂಬಂಧ ಬೆಳೆಸುವುದು ಹಿಂದೂ ಸಮಾಜದಲ್ಲಿ ಅಸಂಭವವೆನಿಸಿದರೂ, ತೀರ ವಿಲಕ್ಷಣವಾದ ಪ್ರಗತಿಪರವೆನಿಸುವ ಮಾನವೀಯವಾದ ಧೋರಣೆ ನಡವಳಿಕೆ ಆಚರಣೆಗಳನ್ನು ಒಡೆಯರ ಒಳಪಂಗಡವು ರೂಢಿಸಿಕೊಂಡಿರುವುದು ಕಂಡು ಬರುತ್ತದೆ. ಅದಕ್ಕಾಗಿ ಕನ್ನಡದ ಹಿರಿಯ ಸಂಶೋಧಕರಾದ ಡಾ.ಎಂ.ಚಿದಾನಂದಮೂರ್ತಿಯವರು "ಕುರುಬ ಜಾತಿಯೊಳಗಿನ ಈ ಒಡೆಯರ ಉಪಜಾತಿ ಭಾರತದಲ್ಲೇ ಅತ್ಯಂತ ವಿಶಿಷ್ಟವೆನ್ನಬಹುದಾದ ಒಂದು ವ್ಯವಸ್ಥೆಯನ್ನು ಹೊಂದಿದೆ. ಆ ಉಪಜಾತಿಯಲ್ಲಿ ಸ್ತ್ರೀಗೆ ದೊರಕಿರುವ ಸ್ಥಾನ ಭಾರತೀಯ ಸ್ತ್ರೀ ಸಮಾಜದ ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ ಅತ್ಯಪೂರ್ವ ಸ್ಥಾನವನ್ನು ಪಡೆದಿದ್ದಾಳೆ. ಒಡೆಯರ ಜನಾಂಗ ಸಮಾಜಶಾಸ್ತ್ರಜ್ಞರ, ಮಾನವಶಾಸ್ತ್ರಜ್ಞರ ಮತ್ತು ಜಾನಪದ ಶಾಸ್ತ್ರಜ್ಞರ ಅಧ್ಯಯನಕ್ಕೆ ಬೆರಗಿನ ವಸ್ತುವಾಗಬಹುದು."[೩೮] ಎಂದು ಹೇಳಿ ಒಡೆಯರ ವಿಶಿಷ್ಟ ಪರಂಪರೆಯ ಬಗ್ಗೆ ಅಧ್ಯಯನಕಾರರ ವಿಶೇಷ ಗಮನವನ್ನು ಸೆಳೆದಿದ್ದಾರೆ.

ಒಡೆಯರ ಸಾಂಸ್ಕೃತಿಕ ಅಧ್ಯಯನವನ್ನು ಮಾಡಲು ಹೊರಟರೆ ಆಚರಣೆ, ಸಂಪ್ರದಾಯ, ನಂಬಿಕೆಗಳನ್ನು ಮೂರು ವಿಧಗಳಾಗಿ ಅಧ್ಯಯನದ ಅನುಕೂಲಕ್ಕೋಸ್ಕರ ವಿಂಗಡಿಸಿಕೊಳ್ಳಬಹುದಾಗಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಇತರೆ ಎಂದು ವಿಂಗಡಿಸಿಕೊಂಡು ವಿಶ್ಲೇಷಿಸಬಹುದಾಗಿದೆ. ಈ ಒಡೆಯರು ಕುರುಬರ ಒಂದು ಒಳಪಂಗಡವಾಗಿದ್ದರೂ ಕೂಡ ಪರಂಪರಾನುಗತವಾದ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಆಧುನಿಕ ಕಾಲಕ್ಕೂ ಉಳಿಸಿಕೊಂಡು ಬಂದಿದ್ದಾರೆ. ಸಮಾಜದ ಮುಂದುವರಿದ ಜನಾಂಗಗಳು ಬಾಯಿ ಚಪಲಕ್ಕೋ, ಪರಿಸ್ಥಿತಿಯ ಒತ್ತಡಕ್ಕೋ ಅಥವಾ ವೈಯಕ್ತಿಕ ಕುತೂಹಲಕ್ಕೋ ಮಾಂಸಾಹಾರದ ರುಚಿ ನೋಡಿರುವ ಸನ್ನಿವೇಶಗಳಿವೆ. ಆದರೆ ಕುರುಬರ ಒಡೆಯರುಗಳು ಎಂಥ ಪರಿಸ್ಥಿತಿಯಲ್ಲೂ ಮಾಂಸಾಹಾರವನ್ನು ಸ್ವೀಕರಿಸದ ಕಟ್ಟಾ ಸಸ್ಯಾಹಾರಿಗಳು. ತಮ್ಮ ಸಂಬಂಧಿಕರೇ ಆದ ಕುರುಬರು ಭಿನ್ನಹಕ್ಕೆ ಒಡೆಯರನ್ನು ಆಹ್ವಾನಿಸಿದ ಸಂದರ್ಭದಲ್ಲಿ ಅವರಿಗೆ ಆ ಮನೆಯವರು ಸ್ನಾನ ಮಡಿಯೊಂದಿಗೆ ಅಡುಗೆಯನ್ನು ಮಾಡಿ ಬಡಿಸುವುದು ಇಂದಿಗೂ ರೂಢಿಯಲ್ಲಿರುವ ಪದ್ಧತಿಯಾಗಿದೆ. ಪ್ರಾಚೀನಕಾಲದಿಂದಲೂ ತಮ್ಮ ಸಂಪ್ರದಾಯ ಆಚರಣೆಗಳನ್ನು ಕಾಳಜಿಪೂರ್ವಕವಾಗಿ ಕಾಪಾಡಿಕೊಂಡು ಬಂದಿದ್ದಾರೆ ಕುರುಬರ ಗುರುಗಳಾದ ಒಡೆಯರು.

ಒಡೆಯರೆಲ್ಲರೂ ಹಿಂದೆಯೇ ಹೇಳಿದಂತೆ ಅಣ್ಣತಮ್ಮಂದಿರಾಗುವುದರಿಂದ ಇವರುಗಳ ಮದುವೆ ಕುರುಬರ ಇತರ ಬೆಡಗಿನವರೊಂದಿಗೇ ನಡೆಯಬೇಕು. ಅಂದರೆ ತಮ್ಮ ಮನೆಗೆ ಕನ್ಯೆಯನ್ನು ತಂದುಕೊಳ್ಳುವಾಗ ಕುರುಬರ ಮನೆಯಿಂದಲೇ ತರುವ ಮತ್ತು ತಮ್ಮ ಮನೆಯ ಹೆಣ್ಣುಮಗಳನ್ನು ಕುರುಬರಿಗೇ ಕೊಡಲಾಗುತ್ತದೆ. ಲಿಂಗಧಾರಿಗಳೂ, ಸಸ್ಯಾಹಾರಿಗಳಾದ ಗುರುವರ್ಗವು ಭಕ್ತವರ್ಗ ಮಾಂಸಹಾರಿಗಳ ಮನೆಗೆ ಕೊಟ್ಟು ತರುವುದು ಆಹಾರ ಮತ್ತು ಜಾತಿಯ ಕಗ್ಗಂಟನ್ನು ಬಿಡಿಸಿಕೊಳ್ಳುವ ರೀತಿಯು ಕುತೂಹಲಕರವೆನಿಸುತ್ತದೆ.

ಒಡೆಯರ ಕುಟುಂಬದಲ್ಲಿ ಕನ್ಯೆಯನ್ನು ನೋಡಲು ಹೊರಡುವಾಗ ಬಳಗದ ಗೌಡ್ರು, ಬುದ್ಧಿವಂತರು, ಕುಲಬಾಂಧವರೊಂದಿಗೆ ಹೋಗುತ್ತಾರೆ. ಕನ್ಯಾನ್ವೇಷಣೆಗೆ ಬಂದ ಬಂಧುಗಳನ್ನು ಪ್ರೀತಿಯಿಂದ ಹಾರೈಕೆ ಮಾಡಿದ ನಂತರ ಹೆಣ್ಣುಮಗಳಿಗೆ ಅಲಂಕರಿಸಿ ಗಂಡಿನ ಕಡೆಯವರು ನೋಡಲನುವಾಗುವಂತೆ ಹಿರಿಯರಿಗೆ ನಮಸ್ಕರಿಸಿ ಒಂದು ಮಣೆ ಅಥವಾ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾಳೆ. ಕನ್ಯಾಪರೀಕ್ಷೆಗೆ ಬಂದ ಗಂಡಿನ ಕಡೆಯ ಹೆಣ್ಣುಮಕ್ಕಳು ತಾವು ತಂದಿರುವ ಮಂಗಳಕರವಾದ ವಸ್ತುಗಳನ್ನು ಮಡಿಲಿಗೆ ತುಂಬುತ್ತಾರೆ. ಇದಕ್ಕೆ 'ಹಣ್ಣು ಇಡುವ ಶಾಸ್ತ್ರ' ಎನ್ನುತ್ತಾರೆ.

ಬಂದ ಒಡೆಯರುಗಳಲ್ಲಿ ಹಿರಿಯರು ಕನ್ಯೆಯ ಹೆಸರು, ದೇವರ ಹೆಸರು ಕೇಳಿ ಧ್ವನಿ ಪರೀಕ್ಷೆ ಮಾಡಿದ ನಂತರ ಎರಡೂ ಕೈಗಳಿಗೆ ವಿಭೂತಿ ಹಚ್ಚಿ ಹಸ್ತರೇಖೆಯ ಪರಿಶೀಲನೆಯಾಗುತ್ತದೆ. ಕನ್ಯೆಯು ಒಪ್ಪಿತವಾದರೆ ವರನ ಮನೆಯನ್ನು ನೋಡಲು ಬರಬೇಕೆಂದು ಆಹ್ವಾನ ನೀಡುತ್ತಾರೆ. ವರನ ಮನೆಗೆ ಹೆಣ್ಣಿನವರು ಬಂದು ನೋಡಿ ಒಪ್ಪಿತವಾದರೆ ನಿಶ್ಚಿತಾರ್ಥಕ್ಕೆ ಬರಲು ಹೇಳುವುದು ರೂಢಿ. ಅಲ್ಲದೆ ನಿಶ್ಚಿತ ಕಾರ್ಯ ಹೆಣ್ಣಿನ ಮನೆಯಲ್ಲಿಯೇ ನಡೆಯಬೇಕು. ನಿಶ್ಚಿತಾರ್ಥದ ದಿನವೇ ಕೊಟ್ಟು ತೆಗೆದುಕೊಳ್ಳುವ ಮಾತುಕತೆಯು ನಡೆಯುವುದಾದರೂ ಒಡೆಯರಲ್ಲಿ ವರದಕ್ಷಿಣೆ ಬಗ್ಗೆ ಭಯವಿರುವಂತೆ ಕಾಣುತ್ತದೆ. ಮಾತುಕತೆ ಮುಗಿದ ನಂತರ ಬಳಗದ ಗೌಡ್ರು, ಬುದ್ಧಿವಂತರು ಹಿರಿಯರಿಗೆ ಸಕ್ಕರೆ ವೀಳ್ಯ ಹಂಚುವರು ಇದಕ್ಕೆ 'ಸಾಕ್ಷಿ' ವೀಳ್ಯವೆಂದು ಕರೆಯಲಾಗುವುದು.

ನಿಶ್ಚಯ ಕಾರ್ಯ ಮುಗಿದ ಮೇಲೆ ಮದುವೆಗೆ ಮುಂಚೆ ನಡೆಯುವ ಆಚರಣೆಗಳಲ್ಲಿ ಬಹುಮುಖ್ಯ ವಾದುದು ಲಿಂಗದೀಕ್ಷೆಯ ಕಾರ್ಯ. ಒಡೆಯರು ತಮ್ಮ ಮನೆಗೆ ಸೊಸೆಯಾಗಿ ಬರುವ ಕುರುಬರ ಹೆಣ್ಣುಮಗಳಿಗೆ ಶಾಸ್ತ್ರೋಕ್ತವಾಗಿ ಲಿಂಗದೀಕ್ಷೆಯನ್ನು ಮಾಡುತ್ತಾರೆ. ಈ ಲಿಂಗದೀಕ್ಷೆಯ ಕಾರ್ಯವು ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆಯುವುದು ಪದ್ಧತಿ. ಈ ಕುರುಬರ ಹುಡುಗಿಯ ತಲೆಯ ಮೇಲೆ ಹಿರಿಯ ಒಡೆಯರು ಪಾದವಿಟ್ಟು ಮಂಗಳಸ್ನಾನವನ್ನು ಮಾಡಿಸುತ್ತಾರೆ. ಕೆಲವೆಡೆ ಕನ್ಯೆಯ ಮಂಡೆಯನ್ನೂ ತೆಗೆಯುವುದುಂಟು. ನಂತರ ಅವಳಿಗೆ ಕಷಾಯ ವಸ್ತ್ರಗಳನ್ನು ತೊಡಿಸುತ್ತಾರೆ. ಆಮೇಲೆ ಅವಳ ಮಡಿಲಿನಲ್ಲಿ ಬಾಳೆಯ ಎಲೆಯನ್ನು ಇಟ್ಟು, ಐದು ಬಗೆಯ ಮರದ ಚಕ್ಕೆಯ ಕೆಂಡವನ್ನು ಹಾಕಿ ರೇವಣಸ್ವಾಮಿಯ ದೇವಸ್ಥಾನದ ಪ್ರದಕ್ಷಿಣೆ ಹಾಕಿಸುತ್ತಾರೆ. "ಹೀಗೆ ರೇವಣಸ್ವಾಮಿಯ ದೇವಸ್ಥಾನದ ಪ್ರದಕ್ಷಿಣೆಯನ್ನು ಹಾಕುವಾಗ

ಅಕಸ್ಮಾತಾಗಿ ಅವಳ ಮಡಿಲು ಏನಾದರೂ ಸುಟ್ಟರೆ ಅದು ಅಶುಭವೆಂದೂ, ಅವಳ ನಡತೆ ಸರಿಯಿಲ್ಲವೆಂದೂ ಭಾವಿಸುತ್ತಾರೆ."[೩೯]

ಪ್ರದಕ್ಷಿಣೆ ಹಾಕಿ ಬಂದ ನಂತರ ಬೇವಿನ ಕಡ್ಡಿಯಿಂದ ನಾಲಗೆಯನ್ನು ಸುಟ್ಟು, ಗೋಮೂತ್ರದಿಂದ ನಾಲಗೆಯನ್ನು ತೊಳೆದು ಶುದ್ಧೀಕರಿಸುತ್ತಾರೆ. ಈ ಶುದ್ಧೀಕರಣ ಕ್ರಿಯೆ ಮುಗಿದ ಮೇಲೆ ರೇವಣಸ್ವಾಮಿ ಗುಡಿಯಲ್ಲಿ ಶಿವಸ್ವರೂಪಿಯಾದ ಸ್ವಾಮಿಯ ಎದುರುಗಡೆ ಕರಿಯ ಕಂಬಳಿ ಗದ್ದುಗೆ ಹಾಕಿ, ಅದರ ಮೇಲೆ ಸೇಸೆಯನ್ನು ಹೊಯ್ದು ಪದ್ಮಾಸನದಲ್ಲಿ ಕುಳ್ಳಿರಿಸುತ್ತಾರೆ, ಆಮೇಲೆ ಪಂಚಕಳಶವನ್ನು ಹೂಡಿ ಸುರಗಿಯ ನೂಲನ್ನು ಸುತ್ತುತ್ತಾರೆ. ರೇವಣಸ್ವಾಮಿಯ ಕೊರಳಿನಿಂದ ನೂಲನ್ನು ತಂದು ಅದನ್ನು ಕನ್ಯೆಯ ಕೊರಳಿಗೆ ಹಾಕುತ್ತಾರೆ. ಇದನ್ನು 'ಸೂಸ್ರ' ಅಥವಾ 'ಸೂತ್ರ'ವೆನ್ನುವರು. ರೇವಣಸ್ವಾಮಿಯ ಮುಂದೆ ಕೆಂಪು ವಸ್ತ್ರದಲ್ಲಿ ಕಟ್ಟಿ ಇಟ್ಟಿರುವ 'ಕಂಥೆಯ ಲಿಂಗ'ವನ್ನು ಐದು ಜನ ಹಿರಿಯ ಒಡೆಯರು ಆ ಸೂತ್ರದ ಮೂಲಕ ರೇವಣಸ್ವಾಮಿಯ ಹೆಸರನ್ನು ಹೇಳಿ ಅವಳ ಕೊರಳಿಗೆ ಕಟ್ಟುತ್ತಾರೆ. ಹಾಗೆ ಅವಳ ಕಿವಿಯಲ್ಲಿ 'ಓಂನಮಃಶಿವಾಯ' ಎಂಬ ಮಂತ್ರದೊಂದಿಗೆ ಲಿಂಗದೀಕ್ಷೆ ಮುಗಿಯುತ್ತದೆ.

ಇದೇ ಸಂದರ್ಭದಲ್ಲಿ ಒಡೆಯರ ಹುಡುಗನಿಗೂ ಲಿಂಗದೀಕ್ಷೆ ಮಾಡಲಾಗುತ್ತದೆ. ಐದು ಜನ ಹಿರಿಯ ಒಡೆಯರು ಹುಡುಗನ ನೆತ್ತಿಯ ಮೇಲೆ ಪಾದವಿಟ್ಟು ಕಾಲುತೊಳೆದ ಆ ನೀರಿನಿಂದ ಹುಡುಗನ ಶುದ್ಧೀಕರಣ ಮಾಡಲಾಗುತ್ತದೆ. ಸೂತ್ರದ ಮೂಲಕ ಲಿಂಗದೀಕ್ಷೆ ಮಾಡಿ ಬಳಿಕ ಅವರಿಬ್ಬರ ಕೈಗೂ ಜೋಳಿಗೆ ಬೆತ್ತಗಳನ್ನು ಕೊಟ್ಟು 'ಕೋರಣ್ಯ' ಭಿಕ್ಷೆಗೆ ಕಳುಹಿಸುತ್ತಾರೆ. "ಅಂದಿನಿಂದ ಒಡೆಯರ ಹುಡುಗ ನಿಜವಾದ 'ಒಡೆಯರು' ಕುರುಬರ ಮನೆಯ ಹೆಣ್ಣುಮಗಳು ಅಥವಾ ಹುಡುಗನ ಪತ್ನಿ ಒಡೇರಮ್ಮ ಆಗುತ್ತಾಳೆ"[೪೦] ಹೀಗೆ ದೀಕ್ಷೆಯ ಕಾರ್ಯದ ನಂತರ ಕುರುಬರ ಮದುವೆಯಂತೆಯೇ ನಡೆಯುತ್ತದೆ.

ಒಡೆಯರ ಮನೆಗೆ ಬಂದ ಈ ಹೆಣ್ಣು ಮಗಳು 'ಒಡೇರಮ್ಮ' ಆದ ಮೇಲೆ ಕಟ್ಟಾ ಸಸ್ಯಾಹಾರಿಯಾಗಿರಬೇಕು. ದೀಕ್ಷೆಯಾದ ದಿನದಿಂದಲೇ ಅವಳ ತಂದೆ ತಾಯಿಯರು ಅವಳ ಪಾದಮುಟ್ಟಿ ನಮಸ್ಕರಿಸಬೇಕು. ಅಂದಿನಿಂದ ಕುರುಬರ ಬಂಧುಬಳಗ ತಂದೆ ತಾಯಿಗಳಿಗೆ ಇವಳು ಮಾತ್ರ ನಮಸ್ಕರಿಸುವಂತಿಲ್ಲ. ಗಂಡನ ಮನೆಯಿಂದ ತವರು ಮನೆಗೆ ಬಂದರೆ ಪ್ರತ್ಯೇಕ ಅಡುಗೆ ಮತ್ತು ವಸತಿ ವ್ಯವಸ್ಥೆ ಮಾಡಬೇಕು. ಗಂಡನ ಮನೆಗೆ ತಂದೆ ತಾಯಿಗಳು ಬಂದು ಊಟ ಮಾಡಿದರೆ ಊಟದ ತಟ್ಟೆಗಳನ್ನು ತೊಳೆಯುವಂತಿಲ್ಲ. ತನ್ನ ಗಂಡನಂತೆಯೇ ಸದಾ ಹಣೆಯ ಮೇಲೆ ಮೂರು ಬೆರಳು ವಿಭೂತಿ, ಎದೆಯ ಮೇಲೆ ಲಿಂಗವನ್ನು ಧರಿಸಿರಬೇಕು. ಇದರಿಂದ ಸಮಾಜದಲ್ಲಿ ಇಷ್ಟೆಲ್ಲಾ ನಿರ್ಬಂಧಗಳಿದ್ದರೂ ಅವಳ ಸ್ಥಾನಮಾನಗಳು ಉನ್ನತವಾಗಿರುತ್ತವೆ.

ಇಲ್ಲಿನ ವಿಪರ್ಯಾಸವೆಂದರೆ ಒಡೆಯರುಗಳು ತಮ್ಮ ಮನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಲಿಂಗದೀಕ್ಷೆಯನ್ನು ಮಾಡದಿರುವುದು. ಇವಳಿಗೆ ಯಾವುದೇ ನಿರ್ಬಂಧಗಳಿರುವುದಿಲ್ಲ. ಒಡೆಯರ ಪತ್ನಿಯನ್ನು

'ಗುರುತಾಯಿ' ಎಂದು ಕರೆಯುವರು. ಹೀಗೆ ಅಮೋಘ ಸಿದ್ಧ ಮತ್ತು ರೇವಣಸಿದ್ಧ ಸಂಪ್ರದಾಯಗಳ ಮದುವೆಗಳು ಹೆಚ್ಚೂ ಕಡಿಮೆ ಒಂದೇ ರೀತಿ ಕಂಡು ಬಂದರೆ, ಸಿದ್ಧರಾಮ ಸಂಪ್ರದಾಯದ ಅಂದರೆ ಮಂಕೊಡೆಯರು ಮಾತ್ರ ಕುರುಬರೊಂದಿಗೆ ರಕ್ತಸಂಬಂಧ ಮಾಡುವುದಿಲ್ಲ. ಅವರು ಶಿವಗಂಗೆ ಕಡೆಯಿರುವ ಜಂಗಮರೊಂದಿಗೇ ಹೆಣ್ಣು ಕೊಟ್ಟು ತರುವುದನ್ನು ಹೇಳುತ್ತಾರೆ. ಹೀಗೆ ಒಡೆಯರು ಮದುವೆಯ ಸಂಪ್ರದಾಯವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ.

ಒಡೆಯರಲ್ಲೂ ಮದುವೆಯಾದ ಹೆಣ್ಣು ಮಗಳು ಪ್ರಥಮ ಬಾರಿಗೆ ಗರ್ಭವತಿಯಾದರೆ ಐದು, ಏಳು, ಒಂಭತ್ತನೇ ತಿಂಗಳಲ್ಲಿ 'ಸೀಮಂತ' ಮಾಡುವರು. ಇದಕ್ಕೆ ಕುಪ್ಪಸ ಕಾರಣ, ಸೀರೆಕಾರಣ, ಹೂ ಮುಡಿಸುವುದು ಎಂದು ಕರೆಯುವುದು ವಾಡಿಕೆ. ಅಂದು ಸಿಹಿ ಅಡುಗೆಯನ್ನು ಮಾಡಿ ಬಂದವರಿಗೆ ಬಡಿಸಲಾಗುತ್ತದೆ. ಅದಾದ ನಂತರ ತವರುಮನೆಗೆ ಚೊಚ್ಚಲು ಬಾಣಂತಿತನಕ್ಕೆ ಬಂದವರು ಕರೆದೊಯ್ಯುತ್ತಾರೆ.

ತವರು ಮನೆಯಲ್ಲಿರುವಾಗಲೇ ಪ್ರಸವವೇದನೆ ಕಾಣಿಸಿಕೊಂಡು ಹೆರಿಗೆಯಾದರೆ ಒಂಭತ್ತು ಅಥವಾ ಹನ್ನೊಂದನೇ ದಿನ ಸೂತಕ ಕಳೆದುಕೊಳ್ಳುತ್ತಾರೆ. ಹುಟ್ಟಿದ ಮಗು ಗಂಡುಮಗುವಾಗಿದ್ದರೆ ಐದನೇ ತಿಂಗಳಲ್ಲಿ ನಾಮಕರಣ ಮಾಡಲಾಗುತ್ತದೆ. ಅದೇ ವೇಳೆಯಲ್ಲಿ ಲಿಂಗಧಾರಣೆಯೂ ನಡೆಯುತ್ತದೆ. ಇದಕ್ಕೆ 'ಹುಟ್ಟುಲಿಂಗ'ವೆನ್ನುವರು. ಲಿಂಗಧಾರಣೆ ಮಾಡಿದ ನಂತರ ತಮ್ಮ ಕುಲಪರಂಪರೆಗನುಗುಣವಾದ ಹೆಸರನ್ನು ಇಡುತ್ತಾರೆ. ಹೆಣ್ಣು ಮಕ್ಕಳಾದರೆ ನಾಮಕರಣ ಮಾತ್ರ ಮಾಡುತ್ತಾರೆ. ಲಿಂಗದೀಕ್ಷೆ ಇರುವುದಿಲ್ಲ. ಗಂಡುಮಕ್ಕಳಿಗೆ ಹುಟ್ಟುಲಿಂಗ ಕಟ್ಟುವುದು ಮೊದಲ ದೀಕ್ಷೆಯಾದರೆ, ಮದುವೆಯ ಸಂದರ್ಭದಲ್ಲಿ ಮತ್ತೊಮ್ಮೆ ಲಿಂಗದೀಕ್ಷೆ ಮಾಡುತ್ತಾರೆ. ಇದೇ ನಿಜವಾದ 'ಲಿಂಗದೀಕ್ಷೆ'ಯಾಗಿರುತ್ತದೆ.

ಹೆಣ್ಣು ಮಗಳು ದೊಡ್ಡವಳಾಗಿ ಋತುಚಕ್ರಕ್ಕೆ ಒಳಗಾಗುವುದು ಒಂದು ಸಹಜಕ್ರಿಯೆ. ಒಡೆಯರ ಹೆಣ್ಣು ಮಗಳು ಋತುಮತಿಯಾದರೆ ಐದು ದಿನಗಳ ಸೂತಕ. ಆ ಐದೂ ದಿವಸ ಎಣ್ಣೆ ಅರಿಶಿಣ ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸಿ ಹೂ ಮುಡಿಸಿ ಆರತಿ ಬೆಳಗುತ್ತಾರೆ. ಐದನೇ ದಿವಸ ಮನೆಯನ್ನೂ ಸ್ವಚ್ಛಗೊಳಿಸಿ ಹಾಸಿಗೆ ಹೊದಿಕೆಗಳನ್ನು ಮಡಿಮಾಡುತ್ತಾರೆ. ನಂತರ ಅವಳಿಗೆ ಎಣ್ಣೆ ಅರಿಶಿನ ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸಿ ಬಿಳಿಯ ಬಟ್ಟೆಯನ್ನು ತೊಡಿಸಿ ಒಡೆಯರು ಅವಳ ತೊಡೆಯ ಮೇಲೆ ಪಾದವಿಟ್ಟು, ಆಶೀರ್ವದಿಸಿ ಒಳಗೆ ಕರೆದುಕೊಳ್ಳುತ್ತಾರೆ.

ಕುರುಬ ಜನಾಂಗದಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆಯಾದರೂ ಒಡೆಯರಲ್ಲಿ ನಿಷಿದ್ಧ. ಒಡೇರಮ್ಮನಿಗೆ ಪತಿವಿಯೋಗವಾದರೂ 'ಚಿರಮುತ್ತೈದೆ'. ಒಂದರ್ಥದಲ್ಲಿ ಅಂಗದ ಮೇಲೆ ಕಟ್ಟಿಕೊಂಡಿರುವ ಲಿಂಗದೊಂದಿಗೆ ಅವಳ ವಾಸ್ತವವಾದ ಮದುವೆಯಾಗಿರುತ್ತದೆ. ತನ್ನ ಪತಿ ಮಾಡುತ್ತಿದ್ದ ಎಲ್ಲಾ ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವುದು ಮಾತ್ರವಲ್ಲ, ಅವುಗಳ ಕಾರ್ಯನಿರ್ವಹಣೆಗೂ ಸಮರ್ಥಳು.

ಮನುಷ್ಯನ ಬದುಕು ಹುಟ್ಟಿನೊಂದಿಗೆ ಆರಂಭವಾದರೆ ಸಾವು ಕೊನೆ ಎಂದು ಹೇಳಬಹುದು. ಒಡೆಯರಲ್ಲಿ ಹುಟ್ಟಿನ ಆಚರಣೆ ಎಷ್ಟು ವೈವಿಧ್ಯಮಯವೋ ಸಾವನ್ನು ಕೆಲವೊಂದು ವಿಧಿವಿಧಾನಗಳ

ಮೂಲಕ ಸಂಸ್ಕಾರಗೊಳಿಸಿ ಒಡೆಯರು ಮತ್ತು ಒಡೇರಮ್ಮನಿಗೆ ಅಂತ್ಯಸಂಸ್ಕಾರ ಪೂರೈಸುತ್ತಾರೆ. ಒಡೇರಯ್ಯ ಅಥವಾ ಒಡೇರಮ್ಮ ನಿಧನರಾದರೆ ಶವಕ್ಕೆ ಸ್ನಾನಮಾಡಿಸಿ ಹೊಸಬಟ್ಟೆಯನ್ನೂ ತೊಡಿಸಿ ಲಿಂಗಪೂಜಾ ಭಂಗಿಯಲ್ಲಿ ಗೋಡೆಗೆ ಒರಗಿಸಿ ಕೂರಿಸುತ್ತಾರೆ. ಶವದ ಹಣೆಗೆ, ಕೊರಳಿಗೆ, ಭುಜ, ಮುಂಗೈ, ಮುಂಗಾಲುಗಳಿಗೆ ಮೂರು ಬೆರಳಿನಿಂದ ವಿಭೂತಿ ಹಚ್ಚಿ ಹಣೆಗೆ ಗಂಧವನ್ನು ಇಡುತ್ತಾರೆ. ಪತ್ರೆ ಮತ್ತು ಹೂವುಗಳಿಂದ ಅಲಂಕರಿಸಿ ದೀಪಾರತಿ, ಧೂಪಾರತಿ ಮಾಡುತ್ತಾರೆ.

ಇದಾದ ನಂತರ ಬಂಧುಬಳಗದವರು, ಹಿರಿಯರೆಲ್ಲರೂ ಸೇರಿ ಶವವನ್ನು ರೇವಣಸ್ವಾಮಿಯ ಗುಡಿಯ ಬಳಿ ತಂದು ದೇವರ ಎದುರಿಗೆ ಪ್ರಾಂಗಣದಲ್ಲಿಡುತ್ತಾರೆ. ಆಗ ಮಠದ ಒಡೆಯರು ಲಿಂಗೈಕ್ಯ ಗುರುವಿಗೆ ಅಥವಾ ಒಡೇರಮ್ಮನಿಗೆ ಹಣೆಗೆ ವಿಭೂತಿ ಹಚ್ಚಿ ಧೂಪಾರತಿಯಿಂದ ಪೂಜೆ ಮಾಡುತ್ತಾರೆ. ಮಂಗಳ ವಾದ್ಯಗಳೊಂದಿಗೆ ಲಿಂಗದೀಕ್ಷೆಯ ಸಡಿಲಿಕೆ ಮಾಡಲಾಗುತ್ತದೆ. ಅಷ್ಟೊತ್ತಿಗಾಗಲೇ ಭಕ್ತರು ಸಿದ್ಧಪಡಿಸಿರುವ ಅಲಂಕೃತ ಹಸಿರು ಮಂಟಪದಲ್ಲಿ ಕಳೇಬರವನ್ನು ಪದ್ಮಾಸನದಲ್ಲಿ ಕುಳ್ಳಿರಿಸುತ್ತಾರೆ. ಮತ್ತೊಮ್ಮೆ ಮಠದ ಒಡೆಯರಿಂದ ಪೂಜೆ ಮಾಡಲಾಗುತ್ತದೆ. ಬಂದಿರುವ ಭಕ್ತಸಮೋಹವು ಹೂ ಮತ್ತು ಪತ್ರೆಗಳಿಂದ ಅಂತಿಮ ನಮನ ಸಲ್ಲಿಸುತ್ತದೆ.

ವಿಭೂತಿಧಾರಿಗಳಾದ ನಾಲ್ವರು ಒಡೆಯರು ಭಕ್ತರ ಜಯಕಾರದೊಂದಿಗೆ ಹೆಗಲಲ್ಲಿ ಹೊತ್ತು ಮಠದ ಹೊಸ್ತಿಲು ದಾಟಿಸಿದ ಮೇಲೆ, ಮಧ್ಯೆ ಮಧ್ಯೆ ಬೀರೇಶ್ವರನ ಒಕ್ಕಲು ಮಕ್ಕಳು, ಈರಮಕ್ಕಳು, ಸಂಸ್ಕಾರ ನಡೆಯುವ ಸ್ಥಳಕ್ಕೆ ತರುತ್ತಾರೆ. ಅಲ್ಲಿ ಕೊನೆಯ ಪೂಜೆಯ ನಂತರ ಶವವನ್ನು ನೆಲಮನೆಗೆ ಇಳಿಸುತ್ತಾರೆ. ಪೂರ್ವ ಅಥವಾ ಉತ್ತರಾಭಿಮುಖವಾಗಿ, ಪದ್ಮಾಸನದ ಲಿಂಗಪೂಜಾ ಭಂಗಿಯಲ್ಲಿ ಕುಳ್ಳಿರಿಸಿ ಗುರುವಿನ ಕೊರಳಲ್ಲಿರುವ ಲಿಂಗದ ಸೂತ್ರವನ್ನು ಬಿಚ್ಚುತ್ತಾರೆ. ಈ ಕ್ರಿಯೆಗೆ 'ಪಟ್ಟ ಅಳುಕಿಸುವುದು' ಎಂದು ಕರೆಯುವರು. ಸೂತ್ರವನ್ನು ಕೆಲವರು ಹಾಗೆಯೇ ಬಿಟ್ಟರೆ ಮತ್ತೆ ಕೆಲವರು ಭಾವಿ, ಕೆರೆ, ನದಿಯಲ್ಲಿ ಬಿಡುವುದೂ ಉಂಟು. ಗುರುವಿನ ಅಥವಾ ಒಡೇರಮ್ಮನ ದೇಹವು ವಿವಿಧ ಪತ್ರೆಗಳಿಂದ ಹಾಗೂ ವಿಭೂತಿಯಿಂದ ಮುಚ್ಚಿ ಹೋಗುತ್ತದೆ. ಕೊನೆಯಲ್ಲಿ ಹಿರಿಯ ಒಡೆಯರು ಅಗಲವಾದ ಬಾಳೆ ಎಲೆಗಳಿಂದ ಶವವನ್ನು ಮುಚ್ಚಿ ಮೂರು ಬೊಗಸೆ ಮಣ್ಣು ಹಾಕುತ್ತಾರೆ. ಆಮೇಲೆ ಮಠದ ಒಡೆಯರು, ಗೌಡರು, ಬಳಗ ಭಂಡಾರಿಗಳು, ಭಕ್ತವರ್ಗ ಮಣ್ಣನ್ನು ಹಾಕಿ ಧನ್ಯತೆ ಪಡೆಯುವರು. ಇದಾದನಂತರ ಈರಮಕ್ಕಳು ಗುರುವಿನ ಗದ್ದುಗೆ ನಿರ್ಮಿಸಿ ಒಡೆಯರಿಂದ ವಿಭೂತಿ ಹಚ್ಚಿಸಿಕೊಳ್ಳುವುದರೊಂದಿಗೆ ಶವಸಂಸ್ಕಾರ ಮುಗಿಯುತ್ತದೆ. ಇದು ದಕ್ಷಿಣ ಕರ್ನಾಟಕದ ಒಡೆಯರ ಶವಸಂಸ್ಕಾರವಾದರೆ ಉತ್ತರಕರ್ನಾಟಕದಲ್ಲಿ ಶವವನ್ನು ಕಂಬಳಿಯಲ್ಲಿ ತೆಗೆದುಕೊಂಡುಹೋಗಿ ಸಂಸ್ಕಾರ ಮಾಡಿ ಬರುತ್ತಾರೆ.

ಒಡೆಯರ ಧಾರ್ಮಿಕ ಆಚರಣೆಗಳನ್ನು ಅವಲೋಕಿಸಿದರೆ ಮೂರು ಸಂಪ್ರದಾಯಗಳ ಒಡೆಯರು ರೇವಣಸಿದ್ದೇಶ್ವರ ದೇವಾಲಯ, ಅದರ ಆಸುಪಾಸಿನಲ್ಲಿ ಇವರ ವಾಸ. ರೇವಣಸಿದ್ಧ ಅಮೋಘಸಿದ್ಧ ಮತ್ತು ಸಿದ್ಧರಾಮ ದೇವರುಗಳ ಆರಾಧಕರಾಗಿರುವ ಇವರು ದೇವರುಗಳ ಅರ್ಚನೆ, ಹಬ್ಬ, ಉತ್ಸವ,

ಜಾತ್ರೆ ಮುಂತಾದವುಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುವರು. ಆ ಮೂಲಕ ದೈವಭಕ್ತಿ, ಧಾರ್ಮಿಕ ಶ್ರದ್ಧೆ ಮೆರೆಯುವರು. ಕುರುಬರ ಕುಲಗುರುವಾಗಿ ಧಾರ್ಮಿಕ ಮತ್ತು ಸಾಮಾಜಿಕ ಪರಂಪರೆಗೆ ಭದ್ರವಾದ ನೆಲೆಗಟ್ಟನ್ನು ಒದಗಿಸಿದ್ದಾರೆ. ಒಂದರ್ಥದಲ್ಲಿ ಎಲ್ಲಾ ಆಚರಣೆ ಸಂಪ್ರದಾಯಗಳ 'ಅಧ್ವರ್ಯು' ಎಂದು ಹೇಳಿದರೆ ತಪ್ಪಾಗಲಾರದು.

ಕುರುಬ ಒಡೆಯರ ಧಾರ್ಮಿಕ ಆಚರಣೆಯಲ್ಲಿ ಬಹು ಮುಖ್ಯವಾದುದು ಮತ್ತು ಅಷ್ಟೇ ವಿಶಿಷ್ಟವಾದುದು 'ಕಂಥೆಸೇವೆ'ಯ ಆಚರಣೆ. 'ಕರಿಯ ಕಂಥೆ' ಎನ್ನುವುದು ಕುರುಬರಿಗೆ ವಿಶೇಷವಾಗಿ ಉಣ್ಣೆಕಂಕಣ ಕುರುಬರಿಗೆ ಪೂಜ್ಯವಾದ ಮತ್ತು ಪವಿತ್ರವೆನಿಸುವ ವಸ್ತ್ರ. ಕಂಥೆ ಎನ್ನುವುದು ಕುರುಬ ಸಮುದಾಯದವರು ತಮ್ಮ ಕುಲಗುರುವಾದ ಶಿವಸ್ವರೂಪಿ ರೇವಣಸಿದ್ಧರಿಗೆ ಅಚ್ಚಕರಿಯ ಉಣ್ಣೆಯಿಂದ ತಯಾರಿಸಿ ಧರಿಸುವ ಒಂದು ಪವಿತ್ರ ವಸ್ತ್ರವೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಸಾಮಾನ್ಯ ಕಂಬಳಿ ನೇಯುವಂತೆ ಇರದೆ ಕೆಲವು ವಿಧಿವಿಧಾನಗಳ ಮೂಲಕ ಕರವಸ್ತ್ರದ ಅಗಲದಲ್ಲಿ ನಿರ್ಮಿಸುವ ಕಂಬಳಿಯ ವಸ್ತ್ರ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಈ ಆಚರಣೆ ವಿಧಿವತ್ತಾಗಿ ನಡೆಯುತ್ತದೆ.

ಒಡೆಯರ ಮತ್ತೊಂದು ಧಾರ್ಮಿಕ ಆಚರಣೆ ಹೇಳಿಕೆ ಮಾಡುವುದು, ಹೂವು ಕೇಳುವುದು ಇತರೆ ಆಚರಣೆಗಳಲ್ಲಿ ಮದುವೆಯ ಪೌರೋಹಿತ್ಯ, ಜನನ, ಋತುಮತಿಯ ಸಂದರ್ಭದ ಶುದ್ಧೀಕರಣ, ಮರಣವಿಧಿ ಮುಖ್ಯವಾದವು. ಮನೆಮದ್ದು ಅಂತ್ರ ತಂತ್ರ, ಜೋತಿಷ್ಯ, ವ್ಯಾಜ್ಯಪರಿಹಾರ ಶುದ್ಧೀಕರಣ ಪ್ರಕ್ರಿಯೆಗಳೂ ಇವರ ಮೂಲಕವೇ ಆಗುತ್ತವೆ. ಇವರಿಲ್ಲದಿದ್ದಾಗ ಅವರು ಮಂತ್ರಿಸಿಕೊಟ್ಟ ಒಂದು ವಿಭೂತಿ ಘಟ್ಟಿ (ಕಾಲಿಲ್ಲ ಐನೋರು) ಅವರ ಪ್ರತಿರೂಪವಾಗಿ ಬಂದು ಅವರ ಕಾರ್ಯ ನಿರ್ವಹಿಸುವುದು ಒಂದು ಅದ್ಭುತ ಪರಿಕಲ್ಪನೆಯಾಗಿದೆ. ಅಧಿಕ ಸಂಖ್ಯೆಯಲ್ಲಿರುವ ಕುರುಬರಿಗೆ ಕಡಿಮೆ ಸಂಖ್ಯೆಯಲ್ಲಿರುವ ಒಡೆಯರು ಧಾರ್ಮಿಕ ವಿಧಿವಿಧಾನಗಳಿಂದ ಜನನ, ನಾಮಕರಣ, ಮದುವೆ ಮರಣದಂತಹ ಸಂದರ್ಭಗಳಲ್ಲಿ ಒಮ್ಮೊಮ್ಮೆ ಅವರು ದೊರಕುವುದು ಕಷ್ಟವಾಗುತ್ತದೆ.

ನಾಮಕರಣದಂತಹ ಸಂದರ್ಭದಲ್ಲಿ ದೊರೆಯದಿದ್ದರೆ ಒಂದೆರಡು ದಿನ ಮುಂದೆ ಹಾಕಬಹುದು. ಆದರೆ ಮನೆಯಲ್ಲಿ ಯಾರಾದರೂ ಸಾವನ್ನಪ್ಪಿದ್ದರೆ ಕಾಯಲಾಗದು. ಅಂತಹ ಸಂದರ್ಭಗಳಲ್ಲಿ ಒಡೆಯರ ಬದಲು ಕಾಲಿಲ್ಲ ಐನೋರನ್ನು ಕರೆತರುತ್ತಾರೆ. ಕುರುಬಗೌಡನ ಮನೆಯಲ್ಲಿರುವ ಒಡೆಯರು ಮಂತ್ರಿಸಿ ನೀಡಿರುವ ವಿಭೂತಿ ಘಟ್ಟಿ. ಇದಕ್ಕೆ ಎಂ. ಚಿದಾನಂದಮೂರ್ತಿಯವರು "ಕಾಲಿಲ್ಲದ ಐನೋರು ಎಂದರೆ ಅದು ಒಬ್ಬ ವ್ಯಕ್ತಿಯಲ್ಲ. ಒಡೆಯರುಗಳು ಮಂತ್ರಿಸಿಕೊಟ್ಟ ವಿಭೂತಿ ಗಟ್ಟಿ. ಆ ವಿಭೂತಿ ಗಟ್ಟಿಯು ಒಡೆಯರ ಪ್ರತಿನಿಧಿಯಾಗಿ ಅವರ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಪೂರೈಸಿಕೊಡಲು ಸಮರ್ಥವಾಗಿದೆ"[೧೧] ಎನ್ನುತ್ತಾರೆ. ಒಂದು ಚಿಕ್ಕ ಜೋಳಿಗೆಯಲ್ಲಿ ಇಟ್ಟಿರುವ ವಿಭೂತಿ ಗಟ್ಟಿಯು ಯಾವುದೇ ಧಾರ್ಮಿಕ ಕಾರ್ಯಗಳಿಗೆ ಒಡೆಯರು ದೊರೆಯದಿದ್ದಾಗ ಕಾಲಿಲ್ಲದ ಐನೋರನ್ನು ತನ್ನಿ ಎಂದರೆ ಕುರುಬ ಗೌಡ ತರುತ್ತಾನೆ. ಆ ವಿಭೂತಿಯನ್ನು ವ್ಯಕ್ತಿಯ ಹಣೆಗೆ ಭಸ್ಮ ಮಾಡಿದರೆ ಒಡೆಯರೇ ಬಂದು ಧಾರಣೆ

ಮಾಡಿದಂತೆ ಎಂಬ ನಂಬಿಕೆಯಿದೆ. ಪವಿತ್ರವಾದ ವ್ಯಕ್ತಿಗಳಿಗೆ ಸೇರಿದ ವಸ್ತುಗಳು ಪವಿತ್ರ ವ್ಯಕ್ತಿಗಳ ಸ್ಪರ್ಶವನ್ನು ಪಡೆದು ವಸ್ತುಗಳು ಪವಿತ್ರವಾಗುತ್ತವೆ ಎನ್ನುವುದಕ್ಕೆ ಕಾಲಿಲ್ಲದ ಐನೋರು ಸಾಕ್ಷಿಯಾಗುತ್ತದೆ.

ಒಟ್ಟಾರೆಯಾಗಿ ಕುರುಬರ ಒಳಪಂಗಡವೆನಿಸುವ ಗುರು ಒಡೆಯರು ಸಮುದಾಯದ ಧಾರ್ಮಿಕ ಆರ್ಥಿಕ ಸಾಮಾಜಿಕವಾದ ಸಂಪ್ರದಾಯಗಳೊಂದಿಗೆ ಜನಪದ ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ಕಾಳಜಿಯಿಂದ ಪೋಷಿಸಿಕೊಂಡು ಬಂದಿದ್ದಾರೆ. ಕುರುಬ ಸಮುದಾಯ ಗುರು ಒಡೆಯರು ನಿರ್ವಹಿಸಿದ ಅಂತರಂಗ-ಬಹಿರಂಗಗಳು ಅಂದರೆ ವ್ಯಕ್ತಿಯ ಉದ್ಧಾರ ಮತ್ತು ಸಮಾಜೋದ್ಧಾರಗಳನ್ನು ಕುರಿತ ಶುದ್ಧೀಕರಣ ಮಾಡುವಲ್ಲಿ ಪ್ರಮುಖರು. ಇವರ ನಡಾವಳಿಗಳು ಲಿಂಗಾಯತ ಜಂಗಮರ ನಡಾವಳಿಗಳಿಗೆ ಹತ್ತಿರವಾಗಿರುವುದು ವಿಶೇಷವೆನಿಸುತ್ತದೆ.

ಕುಂಚಿಟಿಗ ಕುರುಬರು

ನೆಲಮೂಲ ಸಂಸ್ಕೃತಿಯ ಗ್ರಾಮೀಣ ಸಮುದಾಯ ಕುರುಬರದು. ಕುರುಬರ ಮೂಲಕವೇ ಒಂದು ಒಳಪಂಗಡವಾಗಿ ರೂಪುಗೊಂಡವರು ಕುಂಚಿಟಿಗರು. ಪ್ರಾಯಶಃ ವ್ಯಾಪಾರಿ ಮೂಲದವರಾದ ಇವರ ಪ್ರಮುಖ ಪರಂಪರಾಗತ ಉದ್ಯೋಗ ಪಶುಪಾಲನೆ ಮೊದಲಾದರೆ ನಂತರದ್ದು ವ್ಯವಸಾಯವಾಗಿದೆ. ಪ್ರಾಚೀನ ಕಾಲದಲ್ಲಿ ಕುರುಬರು ಕಂಬಳಿಯನ್ನು ನೇಯುತ್ತಿದ್ದರೆ ಕಂಬಳಿಗೆ ಹುಣಸೆ ಸರಿಯನ್ನು ಕುಂಚದ ಮೂಲಕ ಹಚ್ಚುತ್ತಿದ್ದರು. ಇದರಿಂದ ಇವರಿಗೆ ಕುಂಚಟಿಗ ಎಂಬ ಹೆಸರು ಕಾರಣವಾಗಿದೆ. 'ಕುರುಬ ಕೆಟ್ಟು ಕುಂಚಟಿಗನಾದ' ಎಂಬ ನಾಣ್ನುಡಿಯೊಂದು ಇದೆ. ಕೃಷಿಯಾಧಾರಿತ ಗ್ರಾಮೀಣ ಬದುಕನ್ನು ಅವರು ರೂಢಿಸಿಕೊಂಡು ಪ್ರಕೃತಿಯೊಂದಿಗೆ ಸರಳ ಸಹಬಾಳ್ವೆ ನಡೆಸುವವರೇ ಕುಂಚಿಟಿಗರು. ಇವರಲ್ಲಿಯೂ ಕೆಲವು ವಿಶಿಷ್ಟ ಆಚರಣೆ, ಸಂಪ್ರದಾಯ, ನಂಬಿಕೆಗಳನ್ನು ಗುರ್ತಿಸಬಹುದಾಗಿದೆ.

ಹಿಂದೆ ಅವಿಭಕ್ತ ಕುಟುಂಬ ಪ್ರಧಾನವಾಗಿದ್ದ ಕಾಲದಲ್ಲಿ ಹಲವು ತಲೆಮಾರಿನ ಜನರು ಒಂದೇ ಸೂರಿನಡಿ ವಾಸಿಸುತ್ತಿದ್ದರು. ಅವಿಭಕ್ತ ಕುಟುಂಬ ತನ್ನ ಸದಸ್ಯರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿತ್ತು. ಮನೆಯ ಯಜಮಾನ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ತನ್ನನ್ನು ಹೊರತುಪಡಿಸಿ ಉಳಿದ ಸದಸ್ಯರೆಲ್ಲರೂ ಅವರವರ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು. ಇಂತಹ ಸಾಮಾಜಿಕ ಜೀವನದಲ್ಲಿ ಅನ್ಯೋನ್ಯತೆಯನ್ನು ಮೈಗೂಢಿಸಿಕೊಂಡು ಸಹಬಾಳ್ವೆಯನ್ನು ಕುಂಚಿಟಿಗರು ನಡೆಸುತ್ತಿದ್ದರು. ಕುಟುಂಬ ಜೀವನ ತೃಪ್ತಿದಾಯಕವಾಗಿರುತ್ತಿತ್ತು.

ದ್ರಾವಿಡ ಮೂಲವಾದ ಕುಂಚಿಟಿಗ ಸಮುದಾಯವು ವೈದಿಕ ವಿಚಾರಗಳಿಂದ ಪ್ರಭಾವಿತವಾಗಿದೆ. ವೈದಿಕ ಧರ್ಮದಲ್ಲಿ ಷೋಡಶ ಸಂಸ್ಕಾರಗಳಿದ್ದರೂ ಶ್ರಮ ಸಂಸ್ಕೃತಿಯ ಕುಂಚಿಟಿಗ ಸಮಾಜದಲ್ಲಿ ಪಂಚಕರ್ಮಗಳನ್ನು ಮಾತ್ರ ಪಾಲಿಸಲಾಗುತ್ತದೆ. ಪಂಚಸಂಸ್ಕಾರಗಳೆಂದೂ ಇವುಗಳನ್ನು ಕರೆಯಲಾಗುತ್ತದೆ. ಜಾತಕರ್ಮ, ನಾಮಕರಣ, ಚೌಲ ಮತ್ತು ಋತುಮತಿ, ವಿವಾಹ ಹಾಗೂ ಅಂತ್ಯ ಸಂಸ್ಕಾರದ ಆಚರಣೆಗಳು ಪ್ರಮುಖವಾದವು. ಆಚರಣೆಯ ಸಂದರ್ಭದಲ್ಲಿ ಪಾಲಿಸುವ ವಿಧಿವಿಧಾನಗಳು, ಸಂಪ್ರದಾಯ, ಪದ್ಧತಿಗಳ

ಮೂಲಕ ಜನಾಂಗದ ಸಂಸ್ಕೃತಿಯನ್ನು, ಅದರ ಭಿನ್ನತೆಯನ್ನು ಗುರುತಿಸಬಹುದು. ಕುಂಚಿಟಿಗ ಜನಾಂಗವನ್ನು ಗುರುತಿಸುವ ಬೆಸೆಯುವ ಪ್ರಕ್ರಿಯೆಯಲ್ಲಿ ಪಂಚಸಂಸ್ಕಾರಗಳು ಪ್ರಮುಖಪಾತ್ರ ವಹಿಸುತ್ತವೆ.

ಕುಟುಂಬ ಜೀವನಕ್ಕೆ ವಿವಾಹವೇ ಅಡಿಗಲ್ಲು, ಈ ಸಮಾಜದಲ್ಲಿ ಏಕಪತ್ನಿತ್ವ ವಿವಾಹಗಳಿಗೆ ಅನುಮೋದನೆ ಇದೆ. ಬಹುಪತ್ನಿತ್ವ ಮತ್ತು ಅಂತರ್ಜಾತಿ ವಿವಾಹಗಳಿಗೆ ಹಿಂದೆ ಅವಕಾಶವಿರಲಿಲ್ಲ. ಇವರ ನಲವತ್ತೆಂಟು ಬೆಡಗುಗಳ ಆಧಾರದ ಮೇಲೆ ವಿವಾಹ ನಡೆಸಲಾಗುತ್ತದೆ. ಸಪಿಂಡ, ಸಗೋತ್ರ, ಸೋದರ ಗೋತ್ರಗಳ ಒಳಗೆ ವಿವಾಹ ನಿಷೇಧಿಸಿದೆ. ವಧುವರರ ತಂದೆಯ ಬೆಡಗುಗಳನ್ನು ಮುಖ್ಯವಾಗಿ ಗಮನಿಸಲಾಗುತ್ತದೆ. ಮನೆಯ ಹಿರಿಯರು ವಯಸ್ಸಿಗೆ ಬಂದ ಮಕ್ಕಳ ಸಲುವಾಗಿ ಅನುರೂಪವಾದ ವರ ವಧುವಿನ ಅನ್ವೇಷಣೆ ಆರಂಭಿಸುತ್ತಾರೆ. ಸಾಮಾನ್ಯವಾಗಿ ಗಂಡಿನ ಮನೆಗೆ ಹೆಣ್ಣಿನವರು ಮೊದಲು ಹೋಗುವುದಿಲ್ಲ. ಹೆಣ್ಣು ಹುಡುಕುವಾಗ ಸಾಲಾವಳಿ, ಒಳ್ಳೆಯ ಮನೆತನ, ಕುಲಸ್ಥರು ಮುಖ್ಯವಾದರೂ ಹುಡುಗಿಯ ಗುಣ, ರೂಪ, ಬೀಗರಾಗುವ ವ್ಯಕ್ತಿಯ ಯೋಗ್ಯತೆ, ಘನತೆ, ಅಂತಸ್ತು ಇವೆಲ್ಲ ಲೆಕ್ಕಕ್ಕೆ ಬರುತ್ತವೆ.

ಹೆಣ್ಣು ನೋಡಲು ಬಂದ ಗಂಡಿನವರಿಗೆ ಕನ್ಯೆ ಒಪ್ಪಿಗೆಯಾದರೆ, ಹೆಣ್ಣಿನ ಮನೆಯವರು ಗಂಡಿನ ಮನೆಗೆ ಹೋಗಿ ಅವರ ಅಂತಸ್ತು ಘನತೆ ತಿಳಿದು 'ಮನಜಯ' ಅಥವಾ 'ಒಪ್ಪುವೀಳ್ಯ' ಶಾಸ್ತ್ರಕ್ಕೆ ದಿನ ನಿಗಧಿ ಮಾಡುತ್ತಾರೆ. ಒಪ್ಪುವೀಳ್ಯಕ್ಕೆ ಹಣ್ಣು, ಕಾಯಿ, ಹೂವು ಎಲೆ, ಅಡಿಕೆ, ಸೀರೆ ಕುಪ್ಪಸಗಳನ್ನು ತೆಗೆದುಕೊಂಡು ಐದುಜನ ಮುತ್ತೈದೆಯರನ್ನು ಕರೆದುಕೊಂಡು ಹೆಣ್ಣಿನ ಮನೆಗೆ ಬರುತ್ತಾರೆ. ಬಂದವರನ್ನು ಗೌರವದಿಂದ ಕಾಣುವುದು ಸಾಮಾನ್ಯವಾಗಿ ಹೆಣ್ಣಿನವರ ಕರ್ತವ್ಯ. ಹೆಣ್ಣನ್ನು ವಸಗೆ ನಡೆಸಿ ಅವಳಿಗೆ ಮಡಿಲುದುಂಬಿ ನಂತರ ಎರಡೂಕಡೆಯವರು ಸೇರಿ ಲಗ್ನದ ಮಹೂರ್ತ ಗೊತ್ತುಪಡಿಸಲು ಪುರೋಹಿತರ ಬಳಿಗೆ ಹೋಗುತ್ತಾರೆ. ಇಬ್ಬರಿಗೂ ಒಪ್ಪಿಗೆಯಾದ ದಿನಕ್ಕೆ ಲಗ್ನ ಕಟ್ಟಿಸಿಕೊಂಡು ಬರುವ ವಾಡಿಕೆಯಿದೆ.

ಲಗ್ನದ ಸಿದ್ಧತೆಗಳ ನಂತರ ಚಪ್ಪರದ ದಿನವೆಂದು ಕರೆಯುವ ಮೊದಲ ಮದುವೆ ದಿನ ಆರಂಭ. ಚಪ್ಪರ ಹಾಕಲು ಊರಿನಲ್ಲಿರುವ ಅಣ್ಣತಮ್ಮಂದಿರಿಗೆ ಹೇಳುವುದು, ಈಶಾನ್ಯ ದಿಕ್ಕಿನಲ್ಲಿ ಒಂದು ಮರವನ್ನು ಹಾಕಿ ಅದಕ್ಕೆ ಪೂಜೆ ಮಾಡುವುದು, ನಂತರ ಚಪ್ಪರಕ್ಕೆ ಹಸಿರು ತೆಂಗಿನ ಗರಿ, ಮಾವಿನ ಸೊಪ್ಪಿನ ಅಲಂಕಾರ, ಕೆಂಪು ಕೇಸರಿ ಹೂವಿನ ಅಲಂಕಾರವೇ ಪ್ರಧಾನ. ಶಾಸ್ತ್ರದ ನೀರು ತರುವುದು, ಬಳೆ ತೊಡಿಸೋ ಶಾಸ್ತ್ರ, ಇವುಗಳ ನಂತರ ಬಂದ ನೆಂಟರಿಸ್ಟರಿಗೆ ಊಟ ನೀಡುವುದು, ಅದಾದ ನಂತರ ವಧುವರರಿಬ್ಬರೂ ಎರಡು ಮೂರು ಅರಿಸಿನ ಎಣ್ಣೆ ಶಾಸ್ತ್ರಗಳು, ಇಲ್ಲಿಂದ ಮುಂದೆ ವಧುವರರಿಬ್ಬರೂ 'ಹಸಿಮೈ'ಯವರು ಎಂದು ಪರಿಗಣಿಸಿ ಎಲ್ಲಿಯಾದರೂ ಹೋಗಬೇಕಾದರೆ ಗಂಡಿಗಾಗಲಿ, ಹೆಣ್ಣಿಗಾಗಲಿ ಜೊತೆಯಲ್ಲಿ ಒಬ್ಬರು ಇರಲೇಬೇಕು.

ಮದ್ದಿನಶಾಸ್ತ್ರದ ಮಾರನೇ ದಿನ ಗಂಡು ಮೆರೆಹೊರಡುವುದು, ಗಂಡು ಅಂದು ಬಿಳಿ ಅಂಗಿ, ಕಚ್ಚೆಪಂಚೆ, ತಲೆಗೆ ಪೇಟ, ಕರಿಕೋಟು ಮೇಲೊಂದು ಅಡ್ಡರುಮಾಲು ಕೊರಳಿಗೆ ಹಾರ, ತಲೆಗೆ ಬಾಸಿಂಗ ಕಾಲುಗಳಿಗೆ ಮಿಂಚು ಇವೆಲ್ಲವುಗಳಿಂದ ಗಂಡನ್ನು ಮೆರೆಹೊರಡುವಾಗ ಅಲಂಕರಿಸಲಾಗುತ್ತಿತ್ತು.

ವರನ ದಿಬ್ಬಣದವರು 'ನದಿರು' ಹೊರಟಿರುವರೆಂದು ಗೊತ್ತಾದಾಗ ಹೆಣ್ಣಿನ ಕಡೆಯವರು ಹೋಗಿ ಎದುರುಗೊಳ್ಳುವುದು ಎರಡೂ ಕಡೆಯವರು ಎರಡು ಛತ್ರಿಗಳನ್ನು ಕೂಡಿಸಿ ಅಕ್ಷತೆಗಳನ್ನು ಎರಚಿ ಎರಡೂ ಕಡೆಯವರು ಒಂದಾಗಿ ಹೆಣ್ಣಿನ ಮನೆಗೆ ಬರುತ್ತಾರೆ.

ಗಂಡನ್ನು ಮೆರೆ ಹೊರಡಿಸಿಕೊಂಡು ಬಂದ ನಂತರ ಧಾರೆಶಾಸ್ತ್ರದ ಚಪ್ಪರದಟ್ಟೆಗೆ ಕರೆತರುತ್ತಾರೆ. ಇದನ್ನು 'ಧಾರೆಮಂಟಪ' ಎಂದೇ ಕರೆಯಲಾಗುತ್ತದೆ. ಧಾರೆಮಂಟಪದಲ್ಲಿ ಗಂಡಿಗೊಂದು, ಹೆಣ್ಣಿಗೊಂದು ಎದುರು ಬದುರಾಗಿ ಹಸೆಮಣೆ ಹಾಕಲಾಗಿರುತ್ತದೆ. ಪುರೋಹಿತರ ಮಂತ್ರಘೋಷ ಹಾಗೂ ವಾದ್ಯದವರು ನುಡಿಸುವ ಗಟ್ಟಿಮೇಳಗಳೊಂದಿಗೆ ಶಾಸ್ತ್ರಗಳನ್ನು ಮುಗಿಸಲಾಗುತ್ತದೆ. ಸೋದರಮಾವ ವಧುವನ್ನು ಕೈ ಹಿಡಿದು ವರನ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಮದುವಣಗಿತ್ತಿಯನ್ನು ಹಸೆಮಣೆಯ ಮೇಲೆ ಗಂಡಿಗೆ ಎದುರಾಗಿ ಪಶ್ಚಿಮಾಭಿಮುಖಿಯಾಗಿ ನಿಲ್ಲಿಸುವನು. ಗಂಡು ಹೆಣ್ಣಿನ ನಡುವೆ 'ತೆರೆಬಟ್ಟೆ' ಹಿಡಿಯಲಾಗಿರುತ್ತದೆ. ಪುರೋಹಿತನ ನಿರ್ದೇಶನದಂತೆ ಮೂರು ಸಲ ಗಂಡು ಹೆಣ್ಣುಗಳು ಪರಸ್ಪರ ಜೀರಿಗೆ ಅಕ್ಷತೆಗಳನ್ನೂ ತಲೆಯ ಮೇಲೆ ಹಾಕುತ್ತಾರೆ. ಅನಂತರ ತೆರೆಯನ್ನು ಸರಿಸಿ ಮಾಂಗಲ್ಯದ ಜೊತೆಗೆ ಹಾಲುತುಪ್ಪದಿಂದ ತುಂಬಿದ ಚೆಂಬನ್ನು ಹಿರಿಯರಿಂದ ಮುಟ್ಟಿಸಿ ಮೊದಲು ಗಂಡು ಹೆಣ್ಣಿನ ತಂದೆತಾಯಿಯರು ಧಾರೆ ಎರೆಯುತ್ತಾರೆ. ಇದು ಕುಲದ ಸರ್ವರ ಒಪ್ಪಿಗೆಯಿಂದ ಆಗುವ ಕೆಲಸವೆಂದು ನಂಬಿಕೆ ಹಾಗೂ ಹಿರಿಯರ ಆಶೀರ್ವಾದ ವಧುವರರಿಗಿರಲಿ ಎಂಬುದು ಹಿರಿಯರ ಹಿಂದಿನ ಆಶಯವಾಗಿತ್ತು. ಇಲ್ಲಿಂದ ಮುಂದೆ ಬಂದ ನೆಂಟರಿಷ್ಟರಾದಿಯಾಗಿ ಎಲ್ಲರೂ ಹಾಲುಬಿಟ್ಟು ಅಕ್ಷತೆ ಹಾಕಿ ವಧುವರರಿಗೆ ಆಶೀರ್ವಾದ ಮಾಡುತ್ತಾರೆ. ಇಲ್ಲಿಗೆ ಮದುವೆ ಮುಗಿದ ಹಾಗೆ. ಇದಾದ ನಂತರ ಸೂರ್ಯನನ್ನು ತೋರಿಸುವ ಶಾಸ್ತ್ರ, ಹಸೆ ಹಚ್ಚುವುದು, ಕಂಕಣ ಬಿಚ್ಚಿಸುವುದು ಕಾರ್ಯಗಳು ನಡೆಯುತ್ತವೆ.

ಹೆಣ್ಣು ಕಳಿಸೋ ಶಾಸ್ತ್ರ, ಗಂಡಿನ ಮನೆಗೆ ಹೋಗಿ ಹೆಣ್ಣನ್ನು ಮತ್ತೆ ಆಕೆಯ ತವರುಮನೆಗೆ ಕರೆತರುವುದು. ಬಾಗಿಲು ತಡೆಯೋ ಶಾಸ್ತ್ರ, ಧಾರೆ ಮುಹೂರ್ತದ ದಿನ ಹೆಣ್ಣಿನ ಮನೆಯಲ್ಲಿ ಸಿಹಿಯೂಟವಾದರೆ ಹೆಣ್ಣು ಕರೆಯಲು ಬಂದವರಿಗೆ 'ಬೀಗರೂಟ' ಏರ್ಪಡಿಸಲಾಗುತ್ತದೆ. ಗಂಡು ಹೆಣ್ಣು ಹೆಣ್ಣಿನವರ ಮನೆಗೆ ಬಂದ ನಂತರ ವರೋಪಚಾರ, ಶೋಭನದೊಂದಿಗೆ ಗಂಡು ಹೆಣ್ಣು ಹೊಸ ಜೀವನಕ್ಕೆ ಕಾಲಿಡುತ್ತಾರೆ. ಹಾಗಾಗಿಯೇ ಮದುವೆ ಎನ್ನುವುದು ಮಾನವನ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿರುತ್ತದೆ.

ಕುಂಚಿಟಿಗರಲ್ಲಿ ಸಾಮಾನ್ಯವಾಗಿ ಎಲ್ಲರಂತೆಯೇ ಮೊದಲ ಬಾರಿಗೆ ಹೆಣ್ಣು ಗರ್ಭಿಣಿಯಾದಾಗ ಚೊಚ್ಚಿಲು ಬಾಣಂತಿತನಕ್ಕೆ ಕರೆದೊಯ್ಯುವ ಮುನ್ನ ಸೀಮಂತ ಮಾಡುವುದು, ಅದಾದ ನಂತರ ತವರಿಗೆ ಬಾಣಂತಿತನಕ್ಕೆ ಕರೆತರುವುದು, ಮಗುವಿನ ಜನನವಾದಾಗ ಸೂತಕವನ್ನು ಆಚರಿಸುವುದು ಇನ್ನುಳಿದ ಸಮುದಾಯಗಳಂತೆಯೇ ಇರುತ್ತದೆ. ಜಾತಕರ್ಮ ಮೊದಲ ಸಂಸ್ಕಾರವಾಗಿರುತ್ತದೆ. ತಾಯಿಯ ಗರ್ಭದಿಂದ ಮಗು ಹೊರಬಂದ ಮೇಲೆ ಹೊಕ್ಕಳ ಬಳ್ಳಿ ಕತ್ತರಿಸುವ ಮುನ್ನ ನಡೆಸುವ ಶಾಂತಿಕಾರ್ಯ. ಈ

ಸಂಸ್ಕಾರದ ಬಗ್ಗೆ ಕುಂಚಿಟಿಗ ಸಮುದಾಯದಲ್ಲಿ ಅಷ್ಟೊಂದು ಪ್ರಾಮುಖ್ಯತೆ ನೀಡಿದಂತೆ ಕಾಣುವುದಿಲ್ಲವಾದರೂ ತಿರಸ್ಕರಿಸಿಲ್ಲ. ಸರಳವಾಗಿ ಶಾಸ್ತ್ರೋಕ್ತವಾಗಿ ಈ ಶಾಂತಿಕಾರ್ಯ ನೆರವೇರುತ್ತದೆ.

ನಾಮಕರಣವು ಮಗುವಿಗೊಂದು ಹೆಸರಿಡುವ ಸಂಸ್ಕಾರ. ಸಾಮಾನ್ಯವಾಗಿ ಗುರುಹಿರಿಯರನ್ನು ಕೇಳಿ ಈ ಕಾರ್ಯವನ್ನು ಶುಭದಿನದಂದು ಇಟ್ಟುಕೊಳ್ಳುತ್ತಾರೆ. ಹೆಸರು ಬಲ, ನಾಮನಕ್ಷತ್ರ ಕೇಳಿ ಯಾವ ಅಕ್ಷರ ಬರುತ್ತದೋ ಆ ಅಕ್ಷರದಿಂದ ಆರಂಭವಾಗುವ ಹೆಸರನ್ನು ಮಗುವಿಗೆ ಇಡುವುದು ರೂಢಿ. ಈ ಸಂಪ್ರದಾಯದೊಂದಿಗೆ ಮನೆದೇವರುಗಳ ಹೆಸರುಗಳನ್ನು ಮಕ್ಕಳಲ್ಲಿ ಒಬ್ಬರಿಗಾದರೂ ಇಡುತ್ತಾರೆ. ಇಲ್ಲವೆ ಕುಟುಂಬದ ಮೂರ್‍ನಾಲ್ಕು ತಲೆಮಾರುಗಳ ಹಿಂದೆ ಬದುಕಿದವರ ಹೆಸರನ್ನು ನಾಮಕರಣ ಮಾಡಲಾಗುತ್ತದೆ. ಇಂತಹ ಹೆಸರುಗಳೆಲ್ಲಾ ಗಂಡಾದರೆ ಅಯ್ಯ, ಅಪ್ಪ, ಅಣ್ಣ, ಎಂದೂ ಹೆಣ್ಣಾದರೆ ಅಮ್ಮ, ಅಕ್ಕ ಎಂದು ಕೊನೆಗೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಸುಸ್ಥಿತಿಯಲ್ಲಿರುವ ಕುಟುಂಬಗಳು ಗೌಡ, ರೆಡ್ಡಿ, ಪಾಟೀಲ, ಗೌಂಡರ್ ಎಂದು ತಾವು ವಾಸಿಸುವ ಪ್ರದೇಶಕ್ಕನುಗುಣವಾದ ಹೆಸರುಗಳೂ ಚಾಲ್ತಿಯಲ್ಲಿವೆ.

ಮೂರನೇ ಸಂಸ್ಕಾರ ಹುಟ್ಟುಗೂದಲನ್ನು ತೆಗೆಸುವ ಚೌಲ ಕಾರ್ಯಕ್ರಮ. ಇದನ್ನು 'ಮಂಡೆ ಕೊಡುವುದು' ಎನ್ನಲಾಗುತ್ತದೆ. ಮನೆದೇವರ ಸನ್ನಿಧಿಯಲ್ಲಿ ಚೌಲದ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಕೆಲವೊಮ್ಮೆ ಮನೆದೇವರಿಗೆ ಪೂಜೆಸಲ್ಲಿಸಿ ತೀರ್ಥಪ್ರಸಾದ ತಂದು ಮನೆಯಲ್ಲಿಯೇ ಈ ಕಾರ್ಯ ನಡೆಸುವರು. ಕುಂಚಿಟಿಗರಲ್ಲಿ ನಾಮಕರಣ, ಚೌಲ ಕಾರ್ಯಗಳು ಅದ್ದೂರಿಯಾಗಿಯೇ ನಡೆಯುವುದು ಕಂಡು ಬರುತ್ತದೆ.

ಪಂಚಕರ್ಮಗಳಲ್ಲಿ ಅಂತ್ಯಸಂಸ್ಕಾರ ಅಥವಾ ಶವಸಂಸ್ಕಾರ ಕೊನೆಯದು. ತುಂಬೆ ಹೂವಿನ ಮೆರವಣಿಗೆ ಎಂದು ತಮಾಷೆ ಮಾಡುವ ಈ ಸಮುದಾಯದಲ್ಲಿ ಶವವನ್ನು ಸಮಾಧಿ ಮಾಡುವುದು ಹೆಚ್ಚು ರೂಢಿಯಲ್ಲಿದೆ. ಸತ್ತವರ ಮನೆಯಲ್ಲಿ ಅಂದು ಕಸ ಗುಡಿಸುವುದಾಗಲಿ, ನೆಲಸಾರಿಸುವುದಾಗಲಿ, ರಂಗೋಲಿ ಇಡುವುದಾಗಲಿ ಇರುವುದಿಲ್ಲ. ಶೋಕವೇ ಮಡುಗಟ್ಟಿರುವುದು ಇದಕ್ಕೆ ಕಾರಣವೆನಿಸುತ್ತದೆ. ಒಂದು ಪುಟ್ಟ ಮಡಿಕೆಯಲ್ಲಿ ಸ್ವಲ್ಪ ಅಕ್ಕಿ ಹಾಕಿ ಬೆರಣಿಯಿಂದ ಬೇಯಿಸುತ್ತಾರೆ. ಇದನ್ನು ಕೂಳು ಮಡಿಕೆ ಎಂದು ಕರೆಯುತ್ತಾರೆ. ಹಸಿರು ಬಿದಿರನ್ನು ಸೀಳಿ ಚಟ್ಟವನ್ನು ಸಿದ್ಧಪಡಿಸಿ ಅದರ ಮೇಲೆ ಶವವನ್ನು ಮಲಗಿಸುತ್ತಾರೆ. ಕಾಲು ಮಡಿಚಿ ಕೈಗಳನ್ನು ಎದೆಯ ಮೇಲಿಟ್ಟು ಮಲಗಿದ ಭಂಗಿಯಲ್ಲಿ ಶವವನ್ನಿಟ್ಟು ಬಿಳಿಬಟ್ಟೆ ಹೊದಿಸುತ್ತಾರೆ. ಇದಕ್ಕೆ 'ಸವಾರಿಬಟ್ಟೆ' ಎಂದು ಕರೆಯುವರು. ಆನಂತರ ನೀರಿನಿಂದ ಮುಖ ಒರೆಸಿ ವಿಭೂತಿ ಹಚ್ಚಿ ಹೂವಿನ ಹಾರ ಹಾಕಿ ಸಿಂಗರಿಸಲಾಗುತ್ತದೆ. ಬಾಯಿಗೆ ಕುಟ್ಟಿದ ಎಲೆಅಡಿಕೆ ಅಥವಾ ಅಕ್ಕಿಕಾಳು ಇಡುತ್ತಾರೆ. ಸಾವಿನ ಸುದ್ದಿ ತಿಳಿದವರೆಲ್ಲರೂ ಬಂದ ಮೇಲೆ ಶವದ ಮೆರವಣಿಗೆಯಾಗುತ್ತದೆ.

ಶವದ ಮೆರವಣಿಗೆಯು ಶೋಕ ತಪ್ತರಿಂದ ಸ್ಮಶಾನದ ಗುಂಡಿಯ ಬಳಿಗೆ ಬರುತ್ತದೆ. ಮಾರ್ಗಮಧ್ಯದಲ್ಲಿ ಶವ ಇಳಿಸಿ ಅದರ ಸುತ್ತಲೂ ಕೂಳಿನ ಮಡಕೆ ಹೊತ್ತವರು ಮೂರು ಸಾರಿ ಪ್ರದಕ್ಷಿಣೆ ಹಾಕಿ ಕುಕ್ಕುತ್ತಾರೆ.

ಸಾಮಾನ್ಯವಾಗಿ ಈ ಶಾಸ್ತ್ರವನ್ನು ಹಿರಿಯ ಮಗ ಅಥವಾ ಮೊಮ್ಮಗನಿಂದ ನೆರವೇರುತ್ತದೆ. ಸ್ಮಶಾನದಲ್ಲಿ ಶವವನ್ನು ಗುಂಡಿಗೆ ಮಲಗಿಸಿ ಅಂತಿಮ ಪೂಜೆ ಸಲ್ಲಿಸಲಾಗುತ್ತದೆ. ಅಲ್ಲಿ ಆತನ ಮೇಲೆ ಯಾವುದೇ ಲೌಕಿಕ ಬಂಧನಗಳಿರಬಾರದೆಂದು ಉಡಿದಾರ ಸಹಿತ ಕೊಯ್ದು ಹಾಕಲಾಗುತ್ತದೆ. ಆನಂತರ ಶವವನ್ನು ಬಂದವರೆಲ್ಲರೂ ಮೂರು ಹಿಡಿಮಣ್ಣನ್ನು ಹಾಕುವುದರೊಂದಿಗೆ ಮುಚ್ಚುತ್ತಾರೆ. ಸಮಾಧಿ ನಿರ್ಮಾಣವಾದ ಮೇಲೆ ಶವಸಂಸ್ಕಾರದಲ್ಲಿ ಪಾಲ್ಗೊಂಡವರು ನೀರು ಮುಟ್ಟಿ ಸತ್ತವರ ಮನೆಗೆ ಬಂದು ದೀಪ ನೋಡಿ ತದನಂತರ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುತ್ತಾರೆ.

ಸಂಸ್ಕಾರವಾದ ಮೂರು ದಿನಕ್ಕೆ ಹಾಲು ತುಪ್ಪ ಬಿಡುವ ಶಾಸ್ತ್ರವಿದೆ. ಇದನ್ನು ಕೂಳುಹಾಕುವುದು ಮೂರು ದಿನದ ಶಾಸ್ತ್ರ ಎನ್ನುತ್ತಾರೆ. ಅಣ್ಣ ತಮ್ಮಂದಿರು ಅಥವಾ ಸಪಿಂಡ, ಸಗೋತ್ರದವರೆಲ್ಲರೂ ಸೇರಿ ಕೂಳು ತಿನ್ನುವ ಶಾಸ್ತ್ರ ಮಾಡುತ್ತಾರೆ. ಉಳಿದವರಿಗೆ ಇದು ಸೂತಕದ ದಿನವಾಗಿರುತ್ತದೆ. ಹನ್ನೊಂದನೆಯ ದಿನಕ್ಕೆ ತಿಥಿ ಮಾಡುತ್ತಾರೆ. ಪುಣ್ಯವಂದನೆ ಮಾಡಿ ಸೂತಕ ಕಳೆದುಕೊಂಡ ಮೇಲೆ ಗತಿಸಿದ ಬಂಧುವಿನ ಹೆಸರಲ್ಲಿ ಅನ್ನದಾನ ಮಾಡುತ್ತಾರೆ. ಅಲ್ಲಿಗೆ ಶವಸಂಸ್ಕಾರ ಮುಕ್ತಾಯವಾಗುತ್ತದೆ. ಅವಿವಾಹಿತರು ಸತ್ತರೆ ಸಂಕ್ಷಿಪ್ತ ವಿಧಿಗಳ ಮೂಲಕ ಕೊನೆಗೊಳಿಸುತ್ತಾರೆ. ಇತ್ತೀಚೆಗೆ ಸಮಾಧಿ ಮಾಡುವ ಪದ್ಧತಿಗೆ ಬದಲಾಗಿ ಸುಡುವ ಪದ್ಧತಿ ಆಚರಣೆಯಲ್ಲಿ ಬರುತ್ತಿದೆ. ಕುಂಚಿಟಿಗರಲ್ಲಿ ಪಂಚಸಂಸ್ಕಾರಗಳನ್ನೊಳಗೊಂಡಂತೆ ಎಲ್ಲಾ ಸಂಪ್ರದಾಯ-ಪದ್ಧತಿ-ಆಚರಣೆ-ನಂಬಿಕೆ-ಸಂಸ್ಕಾರಗಳು ಬಹು ಹಿಂದಿನಿಂದಲೂ ಸುಸೂತ್ರವಾಗಿ ನಡೆದು ಬಂದರೂ ಇತ್ತಿತ್ತಲಾಗಿ ಸ್ವಲ್ಪಮಟ್ಟಿಗೆ ಬದಲಾವಣೆಗಳಾಗಿವೆ.

ಮೇಲಿನ ಎಲ್ಲಾ ಸಂಪ್ರದಾಯ, ಆಚರಣೆ ನಂಬಿಕೆಗಳು ನಿರ್ಬಂಧಗಳನ್ನು ಅವಲೋಕನ ಮಾಡಿದರೆ ಕುರುಬರಿಗೂ ಕುಂಚಟಿಗ ಸಮುದಾಯದವರಿಗೂ ಅಗಾಧವಾದ ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ. ಇವರ ಮದುವೆ ಶಾಸ್ತ್ರಗಳಿಗೂ, ಕುರುಬರ ಮದುವೆ ಶಾಸ್ತ್ರಗಳಿಗೂ ಅನ್ಯೋನ್ಯ ಸಂಬಂಧವಿದೆ. ಇಲ್ಲಿಯೂ ಕರಿಯ ಕಂಬಳಿ ಬಳಕೆ, ಕಂಕಣ ಕಟ್ಟುವಿಕೆ, ನಾಮಕರಣ, ಚೌಲ, ಶವಸಂಸ್ಕಾರಗಳು ಕುರುಬರಿಗೂ ಕುಂಚಿಟಿಗರಿಗೂ ಏಕರೂಪವಿರುವುದನ್ನು ಕಾಣಬಹುದು. ಏಕೆಂದರೆ ಕುರುಬ ಕೆಟ್ಟು ಕುಂಚಿಟಿಗನಾದಾಗ ಅಂತಹ ಮಹತ್ತರ ವ್ಯತ್ಯಾಸಗಳೇನೂ ಆಗದೆ ಉಳಿದಿರುವುದು ಕುಂಚಿಟಿಗ ಸಮುದಾಯವು ಒಂದು ಪ್ರಾಚೀನ ಸಮುದಾಯವಾಗಿದ್ದು ಕುರುಬರೊಂದಿಗೆ ನಿಕಟತೆಯಿರುವುದನ್ನು ಗಮನಿಸಬಹುದಾಗಿದೆ.

ಗೊಲ್ಲಕುರುಬರು

ಆಧುನಿಕ ವಿಚಾರವಂತರ ವ್ಯಾಪಕ ಟೀಕೆಗೆ ಗುರಿಯಾಗಿರುವ ಕಟ್ಟುನಿಟ್ಟಿನ 'ಕಟ್ಟುಪಾಡು' ಎಂದರೆ ಗೊಲ್ಲರ ಜನನ ಸಂಬಂಧಿ ವಿಚಾರಗಳು. ಗರ್ಭಿಣಿಗೆ ಹೆರಿಗೆ ನೋವು ಆರಂಭವಾದ ಕೂಡಲೆ ಆಕೆಯನ್ನು ಹಟ್ಟಿಯಿಂದ ಹೊರತಂದು ಬಾಣಂತಿ ಗುಬ್ಬದಲ್ಲಿರಿಸಿ ಸೂಲಗಿತ್ತಿಯಿಂದ ಹೆರಿಗೆ ಮಾಡಿಸಲಾಗುತ್ತದೆ. ಹೆರಿಗೆಯನ್ನು ಸೂತಕವೆಂದು ಭಾವಿಸಿದ ಈ ಸಮುದಾಯ ಬಾಣಂತಿ-ಮಗುವನ್ನು ಸತತ ಮೂರು

ತಿಂಗಳವರೆಗೆ ಹಟ್ಟಿಯ ಹೊರಗೆ ಇರಿಸಲಾಗುತ್ತದೆ. ಹೆರಿಗೆಯ ಎರಡು, ಮೂರು, ಐದು, ಒಂಭತ್ತನೇ ದಿನಗಳಲ್ಲಿ ಗುಬ್ಬದ ಜಾಗವನ್ನು ಸ್ವಚ್ಛಗೊಳಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ನಿಯತವಾಗಿ ಬಾಣಂತಿ ಗುಬ್ಬವನ್ನು ಬದಲಿಸುತ್ತಾ ಹೋಗುವರು. ಅನ್ನ ಆಹಾರಗಳು ಹಿಂದಿನ ಕಾಲದಲ್ಲಿ ಬಾಣಂತಿಯೇ ತಯಾರು ಮಾಡಿಕೊಳ್ಳಬೇಕಾಗುತ್ತಿತ್ತು. ಆಧುನಿಕತೆ ಪ್ರವೇಶಿಸಿದ ಮೇಲೆ ಅಲ್ಲಲ್ಲಿ ಸ್ವಲ್ಪ ಬದಲಾವಣೆಗಳು ಕಂಡುಬರುತ್ತಿವೆ.

ಹುಟ್ಟಿದ ಮೂರು ತಿಂಗಳು ಸೂತಕ ಕಳೆದುಕೊಳ್ಳಲು ಬಳಸಲಾಗುವ ಮೀಸಲು ಪಾವಿತ್ರತೆ ಹೊಂದಿದ ಗೋ ಅಥವಾ ಕುರಿ ಹಾಲನ್ನು 'ಜನಿಗೆ' ಎಂದು ಕರೆಯಲಾಗುತ್ತದೆ. ಜನಿಗೆ ಎಂದರೆ ದೇವರಿಗೆ ಮೀಸಲಾಗಿ ಬಿಟ್ಟ ಗೋವು ಮತ್ತು ಅದರ ಹಾಲು. ಜನಿಗೆ ಹಾಲಿನಿಂದ ತಾಯಿ ಮತ್ತು ಮಗುವನ್ನು ಶುದ್ಧೀಕರಿಸಿ ಮಗುವಿಗೆ ನಾಮಕರಣ ಮಾಡಿ ಹಟ್ಟಿಯ ಒಳಗೆ ಬರಮಾಡಿಕೊಳ್ಳುವ ವಿಶಿಷ್ಟ ಆಚರಣೆ ಜನಿಗೆಯು ಇಂದಿಗೂ ಅಸ್ತಿತ್ವದಲ್ಲಿದೆ. ಹಟ್ಟಿಯ ಉದಿಬಾಗಿಲಿನಲ್ಲಿ ಜನಿಗೆ ಮಾರುವುದನ್ನು 'ಹೊರಜನಿಗೆ' ಎಂದೂ, ನಂತರ ಗುಡಿ ಮುಂದೆ ಮಾಡುವ ಕ್ರಿಯೆಯನ್ನು 'ಒಳಜನಿಗೆ' ಎಂದು ಕರೆಯಲಾಗುತ್ತದೆ. ಈ ಕ್ರಿಯೆಯು ಪೂಜಾರಿಯಿಂದಲೇ ನೆರವೇರುತ್ತದೆ. ಇದು ಪ್ರಾದೇಶಿಕ ಭಿನ್ನತೆಯಿದ್ದರೂ ಒಟ್ಟು ಜೀವನ ಕ್ರಮದಲ್ಲಿ ಬದಲಾವಣೆಯಿರುವುದಿಲ್ಲ.

ಗೊಲ್ಲ ಮಹಿಳೆಗೆ ಒಂದು ಮಗುವಾದ ನಂತರ ತವರು ಮನೆಯವರು ಕಡಗವೊಂದನ್ನು ತೊಡಿಸುತ್ತಾರೆ. ಇದಕ್ಕೆ 'ಗೊಲ್ಲಕಡಗ' ಎನ್ನಲಾಗುವುದು. ಇದು ಹಿತ್ತಾಳೆಯ ಅಗಲವಾದ ಬಳೆಯಾಗಿದೆ. ಸಾಂಪ್ರದಾಯಿಕ ಉಡುಗೆ ತೊಡುಗೆಯಿಂದಲೇ ಇವರು ಗೊಲ್ಲರು ಎಂಬುದನ್ನು ಗುರುತಿಸಬಹುದು ಹೆಗಲಿಗೆ ಕಂಬಳಿ, ಪಟ್ಟೇದಟ್ಟಿ, ಕುಲಸೂಚಕ ತೊಡುಗೆಗಳು ಗಂಡಸರದಾದರೆ, ಹೆಣ್ಣು ಮಕ್ಕಳು ನಿರ್ದಿಷ್ಟ ವಯೋಮಾನದ ನಂತರ ರವಿಕೆ ತೊಡುವ ಸಂಪ್ರದಾಯವಿರುವುದಿಲ್ಲ.

ನಾಡುಗಳಿಂದ ದೂರವಿದ್ದು ಕಾಡುಗಳಲ್ಲಿಯೇ ವಾಸ ಮಾಡುತ್ತಿದ್ದರೂ ಹಬ್ಬ ಜಾತ್ರೆಗಳಿಗೇನೂ ಕೊರತೆಯಿಲ್ಲ. 'ಗೂಡಿನಹಬ್ಬ' ಇವರಲ್ಲಿ ವಿಶೇಷವಾದುದು. ಜಾತ್ರೆಗಳಲ್ಲಿ ಕ್ಯಾತಪ್ಪನ ಪರಿಸೆ ಪ್ರಮುಖವೆನಿಸಿದೆ. ಇವರಲ್ಲಿ ಮೂರು ರೀತಿಯ ವ್ರತಗಳಿವೆ. ೧ ಉಳ್ಳಿಬತ, ೨. ನವಣೆ ಬತ ೩. ಹಾಲು ಮೀಸಲು ಬತಗಳೆಂದು ವಿಂಗಡಿಸಬಹುದಾಗಿದೆ.

ಉಳ್ಳಿ ಮತ್ತು ನವಣೆ ಬತಗಳನ್ನು ಕ್ಯಾತಪ್ಪನ ಒಕ್ಕಲು ಮತ್ತು ಯರಬಳ್ಳಿ ಗುಡಿಕಟ್ಟಿನ ಒಕ್ಕಲು ಕಟ್ಟುನಿಟ್ಟಾಗಿ ಆಚರಿಸಿಕೊಂಡು ಬಂದರೆ, ಚಿತ್ರಮುತ್ತಿ ಮತ್ತು ರಾಮೇಗೌಡನ ಕುಲದಲ್ಲಿ ಈ ವ್ರತಗಳ ಆಚರಣೆಯಿರುವುದಿಲ್ಲ.

ಹಾಲು ಮೀಸಲು ಇವರ ವಿಶೇಷ ಆಚರಣೆ. ಮೂಲತಃ ಪಶುಪಾಲಕರಾದ ಗೊಲ್ಲರಲ್ಲಿ ಹಾಲು ತುಪ್ಪಕ್ಕೆ ಕೊರತೆಯಿಲ್ಲ. ತಾವು ಊಟ ಮಾಡಿ ಉಳಿದ ಹೈನನ್ನು ಮಾರಾಟ ಮಾಡುವುದನ್ನು ಉಪವೃತ್ತಿಯಾಗಿಸಿ ಕೊಂಡಿರುವ ಈ ಸಮುದಾಯವು 'ಹೈನಿ'ಗೆ ದೈವಿಕ ಪಾವಿತ್ರ್ಯ ನೀಡಿದ್ದಾರೆ. ವಾರದಲ್ಲಿ ಒಂದು ನಿಗಧಿತ

ದಿನದಲ್ಲಿ ತಮ್ಮ ಹಟ್ಟಿಗಳಲ್ಲಿ ದೇವರುಗಳಿಗೆ ವಿಧಿಬದ್ಧವಾಗಿ ಹಾಲನ್ನು ಮೀಸಲಿರಿಸುವ ಪದ್ಧತಿ ಎಲ್ಲಾ ಬೆಡಗುಗಳ ಗೊಲ್ಲರಲ್ಲಿದೆ. ಪ್ರತೀ ಮನೆಯಿಂದ ತರಲಾದ ಮೀಸಲು ಹಾಲನ್ನು ದೇವರ ಗುಡಿ ಬಳಿಯಿರುವ 'ವಾರದಮನೆ'ಯಲ್ಲಿ ಒಂದು ದೊಡ್ಡ ಹಂಡೆಯಲ್ಲಿ ಶೇಖರಿಸಲಾಗುತ್ತದೆ. ಈ ಹಾಲಿನ ಮೂಲಕ ತೆಗೆದ ತುಪ್ಪದಿಂದ 'ಗುಡಿದೀಪ' ಹಚ್ಚಲಾಗುತ್ತದೆ. ಈ ಪದ್ಧತಿಯಿಂದಾಗಿ ಎತ್ತಪ್ಪನನ್ನು 'ಹಾಲುದೇವರು' ಎಂದೇ ಕರೆಯಲಾಗುತ್ತದೆ.

ಹೆಣ್ಣು ಮಕ್ಕಳು ಮೈನೆರೆದ ಸಂದರ್ಭದಲ್ಲಿ ಕೂಡಲೇ ಹಟ್ಟಿಯ ಹೊರಗೆ ಹೊಂಗೆ ಮತ್ತು ಬೇವಿನ ಸೊಪ್ಪುಗಳಿಂದ ಗುಡಿಸಲು ಕಟ್ಟಿ ಅದರೊಳಕ್ಕೆ ಬಿಡಲಾಗುತ್ತದೆ. ಐದನೇ ದಿನ 'ಮಂಗಳ ಮಜ್ಜನ'ದ ನಂತರ ಕೊಬರಿ, ಕಡಲೆ, ಉತ್ತುತ್ತಿ, ಹಣ್ಣುಹೂಗಳಿಂದ ಮಡಿಲು ತುಂಬಿ 'ಸೇಸೆ' ಇಟ್ಟು ಮನೆಗೆ ಕರೆತಂದು ಕಂಬಳಿ ಹೊದಿಸಿ ಗುಡಿಯಲ್ಲಿ ಪೂಜೆ ಮಾಡಿಸುವ ಕ್ರಮವಿರುತ್ತದೆ.

ಗೊಲ್ಲರಲ್ಲಿ ಪೂಜಾರಿ ಪಟ್ಟಗಟ್ಟುವುದು ಒಂದು ಸಂಪ್ರದಾಯ. ಇವರಲ್ಲಿ ಪೂಜಾರಿ ಮನೆತನದವರಿಗೇ ಕಟ್ಟಬೇಕು. ಈ ಸಂದರ್ಭದಲ್ಲಿ ಗುಡಿಕಟ್ಟಿನ ಎಲ್ಲಾ ಭಕ್ತರ ಸಮಕ್ಷಮ ಕುಲಗುರುಗಳನ್ನು ಕರೆಸಿ ಅವರ ಪೌರೋಹಿತ್ಯದಲ್ಲಿ ಈ ಕಾರ್ಯ ನೆರವೇರುತ್ತದೆ. ಇವರಲ್ಲಿ ಶೈವ ಮತ್ತು ವೈಷ್ಣವ ಎಂಬ ಎರಡು ಧಾರ್ಮಿಕ ಪರಂಪರೆಗಳಿದ್ದು, ಶೈವ ಪರಂಪರೆಯ ಗುಡಿಕಟ್ಟಿನವರು ಸಾರವಾಡದ ಅಯ್ಯನವರನ್ನು ಕುಲಗುರುವೆಂದು ಭಾವಿಸಿದರೆ, ವೈಷ್ಣವ ಪರಂಪರೆಯ ಗುಡಿಕಟ್ಟಿನವರು ಪುಲೆಯ ತಾತಾಚಾರ್ಯ ವಂಶಸ್ಥರನ್ನು ಕುಲಗುರುವೆಂದು ಪರಿಗಣಿಸುತ್ತಾರೆ. ಇದು ಇವರ ಧರ್ಮಸಮನ್ವಯತೆ ತತ್ವವಾಗಿದೆ. ಏಕೆಂದರೆ ದೈವಾರಾಧನೆ ಸಂದರ್ಭದಲ್ಲಿ ಈ ಎರಡೂ ಪರಂಪರೆಗಳು ಭಿನ್ನತೆ ಹೊಂದದೆ ಕೆಲಸ ಮಾಡುತ್ತವೆ.

ಕುಟುಂಬ ಕಟ್ಟಡಕ್ಕೆ ಮದುವೆ ಮಹಾದ್ವಾರ. ಕುಟುಂಬದಲ್ಲಿ ಕಾಣಬರುವ ಎಲ್ಲಾ ಸಂಬಂಧಗಳನ್ನು ನಿರ್ದೇಶಿಸುವುದು ಮದುವೆ. "ಹಲವಾರು ವ್ಯಕ್ತಿಗಳನ್ನು ಒಂದು ಆರ್ಥಿಕ ನೆಲೆಯಲ್ಲಿ ನಿಲ್ಲಿಸಿ ಅದರ ಸುತ್ತಲೂ ಸಾಮಾಜಿಕವಾದ ಬಲೆಯನ್ನು ಹೆಣೆದು ಅವರ ಬಾಳಿಗೊಂದು ಅರ್ಥವನ್ನು ಸಾರ್ಥಕತೆಯನ್ನು, ಸ್ವಾರಸ್ಯವನ್ನು ಒದಗಿಸಿ ಕುಟುಂಬವನ್ನು ಸಾಮಾಜಿಕ ಸಂದರ್ಭಕ್ಕೆ ಸಂಯೋಜಿಸಿ ಅದರ ವೈಶಿಷ್ಟ್ಯವನ್ನು ಉಳಿಸಿಕೊಂಡಿರುವುದು ಮದುವೆ"[೨] ಎಂಬುದಾಗಿ ಚ.ನ.ಶಂಕರರಾವ್ ಅವರ ಅಭಿಪ್ರಾಯವಾಗಿದೆ. ಮಾನವ ಸಂಸ್ಕೃತಿ ಎಷ್ಟು ಪ್ರಾಚೀನವೋ ಅಷ್ಟೇ ಪ್ರಾಚೀನ ವಿವಾಹ. ಬುಡಕಟ್ಟುಗಳಲ್ಲಿ ಮದುವೆ ವಿಧಿಗಳು ಸರಳವಾಗಿರುತ್ತವೆ. ತಮ್ಮ ಭೌತಿಕ ಪರಿಸರದಲ್ಲಿ ಹಿರಿಯರ ಸಮಕ್ಷಮದಲ್ಲಿ ವಿವಾಹ ವಿಧಿಗಳು ನಡೆಯುತ್ತವೆ.

ಗೊಲ್ಲರ ಮದುವೆಯಲ್ಲಿ ಶಿಷ್ಟ ಜನಸಮುದಾಯದ ಅನೇಕ ಆಚರಣೆಗಳು ನುಸುಳಿಕೊಂಡಿದ್ದರೂ ಬಹುತೇಕವಾಗಿ ಬುಡಕಟ್ಟು ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ

ಕೆಲವು ಸಾಮಾಜಿಕ ರೂಢಿನಿಯಮಗಳನ್ನು ಪಾಲಿಸುತ್ತಿದ್ದಾರೆ. ಮೊದಲು ಬಹುತೇಕ ಬುಡಕಟ್ಟುಗಳಲ್ಲಿ ಇದ್ದಂತೆ ಕನ್ಯಾಶುಲ್ಕ ಪದ್ಧತಿಯಿತ್ತು. ಈ ಪದ್ಧತಿಯನ್ನು ಸಮಾಜಶಾಸ್ತ್ರೀಯ ಪರಿಕಲ್ಪನೆಯಲ್ಲಿ ಹೇಳುವುದಾದರೆ 'ಆರ್ಶವಿವಾಹ'ವೆಂದು ಕರೆಯಲಾಗುವುದು. ಇವರ ಮದುವೆ ಸಂದರ್ಭದಲ್ಲಿ ಅನುಸರಿಸುವ ಸಾಂಪ್ರದಾಯಿಕ ಶಾಸ್ತ್ರಗಳನ್ನು ನಿಶ್ಚಯ, ಅರುಣೆ, ಚಪ್ಪರ, ಹಾಲಸ್ತ, ಒಳ್ಳಕ್ಕಿ, ಹಸೆ, ಧಾರೆ, ಓದಕ್ಕಿ, ಜಾಡಿ, ಬುವ, ಮನೆದುಂಬಿಸುವುದು ಪ್ರಾದೇಶಿಕವಾಗಿ ಭಿನ್ನತೆಯಿರಬಹುದಾದರೂ ಆಚರಣೆ ಒಂದೇ ಆಗಿದ್ದು ವೈಶಿಷ್ಟ್ಯಪೂರ್ಣವಾಗಿವೆ.

ಶಿಷ್ಟ ಜನ ಸಮುದಾಯಗಳಲ್ಲಿ ಜರುಗುವ ಪ್ರಕ್ರಿಯೆಗಳೇ ಇಲ್ಲಿಯೂ ಇದ್ದು 'ವೀಳ್ಯ'ವನ್ನು ಬದಲಾಯಿಸುವುದರ ಮೂಲಕ ಒಪ್ಪಂದದ ಮಾತುಕತೆ ನಡೆಸುತ್ತಾರೆ. ಈ ಸಂದರ್ಭದಲ್ಲಿ ಹಸು ಶಕುನ, ದೀಪಶಕುನ ಮುಖ್ಯವಾದವು. ಹೆಣ್ಣಿನ ಮನೆಯ ಕೊಟ್ಟಿಗೆಯಲ್ಲಿರುವ ದನಕರುಗಳು ಕಿವಿ ನಿಮಿರಿಸಿಕೊಂಡು ಮೆಲುಕು ಹಾಕುತ್ತಿದ್ದರೆ ಹಸುಶಕುನವೆಂದು ಕರೆಯಲಾಗುತ್ತದೆ. ಹಾಗೆಯೇ ಗಂಡಿನ ಮನೆಯಲ್ಲಿ ರಾತ್ರಿಯಿಡೀ ನಂದದೆ ದೀಪಬೆಳಗಿದ್ದರೆ ಅದು ದೀಪಶಕುನ. ಇವೆರಡೂ ಒಳಿತೆಂದು ಭಾವಿಸಲಾಗುವುದು.

ಧಾರೆಯ ಹಿಂದಿನ ದಿನ ಆರಂಭವಾಗುವ ಈ ಆಚರಣೆ ವಿಶೇಷವಾಗಿ ಗಮನ ಸೆಳೆಯುತ್ತದೆ. ಹಟ್ಟಿಯೊಳಗಿನ ದೇವರಗುಡಿಗೆ ಮದುಮಗನನ್ನು ಕಳಸಾರತಿಯೊಂದಿಗೆ ಕರೆತಂದು ಹಸೆಯಮಣೆ ಮೇಲೆ ಕೂರಿಸಿ, ಆತನ ತಲೆಗೆ ಹರಿವಾಣದೊಳಗಿನ ಹಾಲನ್ನು ವೀಳ್ಯದ ಎಲೆಯೊಂದಿಗೆ ಮೂರು ಸಾರಿ ಪೂಜಾರಿ ಒತ್ತುತ್ತಾನೆ. ನಂತರ ತಂದೆತಾಯಿಗಳು ಬಂಧು ಬಳಗ ಈ ಕ್ರಿಯೆಯನ್ನು ಅನುಸರಿಸುತ್ತಾರೆ. ಇದೇ ರೀತಿ ಹೆಣ್ಣಿನ ಮನೆಯಲ್ಲಿಯೂ ಜರುಗುತ್ತದೆ. ಹಾಲಸ್ತ ಆದ ನಂತರ ಮದುಮಕ್ಕಳನ್ನು 'ಹಸಿಮೈ' ಎಂದು ಪರಿಗಣಿಸಲಾಗುತ್ತದೆ. ಪಶುಪಾಲನಾ ಸಂಸ್ಕೃತಿಯವರಾದ ಇವರ ಬದುಕಿನ ಎಲ್ಲಾ ಸ್ತರಗಳಲ್ಲಿ 'ಹಾಲು' ಪ್ರಮುಖ ಪಾತ್ರ ವಹಿಸುತ್ತದೆ.

ಮದುವೆ ಪ್ರಕ್ರಿಯೆಯಲ್ಲಿ 'ಧಾರೆ' ಕೇಂದ್ರಬಿಂದು, ಇತರೆ ಸಮುದಾಯಗಳಲ್ಲಿ ಚಪ್ಪರದ ಅಡಿಯಲ್ಲಿ ನಡೆದರೆ ಇವರಲ್ಲಿ ಹಟ್ಟಿಯ ಹೊರಗಿನ 'ಪಾರಿಬೇಲಿ' ಹತ್ತಿರ ಜರುಗುತ್ತದೆ. ಅಲ್ಲಿ ಹೆಣ್ಣು ಗಂಡಿಗೆ ಪ್ರತ್ಯೇಕ ಧಾರೆ ಚಪ್ಪರಗಳನ್ನು ನಿರ್ಮಿಸಲಾಗಿರುತ್ತದೆ. ಅದರ ಸಮೀಪದಲ್ಲೇ 'ಸುಳ್ನೀರು' ಶಾಸ್ತ್ರ ಮುಗಿಸಿ ಹೆಣ್ಣಿನ ಧಾರೆ ಚಪ್ಪರದಲ್ಲಿ ಗಂಡು ಹೆಣ್ಣನ್ನು 'ಧಾರೆಹಸೆ' ಮೇಲೆ ಕೂರಿಸುವರು. ಹಟ್ಟಿಗೌಡ, ಪೂಜಾರಿ, ಹಿರಿಯರ ಸಮ್ಮುಖದಲ್ಲಿ ಮೊದಲು ಗಂಡು ಹೆಣ್ಣಿನ ಬೊಗಸೆಗೆ ಹಾಲು ಬಿಡುತ್ತಾನೆ. ಹೆಣ್ಣು ತನ್ನ ಬೊಗಸೆಯಿಂದ ಗಂಡಿನ ಬೊಗಸೆಗೆ ಹಾಲು ಬಿಡುತ್ತಾಳೆ. ನಂತರ ಹೆಣ್ಣಿನ ಕೈ ಮೇಲೆ ಗಂಡಿನ ಕೈಯಿರಿಸಿ ಪೂಜಾರಿಗೌಡ ಮುಂತಾದವರು ಹಾಲು ಎರೆದ ನಂತರ ಸೂರ್ಯ ಚಂದ್ರರ ಸಾಕ್ಷಿ ಗುರುಹಿರಿಯರ ಪಾದಸಾಕ್ಷಿ, ನಮ್ಮ ತಂದೆತಾಯಿ ಸಾಕ್ಷಿಯಾಗಿ ನಾನೇ ಗಂಡ ನೀನೆ ಹೆಂಡತಿ ಎಂದು ಗಂಡು ಭಾಷೆ ಇಟ್ಟಾಗ ಹೆಣ್ಣು ಇದೇ ರೀತಿ ಹೇಳಿ ಗಂಡನಿಗೆ ಆಣೆ ಮಾಡುತ್ತಾಳೆ. ಮುಂದಿನ ಹಂತವೇ ಮಂಗಳ ಸೂತ್ರಧಾರಣೆ.

ಗಂಡು ಹೆಣ್ಣಿಗೆ ತಾಳಿ ಕಟ್ಟಿದ ನಂತರ ಜಾಡಿಯಲ್ಲಿ ವೀಳ್ಯವನ್ನು ಇಟ್ಟು ಕುಲಸ್ತರಿಗೆ ಕೈವಾಡದವರಿಗೆ ಹಂಚುವುದು, ಹಸೆಹಚ್ಚುವುದು, ಚಪ್ಪರದಡಿಯಲ್ಲಿ ಕೂತ ಮದುಮಕ್ಕಳಿಗೆ ಬೂವ ತಯಾರಿಸಿ ಅವರಿಗೆ ತೋರಿಸಿ ಒಂದೇ ಬೆಡಗಿನ ಕುಲಸ್ಥರು ಕಂಬಳಿ ಮುಚ್ಚಿಕೊಂಡು ಊಟಮಾಡುವುದು, ಮನೆದುಂಬಿಸುವ ಸಂದರ್ಭದಲ್ಲಿ ಕಡೆಗೋಲು ಪೂಜೆ, ಇವೆಲ್ಲವೂ ಪ್ರಮುಖವಾದ ಆಚರಣೆಗಳಾಗಿ ಕಂಡು ಬರುತ್ತವೆ. ಇತ್ತೀಚೆಗೆ ಇವರೂ ಕೂಡ ಕಲ್ಯಾಣ ಮಂಟಪದ ಹಾದಿ ತುಳಿದಿರುವುದರಿಂದಾಗಿ ಈ ಬೆಳವಣಿಗೆ ಸಾಮಾಜಿಕ ಚಲನೆ ಮತ್ತು ಪರಿವರ್ತನೆಗೆ ಸಾಕ್ಷಿಯಾಗಿದೆ.

ಗೊಲ್ಲರಲ್ಲಿಯೂ ಸತ್ತವರ ದೇಹಕ್ಕೆ ಸಲ್ಲಿಸುವ ಗೌರವಕ್ಕೆ ಶವಸಂಸ್ಕಾರ ಎಂದೇ ಕರೆಯುತ್ತಾರೆ. ಸಾಮಾನ್ಯವಾಗಿ ಶವವನ್ನು ಹೂಳುವ ಪದ್ಧತಿಯಿರುವ ಇವರಲ್ಲಿ ಶವವನ್ನು ಸಾಗಿಸುವ ಮುನ್ನ ವಿಧವೆಯಿಂದ ಅಂಗೈ ಮುಂಗೈಯಲ್ಲಿ ಮೂರು ಸಾರಿ ಅಕ್ಕಿ ಹಾಕಿಸಿ 'ಶವದನ್ನ' ತಯಾರಿಸಿ ಶವದೊಂದಿಗೆ ತೆಗೆದುಕೊಂಡು ಹೋಗಿ ದಾರಿಮಧ್ಯದಲ್ಲಿ ಹಸಿಗಿಡದ ಬುಡದಲ್ಲಿಟ್ಟ ಕಲ್ಲು ಹೊಡೆಯುವ ಕ್ರಿಯೆ ಮುಖ್ಯವಾಗಿರುತ್ತದೆ. ಮಣ್ಣಾದ ಮೇಲೆ ಮರಣ ಹೊಂದಿದ ವ್ಯಕ್ತಿಯ ಕಳ್ಳುಬಳ್ಳಿಯವರು ನೆಂಟರಾದವರಿಗೆ ಎಲೆ ಅಡಿಕೆ ಕೊಡುತ್ತಾರೆ. ನೆಂಟರು ಅದನ್ನು ಅಲ್ಲಿಯೇ ಜಗಿದು ಉಗುಳುತ್ತಾರೆ.

ಹೆಣ ಹೊತ್ತವರು ಮೂರು ದಿನದ ಕೂಳು ಮುಗಿದು ಸೂತಕ ಕಳೆಯುವವರೆಗೆ ಮನೆಯಿಂದ ಹೊರಗೆ ಇರಬೇಕು. ಕೂಳಿನ ದಿನ ಮನೆಯ ಮುಂದೆ ಎರಡು ಒನಕೆಯ ಮೇಲೆ ಕೂತು ಹೆಗಲು ಇಳಿಸಿಕೊಳ್ಳುತ್ತಾರೆ. 'ವಲೆ' ತೀರುವ ತನಕ ಹಟ್ಟಿಯ ಗುಡಿಬಾಗಿಲಿಗೆ ಕಳ್ಳಿ ಕಟ್ಟುತ್ತಾರೆ. ನಂತರ ಅಮಾಸೆ ಪೂಜಾರಿಯಿಂದ 'ಕಮರು'(ಕರ್ಮ)ಕಳೆದುಕೊಳ್ಳುತ್ತಾರೆ. ಹೀಗೆ ಗೊಲ್ಲ ಕುರುಬರ ಆಚರಣೆ ಸಂಪ್ರದಾಯಗಳು ವೈವಿಧ್ಯತೆಯನ್ನು ಹೊಂದಿವೆ.

ದಾಸ ಕುರುಬರು

ಕರ್ನಾಟಕದಲ್ಲಿ ಪ್ರಚಲಿತವಿರುವ ಪ್ರಮುಖ ಸಂಪ್ರದಾಯಗಳಲ್ಲಿ ದಾಸ ಸಂಪ್ರದಾಯವೂ ಒಂದಾಗಿದೆ. ಈ ಸಂಪ್ರದಾಯವು ಜಾತಿ ಪ್ರದೇಶಗಳಿಗೆ ಸೀಮಿತವಾಗಿಲ್ಲದಿರುವುದು ಇದರ ವಿಶೇಷ. ಈ ಸಂಪ್ರದಾಯವನ್ನು ಆಚರಿಸುವವರನ್ನು ದಾಸಪ್ಪಗಳೆಂದು ಕರೆಯುತ್ತಾರೆ. ಇವರು ತಿರುಪತಿ ತಿಮ್ಮಪ್ಪನ ಖಾಸಾಭಕ್ತರು. ಬರೀ ಭಕ್ತರಲ್ಲದೆ ದೇವರ ನಿಷ್ಠಾವಂತ ಸೇವಕರೂ ಆಗಿರುವರು. ವೆಂಕಟರಮಣನ ಪ್ರತಿನಿಧಿಯಾಗಿರುವ ಇವರು ಒಬ್ಬ ಯೋಗ್ಯ ಗುರುವಿನ ಮೂಲಕ ದೇವರ ದೀಕ್ಷೆ ಪಡೆಯುತ್ತಾನೆ. ಅದರ ಗುರುತಿಗಾಗಿ ಮುದ್ರೆ ಹಾಕಿಕೊಳ್ಳುತ್ತಾರೆ. ದೇವರ ಲಾಂಛನವನ್ನು ಸ್ವೀಕರಿಸುತ್ತಾರೆ. ತಿಮ್ಮಪ್ಪ ದಾಸಪ್ಪನ ರೂಪದಲ್ಲಿ ಕಾಣಿಸುವನೆಂಬ ನಂಬಿಕೆಯಿಂದಾಗಿಯೇ ಈ ಸಂಪ್ರದಾಯವು ಆಚರಣೆಯಾಗಿ ಬೆಳೆದು ಬಂದಿದೆ. ಇದು ದಾಸಕುರುಬರ ಸಂಪ್ರದಾಯವೂ ಆಗಿದೆ.

ದಾಸಕುರುಬರಾದವರು ಕಡ್ಡಾಯವಾಗಿ ತಮ್ಮ ಮನೆಯ ಗಂಡುಮಕ್ಕಳಿಗೆ 'ದಾಸದೀಕ್ಷೆ' ಕೊಡಿಸುತ್ತಾರೆ. ಹೆಣ್ಣುಮಕ್ಕಳಿಗೆ 'ದಾಸದೀಕ್ಷೆ' ಸಲ್ಲದೆಂದು ದಾಸಕುರುಬರ ಅಚಲವಾದ ನಂಬಿಕೆ. ದಾಸಪ್ಪ ದೀಕ್ಷೆಯನ್ನು ಇವರು ತಿರುಪತಿ ತಿಮ್ಮಪ್ಪನ ಅರ್ಚಕನ ಹೊರತು ಬೇರೆ ಯಾರಿಂದಲೂ ಕೊಡಿಸುವುದಿಲ್ಲ. ಗಂಡು ಮಗುವು ಹದಿನೈದು ವರ್ಷದವನಾಗುವುದರೊಳಗೆ ದಾಸದೀಕ್ಷೆಯನ್ನು ಪಡೆಯಲೇಬೇಕು. ತಿರುಪತಿಗೆ ಗಂಡುಮಗುವನ್ನು ಕರೆದುಕೊಂಡು ಹೋಗುವ ಪೂರ್ವದಲ್ಲಿ ದಾಸಕುರುಬರು ತಮ್ಮ ಮನೆಯಲ್ಲಿಯೇ ಒಂದು ಸಣ್ಣ ಆಚರಣೆಯನ್ನೂ ಮಾಡುವರು.

ದಾಸಪ್ಪನಾಗಲಿರುವ ಹುಡುಗನಿಗೆ ಶುಭದಿನದಂದು ಶುಭ್ರಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸುವರು. ಕಂಬಳಿ ಹಾಸಿ ಸಾಸಕ್ಕಿ ಹೊಯ್ದು ಅದರ ಮೇಲೆ ಹುಡುಗನನ್ನು ಕೂಡ್ರಿಸುತ್ತಾರೆ. ಅವನ ಕೈಗೆ ಕಂಕಣ ಕಟ್ಟುತ್ತಾರೆ. ಮನೆಯ ಮಹಿಳೆಯರು ಆರತಿ ಬೆಳಗುತ್ತಾರೆ. ಇಡೀ ಆಚರಣೆಯು ಮದುವೆಯನ್ನು ನೆನಪಿಸುವಂತಿರುತ್ತದೆ. ತಿರುಪತಿ ತಿಮ್ಮಪ್ಪನೊಂದಿಗೆ ಈ ಹುಡುಗನ ವಿವಾಹವಾಯಿತೆಂದು ಭಾವಿಸಲಾಗುತ್ತದೆ. ಬಲಭಾಗಕ್ಕೆ ಚಕ್ರ ಎಡಬಾಗಕ್ಕೆ ಶಂಖ ಮುದ್ರೆಯೊತ್ತಿ ಆಚರಣೆ ಮುಗಿದ ನಂತರ ಹುಡುಗನನ್ನು ಕರೆದುಕೊಂಡು ತಿರುಪತಿಗೆ ಪ್ರಯಾಣ ಬೆಳೆಸುವರು. ತಿರುಪತಿ ತಲುಪಿದ ನಂತರ ತಿಮ್ಮಪ್ಪನ ಅರ್ಚಕರನ್ನು ಭೇಟಿ ಮಾಡಿ ದೀಕ್ಷೆ ನೀಡುವ ದಿನಾಂಕವನ್ನು ಗೊತ್ತುಪಡಿಸುವರು.

ನಿಗಧಿಯಾದ ದಿನ ನಸುಕಿನಲ್ಲಿಯೇ ಸ್ನಾನಮಾಡಿಸಿ ಅವನ ಭುಜಕ್ಕೆ ಬಿಳಿನಾಮ ಲೇಪಿಸಿ ಸ್ವಾಮಿಯ ಸನ್ನಿಧಾನಕ್ಕೆ ಕರೆತರುತ್ತಾರೆ. ಅರ್ಚಕನಾದವನು ಬಿಳಿ ನಾಮ ಲೇಪಿತ ಭುಜಗಳಿಗೆ ವಿಶಿಷ್ಟವಾದ ಮುದ್ರೆಗಳನ್ನು ಒತ್ತುತ್ತಾರೆ. ಮುದ್ರೆ ಒತ್ತಲು ಅರ್ಚಕರು ತಾಮ್ರಲೋಹದ ಅಚ್ಚುಗಳನ್ನು ಬಳಸುತ್ತಾರೆ. ಮುದ್ರೆ ಸ್ಥಿರವಾಗಿ ಅವನ ಭುಜದ ಮೇಲೆ ಸ್ಥಿರವಾಗಿ ಉಳಿಯಲಿ ಎನ್ನುವ ಉದ್ದೇಶದಿಂದ ತಾಮ್ರದ ಅಚ್ಚುಗಳನ್ನು ಕರ್ಪೂರದ ಉರಿಯಲ್ಲಿ ಕಾಯಿಸಿ ಭುಜಗಳಿಗೆ ಹಚ್ಚುವರು. ಆಗ ಸುಟ್ಟ ಗಾಯಗಳಾಗುತ್ತವೆ. ಆ ಗಾಯದ ಮೇಲ್ಪದರ ಕಳೆದ ಕೆಲವು ದಿನಗಳ ನಂತರ ಶಂಖ ಹಾಗೂ ಚಕ್ರದ ಮುದ್ರೆಗಳು ಅವನ ಭುಜದ ಮೇಲೆ ಶಾಶ್ವತವಾಗಿ ಉಳಿಯುತ್ತವೆ. ಹೀಗೆ ಕುರುಬನಾದ ಈ ಹುಡುಗ ಕುರುಬ ದಾಸಪ್ಪನಾಗಿ ಹರಿಯ ಒಕ್ಕಲಾಗಿ ಪರಿವರ್ತನೆಗೊಳ್ಳುತ್ತಾನೆ.

ಶಂಖಚಕ್ರ ಲಾಂಛನಗಳು ಅವನ ಭುಜದ ಮೇಲೆ ಬಿದ್ದ ನಂತರ ದಾಸಪ್ಪನು ವಿಶೇಷವಾದ ವೇಷಭೂಷಣ ಧರಿಸಲು ಆರಂಭಿಸುತ್ತಾನೆ. ದಾಸಪ್ಪನಾದ ಮೇಲೆ ನಿತ್ಯವೂ ಸ್ನಾನ ಮಾಡಲೇಬೇಕು. ಸ್ನಾನಾನಂತರ ಹಣೆಯ ಮೇಲೆ ಲಂಬವಾಗಿ ಎರಡು ಬಿಳಿ ಅವುಗಳ ಮಧ್ಯೆ ಕೆಂಪುನಾಮ ಧಾರಣೆ ಮಾಡಿಕೊಳ್ಳಬೇಕು. ಕುರುಬ ಮೂಲ ಭಂಡಾರದ ನೆಲೆಯಿಂದ ಲಾಂಛನ ಪಲ್ಲಟಗೊಳ್ಳುವುದನ್ನು ಕಾಣಬಹುದು. ಲಾಂಛನ ಪಲ್ಲಟಗೊಂಡ ಮೇಲೆ ತಾನು ಶ್ರೇಷ್ಠ ಎಂಬ ಭಾವನೆಯು ಅವನಲ್ಲಿ ಮೊಳಕೆಯೊಡೆಯುತ್ತದೆ. ಭಂಡಾರಕ್ಕಿಂತ ಗಂಧಶ್ರೇಷ್ಠವೆಂಬ ಹಿರಿಮೆ ಅವನಲ್ಲಿ ಬೆಳೆಯುತ್ತಾ ಹೋಗುವುದು.

ದಾಸಪ್ಪನಾದವನು ತನ್ನ ವೇಷದ ಮೂಲಕವೇ ಅನ್ಯ ಕುರುಬರಿಗಿಂತ ಭಿನ್ನ. ಇತ್ತೀಚೆಗೆ ಪೈಜಾಮ ಅಂಗಿ ತೊಟ್ಟು ಸೊಂಟಕ್ಕೆ ಮಡಿ ಕಟ್ಟಿಕೊಳ್ಳುತ್ತಾನೆ. ಈ 'ಮಡಿ' ರೇಷ್ಮೆ ಬಟ್ಟೆಯದಾಗಿದ್ದು ಕೆಂಪು, ಹಳದಿ, ಹಸಿರು ಯಾವ ಬಣ್ಣದ್ದಾದರೂ ಆಗಿರಬಹುದು. ಇದು ಕೂಡ ಭಿನ್ನತೆಯ ಸಂಕೇತವಾಗಿರುತ್ತದೆ. ಮಾಂಸಾಹಾರಿಗಳಾದ ಕುರುಬರು ಮೈಲಿಗೆಯವರು, ತಾನು ಅದನ್ನು ತ್ಯಜಿಸಿ ಹೊಟ್ಟೆಯ ಸುತ್ತಲೂ 'ಮಡಿ' ಸುತ್ತಿಕೊಂಡು ಮಡಿವಂತನಾಗಿದ್ದೇನೆ ಎನ್ನುವ ನಿಲುವು ಭೇದ ಬೋಧಿಸುವ ಸಂಸ್ಕೃತಿಯ ದ್ಯೋತಕವಾಗಿದೆ.

ದಾಸಕುರುಬನಾದ ಮೇಲೆ ಗಂಟೆ, ಜಾಗಟೆ, ಗರುಡಗಂಭ, ಭವನಾಸಿ, ಜೋಳಿಗೆ ಈತನ ಪ್ರಮುಖ ಪರಿಕರಗಳು. ಇವುಗಳ ಮೂಲಕ ತಿಮ್ಮಪ್ಪನ ಸೇವೆ ಮಾಡುವುದರಿಂದ ಭವನಾಶವಾಗಿ ಮುಕ್ತಿಯ ಮಾರ್ಗ ತೆರೆದುಕೊಳ್ಳುತ್ತದೆಂದು ಬಲವಾಗಿ ನಂಬುತ್ತಾರೆ. ವಿಷ್ಣುಭಕ್ತರ ಮನೆಯಲ್ಲಿ ನಡೆಯುವ ಶುಭಕಾರ್ಯಗಳಿಗೆ ದಾಸ ಕುರುಬರನ್ನು ಕರೆಸುವರು. ಕುರುಬರಲ್ಲದ ವಿಷ್ಣು ಭಕ್ತರೂ ಇವರನ್ನು ಮನೆಗೆ ಕರೆಸಿಕೊಂಡು ಕಟ್ಟಳೆ ತೀರಿಸುತ್ತಾರೆ. ಭಕ್ತರ ಮನೆಗೆ ಹರಕೆ ತೀರಿಸಲು ಹೊರಟಾಗ ದಾಸಪ್ಪ ಶಂಖ, ಜಾಗಟೆ, ಭವನಾಸಿ ಗರುಡಗಂಭಗಳೊಂದಿಗೆ ಹೋಗುತ್ತಾನೆ. ಆ ಮನೆಗೆ ಹೋಗಿ ವಿಷ್ಣುವಿನ ಸ್ತುತಿ ಮಾಡುತ್ತಾ ಪೂಜೆ ನೆರವೇರಿಸುವನು. ಪೂಜೆ ಮುಗಿದ ನಂತರ ದಾಸಪ್ಪನಿಗೆ ಪ್ರಸಾದ ಮಾಡಿಸುತ್ತಾರೆ. ಹಾಗೆ ಪ್ರಸಾದ ಮಾಡಿಸುವಾಗ ಎರಡು ಎಡೆಗಳನ್ನೂ ಮಾಡಿರುತ್ತಾರೆ. ಅವುಗಳಲ್ಲಿ ಒಂದು ಎಡೆಯನ್ನು ಭಕ್ತರು ಭವನಾಸಿಗೆ ತುಂಬುತ್ತಾರೆ. ಈ ವಿಧಿಗೆ 'ಗೋಪಾಳ ತುಂಬಿಸುವುದು' ಎನ್ನುವರು. ಉಳಿದ ಇನ್ನೊಂದು ಎಡೆಯನ್ನು ದಾಸಪ್ಪ ಭಕ್ತರ ಮನೆಯಲ್ಲಿಯೇ ಕುಳಿತು ಸ್ವೀಕರಿಸಿದ ನಂತರ ಕಾಣಿಕೆ ಸಮರ್ಪಿಸುತ್ತಾರೆ.

ಭಟ್ಕಳದ ಗೊಂಡರಲ್ಲಿಯೂ ತಿಮ್ಮಪ್ಪನ ಆರಾಧಕರಿದ್ದಾರೆ. ಇವರು ತಿಮ್ಮಪ್ಪನ ಹೆಂಡತಿಯಾದ ತುಳಜಮ್ಮನ ಪರಮಭಕ್ತರು. ತುಳಸೀ ಕಟ್ಟೆಗಳಿಲ್ಲದ ಗೊಂಡರ ಮನೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮದುವೆ, ಬಾಣಂತನ, ನಾಮಕರಣಗಳಲ್ಲಿ ತುಳಜಮ್ಮನಿಗೆ ತಪ್ಪದೇ ಪೂಜೆ ಸಲ್ಲಿಸುತ್ತಾರೆ. ತುಳಜಮ್ಮ ತಿರುಪತಿ ತಿಮ್ಮಪ್ಪನಿಗೆ ಎರಡು ಪ್ರಮುಖ ಹಬ್ಬಗಳನ್ನು ಆಚರಿಸುವುದು ಕಂಡುಬರುತ್ತದೆ.

ಹರ್ದಿನ ಆಚರಿಸುವುದು ಮತ್ತು ಚಕ್ರ ಕಟ್ಟಿಸುವುದು ಎಂದು ಆ ಹಬ್ಬಗಳಿಗೆ ಹೆಸರು. ಹರಿಯನ್ನು ಪೂಜಿಸುವ ದಿನಕ್ಕೆ ಹರಿದಿನ ಅಥವಾ ಹರ್ದಿನ ಎಂದು ಕರೆಯುತ್ತೇವೆ. ಚಕ್ರಕಟ್ಟಿಸುವ ಹಬ್ಬದಲ್ಲಿ ಪೂಜೆಗೆಂದು ಬಂದ ಗೊಂಡರು ತಿಮ್ಮಪ್ಪ, ಕಾಳಭೈರವ ಹಾಗೂ ಮಂಜುನಾಥ ದೇವರ ಪಾತ್ರೆಗಳಲ್ಲಿ ಹಣದ ರೂಪದಲ್ಲಿ ಕಾಣಿಕೆ ನೀಡುತ್ತಾರೆ. ತಿರುಪತಿಗೆ ಹೋಗಿ ಬಂದ ಗೊಂಡರನ್ನು ದಾಸಪ್ಪಗಳೆಂದು ಕರೆಯುವುದಾದರೂ ದಾಸದೀಕ್ಷೆಯ ಮುದ್ರೆಯನ್ನೊತ್ತಿಸಿಕೊಳ್ಳುವುದಿಲ್ಲ. ಇವರು ಜನಿವಾರ ಪಟ್ಟೆ ಧರಿಸುವ ಪದ್ಧತಿಯಿದೆಯಾದರೂ ಇದು ವಿಪ್ರರು ಧರಿಸುವ ಜನಿವಾರವಲ್ಲ.

ದಾಸ ಕುರುಬರು ಪ್ರಧಾನವಾಗಿ ಹತ್ತಿಕಂಕಣದವರು. ಹತ್ತಿಕಂಕಣದವರ ವಿವಾಹದ ಮಾದರಿಯಲ್ಲಿಯೇ ಲಗ್ನಗಳು ಜರುಗುತ್ತವೆ. ಸಮಬೆಡಗಿನವರ ಜೊತೆಗೆ ವಿವಾಹ ಸಂಬಂಧವಿರುವುದಿಲ್ಲ. ದಾಸ ಕುರುಬರ ವಿವಾಹದ ಪೌರೋಹಿತ್ಯವನ್ನು ಒಡೆಯರು, ಲಿಂಗಾಯತ ಐನೋರು ಇಲ್ಲವೇ ಸ್ಥಳೀಯ ಬ್ರಾಹ್ಮಣರು ನೆರವೇರಿಸುವರು. ಮಕ್ಕಳ ಜನನ ಸಂದರ್ಭ, ಹೆಣ್ಣು ಮಕ್ಕಳು ಋತುಮತಿಯಾಗುವುದು ಮುಂತಾದವೆಲ್ಲವೂ ಹತ್ತಿಕಂಕಣ ಕುರುಬರ ಆಚರಣೆಗಳನ್ನೇ ಹೋಲುತ್ತವೆ.

ದಾಸಪ್ಪನಾದವನ ಸುತ್ತಲೂ ಅನೇಕ ಬಗೆಯ ವಿಧಿನಿಷೇಧಗಳನ್ನು ಹೇರಲಾಗಿದೆ. ಇವರಿಗೆ ಶನಿವಾರ ಅತ್ಯಂತ ಪವಿತ್ರ ದಿವಸವಾದ್ದರಿಂದ ಅಂದಿನ ದಿವಸ ಸ್ನಾನ ಪೂಜೆ ತೀರಿಸದೆ ಪ್ರಸಾದ ಸ್ವೀಕರಿಸುವಂತಿಲ್ಲ. ದಾಸಪ್ಪನ ಮನೆಯಲ್ಲಿ ಯಾರಾದರೂ ಮೃತನಾದರೆ ಮನೆಯಲ್ಲಿ ಬಾಣಂತಿಯರಿದ್ದರೆ ಆ ಮನೆಯನ್ನು ಸೂತಕದ ಮನೆಯೆಂದು ಭಾವಿಸುತ್ತಾರೆ. ಸೂತಕದ ದಿನಗಳಲ್ಲಿ ಭಕ್ತರ ಮನೆಗೆ ಕಟ್ಟಳೆ ತೀರಿಸಲು ಹೋಗುವಂತಿಲ್ಲ. ಮನೆಯನ್ನೂ ಸೂತಕದಿಂದ ಮುಕ್ತಗೊಳಿಸಲು 'ಶುದ್ಧೀಕರಣ' ಕಾರ್ಯವನ್ನು ಮಾಡುತ್ತಾರೆ. ಹೆರಿಗೆ ಕಾರಣದಿಂದಾಗಲಿ, ಮರಣ ಕಾರಣದಿಂದಾಗಲಿ ಮನೆಗೆ ಸೂತಕ ಅಂಟಿಕೊಂಡಾಗ ದಾಸಯ್ಯಗಳು ವೈಷ್ಣವರ ಮನೆಯಿಂದ ಬಿಳಿನಾಮ ಹಾಗೂ ತುಳಸಿ ತೀರ್ಥ ತಂದು ಸೂತಕದ ಮನೆತುಂಬ ಸಿಂಪಡಿಸಿ ಮನೆಯನ್ನು ಶುದ್ಧೀಕರಿಸುವರು. ದಾಸಪ್ಪ ದೀಕ್ಷೆ ಪಡೆದವರು ಅಪ್ಪಿತಪ್ಪಿಯೂ ಮಾಂಸಾಹಾರವನ್ನು ಸೇವಿಸುವಂತಿಲ್ಲ. ಅಲ್ಲದೆ ಚಪ್ಪಲಿ ಧರಿಸುವಂತಿಲ್ಲ.

ಶವಸಂಸ್ಕಾರ ವಿಧಿಗಳು ಭಾರತದಾದ್ಯಂತ ವೈವಿಧ್ಯಮಯ ಹಾಗೂ ವಿಶಿಷ್ಟತೆಯಿಂದ ಕೂಡಿವೆ. ಯಾವ ಒಬ್ಬ ವ್ಯಕ್ತಿ ಸತ್ತರೂ ಮಣ್ಣು ಮಾಡುವ ಇಲ್ಲವೆ ಸುಡುವ ವಿಧಾನದಿಂದ ಹಿಡಿದು ಅದರ ಆಚೆಗೆ ಹನ್ನೊಂದನೇ ದಿನ ತಿಥಿ ಮಾಡುವವರೆಗೆ ವಿವಿಧ ಪ್ರದೇಶಗಳಲ್ಲಿ ವಿವಿಧ ಆಚರಣೆಗಳು ನಮಗೆ ಕಾಣಸಿಗುತ್ತವೆ. ಅಂತೆಯೇ ದಾಸಪ್ಪನ ಶವಸಂಸ್ಕಾರವೂ ಒಂದು ವಿಶಿಷ್ಟ ರೀತಿಯಲ್ಲಿಯೇ ನಡೆಯುತ್ತದೆ.

ದಾಸಪ್ಪ ಸತ್ತ ದಿನ ಮುಖ್ಯ ದಾಸಯ್ಯನೂ ಸೇರಿದಂತೆ ಎಲ್ಲಾ ದಾಸಪ್ಪಗಳೂ ಬಂದು ಸೇರುತ್ತಾರೆ. ಊರಿನ ಜನರೂ, ಜೋಗಪ್ಪಗಳೂ ಸೇರುತ್ತಾರೆ. ಬಿದಿರು ಮರದಿಂದ ಮಂಟಪದೋಪಾದಿಯಲ್ಲಿ ಚಟ್ಟ ಸಿದ್ಧಗೊಳಿಸುವರು. ವಿಧವಿಧವಾದ ಹೂಗಳಿಂದ ಅಲಂಕರಿಸಿ ದಾಸಪ್ಪ ಧರಿಸುತ್ತಿದ್ದ ಕೆಂಪು ಅಥವಾ ಹಳದಿ ಬಣ್ಣದ ಒಂದು ವಸ್ತ್ರವನ್ನು ತಂದು ಮಂಟಪಕ್ಕೆ ಹೊದಿಸುತ್ತಾರೆ. ಸತ್ತ ವ್ಯಕ್ತಿಗೆ ಸ್ನಾನ ಮಾಡಿಸಿ ನಾಮ ಇಡುತ್ತಾರೆ. ಗೋವಿಂದನಾಮಸ್ಮರಣೆ ಮಾಡುತ್ತ ಚಟ್ಟದ ಮಂಟಪಕ್ಕೆ ಶವವನ್ನು ಕೂರಿಸುತ್ತಾರೆ. ನಂತರ ನಾಲ್ಕು ಜನ ಹೊತ್ತು ಊರಿನಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಊರ ಹೊರಗೆ ಮಣ್ಣಿಗೋ, ಬೆಂಕಿಗೋ ಅರ್ಪಿಸಿ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುವರು. ನಂತರ ತಲೆಯ ಮೇಲೆ ನೀರು ಚಿಮುಕಿಸಿಕೊಂಡು, ಸ್ನಾನ ಮಾಡುವರು. ಅಂದು ಸತ್ತವರ ಮನೆಯಲ್ಲಿ ಅಡುಗೆ ಮಾಡುವಂತಿಲ್ಲ.

ದಾಸಪ್ಪ ಸತ್ತದಿನದಿಂದ ಹನ್ನೊಂದು ದಿನ ಕಳೆಯುವವರೆಗೆ ದಾಸಪ್ಪನ ಮನೆಯವರಾಗಲಿ ದಾಸಪ್ಪನ ಅಣ್ಣತಮ್ಮಂದಿರಾಗಲಿ ಯಾರೂ ಅವನ ಜೋಳಿಗೆಯನ್ನು ಮುಟ್ಟುವಂತಿಲ್ಲ. ಅದರಲ್ಲಿರುವ ದೇವರುಗಳನ್ನು

ಮುಟ್ಟಿಕೂಡದು. ಅಂತಹ ಸಂದರ್ಭದ ವಿಧಿವಿಧಾನಗಳಿಗೆ ಬೇರೆ ಊರಿನ ದಾಸಯ್ಯ ಬಂದು ನೆರವೇರಿಸಬೇಕಾಗುತ್ತದೆ. ಸತ್ತ ಹತ್ತನೇ ದಿನ ಹೋಮ ಸುಡುವುದು ಪ್ರಮುಖವಾದ ಆಚರಣೆ. ಹನ್ನೊಂದನೇ ದಿನ ಸತ್ತವನ ಮನೆಯವರೆಲ್ಲರೂ ಸ್ನಾನ ಮಾಡಿ ಸೂತಕ ಕಳೆದುಕೊಳ್ಳಲು ಆರಂಭಿಸುವರು. ಸಮಾಧಿಗೆ ಹಸಿರು ಸೊಪ್ಪಿನ ಗುಡ್ಲುಕಟ್ಟುವುದು, ತೆಂಗಿನ ಕಡ್ಡಿಯಿಂದ ಒಂದು ವಿಷ್ಣು ಚಕ್ರ ಮಾಡುವುದು, ಅಕ್ಕಿ ಅಥವಾ ಗೋಧಿ ಹಿಟ್ಟಿನಿಂದ ಮನುಷ್ಯನ ಆಕಾರದ ಗೊಂಬೆ ಮಾಡುವುದು, ಸಮಾಧಿ ಸುತ್ತಲೂ ತಿಂಡಿ ಪದಾರ್ಥಗಳು, ಮಾಡಿದ ಅಡುಗೆಯ ಎಡೆ ಇಟ್ಟ ಸಮಾಧಿಸುತ್ತಲೂ 'ಸೂತ್ರ' ಬಿಡುತ್ತಾರೆ. ಇದಾದ ಮೇಲೆ ಗುಡ್ಲು ಬಾಗಿಲಿನ ಮುಂದೆ ಸ್ವಲ್ಪ ಸೌದೆ ಜೋಡಿಸಿ, ತಂದ ಗೊಂಬೆಯನ್ನೂ ಸಮಾಧಿ ಸುತ್ತಲೂ ಮೂರುಸುತ್ತು ಸುತ್ತಿಸಿ ಸೌದೆ ಮೇಲೆ ಗೊಂಬೆ ಇಟ್ಟು ಪೂಜೆ ಮಾಡುತ್ತಾರೆ. ನಂತರ ಸೌದೆಗೆ ಬೆಂಕಿ ಇಟ್ಟು ಗೊಂಬೆಯನ್ನು ಬೇಯಿಸುತ್ತಾರೆ. ಬೂದಿಯಾದ ಮೇಲೆ ಹಾಲುತುಪ್ಪ ಬಿಡುತ್ತಾರೆ.

ಸಂಸ್ಕಾರ ಕ್ರಿಯೆಗಳೆಲ್ಲ ಮುಗಿದ ಮೇಲೆ ಒಂದು ವಿಚಿತ್ರ ಆಚರಣೆ ಈ ದಾಸಕುರುಬರಲ್ಲಿ ಕಂಡು ಬರುತ್ತದೆ. ಸಮಾಧಿಯ ಮೇಲೆ ಎಡೆ ಇಟ್ಟ ಪೂಜಾರಿ ಬಂದು ಊಟಕ್ಕೆ ಕುಳಿತುಕೊಳ್ಳುತ್ತಾನೆ. ಉಳಿದ ದಾಸಯ್ಯಗಳೂ ಬಂದು ಊಟಕ್ಕೆ ಕುಳಿತು ಶಂಖ, ಜಾಗಟೆ ಬಾರಿಸುತ್ತಾ ಊಟ ಮಾಡುತ್ತಾರೆ. ಇದಕ್ಕೆ 'ಎದೆ ಮೇಲೆ ಊಟ (ಕೂಳು) ತಿನ್ನುವುದು' ಎನ್ನಲಾಗುತ್ತದೆ. ಇದಾದನಂತರ ಹನ್ನೆರಡು ಮಂಗಳಾರತಿ, ಹಿರಿಯ ಮಗನಿಂದ ವಸ್ತಿ ಬಿಡುವುದರೊಂದಿಗೆ ಶವಸಂಸ್ಕಾರ ಮುಕ್ತಾಯವಾಗುತ್ತದೆ.

ನಮ್ಮ ಕೃಷಿಕ ಸಮುದಾಯವು ಮಾರಿ ಮಸಣಿಗಳಿಂದ ದೇವತೆಗಳವರೆಗೆ ದೇವರುಗಳನ್ನು ಆಶ್ರಯಿಸುತ್ತಾರೆ. ಡಾ.ಬಿ.ಎಸ್.ಗದ್ದಿಗೀಮಠ ಹೇಳುವಂತೆ "ದೇವರೆಂಬ ಭಾವನೆಯು ಸ್ಥಿರವಿರದೆ ಸ್ಥಿತಿಗತಿಗಳ ಪ್ರಕಾರ ಹೊಯ್ದಾಡಿ ಧರ್ಮದ ಗಡಿಗಳನ್ನು ಮೀರುವುದು. ಒಮ್ಮೊಮ್ಮೆ ಸಂಪ್ರದಾಯದಿಂದ ಬಂದ ಮನೆದೇವರನ್ನು ಬಿಟ್ಟುಕೊಟ್ಟು ತನಗೆ ಹಿತವಾಗುವುದೆಂದು ಕಂಡು ಬಂದ ಮೇಲೆ ಬೇರೆ ದೇವರನ್ನು ಭಕ್ತಿಯಿಂದ ಪೂಜಿಸುವನು"[೪೩] ಎನ್ನುತ್ತಾರೆ.

ಒಟ್ಟಾರೆಯಾಗಿ ಜನರು ತಿರುಪತಿ ತಿಮ್ಮಪ್ಪನ ಬಗೆಗಿರುವ ಕಥೆಗಳಿಂದ ಮಾರು ಹೋಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರಾಗಿರುವ ಸಾಧ್ಯತೆ ಹೆಚ್ಚು. ಆದ್ದರಿಂದ ಅವರ ಸಂಖ್ಯಾಬಲವೂ ಹೆಚ್ಚಳವನ್ನು ಸಾಧಿಸಿದೆ. ಮಲ್ಲಯ್ಯನ ಕುಲದಲ್ಲಿ ಗುರುತಿಸಿಕೊಳ್ಳುವ ಹಾಗೂ ವೆಂಕಟರಮಣ ಸ್ವಾಮಿಯನ್ನು ಮನೆದೇವರನ್ನಾಗಿ ಪೂಜಿಸುವ ಕುರುಬರು ದಾಸಕುರುಬರೆನಿಸಿಕೊಂಡಿದ್ದಾರೆ. ಇಲ್ಲಿ ಧರ್ಮ ಸಮನ್ವಯತೆಯನ್ನು ಕಾಣುವಂತೆ ತುಮಕೂರು ಜಿಲ್ಲೆಯ ಸಿರಾ ನಗರದಲ್ಲಿ ಗೌಡನ ಕುರುಬರು ಎಂಬ ಬೆಡಗಿನವರು ಸೋಮವಾರ ಹಣೆಗೆ ವಿಭೂತಿ ಧರಿಸಿ ಸಿದ್ದೇಶ್ವರನ ಪೂಜೆ ಮಾಡಿದರೆ, ಶನಿವಾರ ನಾಮಧರಿಸಿ ತಿರುಪತಿ ತಿಮ್ಮಪ್ಪ ಇಲ್ಲೇ ಇದ್ದಾನೆಂಬ ನಂಬಿಕೆಯಿಂದ ಪೂಜೆ ಸಲ್ಲಿಸುತ್ತಿದ್ದಾರೆ. ಡಾ.ಚೆನ್ನಪ್ಪಕಟ್ಟಿಯವರು ಹೇಳಿರುವಂತೆ "ದಾಸತ್ವವೆಂಬ ಮಾಯದ ಬಾಗಿಲು"[೪೪] ತೆರೆದುಕೊಂಡು ತನ್ನ ತೆಕ್ಕೆಗೆ ಜನಸಮುದಾಯಗಳನ್ನು ಆಕರ್ಷಿಸಿರುವುದು ಸಹಜವೆನಿಸುತ್ತದೆ.

ಕ್ರೈಸ್ತಕುರುಬರು

ಒಂದು ಸಮುದಾಯದ ಇತಿಹಾಸವು ಪ್ರಾಚೀನ ಹಾಗೂ ಸಾರ್ವತ್ರಿಕವಾದುದು. ಪ್ರಪಂಚದ ಇತಿಹಾಸದಲ್ಲಿ ಪ್ರತಿಯೊಂದು ಜನಾಂಗವೂ ಒಂದೊಂದು ಧರ್ಮವನ್ನು ಅನುಸರಿಸಿಕೊಂಡು ಬರುವುದು ಸಾಮಾನ್ಯ ಸಂಗತಿಯೂ ಹೌದು. ಧರ್ಮದ ಮೂಲಕವಾಗಿ ಪ್ರತಿಜನಾಂಗವೂ ತನ್ನನ್ನು ಗುರುತಿಸಿಕೊಳ್ಳಲು ಹವಣಿಸಿತು. ಪ್ರಬಲವಾದ ಧರ್ಮಗಳು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಕೆಲಸಮಾಡಿವೆ. ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಬೌದ್ಧ ಧರ್ಮಗಳು ವಿಶ್ವದಾದ್ಯಂತ ವ್ಯಾಪಿಸಿಕೊಂಡು ವಿಶಾಲತೆಯನ್ನು ಮೆರೆದಿವೆ. ಅದರಲ್ಲಿ ಕ್ರಿಶ್ಚಿಯನ್ ಧರ್ಮವೂ ತನ್ನ ಮಾಯದ ಬಾಗಿಲನ್ನು ತೆರೆದು ತನ್ನ ತೆಕ್ಕೆಗೆ ಸ್ಥಳೀಯ ಸಮುದಾಯಗಳನ್ನು ಆಕರ್ಷಿಸುವ ಮೂಲಕ ಮತಾಂತರ ಪ್ರಕ್ರಿಯೆಗೆ ಚಾಲನೆ ನೀಡಿತು. ಅಂತಹ ಸ್ಥಳೀಯ ಸಮುದಾಯದಲ್ಲಿ ಕುರುಬರೂ ಕೂಡ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಅತ್ಯಂತ ಸಂಕಟಸ್ಥಿತಿಯನ್ನು ತಲುಪಿರುವುದು ವಿಪರ್ಯಾಸವೇ ಸರಿ.

ಮತಾಂತರವೆಂಬ ಮಾಯಾಜಾಲದಲ್ಲಿ ಹಲವಾರು ಜಾತಿಧರ್ಮದವರನ್ನು ತನ್ನ ಬಲೆಯಲ್ಲಿ ಬೀಳಿಸಿಕೊಳ್ಳುವಲ್ಲಿ ಕ್ರೈಸ್ತಧರ್ಮವು ಇತರ ಧರ್ಮಗಳಿಗಿಂತ ಮುಂದಿದೆ. ಇದರ ಜಾಲದಲ್ಲಿ ಭಾರತದ ಜನತೆಯು ಸುಲಭವಾಗಿ ಸಿಕ್ಕುಬಿದ್ದಿದ್ದಾರೆ. ಏಕೆಂದರೆ ಅನೇಕ ಜಾತಿ, ಧರ್ಮ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ನಂಬಿಕೆಗಳಿಂದ ಕೂಡಿದ ಭಾರತದಲ್ಲಿ ಅನಂತ ವೈವಿಧ್ಯವಿದೆ. ಇಂತಹ ಕ್ರೈಸ್ತಧರ್ಮದ ಆಚಾರ ವಿಚಾರ, ಸಂಪ್ರದಾಯಗಳನ್ನು ಹೋಲುವಂತಹ ಕುರುಬರ ಆಚಾರ ವಿಚಾರಗಳು ಸಮಾನವೆಂದು ಹೇಳುತ್ತಲೇ ಕುರುಬರನ್ನು ಮತಾಂತರದ ಬಲೆಗೆ ಬೀಳಿಸಿದವರು ಕ್ರೈಸ್ತರು.

ಕುರುಬರು ಸಾಮಾನ್ಯವಾಗಿ ಬೆಟ್ಟ-ಗುಡ್ಡ ಕಾಡುಮೇಡುಗಳಲ್ಲಿ ವಾಸಿಸುವ ಜನಾಂಗವಾಗಿತ್ತು. ನಾಡಿಗಿಂತ ಕಾಡು ಪ್ರಿಯರು. ಕುರುಬರು ತಮ್ಮ ಕುರಿಗಳನ್ನು ದೊಡ್ಡಿಯಲ್ಲಿ ಕೂಡಲು ಬಿದಿರಿನ ಕಟೆಕಟೆ ಮಾಡಿ ಕುರಿಗಳನ್ನು ಸಂರಕ್ಷಣೆ ಮಾಡುತ್ತಿದ್ದರು. ಇದೇ ಮಾದರಿಯನ್ನು ಕ್ರೈಸ್ತರೂ ಅನುಸರಿಸುತ್ತಿದ್ದರು. ಕ್ರಿಸ್ತನು ನಿಸರ್ಗದ ಮಡಿಲಲ್ಲಿ ಜನಿಸಿದವರು. ಮಾತ್ರವಲ್ಲದೆ 'ಒಬ್ಬ ಕುರುಬ'ನೆಂದು ಹೇಳಿಕೊಂಡಿದ್ದನು. ಏಸುವಿನ ಮೊದಲ ದರ್ಶನವನ್ನು ಪಡೆದವರು ಕುರುಬರು. ಸ್ವಾಮಿಯು ತನ್ನ ಮೊದಲ ಸಂದೇಶವನ್ನು ನೀಡಿದ್ದು ಸಹ ಕುರುಬರಿಗೆ. ಮುಗ್ಧರಾದ ಕುರುಬರು ಬಹುಶಃ ಕ್ರೈಸ್ತಧರ್ಮಕ್ಕೆ ಮತಾಂತರಗೊಂಡರು. ಮತಾಂತರ ಹೊಂದಿದ ಬಹುತೇಕ ಕುರುಬರು ಉಣ್ಣೆಕಂಕಣದವರು.

ಕ್ರೈಸ್ತಕುರುಬರ ಸಂಪ್ರದಾಯ-ಆಚರಣೆಗಳನ್ನು ಗಮನಿಸಿದರೆ ಮೊದಲ ತಲೆಮಾರಿನಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗುತ್ತ ಬಂದು ಮಗನ ಹಾಗೂ ಮೊಮ್ಮಗನ ಕಾಲದಲ್ಲಿ ಸಂಪೂರ್ಣ ಪರಿವರ್ತನೆಯಾಗುತ್ತ ಬಂದುದು ಕಂಡುಬರುತ್ತದೆ. ಮದುವೆ ಪ್ರಕ್ರಿಯೆ ಹಿಂದೂ ಸಂಪ್ರದಾಯದಲ್ಲಿರುವಂತೆ ಸೋದರ ಮಾವನ ಮಗಳನ್ನಾಗಲಿ ಇಲ್ಲವೆ ಬೇರೆ ಕ್ರೈಸ್ತಕುಟುಂಬದವರೊಂದಿಗೆ ಸಂಬಂಧ ಬೆಳೆಸುವುದಿಲ್ಲ.

ತಮ್ಮ ಜಾತಿಯ ಮತಾಂತರಗೊಂಡ ವ್ಯಕ್ತಿಗಳೊಂದಿಗೆ ಸಂಬಂಧ ಬೆಳೆಸಲು ಇಚ್ಛಿಸುತ್ತಾರೆ. ಈ ಮದುವೆಗೆ ಗಂಡು ಹೆಣ್ಣಿನ ಕಡೆಯವರಿಂದ ಒಪ್ಪಿಗೆ ಪಡೆದು ನಿಶ್ಚಿತಾರ್ಥ ಕಾರ್ಯವನ್ನು ಮುಗಿಸುತ್ತಾರೆ. ಕೆಲವರು ವರದಕ್ಷಿಣೆ ಪಡೆದು ಮದುವೆಯಾದರೆ ಮತ್ತೆ ಕೆಲವರು ವರದಕ್ಷಿಣೆಯಿಲ್ಲದೆ ವಿವಾಹವಾಗುವವರೂ ಇದ್ದಾರೆ. ಹೆಚ್ಚಾಗಿ ಕ್ಯಾಥೋಲಿಕ್ ಪಂಥದ ಹುಡುಗಿಯರನ್ನು ಲಗ್ನವಾಗುತ್ತಾರೆ. ಇಲ್ಲಿಯೂ ಶ್ರೇಷ್ಠತೆ ಕೆಲಸ ಮಾಡಿದೆ.

ವಧುವರರು ಗೊತ್ತಾದ ದಿನ ಬಂಧು ಬಾಂಧವರೊಂದಿಗೆ ಚರ್ಚಿಗೆ ಹೋಗಿ ಪಾದ್ರಿಯ ಸಮ್ಮುಖದಲ್ಲಿ ಕೆಲವು ಸ್ತೋತ್ರಗಳನ್ನು ಪಠಿಸಿ ಮದುಮಕ್ಕಳಿಗೆ ತಿಳಿಹೇಳಿ ಅತ್ಯಂತ ಸರಳವಾಗಿ ಉಂಗುರವನ್ನು ಬದಲಾಯಿಸುವುದರೊಂದಿಗೆ ಮದುವೆ ಪ್ರಕ್ರಿಯೆ ಸಾಂಕೇತಿಕವಾಗಿ ಮುಗಿಸುತ್ತಾರೆ. ಅದಾದನಂತರ ವಧುವಿನ ಕೊರಳಲ್ಲಿ ಕ್ರಿಸ್ತನ ಶಿಲುಬೆ ಮತ್ತು ಹಿಂದೂಗಳು ಧರಿಸುವ ತಾಳಿ ಎರಡೂ ಇರುವುದನ್ನು ಗುಳೇದಗುಡ್ಡ ತಾಲೂಕಿನ ಕಟ್ಟಿಗೇನಹಳ್ಳಿ ಮತ್ತು ಮುಷ್ಟಿಗೇರಾದಲ್ಲಿ ಕಾಣಬಹುದಾಗಿದೆ. ಇದು ನಾನು ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಕಂಡು ಬಂದ ವಿಶಿಷ್ಟವಾದ ಸಂಗತಿಯಾಗಿದೆ.

ವಿವಾಹ ವಿಚ್ಛೇದನ ಬಹಳ ಕಡಿಮೆ. ಮರುವಿವಾಹಕ್ಕೆ ಅವಕಾಶವಿದೆ. ಬಹುಪತ್ನಿತ್ವಕ್ಕೆ ಅವಕಾಶವಿಲ್ಲ. ಇವೆಲ್ಲವೂ ಪಾದ್ರಿಯ ಅನುಮತಿಯಂತೆ ನಡೆಯುತ್ತವೆ. ಕುಟುಂಬದ ಯಜಮಾನಿಕೆಯನ್ನು ಹಿಂದೂ ಧರ್ಮದಂತೆ ಪುರುಷನೇ ವಹಿಸಿಕೊಂಡಿದ್ದಾನೆ. ತಂದೆಯ ಆಸ್ತಿಯ ಒಡೆತನವೂ ಹಿಂದೂ ಸಂಪ್ರದಾಯದಂತೆ ಹಿರಿಯಮಗನಿಗೆ ಬರುತ್ತದೆ. ಮತಾಂತರಗೊಳ್ಳದ ಇವರ ಮದುವೆ, ಮುಂಜಿ, ಶುಭಕಾರ್ಯ, ಉತ್ಸವ ಇತ್ಯಾದಿಗಳಲ್ಲಿ ಅವರ ಮನೆಗೆ ಹೋದಾಗ ಮೊದಲಿನಂತೆ ನಡೆಸುವ ಪೂಜಾ ಪುನಸ್ಕಾರ ಕಾರ್ಯದಲ್ಲಿ ನೇರವಾಗಿ ತೊಡಗಿಕೊಳ್ಳದೆ ಆಪ್ತರು, ಸ್ನೇಹಿತರು ಬಂದು ಆತಿಥ್ಯ ಸ್ವೀಕರಿಸಿ ಹೋಗುವ ರೀತಿಯಲ್ಲಿ ಮಾತ್ರ ಇವರನ್ನು ತೊಡಗಿಸಿಕೊಳ್ಳುತ್ತಾರೆ. ಇವರೊಂದಿಗೆ ವೈವಾಹಿಕ ಸಂಬಂಧವನ್ನಾಗಲಿ, ಇನ್ನಿತರ ಯಾವುದೇ ಸಂಬಂಧವನ್ನು ವಹಿಸಲು ಇಷ್ಟಪಡುವುದಿಲ್ಲ. ಇವರನ್ನು ಅನ್ಯಧರ್ಮೀಯರಂತೆ ಪರಿಗಣಿಸುತ್ತಾರೆ.

ಕ್ರೈಸ್ತ ಕುರುಬರು ಉತ್ತರ ಕರ್ನಾಟಕದ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಸಸ್ಯಾಹಾರ ಮತ್ತು ಮಾಂಸಾಹಾರಗಳೆರಡೂ ಬಳಕೆಯಲ್ಲಿವೆ. ವಿಭಕ್ತ ಕೌಟುಂಬಿಕ ವ್ಯವಸ್ಥೆ ಇವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಪುರುಷರು ಕುಟುಂಬದ ಯಜಮಾನಿಕೆಯನ್ನು ವಹಿಸಿಕೊಂಡರೂ ಮನೆಯ ಆಗುಹೋಗುಗಳಿಗೆ ಸ್ತ್ರೀಯರೂ ಜವಾಬ್ದಾರರಾಗಿದ್ದಾರೆ. ಮೊದಲಿದ್ದ ಹೆಸರುಗಳು ಕಾಲಕ್ರಮೇಣ ಮರೆಯಾಗುತ್ತ ಈಗ ಕ್ರೈಸ್ತ ಹೆಸರುಗಳು ಚಾಲ್ತಿಯಲ್ಲಿವೆ. ವಿಶೇಷವೆಂದರೆ ಮತಾಂತರ ಕುರುಬರು ತಮ್ಮ ಅಡ್ಡ ಹೆಸರುಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಈಗಲೂ ಅವರ ಅಡ್ಡ ಹೆಸರುಗಳಿಂದ ಕ್ರೈಸ್ತ ಕುರುಬರೆಂದು ಗುರ್ತಿಸಬಹುದಾಗಿದೆ.

ಕ್ರೈಸ್ತರು ಆಚರಿಸುವ ಪ್ರಮುಖ ಹಬ್ಬಗಳಾದ ಕ್ರಿಸ್‌ಮಸ್, ಗುಡ್‌ಫ್ರೈಡೇ, ಈಸ್ಟರ್ ಸಂಡೆ, ಹೊಸ ವರ್ಷ ಆಚರಣೆಗಳು ವಿಶಿಷ್ಟವಾಗಿ ಆಚರಿಸಲ್ಪಡುತ್ತವೆ. ಹಿಂದೂ ಸಂಪ್ರದಾಯದ ಕೆಲವು ಹಬ್ಬಗಳನ್ನು

ಕೆಲವರು ಆಚರಿಸುತ್ತಿದ್ದಾರೆ. ಪೂರ್ತಿಯಾಗಿ ಸಂಪ್ರದಾಯ ಬದ್ಧವಾದ ಕ್ರೈಸ್ತರಾಗದೆಯೂ, ಹಿಂದೂ ಧರ್ಮೀಯರಾಗದ ಅತಂತ್ರ ಸ್ಥಿತಿಯಲ್ಲಿರುವ ಆಚರಣೆಗಳು ಕಂಡು ಬರುತ್ತವೆ. ಕ್ರೈಸ್ತ ಸಮುದಾಯದಲ್ಲಿ ಬರುವ ಎಲ್ಲಾ ಹಬ್ಬ ಪರಿದಿನ, ಉತ್ಸವ, ಸಭೆ, ಸಮಾರಂಭ, ಜಾತ್ರೆ ಮೊದಲಾದವುಗಳಲ್ಲಿ ಸ್ವಪ್ರೇರಣೆಯಿಂದ ಭಾಗವಹಿಸುವರು. ಕ್ರೈಸ್ತ ಪಾದ್ರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ವೇಷಭೂಷಣಗಳು ಸಾಮಾನ್ಯವಾಗಿ ಹಿಂದೂ ಸಂಪ್ರದಾಯದಂತಿದ್ದು ಪಾದ್ರಿಗಳಾದವರು ಕ್ರೈಸ್ತಪಾದ್ರಿಯ ನಿಲುವಂಗಿಯನ್ನು ಧರಿಸುತ್ತಾರೆ. ಹಿಂದೂ ಸಂಪ್ರದಾಯವೇ ಪ್ರಧಾನವಾದ ಉಡುಗೆ ತೊಡುಗೆ ಕಂಡು ಬರುತ್ತದೆ.

ಹಿಂದೂಗಳಿಗಿಂತ ಭಿನ್ನವಾದ ಶವಸಂಸ್ಕಾರ ಪದ್ಧತಿಯು ಕ್ರೈಸ್ತಕುರುಬರಲ್ಲಿದೆ. ವ್ಯಕ್ತಿಯು ಸಾವನ್ನಪ್ಪಿದ ನಂತರ ಶವವನ್ನು ಮನೆಯಲ್ಲಿರಿಸಿಕೊಂಡು ಎಲ್ಲ ವಿಧಿವಿಧಾನಗಳನ್ನೂ ಪೂರೈಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ಬದಲಾಗಿ ಶವವನ್ನು ಚರ್ಚಿಗೆ ತೆಗೆದುಕೊಂಡು ಹೋಗಿ ಅಲ್ಲಿ ವಿಧಿ-ವಿಧಾನಗಳನ್ನು ಪಾದ್ರಿಯು ಮುಗಿಸುತ್ತಾನೆ. ನಂತರ ಶವವನ್ನು ಮರದ ಶವಪೆಟ್ಟಿಗೆಯಲ್ಲಿ ಹಾಕಿ ಹೊತ್ತುಕೊಂಡು ಸ್ಮಶಾನಕ್ಕೆ ಬರುತ್ತಾರೆ. ಪಾದ್ರಿಯು ಪ್ರಾರ್ಥನೆಯ ವಿಧಿವಿಧಾನಗಳನ್ನು ಮುಗಿಸಿದ ನಂತರ ಮೊದಲು ಮಣ್ಣನ್ನು ಹಾಕಿ ನಂತರ ಉಳಿದವರು ಮಣ್ಣು ಹಾಕಿ ಆ ಪ್ರಕ್ರಿಯೆಯನ್ನು ಮುಗಿಸುತ್ತಾರೆ.

ಹಿಂದೂ ಸಂಪ್ರದಾಯದಂತೆ ಸತ್ತ ಮೂರನೇ ದಿನಕ್ಕೆ ಸಮಾಧಿಗೆ ಹೋಗಿ ಹಾಲು ಬಿಡುವ ಪದ್ಧತಿಯಿದೆ. ಸಾವನ್ನಪ್ಪಿದ ನಲವತ್ತು ದಿನಗಳ ನಂತರ ಅವರ ಸಂಬಂಧಿಕರನ್ನು ಕರೆದು ತಿಥಿ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ರೋಮನ್ ಕ್ಯಾಥೋಲಿಕ್ ಪಂಥದಲ್ಲಿ ಸತ್ತವರ ಇಷ್ಟಾರ್ಥ ಪದಾರ್ಥಗಳನ್ನಿಟ್ಟು ಬಟ್ಟೆ ಏರಿಸಿ ತಿಥಿ ಮಾಡುವ ಪದ್ಧತಿ ಇದೆ. ಪ್ರತಿವರ್ಷ ನವೆಂಬರ್ ಮೂರನೇ ತಾರೀಖಿನಂದು ಧರ್ಮದವರೆಲ್ಲ ಕೂಡಿಕೊಂಡು ಸಾಮೂಹಿಕವಾಗಿ ಮುಕ್ತಿಧಾಮಕ್ಕೆ ತೆರಳಿ ಸಮಾಧಿಯನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣಗಳಿಂದ ಅಲಂಕರಿಸಿ ಪ್ರಾರ್ಥನೆಯನ್ನು ಸಲ್ಲಿಸಿ ಮೃತರ ಆತ್ಮಕ್ಕೆ ಶಾಂತಿ ಕೋರುವ ಸಂಪ್ರದಾಯವಿದೆ. ಮೃತರ ಸಮಾಧಿಯ ಮೇಲೆ ಶಿಲುಬೆ ನೆಡಿಸಿ ಅವರ ಸ್ಮರಣಾರ್ಥವಾಗಿ ಶಿಲೆಯಲ್ಲಿ ಹೆಸರು ಬರೆಯಿಸಿ ಸಮಾಧಿಯನ್ನು ಕಟ್ಟಿಸುತ್ತಾರೆ. ಇದು ಅವರವರ ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ. ಒಟ್ಟಾರೆಯಾಗಿ ಕುರುಬರೂ ಕೂಡ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಕ್ರೈಸ್ತಕುರುಬರಾಗಿರಬಹುದು. ಆದರೆ ಇಂದು ಅವರ ಅತಂತ್ರ ಬದುಕು ಮಾತ್ರ ಎಂಥವರ ಮನಸ್ಸನ್ನು ಕರಗಿಸುವಂತಿದೆ. ಜೋಳದ ನುಚ್ಚಿಗೆ ಮತಾಂತರವಾದ ಇವರ ಬದುಕು ಹಸನುಗೊಳಿಸಲು ಸರ್ಕಾರಗಳಾಗಲಿ ಅಥವಾ ಕ್ರೈಸ್ತಮಿಷನರಿಗಳಾಗಲಿ ಪ್ರಯತ್ನಿಸದಿದ್ದರೆ ಇವರ ಬಾಳು ಗೋಳಾಗಿಯೇ ಮುಂದುವರಿಯುವುದು.

ಕಂಬಳಿ ಕುರುಬರು

ಕಂಬಳಿ ಕುರುಬರು ಸಾಮಾನ್ಯವಾಗಿ ಉಣ್ಣೆಕಂಕಣ ಕುರುಬರ ಸಂಪ್ರದಾಯ ಆಚರಣೆಗಳನ್ನು ಹೋಲುತ್ತವೆ. ಪಂಚಸಂಸ್ಕಾರಗಳಾದ ಜನನ, ಋತುಮತಿ, ಜವಳ, ಶವಸಂಸ್ಕಾರಗಳು ಉಣ್ಣೆಕಂಕಣದವರನ್ನು

ಹೋಲುತ್ತವೆಯಾದರೂ ಮದುವೆಯ ಸಂಪ್ರದಾಯ ಆಚರಣೆಗಳು ಮಾತ್ರ ವಿಭಿನ್ನವಾಗಿರುತ್ತವೆ. ಕಂಬಳಿ ಕುರುಬರಲ್ಲಿ ವಿವಾಹ ಪದ್ಧತಿಯು ಅರಿಶಿನ ಕುಂಕುಮ ಕೊಡುವ ಶಾಸ್ತ್ರದೊಂದಿಗೆ ಆರಂಭವಾಗುತ್ತದೆ. ಅಂದರೆ ಅದಕ್ಕೆ ಇವರಲ್ಲಿ ಈಳ್ಳೆಶಾಸ್ತ್ರ ಅಥವಾ ವೀಳ್ಯಶಾಸ್ತ್ರ ಎಂದು ಕರೆಯಲಾಗುತ್ತದೆ. ಆನಂತರ ಲಗ್ನ ಕಟ್ಟಿಸುವ ಕಾಯಕ್ರಮ ಆರಂಭವಾಗುತ್ತದೆ. ಮದುವೆಗೆ ಮುಂಚೆ ಮೂರು ಅಥವಾ ಐದು ದಿನ ಇರುವಾಗ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಬಂದು ಲಗ್ನ ಕಟ್ಟಿಸುತ್ತಾರೆ. ಅಲ್ಲಿಂದಲೇ ಮದುವೆಯ ಶಾಸ್ತ್ರಗಳು ಆರಂಭವಾಗುತ್ತವೆ.

ಕಂಬಳಿ ಕುರುಬರಲ್ಲಿ ಮಡಿವಾಳಪ್ಪ ಒಸಗೆಯನ್ನು ತೆಗೆದುಕೊಂಡು ಹೋಗುತ್ತಾನೆ. ಮದುವೆಗೆ ಹೊರಡುವಾಗ ಕಳಶ ಸಮೇತ ವಧುವನ್ನು ಊರಾಚೆಗೆ ಸಾಗಹಾಕಲಾಗುತ್ತದೆ. ಇದು ಉಳಿದ ಕುರುಬರಂತೆ ಯಥಾಪ್ರಕಾರ ನಡೆಯುತ್ತದೆ. ಬೀಗರನ್ನು ಎದುರುಗೊಂಡಾಗ ಕೊಡುವ ವೀಳ್ಯವನ್ನು ಹಾಗೆ ಹಂಚದೆ ವಿಭೂತಿಯಿಂದ ನಾಲ್ಕೂ ಕಡೆಯಿಂದ ಬರೆದು ಮಧ್ಯೆ ಕರಿಯಕಂಬಳಿ ಗದ್ದುಗೆ ಹೂಡಿ ಅದರಲ್ಲಿ ತಾಂಬೂಲ ಇಟ್ಟು ವರನನ್ನು ಅದರ ಎದುರಿಗೆ ಕುಳ್ಳಿರಿಸಿ ಎರಡೂ ಕಡೆ ಸೋದರ ಮಾವಂದಿರ ನೇತೃತ್ವದಲ್ಲಿ ವರನಿಂದ ಗದ್ದುಗೆ ಪೂಜೆ ಮಾಡಿಸಿ ನಂತರ 'ಸ್ವಬಿಗೆ' ಹಂಚುತ್ತಾರೆ. ಅಂದರೆ ಕೈವಾಡದವರಿಗೆ, ಗುಡಿಗೌಡ, ಭಂಡಾರಿ, ಪುರೋಹಿತರಾದಿಯಾಗಿ ಎಲ್ಲರಿಗೂ ವೀಳ್ಯ ಹಂಚುವುದು. ಸೋದರ ಮಾವನ ವಲಸೆಯ ಮನೆಯಲ್ಲಿ ಬಿಡದಿ ಬೇಕೆನ್ನದೆ ತಮ್ಮ ಯಾವುದಾದರೂ ಮನೆಯಲ್ಲಿ ಬಿಡುತ್ತಾರೆ. ನಂತರ ಒಂದು ದೇವಸ್ಥಾನದಿಂದ ವರನನ್ನು ಕರೆತರುವುದು ಪದ್ಧತಿಯಾಗಿರುತ್ತದೆ.

ಕುಂದಲಿಗೆ ಶಾಸ್ತ್ರಕ್ಕೆ ವನಮಾಲ್ಡಿ (ದೊಡ್ಡಭತ್ತ) ಆಗಬೇಕೆಂಬ ನಡಾವಳಿಕೆಯಿರುವುದು. ಅರಿಶಿನ ಇಡುವಾಗ ವಧೂವರರಿಗೆ ಅವರವರ ಸೋದರ ಮಾವನಿಂದ ಕಂಕಣವನ್ನು ಅಂದರೆ ಸಣ್ಣಉಂಗುರ ಮತ್ತು ಅರಿಶಿನದ ಕೊನೆ ಸೇರಿಸಿದ ಕುರಿದಾರ ಕಟ್ಟುತ್ತಾರೆ. ಇವರು ಕಂಕಣಕ್ಕೆ 'ಉರಗದಾರ' ಎನ್ನುತ್ತಾರೆ. ಇವರಲ್ಲಿ ಮೊದಲು ಗಂಡಿಗೆ ಮೂರನೇ ಅರಶಿನ ಶಾಸ್ತ್ರ ನಡೆಸಿದಾಗಲೇ 'ಬೂವದಶಾಸ್ತ್ರ' ನಡೆಸುವುದೊಂದು ವಿಶೇಷ. ಬೂವ ಎಂದರೆ ಅನ್ನ ಬೆಲ್ಲದಿಂದ ಕಲಸಲಾಗಿದ್ದು ಅದು ಹಸಿಮೈಯಾದ್ದರಿಂದ ಒಂದು ಶಾಖಾಹಾರವಾಗಿರುತ್ತದೆಂದು ಕ್ಷೇತ್ರಕಾರ್ಯಕ್ಕೆ ಹೋದಾಗ ವಕ್ತೃವಿಂದ ತಿಳಿದು ಬಂದಿರುತ್ತದೆ. ಸಾಮಾನ್ಯ ಅನ್ನವನ್ನೇ ತಟ್ಟೆಯಲ್ಲಿಟ್ಟು ವರನ ಮುಂದೆ ಕೆಲವರು ಹುಡುಗರನ್ನು ಕುಳ್ಳಿರಿಸಿ ಮುಸುಕು ಹಾಕುತ್ತಾರೆ. ಹುಡುಗರು ಆ ಭೂವ ಉಣ್ಣಬೇಕು. ಅರಿಶಿನ ನಂತರ ಸ್ನಾನ ಮಾಡಿಸುವುದಿಲ್ಲ. ಧಾರೆಕಂಬವನ್ನು ಕುಂಚಿಟಗರಲ್ಲಿನ ವಧೂವರರ ಸೋದರ ಮಾವಂದಿರೇ ತಂದು ನೆಡುತ್ತಾರೆ. ಆದರೆ ಅವರು ಕೈಲಿ ಮಚ್ಚು, ಕೊಡಲಿ ಹಿಡಿದಿರುವುದಿಲ್ಲ.

ಹಿಂದೆ ಧಾರೆ ಸಂದರ್ಭದಲ್ಲಿ ವಧುವಿಗೆ ಬಿಳಿಸೀರೆ, ಹಾಲವಾಣ (ಕೆಂಪು), ಜಾಕೀಟು, ಮೇಲೊಂದು ಕೆಂಪನೆಯ ಮುಸುಕು ಹಾಕುವರು ಇದಕ್ಕೆ ಮೇಲು ಮುಸುಕು ಎನ್ನುತ್ತಾರೆ. ಈಗಲೂ ಕೆಲವರು ಅದೇ

ಪದ್ಧತಿ ಅನುಸರಿಸುತ್ತಿದ್ದಾರೆ. ಅರಿಶಿನ ಎಣ್ಣೆ ಶಾಸ್ತ್ರ ಮಾಡುವಾಗ ಬೇಕಾಗುವ ಬಿಳಿ ವಸ್ತ್ರಗಳನ್ನು ಮಡಿವಾಳಪ್ಪ ಕೊಡುತ್ತಾನೆ. ಬೆಳಿಗ್ಗೆ ಎದ್ದು ಧಾರೆಯ ಕಾರ್ಯಕ್ಕೆ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ಗಂಡನ್ನು ಹೆಣ್ಣಿನ ಕಡೆಯವರು ಎದುರುಗೊಳ್ಳುವುದು, ಬೀರಕ್ಕಿ ಬೀರುವುದು, ವರನನ್ನು ಧಾರೆಯ ಮಂಟಪಕ್ಕೆ ಕರೆತರುವುದು, ಅನಂತರ ವಧುವನ್ನೂ ಸಿಂಗರಿಸಿಕೊಂಡು ಬಂದು ಸೋದರಮಾವ ಧಾರೆಯ ಮಂಟಪಕ್ಕೆ ಎತ್ತಿಕೊಂಡು ಬರುತ್ತಾನೆ. ಇಲ್ಲಿಯೂ ಪುರೋಹಿತರೇ ಕಾರ್ಯ ನಿರ್ವಹಿಸುತ್ತಾರೆ.

ಕರಿಯ ಕಂಬಳಿಯನ್ನು ಸಿಂಬೆಸುತ್ತಿ ಧಾರೆ ಮುಹೂರ್ತದ ಮಡಕೆಯನ್ನು ಅಲಂಕರಿಸುತ್ತಾರೆ. ಅಂಗುನೂಲಿನಿಂದ ಸೂತ್ರ ಬಿಗಿದು ಮಡಕೆಯಲ್ಲಿ ಹಾಲುತುಂಬಿ ನಂತರ ವಧೂವರರ ತಂದೆತಾಯಿಗಳು ಮುಂದೆ ನಿಂತು ವಧೂವರರ ಕೈಗಳಿಗೆ ಹಾಲು ಬಿಡುತ್ತಾರೆ. ನಂತರ ಅವರಿಬ್ಬರ ಮೇಲೆ ಅಕ್ಷತೆಯ ಕಾಳು ಹಾಕಿ ಆಶೀರ್ವದಿಸಿ ಹೋದ ನಂತರ ಇನ್ನುಳಿದ ಬಂಧು ಬಾಂಧವರು, ಆಪ್ತೇಷ್ಟರು ಸೇರಿ ಧಾರೆಯ ಮುಹೂರ್ತ ಕಾರ್ಯವನ್ನು ಸಮಾಪ್ತಿಗೊಳಿಸುತ್ತಾರೆ. ಅದಾದ ನಂತರ ವಧೂವರರನ್ನು ಹೊರಗೆ ಕರೆತಂದು ಸೂರ್ಯ ನಮಸ್ಕಾರ ಮಾಡಿಸುತ್ತಾರೆ. ಅದಾದ ನಂತರ ಉರಗದಾರ ಅಥವಾ ಕಂಕಣ ಬಿಚ್ಚಿಸುತ್ತಾರೆ.

ಕಂಬಳಿ ಕುರುಬರಲ್ಲಿ ಧಾರೆಯ ಮುಹೂರ್ತದ ನಂತರ ಶಿವಾಸನ, ತೆರಕೊಡುವುದು ಯಥಾ ಪ್ರಕಾರ ನಡೆಯುತ್ತದೆ. ಇವರಲ್ಲಿ ಆ ಸಂದರ್ಭದಲ್ಲಿ 'ಗಡಿವೀಳ್ಯ' ಎಂದು ತಮ್ಮ ಬಳಗಕ್ಕೆ ಹಂಚುತ್ತಾರೆ. ಇನ್ನು ಧೂಳು ಮೆರವಣಿಗೆ, ಕನ್ಯೆಗೆಲ್ಸ ಮಾಮೂಲಾಗಿ ನಡೆಯುತ್ತದೆ. ಅದಾದ ನಂತರ ಗಂಡು ಹೆಣ್ಣಿನ ನಡುವೆ ಹೂ ಚೆಂಡಾಟ ನಡೆಸುತ್ತಾರೆ. ಆದರೆ ಪೆಟ್ಟಿಗೆ ಹೊರುವ ಪದ್ಧತಿ ಇವರಲ್ಲಿ ಇರುವುದಿಲ್ಲ ಎನ್ನುತ್ತಾರೆ. ಉಗುರು ತೆಗೆಯುವ ಶಾಸ್ತ್ರವು ಮರಚರನ್ನು ಹೋಲುತ್ತದೆ. ಹೀಗೆ ಕಂಬಳಿ ಕುರುಬರ ಸಂಪ್ರದಾಯ ಆಚರಣೆಗಳು ಹಿಂದೆ ನಡೆಯುತ್ತಿದ್ದು ಈಗ ಅಲ್ಪಸ್ವಲ್ಪ ಬದಲಾವಣೆಗಳು ಕಂಡು ಬಂದರೂ ಕೂಡ ಮೂಲ ಸಂಸ್ಕೃತಿಯ ಬೇರುಗಳು ಮಾತ್ರ ನಾಶವಾಗಿರುವುದಿಲ್ಲ. ಇದು ಎಲ್ಲಾ ಕುರುಬರ ಒಳಪಂಗಡಗಳ ವೈಶಿಷ್ಟ್ಯವೂ ಹೌದು.

ಝಂಡೆ ಕುರುಬರು

ಪ್ರತಿಯೊಂದು ಜನಸಮುದಾಯಕ್ಕೆ ತಮ್ಮದೇ ಆದ ವಿಶಿಷ್ಟ ದೈವಗಳು ಹಾಗೂ ಅವುಗಳನ್ನು ಆರಾಧಿಸುವ ಕ್ರಮಗಳು ಭಿನ್ನವಾಗಿರುವಂತೆಯೇ ಝುಂಡೇ ಕುರುಬರ ದೈವಗಳು ಮತ್ತು ಆರಾಧಿಸುವ ಕ್ರಮಗಳು ಇತರೆ ಕುರುಬರಿಗಿಂತ ತುಸು ಭಿನ್ನವಾಗಿವೆ. ಧನಗಾರರು ಮತ್ತು ಇವರು ಒಂದೇ ಆಗಿದ್ದು ಕಾಲಾನುಕ್ರಮದಲ್ಲಿ ಇವೆರಡು ಸಮುದಾಯಗಳು ಬೇರೆ ಬೇರೆಯಾದಂತೆ ಇವರು ಆರಾಧಿಸುವ ದೇವರುಗಳು ಸಹ ಬೇರೆಯಾದಂತೆ ತೋರುತ್ತದೆ. ಧನಗಾರರ ಮೂಲದೇವರುಗಳಾದ ವಿಠಲ ಮತ್ತು ಬೀರಪ್ಪರನ್ನು ಝುಂಡೇ ಕುರುಬರ ಕುಳಿಕಾರ, ಕಟ್ಟಿಕಾರ, ಮುಡಸಿನಕಾರ ಮುಂತಾದ ಬೆಡಗಿನವರು ವಿಠಲನನ್ನೂ, ತೌವಡೆ, ತಾಂದಳೆ ಮುಂತಾದ ಬೆಡಗಿನವರು ಬೀರಪ್ಪನನ್ನು ಆರಾಧಿಸುವರು. ಇನ್ನು ಕೆಲವು ಬೆಡಗಿನವರು

ಖಂಡೋಬಾ, ಧರೋಬಾ, ಧೂಳೋಬಾ, ಮಾಳಿಂಗರಾಯನನ್ನು ಆರಾಧಿಸುವುದು ಕಂಡು ಬರುತ್ತದೆ. ಅದರಂತೆ ಸ್ತ್ರೀ ದೇವತೆಗಳಾದ ಸವದತ್ತಿ ಯಲ್ಲಮ್ಮ, ಕಕ್ಕೇರಿಯ ಕರಿಯಮ್ಮ, ತುಳಜಾಪುರದ ತುಳಜಮ್ಮ ಮುಚ್ಚಂಡಿಯ ಜಕ್ಕಮ್ಮ, ಚಿಂಚಲಿಯ ಮಾಯಮ್ಮರನ್ನು ಆರಾಧಿಸುವುದುಂಟು.

ಯುಗಾದಿಯ ಪಾಡ್ಯವನ್ನು 'ಗುಡಿಪಾಡ್ಯ' ಎನ್ನುವರು. ಅಂದು ಉದ್ದನೆಯ ಗಳುವೊಂದಕ್ಕೆ ಮಾವು ಬೇವಿನ ಸೊಪ್ಪನ್ನು ಕಟ್ಟಿ, ಗಳದ ತುದಿಗೆ ಕೇಸರಿ ಇಲ್ಲವೆ ಕೆಂಪು ಬಣ್ಣದ ಹೊಸ ಬಟ್ಟೆಯನ್ನು ತೆಗೆದುಕೊಂಡು ನಿರಿಗೆ ಮಾಡಿ ಕಟ್ಟಿ, ಅದರ ಮೇಲೆ ಒಂದು ಸಣ್ಣ ತಂಬಿಗೆ ಇಲ್ಲವೆ ಗಿಂಡಿಯನ್ನು ಬೋರಲು ಹಾಕಿ ಕಳಶದಂತೆ ಸಿಗಿಸುತ್ತಾರೆ. ಅದಕ್ಕೆ ಅರಿಶಿನ ಕುಂಕುಮ ಹಚ್ಚಿ ಮುಂಬಾಗಿಲ ಮುಂದೆ ಗಳುವನ್ನು ಹುಗಿದು ಪೂಜೆ ಮಾಡಿ ಮನೆಯಲ್ಲಿ ತಯಾರಿಸಿದ ಶಾವಿಗೆ ಅಥವಾ ಪಾಯಸ ಎಡೆ ಮಾಡುತ್ತಾರೆ. ಇದಕ್ಕೆ ಇವರು 'ಗುಡಿ ಏರಿಸುವ ಸಂಪ್ರದಾಯ' ಎನ್ನುವರು.

ಹಿಂದೆ ತಮ್ಮ ಪೂರ್ವಜರು ಯುಗಾದಿಯ ಪಾಡ್ಯದಂದು ತಮ್ಮ ಕುರಿ ಹಾಗೂ ಗೋವುಗಳನ್ನು ಮೇಯಿಸುವ ಗೋಮಾಳಗಳ ಸೀಮೆ ಎಲ್ಲಿಯವರೆಗೆ ಇದೆ ಎಂಬುದನ್ನು ಗುರುತಿಸಲು ಸೀಮೆಯ ನಾಲ್ಕು ದಿಕ್ಕುಗಳಲ್ಲಿ, ನಾಲ್ಕು ಗುಡಿಧ್ವಜ, ಝುಂಡೆಗಳನ್ನು ನೆಡುತ್ತಿದ್ದರಂತೆ. ಒಂದು ವೇಳೆ ಬೇರೆಯವರು ಅದನ್ನು ಆಕ್ರಮಿಸಿಕೊಂಡರೆ ಅವರನ್ನು ಎದುರಿಸಿ ಸೀಮೆಯನ್ನು ಗುರುತಿಸಿಕೊಳ್ಳುವ ಸಂಪ್ರದಾಯದ ಹಿನ್ನೆಲೆಯೇ ಗುಡಿಸಂಪ್ರದಾಯ. ಇದಕ್ಕೆ ಪೌರಾಣಿಕ ಹಿನ್ನೆಲೆಯೂ ಇರುವುದನ್ನು ಗಮನಿಸಿದರೆ ಅಚ್ಚರಿ ಎನಿಸದಿರದು.

ಪಂಚಮಿಯ ಹಬ್ಬದಂದು ಮನೆಯಲ್ಲಿ ಒಳಕಲ್ಲು ಮತ್ತು ಬೀಸುವ ಕಲ್ಲು ಇರುವ ಸ್ಥಳದ ಗೋಡೆಯ ಮೇಲೆ ಚೌಕಾಕಾರವಾಗಿ ಆಕಳ ಸಗಣಿಯಿಂದ ಸಾರಿಸಿ ಅದರ ಮೇಲೆ ಸುಣ್ಣದ ನೀರಿನಿಂದ ಗೋಪುರದ ಗುಡಿಯನ್ನು, ಅದರ ಮಧ್ಯೆ ಹೆಡೆ ಇರುವ ಐದುಸುತ್ತಿನ ನಾಗರ ಹಾವಿನ ಚಿತ್ರ ಬರೆದು ಹುತ್ತಿನ ಮಣ್ಣಿನಿಂದ ಮಾಡಿದ ನಾಗಪ್ಪನನ್ನು ಅದರ ಮುಂದಿಟ್ಟು ಪೂಜೆ ಮಾಡಿ ಮನೆ ಮಂದಿಯೆಲ್ಲ ನಾಗಪ್ಪನಿಗೆ ಹಾಲನ್ನೆರೆಯುವರು. ಅಲ್ಲದೆ ಗುಳ್ಳವ್ವನನ್ನು ಇಟ್ಟು ಪೂಜಿಸುವರು. ಇದೇ ವೇಳೆಯಲ್ಲಿ ಹೊಸದಾಗಿ ಮದುವೆಯಾದ ಮಗಳು ಮತ್ತು ಅಳಿಯನನ್ನು ಅಳಿಯತನಕ್ಕೆ ಕರೆದು ತಮ್ಮ ಸಾಮರ್ಥ್ಯನುಸಾರ ಬಂಗಾರ ಅಥವಾ ಬೆಳ್ಳಿ ಒಡವೆ, ಹೊಸ ಬಟ್ಟೆ ನೀಡಿ ಗೌರವಿಸುವುದು ವಾಡಿಕೆ.

ಮಹಾನವಮಿಯ ಪಾಡ್ಯದ ದಿನ ಮನೆಯ ಯಜಮಾನ ಮತ್ತು ಯಜಮಾನಿ ಸೇರಿಕೊಂಡು ದೇವರ ಮನೆ ಮತ್ತು ಜಗಲಿಯನ್ನು ಸ್ವಚ್ಛಗೊಳಿಸಿ, ಸುಣ್ಣ ಬಣ್ಣಗಳಿಂದ ಶೃಂಗರಿಸಿ ಅಂದೇ ಜಗಲಿಯ ಮೇಲೆ ಲಕ್ಷ್ಮಿಯನ್ನು ಸ್ಥಾಪಿಸಿ ಮಣ್ಣಿನ ಪಾತ್ರೆಯಲ್ಲಿರುವ ಹುತ್ತಿನ ಮಣ್ಣನ್ನು ಹಾಕಿ ಅದರಲ್ಲಿ ಐದು ತೆರನಾದ ದಾನ್ಯಗಳನ್ನು ಹಾಕಿ ನೀರನ್ನು ಹೊಯ್ದು ಅದನ್ನು ಲಕ್ಷ್ಮಿಯ ಕಳಸದ ಮುಂದಿಟ್ಟು ನಂದಾದೀಪದೊಂದಿಗೆ ಒಂಭತ್ತು ದಿನ ಪೂಜಿಸುತ್ತಾರೆ. ಇದಕ್ಕೆ ನವರಾತ್ರಿಯ ಘಟ್ಟಾ ಹಾಕುವುದು

ಎನ್ನುವರು. ರಾತ್ರಿಯಿಂದ ಬೆಳಗಿನವರೆಗೆ ಡೊಳ್ಳಿನ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗುತ್ತದೆ. ನಂದಾದೀಪವು ಆರದಂತೆ ಎಚ್ಚರ ವಹಿಸುತ್ತಾರೆ, ಮಾತ್ರವಲ್ಲದೆ ನಂದಾದೀಪ ಆರಿದರೆ ಕೆಡುಕು ಎಂಬ ನಂಬಿಕೆಯಿದೆ.

ದೀಪಾವಳಿಯ ಪಾಡ್ಯ ಬರುವುದಕ್ಕಿಂತ ಮೊದಲ ಐದು ದಿನ ಸೆಗಣಿಯಲ್ಲಿ ಪಾಂಡವರ ಪೂಜೆ, ನರಕ ಚತುರ್ದಶಿಯ ದಿವಸ ಪಾಂಡವರನ್ನು ಮನೆಯ ಮಾಳಿಗೆಯ ಮೇಲೆ ಒಯ್ದು ಉತ್ತರಾಣೆಯ ಕಡ್ಡಿಗಳನ್ನು ಅವುಗಳ ತಲೆ ಮೇಲೆ ಚುಚ್ಚಿ ಹೂವುಗಳಿಂದ ಅಲಂಕರಿಸಿ ಮನೆಯ ಕುಂಬಿಯ ಮೇಲಿಟ್ಟು ಎಡೆಯನ್ನು ಹಿಡಿದು ಸಂಭ್ರಮಿಸುತ್ತಾರೆ. ದೀಪಾವಳಿಯ ಪಾಡ್ಯದಂದು ಮನೆಯಲ್ಲಿ ಕುರಿ ಇದ್ದವರು ತಮ್ಮ ಹಟ್ಟಿಯಲ್ಲಿ ಐದು ಜೋಳದ ದಂಟಿನ ಗುಡಿಸಲು ಹಾಕಿ ಅದರ ಕೆಳಗೆ ಕರಿಯ ಕಂಬಳಿ ಗದ್ದುಗೆ ಹಾಕಿ ಅದರ ಮೇಲೆ ಪಂಚ ಪಾಂಡವರನ್ನು ಪ್ರತಿಷ್ಠಾಪಿಸಿ ಅದರ ಪಕ್ಕದಲ್ಲಿ ಕುರಿಯ ಹಿಕ್ಕೆ ಗುಪ್ಪೆಮಾಡಿ ಹೂವುಗಳಿಂದ ಅಲಂಕರಿಸಿ ಹಟ್ಟಿಯ ಹೊರಗಡೆ ಇರುವ ಕುರಿಗಳಿಗೆ ಕುಂಕುಮ ಭಂಡಾರವಿಟ್ಟು ಪೂಜಿಸುತ್ತಾರೆ. ಕುರಿಗಾರರ ದಡ್ಡಿಯೆಂದರೆ ಲಕ್ಷ್ಮಿಯ ಆವಾಸ ಸ್ಥಾನವೆಂದು ನಂಬಿರುವ ಇವರು ದೀಪಾವಳಿ ಹಬ್ಬ ಮುಗಿಯುವವರೆಗೂ ಮನೆಯಲ್ಲಿಯ ಸಗಣಿಯನ್ನು ಹೊರಗೆ ಕೊಡುವುದಿಲ್ಲ. ಆದ್ದರಿಂದ ಇದಕ್ಕೆ ಹಟ್ಟಿ ಹಬ್ಬವೆಂದೂ ಕರೆಯುವರು.

ಝುಂಡೆ ಕುರುಬರಲ್ಲಿನ ಜನನ ಸಂಸ್ಕಾರವನ್ನು ಗಮನಿಸಿದರೆ ಮಗು ಹುಟ್ಟಿದ ಹನ್ನೆರಡರಿಂದ ಹದಿನೈದು ದಿನಗಳವರೆಗೆ ಸೂತಕವೆಂದು ಭಾವಿಸುವರು. ಮಗು ಹುಟ್ಟಿದ ಐದನೇ ದಿನಕ್ಕೆ 'ಐದೇಸಿ' ಎಂದು ಮಾಡುವರು. ಅಂದರೆ ಐದರಿಂದ ಎಂಟು ವರ್ಷ ತುಂಬಿದ ಐದು ಹುಡುಗರನ್ನು ಕರೆತಂದು ಮನೆಯ ಪಡಸಾಲೆಯಲ್ಲಿ ಕರಿ ಕಂಬಳಿ ಹಾಸಿ ಅವರನ್ನು ಕುಳ್ಳಿರಿಸಿ ಅವರ ನೆತ್ತಿಗೆ ಕೊಬ್ಬರಿ ಎಣ್ಣೆ ಹಚ್ಚಿ, ಗಲ್ಲಕ್ಕೆ ನೀರಿನಲ್ಲಿ ಕಲಸಿದ ಅರಿಶಿನ ಹಚ್ಚಿ, ಆರತಿ ಬೆಳಗಿ ಅಲೆ ಅಡಿಕೆ, ನೆಲಗಡಲೆ, ಅಕ್ಕಿ, ಕೊಬ್ಬರಿ, ಅರಿಶಿನಕೊಂಬು, ಬೆಲ್ಲದ ಚೂರು, ಉತ್ತುತ್ತಿ ಇವುಗಳಲ್ಲಿ ಯಾವುದಾದರೂ ಐದನ್ನು ಇಟ್ಟು ಉಡಿ ತುಂಬುವರು. ಹೀಗೆ ಉಡಿ ತುಂಬುವಾಗ ಮಗುವನ್ನು ಅವರುಗಳ ಮುಂದೆ ಇಟ್ಟಿರುತ್ತಾರೆ. ನಂತರ ಅವರಿಗೆ ಊಟಮಾಡಿಸಿ ಕಳುಹಿಸುವರು. ಇದಕ್ಕೆ ಶೆಟಿಗೆವ್ವನ ಪೂಜೆಯೆಂದು ಕರೆಯುವರು. ಈ ಪೂಜೆಯ ದಿನ ಶೆಟಿಗೆವ್ವ ಬಂದು ಮಗುವಿನ ಹಣೆ ಬರಹವನ್ನು ಬರೆಯುವಳೆಂದು ಬಲವಾದ ನಂಬಿಕೆಯಿದೆ.

ಹನ್ನೆರಡು ಇಲ್ಲವೇ ಹದಿನೈದನೇ ದಿನಕ್ಕೆ ತಮ್ಮ ಕುಲಬಾಂಧವರನ್ನೆಲ್ಲ ಕರೆದು ಮಗುವಿನ ನಾಮಕರಣ ಮಾಡುವರು. ನಾಮಕರಣ ಶಾಸ್ತ್ರವೆಲ್ಲ ಮಗುವಿನ ಸೋದರತ್ತೆಯೇ ಮಾಡಬೇಕೆಂಬ ನಿಯಮವಿದೆ. ಶುಭದಿನದಂದು ಒಂದು ವರ್ಷ ತುಂಬುವುದರೊಳಗೆ ಮಗುವಿನ ಜವಳ ತೆಗೆಸುತ್ತಾರೆ. ಬ್ರಾಹ್ಮಣರಂತೆ ಜುಟ್ಟು ಬಿಡುವ ಸಂಪ್ರದಾಯ ಝುಂಡೆ ಕುರುಬರ ಕುಳಿಕಾರ ಬೆಡಗಿನವರಲ್ಲಿ ಕಂಡುಬರುತ್ತದೆ.

ಝುಂಡೆ ಕುರುಬರಲ್ಲಿ ಇತರೆ ಕುರುಬರಂತೆ ಶವಸಂಸ್ಕಾರದ ವಿಧಿಗಳು ಒಂದೇ ತೆರನಾಗಿದ್ದರೂ ಶವವನ್ನು ಸಿದಿಗೆಯ ಮೇಲೆ ಕುಳ್ಳಿರಿಸದೆ ಮಲಗಿಸಿಕೊಂಡು ಹೋಗಿ ಸುಡುತ್ತಾರೆ. ಸತ್ತವನ ಹಿರಿಯ ಮಗ ಬೆಂಕಿ ಇಡಬೇಕು. ಬೆಂಕಿ ಇಡುವವನ ಹೆಗಲಮೇಲೆ ನೀರು ತುಂಬಿದ ಬಿಂದಿಗೆ ಮತ್ತು ಬಲಗೈಯಲ್ಲಿ ಕಿಚ್ಚನ್ನು ಹಿಡಿದುಕೊಂಡು ಕಟ್ಟಿಗೆಯ ಮೇಲೆ ಅಂಗಾತ ಮಲಗಿಸಿದ ಶವವನ್ನು ಮೂರು ಸುತ್ತು ಸುತ್ತುವಾಗ ಒಂದೊಂದು ಸುತ್ತಿನಲ್ಲಿ ಬಿಂದಿಗೆಗೆ ಒಂದೊಂದು ರಂಧ್ರವನ್ನು ಕಲ್ಲು ಹೊಡೆದು ಮಾಡುತ್ತಾರೆ. ಶವವನ್ನು ಮೂರು ಸುತ್ತು ತಿರುಗಿ ಬೆಂಕಿಯಿಟ್ಟು ಮರಳಿ ನೋಡದೆ ಮುಂದೆ ಹೋಗಬೇಕು. ಇದಾದ ನಂತರ ಬೂದಿ ಗುಡಿಸುವ ಕಾರ್ಯದ ಮೂಲಕ ಅಸ್ತಿಯನ್ನೆಲ್ಲ ಒಂದುಗೂಡಿಸಿ ಬಣ್ಣಿಗಿಡದ ಬುಡದಲ್ಲಿ ಹುಗಿದು ಅದರ ಮೇಲೆ ಮೃತರ ಹೆಸರಿನಲ್ಲಿ ಒಂದು ಶ್ರಾದ್ಧದ ಕಲ್ಲನ್ನಿಟ್ಟು ಬರುತ್ತಾರೆ. ಮುಂದೆ ಆ ಶ್ರಾದ್ಧದ ಕಲ್ಲುಗಳನ್ನು ಹಬ್ಬ ಹರಿದಿನಗಳಲ್ಲಿ ಪೂಜಿಸುವರು. ಇದಾದ ನಂತರ ಪಿಂಡದಾನ ವಿಧಿ.

ಮೃತನು ಇಷ್ಟಪಡುತ್ತಿದ್ದ ಎಲ್ಲಾ ಆಹಾರ ಪದಾರ್ಥಗಳನ್ನು ಮಾಡಿತಂದು ಎಡೆ ಇಟ್ಟು, ಧೂಪಹಾಕಿ ದೂರ ಸರಿದು ನಿಂತಾಗ ಮೃತನು ಕಾಗೆಯ ರೂಪದಲ್ಲಿ ಬಂದು ಭೋಜನವನ್ನು ಸ್ವೀಕರಿಸುವಂತೆ ವಿನಂತಿಸುತ್ತಾರೆ. ಆ ಪ್ರಕಾರ ಕಾಗೆಗಳು ಬಂದು ಆಹಾರ ಪದಾರ್ಥಗಳನ್ನು ಸ್ವೀಕರಿಸಿದರೆ ಸತ್ತವನ ಆತ್ಮಕ್ಕೆ ಶಾಂತಿ ದೊರಕಿತೆಂದು ಭಾವಿಸುತ್ತಾರೆ. ನಂತರ ಐದು, ಒಂಭತ್ತು ಇಲ್ಲವೇ ಹನ್ನೊಂದನೇ ದಿನಕ್ಕೆ ತಿಥಿ ಮಾಡುತ್ತಾರೆ. ಇವರಲ್ಲಿ ಸತ್ತ ವ್ಯಕ್ತಿಯ ಬೆಳ್ಳಿಯ ಮುಖವಾಡ ಮಾಡಿಸಿ ಶವವನ್ನಿಟ್ಟಿದ್ದ ಜಾಗದಲ್ಲಿಟ್ಟು ಹೊಸಬಟ್ಟೆ ತೊಡಿಸಿ ಅದರ ಮುಂದೆ ಚರಿಗೆಯನ್ನು ಮುಂದಿಟ್ಟು ಪೂಜೆಮಾಡುತ್ತಾರೆ. ಆರತಿ ಮಾಡಿ ಹೊರಗೆ ಮನೆಯವರೆಲ್ಲ ಬಂದಮೇಲೆ ಬಂಧುಬಾಂಧವರು ಊರಿನವರು ಧೂಪ ಹಾಕುತ್ತಾರೆ. ಶವವನ್ನು ಹೊತ್ತ ನಾಲ್ವರು ಕೂಳು ತಿನ್ನುವ ಶಾಸ್ತ್ರವನ್ನು ಮಾಡುತ್ತಾರೆ.

ಕಿಚ್ಚು ಹಿಡಿದವನ ಕೇಶಮುಂಡನವನ್ನು ಅಂದೇ ಮಾಡಲಾಗುತ್ತದೆ. ಇದಕ್ಕೆ 'ತಲೆಕೊಡುವುದು' ಎನ್ನುವರು. ಮರುದಿನ ಅವನ ಹೆಸರಿನಲ್ಲಿ ಮಾಡಿಸಿದ ಮುಖವನ್ನು ಜಗಲಿಯ ಮೇಲಿಟ್ಟು ಪೂಜಿಸಿ ದೇವರ ಸ್ಥಾನವನ್ನು ನೀಡಿ 'ದೇವರಾದ್ನಪಾ' ಎನ್ನುತ್ತಾರೆ. ಮುಂದೆ ಪ್ರತಿಮಾಳ ಪಕ್ಷಗಳಂದು ಅವರ ಹೆಸರಿನಲ್ಲಿ ಆ ಮುಖವನ್ನು ಪೂಜಿಸಿ ಪ್ರತ್ಯೇಕ ಎಡೆಯನ್ನು ನೈವೇದ್ಯ ಮಾಡುತ್ತಾರೆ. ಇವರ ಹೆಸರಿನಲ್ಲಿ ಒಂದ್ಹೊತ್ತಿಟ್ಟವರು ಎಡೆಯನ್ನು ಸ್ವೀಕರಿಸುತ್ತಾರೆ. ಹೀಗೆ ಈ ಎಲ್ಲ ಪ್ರಕ್ರಿಯೆಗಳು ವ್ಯಕ್ತಿಯ ಮರಣದ ನಂತರ ನಡೆಯುವ ವಿಧಿಗಳಾಗಿವೆ. ಹೀಗೆ ಝುಂಡೆ ಕುರುಬರಲ್ಲಿಯೂ ಇತರೆ ಕುರುಬರಂತೆ ಹೋಲಿಕೆಯ ಸಂಪ್ರದಾಯ ಆಚರಣೆಗಳಿರುವಂತೆ ವಿಭಿನ್ನ ಆಚರಣೆ ಸಂಪ್ರದಾಯಗಳೂ ಅಸ್ತಿತ್ವದಲ್ಲಿವೆ. ಆದರೆ ಇತ್ತೀಚೆಗೆ ಕೆಲವು ಬದಲಾವಣೆಗಳಾಗುತ್ತಿರುವುದು ಸಹಜವೆನಿಸುತ್ತದೆ.

ಕುಡುವೊಕ್ಕಲಿಗರು

ಕುಡುವೊಕ್ಕಲಿಗರು ಬಸವನಾಡಿಗೆ ಬಂದ ಮೇಲೆ ವೀರಶೈವ ಲಿಂಗಾಯತ ಧರ್ಮವನ್ನು ಸ್ವೀಕರಿಸಿ

ಪೂರ್ಣ ಶಾಖಾಹಾರಿಗಳಾದವರು. ಇವರ ಮೂಲ ಆಂಧ್ರವೆಂತಲೂ, ಇವರು ಮೊದಲಿಗೆ ಮಾಂಸಾಹಾರಿಗಳಾಗಿದ್ದರೆಂದು ತಿಳಿದು ಬರುತ್ತದೆ. ಅಲ್ಲದೆ ಇವರು ಕುರುಬರಾಗಿದ್ದರೆಂಬುದಕ್ಕೆ ಅನೇಕ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಫಲವತ್ತಾದ ಭೂಮಿಯಿರುವಲ್ಲಿ ಒಕ್ಕಲುತನವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಕುಡುವೊಕ್ಕಲಿಗರು ಅಲ್ಲಲ್ಲಿ ವಾಸವಾದರು. ಕರ್ನಾಟಕಾಂಧ್ರ ಗಡಿಭಾಗಗಳಲ್ಲಿ ಕುಡುವೊಕ್ಕಲಿಗರ ಅನೇಕ ಕುಟುಂಬಗಳಿವೆ. ಇವರೆಲ್ಲ ಪರಸ್ಪರ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದಾರೆ. ಆಂಧ್ರದಿಂದ ಬರುವ ಮುತ್ತುಗಾರರೂ ಕೂಡ ತಾವು ಕುಡುವೊಕ್ಕಲಿಗರೆಂದು ಹೇಳಿಕೊಳ್ಳುತ್ತಿದ್ದು ಇವರೂ ಶಾಖಾಹಾರಿಗಳಾಗಿದ್ದಾರೆ. ಕುಡುವೊಕ್ಕಲಿಗರಲ್ಲಿಯೂ ಜನನ ಮದುವೆ ಮರಣದಂತಹ ಪ್ರಸಂಗಗಳಲ್ಲಿ ಇವರದೇ ಆದ ರೂಢಿಗತ ಸಂಪ್ರದಾಯ ಆಚರಣೆಗಳಿವೆ.

ಗಂಡುಮಗು ಹುಟ್ಟಿದ ಸರಿದಿನಕ್ಕೆ, ಹೆಣ್ಣು ಮಗು ಹುಟ್ಟಿದ ಬೆಸದಿನಕ್ಕೆ ನಾಮಕರಣ ಮಾಡುತ್ತಾರೆ. ಅನುಕೂಲವೆನಿಸಿದ ದಿನದಂದು ಸೋದರತ್ತೆಯು ನಾಮಕರಣ ಮಾಡುತ್ತಾಳೆ. ಹೆಸರಿಡುವಾಗ ಕೂಡಿದ ಮುತ್ತೈದೆಯರು ಅವಳ ಬೆನ್ನು ಚಪ್ಪರಿಸುತ್ತಾರೆ. ನಾಮಕರಣ ಸಂದರ್ಭದಲ್ಲಿ ಗುಗ್ಗರಿ ಮಾಡಿ ಎಲ್ಲರಿಗೂ ಹಂಚುತ್ತಾರೆ. ಈಗಲೂ ಜೋಗುಳ ಹಾಡುವ ಪದ್ಧತಿಯು ಇವರಲ್ಲಿ ರೂಢಿಯಲ್ಲಿದೆ. ಅದರಂತೆ ಜೋಗುಳ ಹಾಡುವ ಜನರೂ ಕೂಡ ಇವರಲ್ಲಿ ಇಂದಿಗೂ ಸಿಗುತ್ತಾರೆ. ಬಾಣಂತಿಯ ಕೈಯಲ್ಲಿಯ ಕೂಸನ್ನು ತೆಗೆದುಕೊಂಡು ತೊಟ್ಟಿಲ ಕೆಳಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಳ್ಳುತ್ತಾರೆ. ತೊಟ್ಟಿಲ ಕೆಳಗೆ ಜೋಳವನ್ನು ಹಾಕಿ ಅದರ ಮೇಲ್ಭಾಗದಲ್ಲಿ ತುಂಬಿದ ತಂಬಿಗೆಯನ್ನು ಇಡಲಾಗುತ್ತದೆ.

ಕಿರಣೆ ಉಡಿಸುವ ಸಂಪ್ರದಾಯ ಅನೇಕ ಸಮಾಜಗಳಲ್ಲಿರುವಂತೆ ಕುಡುವೊಕ್ಕಲಿಗರಲ್ಲಿ ಇದೆ. ಹುಡುಗಿಯೊಬ್ಬಳು ಏಳೆಂಟು ವರ್ಷದವಳಾಗುತ್ತಿರುವಂತೆ ಹುಡುಗಿಯ ತಾಯಿಯ ತವರು ಮನೆಯವರು ದಟ್ಟಿ ತಂದು ಉಡಿಸುತ್ತಾರೆ. ಇದಕ್ಕೆ 'ಹುಟ್ಟು ಕಿರಣೆತಂಬ' ಎಂಬ ಪರ್ಯಾಯ ಹೆಸರೂ ಇದೆ. ಹುಡುಗಿ ದೊಡ್ಡವಳಾದಾಗ ಐದು ದಿನ ಕೂರಿಸುತ್ತಾರೆ. ಆಗಲೂ ಕೂಡ ತವರು ಮನೆಯವರು ಸೀರೆ ಉಡಿಸಿ ಮೈಲಿಗೆ ಕಳೆಯುವುದುಂಟು. ಅನುಕೂಲಸ್ಥರು ಬಂಗಾರ ಒಡವೆಗಳನ್ನು ಕೊಡುವ ಸಂಪ್ರದಾಯವಿದೆ.

ಮುಂಚಿನ ದಿನಗಳಲ್ಲಿ ಮದುವೆಗಳು ಐದು ದಿನಗಳ ಕಾಲ ನಡೆಯುತ್ತಿದ್ದವು. ಆನಂತರ ಮೂರು ದಿನಕ್ಕೂ, ಎರಡು ದಿನಕ್ಕೂ ಬಂದು ನಿಂತಿವೆ. ಇತ್ತೀಚೆಗೆ ಮದುವೆಯ ಸೊಗಡನ್ನು ಕಳೆದುಕೊಂಡು ಒಂದೇ ದಿನದಲ್ಲೂ ಮುಕ್ತಾಯವಾಗುತ್ತಿವೆ. ಐದು ದಿನಗಳ ಮದುವೆಯಲ್ಲಿ ಒಳಕಲ್ಲು ಪೂಜೆಯಿಂದ ಪ್ರಾರಂಭಗೊಂಡು ಐದೂ ದಿನಗಳ ಕಾಲ ಮದುವೆಗೆ ಸಂಬಂಧಿತವಾದ ಬೇರೆ ಬೇರೆ ಆಚರಣೆ ಸಂಪ್ರದಾಯಗಳು ನಡೆಯುತ್ತಿದ್ದವು. ಬದಲಾದ ಕಾಲಮಾನಕ್ಕೀಗ ಎಲ್ಲವೂ ಮೊಟಕಾಗಿವೆ.

ಮೂಲತಃ ಕುಡುವೊಕ್ಕಲಿಗರಲ್ಲಿ ಉಡಕಿ ಪದ್ಧತಿಯಿಲ್ಲ. ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡಿರುವ ಒಂದು ದಿನವೂ ಗಂಡನ ಮನೆಗೆ ಹೋಗದಿರುವ ವಿಧವೆಯಿಂದ ಹೆಣ್ಣು ಮಗಳು ಜೀವನ ಪರ್ಯಂತ

ಕೊರಗುವುದು ಬೇಡವೆಂದು ಮರುಮದುವೆ ಆಲೋಚನೆ ಮಾಡಿದ್ದಾರೆ. ಸೀಮಂತ ಕಾರ್ಯವು ಉಳಿದ ಜಾತಿ ಮತಸ್ಥರಲ್ಲಿ ಜರುಗುವಂತೆಯೇ ನಡೆಯುತ್ತದೆ. ಮರಣ ಸಂದರ್ಭದಲ್ಲಿ ಹೆಣವನ್ನು ಹೂಳಲಾಗುತ್ತದೆ. ಇಂದಿಗೂ ಕೃಷಿ ಪ್ರಧಾನ ಸಂಸ್ಕೃತಿಯಲ್ಲಿ ಬದುಕುತ್ತಿರುವ ಇವರು ತಮ್ಮ ಮೂಲದ ಆಚಾರ ವಿಚಾರಗಳನ್ನು ಪ್ರತಿನಿಧಿಸುವವರಾಗಿರುವುದು ವಿಶೇಷ.

ದನಗರ ಗವಳಿಗ ಕುರುಬರು

ಕರ್ನಾಟಕ ದನಗರ ಗವಳಿಗರ ಪರಂಪರೆ, ಕುಟುಂಬ ವ್ಯವಸ್ಥೆ, ವೇಷಭೂಷಣಗಳು, ಆಚರಣೆ ಸಂಪ್ರದಾಯಗಳನ್ನು ಅವಲೋಕಿಸಿದರೆ ಕರ್ನಾಟಕ ಕುರುಬರ ಆಚಾರ ವಿಚಾರಗಳನ್ನು ಹೋಲುತ್ತವೆ. ದನಗರ ಎಂಬುದರ ಅರ್ಥ ಕುರುಬರು ಎಂದೇ ಆಗಿರುವುದು. ಎಮ್ಮೆ ಆಕಳುಗಳನ್ನು ಸಾಕಿಕೊಂಡು ಹೈನುಗಾರಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಬಂದ ಗವಳಿಗರು ಜೊತೆಗೂಡಿ ದನಗರ ಗವಳಿಗರು ಎಂದು ಹೆಸರನ್ನು ಪಡೆಯುತ್ತಾರೆ. ಬುಡಕಟ್ಟು ವರ್ಗದವರಾದ ಕಚ್ಚೆಗೌಳಿಗರೂ, ಶಿಷ್ಟವರ್ಗದವರಾದ ಗೌಳಿಲಿಂಗಾಯತರೂ ನಮಗೆ ದೊರೆಯುತ್ತಾರೆ. ಇವರೆಲ್ಲರೂ ಮೂಲ ಉದ್ಯೋಗವನ್ನಾಗಿ ಹೈನುಗಾರಿಕೆಯಾಗಿಸಿಕೊಂಡಿರುವುದು.

ಗವಳಿಗರ ವೇಷಭೂಷಣಗಳು ಉಡುಗೆತೊಡುಗೆಗಳು ವಿಶಿಷ್ಟವಾಗಿವೆ. "ಇವರ ಮೈ ಬಣ್ಣ ಕಪ್ಪು, ಆಳುಗಿಡ್ಡ, ಲಂಗೋಟಿ, ರುಮಾಲು, ಕಂಬಳಿ ಇಷ್ಟೇ ಇವರ ಉಡುಗೆಗಳು, ಹೆಂಗಸರು ಕುಪ್ಪಸ ಹಾಕುವರು ಕಚ್ಚೆ ಹಾಕುವುದಿಲ್ಲ"[18] ಎಂದು ವೆಂಕಟರಂಗೋಕಟ್ಟಿಯವರು ತಮ್ಮ ಗ್ಯಾಝೆಟೀಯರಲ್ಲಿ ದಾಖಲಿಸಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಪುರುಷರು ಬರ್ಮುಡಾ, ಧೋತ್ರ, ಅಂಗಿ, ರುಮಾಲು ಅಥವಾ ಟೊಪ್ಪಿಗೆಯನ್ನು ಧರಿಸುತ್ತಾರೆ. ಕೈಯಲ್ಲಿ ಕಡಗ, ಕಿವಿಯಲ್ಲಿ ಮುತ್ತು, ಕೊರಳಲ್ಲಿ ಸರ, ಕೈಯಲ್ಲಿ ಕೋಲು, ಹೆಗಲ ಮೇಲೆ ಕಂಬಳಿ ಮಹಿಳೆಯರು ರವಿಕೆ ಸೀರೆ ಕಚ್ಚೆ ಹಾಕಿಕೊಂಡವರು ಕಂಡು ಬಂದರೆ ಅವರು ದನಗರ ಗವಳಿಗರಾಗಿರುತ್ತಾರೆ. ಇವರು ತುಂಬಾ ಭಯಸ್ಥರು. ಮೊದಲಿಗೆ ಯಾರಾದರೂ ಪ್ಯಾಂಟ್‌ಧರಿಸಿದ ವ್ಯಕ್ತಿಗಳಾಗಲಿ, ಸೈಕಲ್ ಮೋಟಾರು ಇತರೆ ವಾಹನಗಳನ್ನು ನೋಡಿದರೆ ಭಯಗೊಂಡು ಓಡಿಹೋಗುವಂತವರಾಗಿದ್ದರು. ಆದರೆ ಇತ್ತೀಚೆಗೆ ನಗರದ ಸಂಪರ್ಕಕ್ಕೆ ಬಂದ ಮೇಲೆ ಗವಳಿಗರು ಭಯದಿಂದ ದೂರವಾಗಿದ್ದಾರೆ.

ಗವಳಿಗರು ಸಾಮಾನ್ಯವಾಗಿ ಶಾಖಾಹಾರಿಗಳು. ರೊಟ್ಟಿ, ಚಪಾತಿ, ಅನ್ನ ಸಾರು ಪಲ್ಯಗಳಂತಹ ಆಹಾರ ಪದಾರ್ಥಗಳನ್ನು ಪ್ರತಿದಿನ ಮನೆಯಲ್ಲಿ ತಯಾರಿಸಿಕೊಳ್ಳುತ್ತಾರೆ. ಊಟದ ಜೊತೆಗೆ ಹಾಲು, ಮೊಸರು ಮಜ್ಜಿಗೆ, ಬೆಣ್ಣೆಯನ್ನು ಉಪಯೋಗಿಸುತ್ತಾರೆ. ಬೆಳಗ್ಗೆ ಚಹಾ ಕಷ್ಟಾಯ ಪಾನೀಯ. ನಂತರ ಹನ್ನೊಂದು ಗಂಟೆಯ ವೇಳೆಗೆ ಹೊತ್ತಿಗೆ ಊಟವನ್ನು ಮಾಡಿ ಪಶುಪಾಲನೆಗಾಗಿ ಅರಣ್ಯಕ್ಕೆ ಹೋಗುವುದು

ಇವರ ದಿನಚರಿ. ಬೆಳಗಿನ ಉಪಹಾರವಂತೂ ಇಲ್ಲವೇ ಇಲ್ಲ. ಕೆಲವರು ವಾರ, ಹದಿನೈದು ದಿನಕ್ಕೊಮ್ಮೆ ಕೋಳಿ ಅಥವಾ ಕುರಿ ಮಾಂಸವನ್ನು ಸೇವಿಸುತ್ತಾರೆ. ಎಲೆ ಅಡಿಕೆ ಹಾಕಿಕೊಳ್ಳುವುದು ಸರ್ವೇಸಾಮಾನ್ಯ.

ಇವರ ಪ್ರಧಾನ ಉದ್ಯೋಗ ಪಶುಪಾಲನೆ. ಒಂದೊಂದು ಕುಟುಂಬದವರು ಆಕಳು ಎಮ್ಮೆಗಳ ಜೊತೆಗೆ ಆಡುಗಳನ್ನೂ ಸಾಕುತ್ತಾರೆ. ಇವರಲ್ಲಿ ಕನಿಷ್ಠ ಐದು, ಗರಿಷ್ಠ ಮೂವತ್ತು ಎಮ್ಮೆ, ಆಕಳುಗಳನ್ನು ಹೊಂದಿರುತ್ತಾರೆ. ಈ ಹಿಂದೆ ಪ್ರತಿದಿನ ಹಾಲು ಮಾರಲು ಪಕ್ಕದ ನಗರಗಳಿಗೆ ಹೋಗಿಬರುತ್ತಿದ್ದರು. ಇತ್ತೀಚೆಗೆ ಯಲ್ಲಾಪುರ ತಾಲೂಕಿನ ಕಿರುವತ್ತಿಯಲ್ಲಿ ಶ್ರೀಕೃಷ್ಣ ಹಾಲಿನ ಡೈರಿಯವರು ಗವಳಿಗರಿರುವ ಊರಿಗೆ ಬಂದು ಹಾಲನ್ನು ಖರೀದಿಮಾಡಿಕೊಂಡು ಹೋಗುತ್ತಾರೆ. ಇನ್ನುಳಿದ ಹಾಲಿನಿಂದ ಮೊಸರು, ಬೆಣ್ಣೆ ಮಜ್ಜಿಗೆಯನ್ನು ತಯಾರಿಸಿ ಮಾರಾಟ ಮಾಡುವರು. ಕೆಲವರು ಹಾಲಿನ ಖೋವಾ ತಯಾರಿಸುತ್ತಾರೆ. ಆರ್ಥಿಕವಾಗಿ ಸಬಲವಿರುವ ಕೆಲವು ಗವಳಿಗರು ಹೊಲಗದ್ದೆಗಳನ್ನು ಲಾವಣಿರೂಪದಿಂದ ಅಥವಾ ಖರೀದಿ ಮಾಡಿಕೊಂಡು ಒಕ್ಕಲುತನ ಕೈಗೊಂಡಿದ್ದಾರೆ.

ಒಂದು ಕುಟುಂಬದಲ್ಲಿ ಹೆಚ್ಚು ಸದಸ್ಯರಿದ್ದರೆ ರೈತರ ಹೊಲದಲ್ಲಿ ದುಡಿಯಲು ಹೋಗುವುದು ಸಹಜವಾಗಿರುತ್ತದೆ. ಮಹಿಳೆಯರು ಮನೆಯ ಕೆಲಸಗಳ ಜೊತೆಗೆ ಹೈನುಗಾರಿಕೆ, ಕೂಲಿಕೆಲಸಗಳನ್ನು ಮಾಡುತ್ತಾರೆ. ಬೇಸಿಗೆ ಕಾಲದಲ್ಲಿ ದನಗಳನ್ನು ಮೇಯಿಸಲು ಅಡವಿಯಲ್ಲಿ ಹುಲ್ಲು ಮೇವು ಇರುವುದಿಲ್ಲ. ಅದಕ್ಕಾಗಿ ಕುಟುಂಬದ ಕೆಲವು ಸದಸ್ಯರು ದುಡಿಯಲಿಕ್ಕೆ ತಿಂಗಳುಗಟ್ಟಲೆ ಗೋವಾಕ್ಕೆ ವಲಸೆ ಹೋಗುತ್ತಾರೆ. ಗವಳಿಗರದು ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಿದೆ. ಮನೆಯ ಯಜಮಾನನೇ ಎಲ್ಲಾ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುತ್ತಾನೆ. ಮಹಿಳೆಯರು ಮನೆಗೆಲಸ ಮಾಡಿಕೊಂಡು ಹೋಗುವುದರ ಜೊತೆಗೆ ಮಕ್ಕಳ ಪಾಲನೆ ಪೋಷಣೆ ಮಾಡುವ ಜವಾಬ್ದಾರಿಯು ಇರುತ್ತದೆ. ಈ ಹಿಂದೆ ಬಾಲ್ಯವಿವಾಹ ಪದ್ಧತಿ ಇವರಲ್ಲಿ ರೂಢಿಯಲ್ಲಿತ್ತು. ಇತ್ತೀಚೆಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆಯಿಂದ ನಿಂತು ಹೋಗಿವೆ. ವರದಕ್ಷಿಣೆ ಕೊಡುವ ಪದ್ಧತಿ ಇವರಲ್ಲಿ ಇಲ್ಲ. ಬದಲಾಗಿ ವಧುದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳುವ ಪರಂಪರೆಯು ಈಗಲೂ ಇದೆ. ಆದರೆ ಅಳಿಯನಿಗೆ ಶಕ್ತ್ಯಾನುಸಾರ ಉಡುಗೊರೆಗಳನ್ನು ನೀಡುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಒಂದೊಂದು ಸಮುದಾಯದ ಆಚರಣೆ, ಸಂಪ್ರದಾಯಗಳು ವಿಶಿಷ್ಟವಾಗಿರುತ್ತವೆ. ಅಂತಹ ವಿಶಿಷ್ಟತೆಯಿಂದಲೇ ಆಯಾ ಸಮುದಾಯದ ಅನನ್ಯತೆಯು ನಮಗೆ ಸ್ಪಷ್ಟವಾಗುತ್ತದೆ. ಗವಳಿಗರು ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂದು ತಮ್ಮ ತಮ್ಮ ಹಟ್ಟಿಗಳನ್ನು ಅಥವಾ ಮನೆಗಳನ್ನು ಆಕಳ ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಹಬ್ಬಗಳಲ್ಲಿ ಸಿಹಿ ಅಡಿಗೆಯನ್ನು ತಯಾರಿಸಿ ನೈವೇದ್ಯವನ್ನು ಮಾಡಿ ಮನೆ ಮಂದಿಯೆಲ್ಲ ಒಟ್ಟಾಗಿ ಊಟ ಮಾಡುತ್ತಾರೆ.

"ಮಹಾರಾಷ್ಟ್ರದ ಪಟ್ಟಣ ಕಡೋಲಿಯ ಇಟ್ಟಪ್ಪ ಹಾಗೂ ಪಂಡರಪುರದ ವಿಠೋಬರು ಗವಳಿಗರ ಪ್ರಮುಖ ಆರಾಧ್ಯ ದೈವಗಳು"[೬] ಎಂದು ರಾಮಚಂದ್ರ ಚಿಂತಾಮಣಿ ಢೇರೆಯವರು ಅಭಿಪ್ರಾಯಪಡುತ್ತಾರೆ.

ಪ್ರತಿವರ್ಷಕ್ಕೊಮ್ಮೆ ಈ ಕ್ಷೇತ್ರಕ್ಕೆ ಹೋಗಿ ದರ್ಶನವನ್ನು ಪಡೆದುಕೊಂಡು ಬರುತ್ತಾರೆ. ಇತ್ತೀಚೆಗೆ ಗವಳಿಗರು ತಾವು ನೆಲೆನಿಂತ ಗ್ರಾಮಗಳಲ್ಲಿಯೇ ವಿಠಲ ದೇವಾಲಯಗಳನ್ನು ನಿರ್ಮಿಸಿಕೊಂಡು ಆರಾಧನೆ ಮಾಡುತ್ತಿದ್ದಾರೆ.

ಗವಳಿಗರು ಆರ್ಥಿಕವಾಗಿ ತುಂಬ ಹಿಂದುಳಿದವರು. ಹೈನುಗಾರಿಕೆಯ ಆದಾಯವೇ ಇವರ ಬದುಕಿಗೆ ಆಧಾರ. ಎಮ್ಮೆ ಆಕಳುಗಳಿಗೆ ಆಹಾರ ಒದಗಿಸುವುದು ತುಂಬಾ ಕಷ್ಟದ ಕೆಲಸವಾಗುತ್ತಿರುವುದು ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಇರುವ ತೊಡಕು. ಅರಣ್ಯ ಹುಲ್ಲುಗಾವಲು ಪ್ರದೇಶಗಳು ಕಡಿಮೆಯಾದ ಕಾರಣ ದನಕರುಗಳು ಹೊಟ್ಟೆತುಂಬ ಮೇಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಹೈನುಗಾರಿಕೆಯ ಪ್ರಮಾಣವೂ ಇಳಿಕೆಯಾಗಿದೆ. ಮಳೆಗಾಲ ಮತ್ತು ಚಳಿಗಾಲದಲ್ಲಿ ಹೇಗೋ ದನಕರುಗಳನ್ನು ಅಡವಿಗೆ ಹೋಗಿ ಮೇಯಿಸಿಕೊಂಡು ಬರುತ್ತಾರೆ. ಆದರೆ ಬೇಸಿಗೆ ಕಾಲದಲ್ಲಿ ರೈತರಿಂದ ಖರೀದಿಸಿ ಮೇವನ್ನು ಹಾಕಿ ಸಾಕಬೇಕಾಗುತ್ತದೆ.

ಒಟ್ಟಾರೆಯಾಗಿ ಕುರುಬರ ಒಳಪಂಗಡಗಳಲ್ಲಿ ಒಂದಾದ ದನಗರ ಗವಳಿಗರು ಪಶುಪಾಲನೆ ಮಾಡುತ್ತ ಹೈನುಗಾರಿಕೆಯನ್ನು ತಮ್ಮ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಂಥವರು. ಜಾಗತೀಕರಣದಂಥ ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಅವರ ಉದ್ಯೋಗ ಮತ್ತು ದೈನಂದಿನ ಬದುಕಿನಲ್ಲಿ ಏರುಪೇರುಗಳಾಗುತ್ತಿರುವುದು ಸಹಜವೇ ಆಗಿದೆ. ಈ ಏರುಪೇರುಗಳಿಗೆ ಜಗ್ಗದೆ ಗವಳಿಗರು ಬದುಕು ಮುನ್ನಡೆಸಬೇಕಾಗಿದೆ. ಆಗ ಮಾತ್ರ ಅವರ ಸಂಸ್ಕೃತಿ ಸಮುದಾಯದ ಅನನ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯ. ಕರ್ನಾಟಕ ಕುರುಬ ಸಮುದಾಯ ಗವಳಿಗರೂ ನಮ್ಮವರೆಂಬ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡರೆ ಸಮಾಜದ ಮುಖ್ಯವಾಹಿನಿಗೆ ತರುವುದು ಕಷ್ಟವೇನಾಗಲಾರದು.

ಹೆಗ್ಗಡೆ ಮತ್ತು ವಾರದ ಕುರುಬರು

ಹೆಗ್ಗಡೆ ಮತ್ತು ವಾರದ ಕುರುಬರು ಕುರುಬ ಸಮುದಾಯದ ಒಳಪಂಗಡವಾಗಿ ದಕ್ಷಿಣ ಕರ್ನಾಟಕ ಹಳೆಯ ಮೈಸೂರು ಭಾಗದಲ್ಲಷ್ಟೇ ಇದ್ದಾರೆ. ಹೆಗ್ಗಡೆಗಳ ಸಾಮಾಜಿಕ ಜೀವನವು ಇತರೆ ಕುರುಬರನ್ನು ಬಹುಮಟ್ಟಿಗೆ, ಒಕ್ಕಲಿಗರನ್ನು ಸಾಕಷ್ಟು ಮಟ್ಟಿಗೆ ಹೋಲುತ್ತದೆ. ಆಹಾರ ಪದ್ಧತಿಗಳು, ವಿವಾಹ ಸಂಬಂಧಗಳು, ಜನನ, ಮರಣ ಆಚರಣೆಗಳು, ಋತುಮತಿಯಾಗುವಿಕೆ, ಶೋಭನ ಆಚರಣೆಗಳಲ್ಲಿ ವ್ಯತ್ಯಾಸಗಳು ದೇವರು ದೇವತೆಗಳು ನಂಬಿಕೆ ವ್ಯತ್ಯಾಸಗಳು ಯಾವುದೇ ಜಾತಿ ಜನಾಂಗಗಳ ನಡುವಣ ವ್ಯತ್ಯಾಸಗಳನ್ನು ಅಳೆಯುವ ಮಾನದಂಡಗಳಾಗಿವೆ.

ಹೆಗ್ಗಡೆಗಳಿಗೆ ಕುರುಬರೊಡೆಯರು (ಬೀರದೇವರ ಪೂಜಾರಿಗಳು) ಪುರೋಹಿತರಾಗಿರುತ್ತಾರೆ. ಹೆಗ್ಗಡೆಗಳಿಗೂ, ವಾರದ ಕುರುಬರಿಗೂ ಹಾಗೂ ಇನ್ನಿತರ ಕುರುಬರಲ್ಲಿ ಅಂತಹ ಹೇಳಿಕೊಳ್ಳಬಹುದಾದ

ಆಚರಣೆ, ಸಂಪ್ರದಾಯುಗಳ ವ್ಯತ್ಯಾಸಗಳೇನೂ ಇಲ್ಲ. ಇವರೂ ಕೂಡ ಪ್ರಧಾನವಾಗಿ ಉಣ್ಣೆಕಂಕಣದವರು ಬೀರೇಶ್ವರ ಮತ್ತು ರೇವಣಸಿದ್ಧರನ್ನು ಪೂಜಿಸುವುದರಿಂದ ಇವರಿಗೂ 'ಹಳೆಯ ಕುರುಬರು' ಎನ್ನುವರು.

ಹೆಗ್ಗಡೆಗಳಿಗೂ ಮತ್ತು ಇತರ ಕುರುಬರಿಗೂ ಅಂದರೆ ಮುಳ್ಳು ಕುರುಬರು, ವಾರದಕುರುಬರು, ಮುಂತಾದವರಿಗಿರುವ ಪ್ರಮುಖ ವ್ಯತ್ಯಾಸವೇನೆಂದರೆ ಗುರುವಾರದ ಕುರುಬರು ಕೋಳಿ ತಿನ್ನುವುದಿಲ್ಲ. ಆದರೆ ಹೆಗ್ಗಡೆಗಳು ಕುರಿ, ಮೇಕೆ ಮಾಂಸ ಮತ್ತು ಮೀನು ತಿನ್ನುವರು. ಹೆಗ್ಗಡೆಗಳು ಕೋಳಿ ಮುಟ್ಟಿಸಿಕೊಂಡರೆ ಸ್ನಾನ ಮಾಡಬೇಕು. ಕೋಳಿಯೊಂದು ಹೆಗ್ಗಡೆಯ ಮೇಲೆ ಹಾರಲಿ ಅಥವಾ ಹೆಗ್ಗಡೆಯೇ ಕೋಳಿಯನ್ನು ಮುಟ್ಟಿದರೆ ಮೈಲಿಗೆ ಹೆಗ್ಗಡೆಯಾಗುತ್ತಾನೆ. ಪ್ರಾಯಶ್ಚಿತ್ತವೆಂಬಂತೆ ಮೈಲಿಗೆಯಾದ ಹೆಗ್ಗಡೆ ಸ್ನಾನ ಮಾಡಿ ಸ್ವಚ್ಛವಾದ ಹೊಸ ವಸ್ತ್ರವನ್ನು ಧರಿಸಿ ಶಿವಪೂಜೆ ಮಾಡಿ ವಿಭೂತಿ ಧರಿಸಿಕೊಂಡರೆ ಮೈಲಿಗೆ ಕಳೆದುಕೊಂಡಂತೆ ಎಂಬ ನಂಬಿಕೆಯಿದೆ. ಹೀಗೆ ಕೋಳಿ ತಿನ್ನದ, ಕೋಳಿಗಳ ಬಳಿಯೂ ಸುಳಿಯದ ಹೆಗ್ಗಡೆಗಳು ತಾವು ಇತರೆಲ್ಲಾ ಕುರುಬರಿಗಿಂತಲೂ ಶ್ರೇಷ್ಠರೆಂಬ ಭಾವನೆಯಿದೆ.

ಹೆಗ್ಗಡೆಗಳು ಪ್ರಧಾನವಾಗಿ ಶೈವರು. ಇವರ ಗಂಡು ದೇವತೆಗಳು ರೇವಣಸಿದ್ಧ ಮತ್ತು ಬೀರೇಶ್ವರ. ಹೆಣ್ಣುದೇವತೆ ಮಸಣಮ್ಮ. ಆದರೆ ಹೆಗ್ಗಡೆಗಳ ಕುಲದೇವರು ಮದ್ದೂರು ತಾಲೂಕಿನ ಆಲೂರಿನಲ್ಲಿರುವ ಶ್ರೀ ಬೀರೇಶ್ವರ. ಹೆಣ್ಣು ದೇವತೆಯಾದ ಮಸಣಮ್ಮನ ದೇವಾಲಯಗಳಲ್ಲಿ ಕರಿಕಂಬಳಿ ಗದ್ದಿಗೆ ಹಾಕಿ ಕಳಸವನ್ನು ಪೂಜಿಸುವರು. ಕಳಸವು ತಾಮ್ರದ ಚೊಂಬಿಗೆ ಪವಿತ್ರವಾದ ಜಲತುಂಬಿ ಒಂದು ತೆಂಗಿನಕಾಯಿಗೆ ಅರಿಶಿನ ಕುಂಕುಮವಿರಿಸಿ ವೀಳ್ಯೆದೆಲೆಯನ್ನು ಕಮಲಾಕಾರದಲ್ಲಿ ಚೊಂಬಿಗೆ ಜೋಡಿಸಿಟ್ಟು ಸಿಂಗರಿಸಲ್ಪಟ್ಟಿರುವುದು. ಮಸಣಮ್ಮನ ಪೂಜಾರಿಯು ಸರ್ವೇಸಾಮಾನ್ಯವಾಗಿ ಶಾಖಾಹಾರಿಯಾಗಿರುತ್ತಾನೆ. ಈ ಮಸಣಮ್ಮನಿಗೆ ದೇವಾಲಯಗಳು ಕಡಿಮೆಯಿವೆ.

ಹೆಗ್ಗಡೆಗಳು ಶ್ರೀಬೀರೇಶ್ವರ ಭಕ್ತರು. ಅವರು ತಮ್ಮ ಗಂಡು ದೇವತೆಯನ್ನು ಶ್ರೀ ಬೀರಪ್ಪ ಶ್ರೀಬೀರಲಿಂಗ. ಶ್ರೀ ಬೀರಲಿಂಗೇಶ್ವರ, ಶ್ರೀಕೊಂಡಣ್ಣ, ಶ್ರೀ ಕೆಂಗಣ್ಣಸ್ವಾಮಿ ಎಂದೆಲ್ಲಾ ಕರೆಯುವರು. ಬೀರದೇವರನ್ನು ಕೆಲವು ಶಾಸನಗಳಲ್ಲಿ ವೀರ(ಬೀರ)ಭದ್ರನೆಂದು ಕರೆಯಲಾಗಿದೆ. ಈ ಬೀರಭದ್ರನು ವೀರಭದ್ರನಾದನು. ಈತ ಶಿವನ ಪರಿವಾರ ದೇವತೆ. ಹೀಗೆ ಅನೇಕ ಊರುಗಳಲ್ಲಿ ಬೀರಭದ್ರನ ದೇವಸ್ಥಾನಗಳು ವೀರಶೈವರ ಪ್ರಾಬಲ್ಯ ಮತಾಂತರ ನಡೆದಂತೆ ವೀರಭದ್ರೇಶ್ವರ ಅಥವಾ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಗಳಾಗಿ ಪರಿವರ್ತನೆಗೊಂಡವೆಂದು ನಂಬುತ್ತಾರೆ.

ಒಟ್ಟಾರೆಯಾಗಿ ಹೆಗ್ಗಡೆ ಮತ್ತು ವಾರದ ಕುರುಬರ ಜನನ-ವಿವಾಹ-ಮರಣ ಸಂಬಂಧೀ ಆಚರಣೆ ಸಂಪ್ರದಾಯಗಳೆಲ್ಲವೂ ಬಹುಪಾಲು ಉಣ್ಣೆಕಂಕಣ ಕುರುಬರನ್ನು ಹೋಲುತ್ತವೆ. ಹೆಗ್ಗಡೆಗಳದು ಅತ್ಯಂತ ಹಿಂದುಳಿದ ಸಮಾಜವಾಗಿದ್ದು ಇವರು ಕುರುಬರೊಳಗೇ ಅತ್ಯಂತ ಬಡವರಾಗಿದ್ದಾರೆ. ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆ ಹೊಂದಿದ್ದರೂ ಕೂಡ ಬಹುತೇಕ ಅನಕ್ಷರಸ್ಥರಾಗಿ ಉಳಿದಿರುವುದು ದುರಂತವೇ ಸರಿ. ಇವರೆಲ್ಲರನ್ನೂ

ಕುರುಬ ಸಮುದಾಯದ ತೆಕ್ಕೆಗೆ ತೆಗೆದುಕೊಂಡು ಎಲ್ಲಾ ವಲಯಗಳ ಸಬಲೀಕರಣವಾದರೆ ಮಾತ್ರ ಇವರಿಗೆ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ.

ನೊಣಬ ಕುರುಬರು

ಸಮಾಜದ ಸಾಮಾಜಿಕ ಸಂರಚನೆ ಮತ್ತು ಧರ್ಮ ಒಂದಕ್ಕೊಂದು ಆಂತರಿಕ ಸಂಬಂಧವನ್ನು ಹೊಂದಿವೆ. ವ್ಯಕ್ತಿಯ ಜೀವನ ಮತ್ತು ನಡಾವಳಿಕೆಗಳ ಆಧಾರದ ಮೇಲೆ ಧಾರ್ಮಿಕ ಆಚರಣೆ, ನಂಬಿಕೆ, ಮತ್ತು ಸಂಪ್ರದಾಯಗಳು ಪ್ರಭಾವ ಬೀರುತ್ತವೆ. ಹಾಗೆಯೇ ನೊಣಬರಲ್ಲಿಯೂ ಕೆಲವು ವಿಶಿಷ್ಟ ಆಚರಣೆ ಸಂಪ್ರದಾಯಗಳು ವೈಶಿಷ್ಟ್ಯದಿಂದ ಕೂಡಿವೆ. ಇವರು ವೀರಶೈವೀಕರಣಕ್ಕೆ ಒಳಗಾಗುವ ಮುನ್ನ ಕುರುಬರ ಆಚರಣೆ ಸಂಪ್ರದಾಯಗಳನ್ನೂ ಅನುಸರಿಸುತ್ತಿದ್ದರು. ವೀರಶೈವೀಕರಣಗೊಂಡ ನಂತರ ಇಷ್ಟಲಿಂಗ ಮತ್ತು ವಿಭೂತಿಧಾರಣೆ ಪ್ರಮುಖ ಆಚರಣೆಗಳಾಗಿ ಕಂಡುಬರುತ್ತಾರೆ.

"ನೊಣಬರು ಲಿಂಗಧರ್ಮೀಯರಾಗಿ ಸಿದ್ದೇಶ್ವರನನ್ನು ದೈವವನ್ನಾಗಿ, ಸಿದ್ಧರಾಮೇಶ್ವರರನ್ನು ಸ್ವಾಮಿಗಳೆಂದು ಪೂಜಿಸುವರು. ಕುರುಬರೂ ಇದೇ ದೇವರನ್ನು ಹಾಗೂ ಸ್ವಾಮಿಗಳನ್ನು ಆರಾಧಿಸುವರು. ನೊಳಂಬರಿಗೆ ನೊಣಬರೆಂದು ಕರೆಯುವರು. ನೊಣಬ ಎಂಬುದು ಜಾತಿಯ ಹೆಸರಲ್ಲ. ಅದು ವಂಶದ ಹೆಸರು. ಆದ್ದರಿಂದ ನೊಣಬರ ಸಂಸ್ಕೃತಿಯೂ ಕುರುಬರ ಸಂಸ್ಕೃತಿಯೂ ಒಂದೇ ಆಗಿರುತ್ತದೆ"[೪೭] ಎನ್ನುತ್ತಾರೆ ಕುಂ.ಬಾ.ಸದಾಶಿವಪ್ಪನವರು. ಅಲ್ಲದೆ ಇವರು ಶೈವ ವೈಷ್ಣವ ಸಂಬಂಧೀ ದೇವರುಗಳಾದ ಶಿವ, ಈಶ್ವರ, ರುದ್ರ, ವೀರಭದ್ರ, ಬಸವೇಶ್ವರ, ಸಿದ್ಧರಾಮೇಶ್ವರ, ಸಿದ್ಧಲಿಂಗೇಶ್ವರ, ರಂಗನಾಥಸ್ವಾಮಿ, ಆಂಜನೇಯ ಸ್ವಾಮಿ, ನರಸಿಂಹಸ್ವಾಮಿಗಳನ್ನೂ ಆರಾಧಿಸುತ್ತಾರೆ. ಇವೆಲ್ಲಕ್ಕೂ ಮುಖ್ಯವಾಗಿ ಇಂದು ಮನೆದೇವರಾಗಿ ಸಿದ್ಧರಾಮೇಶ್ವರನನ್ನು ಪೂಜಿಸುವರು.

ನೊಣಬರು ವರ್ಷಾದ್ಯಂತ ವಿವಿಧ ಹಬ್ಬಗಳನ್ನು ಆಚರಿಸುತ್ತಾರೆ. ಕೆಲವು ಹಬ್ಬಗಳು ನೊಣಬರಿಗೆ ವಿಶಿಷ್ಟವಾಗಿವೆ. ಇವರಲ್ಲಿ ವೀರಶೈವಕ್ಕೆ ಮತಾಂತರ ಮತ್ತು ಮಂತ್ರದೀಕ್ಷೆ ಪಡೆದುಕೊಂಡ ನಂತರ ಲಿಂಗಾಯತರ ಸಾಮಾನ್ಯ ಹಬ್ಬಗಳ ಸಾಮ್ಯತೆ ಪಡೆದುಕೊಂಡಿವೆ. ಗ್ರಾಮಗಳ ಸಾಮಾನ್ಯ ಹಬ್ಬಗಳಾಗಿ ಯುಗಾದಿ, ಮಹಾನವಮಿ, ಸಂಕ್ರಾಂತಿಗಳಾದರೆ, ಲಿಂಗಾಯತರ ಶಿವರಾತ್ರಿ, ಬಸವಜಯಂತಿ ಪ್ರಮುಖವೆನಿಸಿವೆ. ನೊಣಬರಿಗೇ ವಿಶಿಷ್ಟ ಹಬ್ಬವೆಂದರೆ ಸಿದ್ಧರಾಮ ಜಯಂತಿ, ಇವು ಸಮಗ್ರ ಜೀವನದ ಐಕ್ಯತೆಯ ಹಬ್ಬಗಳಾಗಿವೆ, ಮಾತ್ರವಲ್ಲದೆ ಸಮನ್ವಯತೆಯನ್ನೂ ಸಾರುತ್ತವೆ. ನೊಣಬರಿರುವ ಊರುಗಳಲ್ಲೆಲ್ಲ ಸಿದ್ಧರಾಮೇಶ್ವರ ದೇವಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಸಿದ್ಧರಾಮೇಶ್ವರನಿಗೆ ಇಂದಿಗೂ ಕಂಥಾಧಾರಣ ಸೇವೆ ಮಾಡುವವರು ಕುರುಬರೆ ಆಗಿರುವುದು ವಿಶಿಷ್ಟವೆನಿಸಿದೆ.

ನೊಣಬರಲ್ಲಿ ಅನೇಕ ಸಂಪ್ರದಾಯ, ನಂಬಿಕೆ, ಆಚರಣೆ, ಕ್ರಿಯಾವಿಧಿಗಳು ಕಂಡುಬರುತ್ತವೆ. ಈ ಎಲ್ಲಾ ಧಾರ್ಮಿಕ ಆಚರಣೆಗಳು ಕುಲದ ನೆಲೆಯಲ್ಲಿ, ಒಳಪಂಗಡದ ನೆಲೆಯಲ್ಲಿ, ಗ್ರಾಮದ ನೆಲೆಯಲ್ಲಿ

ನಡೆಯುತ್ತವೆ. ಇವರು ತಮ್ಮ ಮನೆದೇವರನ್ನು ವಾರಕ್ಕೊಮ್ಮೆ ಕಟ್ಟುನಿಟ್ಟಾಗಿ ಆರಾಧಿಸುತ್ತಾರೆ. ಇವರ ದೈನಂದಿನ ಆಚರಣೆ ಇಷ್ಟಲಿಂಗ ಪೂಜೆ. ಕೆಲವು ನೊಣಬ ಕುಟುಂಬಗಳು ತಿರುಪತಿ ತಿಮ್ಮಪ್ಪ, ಆಂಜನೇಯಸ್ವಾಮಿ, ನರಸಿಂಹಸ್ವಾಮಿಗಳನ್ನು ತಮ್ಮ ಮನೆದೇವರಾಗಿ ಪೂಜಿಸುವುದುಂಟು.

ಇವರ ಮತ್ತೊಂದು ಆಚರಣೆ ದೀಪೋತ್ಸವ. ಇದು ಮಾಘಮಾಸದ ಪೌರ್ಣಮಿಯಂದು ನೆರವೇರುತ್ತದೆ. ಇದು ಸಿದ್ಧರಾಮೇಶ್ವರನಿಗೆ ಸಲ್ಲುವ ವಿಶೇಷ ಪೂಜಾ ಆಗಿದ್ದು ಸಾಂಪ್ರದಾಯಿಕವಾಗಿ 'ಲಕ್ಷದೀಪೋತ್ಸವ' ಎಂದು ಕರೆಯಲಾಗುತ್ತದೆ. ವ್ಯವಸಾಯ ಇವರ ಸಾಂಪ್ರದಾಯಿಕ ವೃತ್ತಿ. ಈ ವೃತ್ತಿಯು ಧಾರ್ಮಿಕ ಆಚರಣೆ ನಂಬಿಕೆಗಳ ಮೇಲೂ ಪ್ರಭಾವ ಬೀರುತ್ತದೆ. ತಾವು ಬೆಳೆದ ಬೆಳೆಯನ್ನು ಮತ್ತು ಕಾಳನ್ನು ಪೂಜಿಸುವುದು. ಅಂತೆಯೇ ಸುಗ್ಗಿಕಾಲವಾದ ಮೇಲೆ ದೇವರಿಗೆ ಮೀಸಲಿಟ್ಟ ಧವಸಧಾನ್ಯಗಳಿಂದ ಅಡುಗೆ ಮಾಡಿ ನೈವೇದ್ಯ ಒಪ್ಪಿಸುವ ಪರಿಪಾಠವಿದೆ. ಈ ವೃತ್ತಿಯಲ್ಲಿರುವ ಮತ್ತೊಂದು ಆಚರಣೆ 'ಸೂರೆಬಿಡುವುದು' ಬೆಳೆದ ಬೆಳೆಯನ್ನು ಎಲ್ಲರೂ ಉಪಯೋಗಿಸಲು ಮುಕ್ತವಾಗಿ ಅನುವು ಮಾಡಿಕೊಡುವುದು.

ನೊಣಬರ ಸಾರ್ವಜನಿಕ ನಂಬಿಕೆಗಳು ಮತ್ತು ಆಚರಣೆಗಳು ವೈಯಕ್ತಿಕವಾಗಿದ್ದು ಹುಟ್ಟು, ದೀಕ್ಷೆ ವಿವಾಹ ಮತ್ತು ಸಾವು ಪ್ರಮುಖವಾದವು. ಇವರಲ್ಲಿ ಹುಟ್ಟು ಸಂಭವಿಸಿದಾಗ ಸೂತಕ ಸಮಯವೆಂತಲೂ, ಅದರ ನಿವಾರಣೆಗೆ ಧಾರ್ಮಿಕ ಕ್ರಿಯಾವಿಧಿ ಆಚರಿಸಬೇಕಾದುದು ಸಂಪ್ರದಾಯ. ಈ ಸೂತಕದ ಸಮಯದಲ್ಲಿ ತಾಯಿ ಮಗುವನ್ನು ಭೌತಿಕವಾಗಿ ದೂರವಿಡುವುದು ಕಂಡುಬರುತ್ತದೆ. ಅಲ್ಲದೆ ಬೇರೆಯವರ ಧಾರ್ಮಿಕ ಮತ್ತು ಲೌಕಿಕ ಶುಭಕಾರ್ಯಗಳಲ್ಲಿ ಭಾಗವಹಿಸಬಾರದೆಂಬ ನಿರ್ಬಂಧವಿದೆ. ಇದರ ಪರಿಹಾರಾರ್ಥವಾಗಿ ಗೋಮೂತ್ರದಿಂದ ಮನೆಗೆಲ್ಲಾ ಪ್ರೋಕ್ಷಣೆ ಮಾಡಿ ಮಗು ಬಾಣಂತಿಯರಿಗೆ ಸ್ನಾನ ಮಾಡಿಸಿ ಅಂದೇ ಮಗುವಿಗೆ 'ಲಿಂಗಧಾರಣೆ' ಮಾಡಲಾಗುತ್ತದೆ. ಲಿಂಗಧಾರಣಾ ನಂತರ ನಾಮಕರಣವೂ ನಡೆಯುತ್ತದೆ. ಕೆಲವರು ಬಿಡುವಿನ ವೇಳೆಯಲ್ಲಿ ನಾಮಕರಣ ಮಾಡುತ್ತಾರೆ.

ಹೆಣ್ಣು ಮಗು ಋತುಮತಿಯಾದರೆ ಈ ಆಚರಣೆಯನ್ನು ಭಿನ್ನವಾಗಿ ಕುಟುಂಬ ಮತ್ತು ಕುಲದ ಆಚರಣೆಯಾಗಿ ಮೂರರಿಂದ ಹನ್ನೊಂದು ದಿನಗಳವರೆಗೆ ಸಮಾರಂಭವಾಗಿ ಆಚರಿಸುತ್ತಾರೆ. ಇದನ್ನು ಕೂಡ ಸೂತಕವೆಂದೇ ಭಾವಿಸಲಾಗುತ್ತದೆ. ಸೂತಕ ನಿವಾರಣೆಗೆ ಕ್ರಿಯಾವಿಧಿ ನಡೆಸಿ ಕುಲಸ್ಥರು, ಬಂಧುಬಾಂಧವರು ಋತುಮತಿಯಾದ ಹೆಣ್ಣುಮಗುವನ್ನು ಶೃಂಗರಿಸಿ ಆರತಿ ಮಾಡುತ್ತಾರೆ. ಈ ಸಮಾರಂಭವು ಹೆಣ್ಣು ಮಗುವಿಗೆ ಹೆಣ್ಣಿನ ಪ್ರಜ್ಞೆಯ ಜವಾಬ್ದಾರಿಯನ್ನು ನಿರ್ವಹಿಸುವುದಾಗಿರುತ್ತದೆ.

ನೊಣಬರ ವಿವಾಹ ಪ್ರಕ್ರಿಯೆಯನ್ನು ಲಗ್ನಪತ್ರಿಕೆ, ದೇವತಾಕಾರ್ಯ, ಮಾಂಗಲ್ಯಧಾರಣೆ ಮತ್ತು ನಾಗೋಲೆ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಸೋದರ ಸಂಬಂಧಿ ವಿವಾಹಕ್ಕೆ ಅವಕಾಶವಿದೆ. ಲಿಂಗಾಯತ ಜಂಗಮರು ಇವರ ಪೌರೋಹಿತ್ಯ ವಹಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಎರಡು ಕುಲಗಳ ಮನೆಯ ಯಜಮಾನರುಗಳು ಬಂದು ಹೋಗಿ ಹೆಣ್ಣುಗಂಡು ಒಪ್ಪಿಗೆಯಾದ ನಂತರ

ಕುಲಗುರುವಿನ ಅಪ್ಪಣೆಯ ಮೇರೆಗೆ ಲಗ್ನದ ದಿನಾಂಕ ಗೊತ್ತುಮಾಡುವರು. ಲಗ್ನಕಟ್ಟಿಸುವ ಕ್ರಿಯಾವಿಧಿ ಮುಗಿದ ನಂತರ ವೀಳ್ಯ, ಅರಿಸಿನ ಕುಂಕುಮ ಹಂಚುವುದು ವಾಡಿಕೆ.

ಇವರ ವಿವಾಹ ವಿಧಿಗಳು ಪ್ರಥಮವಾಗಿ ದೇವತಾಕಾರ್ಯದೊಂದಿಗೆ ಆರಂಭವಾಗುತ್ತವೆ. ಮೊದಲ ವಿಧಿಯಾಗಿ ಗಂಗಾಪೂಜೆ, ಕಳಸ ಪ್ರತಿಷ್ಠಾಪನೆ ನಾಗಪೂಜೆಯಾದ ನಂತರ ಮೊದಲ ದಿನ ಅಥವಾ ಮದ್ದಿನ ಶಾಸ್ತ್ರ ಮುಕ್ತಾಯವಾಗುತ್ತದೆ. ಮರುದಿನ ಧಾರೆಯ ಕಾರ್ಯ ಆರಂಭವಾಗುತ್ತದೆ. ಇವರಲ್ಲಿ ಸಾಮಾನ್ಯವಾಗಿ ವಧುವಿನ ಮನೆಯಲ್ಲಿ ಧಾರೆ ಎರೆದುಕೊಡುವ ಸಂಪ್ರದಾಯವಿದೆ. ನಾಲ್ಕು ದಿನದವರೆಂಬ ಬೆಡಗಿನವರು ದಾಸಯ್ಯನ ಪೂಜೆ ನೆರವೇರಿಸುತ್ತಾರೆ. ಇದಕ್ಕೆ 'ಹರಿಸೇವೆ' ಎನ್ನುತ್ತಾರೆ. ವಧೂವರರು ಪರಂಪರಾಗತ ವಸ್ತ್ರಧರಿಸಿ ಮಾಂಗಲ್ಯಧಾರಣೆ ಕಾರ್ಯಕ್ಕೆ ಅಣಿಯಾಗುತ್ತಾರೆ. ವರನನ್ನೂ ದೇವಸ್ಥಾನದಿಂದ ಕರೆತಂದು ವಿವಾಹ ಮಂಟಪಕ್ಕೆ ವಾದ್ಯ ಮೇಳಗಳೊಂದಿಗೆ ಅದ್ದೂರಿಯಾಗಿ ಕರೆತರುತ್ತಾರೆ. ಪೂಜೆ ಶಾಂತಿ ಮಾಡಿದ ನಂತರ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ಮೂರು ದಿನದವರು ಬೆಡಗಿನವರಲ್ಲಿ ನಾಗೋಲೆ ಆಚರಣೆಯಿದೆ. ನಾಲ್ಕು ದಿನದವರು ಹೊಂಗೆಸ್ವಾಮಿ ಪೂಜೆ ಮಾಡುತ್ತಾರೆ. ಇವು ಇವರ ಕುಲದೇವತಾರಾಧನಾ ಪೂಜೆಯಾಗಿರುತ್ತವೆ. ವಿವಾಹದ ನಂತರ ವಧುವನ್ನು ವರನ ಮನೆಯವರು ಮನೆ ತುಂಬಿಸಿಕೊಂಡು ಬೀಗರೂಟ ಹಾಕಿಸುತ್ತಾರೆ. ಶುಭದಿನವನ್ನು ನಿಗಧಿಗೊಳಿಸಿದ ನಂತರ ಶೋಭನ ಕಾರ್ಯ ನೆರವೇರಿಸಲಾಗುತ್ತದೆ.

ನೊಣಬರ ಮತ್ತೊಂದು ಆಚರಣೆ ಸೀಮಂತ. ವಿವಾಹಿತ ಮಹಿಳೆಯು ಮೊದಲು ಗರ್ಭವತಿಯಾದಾಗ ಐದು, ಏಳು, ಒಂಭತ್ತನೇ ತಿಂಗಳಲ್ಲಿ ಆಕೆಗೆ ಇಷ್ಟವಾಗುವ ಅಡುಗೆ ಮಾಡಿ ಬಡಿಸುವರು. ಇದನ್ನು 'ಬಯಕೆ ತೀರಿಸುವ ಶಾಸ್ತ್ರ' ಎನ್ನಲಾಗುತ್ತದೆ. ಅನಂತರ ಹಿರಿಯರ ಆಶೀರ್ವಾದ ಪಡೆದು ಚೊಚ್ಚಲು ಹೆರಿಗೆಗೆ ತವರು ಮನೆಗೆ ಕರೆತರುತ್ತಾರೆ. ಇವೆಲ್ಲವೂ ಕುರುಬರ ಆಚರಣೆ ಸಂಪ್ರದಾಯಗಳನ್ನೇ ಹೋಲುತ್ತವೆ.

ಇವರಲ್ಲಿ ವ್ಯಕ್ತಿಯು ಸಾವನ್ನಪ್ಪಿದ ಸಂದರ್ಭವನ್ನು ದುಃಖವೆಂದು ಪರಿಗಣಿಸದೆ ಕೈಲಾಸವಾಸಿಯಾದರೆಂದು ನಂಬಿಕೆಯಿಟ್ಟುಕೊಂಡಿದ್ದಾರೆ. ಶವವನ್ನು ಹೂಳುವುದು ಸಾಮಾನ್ಯ ಪದ್ಧತಿಯಾಗಿದೆ. ಒಂಭತ್ತು, ಹನ್ನೊಂದು, ಹದಿನಾಲ್ಕನೇ ದಿನ ಶಿವಗಣಾರಾಧನೆ ಮಾಡಿ ಊಟೋಪಚಾರ ಮಾಡುವುದು ರೂಢಿಯಲ್ಲಿದೆ. ಒಟ್ಟಾರೆಯಾಗಿ ನೊಣಬರ ಆಚರಣೆಗಳು ಕುರುಬರನ್ನು ಹೋಲುವುದಲ್ಲದೆ ವೀರಶೈವೀಕರಣದ ನಂತರ ಲಿಂಗಾಯತರ ಆಚರಣೆ ಸಂಪ್ರದಾಯದಂತೆ ಕಂಡು ಬರುತ್ತಿವೆ.

ಸಾದ ಕುರುಬರು

ಸಾದ ಕುರುಬರು ಸಾದರು, ಸಾದರುಗೌಡ, ಸಾದು ಮತಸ್ಥರಾಗಿ ಇಂದು ಪರಿವರ್ತನೆಯಾಗಿದ್ದಾರೆ. ಕೆಲವರು ಮತಾಂತರ ಹೊಂದದೆ ಮೂಲದಲ್ಲಿಯೇ ಉಳಿದವರಿದ್ದಾರೆ. ಕೆಲವರು ಬಸವಣ್ಣನವರ ತತ್ವಗಳನ್ನು ಒಪ್ಪಿಕೊಂಡು ಸಾದಲಿಂಗಾಯತರಾಗಿದ್ದಾರೆ. ಲಿಂಗಾಯತರಲ್ಲದ ಸಾದಕುರುಬರೂ ಇಂದಿಗೂ ಇದ್ದಾರೆ.

ಜೈನ ಸಾದರು ಎಂಬ ಮತ್ತೊಂದು ಪಂಗಡವಿದೆ. ನೊಣಬರಿಗೂ, ಸಾದಲಿಂಗಾಯತರಿಗೂ, ಹಂಡೇ ವಜೀರ (ಕುರುಬ)ರಿಗೂ ಸಾಮ್ಯವಿದೆ. ಆದರೆ ಈ ಮೂವರೂ ಮೂಲತಃ ಕುರುಬರಾಗಿದ್ದು ನಂತರ ಲಿಂಗಾಯತರಾದುದನ್ನು ವಿದ್ವಾಂಸರೆಲ್ಲರೂ ಒಪ್ಪಿಕೊಂಡಿದ್ದಾರೆ.

ಸಾದ ಕುರುಬರು ಎಲ್ಲಾ ಸಾಮಾಜೀಕರಣ ಕ್ರಿಯೆಗಳಲ್ಲೂ ಕಟ್ಟುನಿಟ್ಟಾದ ಆಚಾರವುಳ್ಳವರು. ತಂದೆತಾಯಿಗಳು ನೋಡಿ ಬಂದ ಗಂಡು ಹೆಣ್ಣನ್ನು ವಿವಾಹವಾಗುವ ವಾಡಿಕೆ ಇಂದಿಗೂ ಇದೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕಿನ ಕೇದಿಗೆಹಳ್ಳಿ ಪಾಳ್ಯದಲ್ಲಿ ರೇವಣಪ್ಪನವರನ್ನು ಭೇಟಿ ಮಾಡಿದಾಗ ಈ ವಿಷಯ ತಿಳಿಸಿರುತ್ತಾರೆ. ಮದುವೆಯಲ್ಲಿ ಪ್ರಥಮವಾಗಿ ಹಸೆ ಕಂಬ ತರುವುದು. ಮೂರು ಕಂಬಗಳನ್ನಿಟ್ಟಿರುವ ಅರಳಿಮರದ ಬಳಿಗೆ ಐದು ತಟ್ಟೆಗಳ ಸಮೇತ ಹೋಗುತ್ತಾರೆ. ಕಳಶವಿಡಿದ ಐದು ಮುತ್ತೈದೆಯರೊಂದಿಗೆ ಪೂಜಾರಿ ಕಂಬಗಳನ್ನೂ ಪೂಜೆ ಮಾಡುತ್ತಾರೆ. ಹೀಗೆ ಪೂಜೆ ಮಾಡಿದ ಕಂಬಗಳನ್ನು ವಿವಾಹಿತರು ಚಪ್ಪರದಟ್ಟಿಯಲ್ಲಿಡುತ್ತಾರೆ. ಹೆಣ್ಣನ್ನು ಕರೆತರುವುದು, ಯಾವುದಾದರೊಂದು ದೇವಸ್ಥಾನದಲ್ಲಿ ಹೆಣ್ಣನ್ನು ಕುಳ್ಳಿರಿಸಿರುತ್ತಾರೆ. ನಂತರ ಬಳೆಶಾಸ್ತ್ರ, ಗಂಡು ಹೆಣ್ಣಿಗೆ ಎರಡು, ಮೂರು, ಇಲ್ಲವೆ ಮೂರು ಎರಡರಂತೆ ಶಾಸ್ತ್ರಗಳನ್ನು ನೆರವೇರಿಸುವರು. ಇವರಲ್ಲಿಯೂ ಕಂಕಣ ಕಟ್ಟುವ ಪದ್ಧತಿಯಿದೆ. ಪೂಜಾರಿಯು ಇವರಿಗೆ ಕಂಕಣ ಕಟ್ಟುತ್ತಾನೆ. ಕಂಕಣವು ಕವಲೊಡೆದಿರುವ ಅರಿಶಿನದ ಕೊನೆ, ಕುರಿಯ ತುಪ್ಪಟದಿಂದ ಕಪ್ಪು ಬಿಳಿನೂಲು ಮಾಡಿದ ಉಣ್ಣೆಕಂಕಣವಾಗಿರುತ್ತದೆ. ಇವಿಷ್ಟು ಚಪ್ಪರದ ದಿನ ನಡೆಯುವ ಆಚರಣೆಗಳಾಗಿರುತ್ತವೆ.

ಮರುದಿನ ಧಾರೆ, ಧಾರೆ ದಿನ ಬೆಳಿಗ್ಗೆ ಗಂಡನ್ನು ದಿಬ್ಬಣಕ್ಕೆ ಬಿಡುತ್ತಾರೆ ಅರ್ಥಾತ್ ಇದಕ್ಕೆ ಕಾಶಿಯಾತ್ರೆ ಎನ್ನುವರು. ಗಂಡನ್ನು ಯಾವುದಾದರೊಂದು ದೇವಸ್ಥಾನಕ್ಕೆ ಕಳುಹಿಸುತ್ತಾರೆ. ಗಂಡನ್ನು ಕರೆತರುವಾಗ ವಧುವಿನ ತಂದೆ ತಾಯಿ ಅಳಿಯನ ಪಾದಪೂಜೆ ಮಾಡಿ ಶಕ್ತ್ಯಾನುಸಾರ ವರೋಪಚಾರ ಮಾಡಿ ಧಾರೆ ಮಂಟಪಕ್ಕೆ ನಿಲ್ಲಿಸುತ್ತಾರೆ. ಹೆಣ್ಣನ್ನು ಅಲಂಕರಿಸಿಕೊಂಡು ಬಂದು ಗಂಡಿನ ಎದುರಿಗೆ ನಿಲ್ಲಿಸಿ ತಲೆಯ ಮೇಲೆ ಎಳ್ಳು ಜೀರಿಗೆ ಹಾಕುತ್ತಾರೆ. ನಂತರ ಹೆಣ್ಣು ಗಂಡಂದಿರ ತಾಯಿ ತಂದೆಯರನ್ನು ಕರೆದು ಹಾಲಿನ ಪಾತ್ರೆ ಮುಟ್ಟಿಸಿ ನಂತರ ಎಲ್ಲರ ಕೈಲೂ ಮುಟ್ಟಿಸಿ ಮುಹೂರ್ತದಲ್ಲಿ ತಾಳಿಕಟ್ಟಿಸುತ್ತಾರೆ. ಧಾರೆ ನಂತರ ಹೆಣ್ಣು ಗಂಡಿನ ಮೂಲಕ ಸೂರ್ಯ ನಮಸ್ಕಾರ ಮಾಡಿಸುತ್ತಾರೆ.

ತಾಳಿ ಕಟ್ಟಿದ ನಂತರ ಗಂಡು ಹೆಣ್ಣಿನ ಮೆರವಣಿಗೆ, ಮದುಮಕ್ಕಳಿಗೆ ಆರತಿ ಮೂಲಕ ದೃಷ್ಟಿ ತೆಗೆಯುವುದು, ಧಾರೆಯಾದ ರಾತ್ರಿ ಗಂಡು-ಹೆಣ್ಣು ಹೂವಿನ ಚೆಂಡಾಡುವುದು, ಗಂಡು ಕಲ್ಲೊಂದಕ್ಕೆ ದಾರಕಟ್ಟಿ ತೊಟ್ಟಿಲಲ್ಲಿ ಇಟ್ಟು ಹೆಣ್ಣಿನ ಕೈಯಲ್ಲಿ ಮಗುವೆಂದು ತೂಗಿಸುವುದು, ಕಂಕಣ ಬಿಚ್ಚುವುದು, ಹೆಣ್ಣು ಗಂಡು ಶುಭಕೋರುವುದು ಶುಭಮಿಲನಕ್ಕೆ ಸಜ್ಜುಗೊಳಿಸುವುದು ಮುಂತಾದ ಕಾರ್ಯಗಳೊಂದಿಗೆ ಸಾದ ಕುರುಬರಲ್ಲಿ ವಿವಾಹ ಮುಕ್ತಾಯವಾಗುತ್ತವೆ. ಇವರ ಮೂಲಕ ಹೋದ ಸಾದ ಲಿಂಗಾಯತರಲ್ಲಿಯೂ

ಇಂತಹುದೇ ಆಚರಣೆಗಳಿವೆ. ಅಲ್ಲದೆ ಹಣೆಯ ಮೇಲೆ ವಿಭೂತಿಯನ್ನು ದೇಹದ ಮೇಲೆ ಇಷ್ಟಲಿಂಗವನ್ನು ಧರಿಸುವರು.

ವಿಧವೆ ವಿಧುರರು ಮತ್ತು ವಿಚ್ಛೇದಿತರು ವಿವಾಹವಾಗಲು ಸಾಧ್ಯವಿದೆ. ಇವರಲ್ಲಿ ಹೆಂಗಸರು, ವ್ಯವಸಾಯ, ಪಶುಸಂಗೋಪನೆ, ಧಾರ್ಮಿಕ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಹೆರಿಗೆಗೆ ಮುಂಚಿನ ಆಚರಣೆಗಳು ಗರ್ಭಿಣಿಯ ಐದನೇ ಅಥವಾ ಏಳನೇ ತಿಂಗಳಲ್ಲಿ ಮಾಡುತ್ತಾರೆ. ನಾಮಕರಣ ಮತ್ತು ಲಿಂಗದೀಕ್ಷೆ ಏಕಕಾಲಕ್ಕೆ ನಡೆಯುತ್ತದೆ. ಋತುಮತಿಯಾದ ಹುಡುಗಿಯರಿಗೆ 'ಹೊಸಿಗೆ' ಎನ್ನುವ ಕಾರ್ಯವನ್ನು ಋತುಮತಿಯಾದ ಒಂಭತ್ತು ದಿನಗಳ ಒಳಗೆ ಮಾಡುತ್ತಾರೆ. ಶವವನ್ನು ಕೂತ ಭಂಗಿಯಲ್ಲಿ ಹೂಳುವ ಪದ್ಧತಿಯಿದೆ. ಸಾವಿನ ಸೂತಕವನ್ನಾಚರಿಸಿ ಹಿರಿಯರ ಪೂಜೆ ಮಾಡುತ್ತಾರೆ.

ಸಾದ ಕುರುಬರೂ ಕೂಡ ಸಾಂಪ್ರದಾಯಿಕವಾಗಿ ವ್ಯವಸಾಯಗಾರರು, ಇತ್ತೀಚೆಗೆ ಪಶುಸಂಗೋಪನೆ, ವ್ಯಾಪಾರವನ್ನೂ ಉಪಜೀವನಕ್ಕಾಗಿ ಆಶ್ರಯಿಸಿದ್ದಾರೆ. ಇವರ ಮನೆದೇವರೂ ಕೂಡ ಸಿದ್ಧರಾಮೇಶ್ವರನೇ ಆಗಿರುವುದು ವಿಶೇಷ. ಹಂಡೆ ಕುರುಬರು, ಕುಡುವೊಕ್ಕಲಿಗರು, ನೊಣಬರು ಹಾಗೂ ಸಾದರು ವೀರಶೈವೀಕರಣಕ್ಕೆ ಒಳಗಾಗಿ ಮೂಲ ಸಂಸ್ಕೃತಿಯ ಆಯಾಮಗಳಿಂದ ತಮ್ಮನ್ನೂ ಶ್ರೇಷ್ಠರೆಂದು ಗುರುತಿಸಿಕೊಳ್ಳಲು ಹವಣಿಸುತ್ತಿರುವುದು ವಿಪರ್ಯಾಸವೆನಿಸುತ್ತದೆ.

ಒಕ್ಕಿ ಕುರುಬರು

ಒಂದೇ ಗುಂಪಿಗೆ ಸೇರಿದ ಸಮುದಾಯವೊಂದು ಬದಲಾದ ಪರಿಸ್ಥಿತಿ ಹಾಗೂ ಅಸ್ತಿತ್ವಕ್ಕಾಗಿ ಭಿನ್ನಗುಂಪುಗಳಾಗಿ ಪ್ರತ್ಯೇಕವಾಗುವ ಸಾಧ್ಯತೆ ಇತ್ತು. ಹಾಗೆಯೇ ಅವರು ಅನುಸರಿಸುವ ಕಸುಬು, ಧರಿಸುವ ಉಡುಗೆ ತೊಡುಗೆ, ಮಾತನಾಡುವ ಭಾಷೆಯನ್ನು ಆಧರಿಸಿ ಅವರನ್ನು ಭಿನ್ನ ಹೆಸರುಗಳಿಂದ ಕರೆಯುವುದು ರೂಢಿಯಲ್ಲಿ ಬಂದಾಗ ಹತ್ತಾರು ವರ್ಷಗಳಲ್ಲಿ ಆ ಗುಂಪುಗಳು ಸಂಪೂರ್ಣ ಬೇರೆಯೇ ಆಗಿ ಗುರ್ತಿಸಿಕೊಂಡಿರುವುದು ಕರ್ನಾಟಕದಲ್ಲಿ ಕಾಣಸಿಗುವ ಹತ್ತು ಹಲವು ಕುರುಬರ ಒಳಪಂಗಡಗಳಲ್ಲಿ ಒಕ್ಕಿ ಕುರುಬರೂ ಒಬ್ಬರು. ಕುರುಬ ಪದವನ್ನು ಹೊರತುಪಡಿಸಿದರೆ ಅದರ ಪೂರ್ವಪದ ಮಾತ್ರ ಬದಲಾಗಿದೆ. ಅವುಗಳೆಲ್ಲವೂ ಆ ಕುರುಬ ಸಮುದಾಯದ ವಿಶೇಷ ಚಹರೆ (ಐಡೆಂಟಿಟಿ)ಯನ್ನು ತಿಳಿಸುತ್ತವೆ. ಸಾವಿರಾರು ವರ್ಷಗಳ ಹಾದಿಯಲ್ಲಿ ಅವರು ಒಬ್ಬೊಬ್ಬರು ಭಿನ್ನ ಎಂಬುದು ಗೋಚರಿಸಿದರೂ ಆಶ್ಚರ್ಯಪಡಬೇಕಿಲ್ಲ. ಅದಕ್ಕೆ ಮೊದಲು ಕಾರಣವಾಗುವುದು ಭಾಷೆ. ಭಾಷೆಯೊಂದು ಬದಲಾಯಿತೆಂದರೆ ಸಂಸ್ಕೃತಿಯು ತನ್ನಷ್ಟಕ್ಕೆ ಅಲ್ಪಸ್ವಲ್ಪ ಬದಲಾವಣೆಗೊಡ್ಡಿಕೊಳ್ಳುವುದು ಸಹಜವಾದ ಸಂಗತಿಯಾಗುತ್ತದೆ.

ಒಕ್ಕಿ ಕುರುಬರು ರೂಢಿಸಿಕೊಂಡಿರುವ ಆಚಾರವಿಚಾರ, ಉಡುಗೆ ತೊಡುಗೆ, ಕಸುಬು ಮತ್ತು ಆಹಾರ ಪದ್ಧತಿಗಳು ಮಾತ್ರವಲ್ಲದೆ ಸಂಪ್ರದಾಯ ಆಚರಣೆಗಳೂ ಇತರ ಕುರುಬರಿಗಿಂತ ಭಿನ್ನವಾಗಿರುತ್ತವೆ. ಕಾಡುಕುರುಬರು ಜೇನು ಕುರುಬರಂತೆ ಕಾಡುಗಳಲ್ಲಿಯೇ ವಾಸಮಾಡುತ್ತಿದ್ದರೂ ತಮಿಳು ಪ್ರಭಾವ ಇವರ

ಮೇಲಾಗಿರುವುದನ್ನು ದಟ್ಟವಾಗಿ ಗುರ್ತಿಸಬಹುದು. ಕಾಡುಕುರುಬರಂತೆಯೇ ಜನನ ಸಂಬಂಧಿ ಆಚರಣೆ, ಮರಣ ಸಂಬಂಧಿ ಆಚರಣೆಗಳು ಒಕ್ಕೆ ಕುರುಬರಲ್ಲಿ ಕಂಡು ಬರುತ್ತದೆ. ಉಣ್ಣೆಕಂಕಣ ಕುರುಬರ ಒಡೆಯರ ಹಾಗೆ 'ಪಟಗಾರರು' ಎಂಬ ಪುರೋಹಿತ ವರ್ಗ ಇವರೆಲ್ಲ ಸಂಪ್ರದಾಯ ಆಚರಣೆಗಳನ್ನೂ ನಡೆಸಿಕೊಡುತ್ತಾರೆ. ಇವರು ತಮ್ಮ ಮನೆದೇವರುಗಳಾಗಿ ಆದಿ ತಗರ ಪಡಿ ದೊಡ್ಡಯ್ಯಸ್ವಾಮಿ, ಮೂನಾಡಯ್ಯ (ಕೇರಳ) ಜೋಗದೇವರು (ಏಳುಮಂದ್ರಾಯ) ರಾವಳೇಶ್ವರ, ಪುತ್ತೂರಯ್ಯ, ತೋಟದಯ್ಯ, ಒಂಟಿದೇವರು, ಪ್ಯಾಟಿ ಒಂಟಿದೇವರು ಪ್ರಮುಖವಾದವು. ಹಬ್ಬ ಹರಿದಿನಗಳಲ್ಲಿ ಇವುಗಳ ಉತ್ಸವ, ಜಾತ್ರೆಗಳು ನಡೆಯುತ್ತವೆ.

ಮದುವೆಯು ಒಕ್ಕೆಕುರುಬರಲ್ಲಿ ಬಹು ಮುಖ್ಯವಾದ ಸಂಪ್ರದಾಯವಾಗಿದೆ. ಎಲ್ಲಾ ಕುರುಬರ ಶಾಸ್ತ್ರಸಂಪ್ರದಾಯಗಳಂತಿದ್ದರೂ ಮದುವೆಯು ಮಾತ್ರ ಗಂಡಿನ ಮನೆಯಲ್ಲಿಯೇ ನಡೆಯುತ್ತದೆ. ಹಿಂದೆ ತೆರ ಕೊಡುವ (ವಧುದಕ್ಷಿಣೆ) ಪದ್ಧತಿಯಿದ್ದು ಇದು ಕಡಿಮೆಯಾಗಿದೆಯಾದರೂ ಇಂದಿಗೂ ಈ ಪದ್ಧತಿ ಜೀವಂತವಾಗಿದೆ. ಇವರ ತಾಳಿಯನ್ನು ಗಮನಿಸಿದರೆ ನಮ್ಮಲ್ಲಿರುವ ಬಂಗಾರದ ಬಿಲ್ಲೆ ಇರುವುದಿಲ್ಲ. ಇವರ ತಾಳಿ ಅರಿಶಿನ ದಾರ ಮತ್ತು ಅರಿಶಿನ ಕೊನೆ ಇವೆರಡು ಮಾತ್ರವಾಗಿರುತ್ತದೆ. ಇದಕ್ಕೆ ಕಾರಣ ಕೇಳಿದಾಗ ತಮಿಳು ಪ್ರಭಾವ ನಮ್ಮ ಮೇಲಾಗಿದೆಯೆಂದು ಹೂಗ್ಯಂನ ಪುಟ್ಟೇಗೌಡರು ತಿಳಿಸಿರುತ್ತಾರೆ.

ಒಟ್ಟಾರೆಯಾಗಿ ಒಕ್ಕೆ ಕುರುಬರಲ್ಲಿಯೂ ಆಚಾರ-ವಿಚಾರ, ಉಡುಗೆ-ತೊಡುಗೆ ಸಂಪ್ರದಾಯ ಆಚರಣೆಗಳಲ್ಲಿ, ಆಹಾರ ಪದ್ಧತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಅದು ಆಯಾಯ ಸಮುದಾಯಗಳಿಗೆ 'ಅನನ್ಯ' ಎಂದು ಗುರ್ತಿಸಲಾಗುವುದು. ಪ್ರಕೃತಿಯನ್ನು ಆರಾಧಿಸುವ ಅರಣ್ಯವಾಸಿ ಜನಸಮುದಾಯವಾದ ಒಕ್ಕೆ ಕುರುಬರೂ ಕೂಡ ಸಮಾಜದ ಮುಖ್ಯವಾಹಿನಿಗೆ ಕರೆತರುವ ಮತ್ತು ಕುರುಬರು ಈ ಸಮುದಾಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಆತ್ಮೀಯತೆಯಿಂದ ಕಾಣುವ ಅಗತ್ಯವಿದೆ. ಅತ್ಯಂತ ಕಷ್ಟಕರವಾದ ಜೀವನವನ್ನು ನಡೆಸುತ್ತಿರುವ ಇವರು ಕರ್ನಾಟಕ ಗಡಿಭಾಗದಲ್ಲಿ ವಾಸಿಸುತ್ತಿದ್ದು ತಮಿಳುನಾಡು ಸರ್ಕಾರದಿಂದಾಗಲೀ, ಕರ್ನಾಟಕ ಸರ್ಕಾರದಿಂದಾಗಲಿ ಸೌಲಭ್ಯಗಳು ಸಿಗದಿರುವುದರಿಂದ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿರುವುದು ಶೋಚನೀಯವೆನಿಸುತ್ತದೆ.

ಆ. ದೈವಗಳು ಮತ್ತು ಸಾಂಸ್ಕೃತಿಕ ವೀರರು

ಯಾವುದೇ ಸಮುದಾಯ ತಮ್ಮ ನಡುವೆ ಆಗಿ ಹೋದ ಸಾಂಸ್ಕೃತಿಕ ದೈವ ಮತ್ತು ವೀರರಿಗೆ ಸಂಬಂಧಿಸಿ ಅವರ ಮೇಲಿನ ದೀರ್ಘಕತೆಗಳನ್ನು ಹೊಂದಿರುತ್ತದೆ. ಶಿಷ್ಟ ಪರಂಪರೆಯಾಗಲಿ, ಪರಿಶಿಷ್ಟ ಪರಂಪರೆಯೆಂಬ ಭೇದಭಾವವಾಗಲಿ ಇರದೆ ಎಲ್ಲರಲ್ಲೂ ನಮಗೆ ಕಂಡುಬರುತ್ತಾರೆ. ಒಂದು ಸಮುದಾಯವು ಆತನ ಹೆಸರನ್ನು ಇಟ್ಟುಕೊಳ್ಳುವುದರ ಮೂಲಕ ಗುಡಿಸ್ಥಾಪನೆ, ಹಾಡು, ಪುರಾಣ ಕತೆಗಳ ಮೂಲಕ ಹಲವು ವೀರರ ನೆನಪನ್ನು ಉಳಿಸಿಕೊಳ್ಳುತ್ತಾರೆ. ಅವರಿಗೆ ತಮ್ಮ ದೈವ ಮತ್ತು ವೀರನ ಪುರಾಣ

ಕಥೆಯೇ ಇತಿಹಾಸವಾಗುತ್ತದೆ. ದಿನನಿತ್ಯ ಜರುಗುವ ಘಟನೆಗಳು ಇತಿಹಾಸವಾಗುವುದಿಲ್ಲ. ಬದಲಾಗಿ ಒಂದೊಂದು ಅಂಶವೂ ದೈವಕ್ಕೆ ಸಂಬಂಧಿಸಿರಲಿ, ವೀರರಿಗೆ ಸಂಬಂಧಿಸಿರಲಿ ಅದೊಂದು ಸತ್ಯ ಘಟನೆಯಾಗಿ ಪರಿವರ್ತಿತವಾಗುತ್ತದೆ. ದೈವಗಳು ಮತ್ತು ವೀರರು ಅವರ ಬದುಕಿನ ನಡುವೆಯೇ ಇರುತ್ತಾರೆ. ಬದುಕಿ ಪೂಜೆಗೊಳ್ಳುತ್ತಾರೆ. ಪ್ರತಿಯೊಂದು ಆಗುಹೋಗುಗಳಿಗೆ ಅವರುಗಳ ಅನುಮತಿ, ಅಪ್ಪಣೆಯಿಲ್ಲದೆ ಮುಂದುವರಿಯಲಾರರು.

ಬೀರಲಿಂಗೇಶ್ವರ

ಕರ್ನಾಟಕದ ಬಹುಪಾಲು ಕುರುಬರಿಗೆ ಆರಾಧ್ಯದೈವವಾಗಿರುವ ಬೀರಪ್ಪ, ಬೀರೇಶ, ಬೀರೇಶ್ವರ, ಬೀರಲಿಂಗ, ಬೀರಲಿಂಗೇಶ್ವರ ಮುಂತಾದ ಹೆಸರುಗಳಿಂದ ಇವನು ತಮ್ಮ ಕುಲದೈವವಾಗಿಯೂ ಪೂಜಿಸಲ್ಪಡುತ್ತಿದ್ದಾನೆ. ಯಾವುದೇ ಸಮುದಾಯ ದೇವರನ್ನು ತಮ್ಮ ಕುಲದೇವರೆಂದು ಒಪ್ಪಿಕೊಂಡಾಗ ಆ ದೇವರನ್ನು ಮತ್ತೆ ಮತ್ತೆ ರೂಪಿಸುವ, ಬೆಳೆಯಿಸುವ ವಿಧಾನವೊಂದು ಕಾಲಾಂತರದಲ್ಲಿ ಗುಪ್ತಗಾಮಿನಿಯಾಗಿ ನಡದೇ ಇರುತ್ತದೆ. ತಮ್ಮ ದೇವರಲ್ಲಿ ಬೆಳೆಸಿಕೊಳ್ಳುವ ಭಕ್ತಿಯು ಅನನ್ಯವಾಗಿಬಿಡುತ್ತದೆ. ಅದರ ಜೊತೆಯಲ್ಲಿಯೇ ಸಮುದಾಯದವರ ವೃತ್ತಿ ಕುಲಾಚರಣೆಗಳು ದೇವರುಗಳೊಂದಿಗೆ ತಳುಕುಹಾಕಿಕೊಳ್ಳುತ್ತವೆ. ಹೀಗೆ ಸಾಂಸ್ಕೃತಿಕ ದೈವ ಮತ್ತು ವೀರರನ್ನು ಬಿಂಬಿಸುವಲ್ಲಿ ಪುರಾಣ, ಐತಿಹ್ಯ, ಪವಾಡ, ಅತಿಮಾನುಷ ಘಟನೆ, ಚರಿತ್ರೆ ಎಲ್ಲವೂ ಸೇರಿಕೊಳ್ಳುತ್ತವೆ. ತಮ್ಮ ಆರಾಧ್ಯ ದೈವಗಳನ್ನು ಕೊಂಡಾಡುವಲ್ಲಿ ಘಟನೆಗಳನ್ನು ಜೋಡಿಸುತ್ತಾ ಕ್ರಮೇಣ ಪ್ರಕ್ಷಿಪ್ತಗಳಾಗಿ ಬಿಡುತ್ತದೆ.

ಕುರುಬ ಸಮುದಾಯಕ್ಕೆ ಬೀರಪ್ಪ ಆರಾಧ್ಯ ದೈವ, ಕುಲದೈವ, ಸಾಂಸ್ಕೃತಿಕ ವೀರ, ಪರ ಶಿವನ ವರಪುತ್ರ ಮಾತ್ರವಲ್ಲದೆ ಭರಮಪ್ಪ ಸೂರಮ್ಮ ದೇವಿಯರ ಪುತ್ರ, ಮಾಯಕ್ಕನ ತಮ್ಮ, ಈತನಿಗೆ ಬೀರೋಬ, ಬೀರೋಬಾ, ಕರಿಸಿದ್ದ ಕರೆಸಿದ್ಧ, ಭೈರವ ಎಂಬ ಭಿನ್ನ ಹೆಸರುಗಳಿವೆ. ವೀರ>ಈರ>ಬೀರ ಎಂಬ ರೂಪಾಂತರ ಹೆಸರುಗಳಿವೆ. ಕರ್ನಾಟಕವಲ್ಲದೆ ಆಂಧ್ರ, ಮಹಾರಾಷ್ಟ್ರ, ಕೇರಳ, ತಮಿಳುನಾಡುಗಳಲ್ಲಿ ಈತನ ಕುರಿತು ಶಿಷ್ಟ ಹಾಗೂ ಮೌಖಿಕ ಪರಂಪರೆಯ ಸಾಹಿತ್ಯವೂ ಸೃಷ್ಟಿಯಾಗಿರುವುದು ಕಂಡುಬರುತ್ತದೆ. 'ಜನಪದ ಹಾಲುಮತ ಮಹಾಕಾವ್ಯ' ಬೀರಪ್ಪನನ್ನು ಕುರಿತ ಅದ್ಭುತ ಕಾವ್ಯ.

ಶಿವಸಿದ್ದ ಬೀರನೆಂಬಭಿದಾನದಿಂ ಸಕಲ
ಭುವನದೊಳ್ಮಹಿಮೆಗಳ ತೋರೆಂದು ಪದ್ಮಂಗೆ
ಶಿವ ಮೊರೆಯಲದಕೊಪ್ಪಿ ಸಾಷ್ಟಾಂಗವೆರಗಿ ನಾಂ ಪೋಗಿ ಭೂತಲದೊಳುದಿಸಿ
ಶಿವಭಕ್ತಿಯಂ ಬೆಳಸಿ ಘನ ಮಹಿಮೆ ತೋರುವೆನು
ಸುವಿಲಾಸದಿಂದೆನಗೋರ್ವ ಸಿಷ್ಯನ ಕೊಟ್ಟು
ಅವನಿಗಿಳಿಸೆಂದು ಪದವಿಡಿದು ಪರಿಪರಿಯಿಂದ ಬೇಡಿಕೊಂಡನು ವಿನಯದಿ

(ಹಾಲ್ಮತೋ, ಸಂಧಿ-೩-೫೪)

ಮರದರಸನು ಭರ್ಮನರಸಿ ಸುರಾಪತಿ
ಗಿರದೆ ಕುಮಾರನಾಗುದಿಸಿ
ಮೆರೆ ಶಿವಸಿದ್ಧ ಬೀರನೆನಿಸಿಕೊಂಡು
ಧರೆಯೊಳಗವನೀಶ ಸಂತಸದಿ

(ಹಾಲುಮತ ಪುರಾಣವು, ಸಂಧಿ-೧೦-೯೩)

ಈ ಮೇಲಿನ ಎರಡು ಪದ್ಯಗಳನ್ನು ಅವಲೋಕಿಸಿದರೆ ಶಿವಪದ್ಮನ ತರುವಾಯದ ಅವತಾರವೇ ಬೀರಪ್ಪನೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಬೀರಪ್ಪನು ಬ್ರಹ್ಮದೇವ (ಭರಮದೇವ ಮತ್ತು ಸರಸ್ವತಿ (ಸುರಾವತಿ)ಯರ ಮಗನೆಂಬುದು ಪುರಾಣಾಧಾರಗಳಿಂದ ಈಗಾಗಲೇ ಸ್ಪಷ್ಟವಾಗಿರುವ ವಿಚಾರ.

ಒಮ್ಮೆ ದೇವಲೋಕದಲ್ಲಿ ದೇವತೆಗಳು ರಾಕ್ಷಸರಿಂದ ಕ್ಷೀರಸಾಗರವನ್ನು ಮಂಥನ ಮಾಡಿಸುವರು. ತ್ರಿಮೂರ್ತಿಗಳು ಲೋಕ ಕಲ್ಯಾಣಕ್ಕಾಗಿ ಹಾಲಿನ ಮಂಥನದಿಂದ ಅಮೃತ ಹರಿದು ಬರಲೆಂದು ಹೋಮದಲ್ಲಿ ಪಾಲ್ಗೊಳ್ಳುತ್ತಾರೆ. ಆಗ ಹೋಮದ ಅಗ್ನಿ ಮತ್ತು ಹಾಲಿನ ಸಂಗಮದಿಂದ ಒಬ್ಬ ಬಾಲಕನ ಜನನವಾಗುತ್ತದೆ. ಅವನು ಹಾಲಿನ ಸಮುದ್ರದಿಂದ ಅಮೃತವನ್ನು ಮೊಗೆದು ಬಡಿಸುತ್ತಾನೆ. ನಂತರ ಹಾಲಿನ ಸಮುದ್ರದ ದಡದಲ್ಲಿ ಕುಳಿತು ಸಕಲ ಜೀವರಾಶಿಗಳಿಗೆ ಅನ್ನವನ್ನು ಬೀರುತ್ತಾನೆ(ಎಸೆ). ಹೀಗೆ ಸಕಲ ಜೀವರಾಶಿಗಳು ಸಂತೃಪ್ತಿಯಿಂದ 'ಬೀರೇಶ'ನೆಂದು ಕರೆಯುವುದರೊಂದಿಗೆ ಬೀರಪ್ಪನ ಕುರಿತ ಐತಿಹ್ಯ ದೊರೆಯುತ್ತದೆ.

ಒಂದು ಸಾರಿ ಬರಮದೇವರ ಹೆಂಡತಿ ಸೂರಮ್ಮ ದೇವಿಗೆ ಅವಳ ಅಣ್ಣನಾದ ಕಾಳಿನಾರಾಯಣನು ಬಂಜೆ ಎಂದು ಹೀಯಾಳಿಸಿ ಅವಮಾನ ಮಾಡುತ್ತಾನೆ. ಇದರಿಂದ ದಂಪತಿಗಳಿಬ್ಬರು ಮನನೊಂದು ನೇರವಾಗಿ ಶಿವನಲ್ಲಿಗೆ ಹೋಗಿ ಸೆರಗೊಡ್ಡಿ ಪುತ್ರ ಭಾಗ್ಯವನ್ನು ಬೇಡುತ್ತಾಳೆ. ಆಗ ಶಿವನು ನಿಮಗೆ ಮಕ್ಕಳ ಫಲವೇ ಇಲ್ಲವೆನ್ನುತ್ತಾನೆ. ಕೊನೆಗೆ ಸೂರಮ್ಮ ದೇವಿಯ ಹಟಕ್ಕೆ ಮಣಿದು ತನ್ನ ಬೆವರನ್ನು ಒಂದು ಬಟ್ಟಲಲ್ಲಿ ತುಂಬಿ 'ದಂಪತಿಗಳು ಇದನ್ನು ಸೇವಿಸಿದಲ್ಲಿ ಪುತ್ರ ಪ್ರಾಪ್ತಿಯಾಗುತ್ತದೆ' ಎಂದು ಹೇಳಿ ಹುಟ್ಟಿದ ಹದಿಮೂರನೇ ದಿನ ಮಗುವನ್ನು ಕಾಡಿಗೆ ಸಾಗಿಸಬೇಕೆಂದೂ ಹೇಳುತ್ತಾನೆ. ಆಗ ದಂಪತಿಗಳು 'ಬಂಜೆ' ಎಂಬ ಹಣೆಪಟ್ಟಿ ಹರಿದರೆ ಸಾಕು ಎಂದು ತೀರ್ಮಾನಿಸಿ ಅದರಂತೆ ನಡೆದು ಕೊಂಡದ್ದರಿಂದಾಗಿ ಸೂರಮ್ಮ ಗರ್ಭವತಿಯಾಗುತ್ತಾಳೆ.

ಇತ್ತಕಡೆ ಕಾಳಿನಾರಾಯಣನಿಗೆ ಜ್ಯೋತಿಷಿಯೋರ್ವನು ಆತನ ತಂಗಿಯ ಸಂತಾನದಿಂದ ಸಾವು ಸಂಭವಿಸುವುದೆಂದು ತಿಳಿದು ಕಂಗೆಡುತ್ತಾನೆ. ಜೊತೆಗೆ ಸೂರಮ್ಮ ಗರ್ಭಧರಿಸಿದ ಐದನೇ ತಿಂಗಳಿಗೆ ಕಾಳಿನಾರಾಯಣನಿಗೆ ತನ್ನ ತಂಗಿಯು ಗರ್ಭಧರಿಸಿರುವ ವಿಷಯವು ಬಳೆಗಾರನ ಮೂಲಕ ಗೊತ್ತಾಗುತ್ತದೆ. ಇದರಿಂದ ಗಾಬರಿಗೊಂಡ ಕಾಳಿನಾರಾಯಣ ತನಗೆ ಸಾವು ಖಚಿತ ಎಂದು ತಿಳಿದು ತಂಗಿಯ ಗರ್ಭದಲ್ಲಿದ್ದ ಮಗುವನ್ನು ಕೊಲ್ಲಲು ಯೋಚಿಸುತ್ತಾನೆ. ವಿಷದ ಬುತ್ತಿ, ವಿಷದ ಸೀರೆ ಮತ್ತು ಕುಪ್ಪಸ ತೆಗೆದುಕೊಂಡು ತಾನೇ ತಂಗಿಯ ಮನೆಗೆ ಪ್ರಯಾಣ ಬೆಳೆಸುತ್ತಾನೆ.

ಸೂರಮ್ಮ ದೇವಿಗೆ ಇದೇ ಸಮಯಕ್ಕೆ ಸರಿಯಾಗಿ ಕನಸೊಂದು ಬೀಳುತ್ತದೆ. ಅವಳ ಗರ್ಭದಲ್ಲಿದ್ದ ಕೂಸು ಮಾತನಾಡುತ್ತದೆ. ನಿಮ್ಮಣ್ಣ ತರುತ್ತಿರುವ ಬುತ್ತಿಯಲ್ಲಿ ವಿಷ ಬೆರೆತಿದೆ. ಊಟ ಮಾಡುವ ಮುನ್ನ ಒಂದು ತುತ್ತು ನಾಯಿಗೆ ಹಾಕು, ಸೀರೆ ಕುಪ್ಪಸಗಳನ್ನು ಮರದ ಕುದುರೆಗೆ ಹಾಕು, ಅರಿಶಿನ ಕುಂಕುಮ ಎಲ್ಲವೂ ವಿಷ ಬೆರೆತಿದೆ ಎಂದು ಹೇಳುತ್ತದೆ. ಅದರಂತೆ ಮಾಡಿದಾಗ ಮರದ ಕುದುರೆ ಕರ್ಪೂರ ಉರಿದಂತೆ ಉರಿದು ಬೂದಿಯಾಗುತ್ತದೆ. ಇಷ್ಟರಲ್ಲಿ ಸೂರಮ್ಮನಿಗೆ ಎಚ್ಚರವಾಗುತ್ತದೆ. ಮರುದಿನವೆ ಕಾಳಿನಾರಾಯಣನು ಬಂದು ವಿಷದ ಬುತ್ತಿಯನ್ನು ನೀಡುತ್ತಾನೆ. ಸೂರಮ್ಮ ದೇವಿ ಅವನಿಗೆ ಗೊತ್ತಾಗದ ಹಾಗೆ ನಾಯಿ, ಕಾಗೆಗಳಿಗೆ ಹಾಕಲಾಗಿ ಅವು ಸಾಯುತ್ತವೆ. ತಾನು ತಂದ ವಿಷದ ಬುತ್ತಿ ನಿಷ್ಫಲವಾಯಿತೆಂದು ಅರಿತ ಆತನು ಅವಸರವಾಗಿ ಹೊರಟು ಹೆರಿಗೆ ಮಾಡಿಸಲು ಸೂಲಗಿತ್ತಿಯನ್ನು ತನ್ನೂರಿಂದಲೇ ಕಳುಹಿಸುವೆನೆಂದು ಹೇಳಿ ಹಿಂದಿರುಗುತ್ತಾನೆ.

ಅದರಂತೆ ಸೂರಮ್ಮನಿಗೆ ಹೆರಿಗೆ ನೋವು ಕಾಣಿಸಿಕೊಳ್ಳಲು ಕಾಳಿನಾರಾಯಣನು ಕಳುಹಿಸಿದ ಸೂಲಗಿತ್ತಿಯರು ಬರುತ್ತಾರೆ. ಎಲ್ಲ ಹೆಂಗಸರನ್ನು ಹೊರಗೆ ಹಾಕಿ ಚೊಚ್ಚಲ ಹೆರಿಗೆಗೆ ಬಾಣಂತಿಯ ಕಣ್ಣು ಕಟ್ಟುತ್ತಾರೆ. ಮಗುವನ್ನು ಕೊಲ್ಲಲು ಉಕ್ಕಿನ ಉಗುರನ್ನು ಹಾಕಿಕೊಂಡು ಸಿದ್ಧವಾಗಿ ನಿಲ್ಲುತ್ತಾರೆ. ಇದನ್ನರಿತ ಬೀರಪ್ಪನು ಗರ್ಭವನ್ನು ಸೀಳಿ ನಿಲ್ಲುತ್ತಾನೆ. ಬೀರಪ್ಪನ ಕೋಲ್ಮಿಂಚಿನ ಹೊಳಪಿಗೆ ಸೂಲಗಿತ್ತಿಯರ ಕಣ್ಣು ಕುರುಡಾಗುತ್ತವೆ. ಆಗ ಬಾಲ ಬೀರಪ್ಪನು ಅವರಿಗೆ ಒದ್ದಾಗ ಬೀರಪ್ಪನ ಸೊಲಾಗಿ ಮಾರ್ಪಡುವರು. ಹುಟ್ಟಿನಿಂದಲೇ ಕೋಲನು ಹಿಡಿದು ನಿಂತ ಬಾಲನು ದುಷ್ಟರಿಗೆ ಕೋಲಿನಿಂದ ಬೀರುವುದನ್ನು ಕಂಡ ಜನ 'ಬೀರಪ್ಪ'ನೆಂದು ಕರೆಯುವರು.

ಇವೆಲ್ಲವುಗಳಿಂದ ತಿಳಿಯುವುದೇನೆಂದರೆ ಬೀರ>ಬೀರೇಶ್ವರ>ಬೀರಲಿಂಗ>ಬೀರಪ್ಪ ಕುರುಬರ ಪುರುಷ ದೈವವಾಗಿದ್ದಾನೆ. ಕುರುಬರ ವೃತ್ತಿ ಬದುಕಿಗೆ ಬೆಂಗಾವಲಾಗಿ ನಿಂತು ಕಾರಣಿಕ ಪುರುಷನಂತೆ ಕಂಡುಬರುತ್ತಾನೆ. ಸೃಷ್ಟಿ ಮತ್ತು ಪೋಷಣೆಯ ಸಂಕೇತವಾಗುತ್ತಾನೆ. ಬೀರೇಶ ನಾಯಕ ಗುಣದ ಧೀರೋದಾತ್ತ ವ್ಯಕ್ತಿ. ಕುರುಬರಿಗೆ ಪೂಜ್ಯನೀಯವಾಗಿರುವುದರಿಂದ ಅನೇಕ ಪರಾಕ್ರಮ ಪ್ರಸಂಗಗಳು ಪುರಾಣಗಳಲ್ಲಿ ವಿಜೃಂಭಿಸಿವೆ. ಮಾಯಕ್ಕನಿಗೆ ತಮ್ಮನಾಗಿಯೂ ತನ್ನ ವ್ಯಕ್ತಿತ್ವ ಪ್ರಕಟಮಾಡಿದಂತೆ, ಶಿಷ್ಯ ಮಾಳಿಂಗರಾಯನ ವ್ಯಕ್ತಿತ್ವವನ್ನು ಬೆಳೆಸುವಲ್ಲಿಯೂ ಬೀರಪ್ಪ ಶ್ರೇಷ್ಠ ಗುರುವಾಗಿ ತೋರುತ್ತಾನೆ. ಪವಾಡ ವ್ಯಕ್ತಿಯಾಗಿರುವಂತೆಯೇ ದೈವೀಗುಣದ ಜೊತೆಗೆ ಮಾನವೀಯ ಗುಣಗಳೂ ಬೀರಪ್ಪನಲ್ಲಿ ಅನಾವರಣಗೊಂಡಿವೆ.

ಮೈಲಾರಲಿಂಗೇಶ್ವರ

ಮೈಲಾರಲಿಂಗ, ಮೈಲಾರದೇವರು, ಮಲ್ಲಾರಿ, ಮಾರ್ತಾಂಡಭೈರವ, ಖಂಡೋಬಾ ಇತ್ಯಾದಿ ಹೆಸರುಗಳಿಂದ ಕುರುಬರಿಗೆ ಪ್ರಖ್ಯಾತನಾದ ದೇವತೆ. ಕರ್ನಾಟಕದ ಜನತೆಗೆಲ್ಲ ಸುಪರಿಚಿತವಾದ ದೇವತೆ. ಭಾವುಕರಿಗೆ ದುಷ್ಟ ನಿಗ್ರಹಕ್ಕಾಗಿ ಎತ್ತಿದ ಶಿವನ ಅವತಾರ. ಶೌರ್ಯದ ಸಂಕೇತ, ಸಮನ್ವಯತೆಯ ಪ್ರತೀಕ,

ಸಾಮಾನ್ಯವಾಗಿ ಒಂದೊಂದು ದೇವತೆ ಒಂದೊಂದು ಮತಪಂಥದವರ ವಿಶೇಷ ಆದರಕ್ಕೆ ಪೂಜೆಗೆ ಪಾತ್ರವಾಗಿ ಅವರಿಂದಲೇ ಪೂಜೆಗೊಂಡರೆ ಮೈಲಾರದೇವರು ಇದಕ್ಕೆ ಹೊರತಾದ ದೇವರು. ಜಾತಿ, ಕುಲ, ಮತ ಪಂಥಗಳನ್ನು ಮೀರಿ ನಿಂತು ಭಿನ್ನ ಕುಲದವರ ಭಿನ್ನ ಮತಪಂಥಗಳ ಅನುಯಾಯಿಗಳಿಗೂ ಇವನು ಆರಾಧ್ಯದೇವತೆ. ಕುಲ ದೇವರೂ ಹೌದು. ಮೈಲಾರನಂತೆ ಅವನ ಪತ್ನಿ ಮಾಳಚಿಯೂ ಪ್ರಸಿದ್ಧಳಾಗಿದ್ದಾಳೆ. ಮೈಲಾರನ ಮತ್ತೊಂದು ಹೆಸರು ಮಲ್ಲಾರಿ. ಇವನಿಗೆ ಇಬ್ಬರು ಪತ್ನಿಯರು. ಗಂಗಮಾಳಿ(ಮಾಳವ್ವ) ಮೊದಲನೆಯದವಳಾದರೆ, ತುಪ್ಪದ ಮಾಳವ್ವ ಎರಡನೆಯವಳು. ಮಲ್ಲಾಸುರನೆಂಬ ದೈತ್ಯ ಸಂಹಾರಕ್ಕಾಗಿ ಹುಟ್ಟಿದ ವೈರಿಯೂ ಸಂಹಾರಕನೂ ಆದವನೇ ಮಲ್ಲಾರಿ>ಮೈಲಾರಿ>ಮೈಲಾರದೇವರು ಎನಿಸಿಕೊಳ್ಳುವನು.

ಮಣಿಚೂಲ ಎಂಬುದೊಂದು ಪರ್ವತ. ಅಲ್ಲಿ ಧರ್ಮಸುತರಾದ ಏಳುಜನ ಋಷಿಗಳು ತಪಸ್ಸನ್ನು ಆಚರಿಸುತ್ತಿದ್ದರು. ಈ ಮನೋಹರ ಪರ್ವತ ಮಲ್ಲನೆಂಬ ದೈತ್ಯನಿಂದ ಕ್ರೌರ್ಯಕ್ಕೆ ಬಲಿಯಾಯಿತು. ಈ ಅಸುರನ ದಾಳಿಯಿಂದ ಸುಂದರವೆನಿಸಿದ ತಪೋವನವೂ ನಾಶವಾಯಿತು. ದಿಕ್ಕುಗಾಣದ ಋಷಿಗಳು ಇನ್ನೊಂದೆಡೆಗೆ ವಲಸೆಹೋದರು. ತಮ್ಮ ರಕ್ಷಣೆಗೋಸುಗ ಅಭಯವನ್ನು ಬೇಡಲು ಇಂದ್ರನೆಡೆಗೆ ತೆರಳಿ ಮಲ್ಲಾಸುರನನ್ನು ಸಂಹರಿಸಬೇಕೆಂದು ಪ್ರಾರ್ಥಿಸಿದರು. ಬ್ರಹ್ಮನಿಂದ ಅಜೇಯತ್ವ ವರವನ್ನು ಪಡೆದ ಈ ದೈತನನ್ನು, ಅವನ ತಮ್ಮನಾದ ಮಣಿಯನ್ನು ಕೊಲ್ಲುವುದು ತನ್ನಿಂದ ಅಸಾಧ್ಯವೆಂದು ಇಂದ್ರನು ಹೇಳಿದನು ಮತ್ತು ವಿಷ್ಣುವನ್ನು ಭೇಟಿಮಾಡಿ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಸಲಹೆಯಿತ್ತನು. ವಿಷ್ಣುವಿನ ಬಳಿಯಲ್ಲೂ ಮೊದಲ ಉತ್ತರವೇ ದೊರೆತು ಕೈಲಾಸಕ್ಕೆ ಶಿವನ ಬಳಿಗೆ ಬರುತ್ತಾರೆ. ಆಗ ಶಿವನು ಇವರ ಪ್ರಾರ್ಥನೆಯನ್ನೂ ಮನ್ನಿಸಿ ಅತ್ಯುಗ್ರನಾದನು. ಇದರ ಪರಿಣಾಮವಾಗಿ ಅತ್ಯುಗ್ರದೇವತೆ ಜನಿಸಿದಳು. ಅದೇ ಘೃತಮಾರಿ (ತುಪ್ಪದ ಮಾಳವ್ವ). ಆಗ ಶಿವನು ಮಾರ್ತಾಂಡ ಭೈರವನ ರೂಪ ಧರಿಸಿದನು.

ಕೊರಳಲ್ಲಿ ಸರ್ಪಗಳು, ಕಿವಿಯಲ್ಲಿ ಕುಂಡಲಗಳು, ಕೈಗಳಲ್ಲಿ ನಾನಾ ರೀತಿಯ ಆಯುಧಗಳು ಇಂಥ ಭಯಂಕರ ರೂಪತಾಳಿ ಶಿವನು ಮಣಿಮಲ್ಲಾಸುರ ಯುದ್ಧಕ್ಕೆ ಸಿದ್ಧನಾದನು. ಸ್ಕಂದನು ಅವನ ಏಳುಕೋಟಿ ಪರಿವಾರದ ನಾಯಕನಾದನು. ಮಣಿಮಲ್ಲರೊಡನೆ ಶಿವ ಕಾದಿದ ಘೋರ ಯುದ್ಧದಲ್ಲಿ ಅನೇಕ ರಾಕ್ಷಸ ಸೇನಾನಿಗಳೊಡನೆ ಮಲ್ಲನ ತಮ್ಮನಾದ ಮಣಿಯು ಮೃತನಾದನು. ದೈತ್ಯನಾದ ಅವನು ಸದಾಕಾಲ ಶಿವನ ಸಾನಿಧ್ಯದಲ್ಲಿರುವಂತೆ ಪರಿಪರಿಯಾಗಿ ಬೇಡಿಕೊಂಡನು. ಶಿವನು ಅವನ ಭಕ್ತಿಗೆ ಮೆಚ್ಚಿ ಅವನ ಅಣ್ಣನಾದ ಮಲ್ಲನ ಮೇಲೆಯೂ ಕನಿಕರದೋರಿ ವಿಷ್ಣುವನ್ನು ಸಂಧಾನಕ್ಕೆ ಕಳುಹಿಸಿದನು.

ಆದರೆ ತನ್ನ ಶಕ್ತಿಯಿಂದ ಸೊಕ್ಕಿದ ಮಲ್ಲನು ಮಾರ್ತಾಂಡ ಭೈರವನೊಡನೆ ಸೆಣಸಲೆಳಸಿದನು. ಈ ಘನಘೋರ ಯುದ್ಧದಲ್ಲಿ ಭೈರವನ ಹೊಡೆತಕ್ಕೆ ಮಲ್ಲನು ತುತ್ತಾಗ ಬೇಕಾಯಿತು. ಗಾಯಗೊಂಡ

ಮಲ್ಲಾಸುರನ ತಲೆಯ ಮೇಲೆ ತನ್ನ ಕಾಲನ್ನಿಡಲು ಅವನು ಭೈರವನನ್ನು ಸ್ತುತಿಸಿ ಅವನ ಹೆಸರಿನಲ್ಲಿ ತನ್ನ ಹೆಸರೂ ಶಾಶ್ವತವಾಗಿ ಉಳಿಯಲೆಂದು ಪ್ರಾರ್ಥಿಸಿದನು. ಇದರಿಂದ ಭೈರವನಿಗೆ ಮಲ್ಲನ ಅರಿ ಎಂದು ಮಲ್ಲಾರಿ ಎಂಬ ಹೆಸರು ಬಂದುದಕ್ಕೆ ಪೌರಾಣಿಕ ನೆಲೆಯಿದೆ. ಮೈಲಾರ, ದೇವರಗುಡ್ಡಗಳು ಇವನ ಸಾಂಸ್ಕೃತಿಕ ಕಾರ್ಯಕ್ಷೇತ್ರಗಳು. ಇವು ಮಾತ್ರವಲ್ಲದೆ ಎಲ್ಲೆಡೆಯೂ ಮೈಲಾರಲಿಂಗೇಶ್ವರನ ಪೂಜೆ ಅವ್ಯಾಹತವಾಗಿ ನಡೆಯುವ ದೇವಾಲಯಗಳು ಕರ್ನಾಟಕದಾದ್ಯಂತ ಮಾತ್ರವಲ್ಲ. ಖಂಡೋಬ ಹೆಸರಿನಿಂದ ಮಹಾರಾಷ್ಟ್ರದಲ್ಲೂ ಪ್ರಸಿದ್ಧಿ ಪಡೆದಿದ್ದಾನೆ.

ರೇವಣಸಿದ್ಧೇಶ್ವರ

ಕುರುಬ ಸಮುದಾಯ ತಮ್ಮ ಮೂಲ ಗುರುವೆಂದು ಆರಾಧಿಸಿಕೊಂಡು ಬಂದಿರುವ ಮಹಾಪುರುಷರಲ್ಲಿ ರೇವಣಸಿದ್ಧರು ಅಗ್ರಸ್ಥಾನದಲ್ಲಿ ನಿಲ್ಲುವರು. ಕರ್ನಾಟಕದ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧನಾಗಿರುವ ಈತ ಕುರುಬ ಮತ್ತು ವೀರಶೈವ ಸಮಾಜಗಳೆರಡಕ್ಕೂ ಪೂಜ್ಯನೀಯ. ಉಂಡಾಡು ಪದ್ಮಣ್ಣನ ನಾಲ್ಕನೇ ಮಗನಾದ ಶಾಂತಿಮಯ್ಯ ಮುತ್ತಯ್ಯ ಮಹಾದೇವಿಯರ ಮಗನೇ ರೇವಣಸಿದ್ಧೇಶ್ವರ. ಕೊಲ್ಲಿಪಾಕಿ ಈತನ ಹುಟ್ಟೂರು. ಕೆಲವು ಪುರಾಣಗಳು ರೇವಣಸಿದ್ಧರು ಕೊಲ್ಲಿಪಾಕಿಯ ಸೋಮನಾಥಲಿಂಗದಲ್ಲಿ ಜನಿಸಿದರೆಂದೂ ವರ್ಣಿಸುತ್ತವೆ. ಆದರೆ ಹಾಲುಮತೋತ್ತೇಜಕ ಪುರಾಣ, ತಗರಪವಾಡಗಳಲ್ಲಿ ಶಾಂತಮುತ್ತಯ್ಯನನ್ನು ರೇವಣಸಿದ್ಧರ ಶಿಷ್ಯನೆಂದು ಹೇಳಲಾಗಿದೆ.

ಸಾವಿರಾರು ವರ್ಷಗಳ ಹಿಂದೆ ವಿಂಧ್ಯ ಪರ್ವತದ ತಪ್ಪಲಿನ 'ರೇವಾ' ನದಿಯ ತೀರದಲ್ಲೊಂದು ಮಠವಿತ್ತು. ಅಲ್ಲಿ ಸಕಲ ವಿದ್ಯಾಪಾರಂಗತರಾದ ಮಹಾದೇವ ದೇಶಿಕ ಎಂಬ ಮಹಾಮುನಿಗಳು ಹಲವು ಸಾಧುಸಂತ ಋಷಿ ದಂಪತಿಗಳಿಗೆ ಆಶ್ರಯ ನೀಡಿ ವೇದಮಂತ್ರ ಮೊದಲಾದ ಹತ್ತು ಹಲವು ವಿದ್ಯೆಗಳನ್ನು ಹೇಳಿಕೊಡುತ್ತಿದ್ದರು. ಇಂತಹ ಹಲವಾರು ಋಷಿ ದಂಪತಿಗಳಲ್ಲಿ ಸಹನ ಮತ್ತು ಸಾರಖಿ ಎಂಬ ಋಷಿ ದಂಪತಿಗಳು ತನುಮನ ಜನಗಳಲ್ಲಿ ಶಿವನನ್ನೇ ಕಾಣುತ್ತಿದ್ದರು. ಸತ್ಯವಂತರೂ, ಶೀಲವಂತರೂ, ಸದ್ಗುಣಿಗಳೂ ಆಗಿದ್ದರು. ಹೀಗಿರುವಾಗ ಒಂದು ದಿನ ಸಹನನ ಹೆಂಡತಿ ಸಾರಖಿಗೆ ಕನಸೊಂದು ಬೀಳುತ್ತದೆ. ಆ ಕನಸಿನಲ್ಲಿ ತಂದೆ ತಾಯಿ ಸ್ವರೂಪರಾದ ಶಿವಪಾರ್ವತಿಯರು ಒಂದು ಹಾಲಿನ ಕಡಲು ಚಂದ್ರನಾಗಿ ಹುಟ್ಟಿಬಂದಿತೋ ಎಂಬಂತಿರುವ ಸುಲಕ್ಷಣವಾದ ಮಗುವೊಂದನ್ನು ಸಾರಖಿಯ ಕೈಗಿತ್ತು ನಿಮ್ಮ ಸಚ್ಚಾರಿತ್ರಕ್ಕೆ ಮೆಚ್ಚಿ ನಿಮಗಾಗಿ ಈ ಕಾಣಿಕೆಯನ್ನು ನೀಡುತ್ತಿರುವೆವು. ಇವನು ಮುಂದೆ ಲೋಕೋದ್ಧಾರಕನಾಗಿ ಕೀರ್ತಿವಂತನಾಗಿ ನಿಮ್ಮ ಹೆಸರನ್ನು ಮೂರು ಲೋಕದಲ್ಲೂ ಬೆಳಗುವನು ನಿಮಗೆ ಶುಭವಾಗಲೆಂದು ಹರಸಿ ಹೋಗುವರು.

ಇತ್ತ ಸಾರಖಿಗೆ ಎಚ್ಚರವಾಗಿ ತನ್ನ ಕನಸಿನ ಸಂಗತಿಯನ್ನು ಸಹನನಿಗೆ ತಿಳಿಸಿದಳು. ಆತ ಸಂತೋಷ ಪಟ್ಟು 'ಶಿವಪ್ರಸಾದ' ಎಂದು ಮರುದಿನ ಋಷಿದಂಪತಿಗಳು ಶ್ರೀಮಠದ ದೇಶಿಕರಿಗೆ ತಿಳಿಸುತ್ತಾರೆ.

ಅವರೂ ಸಹ ಶಿವನಿಚ್ಛೆಯಿಂದ ಜನಿಸಿದೆ ಎಂದು ಸುಮ್ಮನಿರುತ್ತಾರೆ. ಮರುದಿನ ಸಹ ಸಾರಖಿ ದಂಪತಿಗಳು ರೇವಾ ನದಿ ತೀರದಲ್ಲಿ ಸೂರ್ಯ ನಮಸ್ಕಾರ ಮಾಡಲೆಂದು ತೆರಳಿದಾಗ ಸೂರ್ಯನೇ ಇವರ ಭಕ್ತಿಗೆ ಮೆಚ್ಚಿ ಧರೆಗೆ ಇಳಿದು ಬಂದನೋ ಎಂಬಂತೆ ದಿವ್ಯ ಪ್ರಕಾಶಿತ ಕಂದನನ್ನು ಕಂಡು ಪುಳಕಗೊಂಡು ಆ ಪುಟ್ಟ ಮಗವನ್ನು ಶ್ರೀಮಠದ ದೇಶಿಕರಿಗೆ ನೀಡುತ್ತಾರೆ. ದೇಶಿಕರು ಮಗುವನ್ನು ಪ್ರೀತಿಯಿಂದ ಮೈದಡವಿ ವಿಭೂತಿ ಭಸ್ಮಲೇಪಿಸಿ ಸಮೀಪವಿದ್ದ ಸಾರಖಿಗೆ ನೀಡಿ ನಿನ್ನ ಕನಸು ನನಸಾಯಿತು. ಈ ಮಗುವು ರೇವಾ ನದಿಯಲ್ಲಿ ದೊರೆತಿರುವುದರಿಂದ ಇನ್ನು ಮುಂದೆ 'ರೇವಾ' ಎಂದು ಕರೆದು ಶಿವನ ವರಪ್ರಸಾದದಿಂದ ದೊರಕಿರುವುದರಿಂದ 'ರೇವಣಸಿದ್ಧೇಶ್ವರ' ಎಂಬ ಹೆಸರು ಪ್ರಾಪ್ತವಾಗುತ್ತದೆ. ಬಾಲಕನಾದ ಈತನು ಸಾಧುವೊಬ್ಬ ಹೇಳಿದನೆಂಬ ಕಾರಣಕ್ಕೆ ಮೂರು ದಿನಗಳ ಕಾಲ ಅನ್ನ ನೀರನ್ನು ತೊರೆದು ತಂದೆತಾಯಿಗಳ ಕಳವಳವನ್ನೂ ಲೆಕ್ಕಿಸದೆ ಮಂತ್ರಪಠಣದಲ್ಲಿ ಮುಳುಗಿ ಸಿದ್ಧ ಮಂತ್ರವನ್ನು ಪಡೆದು ರೇವಣಸಿದ್ಧನಾಗುತ್ತಾನೆ. ಇವನೇ ಮುಂದೆ ಉಣ್ಣೆಕಂಕಣ ಕುರುಬರ ಆರಾಧ್ಯದೈವವಾಗಿದ್ದಾನೆ. ಇವನ ಪುತ್ರ ಪವಾಡಗಳು ಅತಿಮಾನುಷ ಘಟನೆಗಳು ಹೆಣೆದುಕೊಂಡು ಅತಿಮಾನುಷನಾಗಿ ಕುರುಬರಲ್ಲಿ ಕಂಡುಬರುತ್ತಾನೆ. ಒಬ್ಬ ಸಿದ್ಧಿಸಾಧಕನಾಗಿ ರೇವಣ ಸಿದ್ಧ ಕಂಡುಬರುವುದು ಕುರುಬರಿಗೆ ದೈವವಾಗಿ ಕಂಡುಬಂದಿದ್ದರೆ ಅಚ್ಚರಿಯಿಲ್ಲ.

ಸಿದ್ಧರಾಮೇಶ್ವರ

ಹನ್ನೆರಡನೇ ಶತಮಾನದ ಬಸವಾದಿ ಪ್ರಮಥರ ಸಮಕಾಲೀನನೂ, ಕರ್ಮಯೋಗಿಯೂ ಆದ ಸಿದ್ಧರಾಮನು ಬಸವಣ್ಣನವರ ಕರ್ಣಧಾರತ್ವದಲ್ಲಿ ಕಲ್ಯಾಣದಲ್ಲಿ ನಡೆದ ಶರಣ ಚಳುವಳಿಯಲ್ಲಿ ಭಾಗವಹಿಸಿ ಶರಣನಾಗುವ ಮುನ್ನ ನಾಥಸಿದ್ಧ ಅಥವಾ ಶೈವಸಿದ್ಧನಾಗಿದ್ದನೆಂದು ತಿಳಿದುಬರುತ್ತದೆ. ಸಿದ್ಧ ಪಂಥೀಯನಾದ ಸಿದ್ಧರಾಮನನ್ನು ಕುರುಬ ಜನಾಂಗದವರು ತಮ್ಮ ಗುರುಪರಂಪರೆಯ ಮಹಾಪುರುಷರಲ್ಲಿ ಒಬ್ಬನಾಗಿ ಭಾವಿಸಿ ಪ್ರಾಚೀನ ಕಾಲದಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ.

ಸಿದ್ಧರಾಮನು ಹುಟ್ಟಿದ ಊರು ಸೊನ್ನಲಿಗೆ (ಸೊಲ್ಲಾಪುರ). ಇಲ್ಲಿಯ ಮುದ್ದುಗೌಡ ಮತ್ತು ಸುಗ್ಗವ್ವೆ ಎಂಬ ದಂಪತಿಗಳು ತಮ್ಮ ತಾರುಣ್ಯವನ್ನು ಕಳೆದು ಮುಪ್ಪಿನ ಅವಸ್ಥೆಗೆ ತಲುಪಿದರೂ ಅವರಿಗೆ ಮಕ್ಕಳಾಗಿರುವುದಿಲ್ಲ. ಹೀಗಿರುಪಾಗ ಒಮ್ಮೆ ರೇವಣಸಿದ್ಧರು ಸೊಲ್ಲಾಪುರಕ್ಕೆ ಬಂದು ಪಲ್ಲಕ್ಕಿಯಿಂದಿಳಿದು ಹಾವುಗೆಗಳನ್ನು ಕಳೆದು ಅಲ್ಲಿರುವ ಸುಗ್ಗವ್ವೆಯ ಮನೆಗೆ ಬರುತ್ತಾರೆ. ಆ ದಂಪತಿಗಳ ಭಕ್ತಿಯಿಂದ ಸಂತೃಪ್ತಿಗೊಂಡ ರೇವಣಸಿದ್ಧರು 'ಸುಗ್ಗವ್ವೆಯ ಉದರದಲ್ಲಿ ಮಹಿಮಾಪುರುಷ ಶಿವಭಕ್ತ ಯೋಗಿಯು ಜನಿಸುವನು' ಎಂಬ ಭವಿಷ್ಯವಾಣಿಯನ್ನು ನುಡಿದು ಹೋಗುತ್ತಾರೆ. ಈ ಭವಿಷ್ಯವಾಣಿಯು ನಿಜವೆನ್ನುವಂತೆ ಅಲ್ಪಕಾಲಾವಧಿಯಲ್ಲಿಯೇ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಈ ಮಗುವಿಗೆ ತಮ್ಮ ಮನೆದೇವರಾದ 'ಧೂಳಿಮಹಾಂಕಳ'ನೆಂಬ ಜನ್ಮನಾಮವನ್ನೂ, ರಾಮಯ್ಯನೆಂಬ ಹೆಸರನ್ನು ಇಡುತ್ತಾರೆ.

ಆದರೆ ಈ ವೇಳೆಗಾಗಲೇ ಮಕ್ಕಳಾಗದ ಕಾರಣ ಬೊಮ್ಮಯ್ಯನನ್ನು ದತ್ತುವಾಗಿ ಸ್ವೀಕರಿಸಿರುತ್ತಾರೆ. ಧೂಳಿಮಹಾಂಕಳನಿಗೆ ಹಿರಿಯಣ್ಣನಾಗಿ 'ಅಣ್ಣ ಬೊಮ್ಮಯ್ಯ'ನೆನಿಸಿಕೊಳ್ಳುತ್ತಾನೆ. ಅಂತರ್ಮುಖಿಯಾದ ಸಿದ್ಧರಾಮ ಓರಗೆಯ ಮಕ್ಕಳೊಂದಿಗೆ ದನ ಕರುಗಳನ್ನು ಕಾಯಲು ಕಳುಹಿಸಿದರೆ ಮಾವಿನ ಮರದಡಿಯ ಲಿಂಗಕ್ಕೆ ಭಕ್ತಿಯಿಂದ ಪೂಜಿಸಲಾರಂಭಿಸುತ್ತಾನೆ. ನಿತ್ಯವೂ ಮೊಸರನ್ನವನ್ನು ನೈವೇದ್ಯ ಮಾಡಿ ಆರೋಗಿಸುತ್ತಿದ್ದನು. ಒಮ್ಮೆ ಶ್ರೀಶೈಲ ಮಲ್ಲಿಕಾರ್ಜುನನು ಜಂಗಮವೇಷದಲ್ಲಿ ಬಂದು ಹಾಲು ತುಂಬಿದ ತೆನೆಗಳನ್ನು ಸ್ವೀಕರಿಸಿದನು. ನಂತರ ಬಾಲಕ ಸಿದ್ಧರಾಮನು ಮೊಸರನ್ನದ ಬುತ್ತಿಯನ್ನು ತರುವುದರೊಳಗಾಗಿ ಮಲ್ಲಿಕಾರ್ಜುನ ಅಂತರ್ಧಾನನಾಗುವುದು, ಸಿದ್ಧರಾಮನು ಅವನನ್ನು ಹುಡುಕಿ ಯಾತ್ರಿಕರ ಭರವಸೆಯೊಂದಿಗೆ ಶ್ರೀಶೈಲಕ್ಕೆ ಬರುವುದು, ಲಿಂಗರೂಪದ ಮಲ್ಲಯ್ಯನನ್ನು ಕಂಡು ನಿರಾಶೆಗೊಳ್ಳುವುದು. ಕೊನೆಗೆ ಅವನು ದೊರೆಯದೇ ಇದ್ದಾಗ ರುದ್ರಗಮ್ಮರಿಗೆ ಹಾರಿಕೊಳ್ಳಲು ಸಿದ್ಧನಾದಾಗ ಮಲ್ಲಿಕಾರ್ಜುನ ದರ್ಶನ ನೀಡಿ ಭೈರವನ ಮೂಲಕ ಶ್ರೀಶೈಲ ಕ್ಷೇತ್ರದ ದರ್ಶನ ಮಾಡಿಸಿ ತಾನೆ ಸೊನ್ನಲಿಗೆಗೆ ಬಂದು ನೆಲಸುವುದಾಗಿ ಹೇಳಿಕಳುಹಿಸುತ್ತಾನೆ. ಇಲ್ಲಿಯೂ ಸಿದ್ಧರಾಮನು ಅನೇಕ ಪವಾಡ, ಅತಿಮಾನುಷರಂತೆ ಕಂಡರೆ ಆಶ್ಚರ್ಯಪಡಬೇಕಿಲ್ಲ. ಕರ್ಮಯೋಗಿಯಾಗಿ ಕೆರೆಕುಂಟೆಗಳನ್ನು ನಿರ್ಮಿಸಿ ಊರೊಟ್ಟಿನ ಹಿತಕ್ಕೆ ಶ್ರಮಿಸುವ ವಚನಕಾರನು ಮಾತ್ರವಲ್ಲ ಕುರುಬರ ಆರಾಧ್ಯ ದೈವವಾಗಿ ಅಂದರೆ ನೊಣಬರಿಗೆ ಕುಡುವೊಕ್ಕಲಿಗರಿಗೆ ವಿಶೇಷ ದೈವತವಾಗಿ ಇಂದಿಗೂ ಪೂಜೆಗೊಳ್ಳುತ್ತಿದ್ದಾನೆ.

ಅಮೋಘಸಿದ್ಧೇಶ್ವರ

ಕರ್ನಾಟಕ ಮತು ಮಹಾರಾಷ್ಟ್ರದ ಗಡಿಭಾಗದಲ್ಲಿ ಹರಿಯುವ ಭೀಮಾನದಿಯ ಎರಡೂ ಕಡೆಗಳಲ್ಲಿ ನೆಲೆಗೊಂಡು ಜನಮಾನಸದಿಂದ ಪೂಜೆಗೊಳ್ಳುವ ಆರಾಧ್ಯದೈವ ಅಮೋಘಸಿದ್ಧ. ಈತನಿಗೆ ಅಮಕಸಿದ್ಧ, ಅಮುಖಸಿದ್ಧ, ಅಮ್ಮುಗಿಸಿದ್ಧ, ಅಮ್ಮೋಗಿಸಿದ್ಧ, ಅಮಗೊಂಡ ಎಂಬ ಪರ್ಯಾಯ ನಾಮಗಳಿವೆ. ಈತ ಕುರುಬರ ಕುಲಗುರು ಒಡೆಯರ ಶಾಖೆಯೊಂದರ ಪ್ರಮುಖ ಸಿದ್ಧ. ಕುರುಬರ ಇನ್ನೋರ್ವ ಆರಾಧ್ಯದೈವವಾದ ರೇವಣಸಿದ್ಧನಷ್ಟೇ ಪ್ರಮುಖ.

ಅಮೋಘಸಿದ್ಧನು ಶಿವಸ್ವರೂಪಿಯಾದ ಸೋಮಲಿಂಗನನ್ನು ತನ್ನ ಆರಾಧ್ಯದೈವವೆಂದು ಪೂಜಿಸಿದನು. ಆ ಕಾರಣದಿಂದ ಶೈವಸಿದ್ಧ ಪಂಥದವನೆಂದು ಗುರ್ತಿಸಲು ಸಾಧ್ಯ. ಇವನೂ ಕೂಡ ಕುರುಬ ಆರಾಧ್ಯದೈವವಾಗಿ ಸಾಂಸ್ಕೃತಿಕ ವೀರನಾಗಿ ಕಂಡು ಬರುತ್ತಾನೆ. ತನ್ನ ಸಾಧನೆಯ ಪ್ರಾರಂಭಿಕ ಹಂತದಲ್ಲಿ ಕಾಪಾಲಿಕ ಪಂಥದ ಕಡೆಗೆ ಒಲವು ತೋರಿದನಾದರೂ ಅವನು ಅರಕೇರಿಗೆ ಬರುವ ಮುನ್ನ ಕೆಲದಿವಸ ಕಾಪಾಲಿಕರ ಕೇಂದ್ರವಾಗಿದ್ದ ಶ್ರೀಶೈಲದಲ್ಲಿ ಸಾಧನೆಮಾಡಿ ಅಲ್ಲೊಂದು ಕಂಬಳಿಮಠವನ್ನು ಸ್ಥಾಪಿಸಿದ್ದನ್ನು ಕುರಿತು ಮೌಖಿಕ ಕಥನ ಪರಂಪರೆ ಭಾವಿಸಿದೆ. "ಅರಕೇರಿ ಅರಿವಿನ ಮನೆ, ಭೀವರಗಿ ಗುರುಮನಿ" ಎಂದು ಘೋಷವಾಕ್ಯ ಬರುತ್ತದೆ. ಮಕಣಾಪುರದ ನಡಹಟ್ಟಿ ನಗರಾಯನ ಮಗಳಾದ ಪದ್ಮಾವತಿಯನ್ನು ಮದುವೆಯಾಗುತ್ತಾನೆ.

ನಂತರದಲ್ಲಿ ಅವನಿಗೆ ನಾಲ್ಕು ಜನ ಗಂಡುಮಕ್ಕಳು ಮತ್ತು ಒಬ್ಬಳು ಮಗಳು ಜನಿಸುತ್ತಾರೆ. ಮಕ್ಕಳು ಬೆಳೆದು ದೊಡ್ಡವರಾಗುವ ವೇಳೆಗೆ ಅಮೋಘಸಿದ್ಧ ಜನಮಾನಸದಲ್ಲಿ ವ್ಯಾಪಕವಾಗಿ ತನ್ನ ಪ್ರಭಾವ ಬೀರಿದ್ದಂತೆ ತೋರುತ್ತದೆ.

ಮಾಳಿಂಗರಾಯ

ಹಾಲುಮತದ ಸಾಂಸ್ಕೃತಿಕ ವೀರ, ಚಾರಿತ್ರಿಕ ವ್ಯಕ್ತಿ, ಉತ್ತರ ಕರ್ನಾಟಕದ ಅನುಭಾವಿನಾಯಕ, ಬೀರಪ್ಪನ ಅಗ್ರಗಣ್ಯ ಶಿಷ್ಯ, ಶೈವ ಆರಾಧಕ, ಭಂಡಾರ ಪಂಥದ ಪ್ರತಿಪಾದಕ ಈ ಮಾಳಿಂಗರಾಯ. ಈತನ ಮೂಲಸ್ಥಳ ಹುಲಜಂತಿ. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಂಗಳವೇಡೆಯಲ್ಲಿದೆ. ಗ್ರಾಮಕ್ಕೆ ಊರಸುತ್ತ ಕೋಟೆಯಿದ್ದು ಎರಡು ದ್ವಾರಗಳಿವೆ. ಕೋಟೆಬಾಗಿಲುಗಳಿಗೆ 'ಹುಲಿಮುಖದಗಿಸಿ' ಎಂದು ಕರೆಯುವರು. ಎರಡೂ ಕೋಟೆ ಬಾಗಿಲುಗಳ ತೋಳುಗಳಲ್ಲಿ ಹುಲಿಯ ಚಿತ್ರಗಳಿವೆ. ಕೋಟೆಗೆ ಅಂಟಿಕೊಂಡು ಒಂದು ದೊಡ್ಡ ಹಳ್ಳವಿದೆ. ಈ ಹಳ್ಳಕ್ಕೆ 'ಹಾಲಹಳ್ಳ' ಮಾಳಿಂಗರಾಯನ ಹಳ್ಳ, ತೀರ್ಥನದಿ ಎಂಬ ಹೆಸರುಗಳಿವೆ. ಈ ಹಳ್ಳದ ಉಗಮಸ್ಥಾನದಿಂದ ಭೀಮಾನದಿ ಕೂಡುವ ಸ್ಥಳದ ದಡಗಳಲ್ಲಿ ಹಾಲುಮತದವರೇ ವಾಸಿಸುತ್ತಾರೆ. ಹಾಗಾಗಿ 'ಹುಲಿಜಂತಿ ಮಾಳಿಂಗರಾಯ'ಎಂಬ ಹೆಸರು ಅನ್ವರ್ಥವಾಗಿದೆ.

ಹಿಂದೆ ಆನೆಗೊಂದಿ ಅರಸು ಮನೆತನದಲ್ಲಿ ಹುಟ್ಟಿದ ಕರಿಗೌಡನ ಮಕ್ಕಳಾದ ತುಕ್ಕಪ್ಪರಾಯ ಮತ್ತು ಸೋಮರಾಯರು ಮದುವೆಯಾಗಿ 'ಬಲವಾಡಪುರ'ವೆಂಬ ಊರಿನಲ್ಲಿ ಸುಖನೆಮ್ಮದಿಯಿಂದ ಬಾಳುತ್ತಿದ್ದರು. ತುಕ್ಕಪ್ಪರಾಯ ಹದಿಮೂರು ಹಳ್ಳಿಗಳನ್ನೂ, ಸೋಮರಾಯನ ಹನ್ನೆರಡು ಹಳ್ಳಿಗಳನ್ನು ನೋಡಿಕೊಳ್ಳುತ್ತಿರುತ್ತಾರೆ. ತುಕ್ಕಪ್ಪರಾಯನಿಗೆ ಅರಸನ ಪಟ್ಟ ಸಿಕ್ಕಿದರೆ ಸೋಮರಾಯನಿಗೆ ಊರಿನ ಗೌಡಿಕೆಯ ಜೊತೆಗೆ ಏಳುನೂರು ಹಸುಗಳನ್ನು ಕಾಯುತ್ತ ಜೀವನ ನಡೆಸುತ್ತಿರುತ್ತಾರೆ. ಹನ್ನೆರಡು ವರ್ಷಗಳ ದಾಂಪತ್ಯ ಜೀವನ ನಡೆಸಿದರೂ ಸಂತಾನವಾಗಲಿಲ್ಲ. ಒಂದು ದಿನ ಗೋನಾರ ಸಿದ್ದರು ಬರುತ್ತಾರೆ. ಅಣ್ಣ ತಮ್ಮಂದಿರಿಬ್ಬರೂ ಅವರನ್ನು ಬರಮಾಡಿಕೊಂಡು ಅತ್ಯಂತ ಭಕ್ತಿಯಿಂದ ಪೂಜಿಸಿ ತಮ್ಮ ಮನದ ನೋವನ್ನು ತೋಡಿಕೊಳ್ಳುತ್ತಾರೆ. ಆಗ ಸೋನಾರ ಸಿದ್ದರು ಹನ್ನೆರಡು ವರ್ಷಗಳ ತಪಸ್ಸು ಮಾಡಲು ಸಲಹೆ ನೀಡುತ್ತಾರೆ.

ತುಕ್ಕಪ್ಪ ಮತ್ತು ಅಮೃತಾಬಾಯಿ ದಂಪತಿಗಳ ತಪದ ಪರೀಕ್ಷೆಯನ್ನು ಶಿವ ಮತ್ತು ಇಂದ್ರರು ನಡೆಸಿ ಅವರ ಭಕ್ತಿಗೆ ಮೆಚ್ಚಿ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷವಾಗಿ ಜಪಮಣಿ ಮತ್ತು ಮಾಣಿಕ ಮಣಿಗಳನ್ನು ಕೊಡುತ್ತಾರೆ. ಜಪದ ಮಣಿಯಿಂದ ಜಕ್ಕಪ್ಪನೂ, ಮಾಣಿಕದ ಮಣಿಯಿಂದ ಮಾಳಿಂಗರಾಯರು ಜನಿಸುತ್ತಾರೆ. ಬಾಲಕನಾಗಿದ್ದಾಗಲೇ ಶಿವನ ಪ್ರೀತಿಗೆ ಒಳಗಾಗಿ ಆದಿಶೇಷನ ಹೆಡೆಗಳ ನೆರಳಲ್ಲಿ ಆಟವಾಡಿ ಹೊಳೆಯಲ್ಲಿ ಸತ್ತ ಮೀನುಗಳಿಗೆ ಜೀವನೀಡಿ, ಬರಗಾಲದಲ್ಲಿ ಪಾರುಮಾಡಿ ಹಲವು ಪವಾಡಗಳನ್ನು ಮಾಡುತ್ತ ಊರವರ ಕಣ್ಣಲ್ಲಿ ಪವಾಡ ಪುರುಷನಾಗಿ ಕಾಣುತ್ತಾನೆ.

ಒಟ್ಟಾರೆಯಾಗಿ ಪಶುಪಾಲನಾ ಹಂತದ ಬೇಟೆ ಹಾಗೂ ಕೃಷಿಸಂಸ್ಕೃತಿಗಳ ಕೊಂಡಿಯಾಗಿ ಮಾಳಪ್ಪ ಕಂಡುಬರುತ್ತಾನೆ. ಸಾಮಾನ್ಯ ದನಗಾಹಿಯಾಗಿದ್ದ ಮಾಳಿಂಗರಾಯ ಪವಾಡಗಳ ಮೂಲಕ ಸಾಂಸ್ಕೃತಿಕ ವೀರನಾಗಿ, ಒಂದು ಸಲ ಪುರಾಣ ವ್ಯಕ್ತಿಯಾಗಿ, ದೈವವಾಗಿ ಚಿತ್ರಿಸಿ ಒಪ್ಪಿತವಾಗುತ್ತಾನೆ. ಇದಾದ ಮೇಲೆ ಅವನನ್ನೂ ಯಾವ ಕಾರಣಕ್ಕೂ ಮನುಷ್ಯ ಸಹಜ ರೂಪದಲ್ಲಿ ನೋಡುವುದಕ್ಕೆ ಆಯಾ ಸಮುದಾಯಗಳು ಒಪ್ಪುವುದಿಲ್ಲ. ಆದ್ದರಿಂದ ಮಾಳಿಂಗರಾಯನೂ ಇದಕ್ಕೆ ಹೊರತಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಜಲಧಿ ಬೊಪ್ಪರಾಯ

ಕುರುಬ ಮೂಲದ ಕುಂಚಿಟಿಗರ ಸಾಂಸ್ಕೃತಿಕ ವೀರ ಎಂದು ಗುರುತಿಸುವ ಜಲಧಿ ಬೊಪ್ಪರಾಯನಿಗೊಂದು ಐತಿಹ್ಯವಿದೆ. ಇಂದ್ರಪ್ರಸ್ಥ ಬಳಿಯ ದ್ವಾರಕಾಪುರದಲ್ಲಿ ಕುಂಚಿಟಿಗರ ಉಂಡೆ ಎತ್ತರಾಯ ರಾಯನಾಗಿಯೂ, ಧಾನ್ಯದ ಧನಿಕರಾಯ ಪ್ರಧಾನಿಯಾಗಿಯೂ ರಾಜ್ಯಭಾರ ಮಾಡುತ್ತಿದ್ದರು. ಇವರ ವೃತ್ತಿ ಪಶುಪಾಲನೆಯಾದ್ದರಿಂದ ಹಾಲು ಮೊಸರು ತುಪ್ಪ ಮಾರಿಕೊಂಡು ಶ್ರೀಮಂತಿಕೆಯಿಂದ ಮೆರೆಯುತ್ತಿದ್ದರು. ತುಪ್ಪವನ್ನು ಗಾರೆಗಚ್ಚಿನ ನೆಲ ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದರು. ರಾಮಟೆಂಕ ವರಾಹಗಳು ಇವರಲ್ಲಿ ಕಾಲು ಮುರಿದುಕೊಂಡು ಬಿದ್ದಿದ್ದವು. ಅತ್ಯಂತ ಸುಂದರಿಯರಾದ ಇವರ ಹೆಣ್ಣು ಮಕ್ಕಳು ಬಾದಷಹನ ಪಟ್ಟಣಕ್ಕೆ ಹಾಲು ಮಾರಲು ಹೋದಾಗ ಕಣ್ಣಿಗೆ ಬೀಳುವರು. ನಿಕಾ ಮಾಡಿಕೊಡಲು ಕೇಳಿದಾಗ 'ಹಾಲಿನಂತಹ ಕುಲ ನೀರಾಗುತ್ತದೆ' ಎಂದು ತಿರಸ್ಕರಿಸಿದರು.

ಸಮಯ ಕಾಯುತ್ತಿದ್ದ ಬಾದಷಹ ಇವರ ಹೆಣ್ಣುಗಳು ಹಾಲು ಮಾರಲು ಹೋದಾಗ ಸೆರೆ ಹಿಡಿಯಲು ಪ್ರಯತ್ನಿಸಿದ. 'ದೊಡ್ಡ ಭೈರಮ್ಮ' ಎಂಬ ಹೆಣ್ಣುಮಗಳು ಸೆರೆಸಿಕ್ಕು ಉಳಿದವರು ತಪ್ಪಿಸಿಕೊಂಡು ಬಂದು ಸುದ್ದಿಕೊಟ್ಟರು. ಇನ್ನು ಇಲ್ಲಿಯೇ ಇದ್ದರೆ ಬಾದಷಹ ತಮ್ಮ ಕುಲವನ್ನು ಕೆಡಿಸಿಬಿಡುತ್ತಾನೆಂದು ಹೆದರಿ ರಾತ್ರೋರಾತ್ರಿ ನೂರಾರು ಬಂಡಿಗಳಲ್ಲಿ ತಮ್ಮ ಸಾಮಾನು ಸರಂಜಾಮುಗಳನ್ನು ತುಂಬಿಕೊಂಡು ವಲಸೆ ಹೊರಟರು. ಆಗ ಕುಂಚಿಟಿಗ ಗೌಡರ ಜೊತೆಯಲ್ಲಿ ಎಲ್ಲಾ ಜಾತಿಯ ಕೈವಾಡದವರೊಂದಿಗೆ ಕಾಡುಗೊಲ್ಲರ ಚಂದ ಮುತ್ತಿ, ಮಗ್ಗದ ಕುರುಬರ ಬಸವೇಗೌಡ, ತಳವಾರ ರಾಮಣ್ಣ ಮುಂತಾಗಿ ಹೊರಬಂದರು.

ಆದರೆ ಗಂಗಾನದಿ ತುಂಬಿ ಹರಿಯುತ್ತಿತ್ತು. ಗಂಗೆಯನ್ನು ದಾರಿ ಕೇಳಲಾಗಿ ನರಬಲಿ ಕೋರುತ್ತಾಳೆ. ಯಾರೂ ಮುಂದೆ ಬಾರದಿದ್ದಾಗ ಅಲ್ಲೇ ಕುರಿಕಾಯುತ್ತಿದ್ದ ಕುರುಬರ ಬೊಪ್ಪರಾಯ ತಾನು ಗಂಗೆಗೆ ಅರ್ಪಿತವಾಗುತ್ತೇನೆ. ಆದರೆ ಸತ್ತ ನನ್ನ ಮುಂಡಕ್ಕೆ 'ನಿಮ್ಮ ಕುಂಚಿಟಿಗರ ಕುಲದ ಹೆಣ್ಣು ಕೊಟ್ಟು ಧಾರೆಯೆರೆಯಬೇಕು' ಎಂಬ ಷರತ್ತು ಹಾಕುತ್ತಾನೆ. ಬೇರೆ ದಾರಿ ಕಾಣದೆ ಉಂಡೆ ಎತ್ತರಾಯ ತನ್ನ ಮಗಳು ಚಿಕ್ಕಭೈರಮ್ಮನನ್ನು ಕೊಟ್ಟು ವಿವಾಹ ಮಾಡುತ್ತೇನೆಂದು ವಾಗ್ದಾನ ಮಾಡುತ್ತಾನೆ. ಬೊಪ್ಪರಾಯ ಶಿರಸ್ಸನ್ನು ಕತ್ತರಿಸಿ ಗಂಗೆಗೆ ಆರತಿ ಬೆಳಗುತ್ತಾನೆ. ಗಂಗೆ ದಾರಿ ಕೊಡುತ್ತಾಳೆ. ಎಲ್ಲ ಜನರೂ ಹೊಳೆದಾಟುವರು.

ಬಾದಷಹ ಇವರನ್ನು ಹಿಡಿಯಬೇಕೆಂದು ಅಟ್ಟಿಸಿಕೊಂಡು ಬರುವ ವೇಳೆಗೆ ನದಿ ಮತ್ತೆ ತುಂಬಿ ಹರಿಯುತ್ತದೆ. ಬಾದಷಹ ಇವರನ್ನೂ ಹಿಡಿಯಬೇಕೆಂದು ಬಂದು ನಿರಾಶೆಯಿಂದ ಹಿಂತಿರುಗುತ್ತಾನೆ.

ಜನ ಈಚೆ ದಡ ಸೇರಿದ ಮೇಲೆ ಉಂಡೆ ಎತ್ತರಾಯ ಕೊಟ್ಟ ಮಾತಿನಂತೆ ಬೊಪ್ಪರಾಯನನ್ನು ಕುಂಚಿಟಿಗರ ಕುಲಕ್ಕೆ ಹಾಕಿಕೊಂಡು ಸತ್ತ ಮುಂಡಕ್ಕೆ ಮಗಳನ್ನು ಧಾರೆ ಎರೆಯುತ್ತಾನೆ. ಆಶ್ಚರ್ಯವೆಂಬಂತೆ ಬೇರೆಯಾದ ರುಂಡ ಮತ್ತೆ ಬಂದು ಮುಂಡದ ಜೊತೆಗೂಡಿ ಬೊಪ್ಪರಾಯ ಬದುಕುತ್ತಾನೆ. ಹೀಗೆ ಜಲಧಿಯನ್ನು ಭೇದಿಸಿ ದಾರಿಮಾಡಿಕೊಟ್ಟ ಬೊಪ್ಪರಾಯನಿಗೆ ಮುಂದೆ 'ಜಲಧಿ ಬೊಪ್ಪರಾಯ'ಎಂಬ ಹೆಸರು ನಿಲ್ಲುತ್ತದೆ. ಇದರಿಂದಾಗಿ ಇವನ ಸಂತತಿಯವರೆಲ್ಲರಿಗೂ 'ಜಲದೇನರು' ಎಂಬ ಬೆಡಗಿನಿಂದ ಕರೆಯುತ್ತಾರೆ. ಇಡೀ ಜನಾಂಗವನ್ನು ಆಪತ್ತಿನಿಂದ ಪಾರು ಮಾಡಿದ್ದರಿಂದ ಈತನು ಎಲ್ಲಾ ಜಾತಿಯವರ ಕಣ್ಮಣಿಯಾಗುತ್ತಾನೆ. ಆರಾಧ್ಯದೈವವಾಗುತ್ತಾನೆ. ಸಾಂಸ್ಕೃತಿಕ ವೀರನಾಗಿಯೂ ಉಳಿಯುತ್ತಾನೆ.

ಜುಂಜಪ್ಪ

ಕಾಡುಗೊಲ್ಲರಲ್ಲಿ ಸಾಂಸ್ಕೃತಿಕ ವೀರರ ಸಂಖ್ಯೆ ಅಧಿಕ. ಜುಂಜಪ್ಪ ಇವರಲ್ಲಿ ಪ್ರಮುಖ. ಹಲವು ಪವಾಡ, ಸಾಹಸಗಳನ್ನು ಮಾಡಿ ಸಮುದಾಯದ ದೇವರಾಗಿ ಪೂಜಿಸಲ್ಪಡುತ್ತಿದ್ದಾನೆ. ಈತನ ಸಾಂಸ್ಕೃತಿಕ ನೆಲೆಗಳು ತುಮಕೂರು ಜಿಲ್ಲೆಯ ಗುಬ್ಬಿ ಹಾಗೂ ಶಿರಾ ತಾಲೂಕುಗಳಾಗಿವೆ. ಕಥೆ ಕಾವ್ಯಗಳಲ್ಲಿ ದನಗಾಹಿಯಾಗಿದ್ದ ಜುಂಜಪ್ಪನ ಸಾಹಸ ಕಥೆಗಳನ್ನು ನಿರೂಪಣೆ ಮಾಡಲಾಗಿದೆ. ಅತಿಮಾನುಷ ಘಟನೆಗಳಿಗೆ ಜಿಗಿದ ಸಾಮಾನ್ಯ ಮಾನವರನ್ನು ಮತ್ತೆ ಸಹಜ ಮಾನವ ರೂಪದಲ್ಲಿ ನೋಡಲು ಇಷ್ಟ ಪಡದ ಜನರು ಸಾಂಸ್ಕೃತಿಕ ವೀರನಾಗಿಯೋ ಅಥವಾ ಆರಾಧ್ಯದೈವವಾಗಿಯೋ ಪೂಜಿಸುತ್ತಾರೆ.

ಜುಂಜಪ್ಪನ ತಾತ ದೇವರ ದಯಾಮಾರ. ಕೊರಿಕೆ ಜರಿಮಲೆ ಸೀಮೆಯ ಚಿಕ್ಕದ್ಯಾವರ ಹಟ್ಟಿಯಲ್ಲಿ ಬಕ್ಕದಲೆ ಚಿತ್ತಯ್ಯ, ಬರಿದಲೆ ಚಿತ್ತಯ್ಯ. ಮಾಪಲ್ಲಿ ಚಿತ್ತಯ್ಯ, ಪೂಜಾರಿ ಚಿತ್ತಯ್ಯ, ಘನಗುಡಿ ಚಿತ್ತಯ್ಯ, ದೇವರ ದಯಾಮಾರ ಎಂಬ ಏಳು ಜನ ಅಣ್ಣತಮ್ಮಂದಿರಿಗೆ ಬಡಚಿತ್ತಮ್ಮ ಒಬ್ಬಳೇ ತಂಗಿ. ಈ ತಂಗಿಗೆ ಒಬ್ಬಳೇ ಮಗಳು ಕರಿಬಕ್ಕ. ಈ ಕರಿಬಕ್ಕಳನ್ನು ಏಳುಜನ ಅಣ್ಣತಮ್ಮಂದಿರಲ್ಲಿ ಕೊನೆಯವರಾದ ದೇವರ ದಯಾಮಾರನಿಗೆ ಕೊಟ್ಟು ಮದುವೆ ಮಾಡಿದರು. ಸ್ವಲ್ಪ ಕಾಲದ ನಂತರ ದೇವರ ದಯಾಮಾಯನಿಗೂ ಕರಿಬಕ್ಕನಿಗೂ ಗಂಡುಮಗುವಾಗುತ್ತದೆ. ಮಗುವಾದ ನಂತರ ಇವರಿಬ್ಬರೂ ತೀರಿಕೊಂಡರು. ಈ ಮಗುವನ್ನು ಬಡಚಿತ್ತಮ್ಮನೇ ಸಾಕಬೇಕಾಗಿ ಬಂತು. ಈ ಮಗುವೇ ಕೆಂಗುರಿ ಮಲ್ಲಪ್ಪವಾಗುತ್ತಾನೆ. ಈ ಮಗು ತನ್ನ ತಾಯಿ ಹಾಗೂ ದೊಡ್ಡಪ್ಪಂದಿರ ಮನೆಗೆ ಬಂದ ಮೇಲೆ ಅವರ ಸ್ಥಿತಿಗತಿಗಳು ಉತ್ತಮವಾದವು. ಕೆಂಗುರಿ ಮಲ್ಲೇಗೌಡ ಬೆಳೆದು ದೊಡ್ಡವನಾದ ಮೇಲೆ ಚಿನ್ನಮ್ಮನೊಡನೆ ಮದುವೆಯಾಯಿತು. ಚಿನ್ನಮ್ಮ ಜುಂಜಪ್ಪನಿಗೆ ಜನ್ಮ ನೀಡಿದಳು. ಜುಂಜಪ್ಪ ತನ್ನ ಜೀವನದಲ್ಲಿ ಅನೇಕ ಸಾಹಸಗಳನ್ನು ಮಾಡಿ ಕಾಡುಗೊಲ್ಲರ ನಡುವೆ ತಾನು ಆರಾಧ್ಯದೈವವೆನಿಸಿಕೊಂಡ. ಈತನ

ಏಳಿಗೆಯನ್ನು ಸಹಿಸಲಾಗದ ಈತನ ದಾಯಾದಿಗಳು ಜುಂಜಪ್ಪನ ಬದುಕಿನಲ್ಲಿ ಅನೇಕ ಅಡೆತಡೆಗಳನ್ನು ಒಡ್ಡುತ್ತಾರೆ. ಒಟ್ಟಾರೆಯಾಗಿ ಜುಂಜಪ್ಪ ಪಶುಪಾಲನಾ ಸಂಸ್ಕೃತಿಯ ಆರಾಧ್ಯದೈವ ಹಾಗೂ ಸಾಂಸ್ಕೃತಿಕ ವೀರನಾಗಿ ಪ್ರಸಿದ್ಧನಾಗಿದ್ದಾನೆ.

ಈ ಮೇಲಿನವರಲ್ಲದೆ ಯಲ್ಲಾ ಲಿಂಗಮಹಾರಾಜರು, ಗೊಲ್ಲಾಳೇಶ್ವರ, ಕರಿಸಿದ್ದೇಶ್ವರ, ಚಂದಪ್ಪ, ಹುಲ್ಲಪ್ಪ, ಚಿಂಚಲಿ ಮಾಯಕ್ಕ, ಇಟಗಿ ಭೀಮಾಂಬಿಕೆ, ಸಜ್ಜಲಗುಡ್ಡದ ಶರಣಮ್ಮ ಮುಂತಾದವರೂ ಕೂಡ ಕುರುಬ ಸಮುದಾಯದ ಆರಾಧ್ಯದೈವ ಮತ್ತು ಸಾಂಸ್ಕೃತಿಕ ವೀರರಾಗಿದ್ದಾರೆ.

೩. ಕುರುಬರ ಕಲೆಗಳು-ಸಾಂಸ್ಕೃತಿಕ ನೆಲೆಗಳು

ಕರ್ನಾಟಕದಲ್ಲಿ ಕುರುಬ ಸಮುದಾಯ ಸಾಮಾಜಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಶ್ರೀಮಂತವಾಗಿದೆ. ಅನಾದಿ ಕಾಲದಿಂದ ಹರಿದು ಬಂದಿರುವ ಸಮಸ್ತ ಜೀವನ ವಿಧಾನದ ಅನುಭವ ಸಾರವಾದ ಜಾನಪದ ಕಲೆಗಳು ಜೀವಂತಿಕೆಯಿಂದ ಕೂಡಿರುತ್ತವೆ. ಪ್ರಾದೇಶಿಕವಾದ, ವಿಶಿಷ್ಟವಾದ ಮತ್ತು ಸಮೃದ್ಧವಾದ ಕಲೆಗಳನ್ನು ಸಮುದಾಯವೊಂದು ಜತನದಿಂದ ಕಾಪಾಡಿಕೊಂಡು ಬರುತ್ತದೆ. ಹಾಗೆ ಕುರುಬ ಸಮುದಾಯದಲ್ಲಿ ಡೊಳ್ಳುಕುಣಿತ, ದಟ್ಟಿಕುಣಿತ, ಗೊರವರ ಕುಣಿತ, ದಳವಾಯಿ ಅಥವಾ ಬಿಂಗಯ್ಯ ಕುಣಿತ, ಚೌಡಿಕೆ, ವೀರಗಾರರ ಕುಣಿತ, ಪಂಜು ದೀವಟಿಗೆ ಸಲಾಮು ಟಗರುಕಾಳಗ, ಟಗರು ಜೋಗಿ ಇಂದಿಗೂ ಜೀವಂತವಾಗಿವೆ.

ಆರಾಧನೆ ಮತ್ತು ಆಚರಣೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಮತ್ತು ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮಮೀರಿ ಸಾರ್ವಜನಿಕ ಕಲೆಗಳಾದುದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆಯುವ ಕಲೆಗಳು ಸಮುದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿರುತ್ತವೆ.

ಡೊಳ್ಳುಕುಣಿತ

ಡೊಳ್ಳು ಎಂದರೆ ಗ್ರಾಮೀಣರಲ್ಲಿ 'ಹೊಟ್ಟೆ' ಎಂದರ್ಥ. ಹೊಟ್ಟೆ ಮೇಲೆ ಹೊತ್ತು ನುಡಿಸುವ ವಾದ್ಯವೇ ಡೊಳ್ಳು ಎಂಬ ಚರ್ಮವಾದ್ಯ. ಈ ವಾದ್ಯ ಹುಟ್ಟಿದ್ದಕ್ಕೆ ಪೌರಾಣಿಕ ಹಿನ್ನೆಲೆಯಿದೆ. ಇದೊಂದು ಕುರುಬ ಸಮುದಾಯದ ಉತ್ಕೃಷ್ಟಕಲೆ. ಭಕ್ತಿ ಮತ್ತು ಆರಾಧನೆ ಭಾರತೀಯ ಸಂಸ್ಕೃತಿಯ ಧಾರ್ಮಿಕ ಜೀವಾಳ. ಭಕ್ತಿಯ ಭಾವಪರವಶತೆಯಲ್ಲಿ ಭಕ್ತ ಮತ್ತು ದೇವರು ಎಂಬ ಪ್ರತ್ಯೇಕತೆ ದೂರಸರಿದು ಅದ್ವೈತ ಭಾವನೆ ಮೂಡುತ್ತದೆ. ಈ ಹಾಡುಗಳಲ್ಲಿ ಕಂಡು ಬರುವ ಮುಖ್ಯ ಅಂಶವೆಂದರೆ ದೈವ ಮತ್ತ ಹಾಡುವ ಭಕ್ತರ ಆತ್ಮೀಯತೆ. ಆರಾಧನಾ ಮನೋಭಾವದಿಂದ ಹಾಡುವವರನ್ನು 'ಆಳುಮಕ್ಕಳು' ಎಂದು ಕರೆಯಲಾಗುವುದು.

ಡೊಳ್ಳು ಕುರುಬರ ವಾದ್ಯ. ಹಿಂದೆ ಡೋಳ್ಳಾಸುರನೆಂಬ ರಾಕ್ಷಸನು ಶಿವನನ್ನು ಕುರಿತು ತಪಸ್ಸು ಮಾಡಲು ಶಿವನು ಪ್ರತ್ಯಕ್ಷನಾಗಿ ಏನು ವರಬೇಕು ಬೇಡು ಎನ್ನುತ್ತಾನೆ. ಅದಕ್ಕೆ ಆ ರಾಕ್ಷಸ 'ಶಿವನನ್ನೇ ತಾನು ನುಂಗುವಂತೆ ವರ ಬೇಡಿದನು'. ಶಿವನು ತಥಾಸ್ತು ಎಂದು ಹೇಳಿ ನನಗೆ ಯಾವಾಗ ಹೊರಗೆ ಬಿಡುವೆ ಎಂದು ಮರು ಪ್ರಶ್ನೆಹಾಕುತ್ತಾನೆ. ಆಗ ರಾಕ್ಷಸ 'ಪಂಚರಾತ್ರಿ ಕೂಡಿದಾಗ' ಎಂದು ಉತ್ತರಿಸುತ್ತಾನೆ. ಪಂಚರಾತ್ರಿಗಳು ಕೂಡಿದಾಗಲೂ ಶಿವನನ್ನು ಹೊರಗೆ ಬಿಡಲಿಲ್ಲ. ಶಿವನಿಲ್ಲದೆ ಕೈಲಾಸ ತಲ್ಲಣಿಸಿತು. ಆಗ ವಿಷ್ಣು ಡೊಳ್ಳಾಸುರನನ್ನು ಕೊಂದು ಶಿವನಿಗೆ ಬಿಡುಗಡೆ ನೀಡುತ್ತಾನೆ.

ಶಿವನು ಯೋಗ ನಿದ್ರೆಯಲ್ಲಿರುವಾಗ ವಿಷ್ಣುವು ಶಿವನನ್ನು ಎಚ್ಚರಿಸುತ್ತಾನೆ. ಸತ್ತ ರಾಕ್ಷಸನ ಹೊಟ್ಟೆ ಎಲುಬಿನಿಂದ ಡೊಳ್ಳಕೊಳವೆ ಮಾಡಿ ಅದರ ಎರಡೂ ಬದಿಗೆ ಚರ್ಮ ಹೊದಿಸಿ ರಾಕ್ಷಸನ ಕರುಳಿನಿಂದ ಬಿಗಿದು ಡೊಳ್ಳು ಸಿದ್ಧಪಡಿಸಿದನು. ಅಲ್ಲದೆ ರಾಕ್ಷಸನ ಕೋರೆ ಹಲ್ಲಿನಿಂದ ಡೊಳ್ಳನ್ನು ಬಾರಿಸಿದಾಗ ಯೋಗನಿದ್ರೆಯ ಶಿವನು ಎಚ್ಚರವಾಗುತ್ತಾನೆ.

ಜನಪದ ಕಲೆಗಳಲ್ಲಿಯೇ 'ಗಂಡುಕಲೆ' ಎಂದು ಪ್ರಸಿದ್ಧವಾದುದು ಡೊಳ್ಳು ಕುಣಿತ. ಪುರುಷರಿಗೆ ಮೀಸಲಾಗಿದ್ದ ಕಲೆ. ಇತ್ತೀಚೆಗೆ ಸ್ತ್ರೀಯರಲ್ಲೂ ಈ ಕಲೆಯು ಅನಾವರಣಗೊಳ್ಳುತ್ತಿದೆ. ಸದೃಢ ಮೈಕಟ್ಟು ಮತ್ತು ಶಕ್ತಿಯುಳ್ಳ ಕಲಾವಿದರು ಮಾತ್ರ ಸಮರ್ಥವಾಗಿ ಪ್ರದರ್ಶಿಸಬಲ್ಲರು. ಉತ್ತರ ಕರ್ನಾಟಕದ ಬಹುಭಾಗ, ದಕ್ಷಿಣ ಕರ್ನಾಟಕ, ಮಧ್ಯಕರ್ನಾಟಕದಲ್ಲಿ ಇಲ್ಲದ ಈ ಕುಣಿತ ಹಬ್ಬ ಹರಿದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ದೇವರುಗಳ ಪೂಜಾ ಸಂದರ್ಭಗಳಲ್ಲಿ ಡೊಳ್ಳನ್ನು ಬಾರಿಸುತ್ತಾರೆ. ಕಲಾವಿದರಿಗೆ ವಯಸ್ಸಿನ ನಿರ್ಬಂಧವಿಲ್ಲ. ಆದರೆ ಮಡಿಯಿಂದಿರಬೇಕು.

ಕುರುಬ ಸಮುದಾಯದ ಧಾರ್ಮಿಕ ಮುಖಂಡನಿಗೆ ಡೊಳ್ಳು ಕಟ್ಟುವ ಮೊದಲ ಹಕ್ಕು. ಕಾಲಲ್ಲಿ ಗೆಜ್ಜೆ ಹಾಗೂ ದಿನನಿತ್ಯದ ಉಡುಪಿನಲ್ಲಿರುವ ಈತ ಸೊಂಟಕ್ಕೆ ಕಂಬಳಿ ಸುತ್ತಿ ಹಗ್ಗದಿಂದ ಡೊಳ್ಳನ್ನು ತನ್ನ ಸಹಚರರಿಂದ ಕಟ್ಟಿಸಿಕೊಳ್ಳುತ್ತಾನೆ. ನಂತರ ಕಲಾವಿದರು ಸೊಂಟಕ್ಕೆ ಕಂಬಳಿ ಸುತ್ತಿ ಡೊಳ್ಳನ್ನು ಬಿಗಿಸಿ ಕೊಳ್ಳುತ್ತಾರೆ. ಈರಗಾರ ದೇವರ ಮುಂದೆ ಮೂರುಬಾರಿ ಡೊಳ್ಳು ಬಾರಿಸಿ ನಂತರ ಜೋರಾಗಿ ಬಡಿಯಲು ಆರಂಭಮಾಡುತ್ತಲೇ ಇತರರೂ ಜೋರಿನಿಂದ ಡೊಳ್ಳು ಬಡಿಯುತ್ತಾರೆ. ಬಲಗೈ ಬಡಿತ 'ಬ್ರಹ್ಮದೊಡ್ಡಾಂವ' ಎಂಬ ಸದ್ದು ಮಾಡಿದರೆ ಎಡಗೈ ಪೆಟ್ಟು 'ಡಾಂವ್' ಎಂಬ ನಾದ ಹುಟ್ಟಿಸುತ್ತದೆ.

ಡೊಳ್ಳು ಕುಣಿತದಲ್ಲಿ ಹಲವು ಪ್ರಕಾರಗಳಿವೆ. ಕುಳಿತು ಬಾರಿಸುವುದು, ಲಾಗಹಾಕುವುದು, ಹಾರಿ ಬಾರಿಸುವುದು, ಮಂಡಿ ಬಡಿತ, ಮರಗಾಲು ಬಡಿತ, ಗಾಡಿಚಕ್ರದ ಬಡಿತ ಅಲ್ಲದೆ ಸಾಹಸದ ಬಡಿತ ಪ್ರದರ್ಶನ ಸಹ ನೀಡುತ್ತಾರೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ 'ಡೊಳ್ಳಿನ ಹಾಡು'ಗಳೆಂದು ಕರೆಯುವರು. ಪುರಾತನ ಕಾಲದಿಂದಲೂ ದೈವೀ ಆರಾಧನೆಯಾಗಿ ಬಂದಿರುವ ಈ ಕಲೆಯನ್ನು ಬೇರೆ ಸಂದರ್ಭಗಳಲ್ಲಿ ಬಾರಿಸಬಾರದೆಂಬ ನಂಬಿಕೆ ಈ ಜನರಲ್ಲಿದೆ. ಹೀಗಾಗಿ ಕುರುಬರ ಆರಾಧ್ಯ ದೈವವಾದ ಬೀರಲಿಂಗೇಶ್ವರ ದೇವರಿಗೆ ಡೊಳ್ಳು ಬಾರಿಸುವುದು ರೂಢಿಗತವಾಗಿ ಬಂದಿರುತ್ತದೆ.

ಗೊರವರ ಕುಣಿತ

ಕನ್ನಡ ನಾಡಿನ ದೈವಾರಾಧನೆಯ ಜನಪದ ಕಲೆಗಳಲ್ಲಿ ಗೊರವರ ಕುಣಿತಕ್ಕೆ ಮಹತ್ವದ ಸ್ಥಾನವಿದೆ. ಪರಶಿವನ ಅವತಾರಗಳಲ್ಲಿ ಒಂದಾದ ಮಲ್ಲಾರಿ ಅಥವಾ ಮೈಲಾರ ಲಿಂಗನ ಭಕ್ತರೆಂದೂ ಶಿವ ಭಿಕ್ಷುಗಳೆಂದು ಕರೆಯಲಾಗುವ ಗೊರವಯ್ಯಗಳು ನಡೆಸುವ ನಡೆನುಡಿ ಆಚಾರಗಳೇ ಗೊರವರ ಕುಣಿತದ ಮೂಲಧಾತು. ಗೊರವ, ಗಗ್ಗಯ್ಯ, ಗೊಗಯ್ಯ, ಗಡಬಡ್ಡಯ್ಯ, ಕಡಬಡ್ಡ, ಗ್ಯಾರಪ್ಪ, ಗೊರಪ್ಪ, ವ್ಯಾಘಪ್ಪ ಎಂಬೆಲ್ಲ ಪರ್ಯಾಯ ಹೆಸರುಗಳಿವೆ. ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿ ಪ್ರದರ್ಶಿಸುವ ವಿಶಿಷ್ಟ ಪ್ರಕಾರದ ಕಲೆಯೇ ಗೊರವರ ಕುಣಿತವಾಗಿದೆ. ದೃಶ್ಯ ಹಾಗೂ ಶ್ರವ್ಯಗಳೆರಡನ್ನೂ ಒಳಗೊಳ್ಳುವ ದೈವಾರಾಧನಾ ಕಲೆಯಾಗಿದೆ. ಇವರಲ್ಲಿ ಹತ್ತು ಹಲವು ಪರಂಪರೆಗಳನ್ನು ಕಾಣಬಹುದಾಗಿದೆ.

ಗೊರವ ದೀಕ್ಷೆಯನ್ನು ಪಡೆದ ವ್ಯಕ್ತಿಯು ಕೆಲವೊಂದು ನಿರ್ಬಂಧಗಳಿಂದ ಜೀವನ ಸಾಗಿಸಬೇಕು. ಅದ್ಭುತ ವೇಷಗಾರಿಕೆ, ಅಪರಿಮಿತ ಭಕ್ತಿಭಾವ, ವೀರಾವೇಶ ಹಾಗೂ ನಾಟಕೀಯ ನಡೆಗಳು ಗೊರವರ ಕುಣಿತದ ಪ್ರಧಾನ ಅಂಶಗಳು. ಹಸಿರು, ಕೆಂಪು, ನೀಲಿ ಮೊದಲಾದ ಬಣ್ಣಗಳ ಕಸೂತಿ ಚಿತ್ತಾರಗಳಿರುವ ಕೋರಿ ಅಂಗಿ ಎಂಬ ಕಂಬಳಿ ನಿಲುವಂಗಿ, ತಲೆಗೆ ದಟ್ಟಕೂದಲಿನ ಕರಡಿ ಚರ್ಮದ ಟೋಪಿ, ಬಟ್ಟೆಯ ಮುಂಡಾಸು ಭುಜಗಳಲ್ಲಿ ಹುಲಿಚರ್ಮದ ಭಂಡಾರ ಚೀಲ, ಕಂಚಿನ ಅಥವಾ ಮರದ ದೋಣಿ ಪಾತ್ರೆ, ಜೋಳಿಗೆ, ಕೊರಳಲ್ಲಿ ಕವಡೆಸರ, ಟೊಂಕದಲ್ಲಿ ಹೊಕ್ಕುಳ ಗಂಟೆ, ಕೈಗಳಲ್ಲಿ ಡಮರುಗ ಹಾಗೂ ಪಿಳ್ಳಂಗೋವಿ ಕಾಲುಗಳಲ್ಲಿ ಗೆಜ್ಜೆಸರ ಮೊದಲಾದವು ಗೊರವಯ್ಯಗಳ ಪ್ರಮುಖ ಅಲಂಕಾರಗಳು. ಅಲ್ಲದೆ ಹಣೆಗೆ ಭಂಡಾರ ಹಚ್ಚಿಕೊಳ್ಳುವುದು, ತ್ರಿಶೂಲ, ಸರ್ಪಾಕಾರದ ಮುರುಗಿ ಕೋಲು ಹಿಡಿಯುವುದು, ಮುಳ್ಳಿನ ಹಾವುಗೆಗಳ ಮೇಲೆ ನಿಲ್ಲುವುದು ಮುಂತಾದ ಸಾಂಪ್ರದಾಯಿಕ ವಿಧಿವಿಧಾನಗಳಿವೆ.

ಗೊರವಯ್ಯರ ಕುಣಿತಗಳಲ್ಲಿ ಪ್ರಮುಖವಾಗಿ ದೋಣಿಸೇವೆ, ಕಾರಣಿಕ ಹೇಳುವುದು, ಸರಪಳಿ ಹರಿಯುವುದು ಪ್ರಮುಖವಾದುವು. ಹಬ್ಬಹರಿದಿನಗಳು, ವಿವಾಹ, ಗೃಹ ಪ್ರವೇಶ, ಜಾತ್ರೆ, ಉತ್ಸವ, ದೀಕ್ಷಾ ಸ್ವೀಕಾರ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಮೈಲಾರಲಿಂಗನ ಭಕ್ತರು ದೋಣಿ ಸೇವೆ ಅಥವಾ ಒಗ್ಗಸೇವೆ ಮಾಡುತ್ತಾರೆ. ವಿಶಾಲವಾದ ಯಾವುದೇ ಸ್ಥಳದಲ್ಲಿ ಕರಿಕಂಬಳಿ ಗದ್ದುಗೆ ನಿರ್ಮಿಸಿ ಕಂಚಿನ ದೋಣಿ ಪಾತ್ರೆ ಇಟ್ಟು ಹಾಲು, ಹಣ್ಣು, ಸಕ್ಕರೆ, ತುಪ್ಪ ಮೊದಲಾದವನ್ನು ತುಂಬಿಸಿ ಗೊರವಯ್ಯಗಳು ಪಿಳ್ಳಂಗೋವಿ ಡಮರುಗಗಳ ಗತ್ತಿಗೆ ಕುಣಿಯಲಾರಂಭಿಸುತ್ತಾರೆ. ಬೀಜವಾಕ್ಯಗಳಾದ ಏಳುಕೋಟಿ ಮೈಲಾರಲಿಂಗನ ಸ್ತುತಿಪದ್ಯಗಳು, ಮಾಳವ್ವನ ಸ್ತುತಿಪದ್ಯಗಳನ್ನು ಹೇಳುತ್ತಾ ಸುತ್ತುಹಾಕುವರು.

ಕ್ರಮೇಣ ವಾದ್ಯವಾದನ ಹಾಗೂ ಹೆಜ್ಜೆ ಹಾಕುವ ಗತಿಯು ತೀವ್ರವಾಗುತ್ತಾ ಹೋದಂತೆ ಎಲ್ಲಾ ಗೊರವಯ್ಯಗಳು ಮಂಡಿಯೂರಿ ಕುಳಿತು ಮುಂದಕ್ಕೆ ಬಾಗಿ ದೋಣಿಯಲ್ಲಿ ತುಂಬಿಸಿದ್ದ ಪದಾರ್ಥಗಳನ್ನು ನೇರವಾಗಿ ಬಾಯಿಂದ ತಿನ್ನಲಾರಂಭಿಸುತ್ತಾರೆ. ಆಗ ಭಕ್ತರು ಆರಾಧ್ಯದೈವವಾದ ಮೈಲಾರ ಲಿಂಗನಿಗೆ ತಮ್ಮ ನೈವೇದ್ಯ ತಂದು ಹರಕೆ ಸಾರ್ಥಕವಾಯಿತು ಎಂದು ನಂಬಿ ಕೃತಾರ್ಥ ಭಾವ ಹೊಂದುವರು. ದೋಣಿ ಸೇವೆಯಲ್ಲಿ ಆವೇಶ ಭರಿತ ಗೊರವಯ್ಯರನ್ನು ಕಾಣಲಾಗುತ್ತದೆ.

ಗೊರವಯ್ಯಗಳು ಕೆಸರಿನ ನಡುವೆ ನಿಲ್ಲಿಸಿರುವ ಎಣ್ಣೆಸವರಿದ ನುಣುಪು ಕಂಬವನ್ನೇರಿ ಕಾರ್ಣಿಕ ನುಡಿಯುವರು. ಕಾಲೊಳಗೆ ತುಟಿಕ್ ಪಿಟಿಕೆನ್ನದೆ ಬಗನಿಗೂಟವನ್ನು ಬಡಿಸಿಕೊಳ್ಳುವರು. ಚಿಗರಿ ಮಿಣಿಗೆ ಗಂಡಗಾರಿ ಮುಳ್ಳುಗಳನ್ನು ಜೋಡಿಸಿ ಅದನ್ನು ಕಾಲಿನ ಮೀನ ಖಂಡಗಳ ಮೂಲಕ ಹಾಯಿಸಿ ಅತ್ತಿತ್ತ ಎಳೆದಾಡಿಸಿಕೊಳ್ಳುವರು. ದೀಪದ ಕಂಬಗಳ ಹರಿತವಾದ ಕಾಲುಗಳನ್ನು ಮುಂಗೈಗಳಲ್ಲಿರಿಸಿ ದೇವರಿಗೆ ಆರತಿ ಎತ್ತುವರು. ಬಾಯಿಗೆ ಬೀಗ ಜಡಿದುಕೊಳ್ಳುವರು. ಮುಳ್ಳುಹಾವುಗೆಗಳ ಮೇಲೆ ತಾಸುಗಟ್ಟಲೆ ನಿಲ್ಲುವರು. ಅತ್ಯಂತ ವಿಸ್ಮಯಕಾರಿಯಾದ ಪವಾಡಗಳು ಭಕ್ತರನ್ನು ದಂಗುಬಡಿಸುತ್ತವೆ. ಒಂದು ಕಾಲದಲ್ಲಿ ಧಾರ್ಮಿಕ ಆಚರಣೆ ಎನಿಸಿದ್ದ ಗೊರವರ ಕುಣಿತವು ಇಂದು ವೇದಿಕೆಗಳಲ್ಲಿ ವಿಜೃಂಭಿಸುತ್ತಿದೆ. ಅಂತೂ ಗೊರವರ ಕುಣಿತವು ಕುರುಬರ ಸಾಂಪ್ರದಾಯಿಕ ಕಲೆ ಎಂಬುದರಲ್ಲಿ ಎರಡು ಮಾತಿಲ್ಲ.

ಈರಗಾರರ ಕುಣಿತ

ಬೀರದೇವರ ಪರಿವಾರದಲ್ಲಿ ಈರಗಾರರು ಪ್ರಮುಖ. ಇವರು ದಳವಾಯಿಯಂತೆ ದೀಕ್ಷೆಪಡೆದು ದೇವರ ಹೆಸರಿನಲ್ಲಿ ಈರಿಕೆ ಮಾಡಿಕೊಳ್ಳಬೇಕು. ಇವರು ಧಾರ್ಮಿಕ ಸೇವಾ ನಿರತ ವ್ಯಕ್ತಿಗಳು. ದೇವರ ವಾರದ ದಿನಗಳಲ್ಲಿ, ಹಬ್ಬಗಳಲ್ಲಿ, ದಳವಾಯಿಗೆ ಮೈದುಂಬುವ ಸಮಯದಲ್ಲಿ ಈರಿಕೆ ಮಾಡಿಕೊಳ್ಳುತ್ತಾರೆ. ಇವರಲ್ಲಿ ಎರಡು ಬಗೆಯ ಈರಗಾರರಿದ್ದು ಗ್ರಾಮದೇವತೆಗಳ ಈರಗಾರರೆಂದೂ, ಗಂಡುದೇವರುಗಳ ಈರಗಾರರೆಂದು ಎರಡು ಬಗೆ.

ಈರಗಾರರ ಹಿನ್ನೆಲೆಯಲ್ಲಿ ಅಡಗಿರುವುದು ಹಿಂಸಾ ಆರಾಧನಾ ಪದ್ಧತಿ. ರಾತ್ರಿಯಿಂದ ಬೆಳಗಿನವರೆಗೆ ಮೆರವಣಿಗೆ ಮುಗಿದ ಬಳಿಕ 'ಧೂಳುಮರಿ' ಸಿಗಿಯಲೆಂದೇ ನಿಯುಕ್ತರಾದವರು. ಇವರು ಮೈಲಾರಲಿಂಗನ ಆರಾಧಕರು ಅಥವಾ ಬೀರೇಶ್ವರನ ಒಕ್ಕಲಾಗಿದ್ದು ಏಳೆಂಟು ಜನರಿರುತ್ತಾರೆ. ಇವರು ಪ್ರಧಾನವಾಗಿ ಎರಡು ಹಿಂಸಾ ಮಾರ್ಗಗಳನ್ನು ಅನುಸರಿಸುತ್ತಾರೆ. ೧. ಸ್ವಹಿಂಸೆ ೨. ಪ್ರಾಣಿಹಿಂಸೆ. ಸ್ವಹಿಂಸೆಯಲ್ಲಿ ಇವರು ದೇವರನ್ನು ಸಂತೃಪ್ತಿಗೊಳಿಸಿ ಒಳಿತನ್ನು ಪಡೆಯಲು ಇವರು ನಾಲ್ಕು ಕಬ್ಬಿಣದ ಸಲಾಕೆಯಿಂದ ಅಥವಾ ಕತ್ತಿಗಳಿಂದ ಕೈಮೇಲೆ ಎತ್ತಿ ಜೋರಾಗಿ ಮೈಗೆ ಹೊಕ್ಕುಳಿಗೆ ಹೊಡೆದುಕೊಳ್ಳುತ್ತಾರೆ. ಇವರ ವೇಷಭೂಷಣ ಆಧುನಿಕತೆಗೆ ಹೊಂದಿಕೊಂಡಂತೆ ಕಂಡುಬರುತ್ತಿದೆ.

ಬಲಿ ಆರಾಧನಾ ಪದ್ಧತಿ ಬೆಳೆದು ಬಂದಿರುವ ಬಗೆಯು ಕುತೂಹಲಕಾರಿಯಾದುದು. ತಮ್ಮ ಕುರಿ, ಕುರಿಮಂದೆಯಲ್ಲಿ ಕಾಲುಬಾಯಿ ರೋಗ ಕಾಣಿಸಿಕೊಂಡರೆ ಇಲ್ಲವೆ ತಮ್ಮ ಕಷ್ಟ ಪರಿಹರಿಸಿದರೆ ಕುರಿಮರಿಯನ್ನು ದೇವರಿಗೆ ಬಿಡುವುದಾಗಿ ಹರಕೆ ಹೊರುತ್ತಾರೆ. ಅದರಂತೆ ಕುರಿಗಳಿಗೆ ಕಾಯಿಲೆ ವಾಸಿಯಾದರೆ ತಮ್ಮ ಬಯಕೆ ಈಡೇರಿದರೆ ಕುರಿಯನ್ನು ದೇವರಿಗೆ ಬಿಡುತ್ತಾರೆ. ಹೀಗೆ ದೇವರಿಗೆ ಬಿಟ್ಟ ಕುರಿಯ ಕತ್ತಿಗೆ ಬಾಯಿ ಹಾಕಿ ರಕ್ತ ಹೀರುವುದನ್ನು ಗಾವು ಸಿಗಿಯುವುದು ಎನ್ನುತ್ತಾರೆ. ಸ್ವಹಿಂಸೆಯಲ್ಲಿ ಮೈಯಲ್ಲಿ ರಕ್ತಬಂದರೆ ದೇವರೆ ಬಗ್ಗೆ ನಿಷ್ಠೆ ಕಡಿಮೆಯಾಗಿದೆಯೆಂದು ತಿಳಿಯುತ್ತಾರೆ. ಇವರು ಇರುವವರೆಗೂ ಪಟ್ಟಕ್ಕೆ ಯಾವುದೇ ಭಂಗ ಬರದಂತೆ ಬದುಕಬೇಕಾದ ನಿರ್ಬಂಧವು ಪ್ರಮುಖವಾದುದು.

ದೀವಟಿಗೆ ಸಲಾಮು

ದೀವಟಿಗೆ ಎಂದರೆ ದೇವರದೀವ, ದೇವಸ್ಥಾನದಲ್ಲಿ ದೇವರಿಗೆ ಬೆಳಗುವ 'ಕಕ್ಕಡ ದೀಪ' ಎಂಬ ಹೆಸರೂ ಇದೆ. ಇದು ಉತ್ಸವ, ಜಾತ್ರೆ, ಮೆರವಣಿಗೆ ಸಂದರ್ಭಗಳಲ್ಲಿ ಇವುಗಳ ಬಳಕೆಯಿತ್ತು. ದೇವರ ಉತ್ಸವ, ಮೆರವಣಿಗೆಗಳಲ್ಲಿ ಇಂದಿನ ಹಾಗೆ ವಿದ್ಯುದ್ದೀಪಗಳ ಬಳಕೆ ಇಲ್ಲದ ಕಾಲದಲ್ಲಿ ಪಂಜಿನ ದೀಪದ ಮೊರೆ ಹೋಗಬೇಕಾದುದು ಅನಿವಾರ್ಯವಾಗಿತ್ತು. ಊರಬೀದಿಗಳಲ್ಲಿ ಮೆರವಣಿಗೆ ಸಾಗುವಾಗ ದೇವರ ದರ್ಶನ ಮಾಡಿಸಲು ಪಂಜುಗಳನ್ನು ಬಳಸಲಾಗುತ್ತದೆ. ಇದು ದೀವಟಿಗೆ ಸಲಾಮಿನ ಸ್ವರೂಪ. ಇಂದಿನ ಜಗಮಗಿಸುವ ದೀಪಗಳಿದ್ದರೂ ಬಳಕೆಯಲ್ಲಿರುವುದು ವಿಶೇಷ.

ದಟ್ಟಿಕುಣಿತ

'ದಟ್ಟಿ' ಎಂದರೆ ಚಿಕ್ಕ ಸೀರೆ ಎಂದರ್ಥ. ಈ ಕುಣಿತದಲ್ಲಿ ಪಾಲ್ಗೊಳ್ಳುವ ಪುರುಷರು ಉದ್ದನೆಯ ಪೈಜಾಮ ಇಲ್ಲವೆ ಚೊಣ್ಣವನ್ನು ತೊಟ್ಟು ಅದರ ಮೇಲೆ ಸೊಂಟದಿಂದ ಮೊಣಕಾಲಿನವರೆಗೆ ನೆರಿಗೆ ಮಾಡಿದ ಕೆಂಪು ಅಥವಾ ಹಸಿರು ಬಣ್ಣದ ಈ ಚಿಕ್ಕ ಸೀರೆಯನ್ನು ತೊಡುತ್ತಾರೆ. ಇದು ನೋಡಲು ಆಕರ್ಷಕವಾಗಿದ್ದು ಅದೇ ಬಣ್ಣದ ಕೆಂಪು ನಿಲುವಂಗಿ, ಮೈಸೂರು ಪೇಟ, ಅದಕ್ಕೆ ಸಿಕ್ಕಿಸಿದ ನವಿಲುಗರಿ ಕುತ್ತಿಗೆಯಿಂದ ಕೆಳಗೆ ಇಳಿಬಿಟ್ಟ ಕೆಂಪಂಚಿನ ದೊಡ್ಡ ದೋತ್ರ ಮುಖ ಹಣೆಯ ಮೇಲೆ ಭಂಡಾರ, ಕೊರಳಿನಲ್ಲಿ ಮುತ್ತಿನ ಹಾರ, ಸೊಂಟದ ಪಟ್ಟಿ, ಕಾಲಿನ ಗೆಜ್ಜೆಗಳು, ಕುಣಿತದ ಕಲಾವಿದನಿಗೆ ವಿಶೇಷ ಮೆರುಗನ್ನು ತಂದು ಕೊಡುತ್ತವೆ. ಈ ಕುಣಿತದಲ್ಲಿ ನಾಲ್ಕೈದು ಜನರಿಂದ ಆರಂಭವಾಗಿ ಇಪ್ಪತ್ತೈದರಿಂದ ಮೂವತ್ತು ಜನರವರೆಗೆ ಪಾಲ್ಗೊಳ್ಳುತ್ತಾರೆ. ಇದಕ್ಕೆ ಪೌರಾಣಿಕ ಆಯಾಮವಿದ್ದು ಸೀರೆಯ ಪ್ರತೀಕವಾಗಿ ಉಳಿದಿದ್ದರೂ ಕೂಡ ದುಷ್ಟಶಕ್ತಿಯ ದಮನಕ್ಕಾಗಿ ಸಾಕ್ಷಾತ್ ಮಹಾದುರ್ಗಿಯ ಅವತಾರವೆತ್ತಿದ್ದರ ಪ್ರತಿಫಲವೇ ದಟ್ಟಿಕುಣಿತವಾಗಿದೆ.

ಕೊರಳಿನಿಂದ ಎಡಬಲಬದಿಗೆ ಬರುವ ಹಾಗೆ ದಡಿಧೋತರವನ್ನು ಸಿಕ್ಕಿಸಿಕೊಂಡು, ಎರಡೂ ಕೈಗಳಲ್ಲಿ ಕೆಂಪು ವಸ್ತ್ರಗಳನ್ನು ಹಿಡಿಯಲು ತಯಾರಾಗುತ್ತಾರೆ. ಈ ವಸ್ತ್ರಗಳನ್ನು ತಂಡದ ಹಿರಿಯ ಕುಣಿಯುವವರಿಗೆ ಕೊಟ್ಟು ಪ್ರತಿಯೊಬ್ಬರ ಹಣೆಗೆ ಭಂಡಾರ ಹಚ್ಚುತ್ತಾನೆ. ಅವನು ತಿರುಗಿ ಆ ಹಿರಿಯನಿಗೆ ನಮಸ್ಕರಿಸುತ್ತಾನೆ. ಕೈಪಟ್ಟು, ತಾಳ, ಸನಾದಿ, ಕೊಳಲು ವಾದಕರಿಗೆ ಕುಣಿತದವರಂತೆ ವೇಷಭೂಷಣವಿದ್ದು ಕರವಸ್ತ್ರ ಮಾತ್ರ ಇರುವುದಿಲ್ಲ. ಪ್ರದರ್ಶನಕ್ಕೆ ಹೊರಡುವ ಮೊದಲು ಒಂದು ನಿಮಿಷ ಆದಿಗತ್ತುಬಾರಿಸಿ ಸಾಲಾಗಿ ಹೊರಡುತ್ತಾರೆ. ಈ ಆಟವು ಮೊದಲಿಗೆ ಮಳೆತರಿಸುವ ಆಟವಾಗಿಯೂ ಪ್ರದರ್ಶನವಾಗುತ್ತಿತ್ತು. ಇದರ ಮೂಲ ನೆಲೆಯು ಗೋಕಾಕ್ ಆಗಿದ್ದು ನಂತರ ಎಲ್ಲೆಡೆಯೂ ಪಸರಿಸಿದೆಯಾದರೂ ಮೊದಲಿನ ರೀತಿಯಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಎಲ್ಲಾ ಜನಪದ ಕಲೆಗಳಂತೆ ದಟ್ಟಿಕುಣಿತವು ಮರೆಯಾಗುತ್ತಿರುವುದು ವಿಷಾದನೀಯ.

ಇವಲ್ಲದೆ ಕುರುಬಸಮುದಾಯದಲ್ಲಿ ಬಿಂಗಯ್ಯ ಅಥವಾ ದಳವಾಯಿ ಕುಣಿತ, ಟಗರ ಜೋಗಿ ಕುಣಿತ, ಟಗರಕಾಳಗ, ನಂದಿಧ್ವಜಕುಣಿತ, ಪೂಜಾಕುಣಿತ, ವೀರಗಾಸೆ ಕುಣಿತಗಳೂ ಕುರುಬರು ಪ್ರದರ್ಶನ ಮಾಡುತ್ತಿದ್ದ ಸಾಂಪ್ರದಾಯಿಕವಾದ ಉತ್ಕೃಷ್ಟವೆನಿಸುವ ಕಲೆಗಳಾಗಿದ್ದವು. ಇಂತಹ ಅನೇಕ ಜನಪದ ಕಲೆಗಳು ಕುರುಬರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅಭಿವ್ಯಕ್ತಗೊಳಿಸುತ್ತಿದ್ದವು. ಜನರಲ್ಲಿ ಮನೋರಂಜನೆಯ ಉದ್ದೇಶ ಅಲ್ಪವಾಗಿದ್ದು ದೈವಾರಾಧನೆಯ ಸ್ವರೂಪಕ್ಕೆ ಹೆಚ್ಚು ಮಹತ್ವವಿರುತ್ತಿದ್ದುದು ಕಂಡುಬರುತ್ತದೆ. ಆದರೆ ಆಧುನಿಕತೆಯ ಪ್ರವೇಶದ ಜೊತೆಗೆ ಬಂದ ವಿಶಿಷ್ಟ ಎಲೆಕ್ಟ್ರಾನಿಕ್ ಮಾಧ್ಯಮಗಳು ಇವುಗಳ ಅಸ್ತಿತ್ವವನ್ನು ಅಲುಗಾಡಿಸ ಹತ್ತಿವೆ. ಆದರೆ ಸಾಂಸ್ಕೃತಿಕ ಅಭಿವ್ಯಕ್ತಿಯಾದ ಇವುಗಳ ಸತ್ವ ಮಾತ್ರ ಇಂದಿಗೂ ಜೀವಂತವಾಗಿ ಉಳಿದಿರುವುದು ಜನಪದದ ಬದುಕಿನ ದ್ಯೋತಕವಾಗಿವೆ.

ಕುರುಬರ ಸಾಂಸ್ಕೃತಿಕ ನೆಲೆಗಳು ಕರಾವಳಿಯನ್ನು ಹೊರತುಪಡಿಸಿ ಉಳಿದೆಲ್ಲ ಕರ್ನಾಟಕದ ಭಾಗಗಳಲ್ಲಿ ಕಂಡುಬರುತ್ತದೆ. ಈ ನೆಲೆಗಳು ಸ್ಥಳನಾಮಗಳು ಮಾತ್ರವಾಗಿರದೆ ದೈವೀಭಾವದ ಕ್ಷೇತ್ರಗಳಾಗಿಯೂ ಪ್ರಸಿದ್ಧಿ ಪಡೆದಿವೆ. ಒಂದು ಸಮುದಾಯದ ಸಾಂಸ್ಕೃತಿಕ ಕೇಂದ್ರಗಳು ಆಯಾ ಸಮುದಾಯದ ಚರಿತ್ರೆಯನ್ನು ಅರಿಯಲು ಇರುವ ಪ್ರಮುಖ ಆಕರಗಳು. ಕುರುಬ ಸಮುದಾಯವು ಇಂತಹ ಹಲವು ಸಾಂಸ್ಕೃತಿಕ ಕೇಂದ್ರಗಳನ್ನೊಳಗೊಂಡಿದೆ. ಅಂತಹ ಜನಪ್ರಿಯತೆ ಪಡೆದ ಸ್ಥಳದಲ್ಲಿ 'ಸರೂರು' ಪ್ರಮುಖವಾದುದು. ಕುರುಬರ ಗುರು ಒಡೆಯರ ಮೂಲಕೇಂದ್ರವಾಗಿದೆ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಿಂದ ಹದಿಮೂರು ಕಿಲೋಮೀಟರ್ ದೂರದಲ್ಲಿದೆ. ಶಾಂತಮುತ್ತಯ್ಯನ ಕಾರ್ಯಕ್ಷೇತ್ರ. ಕರ್ನಾಟಕದ ಒಡೆಯರು ಒಮ್ಮೆಯಾದರೂ ಜೀವನದಲ್ಲಿ ಭೇಟಿ ನೀಡಬೇಕೆಂಬ ಬಯಕೆ ಹೊಂದಿದವರಾಗಿದ್ದಾರೆ. ನಮ್ಮ ಕುಲದ ಮೂಲಸ್ಥಳ ಪವಿತ್ರಸ್ಥಳ ಸರೂರು ಎನ್ನುವುದು ಗುರು ಒಡೆಯರುಗಳ ನಂಬಿಕೆ.

ಕರ್ನಾಟಕದಲ್ಲಿ ಕುರುಬರ ಕುಲಗುರುಗಳ ನೆಲೆಯಲ್ಲಿ ಬಿಜಾಪುರ ತಾಲೂಕಿನಲ್ಲಿರುವ 'ಅರಕೇರಿ'ಯೂ ಒಂದು. ಅರಕೇರಿ ಕೇಂದ್ರದಲ್ಲಿ ಗುರುಗೌರಿ ಸೋಮಲಿಂಗನ ಮಾರ್ಗದರ್ಶನದಲ್ಲಿ ಅಮ್ಮೋಗಿ ಒಡೆಯರ ಸಂಪ್ರದಾಯ ಮೈತಳೆದಿದೆ. ಇದರಂತೆ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಒಂದು ಗ್ರಾಮ 'ಕೊಣ್ಣೂರು' ಜಮಖಂಡಿಯಿಂದ ಪೂರ್ವಕ್ಕೆ ಸುಮಾರು ಹನ್ನೆರಡು ಕಿಲೋಮೀಟರ್ ಅಂತರದಲ್ಲಿದೆ. ಈ ಕ್ಷೇತ್ರವು ಶ್ರೀಕರಿಸಿದ್ದೇಶ್ವರ ಕಾರ್ಯಕ್ಷೇತ್ರ. ಈ ದೇವರ ಇನ್ನೊಂದು ಸನ್ನಿಧಿ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ 'ಅಲಕನೂರು'. ಹಾರೋಗೇರಿಯಿಂದ ಐದು ಕಿಲೋಮೀಟರ್ ಅಂತರದಲ್ಲಿದೆ. ಇಲ್ಲಿನ ಕರಿಸಿದ್ದೇಶ್ವರ ದೇವಾಲಯ ಎರಡು ಎಕರೆಯಷ್ಟು ವಿಸ್ತೀರ್ಣ ಹೊಂದಿರುವುದರಿಂದ ಕರಿಸಿದ್ಧನ ಅರಮನೆಯೆಂದೇ ಕರೆಯಲಾಗುತ್ತದೆ.

ಕುರುಬರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ 'ಚಿಂಚಲಿ'ಯೂ ಒಂದಾಗಿದೆ. ಈ ಪ್ರದೇಶದಲ್ಲಿ ನೆಲಸಿರುವ ಚಿಂಚಲಿ ಮಾಯಮ್ಮ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸ್ತ್ರೀ ಶಕ್ತಿ ನೆಲೆಯೂ ಆಗಿದೆ. ಚಿಂಚಲಿಯ ಊರ ಹೊರಗಡೆಯಿರುವ ಹಾಳು ಮಣ್ಣಿನ ದಿಬ್ಬದ ಮೇಲೆ

ಕಲ್ಲಿನಿಂದ ಕಟ್ಟಿದ ಮಾಯಕ್ಕನ ಗುಡಿಯಿದೆ. ಕುರುಬರ ಸಾಂಸ್ಕೃತಿಕ ನಾಯಕರಲ್ಲಿ ಒಬ್ಬನಾದ ಮಾಳಿಂಗರಾಯನು ನೆಲಸಿದ ಗ್ರಾಮವೇ 'ಹುಲಿಜಂತಿ'. ಸೊಲ್ಲಾಪುರ ಜಿಲ್ಲೆಯ ಮಂಗಳವೇಡೆ ತಾಲೂಕಿನ ಈ ಗ್ರಾಮ ತಾಲೂಕು ಸ್ಥಳದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿದೆ. ಮಾಳಿಂಗರಾಯ ತನ್ನ ಗುರು ಬೀರಲಿಂಗನ ಇಚ್ಛೆಯಂತೆ ಹುಲಿಯ ಹಾಲಿನ ಗಿಣ್ಣವನ್ನು ತಂದು ಕೊಟ್ಟ ಕಾರಣವಾಗಿ ಈ ಸ್ಥಳಕ್ಕೆ 'ಹುಲಿಜಂತಿ' ಎಂಬ ಹೆಸರು ಬಂದುದು ಐತಿಹ್ಯ. ಇದಕ್ಕೆ ಪೂರ್ವದಲ್ಲಿ ಜಾಗೃತಿಪುರವೆಂಬ ಹೆಸರೂ ಇದ್ದಿತು. ಜಮಖಂಡಿಯಿಂದ ಆಗ್ನೇಯ ದಿಕ್ಕಿಗೆ ಹದಿನೆಂಟು ಕಿಲೋಮೀಟರ್ ಅಂತರದಲ್ಲಿ ಇರುವ ಕ್ಷೇತ್ರವೇ ಮುಂಡಗನೂರು. ಮಾಳಿಂಗರಾಯನು ಈ ಗ್ರಾಮದೇವತೆಯಾಗಿ ಪ್ರಸಿದ್ಧಿಯನ್ನು ಪಡೆದಿದ್ದಾನೆ. ಕೃಷ್ಣಾನದಿ ಸಮೀಪದಲ್ಲಿರುವ ಈ ಗ್ರಾಮದ ಹೊರವಲಯದಲ್ಲಿ ಸಮತಟ್ಟಾದ ಎತ್ತರ ಪ್ರದೇಶದಲ್ಲಿ ಮೂಲ ಗುಡಿಯಿದೆ.

ಕುರುಬರ ಆರಾಧ್ಯದೈವವಾದ ಮೈಲಾರಲಿಂಗನ ಎರಡು ಪ್ರಧಾನ ಕ್ಷೇತ್ರಗಳು 'ಹಿರೇಮೈಲಾರ' ಮತ್ತು 'ದೇವರಗುಡ್ಡ' ಹಿರೇಮೈಲಾರವು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನಲ್ಲಿದೆ. ಗುತ್ತಲದಿಂದ ಎಂಟು ಕಿಲೋಮೀಟರ್ ಅಂತರದಲ್ಲಿದೆ. ಇದರ ಉತ್ತರ ಬದಿಗೆ ದಿಬ್ಬವೊಂದಿದ್ದು ಅಲ್ಲಿ ಮುಖ್ಯ ದೇವಾಲಯ ನಿರ್ಮಿತವಾಗಿದೆ. ದೇವರಗುಡ್ಡ ಕ್ಷೇತ್ರವು ಹಿರೇಮೈಲಾರದಿಂದ ಸುಮಾರು ಹದಿನೈದು ಕಿಲೋಮೀಟರ್ ಅಂತರದಲ್ಲಿದೆ. ಈ ಊರಿನ ಪೂರ್ವದಲ್ಲಿ ದೇವಾಲಯದ ಅವಶೇಷಗಳು ಕಂಡುಬರುತ್ತವೆ.

ಪುರಾಣಗಳಿಗೂ ಧಾರ್ಮಿಕ ಕ್ಷೇತ್ರಗಳಿಗೂ ಅವಿನಾಭಾವ ಸಂಬಂಧವಿರುತ್ತದೆ. ಅಂತಹ ಅವಿನಾಭಾವ ಸಂಬಂಧ ಹೊಂದಿರುವ ಸ್ಥಳ 'ಮಣ್ಣೇರಿಹಾಳ'. ಮಲ್ಲಾರಿಯು ಮಣಿಕಾಸುರನನ್ನು ವಧೆ ಮಾಡಿದ್ದರಿಂದ ಆ ಸ್ಥಳಕ್ಕೆ ಮಣ್ಣೇರಿಹಾಳ ಎಂದು ಕರೆಯುವ ಪ್ರತೀತಿಯಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಿಂದ ಪಶ್ಚಿಮದಿಕ್ಕಿಗೆ ಐದು ಕಿಲೋಮೀಟರ್ ದೂರದಲ್ಲಿರುವ ಚಂದಪ್ಪನ ಮೂಲನೆಲೆಯಾಗಿದೆ. ಅಲ್ಲದೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಪಶ್ಚಿಮ ದಿಕ್ಕಿಗೆ ಸುಮಾರು ಮೂವತ್ತು ಕಿಲೋಮೀಟರ್ ಅಂತರದಲ್ಲಿ ಹುಲ್ಲಪ್ಪನ ನೆಲೆಯಾದ 'ಗುಡೂರು' ಇದೆ. 'ಬಂಕಾಪುರ'ವು ಹಾಲುಮತದ ಪ್ರಾಚೀನ ನೆಲೆಗಳಲ್ಲಿ ಒಂದಾಗಿದ್ದು ಕುರುಬ ಕುಲದ ಮೂಲಪುರುಷರಾದ ಮುದ್ದಪ್ಪ ಮುದ್ದುಗೊಂಡರ ಮೂಲನೆಲೆಯೆಂದು ಕಾವ್ಯಪುರಾಣಗಳು ತಿಳಿಸುತ್ತವೆ. ಇಲ್ಲಿ ರೇವಣಸಿದ್ದೇಶ್ವರ (ಕೆಂಡದಮಠ) ಮಠವಿದೆ. 'ಗೋಲಗೇರಿ'ಯು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿದೆ. ಇದು ಪ್ರಸಿದ್ಧ ವಚನಕಾರನಾದ ಗೊಲ್ಲಾಳೇಶ್ವರನ ಮೂಲನೆಲೆ. ಗೋಲಗೇರಿಯಲ್ಲಿ ಈತನ ದೇವಸ್ಥಾನವಿದೆ. ಸಿಂದಗಿಯಿಂದ ಪೂರ್ವಕ್ಕೆ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿದೆ.

ಸಿದ್ಧರಾಮನ ಕಾರ್ಯಕ್ಷೇತ್ರವಾದ ದಕ್ಷಿಣ ಮಹಾರಾಷ್ಟ್ರದ ಜಿಲ್ಲಾ ಕೇಂದ್ರ 'ಸೊಲ್ಲಾಪುರ' ಅಥವಾ 'ಸೋಲಾಪುರ' ಕುರುಬರ ಸಾಂಸ್ಕೃತಿಕ ನೆಲೆ. ಶಿವಶರಣರಲ್ಲಿ ಅಗ್ರಗಣ್ಯ ವಚನಕಾರನೂ ಕರ್ಮಯೋಗಿಯೂ, ಸಿದ್ಧಪುರುಷನೂ ಆದ ಸಿದ್ಧರಾಮೇಶ್ವರನ ಜನ್ಮಭೂಮಿ, ಕರ್ಮಭೂಮಿ. ಕೊನೆಗೆ ನಿರ್ವಾಣಭೂಮಿಯೂ

ಆಗಿರುವುದು ವಿಶೇಷವಾಗಿದೆ. ಹಾಲುಮತ ಸಾಂಸ್ಕೃತಿಕ ನೆಲೆಗಳಲ್ಲಿ ಮತ್ತೊಂದು ಪ್ರಮುಖವಾದುದು ಬಾಗೆನಾಡಿನ 'ಕಂಕಣವಾಡಿ'. ಬೆಳಗಾವಿ ಜಿಲ್ಲೆಯ ರಾಯಭಾಗದ ದಕ್ಷಿಣಕ್ಕೆ ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ ಕಂಕಣವಾಡಿ ಹಾಲಸಿದ್ಧನಾಥನ ದೇವಸ್ಥಾನವಿರುವ ಸ್ಥಳ. ಬಾಗೆನಾಡು ಹಾಲುಮತ ಸಂಸ್ಕೃತಿಯ ತೊಟ್ಟಿಲು. ಇದು ಈ ತಾಲೂಕಿನ ದಕ್ಷಿಣಗಡಿಯ ಕೊನೆಯ ಗ್ರಾಮವಾಗಿದೆ.

ಕರ್ನಾಟಕದ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಒಂದು ಚಿಕ್ಕ ಗ್ರಾಮ 'ಖಾನಾಪುರವೂ' ಕುರುಬ ಸಮುದಾಯದ ಸಾಂಸ್ಕೃತಿಕ ಕ್ಷೇತ್ರ. ಇದು ದಕ್ಷಿಣ ಕಾಶಿ ಎನಿಸಿರುವ ಖಂಡೋಬ (ಮೈಲಾರ)ನ ಕ್ಷೇತ್ರವಾಗಿದೆ. ಬೀದರ್‌ನಿಂದ ಪಶ್ಚಿಮಕ್ಕೆ ಹನ್ನೆರಡು ಕಿಮೀ ದೂರದಲ್ಲಿಯೂ, ಭಾಲ್ಕಿಯಿಂದ ಇಪ್ಪತ್ತಾರು ಕಿ.ಮೀ. ದೂರದಲ್ಲಿದೆ. ಈ ಕ್ಷೇತ್ರಕ್ಕೆ ಪ್ರೇಮಪುರವೆಂದು ಪೌರಾಣಿಕರು ಕರೆಯುತ್ತಿದ್ದರು.

ದಕ್ಷಿಣ ಕರ್ನಾಟಕದ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ರಾಮಗಿರಿ ಹೋಬಳಿಯಿಂದ ನಾಲ್ಕು ಕಿ.ಮೀ.ದೂರದಲ್ಲಿರುವ ಕುರುಬರ ಸಾಂಸ್ಕೃತಿಕ ನೆಲೆ 'ತಾಳಿಕಟ್ಟೆ' ಹಿರಿಯಯ್ಯ ಅಥವಾ ಹಿರೇಬೀರದೇವರ ಪುಣ್ಯಕ್ಷೇತ್ರ ಈ ತಾಳಿಕಟ್ಟೆ. ಚಿಕ್ಕಮಗಳೂರಿನಿಂದ ಏಳು ಕಿ.ಮೀ. ದೂರದಲ್ಲಿರುವ 'ಅಂಬಳೆ'ಯು 'ಸಾವಿರ ಕುದುರೆ ಸರದಾರ'ನೆನಿಸಿದ ಬೀರದೇವರ ಕಾರ್ಯಕ್ಷೇತ್ರ. ಇದೇ ಜಿಲ್ಲೆಯ ಗಡಿಹಳ್ಳಿ ಹೊಸೂರು, ಸೊಲ್ಲಾಪುರ, ಮುಗುಳಿ, ಶಿವನಿ, ಚೀರನಹಳ್ಳಿ, ಅನುವನಹಳ್ಳಿ, ಅಜ್ಜಂಪುರ, ತಡಗ, ಆಸಂದಿ, ತರೀಕೆರೆ ಈ ಸ್ಥಳಗಳೆಲ್ಲವೂ ಕುರುಬರ ಆರಾಧ್ಯದೈವವಾದ ಬೀರದೇವರ ನೆಲೆಗಳು. ಇದೇ ರೀತಿ ಮಂಡ್ಯ ಹಾಗೂ ರಾಮನಗರಗಳಲ್ಲೂ ಕುರುಬರ ಸಾಂಸ್ಕೃತಿಕ ಕೇಂದ್ರಗಳಾದ ಆಲೂರು, ಕಿರಗೋಡು, ಹೊಸೂರುದೊಡ್ಡಿ, ಸಾತನೂರು, ಹೊಸಗೆರೆ, ಮಳವಳ್ಳಿ, ಉಮ್ಮಡಹಳ್ಳಿ, ಕಸಲಗೆರೆ, ಬೆಟ್ಟದಹಳ್ಳಿ ಪ್ರಮುಖವಾದವು. ಮೈಸೂರು ಜಿಲ್ಲೆಯ ತಾಂಡವಪುರ, ಕೊಡಿಯಾಲ ಪ್ರಮುಖ ಕುರುಬ ಸಮುದಾಯದ ಸಾಂಸ್ಕೃತಿಕ ಕ್ಷೇತ್ರಗಳು. ಬೆಂಗಳೂರು ಜಿಲ್ಲೆಯ ಸಂಪಿಗೆಹಳ್ಳಿ, ಬೆನ್‌ಸನ್ ಟೌನ್, ಅವೆನ್ಯೂ ರಸ್ತೆ, ರಾಣಾಸಿಂಗ್‌ಪೇಟೆ ಪ್ರಮುಖವಾದ ನೆಲೆಗಳಾಗಿವೆ.

ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲೂಕಿನ 'ಮುಡುಕುತೊರೆ'ಯೂ ಕುರುಬರ ಪ್ರಸಿದ್ಧ ಸಾಂಸ್ಕೃತಿಕ ನೆಲೆ. ದಕ್ಷಿಣದ ಮೈಲಾರ ಎನಿಸಿಕೊಂಡಿರುವ ಈ ಸ್ಥಳ ಕಾವೇರಿನದಿಯು ಪಶ್ಚಿಮದಿಂದ ಉತ್ತರಕ್ಕೆ ಹರಿದು, ಪೂರ್ವ ದಿಕ್ಕಿನ ಕಡೆದು ಕವಲೊಡೆದು (ಮುರಿದು) ದಕ್ಷಿಣಕ್ಕೆ ಪ್ರವಹಿಸುವುದರಿಂದ 'ಮುಡುಕುತೊರೆ' ಎಂಬ ಹೆಸರು ಪ್ರಾಪ್ತವಾಗಿದ್ದು ಮಲ್ಲಿಕಾರ್ಜುನ ದೇವಾಲಯವಿದೆ. ತಲಕಾಡಿನಿಂದ ಮೂರು ಕಿಲೋಮೀಟರ್ ದೂರದಲ್ಲಿದೆ.

'ಹಂಪಿ'ಯೂ ಕುರುಬರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಂದು ಮಾತ್ರವಲ್ಲದೆ ವಿಶ್ವ ಪರಂಪರೆಯ ತಾಣವಾಗಿದೆ. ವಿರೂಪಾಕ್ಷ ದೇವಾಲಯವಿರುವ ಈ ಸ್ಥಳವು ಪ್ರಾಚೀನ ಐತಿಹಾಸಿಕ ಪರಂಪರೆಯನ್ನೊಳಗೊಂಡಿದೆ. ಬೀರಪ್ಪನ ಪರಿಷ್ಕೃತ ರೂಪ ವೀರಭದ್ರ, ವಿರೂಪಾಕ್ಷ ಇವುಗಳ ಮೂಲವನ್ನು ಅವಲೋಕಿಸಿದರೆ

ಕುರುಬ ಸಮುದಾಯದ ಪ್ರಮುಖ ನೆಲೆ. ಅಂತೆಯೇ 'ಕಾಗಿನೆಲೆ' ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಹೋಬಳಿಕೇಂದ್ರ ಮಲೆನಾಡಿನ ಸೆರಗಿನಲ್ಲಿರುವ ಕಾಗಿನೆಲೆಯು ಉತ್ತರ ಕರ್ನಾಟಕದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದೆ. ಕನಕದಾಸರ ಆರಾಧ್ಯದೈವವಾದ ಆದಿಕೇಶವನ ನೆಲೆವೀಡು ಆಗಿರುವುದರಿಂದ ಕುರುಬರ ಸಾಂಸ್ಕೃತಿಕ ಕ್ಷೇತ್ರವಾಗಿದೆ ಈ ಕಾಗಿನೆಲೆ. ಹೀಗೆ ಕರ್ನಾಟಕದಾದ್ಯಂತ ಕುರುಬರಿರುವ ಊರುಗಳೆಲ್ಲವೂ ಪ್ರಾದೇಶಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದೊಂದು ಪ್ರಮುಖ ಕುರುಬರ ಕ್ಷೇತ್ರಗಳಾಗಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನಕ್ಕೆ ತೊಡಗಿದರೆ ಒಳಪಂಗಡಗಳ ಸಂಪ್ರದಾಯ, ಆಚರಣೆ, ನಂಬಿಕೆ, ಹೇಳಿಕೆ, ಹರಕೆಗಳೂ, ಇವರದ್ದೇ ಆಗಿರುವ ಜನಪದ ಕಲೆಗಳೂ, ಸಾಂಸ್ಕೃತಿಕ ದೈವಗಳು ಮತ್ತು ವೀರರೂ, ಸಾಂಸ್ಕೃತಿಕ ಕ್ಷೇತ್ರಗಳ ಅಧ್ಯಯನ ಇವೆಲ್ಲವುಗಳ ಮೂಲಕ ಮಾತ್ರವೇ ಒಳಪಂಗಡಗಳ ಅಧ್ಯಯನವು ಸಮಗ್ರವೆನಿಸುತ್ತದೆ.

ಕೊನೆಟಿಪ್ಪಣಿಗಳು

೧. ಸಂಸ್ಕೃತಿ: ಡಿ.ವಿ.ಗುಂಡಪ್ಪ, ಪುಟ ೭, ಕಾವ್ಯಾಲಯ, ಮೈಸೂರು, ಪ್ರ. ೧೯೬೯

೨. ಅದೇ, ಪುಟ ೬

೩. ಅದೇ, ಪುಟ ೧೧

೪. ಕಲ್ಚರ್ ಅಂಡ್ ಅನಾರ್ಕಿ: ಮ್ಯಾಥ್ಯೂ ಆರ್ನಾಲ್ಡ್

೫. ಕಲ್ಚರ್ ಇನ್ ಪ್ರೈವೇಟ್ ಅಂಡ್ ಪಬ್ಲಿಕ್ ಲೈಫ್: ಎಫ್.ಆರ್.ಕೊವೆಲ್.

೬. ನೋಟ್ಸ್ ಟವರ್ಡ್ಸ್ ದಿ ಡೆಫನಿಷನ್ ಆಫ್ ಕಲ್ಚರ್: ಟಿ.ಎಸ್.ಎಲಿಯಟ್, ಪುಟ ೧೩

೭. ಸಂಸ್ಕೃತಿ ವಿಕಾಸ: ಡಾ. ನಂ.ತಪಸ್ವೀಕುಮಾರ್, ಪುಟ ೪೭, ಪ್ರ. ೨೦೦೦

೮. ಅದೇ, ಪುಟ ೪೩

೯. ಪ್ರಿಮಿಟಿವ್ ಕಲ್ಚರ್: ಇ.ಬಿ.ಟೇಲರ್, ಪುಟ ೧

೧೦. ದಿ ಕಲ್ಚರ್ ಆಫ್ ಕಲ್ಚರ್: ರವೀಂದ್ರನಾಥ ಟಾಗೂರ್, ಪುಟ ೩೧, ಪ್ರ. ೧೯೨೧

೧೧. ಕರ್ನಾಟಕ ಸಂಸ್ಕೃತಿ: ದೇವುಡು ನರಸಿಂಹಶಾಸ್ತ್ರಿ ಪ್ರಸ್ತಾವನೆ, ಪುಟ ೩೧, ಪ್ರ. ೧೯೮೮

೧೨. ಕಲ್ಚರಲ್ ಆಂಥ್ರೋಪಾಲಜಿ: ಎಂ.ಜಿ.ಹರ್ಸ್ಕೊವಿಟ್ಸ್, ಪುಟ ೩೦೫, ಪ್ರ. ೧೯೫೫

೧೩. ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಡಾ. ಎಂ.ಚಿದಾನಂದಮೂರ್ತಿ, ಪುಟ ೧೭, ಸಪ್ನ ಬುಕ್ ಹೌಸ್, ಬೆಂಗಳೂರು, ಪ್ರ. ೨೦೦೨

೧೪. ಸಂಸ್ಕೃತಿ: ಲೇ. ಸಂಸ್ಕೃತಿ ಮತ್ತು ಸಮಾಜ ಜೀವನ, ಪಂಡಿತ ಬಿ.ಶಿವಮೂರ್ತಿಶಾಸ್ತ್ರಿಗಳು, ಪುಟ ೨೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು, ಪ್ರ. ೨೦೦೭

೧೫. ಅದೇ, ಪುಟ ೧, ಲೇ. ಸಂಸ್ಕೃತಿ ಎಂದರೇನು: ದೇವುಡು

೧೬. ಸಾಂಸ್ಕೃತಿಕ ಮುಖಾಮುಖಿ: ಡಾ. ರಂಗರಾಜು ವನದುರ್ಗ. ಪುಟ ೯, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ಪ್ರ. ೨೦೦೨

೧೭. ಪಂಪಭಾರತದ ಸಾಂಸ್ಕೃತಿಕ ಅಧ್ಯಯನ: ಡಾ. ಶಾಂತಿನಾಥ ದಿಬ್ಬದ
೧೮. ಜನಪದ ಹಾಲುಮತ ಮಹಾಕಾವ್ಯ: ಡಾ. ವೀರಣ್ಣದಂಡೆ. ಪುಟ ೪೮
೧೯. ಸಂಸ್ಕೃತಿಯ ಅಂತರ್‌ಶಿಸ್ತೀಯ ನೆಲೆಗಳು: ಡಾ. ಕೆ.ಕೃಷ್ಣಪ್ಪ. ಪುಟ ೨೬೩, ಸಂಯಮ ಪ್ರಕಾಶನ, ಬೆಂಗಳೂರು, ಪ್ರ ೨೦೦೮
೨೦. ಅದೇ, ಪುಟ ೨೬೩
೨೧. ಕರ್ನಾಟಕ ಬುಡಕಟ್ಟುಗಳು: (ಸಂ) ಡಾ. ಎಚ್.ಜೆ.ಲಕ್ಕಪ್ಪಗೌಡ, ಸಂಪುಟ ೧, ಪುಟ ೭೪೬
೨೨. ಅದೇ
೨೩. ನಾಗರಿಕ ಬದುಕಿನತ್ತ ಕಾಡುಕುರುಬರು: ಚಂದ್ರಶೇಖರ ಬೆಳಗೆರೆ, ಜನಪದ ಮಾಸಿಕ, ಪುಟ ೧೭ರಿಂದ ೨೨, ವಾರ್ತಾ ಮತ್ತು ಪ್ರಸಾರ ಇಲಾಖೆ, ಬೆಂಗಳೂರು ಪ್ರ. ೧೯೯೦
೨೪. ಕಾಡುಕುರುಬರು ಮತ್ತು ಜೇನುಕುರುಬರ ಸಂಸ್ಕೃತಿ: ಎ.ಸಿ.ಲಲಿತಾ. ಪುಟ ೧೪-೧೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.
೨೫. ಮ್ಯಾನ್ ಇನ್ ಇಂಡಿಯಾ: ಮುತ್ತುರಾಯಪ್ಪ ಸಂ. ೭೩ (೧) ಪುಟ ೯೬, ರಾಂಚಿ ಇಂಡಿಯಾ, ೧೯೯೩
೨೬. ದಿ ಶೆಡೂಲ್ಡ್ ಟ್ರೈಬ್ಸ್: ಕೆ.ಎಸ್.ಸಿಂಗ್, ಪುಟ ೬೭೬, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೪
೨೭. ಜೇನುಕುರುಬರು: ಎಂ.ಎಂ.ಬಸವರಾಜು, ಪುಟ ೩೭-೪೧, ಅಪ್ರಕಟಿತ ಕ್ಷೇತ್ರಕಾರ್ಯ ವರದಿ, ಮೈಸೂರು ವಿ.ವಿ. ೧೯೭೫.
೨೮. ದಿ ಶೆಡ್ಯೂಲ್ಡ್‌ಟ್ರೈಬ್ಸ್: ಕೆ.ಎಸ್.ಸಿಂಗ್, ಪುಟ ೩೭-೪೧, ಅಪ್ರಕಟಿತ ಕ್ಷೇತ್ರಕಾರ್ಯ ವರದಿ, ಮೈಸೂರು ವಿ.ವಿ. ೧೯೭೫
೨೯. ನಾಗರಿಕ ಬದುಕಿನತ್ತ ಕಾಡುಕುರುಬರು: ಚಂದ್ರಶೇಖರ ಬೆಳಗೆರೆ, ಪುಟ ೧೭ರಿಂದ ೨೨
೩೦. ಜೇನುಕುರುಬರು: ಎಂ.ಎಂ.ಬಸವರಾಜು, ಪುಟ ೩೭-೪೧
೩೧. ಅದೇ
೩೨. ಅಲೆಮಾರಿ ಕುರುಬ: ಡಾ. ಡಿ.ಯರಿಯಪ್ಪ, ಪುಟ ೩೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರ. ೨೦೦೮
೩೩. ಕರ್ನಾಟಕ ಗೊಲ್ಲ ಸಮುದಾಯ: ಡಾ. ಎಂ.ಗುರುಲಿಂಗಯ್ಯ, ಪುಟ ೨೪, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್. ಬೆಂಗಳೂರು, ಪ್ರ. ೨೦೦೫
೩೪. ಕರ್ನಾಟಕ ಕುರುಬರು: ಶಿವಾನಂದ ಗುಬ್ಬಣ್ಣವರ, ಪುಟ ೨೧, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩
೩೫. ಗೊಂಡರ ಸಂಸ್ಕೃತಿ: ಡಾ. ಎಸ್.ಜೆ.ಷರೀಫ್, ಪುಟ ೪೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೩
೩೬. ದೇಸಿ ಸಂಸ್ಕೃತಿ ಸಂಕಥನ: ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೦೩, ಪ್ರ ೨೦೦೮
೩೭. ಕುರುಬರ ಕುರುಹುಗಳು: ಹೆಚ್.ಚಂದ್ರಪ್ಪ ಅಜ್ಜಂಪುರ, ಪುಟ ೬೯, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ. ೨೦೧೧

೩೮. ಪಗರಣ ಮತ್ತು ಇತರ ಪ್ರಬಂಧಗಳು: ಡಾ.ಎಂ.ಚಿದಾನಂದಮೂರ್ತಿ, ಪುಟ ೧೧೮, ಪುಸ್ತಕ ಚಿಲುಮೆ, ಮೈಸೂರು ಪ್ರ. ೧೯೮೪

೩೯. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಡಾ. ಬಿ.ಜಿ.ಬಿರಾದಾರ, ಪುಟ ೧೪೦, ವಿಕಾಸ ಪ್ರಕಾಶನ ಹೊಸಪೇಟೆ, ಪ್ರ. ೨೦೧೦

೪೦. ಅದೇ

೪೧. ಗ್ರಾಮೀಣ: ಡಾ. ಎಂ.ಚಿದಾನಂದಮೂರ್ತಿ, ಪುಟ ೪೯, ಬಾಪ್ಕೊ ಪ್ರಕಾಶನ, ಬೆಂಗಳೂರು, ೧೯೭೭

೪೨. ಭಾರತೀಯ ಸಮಾಜ: ಡಾ. ಚ.ನ.ಶಂಕರರಾವ್, ಪುಟ ೪೭

೪೩. ಕನ್ನಡ ಜನಪದ ಗೀತೆಗಳು: ಡಾ. ಬಿ.ಎಸ್.ಗದ್ದಿಗೀಮಠ, ಪುಟ ೧

೪೪. ಹಾಲುಮತ ವ್ಯಾಸಂಗ-೨: ಸಂ. ಡಾ. ಎಫ್.ಟಿ. ಹಳ್ಳಿಕೇರಿ, ಪುಟ ೨೦೨, ಪ್ರಸಾರಾಂಗ. ಕ.ವಿ.ವಿ.ಹಂಪಿ, ೨೦೧೦

೪೫. ಗೆಝುಟಿಯರ್: ವೆಂಕಟರಂಗೋಕಟ್ಟಿ, ಪುಟ ೧೭೫, ಏಷಿಯನ್ ಎಜುಕೇಷನಲ್ ಸರ್ವೀಸಸ್, ನವದೆಹಲಿ, ೧೮೯೩

೪೬. ಶ್ರೀವಿಠಲ: ಒಂದು ಮಹಾಸಮನ್ವಯ: ರಾ.ಚಿ.ಢೇರೆ, ಅನುವಾದ: ಚಂದ್ರಕಾಂತ ಪೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೪೭. ಹಾಲುಮತ ವ್ಯಾಸಂಗ ಸಂ-೨: ಡಾ. ಎಫ್.ಟಿ.ಹಳ್ಳಿಕೇರಿ, ಪುಟ ೧೬೩, ಪ್ರಸಾರಾಂಗ. ಕನ್ನಡ ವಿ.ವಿ. ಹಂಪಿ, ಪ್ರ. ೨೦೧೦

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಕರ್ನಾಟಕವು ಹಲವು ಸಮುದಾಯಗಳ ಬಹುರೂಪೀ ಸಾಂಸ್ಕೃತಿಕ ಘಟಕವಾಗಿದೆ. ಇಂತಹ ಜನಸಮುದಾಯಗಳ ಅಧ್ಯಯನಕ್ಕೆ ಕರ್ನಾಟಕದಲ್ಲಿ ಕೆಲವೇ ದಶಕಗಳ ಚರಿತ್ರೆಯಿದೆ. ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನವು ಅವರ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ಕೆಲಸ ಮಾಡುತ್ತಿದೆ. ಈ ಅನನ್ಯತೆಯಲ್ಲಿ ಬೇರೆ ಭಾವನೆಯ ಹಟತೊಡದೆ ಹೆಪ್ಪುಗಟ್ಟಿದ ಸಮುದಾಯ ದ್ವೀಪಗಳು ಸಾಮಾಜಿಕ ಪ್ರವಾಹದೊಡನೆ ಬೆರೆಯುವಂತೆ ಮಾಡುವುದಾಗಿದೆ. ಪಶುಪಾಲಕರಾದ ಕುರುಬ ಸಮುದಾಯದ ಪ್ರಾಚೀನತೆಯನ್ನು ಕುರಿತ ನೆಲೆಗಳು, ಹಲವು ವಿದ್ವಾಂಸರಿಂದ ಚರ್ಚೆಗೆ ಒಳಗಾಗಿವೆ. ಆದರೂ ಸಂಸ್ಕೃತಿಯ ಮೂಲರೂಪಗಳನ್ನು ಹುಡುಕದ ಹೊರತು ಸಾಂಸ್ಕೃತಿಕ ಅಧ್ಯಯನ ಪರಿಪೂರ್ಣವಾಗದು.

ಸಂಸ್ಕೃತಿ ಎನ್ನುವುದು ಯಾವುದೇ ಒಂದು ಜಾತಿ ಜನಾಂಗಗಳಿಗೆ ಸೀಮಿತವಾದುದಲ್ಲ. ಅದು ಮನುಕುಲದ ಸಾಮೂಹಿಕ ಲಕ್ಷಣ. ಇದು ಜನಾಂಗದಿಂದ ಜನಾಂಗಕ್ಕೆ, ಜಾತಿಯಿಂದ ಜಾತಿಗೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಒಂದು ಸಾಮಾಜಿಕ ಮತ್ತು ಭೌಗೋಳಿಕ ಪರಿಮಿತಿಯೊಳಗೆ ಇರುವ ಜನರ ಗುಂಪು ತಮ್ಮ ಅವಶ್ಯಕತೆಗಳಿಗನುಗುಣವಾಗಿ ಕೆಲವೊಂದು ವ್ಯವಸ್ಥೆಗಳನ್ನು ಮಾಡಿಕೊಂಡವು. ಈ ವ್ಯವಸ್ಥೆಗಳೇ ಕಾಲಕ್ರಮದಲ್ಲಿ ಪರಂಪರೆಯಾಗಿ ಮುಂದುವರಿದು ಸಂಸ್ಕೃತಿಯಾಗಿ ಗುರುತಿಸಲ್ಪಡುತ್ತವೆ. ಸಂಸ್ಕೃತಿಯೊಂದರ ಹುಟ್ಟು ಆಯಶ ಸಮುದಾಯದ ಅವಶ್ಯಕತೆಗನುಗುಣವಾಗಿಯೇ ಇರುತ್ತದೆ. ಅನ್ಯ ಸಂಸ್ಕೃತಿಗಳ ಪ್ರಭಾವ, ದೌರ್ಜನ್ಯ ಮತ್ತು ಆಧುನಿಕತೆಗೆ ಈ ಸಮುದಾಯಗಳು ಒಳಗಾದಾಗ ಕೆಲವೊಂದು ಸಾಂಸ್ಕೃತಿಕ ಬದಲಾವಣೆಗಳು ಉಂಟಾಗುತ್ತವೆ. ಆದ್ದರಿಂದ ಸಂಸ್ಕೃತಿ ಎನ್ನುವುದು ಏಕಕಾಲಕ್ಕೆ ಸ್ಥಿರವೂ ಮತ್ತು ಚರವೂ ಆದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತದೆ. ಯಾವುದೇ ಸಂಸ್ಕೃತಿಯೊಂದು ರೂಪಗೊಳ್ಳಲು ಯಾವುದೇ ರೀತಿಯ ಸಾಮಾಜಿಕ ಮತ್ತು ಚಾರಿತ್ರಿಕ ಒತ್ತಡಗಳಿರುತ್ತವೆ.

ಉಂಡಾಡು ಪದ್ಮಣ್ಣ ನೆಂಬ ಸಾಂಸ್ಕೃತಿಕ ಮೂಲ ಪುರುಷನೊಂದಿಗೆ ಆರಂಭಗೊಳ್ಳುವ ಈ ಸಮುದಾಯದ ಹುಟ್ಟು ಪಶುಪಾಲನೆ,ಕೃಷಿ,ಕಂಬಳಿ ನೇಕಾರಿಕೆಯಂತಹ ಮೂಲ ಕಸುಬುಗಳೊಂದಿಗೆ

ಬೆಸೆದುಕೊಂಡಿರುವ ಪುರಾಣ, ಐತಿಹ್ಯ, ಚರಿತ್ರೆಗಳು ಇವರ ಬದುಕಿನ ಬೆಳಕಿಂಡಿಗಳಾಗಿ ನಿಲ್ಲುತ್ತವೆ. ಮುಂದುವರಿದಂತೆ ಧಾರ್ಮಿಕ ಪರಿಸರದಲ್ಲಿ ರೂಪಿಸಿಕೊಂಡ ಪುರಾಣ ಐತಿಹ್ಯಗಳು ವಿವಿಧ ವಿಕಾಸ ಘಟ್ಟಗಳಾಗಿ ಉಳಿದು ಕುರುಬರ ಭಕ್ತಿ ಭಾವುಕ ಪ್ರಪಂಚವನ್ನು ಕಟ್ಟಿಕೊಡುತ್ತವೆ. ಇದಲ್ಲದೆ ಎಲ್ಲ ಮಗ್ಗುಲಗಳನ್ನು ಆವರಿಸಿಕೊಂಡಿರುವ ಹುಟ್ಟಿನಿಂದ ಸಾವಿನವರೆಗೆ ರೂಪಿಸಿಕೊಂಡಿರುವ ಹಲವಾರು ಸಂಪ್ರದಾಯ ಆಚರಣೆಗಳಲ್ಲಿ ಕಂಡುಬರುವ ನೈವಿಧ್ಯ ಮತ್ತು ವೈಶಿಷ್ಟ್ಯಗಳೊಂದಿಗೆ ವಿವೇಚಿಸಲಾಗಿದೆ. ಕೆಲವು ಆಚರಣೆಗಳಲ್ಲಿ ಕಂಡು ಬರುವ ವೈಶಿಷ್ಟ್ಯಗಳನ್ನು ತಪ್ಪಾಗಿ ಅರ್ಥೈಸಿರುವ ಕ್ರಮವನ್ನು ತಿರಸ್ಕರಿಸಿ ವೈಜ್ಞಾನಿಕವಾಗಿ ವಿವೇಚಿಸುವ ಕ್ರಮಕ್ಕೆ ಗಮನ ನೀಡಲಾಗಿದೆ. ವಿವಾಹ ಸಂಬಂಧೀ ಆಚರಣೆಗಳಲ್ಲಿ ಕಂಡು ಬರುವ ಸಾಧೃಶ್ಯ ಮತ್ತು ವೈದೃಶ್ಯಗಳನ್ನು ಪರಿಚಯಿಸಲಾಗಿದೆ. ಇಂತಹ ಆಚರಣೆಗಳಲ್ಲಿ ವ್ಯಕ್ತಿಗತವೂ ಕೌಟುಂಬಿಕವೂ ಆದ ಸೌಹಾರ್ದತೆಗೆ ಪ್ರಾಧಾನ್ಯತೆ ನೀಡಿರುವುದರಿಂದ ಹಲವು ಪ್ರಾಚೀನ ಅಂಶಗಳು ಒಳಪಂಗಡಗಳಲ್ಲಿ ಅಡಕವಾಗಿರುವುದನ್ನು ಗುರುತಿಸಲಾಗಿಗೆ.

ಜಗತ್ತಿನ ಯಾವುದೇ ಮೂಲೆಯಲ್ಲಿರುವ ಒಂದು ಸಮುದಾಯ, ಬುಡಕಟ್ಟು, ಒಳಪಂಗಡದ ಅಧ್ಯಯನ ಮಾಡಿದಾಗಲೂ ಅಲ್ಲಿ ಸ್ತ್ರೀ ಸಂಬಂಧಿ ಆಕರಣೆಗಳಿಗೆ ಪ್ರತ್ಯೇಖ ಸ್ಥಾನಮಾನವಿರುವಂತೆ ಕುರುಬರ ಒಳಪಂಗಡವಾದ ಒಡೆಯರಲ್ಲಿ ಒಡೇರಮ್ಮನಿಗೆ ಚಿರಮುತ್ತೈದೆ ಸ್ಥಾನ ಕಲ್ಪಿಸಲಾಗಿದೆ. ಇದು ಭಾರತೀಯ ಸಂಸ್ಕೃತಿಯಲ್ಲಿಯೇ ವಿಶಿಷ್ಟವಾದ ಅಂಶವಾಗಿದೆ. ಹೆಣ್ಣಿನ ಮೈನೆರೆದ ಶಾಸ್ತ್ರ, ಬಸಗೆ ಮಾಡುವುದು ವಿವಾಹ ಸಂಬಂಧಿತ ಹೆಣ್ಣಿನ ಶಾಸ್ತ್ರಗಳು ಎಲ್ಲಾ ಸಮುದಾಯಗಳಲ್ಲಿರುವಂತೆ ಕುರುಬರಲ್ಲಿ ಸೌದೃಶ್ಯ ವೈದೃಶ್ಯಗಳಿಂದ ಕೂಡಿದವುಗಳಿವೆ.

ಹುಟ್ಟಿನಿಂದ ಸಾವಿನವರೆಗೆ ಒಂದು ಸಮುದಾಯವನ್ನು ನಿಯಂತ್ರಿಸುವ ಹಲವಾರು ನಂಬಿಕೆಗಳನ್ನು ಇಲ್ಲಿ ಪ್ರಸ್ತಾಪಿಸಿದೆ. ಅವುಗಳ ಮೂಲಕ ಪ್ರಕೃತಿಂಯುನ್ನು ಅರ್ಥವಮಾಡಿಕೊಂಡಿರುವ, ಅರ್ಥಮಾಡಿಕೊಳ್ಳಲೆತ್ನಿಸಿರುವ ಬಗೆಯನ್ನು ವಿವರಿಸಲಾಗಿದೆ. ಪ್ರಕೃತಿಯೊಂದಿಗೆ ಕುರುಬ ಸಮುದಾಯ ಇರಿಸಿಕೊಂಡಿರುವ ಅನ್ಯೋನ್ಯ ಸಂಬಂಧವನ್ನು ಕಾಡು, ಜೇನು,ಅಲೆಮಾರಿ, ಗೊಂಡಕುರುಬರ ಅಧ್ಯಯನದಿಂದ ಅವಲೋಕಿಸಬಹುದು. ಅಲ್ಲದೆ ಈ ಸಮುದಾಯದ ನಂಬಿಕೆ, ಸಂಪ್ರದಾಯ,ಆಲೋಚನಾ ವಿಧಾನ ಅನುಭವಗಳ ಸಾರಸಂಗ್ರಹವನ್ನು ವಾಚಕ ಸಾಹಿತ್ಯದಲ್ಲಿ ಯಥೇಚ್ಛವಾಗಿ ಕಾಣಬಹುದು. ಇವುಗಳಿಂದಾಗಿ ಹುಟ್ಟು, ಸಾವುಗಳಿಗೆ ಸಂಬಂಧಿತವಾದ ಅಂಶಗಳು ದಾಖಲಾಗಿರುವುದನ್ನು ಗುರುತಿಸಲಾಗಿದೆ.

ಕುರುಬರಲ್ಲಿ ಕಂಡುಬರುವ ಸಾಂಸ್ಕೃತಿಕ ಉತ್ಕೃಷ್ಟ ಕಲೆಗಳು ಒಂದೆಡೆ ಸಾಮೂಹಿಕ ಮನರಂಜನೆಯ ಸಾಧನಗಳಾಗಿರುವಂತೆ ಮತ್ತೊಂದೆಡೆ ಮನುಷ್ಯನ ಬದುಕಿನ ಭಾವಾನುಭವ,ಮಾನವೀಯ ಸಂವೇದನೆಗಳನ್ನು ಅತ್ಯಂತ ತೀವ್ರವಾಗಿ ಪರಿಚಯಿಸಿದೆ. ಧಾರ್ಮಿಕ ಪರಿಸರದೊಂದಿಗೆ ಬೆಳೆದು ಬಂದಿರುವ ಡೊಳ್ಳುಕುಣಿತ, ದಟ್ಟಿ ಕುಣಿತ, ಗೊರವರ ಕುಣಿತ, ಚೌಡಿಕೆ, ಸದರ ಮಾಡುವುದು, ಹೇಳಿಕೆ ಮಾಡುವುದು, ಟಗರುಕಾಳಗ,

ಈರಗಾರರ ಕುಣಿತ ಮುಂತಾದವು ತಮ್ಮ ಪ್ರಸರಣ ಆಕರ್ಷಣಗಳಿಂದಾಗಿ ಆ ಸಮುದಾಯದ ಆಚಾರ-ವಿಚಾರ, ರೂಢಿ, ನಡಾವಳಿ, ಸಂಪ್ರದಾಯ, ಪರಂಪರೆಗಳನ್ನು ಪ್ರತ್ಯಕ್ಷೀಕರಿಸುವ ಮೂಲಕ ಜನಜೀವನದೊಂದಿಗೆ ಬಿಡಿಸಲಾಗದ ನಂಟನ್ನು ಸ್ಥಾಪಿಸಿಕೊಂಡಿವೆಯೆಂಬುದನ್ನು ಸಾಧಿಸಿ ತೋರಿಸಲಾಗಿದೆ. ವಿಜ್ಞಾನ, ತಂತ್ರಜ್ಞಾನ ದಯಪಾಲಿಸಿದ ಮನರಂಜನೆಗಳಾವುವೂ ಇಲ್ಲದಿದ್ದಕಾಲದಲ್ಲಿ ದುಡಿಮೆಯ ಏಕತಾನತೆಯನ್ನು ಮುರಿದು ಶ್ರಮವನ್ನು ಮರೆಯಿಸಿ ಸಂತೋಸ ಕಂಡುಕೊಳ್ಳಲು ಸೃಜನಶೀಲ ಪ್ರತಿಭೆಯಿಂದ ಕಲೆಗಳನ್ನು ಹೇಗೆ ಸೃಷ್ಟಿಸಿಕೊಂಡರೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನದ ವೈವಿಧ್ಯಮಯ ನೆಲೆಗಳನ್ನು ಆರು ಅಧ್ಯಾಯಗಳಲ್ಲಿ ಅನೇಕ ಹೊಸ ವಿಷಯಗಳೊಂದಿಗೆ ನಿರೂಪಿಸಲಾಗಿದೆ. ಒಂದು ಸಮುದಾಯದ ವಿಶಿಷ್ಟ ಸಾಮಾಜಿಕ ಸಾಂಸ್ಕೃತಿಕ ಮುಖಗಳನ್ನು ಪರಿಚಯಿಸುವ ಪ್ರಯತ್ನವೇ ಈ ಅಧ್ಯಯನವಾಗಿದೆ.

'ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ' ಎಂಬ ಮೊದಲ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ ಮತ್ತು ಆಕರಗಳನ್ನು ಕುರಿತಾದ ಸಂಕ್ಷಿಪ್ತ ವಿವರಗಳನ್ನು ನೀಡಲಾಗಿದೆ.

'ಒಳಪಂಗಡಗಳ ಹೆಸರು ಮತ್ತು ಸಂಖ್ಯಾ ನಿರ್ಣಯ' ಎಂಬ ಎರಡನೇ ಅಧ್ಯಾಯದಲ್ಲಿ ಕುರುಬ ಪದ ನಿಷ್ಪತ್ತಿ, ಅರ್ಥ, ಮೂಲವನ್ನು ಕುರಿತಾದ ವಿವರಗಳೊಂದಿಗೆ ಉಗಮ ಬೆಳವಣಿಗೆಯ ನೆಲೆಗಳನ್ನು ಚರ್ಚಿಸಲಾಗಿದೆ. ಒಳಪಂಗಡಗಳು ವೃತ್ತಿಯಿಂದಲೋ ಅಥವಾ ಇನ್ನಾವುದೋ ಮೂಲದಿಂದ ಪಡೆದುಕೊಂಡ ಹೆಸರುಗಳ ಬಗ್ಗೆ ವಿವೇಚನ ಮಾಡಲಾಗಿದೆ. ಇಲ್ಲಿಯವರೆಗೆ ಮಾಡಲಾಗಿರುವ ಅಧ್ಯಯನಗಳಲ್ಲಿ ಒಳಪಂಗಡಗಳ ಸಂಖ್ಯೆಯನ್ನು ಮನಸೋ ಇಚ್ಛೆ ನಿರ್ಣಯಿಸಿದಂತೆ ಕಂಡು ಬಂದದ್ದರಿಂದ ಒಳಪಂಗಡಗಳ ಸಂಖ್ಯ ನಿರ್ದಿಷ್ಟಗೊಳಿಸುವ ಸಂಖ್ಯಾ ನಿರ್ಣಯವನ್ನು ಮಾಡಲಾಗಿದೆ.

'ಒಳಪಂಗಡಗಳ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ' ಎಂಬ ಮೂರನೇ ಅಧ್ಯಾಯದಲ್ಲಿ ಪುರಾಣ, ಚರಿತ್ರೆಯ ಅರ್ಥ. ಸ್ವರೂಪ, ಪ್ರತಿಯೊಂದು ಒಳಪಂಗಡಕ್ಕೆ ಸಂಬಂಧಿತವಾದ ಪೌರಾಣಿಕ ಸಂಗತಿಗಳ ಸಮಗ್ರ ವಿವರಗಳನ್ನು ದಾಖಲಿಸಲಾಗಿದೆ.ಅಲ್ಲದೆ ಚಾರಿತ್ರಿಕ ನೆಲೆಗಳನ್ನು ಪರಿಚಯಿಸಿರುತ್ತದೆ. ಕೆಲವಕ್ಕೆ ಇತಿಹಾಸವಿದ್ದರೆ, ಮತ್ತೆ ಕೆಲವು ಇತಿಹಾಸವಿಲ್ಲದವರ ವಿವರಗಳನ್ನು ನೀಡಲಾಗಿದೆ. ಸಮುದಾಯಗಳ ಪುರಾಣೀಕರಣದ ಮೂಲಕ ಚರಿತ್ರೆಯನ್ನು, ಚರಿತ್ರೀಕರಣದ ಮೂಲಕ ಪುರಾಣವನ್ನು ಕಟ್ಟಿಕೊಡಲಾಗಿದೆ.

'ಕುರುಬರ ಒಳಪಂಗಡಗಳು ಮತ್ತು ಬೆಡಗುಗಳು' ಎಂಬ ನಾಲ್ಕನೇ ಅಧ್ಯಾಯದಲ್ಲಿ ಬೆಡಗುಗಳ ಅರ್ಥ, ಸ್ವರೂಪ, ಲಕ್ಷಣಗಳನ್ನು ವಿವರಿಸಿದೆ. ಪ್ರತೀ ಒಳಪಂಗಡದಲ್ಲಿ ಕಂಡುಬರುವ ಬೆಡಗುಗಳು, ಬೆಡಗುಗಳ ಐತಿಹ್ಯದ ಸಂಕ್ಷಿಪ್ತ ಪರಿಚಯ ಹಾಗೂ ಕುರುಬ ಸಮುದಾಯದಲ್ಲಿರುವ ೧೫೦೦ ಕ್ಕೂ ಮಿಗಿಲಾದ ಬೆಡಗುಗಳ ದಾಖಲೀಕರಣವನ್ನು ಮಾಡಲಾಗಿದೆ.

'ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಐದನೇ ಅಧ್ಯಾಯದಲ್ಲಿ ಪ್ರತಿ ಒಳಪಂಗಡವಲ್ಲಿ ಕಂಡುಬರುವ ಹುಟ್ಟಿನಿಂದ ಸಾವಿನವರೆಗಿನ ಆಚರಣೆ ಸಂಪ್ರದಾಯಗಳು, ಅವುಗಳಲ್ಲಿರುವ ಸಾದೃಶ್ಯ,ವೈದೃಶ್ಯ, ಸಂಕರಗೊಂಡ ನೆಲೆಗಳು, ವಸ್ತುಸ್ಥಿತಿ, ವಾಸ್ತವವಾಗಿ ಅವು ಈಗಿರುವ ಸ್ಥಿತಿಗತಿ, ಆಧುನಿಕತೆಗೆ ತೆರೆದುಕೊಂಡರೂ ಮೂಲಸಂಸ್ಕೃತಿಯ ಬೇರುಗಳನ್ನು ಭದ್ರಗೊಳಿಸಿಕೊಂಡಿರುವ ನೆಲೆಗಳನ್ನು ಚರ್ಚಿಸಲಾಗಿದೆ. ಅಲ್ಲದೆ ಪ್ರತಿಯೊಂದು ಒಳಪಂಗಡದವರು ಉಪಾಸನೆ ಮಾಡುವದೈವ ಪರಂಪರೆ, ಸಾಂಸ್ಕೃತಿಕ ವಈರರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಕರ್ನಾಟಕದಾದ್ಯಂತ ಪ್ರಸರಣಗೊಂಡಿರುವ ಕುರುಬರ ಉತ್ಕೃಷ್ಟ ಕಲೆಗಳ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಪರಿಚಯಿಸಿದೆ.

'ಸಮಾರೋಪ' ಎಂಬ ಆರನೇ ಅಧ್ಯಾಯದಲ್ಲಿ ಮೇಲಿನ ಎಲ್ಲಾ ವಿವರಗಳನ್ನೊಳಗೊಂಡ ಸಮಾರೋಪದ ಮತ್ತು ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ.

ಈ ಅಧ್ಯಯನದ ಅಧ್ಯಾಯಗಳಲ್ಲಿ ಕುರುಬರ ಸಮಗ್ರ ಜೀವನದ ಪ್ರಮುಖ ವಿವರಗಳನ್ನು ವಿವರಿಸಿ ವಿಶ್ಲೇಷಿಸಲಾಗಿದೆ. ಆಧುನಿಕತೆಗೆ ಮುಖಾಮುಖಿಯಾದಾಗಲೂ ತಮ್ಮ ನಂಬಿಕೆ, ಆಚಾರ-ವಿಚಾರ, ಸಂಪ್ರದಾಯ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಕೆಲವು ಒಳಪಂಗಡಗಳು ಮೇಲ್ವರ್ಗಗಳಿಗೆ, ಕೆಲವು ಒಳಪಂಗಡಗಳು ಕೆಳಸ್ತರಕ್ಕೆ ವರ್ಗಾಯಿಸಿಕೊಂಡಿದ್ದರೂ ಅವರ ಮೂಲ ಆಚರಣೆಗಳಲ್ಲಿ ಅಂತಹ ಬದಲಾವಣೆಗಳನ್ನು ಗುರುತಿಸುವುದು ಕಷ್ಟದ ಮಾತಾಗುತ್ತದೆ. ಬದಲಾದ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂದರ್ಭ ಸನ್ನಿವೇಶಗಳ ಪರಿವರ್ತನೆಯ ಹಾದಿಯಲ್ಲಿ ಕುರುಬರ ಒಳಪಂಗಡಗಳು ಇರುವುದು ಮಾತ್ರ ಕಟು ಸತ್ಯ. ಒಟ್ಟಾರೆಯಾಗಿ ಕರ್ನಾಟಕ ಕುರುಬರ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನವು ಸಮುದಾಯದ ಸರ್ವತೋಮುಖ ಬೆಳವಣಿಗೆಗೆ ಪ್ರೇರಕವಾಗಿಬೇಕಿದೆ.

ಅಧ್ಯಯನದ ಫಲಿತಗಳು

೧. ಕರ್ನಾಟಕದಲ್ಲಿ ಕುರುಬರ ಒಳಪಂಗಡಗಳ ಭೌಗೋಳಿಕ ವ್ಯಾಪ್ತಿಯನ್ನು ಗಮನಿಸಿದರೆ ಕಾಡುಕುರುಬರು, ಜೇನುಕುರುಬರು ಮತ್ತು ಒಕ್ಕೆ ಕುರುಬರು ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲೂ, ಅಲೆಮಾರಿ ಕುರುಬರು ಬೆಳಗಾವಿ ಜಿಲ್ಲೆಯಲ್ಲೂ, ಗೊಂಡ ಕುರುಬರು ಬೀದರ್, ಭಟ್ಕಳ, ಹರಿಹರಗಳಲ್ಲಿ ಕಂಡುಬರುತ್ತಾರೆ. ಉಣ್ಣೆಕಂಕಣ ಕುರುಬರು ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಹಳೆಯ ಮೈಸೂರು ಪ್ರದೇಶಗಳಲ್ಲಿ ಕಾಣಸಿಗುತ್ತಾರೆ. ಹತ್ತಿಕಂಕಣ, ಹಂಡೆ, ಝುಂಡೆಕುರುಬರು, ಕುಡುವೊಕ್ಕಲಿಗರು ಉತ್ತರ ಕರ್ನಾಟಕದ ಬಿಜಾಪುರ, ಬಾಗಲಕೋಟೆ, ಗದಗ, ಬಳ್ಳಾರಿ, ರಾಯಚೂರು, ಗುಲ್ಬರ್ಗಗಳಲ್ಲಿ ಕಂಡುಬರುತ್ತಾರೆ. ಸಾದ, ದಾಸ, ವಾರದ, ಹೆಗ್ಗಡೆ ಕುರುಬರು ಹಳೆಯ ಮೈಸೂರು ಜಿಲ್ಲೆಗಳಲ್ಲಿ ಲಭ್ಯವಾಗುತ್ತಾರೆ. ಕಂಬಳಿ ಕುರುಬರು ಕೋಲಾರ ಜಿಲ್ಲೆಯಲ್ಲಿ ಕಂಡುಬಂದರೆ, ಕ್ರೈಸ್ತ ಕುರುಬರು, ಬಾದಾಮಿ ತಾಲೂಕಿನಲ್ಲಿಯೂ, ದನಗರ ಗವಳಿಗ ಕುರುಬರು ಮುಂಡಗೋಡದಲ್ಲಿ ಸಿಗುತ್ತಾರೆ. ನೊಣಬ, ಕುಂಚಿಟಿಗ ಮತ್ತು ಗೊಲ್ಲ ಕುರುಬರು ತುಮಕೂರು, ಚಿತ್ರದುರ್ಗ, ಹಾಸನ ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ.

೨. ಇಲ್ಲಿಯವರೆಗೆ ನಡೆದಿರುವ ಕುರುಬ ಸಮುದಾಯದ ಬಹುತೇಕ ಅಧ್ಯಯನಗಳು ಇಂಗ್ಲಿಷಿನ ಮತ್ತು ಹೊರನಾಡುಗಳ ವಿದ್ವಾಂಸರಿಂದ ನಡೆದಿದ್ದವು. ಕನ್ನಡದಲ್ಲಿ ಅತ್ಯಂತ ವಿರಳ ಅಧ್ಯಯನಗಳು ಕಂಡು ಬಂದಿದ್ದರಿಂದ ಈ ಅಧ್ಯಯನದ ಮೂಲಕ ಕುರುಬರ ಒಳಪಂಗಡಗಳ ಪರಿಚಯ ಹಾಗೂ ದಾಖಲೀಕರಣವನ್ನು ಮಾಡಲಾಗಿದೆ.

೩. ಲಿಂಗಾಯಿತ ಪ್ರಭಾವಕ್ಕೆ ಒಳಗಾದ ಸಾದ ಕುರುಬರು, ಕುಡುವೊಕ್ಕಲಿಗರು, ಹಂಡೆಕುರುಬರು, ಮತ್ತು ನೊಣಬ ಕುರುಬರನ್ನು ಕುರಿತು ಅಧ್ಯಯನದ ಮಾಡಲು ಸಾಧ್ಯತೆಗಳಿವೆ.

೪. 'ಹಂಡೆ' ಪದದ ಮೂಲವನ್ನು ಶೋಧಿಸಬೇಕಾದ ಅಗತ್ಯವಿದೆ. ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ಹಂಡೆ ಮುಸ್ಲಿಂ, ಹಂಡೆಹೊಲೆಯ, ಹಂಡೆರಾವುತ, ಹಂಡೆವಜೀರ, ಹಂಡೆಕುರುಬರು ಕಂಡುಬರುತ್ತಾರೆ. ಈ ಸಮುದಾಯಗಳಿಗೆ 'ಹಂಡೆ' ಪದವು ಹೇಗೆ ಸೇರಿಕೊಂಡಿತು ಎಂಬುದನ್ನು ಅಧ್ಯಯನ ಮಾಡಲು ಸಾಧ್ಯತೆಯಿದೆ.

೫. ಕುರುಬ ಸಮುದಾಯದ ಸಾಂಪ್ರದಾಯಿಕ ವೃತ್ತಿ ಪ್ರವೃತ್ತಿಗಳು ಆಧುನಿಕತೆಯ ಬೆಳಕಿನಲ್ಲಿ ಕಂಡುಕೊಂಡ ಹೊಸ ಮಾರ್ಪಾಡುಗಳ ಮೊತ್ತವಾದ ಆಧುನಿಕ ಪ್ರವೃತ್ತಿಗಳನ್ನು ಅಧ್ಯಯನ ಮಾಡಲಾಗಿದೆ.

೬. ಕುರುಬರ ಒಳಪಂಗಡಗಳ ಬದುಕನ್ನು ಜಾಗತೀಕರಣದ ಬಿರುಗಾಳಿಗೆ ಒಡ್ಡಿದಾಗ ಆಯಾ ಪ್ರದೇಶದ ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಾದ ಚಲನಶೀಲತೆಯನ್ನು ಗುರುತಿಸಲಾಗಿದೆ.

೭. ಹತ್ತಿಕಂಕಣ, ಉಣ್ಣೆಕಂಕಣ ಕುರುಬರು ಅಣ್ಣತಮ್ಮಂದಿರೆಂಬ ಭಾವನೆಯಿಂದ ಇವರೀರ್ವರ ನಡುವೆ ವಿವಾಹ ಸಂಬಂಧಗಳು ಏರ್ಪಡುತ್ತಿರಲಿಲ್ಲ. ಇತ್ತೀಚೆಗೆ ಆ ಒಂದು ನಿಷೇಧ ದಕ್ಷಿಣ ಕರ್ನಾಟಕದಲ್ಲಿ ಸಂಪೂರ್ಣವಾಗಿ ಸಡಿಲಗೊಂಡಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಈ ನಿಷೇಧವು ಮುಂದುವರಿದಿರುವುದು ಕಂಡು ಬರುತ್ತದೆ.

೮. ಶ್ರೇಷ್ಠತೆ ಮತ್ತು ಸೌಲಭ್ಯದ ದೃಷ್ಟಿಯಿಂದ ಕುರುಬ ಸಮುದಾಯದ ಕೆಲವು ಒಳಪಂಗಡಗಳು ಮತಾಂತರಗೊಂಡು ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇವರು ತಮ್ಮ ಮೂಲ ಸಂಸ್ಕೃತಿಗೆ ಮರಳಿದರೆ ಸಮುದಾಯದ ಸಬಲೀಕರಣಕ್ಕೆ ಸಹಾಯಕವಾಗುತ್ತದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

೯. ಕುಲ, ಗೋತ್ರ, ಬೆಡಗು, ಒಳಪಂಗಡಗಳು ಬೇರೆ ಬೇರೆ. ಆದರೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳೆಲ್ಲವೂ ಇವೆಲ್ಲವನ್ನು ಒಂದೇ ಎಂದು ನಿರ್ಧರಿಸಿ ಗೊಂದಲವನ್ನುಂಟು ಮಾಡಿದ್ದವು. ಇಂತಹ ಗೊಂದಲಗಳನ್ನು ನಿವಾರಿಸುವ ಪ್ರಯತ್ನ ಮಾಡಲಾಗಿದೆ.

೧೦. ಬೆಡಗುಗಳ ಐತಿಹ್ಯ ಮತ್ತು ಒಳಪಂಗಡಗಳ ಬೆಡಗುಗಳನ್ನು ಕುರಿತು ವಿವೇಚಿಸಲಾಗಿದೆ. ಅಲ್ಲದೇ ಒಳಪಂಗಡಗಳ ಸಾಂಸ್ಕೃತಿಕ ಅಧ್ಯಯನದಿಂದ ದಾಖಲೀಕರಣ ಮತ್ತು ಸಂಖ್ಯಾನಿರ್ಣಯ ಮಾಡಲಾಗಿದೆ.

ಅನುಬಂಧಗಳು

ಅ. ವಕ್ತೃಗಳ ವಿವರ

ಆ. ಪರಾಮರ್ಶನ ಗ್ರಂಥಗಳು

ಇ. ಛಾಯಾಚಿತ್ರಗಳು

೧೬.	ಪಿಡ್ಡಣ್ಣ	೮೦	ವಾರದ ಕುರುಬರು	ಆಲೂರು	ಮಂಡ್ಯ	ಸಂಪ್ರದಾಯಗಳು
೧೭.	ಮಧುಹೆಗ್ಗಡೆ	೪೪	ಹೆಗ್ಗಡೆಕುರುಬರು	ಮದ್ದೂರು	ಮಂಡ್ಯ	ಬೆಡಗುಗಳು
೧೮.	ಮರಿಕಾಳ ಹೆಗ್ಗಡೆ	೬೫	ಹೆಗ್ಗಡೆಕುರುಬ	ಹೊಸಹಳ್ಳಿ	ಮಂಡ್ಯ	ಸಂಪ್ರದಾಯಗಳು
೧೯.	ಪ್ರೊ.ಬಿ.ಬಿ.ಪಾಟೀಲ	೬೨	ಸಾದಕುರುಬ	ದಾವಣಗೆರೆ	ದಾವಣಗೆರೆ	ಬೆಡಗುಗಳು
೨೦.	ರೇವಣಪ್ಪ	೪೮	ಸಾದಕುರುಬ	ಕೇದಿಗೆಹಳ್ಳಿಪಾಳ್ಯ	ತುಮಕೂರು	ಸಂಪ್ರದಾಯಗಳು
೨೧.	ಪ್ರೊ.ಕೆ.ಆರ್.ಬಸವರಾಜು	೬೮	ನೊಣಬರು	ತಿಪಟೂರು	ತುಮಕೂರು	ಸಂಪ್ರದಾಯಗಳು
೨೨.	ಪ್ರೊ.ಎಂ.ಎಸ್.ರಾಮಲಿಂಗಪ್ಪ	೬೭	ನೊಣಬರು	ಮತಿಘಟ್ಟ	ಹಾಸನ	ಬೆಡಗುಗಳು
೨೩.	ಬಸವೇಗೌಡರು	೬೩	ಒಕ್ಕಲಿಕುರುಬ	ಜಲ್ಲಿಪಾಳ್ಯ	ಚಾಮರಾಜನಗರ	ಬೆಡಗುಗಳು
೨೪.	ಪುಟ್ಟೇಗೌಡ	೫೪	ಒಕ್ಕಲಿಕುರುಬ	ಹೂಗ್ಯಂ	ಚಾಮರಾಜನಗರ	ಸಂಪ್ರದಾಯಗಳು
೨೫.	ಜಯಕುಮಾರ ಬಂಡಿ	೬೫	ಕ್ರೈಸ್ತಕುರುಬರು	ಕಟಗೇನಹಳ್ಳಿ	ಬಾಗಲಕೋಟೆ	ಸಂಪ್ರದಾಯಗಳು
೨೬.	ರೆವರೆಂಡ್ ಜಾನ್ಸನ್ ಜೋಯಲ್ (ಪಾದ್ರಿ)	೪೬	ಕ್ರೈಸ್ತಕುರುಬರು	ಮುಷ್ಟಿಗೇರಾ	ಬಾಗಲಕೋಟೆ	ಸಂಪ್ರದಾಯಗಳು
೨೭.	ತಿಮ್ಮಪ್ಪದಾಸರು	೭೩	ದಾಸಕುರುಬರು	ಹೊಳಲ್ಕೆರೆ	ಚಿತ್ರದುರ್ಗ	ಸಂಪ್ರದಾಯಗಳು
೨೮.	ನಿಂಗಪ್ಪ	೬೮	ಹತ್ತಿಕಂಕಣ	ದೇವರಗುಡ್ಡ	ಬಳ್ಳಾರಿ	ಮೈಲಾರದೇವರು
೨೯.	ಬೀರಪ್ಪ	೫೭	ಹತ್ತಿಕಂಕಣ	ಮೆಡ್ಲೇರಿ	ಹಾವೇರಿ	ಬೆಡಗುಗಳು
೩೦.	ಪ್ರೊ.ಎಸ್.ಎಫ್.ಜಕಬಾಳ	೫೮	ಝುಂಡೆಕುರುಬ	ಗದಗ	ಗದಗ	ಸಂಪ್ರದಾಯಗಳು
೩೧.	ಎನ್.ಬಿ. ಸಿದ್ಧಯ್ಯ ಶಿಕ್ಷಕರು	೪೯	ಗೌಡನಕುರುಬ	ಸಿರಾ	ತುಮಕೂರು	ಬೆಡಗುಗಳ ಇತಿಹಾಸ

೩೨.	ತಿಪ್ಪೇಸ್ವಾಮಿ	೭೨	ಕುರುಬ	ಕನಕಗಿರಿ	ಕೊಪ್ಪಳ	ಬೆಡಗುಗಳು
೩೩.	ದೊಡ್ಡ ಬೀರಯ್ಯ	೫೩	ಕುರುಬ	ಅಜ್ಜಂಪುರ	ಚಿಕ್ಕಮಗಳೂರು	ಸಣ್ಣಕುರುಬರ ಬೆಡಗುಗಳು
೩೪.	ಪ್ರೊ.ಶಿವಲಿಂಗಯ್ಯ	೪೪	ಕುರುಬ	ಚಳ್ಳಕೆರೆ	ಚಿತ್ರದುರ್ಗ	ಸಂಪ್ರದಾಯಗಳು
೩೫.	ಸಣ್ಣಚಿಕ್ಕಣ್ಣ	೪೦	ಗೊಲ್ಲ	ಬೇವಿನಹಳ್ಳಿ	ತುಮಕೂರು	ಗೊಲ್ಲಕುರುಬರ ಸಂಪ್ರದಾಯಗಳು
೩೬.	ತಿಪ್ಪೇಸ್ವಾಮಿ	೩೩	ಕುರುಬ	ಮಸ್ಕಲ್	ಚಿತ್ರದುರ್ಗ	ಬೆಡಗುಗಳು
೩೭.	ಬಸವರಾಜ ಗಗ್ರಿ	೩೨	ಕುರುಬ	ಹಂಚಿನಾಳ ಕ್ಯಾಂಪ್	ರಾಯಚೂರು	ಬೆಡಗುಗಳು
೩೮.	ಹುಲ್ಲಪ್ಪ	೪೭	ಕುರುಬ	ಗುಲ್ಬರ್ಗ	ಗುಲ್ಬರ್ಗ	ಹಾಲುಮತ ಪುರಾಣಗಳು
೩೯.	ವಸಂತಣ್ಣ	೫೮	ಗೊಂಡಕುರುಬ	ಬೀದರ್	ಬೀದರ್	ಸೃಷ್ಟಿಪುರಾಣ
೪೦.	ಪ್ರೊ.ಒಡೆಯರ್.ಡಿ.ಹೆಗ್ಗಡೆ	೬೦	ಹೆಗ್ಗಡೆ	ಮೈಸೂರು	ಮೈಸೂರು	ಸೃಷ್ಟಿಪುರಾಣ
೪೧.	ಶಿವಣ್ಣ ದುಂಡಪ್ಪ	೫೧	ಕುರುಬ	ಹುಮ್ನಾಬಾದ್	ಬೀದರ್	ಡೊಳ್ಳಿನ ಹಾಡು
೪೨.	ಭೀಮಪ್ಪ ಕರಡಿ	೫೮	ಕುರುಬ	ಬೂದಗುಂಪ	ಕೊಪ್ಪಳ	ಡೊಳ್ಳಿನಹಾಡು
೪೩.	ಕೆಂಗಯ್ಯ	೫೩	ಕುರುಬ	ಚಿಕ್ಕನಾಯಕನಹಳ್ಳಿ	ತುಮಕೂರು	ಚೌಡಿಕೆ
೪೪.	ಗೋಣಿಬಸಪ್ಪ	೭೫	ಕುರುಬ	ಹರಿಹರ	ದಾವಣಗೆರೆ	ಗೊರವರ ಕುಣಿತ
೪೫.	ಭರಮಪ್ಪ	೫೦	ಕುರುಬ	ಕಡಗಲಾಟ	ಬೆಳಗಾವಿ	ದಟ್ಟಿಕುಣಿತ
೪೬.	ಇಟ್ಟಪ್ಪ ಮನಿಗೇನಿ	೩೬	ಕುರಬ	ಕೂಕನಹಳ್ಳಿ	ಕೊಪ್ಪಳ	ಡೊಳ್ಳುವಾದ್ಯ
೪೭.	ಈಶ್ವರೇಗೌಡ	೪೮	ಕುರುಬ	ಅಂಬಳೆ	ಚಿಕ್ಕಮಗಳೂರು	ಈರಗಾರರ ಕುಣಿತ
೪೮.	ಮರಿಗೆಂಚಪ್ಪ	೪೧	ಕುರುಬ	ಮದ್ದೂರು	ಮಂಡ್ಯ	ಈರಗಾರರು

೪೯.	ಮಲವಿ ಕೆಂಚಯ್ಯ	೪೯	ಕುರುಬ	ಆಲೂರು	ಮಂಡ್ಯ	ಬೀರೇಶ್ವರ
೫೦.	ದೊಳಪ್ಪಾರ ಗೋವಿಂದಪ್ಪ	೩೭	ಕುರುಬ	ತಾಳಿಕಟ್ಟೆ	ಚಿತ್ರದುರ್ಗ	ಬೀರಪ್ಪ
೫೧.	ಲಿಂಗಪ್ಪ	೬೩	ಕುರುಬ	ಕೂನಕಲ್	ಮಡಕಶಿರಾ	ಮೈಲಾರಲಿಂಗೇಶ್ವರ
೫೨.	ಸಿದ್ದಪ್ಪ ಜವಳಪ್ಪ	೭೬	ಕುರುಬ	ನೇರಳಘಟ್ಟ	ಚಿಕ್ಕಬಳ್ಳಾಪುರ	ರೇವಣಸಿದ್ಧ
೫೩.	ಸುಬ್ಬೇಗೌಡ	೮೦	ಕುರುಬ	ಹಿರೇಮೈಲಾರ	ಬಳ್ಳಾರಿ	ಮೈಲಾರಲಿಂಗೇಶ್ವರ
೫೪.	ಡಾ.ಚನ್ನಪ್ಪ ಕಟ್ಟಿ	೫೮	ಕುರುಬ	ಸಿಂದಗಿ	ಬಿಜಾಪುರ	ಅಮೋಘಸಿದ್ಧ
೫೫.	ಡಾ.ಎಸ್.ಸಿ ಪಾಟೀಲ	೫೧	ಕುರುಬ	ಧಾರವಾಡ	ಧಾರವಾಡ	ಗೊಲ್ಲಾಳೇಶ್ವರ

ಆ. ಪರಾಮರ್ಶನ ಗ್ರಂಥಗಳು

೧. ಅಲೆಮಾರಿ ಕುರುಬ: ಡಾ. ಯರ್ರಪ್ಪ ಡಿ., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೨. ಆಗ್ನೇಯ ಪುರಾಣ: ಹನುಮಾನ್ ಪ್ರೋದ್ದಾರ, ಗೋರಖ್‌ಪುರ.

೩. ಆದಿಕಾಂಡ, (ಜೆನೆಸಿಸ್): ಹಳೆಯ ಒಡಂಬಡಿಕೆ.

೪. ಉತ್ತರ ಕರ್ನಾಟಕ ಗೀತಮೇಳಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ವೀರೇಶ ಬಡಿಗೇರ, ವಿಮೋಚನಾ ಪ್ರಕಾಶನ, ಅಥಣಿ, ೧೯೯೯.

೫. ಕರ್ನಾಟಕದ ಕುರುಬರು: ಶಿವಾನಂದ ಗುಬ್ಬಣ್ಣವರ, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩.

೬. ಕರ್ನಾಟಕ ವೀರಕ್ಷತ್ರಿಯರು, ಶಂಭಾ ಕೃತಿ ಸಂಪುಟ-೧: ಸಂ. ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೬.

೭. ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ದ್ವಿತೀಯ ಭಾಗ: ಶಂ.ಬಾ.ಜೋಶಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೬.

೮. ಕರ್ನಾಟಕ ಸಂಸ್ಕೃತಿ: ದೇವುಡು ನರಸಿಂಹಶಾಸ್ತ್ರಿ, ೧೯೮೮.

೯. ಕನ್ನಡ ಜನಪದ ಗೀತೆಗಳು: ಡಾ. ಬಿ.ಎಸ್.ಗದ್ದಗೀಮಠ.

೧೦. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ: ಡಾ. ಸಿ.ನಾಗಭೂಷಣ, ಅಮೃತ ವರ್ಷಿಣಿ ಪ್ರಕಾಶನ, ನಂದಿಹಳ್ಳಿ-ಸಂಡೂರು, ೧೯೯೯.

೧೧. ಕರ್ನಾಟಕ ಜನಪದ ಕಲೆಗಳ ಕೋಶ: ಡಾ. ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

೧೨. ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಡಾ. ಎಂ.ಚಿದಾನಂದಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು- ೨೦೦೨.

೧೩. ಕರ್ನಾಟಕ ಬುಡಕಟ್ಟುಗಳು: ಸಂಪುಟ-೧: (ಪ್ರ.ಸಂ.) ಡಾ. ಎಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೧೪. ಕರ್ನಾಟಕ ಗೊಲ್ಲ ಸಮುದಾಯ: ಡಾ. ಎಂ.ಗುರುಲಿಂಗಯ್ಯ, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು, ೧೯೯೩.

೧೫. ಕುರುಬರ ಚರಿತ್ರೆ: ದಿ.ವಿ.ಆರ್.ಹನುಮಂತಯ್ಯ, (ಸಂ) ಸುಧಾಕರ, ಪ್ರತಿಭಾ ಪ್ರಕಾಶನ, ಮೈಸೂರು, ೧೯೯೬.

೧೬. ಕುರುಬರ ಗುರು ಒಡೆಯರು: ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಶ ಪ್ರಕಾಶನ, ಹೊಸಪೇಟೆ, ೨೦೦೭.

೧೭. ಕುರುಬ ಜನಪದ: (ಸಂ) ಪ್ರೊ. ಚನ್ನಪ್ಪ ಕಟ್ಟಿ ಮತ್ತು ಪ್ರೊ. ಆರ್.ಎಸ್.ವಾಡೇದ, ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ೧೯೯೭.

೧೮. ಕುರುಬರ ದರ್ಪಣ: ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೪.

೧೯. ಕುರುಬರ ಹೆಜ್ಜೆಗಳು: ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೬.

೨೦. ಕುರುಬ ಸಮುದಾಯದ ಭಾಷೆ: ಡಾ. ಎಸ್.ಎಸ್.ಅಂಗಡಿ, ಆನಂದಕಂದ ಗ್ರಂಥ ಮಾಲೆ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ೨೦೦೯.

೨೧. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಡಾ. ಬಿ.ಜಿ.ಬಿರಾದಾರ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦.

೨೨. ಕುರುಬರ ಕುರುಹುಗಳು: ಹೆಚ್.ಚಂದ್ರಪ್ಪ, ಅಜ್ಜಂಪುರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೧.

೨೩. ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ: ಡಾ. ಎಂ.ಎಚ್.ನಾಗರಾಜು, ಅನಿಕೇತನ ಪ್ರಕಾಶನ, ತುಮಕೂರು, ೨೦೦೩.

೨೪. ಕಾಡುಕುರುಬರು ಮತ್ತು ಜೇನುಕುರುಬರ ಸಂಸ್ಕೃತಿ: ಎ.ಸಿ.ಲಲಿತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೨೫. ಕಾಡುಗೊಲ್ಲರ ಜನಪದ ಗೀತೆಗಳು: (ಸಂ) ಅಂಬಳಿಕೆ ಹಿರಿಯಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮.

೨೬. ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು: ಡಾ. ತೀ.ನಂ.ಶಂಕರನಾರಾಯಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨.

೨೭. ಕಾಯಕಯೋಗಿ: (ಪ್ರ.ಸಂ) ಡಾ. ನಿಂಗಣ್ಣ ಸಣ್ಣಕ್ಕಿ, ಪ್ರೊ. ಎ.ಬಿ.ಹಿರೇಮಠ, ವಿದ್ಯಾನಿಧಿ ಪ್ರಕಾಶನದ ರಜತ ಮಹೋತ್ಸವ ಸಮಿತಿ, ಗದಗ, ೨೦೦೨.

೨೮. ಕಾಡುಗೊಲ್ಲರ ಬುಡಕಟ್ಟು ವೀರರು: ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ.ಪ್ರಕಾಶನ, ಬೆಂಗಳೂರು, ೨೦೦೫.

೨೯. ಗಿರಿಜನ ಸಿರಿ: ಡಾ. ಡಿ.ಬಿ.ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೩.

೩೦. ಗೊಂಡರ ಸಂಸ್ಕೃತಿ: ಡಾ.ಎಸ್.ಜೆ.ಷರೀಫ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೩೧. ಗೊಂಡರ ಸಂಸ್ಕೃತಿ: ಡಾ. ಸೈಯದ್ ಜಮೀರುಲ್ಲಾ ಷರೀಫ್, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೬.

೩೨. ಗೊಲ್ಲರಟ್ಟಿ: ನಾಗರಾಜು ಬಿ.ವಿ., ಆಪ್ತ ಪ್ರಕಾಶನ, ಬೆಂಗಳೂರು, ೧೯೯೮.

೩೩. ಚಿತ್ರದೇವರ ಕಾವ್ಯ: ಡಾ. ಚಿಕ್ಕಣ್ಣ ಎಣ್ಣೆಕಟ್ಟೆ, ಗಡಿನಾಡು ಜಾನಪದ ಸಂಪರ್ಕ ಕೇಂದ್ರ, ಸಿರಾ, ೨೦೦೨.

೩೪. ಜನಪದ ಸಮಾಜ ಸಂಸ್ಕೃತಿ: ಪ್ರೊ. ಎಸ್.ಎಸ್.ಹಿರೇಮಠ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ೨೦೦೫.

೩೫. ಜನಪದ ಹಾಲುಮತ ಮಹಾಕಾವ್ಯ: (ಸಂ) ಡಾ. ವೀರಣ್ಣ ದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೩೬. ಜಾನಪದ ಕೈಪಿಡಿ: ಡಾ. ಎಚ್.ಜೆ.ಲಕ್ಕಪ್ಪಗೌಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೩೭. ಜೀ.ಶಂ.ಪ.ರವರ ಜಾನಪದ ಬರಹಗಳು: (ಸಂ) ಡಾ. ಕಾಳೇಗೌಡ ನಾಗವಾರ ಮತ್ತು ಡಾ.ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

೩೮. ಜೇನುಕುರುಬರು; ಎಂ.ಎಂ.ಬಸವರಾಜು, ಅಪ್ರಕಟಿತ ಕ್ಷೇತ್ರ ಕಾರ್ಯ ವರದಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫.

೩೯. ತಗರಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೪೦. ದೇವರ್ ಬಂದಾವ್ ಬನ್ನೀರೆ: ಡಾ. ಶಿವಾನಂದ ಗುಬ್ಬಣ್ಣವರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೧. ದೇಸಿ ಸಂಸ್ಕೃತಿ ಸಂಕಥನ: ಡಾ. ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪೨. ದೇವಾಂಗ ಸಂಸ್ಕೃತಿ: ಪ್ರೊ.ಕೆ.ಜಿ.ನಾಗರಾಜಪ್ಪ, ಡಾ.ಜಿ.ಸರೋಜಮ್ಮ, ಜಿ.ಆರ್.ಶ್ರೀನಿವಾಸ ಸೇವಾ ಪ್ರತಿಷ್ಠಾನ, ಬೆಂಗಳೂರು, ೨೦೦೩.

೪೩. ನಡಿಯಪ್ಪ ನಾಡಿಗೆ: (ಸಂ) ವಿರೂಪಾಕ್ಷಪ್ಪ ಗೌಡ, ಹಗರಿಬೊಮ್ಮನಹಳ್ಳಿ, ೧೯೮೧.

೪೪. ಪಗರಣ ಮತ್ತು ಇತರ ಪ್ರಬಂಧಗಳು: ಡಾ. ಎಂ.ಚಿದಾನಂದಮೂರ್ತಿ, ಪುಸ್ತಕ ಚಿಲುಮೆ, ಮೈಸೂರು, ೧೯೮೪.

೪೫. ಪಂಪಭಾರತದ ಸಾಂಸ್ಕೃತಿಕ ಅಧ್ಯಯನ: ಡಾ. ಶಾಂತಿನಾಥ ದಿಬ್ಬದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೪೬. ಬುಡಕಟ್ಟು ಕುಲಕಸುಬುಗಳು: ಡಾ. ಕೆ.ಎಂ.ಮೇತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೪೭. ಬುಕ್ಕರಾಯ ಚರಿತೆ: ಡಾ. ಎಸ್.ಸಿ.ಪಾಟೀಲ, ಸಿದ್ಧರಾಮೇಶ್ವರ ಪ್ರಕಾಶನ, ಬಿಜಾಪುರ, ೨೦೦೨.

೪೮. ಭಾರತ ದೇಶದ ಕುರುಬರ ಚರಿತ್ರೆ: ದಿ.ವಿ.ಆರ್.ಹನುಮಂತಯ್ಯ, ಮಿಥಿಕ್ ಸೊಸೈಟಿ, ಬೆಂಗಳೂರು, ೧೯೨೬.

೪೯. ಭಾರತದ ಕುರುಬರು: ಡಾ. ಶ್ಯಾಂಸಿಂಗ್ ಶಶಿ, ಸಂದೀಪ ಪ್ರಕಾಶನ, ದೆಹಲಿ, ೧೯೭೮.

೫೦. ಭಾರತದ ಕುರುಬರು; ರಾಜಪರಂಪರೆಯ ಬುಡಕಟ್ಟು, ಮೂಲ: ಡಾ.ಶ್ಯಾಂಸಿಂಗ್ ಶಶಿ, ಕನ್ನಡಕ್ಕೆ: ಡಾ. ಬಿ.ಕೆ.ರವಿ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫.

೫೧. ಭೂಗೋಳ ಶಾಸ್ತ್ರ (ದ್ವಿತೀಯ ಪಿಯುಸಿ): ರಾ.ದಿನೇಶರಾವ್, ವಿಶ್ವವಿದ್ಯಾ ಪ್ರಕಾಶನ ಸಂಸ್ಥೆ, ಬೆಂಗಳೂರು, ೧೯೯೬.

೫೨. ಮರ್ಹಾಟೀ ಸಂಸ್ಕೃತಿ ಕೆಲವು ಸಮಸ್ಯೆಗಳು: (ಮೂಲ) ಶಂಬಾ ಜೋಶಿ, ಅನುವಾದ: ಕೀರ್ತಿನಾಥ ಕುರ್ತುಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೫೩. ಮದ್ರಾಸ್ ಜನಗಣತಿ ವರದಿಗಳು: ೧೮೯೧-೧೯೩೧.

೫೪. ಮಹಾರಾಜ ಸಂಗ್ರಾಮ ಶಾಹಕೆ ಭಾವನಗಡ: ವಿಠಲ ಸಿಂಹ ದುರ್ವೆ, ಗೋಟೂಲ್ ಪ್ರಕಾಶನ, ನಾಗಪುರ, ೧೯೯೦.

೫೫. ಮಾರ್ಗ-೪: ಡಾ.ಎಂ.ಎಂ.ಕುಲಬುರ್ಗಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೪.

೫೬. ಮಾನವಶಾಸ್ತ್ರದ ಮೂಲಾಂಶಗಳು: ಬಿ.ಆರ್.ಸತ್ಯಲಿಂಗರಾಜು, ಚೇತನ ಬುಕ್ ಹೌಸ್, ಮೈಸೂರು, ೨೦೦೬.

೫೭. ರಸ್ತಾಪುರ ಭೀಮಕವಿಯ ಹಾಲ್ಮತೋತ್ತೇಜಕ ಪುರಾಣ: (ಸಂ) ಭಾಗೂತನಯ ನವಿಲೂ, ಶಶಿಕಲಾ ಪ್ರಕಾಶನ, ಬೆಂಗಳೂರು, ದ್ವಿ.ಮು. ೧೯೮೨.

೫೮. ಲಿಂಗಾಯತ: (ಸಂ) ಡಾ. ಎಂ.ಎಂ.ಕಲಬುರ್ಗಿ, ಪೂಜ್ಯ ಮಹಾಂತಸ್ವಾಮಿಗಳು ಚಿತ್ತರಗಿ ಮಹಾಸಂಸ್ಥಾನ, ಇಳಕಲ್, ೨೦೦೯.

೫೯. ವ್ಯಾಧ ಚರಿತೆ: ಡಾ. ಮಂಜುನಾಥ ಬೇವಿನಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೬೦. ವಿಸ್ಮೃತಿ ಮತ್ತು ಸಂಸ್ಕೃತಿ: ಡಾ. ಹಿ.ಚಿ.ಬೋರಲಿಂಗಯ್ಯ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೬೧. ವಿಶ್ವಬಂಧು ಮರುಳಸಿದ್ಧಕಾವ್ಯ: ಮಹಾದೇವ ಬಣಕಾರ, ತರಳಬಾಳು ಪ್ರಕಾಶನ, ಸಿರಿಗೆರೆ, ೧೯೮೯.

೬೨. ಶಂಭಾ ಕೃತಿ ಸಂಪುಟ-೩, (ಸಂ) ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೬೩. ಶಿಕ್ಷಣ ಪ್ರದೀಪ: (ಸಂ) ವ್ಹೀ.ಬಿ.ಹಿರೇಮಠ, ಪ್ರೊ. ಬಿ.ಎಫ್.ದಂಡಿನರವರ ಅಭಿನಂದನಾ ಗ್ರಂಥ ಸಮಿತಿ, ಕೆ.ವಿ.ಆರ್.ಎಸ್. ಸಂಯುಕ್ತ ಪದವಿಪೂರ್ವ ಕಾಲೇಜು, ಗದಗ, ೧೯೯೨.

೬೪. ಶ್ರೀವಿಠಲ: ಒಂದು ಮಹಾಸಮನ್ವಯ, ಮೂಲ: ರಾಮಚಂದ್ರ ಚಿಂತಾಮಣಿ ಢೇರೆ, ಕನ್ನಡಕ್ಕೆ: ಚಂದ್ರಕಾಂತ ಪೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೬೫. ಸಿದ್ಧಮಂಕ ಚರಿತೆ: (ಸಂ) ಡಾ. ಎಂ.ಎಂ.ಕಲಬುರ್ಗಿ, ಡಾ.ವೈ.ಸಿ.ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೨೦೦೪.

೬೬. ಸಾವಿರದ ಸಿರಿಬೆಳಗು: ಡಾ. ಕೃಷ್ಣಮೂರ್ತಿ ಹನೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೬೭. ಸಾರಸ: ಡಾ. ತಾಳ್ತಜೆ ವಸಂತಕುಮಾರ್, ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೮೫.

೬೮. ಸಂಸ್ಕೃತಿ: ಡಿ.ವಿ.ಗುಂಡಪ್ಪ, ಕಾವ್ಯಾಲಯ, ಮೈಸೂರು, ೧೯೬೯.

೬೯. ಸಂಸ್ಕೃತಿ-ವಿಕೃತಿ: ಡಾ. ಎಂ.ಎಂ.ಕಲ್ಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೬.

೭೦. ಸಂಸ್ಕೃತಿ: ಕಾ.ತ.ಚಿಕ್ಕಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೭.

೭೧. ಸಂಸ್ಕೃತಿಯ ಅಂತರ್‌ಶಿಸ್ತೀಯ ನೆಲೆಗಳು: ಡಾ. ಕೆ.ಕೃಷ್ಣಪ್ಪ, ಸಂಯಮ ಪ್ರಕಾಶನ, ಬೆಂಗಳೂರು, ೨೦೦೮.

೭೨. ಸಾಂಸ್ಕೃತಿಕ ಮುಖಾಮುಖಿ: ಡಾ.ರಂಗರಾಜು ವನದುರ್ಗ, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ೨೦೦೨.

೭೩. ಹಂಡೆ ಕುರುಬರು: ಒಂದು ಅಧ್ಯಯನ, ಡಾ. ವೈ.ಕೆ.ಗುಂಡಕರ್ಜಗಿ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

೭೪. ಹಾಲುಮತ ಪುರಾಣಗಳು: ಒಂದು ಅಧ್ಯಯನ, ಡಾ. ಬಿ.ಹುಲಿಗೆಮ್ಮ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೭೫. ಹಾಲುಮತ ಆಕರಗಳು: ಸ್ವರೂಪ ಮತ್ತು ವಿಶ್ಲೇಷಣೆ, ಡಾ. ಅನ್ನಪೂರ್ಣ ಗೋಸ್ಬಾಳ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೭೬. ಹಾಲಕೆನೆ: (ಸಂ) ಡಾ. ಶ್ರೀರಾಮ ಇಟ್ಟಣ್ಣವರ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ, ೨೦೦೨.

೭೭. ಹಾಲತೊರೆ: (ಸಂ) ಎಂ.ಕರಿಯಪ್ಪ, ನಗರ ಕುರುಬರ ಸಂಘ, ದಾವಣಗೆರೆ, ೨೦೦೩.

೭೮. ಹಾಲುಮತದ ಚರಿತ್ರೆ: (ಸಂ) ವಾಯ್.ಕೆ.ಗುಂಡಕರ್ಜಗಿ, ವಿಜೇತ ಪ್ರಕಾಶನ, ಗದಗ, ೨೦೦೫.

೭೯. ಹಾಲುಮತ ಆರ್ಯ ಹೆಗ್ಗಡೆಗಳು: ಎಂ.ರಾಮಣ್ಣ ಹೆಗ್ಗಡೆ, ಇಂದಿರಾ ಚಂದಿರಾ ಪ್ರಕಾಶನ, ಮೈಸೂರು, ೧೯೯೦.

೮೦. ಹಾಲುಮತ ಕುರುಬ ಜನಾಂಗದ ಚರಿತ್ರೆ: ಪ್ರೊ. ಒಡೆಯರ್ ಡಿ.ಹೆಗ್ಗಡೆ, ಅಖಿಲಾ ಏಜನ್ಸೀಸ್, ಮೈಸೂರು, ೨೦೦೫.

೮೧. ಹಾಲುಮತ ಪುರಾಣವು: ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೮೨. ಹಾಲುಮತದ ಹುಟ್ಟು: ಬೋನಾ ಬಸವರಾಜು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦.

೮೩. ಹಾಲುಮತ ಪುರಾಣಗಳ ಭಿನ್ನಾಭಿಪ್ರಾಯಗಳು: ಶಂಕರ ಶಿವಲಿಂಗ ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೮೪. ಹಾಲುಮತದ ಮೂಲಗುರು ಸಿದ್ಧರಾಮ: ಶಂಕರ ಶಿವಲಿಂಗ ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೮೫. ಹಾಲುಮತ ಪುರಾಣ: ನಿಂಗಣ್ಣ ಸಣ್ಣಕ್ಕಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೮೬. ಹಾಲುಮತಸ್ಥರು: ಬ.ಪ.ನಾಯ್ಕರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೮೭. ಹೇಳಿಕಿ ಮಾಡ್ಯಾರ ಒಡೆಯರು: ಡಾ. ಎಂ.ಎಂ.ಪಡಶೆಟ್ಟಿ, ನೆಲೆ ಪ್ರಕಾಶನ, ಸಿಂದಗಿ, ೧೯೯೩.

೮೮. ಹಾಲುಮತ ವ್ಯಾಸಂಗ-೧: (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೮೯. ಹಾಲುಮತ ವ್ಯಾಸಂಗ-೨: (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೯೦. ಹಾಲುಮತ ವ್ಯಾಸಂಗ-೩: ಸಂ.ಡಾ.ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೯೧. ಹಾಲುಮತ ಅಧ್ಯಯನಗಳು: ಸಂ.ಡಾ.ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦.

೯೨. ಹೆಳವರು ಮತು ಅವರ ಕಾವ್ಯಗಳು: ಡಾ.ಎಚ್.ಎಲ್.ನಾಗೇಗೌಡ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೧೯೮೨.

ನಿಯತಕಾಲಿಕೆಗಳು

೧. ಜನಪದ ಮಾಸಿಕ: ವಾರ್ತಾ ಮತ್ತು ಪ್ರಸಾರ ಇಲಾಖೆ, ಬೆಂಗಳೂರು, ೧೯೯೦.

೨. ಕುರುಬರ ಜಗತ್ತಾವನ ಮಾಸಪತ್ರಿಕೆ: (ಸಂ) ಎಂ.ಎನ್.ಲಿಂಗಪ್ಪ, ಅಕ್ಷಯಸಂ, ಪುಷ್ಪ ೧೯೨೭,ಜನವರಿ.

೩. ಕನಕ ರಶ್ಮಿ: ಸಾಂಸ್ಕೃತಿಕ ತ್ರೈಮಾಸಿಕ ಪತ್ರಿಕೆ, ಸಂಚಿಕೆ-೪, (ಸಂ) ಎಸ್.ಬಿ.ಬಿಚಗತ್ತಿ, ನವ ಅಯೋಧ್ಯಾನಗರ, ಹಳೇ ಹುಬ್ಬಳ್ಳಿ, ೨೦೦೪.

೪. 'ಶಿವಾನುಭವ' ತ್ರೈಮಾಸಿಕ ಪತ್ರಿಕೆ: (ಸಂ) ಪ್ರೊ. ಬಿ.ಜಿ.ಅಮ್ಮಣಗಿ, ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ.

೫. 'ಪಾವನ' (ಸಂ) ಜೈಕುಮಾರ್: ಕಾಗಿನೆಲೆ ಮಹಾಸಂಸ್ಥಾನ, ಕನಕಗುರು ಪೀಠದ ಸ್ಥಾಪನಾ ಸಂಸ್ಮರಣಾ ಗ್ರಂಥ ೧೯೯೨.

೬. ಜಾನಪದ ಗಂಗೋತ್ರಿ: ಸಂಪುಟ-೬, ಸಂಚಿಕೆ-೧, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩.

೭. ಅಹಲ್ಯಾ ಸಂದೇಶ: ಮರಾಠಿ ಪತ್ರಿಕೆ, ಗಣಪತ್ ರಾವ್ ಕುಳೇಕಾರ.

೮. ಸತ್ಯಶುದ್ಧ ಕಾಯಕ: ಮುರುಘಾಮಠ, ಚಿತ್ರದುರ್ಗ, ೧೯೯೧.

೯. ಇತಿಹಾಸ ದರ್ಶನ: ರು.ಮ.ಷಡಕ್ಷರಯ್ಯ, ಸಂಪುಟ-೪, ೧೯೮೯.

೧೦. ಮುತ್ತು ಬಂದಿದೆ ಕೇರಿಗೆ: ಸ್ಮರಣ ಸಂಚಿಕೆ, ಶ್ರೀಕನಕ ಗುರುಪೀಠ ಕಾಗಿನೆಲೆ ಮಹಾ ಸಂಸ್ಥಾನ, ಪ್ರ. ೨೦೦೩.

ಗೆಝೆಟಿಯರುಗಳು

೧. ಬಳ್ಳಾರಿ ಗೆಝೆಟಿಯರ್: ೧೯೫೬.

೨. ಮುಂಬೈ ಕರ್ನಾಟಕ ಗೆಝೆಟಿಯರ್: ಅನು: ವೆಂಕಟರಂಗೋಕಟ್ಟಿ, ೧೯೪೮.

೩. ಬಿಜಾಪುರ ಗೆಝೆಟಿಯರ್: ಜೇಮ್ಸ್. ಎಂ.ಕ್ಯಾಂಪ್ ಬೆಲ್, ೧೯೯೪.

೪. ಮೈಸೂರು ಗೆಝೆಟಿಯರ್: ಸಿ.ಹಯವದನರಾವ್, ೧೯೨೭.

ಶಾಸನ ಸಂಪುಟಗಳು

೧. ಎಪಿಗ್ರಾಫಿಕಾ ಇಂಡಿಕಾ: (ಸಂ) ಎಫ್.ಡಬ್ಲ್ಯೂ.ಥಾಮಸ್, ಎಚ್.ಕೃಷ್ಣಶಾಸ್ತ್ರಿ ಆರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ೧೯೮೩.

೨. ಎಪಿಗ್ರಾಫಿಕಾ ಕರ್ನಾಟಕಾ: (ಸಂ) ಬಿ.ಎಲ್.ರೈಸ್. ಸಂಪುಟಗಳು: ೨, ೪, ೫, ೬, ೧೧, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೭.

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧ ಬಳ್ಳಾರಿ ಜಿಲ್ಲೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

ವಿಶ್ವಕೋಶ ಮತ್ತು ಶಬ್ದಕೋಶಗಳು

೧. ಬ್ರಿಟಾನಿಕಾ ವಿಶ್ವಕೋಶ: ಸಂಪುಟ-೭, ೧೯೯೭.

೨. ಕನ್ನಡ ವಿಷಯ ವಿಶ್ವಕೋಶ, ಸಂಪುಟಗಳು-೧, ೬: (ಸಂ) ಹಾ.ಮಾ.ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩.

೩. ಕನ್ನಡ ಇಂಗ್ಲಿಷ್ ಡಿಕ್ಶನರಿ: ರೆವರೆಂಡ್ ಎಫ್.ಕಿಟೆಲ್, ಮಂಗಳೂರು ಬಾಸೆಲ್ ಮಿಷನ್, ೧೮೯೪.

೪. ಕಸ್ತೂರಿ ಕೋಶ: ಪಂಡಿತ ಕವಲಿ: ರಾಮಾಶ್ರಯ ಬುಕ್ ಡಿಪೋ, ಗದಗ.

೫. ಜಾನಪದ ವಿಶ್ವಕೋಶ. ಸಂಪುಟ-೧: ಡಾ. ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೬. ಪುರಾಣನಾಮ ಚೂಡಾಮಣಿ: (ಸಂ) ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭.

೭. ಕನ್ನಡ ನಿಘಂಟು: (ಪ್ರ.ಸಂ) ಎನ್.ಬಸವಾರಾಧ್ಯ, ಸಂಪುಟ-೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩.

೮. ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ: ಡಾ. ಚಂದ್ರಶೇಖರ ದಾಮ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಇಂಗ್ಲಿಷ್ ಕೃತಿಗಳು

1. The original Inhabitants of India: Gustov oppert, Asian Education society, New Delhi, 1988.

2. The tribes and castes of central provinces of India: R.V.Russale, Cosmo publication, New Delhi, 1975.

3. Tribes and castes of Bombay, Vol-2: R.E.Enthovan, Govt. Central press Bombay, 1922.

4. South Indian Inscriptions: G.S.Gayi, Archeological survey of India, 1985.

5. Legend from Indian History: A.K.Ghosh, Children Book trust,. New Delhi, 1985.

6. Encyclopedia of Anthropology: H.James Burk, Vol v, sage publications, New Delhi, 2006.

7. History of the Indian shepherds, V.R.Hanumanthaiah, Mythic society, Bengaluru, 1926.
8. The shepherds of India: Dr.s.s.Shashi, Sandeep publication, New Delhi, 1978.
9. Castes and tribes of Southern India: Edger Thurston, Asian Education services, New Delhi, 2001.
10. The Mysore tribes and castes: H.V.Nanjundaiah and L.A.Krishna Iyer, vol. IV Mihal publications, New Delhi.
11. Pastoral deties In western India: Guntier-D- Sonteimer, Oxford university press, Delhi, 1993.
12. Culture and Anarchy: Mathew Arnold.
13. Culture in private and public life: F.R.Cowell.
14. Notes towards the definition of culture: T.S.Eliot.
15. Primitive Culture: E.B.Taylor.
16. The culture of culture: Ravindranatha Tagore.
17. Cultural Anthropology: M.J. Herskovitz.
18. Man In India, Vol.73 (1): mutthurayappa, Ranchi, India. 1973.
19. The Scheduled Tribes: K.S.Singh, Oxford university press, Delhi, 1994.
20. Myth in primitive psychology: Malinoski.
21. The science of Folklove: Croffe.
22. Standard Dictionary of Folk mythology and legend.
23. Coins of India: C.J.Brown.



ಕಾಡು ಕುರುಬರು, ಬಂಡೀಪುರ ಕಾಲೋನಿ, ಗುಂಡ್ಲುಪೇಟೆ



ಜೇನು ಕುರುಬರು, ಹೆಚ್.ಡಿ.ಕೋಟೆ, ಮೈಸೂರು



ಗೊಂಡ ಕುರುಬರು, ಬೆಳ್ಳೋಡಿ, ಹರಿಹರ



ಒಡೆಯರು, ಹಂದನಕೆರೆ, ಚಿಕ್ಕನಾಯಕನಹಳ್ಳಿ



ಹತ್ತಿಕಂಕಣ ಕುರುಬರು, ಕರಡಿ, ಹುನಗುಂದ



ಬೆಳಗಾಂ ಕುರೇರು/ಅಲೆಮಾರಿ ಕುರುಬರು, ಸೌಂದಲಗ, ಚಿಕ್ಕೋಡಿ



ಉಣ್ಣೆಕಂಕಣ ಕುರುಬರು, ಚಿಕ್ಕನಾಯಕನಹಳ್ಳಿ



ಹತ್ತಿಕಂಕಣ ಕುರುಬರು, ಲಕ್ಷ್ಮೀಸಾಗರ, ಶಿರಾ



ಹಂಡೆ ಕುರುಬರು, ಮುತ್ತಗಿ, ಬಸವನಬಾಗೇವಾಡಿ



ನೊಣಬ ಕುರುಬರು, ಮತಿಘಟ್ಟ, ಅರಸೀಕೆರೆ



ಗೊಲ್ಲ ಕುರುಬರು, ದ್ವಾರಾಳು ಗೊಲ್ಲರಹಟ್ಟಿ, ಶಿರಾ



ಕುಂಚಿಟಿಗ ಕುರುಬರು, ಹೊಸಯಳನಡು, ಹಿರಿಯೂರು



ದಾಸ ಕುರುಬರು, ಮೇಕೇರಹಳ್ಳಿ, ಶಿರಾ



ಸಾದಕುರುಬರು, ಕೇದಿಗೆಹಳ್ಳಿಪಾಳ್ಯ, ಚಿಕ್ಕನಾಯಕನಹಳ್ಳಿ



ಕ್ರೈಸ್ತ ಕುರುಬರು, ಕಟ್ಟಿಗೇನಹಳ್ಳಿ, ಗುಳೇದಗುಡ್ಡ



ದನಗರ ಗವಳಿಗ ಕುರುಬರು, ಜೇನುಮುರಿ, ಮುಂಡಗೋಡ



ಹೆಗ್ಗಡೆ ಕುರುಬರು, ಆಲೂರು, ಮದ್ದೂರು



ವಾರದ ಕುರುಬರು, ಹೊಸಹಳ್ಳಿ, ಮಳವಳ್ಳಿ



ಕಂಬಳಿ ಕುರುಬರು, ಮಾಲೂರು, ಕೋಲಾರ



ಒಕ್ಕೈ ಕುರುಬರು, ಹೂಗ್ಯಂ, ಕೊಳ್ಳೇಗಾಲ



ಉಣ್ಣೆ ಕಂಕಣ



ಹತ್ತಿ ಕಂಕಣ



ಸಾವಿರ ಕುದುರೆ ಸರದಾರ - ಅಂಬಳೆ ಬೀರದೇವರು, ಚಿಕ್ಕಮಗಳೂರು



ಹಿರೇಬೀರದೇವರು, ತಾಳಿಕಟ್ಟೆ, ಹೊಳಲ್ಕೆರೆ